ಹಸಲರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ)

ಸಂಶೋಧಕ
ಸಿಂದಗಿ ಅಶೋಕ ಬಸವಂತ್ರಾಯ
ಸಹ ಪ್ರಾಧ್ಯಾಪಕರು
ಸಿ ಎಂ ಮನಗೂಳಿ ಕಲಾ ಮಹಾವಿದ್ಯಾಲಯ,
ಸಿಂದಗಿ – ೫೮೬ ೧೨೮

ಮಾರ್ಗದರ್ಶಕರು
ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

೨೦೧೨

467

ಹಸಲರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕ
ಸಿಂದಗಿ ಅಶೋಕ ಬಸವಂತ್ರಾಯ
ಸಹ ಪ್ರಾಧ್ಯಾಪಕರು
ಸಿ ಎಂ ಮನಗೂಳಿ ಕಲಾ ಮಹಾವಿದ್ಯಾಲಯ,
ಸಿಂದಗಿ ೫೮೬ ೧೨೮

ಮಾರ್ಗದರ್ಶಕರು
ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಚ್-೨೦೧೨

ದೃಢೀಕರಣ ಪತ್ರ

ಶ್ರೀ ಸಿಂದಗಿ ಅಶೋಕ ಬಸವಂತ್ರಾಯ ಅವರು **ಹಸಲರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ (Hasalaru : A Sociological Study)** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಪಿಎಚ್ ಡಿ ಪದವಿಗಾಗಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಿದ್ದಾರೆ. ಇದು ಅವರು ಸ್ವತಃ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿದ ಸಂಶೋಧನ ಸಾಮಗ್ರಿಯ ಆಧಾರದ ಮೇಲೆ ರಚಿತವಾಗಿದೆ. ಇದನ್ನು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಡಿಪ್ಲೊಮಾ ಅಥವಾ ಪದವಿಗಾಗಿ ಒಪ್ಪಿಸಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೨.೦೨-೨೦೧೨

(ಡಾ. ಕೆ ಎಂ ಮೇತ್ರಿ)
ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಹಸಲರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ (Hasalaru : A Sociological Study) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್ ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ ಕೆ ಎಂ ಮೇತ್ರಿ ಅವರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಇಲ್ಲವೆ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 09-02-2019

(ಸಿಂದಗಿ ಅಶೋಕ ಬಸವಂತ್ರಾಯ)
ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿಶಿಷ್ಟ: ಒಂದು

ಕೋಷ್ಟಕಗಳು

ಪರಿಶಿಷ್ಟ: ಎರಡು

ಛಾಯಾ ಚಿತ್ರಗಳು

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿನ್ಯಾಸ

ಪ್ರವೇಶ

೧.೧ ಅಧ್ಯಯನದ ಉದ್ದೇಶಗಳು

೧.೨ ಅಧ್ಯಯನದ ಪ್ರಮೇಯಗಳು

೧.೩ ಅಧ್ಯಯನದ ವ್ಯಾಪ್ತಿ

೧.೪ ಅಧ್ಯಯನದ ವೈಧಾನಿಕತೆ

೧.೫ ಅಧ್ಯಯನದ ಸಾಧನಗಳು

೧.೬ ಸಮಕಾಲಿನ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದ ಸಂಬಂಧ

೧.೭ ಸಮಾಜ ಅಥವಾ ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನದ ಅವಶ್ಯಕತೆ

೧.೮ ಜ್ಞಾನಶಾಖೆಗೆ ಪ್ರಸ್ತುತ ಅಧ್ಯಯನದ ಕೊಡುಗೆ

೧.೯ ಅಧ್ಯಯನದ ವಿನ್ಯಾಸ

೧.೧೦ ಹಸಲರ ಬಗೆಗಿನ ಇದುವರೆಗಿನ ಸಾಹಿತ್ಯ ಪರಾಮರ್ಶೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿನ್ಯಾಸ

ಪ್ರವೇಶ

ಆಧುನಿಕ ಯುಗವನ್ನು ಅಣುಯುಗ, ಸ್ಪರ್ಧಾತ್ಮಕ ಯುಗ, ನಾಗರಿಕತೆಯ ಯುಗ ಎಂದು ಕರೆಯತ್ತೇವೆ. ಮಾನವನು ತನ್ನ ಪ್ರಗತಿಯ ಹಾದಿಯಲ್ಲಿ ನಾಗರಿಕತೆಯ ಉಚ್ಚ ಮಟ್ಟದಲ್ಲಿ ರಾರಾಜಿಸುತ್ತಾನೆ. ಆದರೆ ಮಾನವ ಸಮುದಾಯಗಳೆಲ್ಲವೂ ಈ ಮಟ್ಟಕ್ಕೆ ತಲುಪಿವೆ ಎಂದು ಹೇಳಲಾಗದು. ನಾಗರಿಕತೆಯ ಗಂಧ-ಗಾಳಿಯೂ ಇರದ ಜನ ಸಮೂಹಗಳು ಎಲ್ಲಾ ಕಡೆ ಪಸರಿಸಿವೆ. ಇಂತಹ ಸಮುದಾಯಗಳನ್ನು ಮೂಲನಿವಾಸಿಗಳೆಂದು, ಆದಿವಾಸಿಗಳೆಂದು ಕರೆಯುತ್ತೇವೆ.

ಜನಸಂಖ್ಯೆಯ ದೃಷ್ಟಿಯಿಂದ ಬಹಳ ಅಲ್ಪಸಂಖ್ಯಾತರಾದ ಈ ಸಮುದಾಯಗಳ ಜೀವನ ತೀರಾ ಭಿನ್ನವಾದುದು, ವಿಶಿಷ್ಟವಾದುದು. ಈ ಸಮುದಾಯಗಳನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದೆಂದರೆ ಸವಾಲಿನ ವಿಷಯವೇ.

ವಿಪುಲವಾದ ಜನ ಸಂಪತ್ತಿನಿಂದ ಕೂಡಿರುವ ಭಾರತದಲ್ಲಿಯೂ ಮೂಲ ನಿವಾಸಿಗಳೆಂದು ಪರಿಗಣಿತರಾಗಿರುವ "ಆದಿವಾಸಿ"ಗಳಿಗೆ ಕೊರತೆಯಿಲ್ಲ. ದೇಶದ ಜನಸಂಖ್ಯೆಯ ಶೇ. ೮.೦೮ ರಷ್ಟಿರುವ ಈ ಜನಸಮುದಾಯಗಳು ದೇಶದ ಬೇರೆ ಬೇರೆ ರಾಜ್ಯಗಳ ಮೂಲೆ ಮೂಲೆಗಳಲ್ಲಿ ಬೆಟ್ಟ ಗುಡ್ಡಗಳಲ್ಲಿ ಮತ್ತು ಕಾಡು ಮೇಡುಗಳಲ್ಲಿ ವಾಸಿಸುವ ಈ ಜನರ ಜೀವನಕ್ರಮ ನಾನಾ ತೆರನಾದುದು. ಅವರ ಜೀವನದ ವೈಚಿತ್ರ್ಯ-ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುವುದು, ಅವರ ಸಮಸ್ಯೆ-ಸವಾಲುಗಳನ್ನು ಅರಿತುಕೊಳ್ಳುವುದು ಮತ್ತು ನಾಗರಿಕತೆಯ ಪಥದಲ್ಲಿ ಮುನ್ನಡೆಯಲು ಅವಕಾಶ ಕಲ್ಪಿಸಿಕೊಡುವುದು ನಾಗರಿಕ ಸಮುದಾಯದ ಕರ್ತವ್ಯವಾಗಿದ್ದರೂ, ಈ ಸಮುದಾಯಗಳ ಬಗ್ಗೆ ಇದುವರೆಗೂ ಆಗಿದ್ದು ಮಾತ್ರ ಅತ್ಯಲ್ಪ.

ಆದಿವಾಸಿ ಜನಸಮುದಾಯಗಳನ್ನು ಕುರಿತು ಅಧ್ಯಯನ ಮಾಡುವುದಕ್ಕಿಂತ ಪೂರ್ವದಲ್ಲಿ ಆದಿವಾಸಿ ಶಬ್ದದ ಉತ್ಪತ್ತಿ ಮತ್ತು ಆದಿವಾಸಿಗಳು ಎಂದರೆ ಯಾರು? ಎಂಬ ಪ್ರಶ್ನೆಗೆ ಉತ್ತರ ಕೊಡಬೇಕಾಗಿದೆ.

ಆದಿವಾಸಿ ಎನ್ನುವ ಪದವನ್ನು ಇಂಗ್ಲಿಷನಲ್ಲಿ "Tribe" ಎಂದು ಕರೆಯುತ್ತೇವೆ. "Tribe" (ಟ್ರೈಬ್) ಎನ್ನುವ ಪದವು ಲ್ಯಾಟಿನ ಭಾಷೆಯ "Tribus" ಎಂಬ ಮೂಲ ಪದದಿಂದ ಉತ್ಪತ್ತಿಯಾಗಿದೆ. ಟ್ರೈಬಸ್ ಎಂದರೆ ಪ್ರಾಚೀನ ರೋಮ ಜನತೆಯ ರಾಜಕೀಯ ಭಾಗ ಅಥವಾ ಮಂಡಲ.

ಆದಿವಾಸಿ ಎಂಬುದು ಭಾರತೀಯ ಮೂಲದ ಶಬ್ದವಾಗಿದ್ದು, ಅದಕ್ಕೆ ಮೂಲನಿವಾಸಿಗಳು ಎಂಬ ಅರ್ಥವಿದೆ. ಎಲ್ಫಿನ್ ಮತ್ತು ರಿಸ್ಲೆ ಅವರು ಆದಿವಾಸಿಗಳನ್ನು 'ಎಬೊರಿಜಿನಲ್ಸ್' "Aboriginals" ಎಂದು ಕರೆದಿದ್ದಾರೆ. ಸರ್ ಬೈನ್ಸ್ ಎಂಬ ಜನಗಣತಿಯ ಅಧಿಕಾರಿಯು ಈ ಸಮುದಾಯವನ್ನು ಹಿಲ್ ಟ್ರೈಬ್ಸ್ ಎಂದು ಕರೆದಿದ್ದಾರೆ. ಹಟನ್ ಅವರು 'ಪ್ರಿಮಿಟಿವ್ ಟ್ರೈಬ್ಸ್' ಎಂದು ಕರೆದಿದ್ದಾರೆ. ಠಕ್ಕರ ಬಾಪಾ ಎಂಬ ಸಮಾಜ ಸುಧಾರಕರು ಆದಿವಾಸಿಗಳನ್ನು "ಆದಿಪ್ರಜಾ" ಎಂದು ಕರೆದಿದ್ದಾರೆ. (ಶಂಕರರಾವ್ ಚ ನ :೨೦೦೨ :೫೧)

ಘುರ್ಯೆ ಯವರು 'ಹಿಂದುಳಿದ ಹಿಂದುಗಳು' ಎಂದು ಕರೆದಿದ್ದಾರೆ. (ಶಂಕರರಾವ್ ಚ ನ :೨೦೦೪ : ೨೭೧)

ಈ ಮೇಲಿನ ಶಬ್ದಗಳ ಜೊತೆಗೆ ಆದಿವಾಸಿಗಳನ್ನು ವನ್ಯ ಜಾತಿಗಳು, ಅರಣ್ಯವಾಸಿಗಳು ಅಥವಾ ಕಾಡು ಜನಾಂಗ ಎಂದು ಕರೆಯುತ್ತಾರೆ.

ಆದಿವಾಸಿಗಳ ಬಗ್ಗೆ ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ತಮ್ಮದೇಯಾದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

• ಇಂಪಿರಿಯಲ್ ಗೆಜೆಟಿಯರ್ ಪ್ರಕಾರ –"ಒಂದೇ ಹೆಸರನ್ನು ಹೊಂದಿರುವ ಒಂದು ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸಮಾಡುವ ಕುಟುಂಬಗಳ ಸಮೂಹವೇ ಆದಿವಾಸಿ"

• ಎಚ್ ಪಿ ಫೇರಚೈಲ್ಡ್ (H P Fairchild) ಎಂಬ ಸಮಾಜ ವಿಜ್ಞಾನಿಯು ತನ್ನ ಹೊತ್ತಿಗೆಯಲ್ಲಿ ಆದಿವಾಸಿ ಸಮುದಾಯವನ್ನು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. "ಸಾಮಾನ್ಯವಾಗಿ ಅಸಂಖ್ಯಾತ ರಕ್ತ ಸಂಬಂಧಿಗಳನ್ನು (Sib's), ತಂಡಗಳನ್ನು (Bands), ಗ್ರಾಮಗಳನ್ನು ಇಲ್ಲವೇ ಉಪತಂಡಗಳನ್ನು ನಿಶ್ಚಿತ ಭೂಪ್ರದೇಶವನ್ನು ತನ್ನದೇ ಆದ ಖಚಿತ ಭಾಷೆಯನ್ನು ಸಮೈಕ್ಯ ಸಂಸ್ಕೃತಿ ಹಾಗೂ ಒಂದೇ ರೀತಿಯ ರಾಜಕೀಯ ವ್ಯವಸ್ಥೆಯನ್ನು ಪಡೆದು ಹೊರಗಿನವರಿಗೂ ನಮಗೂ ವ್ಯತ್ಯಾಸವಿದೆ ಎಂಬ ಭಾವನೆಗಳನ್ನು ಹೊಂದಿರುವ ಸಾಮಾಜಿಕ ಸಮೂಹವೇ ಆದಿವಾಸಿ ಸಮುದಾಯವೆನಿಸುತ್ತದೆ.

• ಎಸ್ ಸಿ ದುಬೆ (S C Dube) ಪ್ರಕಾರ "ಆದಿವಾಸಿ" ಸಮೂಹವು ವಿಶಾಲ ವ್ಯಾಪ್ತಿಯ ಸಾಂಸ್ಕೃತಿಕ ಲಕ್ಷಣಗಳನ್ನು ಸಾಮಾನ್ಯವಾಗಿ ಹಂಚಿಕೊಂಡಿರುವ ವಾಸ್ತವಿಕವಾದ ಅಥವಾ

ವಾಸ್ತವಿಕವೆಂದು ಪ್ರತೀತಿಯಿರುವ ವಂಶಾವಳಿಯನ್ನು ಹೊಂದಿದ ಮತ್ತು ಸಾಮೂಹಿಕ ಸಾರೂಪ್ಯವನ್ನು ಹೊಂದಿರುವ ಮಾನವ ಬುಡಕಟ್ಟಾಗಿದೆ.

• ಜೆ ಎಲ್ ಗಿಲಿನ್ ಮತ್ತು ಜೆ ಪಿ ಗಿಲಿನ್ ಪ್ರಕಾರ – "ಒಂದು ಸ್ಥಳದಲ್ಲಿ ವಾಸಿಸುತ್ತಾ, ಒಂದೇ ಭಾಷೆಯನ್ನು ಮಾತನಾಡುವ, ಒಂದು ಸಂಸ್ಕೃತಿಯನ್ನು ಹೊಂದಿರುವ, ಸ್ಥಳೀಯ ಸಮುದಾಯಗಳ ಸಮೂಹಕ್ಕೆ ಆದಿವಾಸಿ ಸಮುದಾಯ" ವೆನ್ನಿಸಿಕೊಳ್ಳುತ್ತದೆ.

• ಡಬ್ಲ್ಯೂ ಜೆ ಪೆರ್ರಿ (W J Perry) "ಒಂದು ಸ್ಥಳದಲ್ಲಿ ನೆಲೆಸಿಕೊಂಡು, ಒಂದೇ ಭಾಷೆಯನ್ನಾಡುವ ಜನ ಸಮೂಹವನ್ನು ಆದಿವಾಸಿ ಸಮುದಾಯ" ಎಂದು ಕರೆಯುತ್ತಾರೆ.

ಆದಿವಾಸಿ ಸಮುದಾಯದ ಗುಣಲಕ್ಷಣಗಳು

ಈ ಮೇಲೆ ನೀಡಿರುವ ವ್ಯಾಖ್ಯೆಗಳು ಆದಿವಾಸಿ ಸಮುದಾಯಗಳು ಹೊಂದಿರುವ ಗುಣಲಕ್ಷಣಗಳ ಬಗ್ಗೆ ನಮ್ಮ ಗಮನ ಸೆಳೆಯುತ್ತವೆ. ಭಾರತದ ಆದಿವಾಸಿಗಳನ್ನು ಒಳಗೊಂಡಂತೆ ಎಲ್ಲಾ ಕಡೆಗಳಲ್ಲೂ ವ್ಯಾಪಿಸಿರುವ ಆದಿವಾಸಿ ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಾಣಬರುವ ಕೆಲವು ಮುಖ್ಯ ಲಕ್ಷಣಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಬಹುದಾಗಿದೆ.

೧. **ಸಾಮಾನ್ಯ ಭೂಪ್ರದೇಶ** (Common Territory) : ಪ್ರತಿಯೊಂದು ಆದಿವಾಸಿ ಸಮುದಾಯವು ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುತ್ತದೆ. ಉದಾ: ನಾಗಾ ಸಮದಾಯ ನಾಗಾಲ್ಯಾಂಡಿನಲ್ಲಿಯೂ, ಗಾರೋ, ಖಾಸಿ, ಮೊದಲಾದವುಗಳು ಆಸ್ಸಾಂನಲ್ಲಿಯೂ, ಗೊಂಡರು, ಭಿಲ್ಲರು ಮಧ್ಯಪ್ರದೇಶದಲ್ಲಿಯೂ, ತೋಡ, ನೀಲಗಿರಿ ಬೆಟ್ಟಗಳಲ್ಲಿಯೂ ನೆಲೆಸಿರುವುದನ್ನು ಕಾಣಬಹುದು. ದೇಶದ ಇತರ ಜನವರ್ಗಗಳಿಗೆ ಹೋಲಿಸಿದಾಗ ಹೆಚ್ಚಿನ ಆದಿವಾಸಿಗಳು ಗುಡ್ಡಗಾಡುಗಳಲ್ಲಿ, ಗಿರಿ–ಶಿಖರಗಳಲ್ಲಿ, ಕಣಿವೆ, ಕಾನನ ಪ್ರದೇಶಗಳಲ್ಲಿ ವಾಸಿಸುವುದನ್ನು ಗಮನಿಸಬಹುದು.

೨. **ವಿಶಿಷ್ಟ ಹೆಸರು:** ಪ್ರತಿಯೊಂದು ಜಾತಿಗೂ ತನ್ನದೇ ಆದ ಒಂದು ಹೆಸರು ಇರುವಂತೆ ಪ್ರತಿಯೊಂದು ಆದಿವಾಸಿ ಸಮೂಹವೂ ತನ್ನದೇ ಆದ ವಿಶಿಷ್ಟವಾದ ಹೆಸರನ್ನು ಹೊಂದಿದೆ. ಉದಾ: ಲಿಂಬೂ, ಸಂತಾಲರು, ಮುಂಡ, ಗೊಂಡ, ಬಡಗ, ಉರಳಿ, ಹಸಲರು, ತೋಡ ಇತ್ಯಾದಿ. ಭಾರತದಲ್ಲಿನ ಇಂತಹ ಹೆಸರಿನ ಆದಿವಾಸಿಗಳಂತೆ ಜಗತ್ತಿನಾದ್ಯಂತ ಬೇರೆ ಬೇರೆ ಕಡೆಗಳಲ್ಲಿ ಕಾಣಬರುವ ಆದಿವಾಸಿಗಳೂ ಕೂಡ ತಮ್ಮದೇ ಆದ ವಿಶಿಷ್ಟ ಹೆಸರುಗಳನ್ನು ಹೊಂದಿರುವರು.

೩. **ಸಾಮಾನ್ಯ ಭಾಷೆ:** ಆದಿವಾಸಿಗಳು ತಮ್ಮದೇ ಆದ ಆಡುವ ಭಾಷೆಯನ್ನು ಹೊಂದಿರುತ್ತಾರೆ. ಆ ಭಾಷೆಯನ್ನು ಇತರರು ಅರ್ಥಮಾಡಿಕೊಳ್ಳುವುದು ಕಷ್ಟವಿದೆ. ಅಂದರೆ ಅವರ ಭಾಷೆಯು ವಿಶಿಷ್ಟವಾದುದಾಗಿದ್ದು, ನಾಗರಿಕ ಸಮಾಜಗಳ ಭಾಷೆಗಳಿಂದ ಭಿನ್ನವಾಗಿರುವುದು ಮಾತ್ರವಲ್ಲದೆ ಉಳಿದ ಆದಿವಾಸಿ ಸಮೂಹಗಳ ಭಾಷೆಗಳಿಂದಲೂ ಪ್ರತ್ಯೇಕವಿರುವುದು. ಇದು ಅವರ ಆಂತರಿಕ

ಐಕ್ಯವನ್ನು ಹೆಚ್ಚಿಸಿದೆ. ಆದಿವಾಸಿ ಭಾಷೆಗೆ ಲಿಪಿಯಿಲ್ಲದೇ ಇರುವುದರಿಂದ ಅವರ ಶಿಕ್ಷಣದಲ್ಲಿ ಒಂದು ತೊಡಕುಂಟಾಗಿದೆ.

೪. **ಪೂರ್ವಜರಲ್ಲಿ ನಂಬಿಕೆ** (Belief in Ancestors): ಒಂದು ಆದಿವಾಸಿ ಸಮೂಹಕ್ಕೆ ಸೇರಿದವರೆಲ್ಲರೂ ತಾವು ಒಬ್ಬ ಸ್ತ್ರೀ ಅಥವಾ ಪುರುಷ ಪೂರ್ವಜರಿಂದ ಜನ್ಮ ತಾಳಿದ್ದೇವೆಂಬ ನಂಬಿಕೆಯನ್ನು ಹೊಂದಿರುವರು. ಈ ಪೂರ್ವಜ ಬಹಳ ಪುರಾತನ ವ್ಯಕ್ತಿಯಾಗಿರಬಹುದು ಇಲ್ಲವೇ ಇತ್ತೀಚಿನವನಾಗಿರಬಹುದು. ಕುಟುಂಬ, ಕುಲ, ಅಥವಾ ವಂಶ ಪಾರಂಪರ್ಯದ ಆಧಾರದ ಮೇಲೆ ಅವರು ತಮ್ಮ ಪೂರ್ವಿಕರನ್ನು ಪೂಜಿಸುವ ಕ್ರಮವೂ ಅವರ ಆಚರಣೆಯಲ್ಲಿದೆ.

೫. **ರಕ್ತ ಸಂಬಂಧದ ಬಾಂಧವ್ಯ :** ಆದಿವಾಸಿ ಸಮುದಾಯದಲ್ಲಿ "ಕರುಳು ಬಳ್ಳಿ" ಯ ಸಂಬಂಧ, ರಕ್ತ ಸಂಬಂಧ (blood relation) ಗಳಿಗೆ ಹೆಚ್ಚಿನ ಪ್ರಾಮುಖ್ಯವಿದೆ. ಕುಟುಂಬ, ವಂಶ, ಮುಂತಾದ ಚಿಕ್ಕ ಸಮೂಹಗಳು ರಕ್ತ ಸಂಬಂಧ ಆಧಾರದ ಮೇಲೆ ರಚಿತವಾಗಿವೆ. ಬಂಧು ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳು ಬೆಳೆಯುತ್ತವೆ. ತಾವೆಲ್ಲರೂ ಒಡನಾಡಿಗಳು ಎಂದು ಅವರು ನಂಬಿರುತ್ತಾರೆ. ಕುಲಗಳು ಬೇರೆ ಬೇರೆ ಇದ್ದರೂ ಭ್ರಾತೃ ಪ್ರೇಮದ ಭಾವನೆಯು ಅವರಲ್ಲಿ ಜಾಗೃತವಾಗಿರುತ್ತದೆ.

೬. **ಧಾರ್ಮಿಕ ನಂಬುಗೆಗಳು:** ಆದಿವಾಸಿ ಜನರು ಧಾರ್ಮಿಕ ನಿಷ್ಠೆಯುಳ್ಳವರೂ ಸಂಪ್ರದಾಯ ಶರಣರೂ ಆಗಿರುವರು. ಅವರುಗಳಲ್ಲಿ ಪ್ರಕೃತಿ ಪೂಜೆ ಮತ್ತು ಪಿತೃಪೂಜೆಯ ಜೊತೆಗೆ ವಸ್ತು ಪೂಜಾವಾದ, ಸರ್ವಚೇತನಾವಾದ ಹಾಗೂ "ಕುಲದೇವತಾವಾದ" ಗಳೂ ಕೂಡ ಪ್ರಚಲಿತವಿವೆ.

೭. **ರಾಜಕೀಯ ವ್ಯವಸ್ಥೆ:** ಪ್ರತಿಯೊಂದು ಆದಿವಾಸಿ ಜನಾಂಗವು ತನ್ನದೇ ಆದ ಸಾಂಪ್ರದಾಯಕ ಆಡಳಿತ ಕ್ರಮವನ್ನು ಹೊಂದಿದೆ. ಆಧುನಿಕ ಅರ್ಥದಲ್ಲಿ ಅಲ್ಲದೇ ಇದ್ದರೂ ಆದಿವಾಸಿಗಳು ತಮ್ಮದೇ ಆದ ಸರ್ಕಾರವನ್ನು ಹೊಂದಿರುವರು. ಪ್ರತಿಯೊಂದು ಆದಿವಾಸಿ ಸಮೂಹವೂ ತನ್ನದೇ ಆದ ನಾಯಕನನ್ನು ಹೊಂದಿರುವದು. ನಾಯಕನ ನಿಯುಕ್ತಿಯು ಆನುವಂಶೀಯವಾಗಿ ಇಲ್ಲವೇ ಆಯ್ಕೆ ಮೂಲಕ ನಡೆಯುತ್ತದೆ. ನಾಯಕನು ಆದಿವಾಸಿಗಳ ಗೌರವಾದರಗಳಿಗೆ ಪಾತ್ರನಾಗಿರುವ ವ್ಯಕ್ತಿಯಾಗಿದ್ದು ಸಮೂಹದ ಕಲ್ಯಾಣದ ಹೊಣೆ ಹೊತ್ತಿರುವವನಾಗಿರುತ್ತಾನೆ.

೮. **ಸರಳ ಸ್ವಯಂಪೂರ್ಣ ಸಮೂಹ:** ಆದಿವಾಸಿ ಸಮುದಾಯುವು ಅತ್ಯಂತ ಸರಳವಾದ ಮತ್ತು ಸಂಕೀರ್ಣತೆಯಿಲ್ಲದ ಸಮುದಾಯ. ಆಧುನಿಕ ಜಗತ್ತಿನ ವೈವಿಧ್ಯಪೂರ್ಣ ಜೀವನದಿಂದ ಆದಿವಾಸಿಗಳು ಬಹಳ ದೂರವಿರುವರು. ಪ್ರಕೃತಿಯೊಂದಿಗೆ, ಪ್ರಾಣಿ ಸಮೂಹಗಳೊಂದಿಗೆ ಸಾಮರಸ್ಯವನ್ನು ಹೊಂದಿರುವ ಜೀವನ ಅವರದು. ಕೃತ್ರಿಮತೆ, ವಂಚನೆ, ಮೋಸ ಇವುಗಳು ಅವರಿಗೆ ತಿಳಿಯವು. ಆದಿವಾಸಿಗಳು ಬಹುಮಟ್ಟಿಗೆ ಸ್ವಯಂಪೂರ್ಣತೆಯನ್ನು ಹೊಂದಿರುವರು. ಬೇಟೆಯಾಡುವುದು, ಮೀನು ಹಿಡಿಯುವುದು, ಅರಣ್ಯಗಳಿಂದ ಜೇನು, ಹಣ್ಣು, ಹಂಪಲುಗಳು, ಮೇಣ, ಗಡ್ಡೆ-ಗೆಣಸುಗಳು, ಔಷಧೀಯ ಗಿಡಮೂಲಿಕೆಗಳು, ಕಾಡು ಮೆಣಸು ಮುಂತಾದ ಅರಣ್ಯ

ಹುಟ್ಟುವಳಿಗಳನ್ನು ಸಂಗ್ರಹಿಸುವುದು ಅವರ ಮುಖ್ಯ ಉದ್ಯೋಗ. ಇತ್ತೀಚಿಗೆ ಅನೇಕ ಆದಿವಾಸಿಗಳು ಬೇಸಾಯವನ್ನು ಆರಂಭಿಸಿದ್ದು ನಾಗರಿಕ ಜೀವನದತ್ತ ವಾಲುತ್ತಿದ್ದಾರೆ. ಆರ್ಥಿಕವಾಗಿ ಅವರಲ್ಲಿ ಬಹುತೇಕ ಮಂದಿ ಕಡುಬಡತನದಲ್ಲಿದ್ದಾರೆ. ಅವರ ಆರ್ಥಿಕ ಪರಾವಲಂಬನೆಯೂ ಹೆಚ್ಚುತ್ತಿದೆ.

ಭಾರತದ ಆದಿವಾಸಿ ಸಮೂಹಗಳು ವಿಭಿನ್ನ ಪ್ರಾಂತಗಳಲ್ಲಿ ಹಂಚಿ ಹೋಗಿದ್ದು ಅವುಗಳ ಸಂಸ್ಕೃತಿ ಮತ್ತು ಜೀವನ ಶೈಲಿಯಲ್ಲಿ ಬಹಳಷ್ಟು ಅಂತರಗಳನ್ನು ಆದಿವಾಸಿಗಳಲ್ಲಿ ಕಾಣಬಹುದು. ಆದಿವಾಸಿಗಳಲ್ಲಿ ಬಹುಸಂಖ್ಯಾತ ಜನರು ಮಧ್ಯಪ್ರದೇಶ, ಒರಿಸ್ಸಾ, ಬಿಹಾರ, ಗುಜರಾತ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ರಾಜಸ್ತಾನ, ಅಸ್ಸಾಂ, ಆಂಧ್ರ ಪದೇಶ, ಮೇಘಾಲಯ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ಮತ್ತು ತಮಿಳುನಾಡುಗಳಲ್ಲಿ ವಾಸಿಸುವರು. ಆದಿವಾಸಿ ಸಮೂಹಗಳ ಜೀವನ ಕ್ರಮವನ್ನರಿತುಕೊಳ್ಳುವ, ಅವುಗಳ ಸಮಸ್ಯೆಗಳನ್ನು ಮನದಟ್ಟು ಮಾಡಿಕೊಂಡು ಅವುಗಳ ಏಳಿಗೆಯನ್ನು ಸಾಧಿಸುವ ದೃಷ್ಟಿಯಿಂದ ಹಾಗೂ ಆದಿವಾಸಿ ಜೀವನದ ಶೈಕ್ಷಣಿಕ ಅಧ್ಯಯನಕ್ಕೆ ಸಹಾಯಕವಾಗುವ ದೃಷ್ಟಿಯಿಂದ ಆದಿವಾಸಿಗಳು ವಾಸಿಸುವ ಭೂಪ್ರದೇಶಗಳ ಆಧಾರದ ಮೇಲೆ ಭಾರತದ ಆದಿವಾಸಿಗಳನ್ನು ಈ ಮುಂದಿನಂತೆ ವರ್ಗೀಕರಿಸಲಾಗಿದೆ. (೧) ಉತ್ತರದ ಹಾಗೂ ಈಶಾನ್ಯ ವಲಯದ ಆದಿವಾಸಿಗಳು; (೨) ಮಧ್ಯ ವಲಯದ ಆದಿವಾಸಿಗಳು; ಮತ್ತು (೩) ದಕ್ಷಿಣವಲಯದ ಆದಿವಾಸಿಗಳು.

೧. ಉತ್ತರದ ಹಾಗೂ ಈಶಾನ್ಯ ವಲಯದ ಆದಿವಾಸಿಗಳು

(Tribes of Northern and North – Eastern Zone)

ಈ ವಲಯವು ಉತ್ತರ ಕಾಶ್ಮೀರ, ಉತ್ತರ ಪಂಜಾಬ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಆಸ್ಸಾಂ ಮತ್ತು ಅಲ್ಲಿನ ಗಡಿ ಪ್ರದೇಶಗಳು ಮುಂತಾದ ಪ್ರದೇಶಗಳ ಆದಿವಾಸಿಗಳನ್ನು ಒಳಗೊಂಡಿರುವುದು. ಸಿಕ್ಕಿಂ, ಬಂಗಾಳ ಮತ್ತು ಬಿಹಾರ ರಾಜ್ಯಗಳು ಈ ವಲಯಕ್ಕೆ ಸೇರಿಕೊಳ್ಳುವವು. ಈ ವಲಯದಲ್ಲಿನ ಮುಖ್ಯ ಆದಿವಾಸಿ ಸಮುದಾಯಗಳಾವುವೆಂದರೆ – ಆಕಾ, ಡೆಫ್ಲಾ, ಮಿರಿ, ನಾಗಾ, ಗುರುಂಗ, ಲಂಬೂ, ಮಿಶ್ಮೀ, ರಾಭಾ, ಗಾರೊ, ಖಾಸಿ, ಕಚೌರಿ ಇತ್ಯಾದಿ. ಈ ಆದಿವಾಸಿಗಳು ಸಾಮಾನ್ಯವಾಗಿ ಮಂಗೋಲಿಯ ಜನಾಂಗಕ್ಕೆ ಸೇರಿದವರಾಗಿದ್ದಾರೆ.

ಹಿಮಾಲಯದ ತಪ್ಪಲಲ್ಲಿ, ಈಶಾನ್ಯ ಗಡಿಗಳಲ್ಲಿನ ಗುಡ್ಡಗಾಡುಗಳಲ್ಲಿ ಹಾಗೂ ಬ್ರಹ್ಮಪುತ್ರಾ ಕಣಿವೆ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಈಶಾನ್ಯ ಪ್ರದೇಶದ ಆದಿವಾಸಿಗಳು ಉಳಿದ ಆದಿವಾಸಿ ಗಳಿಗಿಂತಲೂ ಹೆಚ್ಚು ಆಧುನೀಕರಣಗೊಂಡಿದ್ದು, ಅಲೆಮಾರಿಗಳಾಗಿರದೆ ಸ್ಥಿರ ಜೀವನ ನಡೆಸುವವ ರಾಗಿದ್ದಾರೆ. ಬೇಸಾಯವನ್ನು ಅವಲಂಬಿಸಿರುವ ಇವರು ಭತ್ತ, ಸಜ್ಜೆ, ಹತ್ತಿ, ನವಣೆ, ಸಾಸಿವೆ, ಮುಂತಾದವುಗಳನ್ನು ಬೆಳೆಯುವುದರೊಂದಿಗೆ ಅರಣ್ಯದ ಹುಟ್ಟುವಳಿಗಳನ್ನು ಸಂಗ್ರಹಿಸುವವರಾಗಿದ್ದಾರೆ.

ಈಶಾನ್ಯ ವಲಯದ ಆದಿವಾಸಿಗಳು ಕಷ್ಟಸಹಿಷ್ಣುಗಳು, ಮುಗ್ಧರು, ಸ್ವಾತಂತ್ರ್ಯ ಪ್ರಿಯರು ಮತ್ತು ಧಾರ್ಮಿಕ ಶ್ರದ್ಧೆಯುಳ್ಳವರೂ ಆಗಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಇವರು ಆತ್ಮಶಕ್ತಿಯಲ್ಲಿ

ವಿಶೇಷ ನಂಬಿಕೆಯುಳ್ಳವರಾಗಿದ್ದು, ಅದರ ಬಲದಿಂದ ಸಮಸ್ಯೆಗಳನ್ನು ಎದುರಿಸಬಹುದೆಂದು ಭಾವಿಸುವರು. ಈ ವಲಯದ ಮುಖ್ಯ ಆದಿವಾಸಿ ಸಮೂಹದ ನಾಗಾ ಜನರಲ್ಲಂತೂ ಮಾನವ ಬೇಟೆಯಾಡುವ [head hunting] ಮತ್ತು ಮಾನವನ ತಲೆಬುರುಡೆಗಳನ್ನು ಸಂಗ್ರಹಿಸಿ ತಮ್ಮ ವಾಸಸ್ಥಳದಲ್ಲಿ ಇರಿಸುವ ಪದ್ಧತಿಯು ಬೆಳೆದು ಬಂದಿತ್ತು. ತಲೆಬುರುಡೆಗಳ ಸಂಗ್ರಹದಿಂದ ತಮ್ಮ ಆತ್ಮಶಕ್ತಿಯು ವೃದ್ಧಿಸುವುದೆಂದು ಅವರು ನಂಬುತ್ತಿದ್ದರು. ಇದು ಅವರ ಕಲಹಪ್ರಿಯತೆಗೊಂದು ನಿದರ್ಶನ ಕೂಡಾ.

೨. ಮಧ್ಯವಲಯದ ಆದಿವಾಸಿಗಳು (Tribes of Central Zone)

ಈ ವಲಯವು ಉತ್ತರ ಪ್ರದೇಶದ ದಕ್ಷಿಣ ಭಾಗ, ಮಧ್ಯ ಭಾರತ, ಮಧ್ಯ ಪ್ರದೇಶ ಮತ್ತು ಒರಿಸ್ಸಾ ಮುಂತಾದ ಪ್ರದೇಶಗಳನ್ನು ಆವರಿಸಿದೆ. ಆದಿವಾಸಿಗಳ ಸಂಖ್ಯೆ ಹಾಗೂ ಅವರು ಹರಡಿಕೊಂಡಿರುವ ಪ್ರದೇಶಗಳ ವಿಸ್ತಾರದ ದೃಷ್ಟಿಯಿಂದ ಈ ವಲಯವು ಮೂರು ವಲಯಗಳಲ್ಲಿ ಅತ್ಯಂತ ದೊಡ್ಡದಾದ ವಲಯವಾಗಿದೆ. ಈ ವಲಯದಲ್ಲಿ ನೆಲಸಿರುವ ಮುಖ್ಯ ಆದಿವಾಸಿಗಳೆಂದರೆ, – ಸಂತಾಲ, ಮುಂಡಾ, ಗೊಂಡ, ಸವರಾ, ಭಿಲ್, ಬೈಗಾ, ಬಿರ್ಹೋರ, ಭೂಮಿಜ, ಗದಬ, ಬೊಂಡಾ, ಜುವಾಂಗ ಕಂಧ, ಹೋ, ಭೂಮಿಯಾ, ಖಾರಿಯಾ ಇತ್ಯಾದಿ. ಮಧ್ಯ ವಲಯದ ಆದಿವಾಸಿಗಳು ಮಧ್ಯಮ ಗಾತ್ರದ ದೇಹದಾರ್ಢ್ಯತೆ (Medium bodily stature) ಹೊಂದಿದವವ ರಾಗಿದ್ದು ಈಶಾನ್ಯ ವಲಯದಂತೆ ಬಿಳಿ ಅಥವಾ ಗೋಧಿ ಬಣ್ಣವನ್ನು ಹೊಂದಿರದೆ ಹೆಚ್ಚಾಗಿ ಕಪ್ಪು ಬಣ್ಣದವರಾಗಿದ್ದಾರೆ. ಬೇಟೆಯಾಡುವ ಹಂತವನ್ನು ದಾಟಿ ಬೇಸಾಯದ ಹಂತವನ್ನು ಪ್ರವೇಶಿಸಿರುವ ಇವರು ಆಗಾಗ್ಗೆ ತಮ್ಮ ಕೃಷಿ ಭೂಮಿಯನ್ನು ಬದಲಿಸುವ "ಸಂಚಾರಿ ಬೇಸಾಯ ಕ್ರಮ"ವನ್ನು ಅಥವಾ "ಸ್ಥಳ ಬದಲಿಕೆಯ ಬೇಸಾಯಕ್ರಮ"(shifting cultivation)ವನ್ನು ಅನುಸರಿಸುತ್ತಿದ್ದಾರೆ. ಆಧುನಿಕ ಜಗತ್ತಿಗೆ

ಬಹುದೂರದಲ್ಲಿರುವ ಈ ಸಮೂಹಗಳು ಆರ್ಥಿಕವಾಗಿ ಬಹಳ ಹಿಂದುಳಿದಿವೆ. ಇಲ್ಲಿನ ಹಲವಾರು ಆದಿವಾಸಿ ಸಮೂಹಗಳಲ್ಲಿ ಸಂತಾಲರು ಬಹುದೊಡ್ಡ ಸಂಖ್ಯೆಯಲ್ಲಿದ್ದು ತಮ್ಮದೇ ಆದ "ಪಂಚಾಯಿತಿ" ವ್ಯವಸ್ಥೆಯನ್ನು ಹೊಂದಿದ್ದು, ಇದ್ದುದರಲ್ಲಿ ಕ್ರಮಬದ್ಧ ಜೀವನ ನಡೆಸುವವರಾಗಿದ್ದಾರೆ. ಈ ವಲಯದಲ್ಲಿ ಪಿತೃಪ್ರಧಾನ ಕುಟುಂಬಗಳೇ ಅಧಿಕವಾಗಿದ್ದು ಪುರುಷ ಪ್ರಧಾನತೆಯಿರುತ್ತದೆ. ಇವರು ಬುಟ್ಟಿ ಹೆಣೆಯುವ ಮತ್ತು ಮರದ ಕೆತ್ತನೆಯ ಕೆಲಸಗಳಲ್ಲಿ ಪರಿಣಿತರಾಗಿದ್ದರೂ, ಇವರು ಆರ್ಥಿಕವಾಗಿ ಇನ್ನೂ ಸ್ವಾವಲಂಬಿಗಳಾಗಿಲ್ಲ. ಪುರುಷ ಪ್ರಧಾನತೆಯ ಹೊರತಾಗಿಯೂ ಮಕ್ಕಳೆಲ್ಲರಿಗೆ ಆಸ್ತಿಯ ಹಕ್ಕು ನೀಡುವ ಈ ವಲಯದ ಹೆಚ್ಚಿನ ಆದಿವಾಸಿ ಸಮೂಹಗಳು ಗಲಭೆ–ಘರ್ಷಣೆಗಳಿಲ್ಲದ ಶಾಂತ ಜೀವನವನ್ನು ಬಯಸುವರು.

೩. ದಕ್ಷಿಣ ವಲಯದ ಆದಿವಾಸಿಗಳು (Tribes of Southern Zone)

ಈ ವಲಯವು ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳನ್ನು ಒಳಗೊಂಡಿರುವುದು. ತೋಡ, ಕಾಡುಕುರುಬ, ಉರಲಿ, ಸೋಲಿಗ, ಯರವ, ಕೋಯ, ತಿರುವಾ,

ಹಸಲರು, ಬಡಗ, ಇರುಳ, ಕಾಡಾರ್, ಚಂಚೂ, ಮೊದಲಾದ ಆದಿವಾಸಿಗಳು ಈ ವಲಯದಲ್ಲಿ ವಾಸಿಸುವರು. ಉಳಿದ ವಲಯಗಳ ಆದಿವಾಸಿಗಳಿಗೆ ಹೋಲಿಸಿದರೆ ದಕ್ಷಿಣ ವಲಯದವರು ನಾಗರಿಕತೆಯಲ್ಲಿ ಬಹಳ ಹಿಂದುಳಿದಿದ್ದಾರೆ. ಇತ್ತೀಚಿನವರೆಗೂ ಕಲ್ಲನ್ನು ತಿಕ್ಕಿ ಬೆಂಕಿಯನ್ನು ಹೊತ್ತಿಸುತ್ತಾ ಎಲೆ ಹಾಗೂ ಹುಲ್ಲಿನಿಂದ ತಯಾರಿಸಿದ ಉಡುಪುಗಳನ್ನು ಧರಿಸುತ್ತಾ ಇದ್ದ ಈ ಸಮೂಹಗಳು ಇದೀಗ ಆಧುನಿಕ ಜಗತ್ತಿನತ್ತ ನೋಡತೊಡಗಿವೆ.

ದಕ್ಷಿಣ ವಲಯದ ಆದಿವಾಸಿಗಳು ಹೆಚ್ಚಾಗಿ ಮಾತೃಪ್ರಧಾನ ಕುಟುಂಬವನ್ನು ಹೊಂದಿದವರಾಗಿರುವರಲ್ಲದೆ ಸದೃಢವಾದ ದೈಹಿಕ ನಿಲುವನ್ನು ಹೊಂದಿದ್ದು ಕಷ್ಟತಮವಾದ ಕೆಲಸ ಕಾರ್ಯಗಳನ್ನು ಮಾಡಲು ಹಿಂಜರಿಯುವವರಲ್ಲ. ಆದಾಗ್ಯೂ ಹೊಟ್ಟೆಪಾಡಿಗಾಗಿ ಕೃಷಿಗಿಂತಲೂ ಬೇಟೆಯಾಡುವುದನ್ನು ಇವರು ಹೆಚ್ಚಾಗಿ ಅವಲಂಬಿಸಿದ್ದಾರೆ. ಅರಣ್ಯದಲ್ಲಿ ಲಭ್ಯವಿರುವ ಗಡ್ಡೆ–ಗೆಣಸುಗಳನ್ನು, ಕಂದಮೂಲಾದಿಗಳನ್ನು, ಹಣ್ಣು–ಹಂಪಲಗಳನ್ನು ತಿಂದು ಇವರು ಬದುಕುವರು. ಇತ್ತೀಚಿನ ವರ್ಷಗಳಲ್ಲಿ ಮಾತ್ರ ಕೆಲವರು ಬೇಸಾಯವನ್ನು ಅವಲಂಬಿಸತೊಡಗಿದ್ದಾರೆ. ಪ್ರತಿಯೊಂದು ಆದಿವಾಸಿ ಸಮೂಹವು ತನ್ನದೇ ಆದ ನಾಯಕನನ್ನು ಹೊಂದಿದ್ದು, ಆತ ಸಾಮಾಜಿಕ ಸಂಘಟನೆಯ ಮೇಲೆ ತನ್ನ ನಿಯಂತ್ರಣವನ್ನು ಹೊಂದಿರುತ್ತಾನೆ. ನೀಲಗಿರಿಯ ತೋದರು ಬಹುಪತ್ನಿತ್ವವನ್ನು ಅನುಸರಿಸುವವರಾಗಿದ್ದರೆ. ಉಳಿದ ಸಮೂಹಗಳಲ್ಲಿ ಹೆಚ್ಚಾಗಿ ಏಕಪತ್ನಿತ್ವವೇ ಆಚರಣೆಯಲ್ಲಿದೆ.

ಈ ಮೇಲೆ ಪ್ರಸ್ತಾಪಿಸಿದ ಮೂರು ವಲಯಗಳಲ್ಲಿಯೂ ಹಲವಾರು ಬಗೆಯ ಆದಿವಾಸಿ ಪಂಗಡಗಳಿದ್ದು, ಪ್ರತಿಯೊಂದು ಕೂಡ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವುದುಂಟು. ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ನೋಡುವುದಾದರೆ ಅವುಗಳು ಬೇಟೆಯಾಡುವ, ಪಶುಪಾಲನೆ ಹಾಗೂ ಬೇಸಾಯ ಮಾಡುವ ವಿಭಿನ್ನ ಹಂತಗಳನ್ನು ಪ್ರತಿನಿಧಿಸುತ್ತವೆ ಎನ್ನಬಹುದು. ಕೆಲವು ಪಂಗಡಗಳು ಬೇಟೆಯಾಡುವ ಹಂತದಲ್ಲಿದ್ದರೆ, ಮತ್ತೆ ಕೆಲವು ಆಹಾರ ಸಂಗ್ರಹಣೆಯ ಹಂತದಲ್ಲಿವೆ; ಇನ್ನೂ ಕೆಲವು ಬೇಸಾಯವನ್ನವಲಂಬಿಸಿ ಸ್ಥಿರ ಜೀವನವನ್ನು ನಡೆಸುತ್ತಿವೆ. ಕೆಲವೊಮ್ಮೆ ಬೇಸಾಯ, ಬೇಟೆ ಹಾಗೂ ಆಹಾರ ಸಂಗ್ರಹಣೆ ಒಟ್ಟಿಗೆ ಸಾಗುವುದೂ ಇದೆ. ಪ್ರತಿಯೊಂದು ಪಂಗಡವು ತನ್ನದೇ ಆದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಜೀವನವನ್ನು ಹೊಂದಿದ್ದು ಭಾರತದ ಸಾಮಾಜಿಕ ವೈವಿಧ್ಯಕ್ಕೆ ಮತ್ತಷ್ಟು ಮೆರುಗು ನೀಡಿದೆ.

ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವೇನೆಂದರೆ, ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಾಸಿಸುವ ಹಸಲರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಮತ್ತು ಅವರ ಸಾಂಸ್ಕೃತಿಕ ಬದುಕನ್ನು ಕುರಿತು ಅಧ್ಯಯನ ಮಾಡುವುದಾಗಿದೆ.

ಹಸಲರ ಬಗ್ಗೆ ಅಧ್ಯಯನಗಳು ಆಗಿದ್ದರೂ ಅವು ಸಮಗ್ರರೂಪದಲ್ಲಿ ನಡೆದಿಲ್ಲ. ಅಲ್ಲದೆ ಹಸಲರ ಸಾಮಾಜಿಕ, ಆರ್ಥಿಕ ಜೀವನ ಮತ್ತು ಅವರ ಸಮಸ್ಯೆಗಳ ಬಗ್ಗೆ ಪ್ರೌಢ ಪ್ರಬಂಧ ಇದುವರೆಗೆ ಲಭ್ಯವಾಗಿಲ್ಲ. ಆದಾಗ್ಯೂ ಕೆಲವು ಗ್ರಂಥಗಳು, ವರದಿಗಳು, ಲೇಖನಗಳು ದಿನಪತ್ರಿಕೆಯಲ್ಲಿಯ

ಸಚಿತ್ರ ಲೇಖನಗಳು ಮತ್ತು ವರದಿಗಳು ಹಸಲರ ಬಗ್ಗೆ ತಜ್ಞರ ಮತ್ತು ಸಂಶೋಧಕರ ಗಮನ ಸೆಳೆಯುವಲ್ಲಿ ಸಫಲವಾಗಿವೆ. ಈ ದಿಶೆಯಲ್ಲಿ ಕೆಲವೊಂದು ನಿಚ್ಚಳ ಸಂಗತಿ ಹಾಗೂ ಸಮಸ್ಯೆಗಳು ಈ ಸಮುದಾಯದ ಬಗ್ಗೆ ಪ್ರೌಢ ಪ್ರಬಂಧ ಸಾದರಪಡಿಸಲು ಪ್ರೇರಕವಾಗಿದೆ.

ಇಂದಿಗೂ ಹಸಲರ ಸಾಮಾಜಿಕ, ಆರ್ಥಿಕ ಸ್ಥಿತಿಗಳಲ್ಲಿ ಬದಲಾವಣೆಗಳಾದರೂ ನಿರೀಕ್ಷಿತ ಪ್ರಮಾಣದ ಬದಲಾವಣೆಯಾಗದೇ ಕೆಲವೊಂದು ಹಾಡಿಕೇರಿಗಳಲ್ಲಿ ಇನ್ನೂ ಹೀನಾಯ ಸ್ಥಿತಿಯಲ್ಲಿ ಇರುವುದನ್ನು ಕಾಣುತ್ತೇವೆ. ಆಧುನಿಕ ಯುಗದಲ್ಲಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುತ್ತಿದ್ದರೂ ಅವರನ್ನು ಮಧ್ಯದಲ್ಲಿ ಬಿಡಿಸುತ್ತಿರುವ (Dropout) ಪ್ರಮಾಣ ಹೆಚ್ಚಾಗಿರುವುದು ಆತಂಕದ ವಿಷಯವಾಗಿದೆ. ರಾಜಕೀಯವಾಗಿ ಅಲ್ಪ-ಸ್ವಲ್ಪ ಸ್ಥಾನಮಾನಗಳನ್ನು ಹೊಂದಿದ್ದಾರೆ. ಈ ಎಲ್ಲ ಸಂಗತಿಗಳನ್ನು ವಿಶ್ಲೇಷಿಸುವ ಉದ್ದೇಶದಿಂದ ಪ್ರಸ್ತುತ ಅಧ್ಯಯನ ಕೈಕೊಳ್ಳಲಾಗಿದೆ.

೧.೧ ಅಧ್ಯಯನದ ಉದ್ದೇಶಗಳು

ಈ ಕೆಳಗಿನ ಉದ್ದೇಶಗಳನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

೧) ಈ ಸಮುದಾಯದ ಮೂಲವನ್ನು ಗುರುತಿಸುವುದು.

೨) ಈ ಸಮುದಾಯದ ಸಾಮಾಜಿಕ ಜೀವನ ವಿಧಾನವನ್ನು ಅಧ್ಯಯನ ಮಾಡುವುದು.

೩) ಈ ಸಮುದಾಯದ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.

೪) ಅವರ ಸಾಂಸ್ಕೃತಿಕ ಜೀವನವನ್ನು ಅಧ್ಯಯನ ಮಾಡುವುದು.

೫) ಆಧುನಿಕ ಪ್ರಕ್ರಿಯೆಯಲ್ಲಿ ಅವರು ಅನುಭವಿಸುತ್ತಿರುವ ಸಾಂಸ್ಕೃತಿಕ ಪಲ್ಲಟಗಳ ಅಧ್ಯಯನ ಮಾಡುವುದು.

೧.೨ ಅಧ್ಯಯನದ ಪ್ರಮೇಯಗಳು

೧) ಬದಲಾದ ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳುವಾಗ ಇವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ.

೨) ಈ ಸಮುದಾಯದ ಪಾರಂಪರಿಕ ವೃತ್ತಿಯಲ್ಲಿ ಯಂತ್ರಗಳ ಆಗಮನದಿಂದ ವೃತ್ತಿ ಶೈಲಿಯಲ್ಲಿ ಬದಲಾವಣೆ ಮಾಡಲು ಪ್ರಾರಂಭಿಸಿದ್ದಾರೆ.

೩) ಇವರ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳಲ್ಲಿ ಹವ್ಯಕ್ ಬ್ರಾಹ್ಮಣರ ಪ್ರಭಾವ ಹೆಚ್ಚಾಗಿ ಕಂಡು ಬರುತ್ತದೆ.

೪) ಹಸಲರು ಶಿಕ್ಷಣದ ಕಡೆಗೆ ಗಮನ ಹರಿಸಲು ಪ್ರಾರಂಭಿಸಿದ್ದಾರೆ.

೧.೩ ಅಧ್ಯಯನದ ವ್ಯಾಪ್ತಿ

ಹಸಲರು ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆ. ಈಗಾಗಲೇ ತಿಳಿಸಿರುವಂತೆ ಹಸಲರು ಈ ೫ ಜಿಲ್ಲೆಗಳಲ್ಲಿಯ

೧೭ ತಾಲೂಕುಗಳಲ್ಲಿ ವಾಸವಾಗಿದ್ದಾರೆ. ಅಲ್ಲದೆ ಇನ್ನುಳಿದ ತಾಲೂಕುಗಳಲ್ಲಿ ಹಸಲರು ಇರುವ ಮಾಹಿತಿ ಲಭ್ಯವಾಗದೇ ಇರುವುದರಿಂದ ಮೇಲೆ ಉಲ್ಲೇಖಿಸಲ್ಪಟ್ಟ ಜಿಲ್ಲೆಗಳನ್ನು ಮಾತ್ರ ಅಧ್ಯಯನದ ವ್ಯಾಪ್ತಿಯನ್ನಾಗಿ ಪರಿಗಣಿಸಲಾಗಿದೆ.

ಈ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಪ್ರಬಲವಾದ ಕಾರಣಗಳಿವೆ. ಅವು ಈ ಕೆಳಗಿನಂತಿವೆ.

೧) ಮೇಲೆ ಉಲ್ಲೇಖಿಸಲ್ಪಟ್ಟ ಜಿಲ್ಲೆಗಳಲ್ಲಿ ಹಸಲರ ಜನಸಂಖ್ಯೆ ಹೆಚ್ಚಾಗಿರುವುದು.

೨) ಮಲೆನಾಡಿನ ಬೆಟ್ಟ ಅರಣ್ಯದಲ್ಲಿ ವಾಸವಾಗಿ ತಮ್ಮದೇಯಾದ ಜೀವನ ವಿಧಾನವನ್ನು ನಡೆಸುವುದು.

೩) ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿಯ ಹಸಲರು ಪುನರ್ವಸತಿಗೊಂಡಿರುವುದು.

೪) ತಮ್ಮದೇಯಾದ ವಿಶಿಷ್ಟ ಸಂಪ್ರದಾಯವನ್ನು ಹೊಂದಿರುವುದು.

ಮೇಲಿನ ಅಂಶಗಳು ಒಂದು ಸಮುದಾಯದ ಜೀವನ ವಿಧಾನವನ್ನು ರೂಪಿಸುವ ಮತ್ತು ಸ್ಥಿತ್ಯಂತರಗಳಿಗೆ ಒಳಪಡುವ ಅಂಶಗಳಾಗಿದ್ದು, ಅಷ್ಟೇ ಅಲ್ಲ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಮಗ್ರ ನಕ್ಸಲ್ ಪೀಡಿತ ಯೋಜನೆ ಅನುಷ್ಠಾನದಲ್ಲಿರುವುದರಿಂದ ಅಧ್ಯಯನಕ್ಕೆ ಸೂಕ್ತವಾದ ಜಿಲ್ಲೆಗಳಾಗಿವೆ.

'ಹಸಲರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ಶೀರ್ಷಿಕೆಯಡಿ ಅವರು ವಾಸಿಸುವ ಪ್ರದೇಶಗಳನ್ನು ಮಾತ್ರ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಅಧ್ಯಯನದ ಉದ್ದೇಶಗಳಿಗನುಗುಣವಾಗಿ ಹಸಲರು ವಾಸಿಸುವ ಐದು ಜಿಲ್ಲೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಐದು ಜಿಲ್ಲೆಗಳಲ್ಲಿಯ ಹದಿನೇಳು ತಾಲೂಕುಗಳ ನಲವತ್ತೈದು ಹಾಡಿಕೇರಿಯಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಮಾಡಲಾಗಿದೆ.

ಉತ್ತರ ಕನ್ನಡ ಜಿಲ್ಲೆ

ಶಿರಸಿ ತಾಲೂಕು: ಬಸವನ ಕೊಪ್ಪ, ಕಲ್ಲಕೊಪ್ಪ, ಕಾಗೇರಿ

ಸಿದ್ಧಾಪೂರ ತಾಲೂಕು: ಕಲ್ಲಾಳ, ದೊಡ್ಮನೆ, ಮುಗದೂರ

ಹೊನ್ನಾವರ ತಾಲೂಕು: ದಬ್ಬೋಡು, ಮಾಗೋಡು, ಮಂಕಿ

ಭಟ್ಕಳ ತಾಲೂಕು: ಬೈಲೂರು

ಉಡುಪಿ ಜಿಲ್ಲೆ

ಕುಂದಾಪೂರ ತಾಲೂಕು: ಕಬ್ಬಿನಾಲೆ, ಹಳ್ಳಿಹೊಳೆ, ಕೊಲ್ಲೂರು

ಕಾರ್ಕಳ ತಾಲೂಕು: ಅಂಡಾರು, ಮಾಳ, ಕಬ್ಬಿನಾಲೆ ನೀರಾಡಿ

ಚಿಕ್ಕಮಗಳೂರು ಜಿಲ್ಲೆ

ಮೂಡಿಗೇರೆ ತಾಲೂಕು: ಸಂಸೆ, ಬಮ್ಮನಕೋಡ, ಕವನಹಳ್ಳಿ

ಎನ್.ಆರ್ ಪುರ ತಾಲೂಕು: ಬಿ. ಕಣಬೂರು, ಚಿಟಮಕ್ಕಿ, ಇಟ್ಟಿಗೆಸಿಗೋಡು

ಕೊಪ್ಪ ತಾಲೂಕು: ಹಿರೇಹುಲುಗಾರ, ತಲಗೋಡು, ಬೆಂಡೆಹಕ್ಲು

ಶೃಂಗೇರಿ ತಾಲೂಕು: ಬೋರ್ಡ್‌ಗಲ್ಲ, ಕೀಗ, ಮೀಗ

ದಕ್ಷಿಣ ಕನ್ನಡ

ಮಂಗಳೂರು: ಕುಳೈ

ಶಿವಮೊಗ್ಗ ಜಿಲ್ಲೆ

ಸಾಗರ ತಾಲೂಕು: ಕುಡುಗುಂಜಿ, ಕಾಳಮಂಜಿ, ಹಿರೇಮನೆ

ತೀರ್ಥಹಳ್ಳಿ ತಾಲೂಕು: ದಿಂಡ, ಶಿಲೆಕುಣಿ, ಗಾಡರಗದ್ದೆ

ಸೊರಬ ತಾಲೂಕು: ಗುಡುಗಿನಕೊಪ್ಪ, ನಿಸರಾಣಿ, ಮುಟಗುಪ್ಪೆ

ಹೊಸನಗರ ತಾಲೂಕು: ಮಂಜಗಳಲೆ, ಮತ್ತಿಮನೆ, ಹೊಸೂರು

ಶಿಕಾರಿಪುರ ತಾಲೂಕು: ಕಾನಳ್ಳಿಬಿಳಕಿ, ಹೊಸಕಾವಲಿ, ಗುಡ್ಡದ ಹೊಸಳ್ಳಿ

ಶಿವಮೊಗ್ಗ ತಾಲೂಕು: (ನಗರ)

ಪ್ರತಿ ಜಿಲ್ಲೆಯ ಪ್ರತಿ ತಾಲೂಕಿನಲ್ಲಿಯ ದೂರದ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಅತ್ಯಂತ ಹಿಂದುಳಿದ ಹಾಡಿಕೇರಿ, ಮಧ್ಯಮ ಹಾಡಿಕೇರಿ ಮತ್ತು ನಗರಕ್ಕೆ ಹೊಂದಿಕೊಂಡಿರುವ ಹಾಡಿಕೇರಿಯನ್ನು ಆಯ್ಕೆ ಮಾಡಿ ವ್ಯಾಪಕವಾದ ಕ್ಷೇತ್ರಕಾರ್ಯ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯಿಂದ ೨೧೭ ಕುಟುಂಬಗಳು, ಚಿಕ್ಕಮಗಳೂರು ಜಿಲ್ಲೆಯಿಂದ ೧೦೬ ಕುಟುಂಬಗಳು, ಉಡುಪಿ ಜಿಲ್ಲೆಯಿಂದ ೭೨ ಕುಟುಂಬಗಳು, ಉತ್ತರ ಕನ್ನಡ ಜಿಲ್ಲೆಯಿಂದ ೧೧೬ ಕುಟುಂಬಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ ೬ ಕುಟುಂಬಗಳನ್ನು ಒಟ್ಟು ೫೧೭ ಕುಟುಂಬಗಳನ್ನು ಸಮೀಕ್ಷೆ ಮಾಡಲಾಗಿದೆ. ಹಾಗೂ ನಿಶ್ಚಿತವಾದ ಪ್ರಶ್ನಾವಳಿಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಲ್ಲದೆ ಈ ಪ್ರಬಂಧದಲ್ಲಿ ಇರುವ ಅಂಕಿ-ಅಂಶಗಳು ಸಮೀಕ್ಷೆಗೊಳಪಟ್ಟ ೫೧೭ ಕುಟುಂಬಗಳಿಗೆ ಮಾತ್ರ ಸೀಮಿತವಾಗಿದೆ.

೧.೪ ಅಧ್ಯಯನದ ವೈಧಾನಿಕತೆ

ಪ್ರಸ್ತುತ ಅಧ್ಯಯನಕ್ಕೆ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಯ ದಟ್ಟವಾದ ಅರಣ್ಯದಲ್ಲಿ ತಮ್ಮದೇಯಾದ ವಿಶಿಷ್ಟ ರೀತಿಯ ಬದುಕನ್ನು ಸಾಗಿಸುತ್ತಿರುವ ಹಸಲರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಐದು ಜಿಲ್ಲೆಗಳು ಮಲೆನಾಡಿನ ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾದ ಜಿಲ್ಲೆಗಳು. ಅಲ್ಲದೆ ವೈವಿಧ್ಯಮಯ ಜನಸಮುದಾಯಗಳಿಂದ ಕೂಡಿದವುಗಳಾಗಿವೆ. ಇಲ್ಲಿ ಮಲೆಕುಡಿಯರು, ಪಾರ್ಧಿಗಳು, ಕುಣುಬಿಯರು, ಗೌಳಿಗರು ಮುಂತಾದ ಜನಸಮುದಾಯದವರು ಇಲ್ಲಿ ವಾಸಿಸುತ್ತಾರೆ. ಇವರಲ್ಲಿ ಹಸಲರು ತಮ್ಮದೇಯಾದ ವೃತ್ತಿಯಿಂದ ಭಿನ್ನವಾಗಿ ಕಾಣುವರು. ಈ ಜನಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು

ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಮುಖ್ಯವಾಗಿ ಇದು ಕ್ಷೇತ್ರಕಾರ್ಯ ಆಧಾರಿತ ಅಧ್ಯಯನವಾಗಿದೆ. ಈ ಸಮುದಾಯದ ಬಗೆಗೆ ಈಗಾಗಲೇ ನಡೆದಿರುವ ಅಧ್ಯಯನಗಳನ್ನು ಗಮನಿಸಿ, ಅದರ ಹಿನ್ನಲೆಯಲ್ಲಿ ಈ ಸಮುದಾಯದ ವರ್ತಮಾನದ ಸ್ಥಿತಿಗಳನ್ನು ಅಧ್ಯಯನ ಮಾಡುವ ಸಲುವಾಗಿ ಈ ಕೆಳಗಿನ ವಿಧಾನಗಳನ್ನು ಅನುಸರಿಸಲಾಗಿದೆ.

೧)ಲಭ್ಯ ಸಾಹಿತ್ಯ ಆಕರಗಳ ಅಧ್ಯಯನ

೨)ಚಾರಿತ್ರಿಕ ವಿಧಾನ

೩)ಪ್ರಶ್ನಾವಳಿ

೪)ಗುಂಪುಚರ್ಚೆ ಮತ್ತು ಸಂದರ್ಶನ

೫)ಅವಲೋಕನ ಮತ್ತು ಸಹಭಾಗಿತ್ವ

೬)ವ್ಯಕ್ತಿ ಅಧ್ಯಯನ ವಿಧಾನ

೭)ನಮೂನೆ ವಿಧಾನ

೧) ಲಭ್ಯ ಸಾಹಿತ್ಯ ಆಕರಗಳ ಅಧ್ಯಯನ

ಪ್ರಸ್ತುತ ಅಧ್ಯಯನದಲ್ಲಿ ಬ್ರಿಟಿಷ್ ಅಧಿಕಾರಿಗಳಿಂದ ಇಲ್ಲಿಯವರೆಗೆ ಹಸಲರ ಬಗ್ಗೆ ಬಂದಿರುವ ಸಾಹಿತ್ಯವನ್ನು ಪರಾಮರ್ಶಿಸಲಾಗಿದೆ ಹಾಗೂ ಅವರ ಮೌಖಿಕ ಸಾಹಿತ್ಯವನ್ನು ಪ್ರಧಾನ ಆಕಾರವೆಂದು ಪರಿಗಣಿಸಲಾಗಿದೆ.

೨) ಚಾರಿತ್ರಿಕ ವಿಧಾನ

ಲಭ್ಯವಿರುವ ಮೌಖಿಕ ಮತ್ತು ಲಿಖಿತ ಸಾಹಿತ್ಯದ ಆಕಾರಗಳ ಮೂಲಕ ಹಸಲರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಗತಿತಾರ್ಕಿಕ ಅಧ್ಯಯನದ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ. ಇದಕ್ಕಾಗಿ ಹಸಲರ ಮೌಖಿಕ ಸಾಹಿತ್ಯ, ಆಚರಣೆ, ನಂಬುಗೆಗಳನ್ನು ಪ್ರಧಾನವಾಗಿ ಮತ್ತು ಲಿಖಿತ ಆಕರಗಳನ್ನು ಆನುಷಂಗಿಕವಾಗಿ ಬಳಸಿಕೊಳ್ಳಲಾಗಿದೆ.

೩) ಪ್ರಶ್ನಾವಳಿ

ಹಸಲರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಕುರಿತು ಅಧ್ಯಯನ ಮಾಡಲು ಪೂರ್ವನಿಗದಿ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ, ಆ ಪ್ರಶ್ನಾವಳಿಯನ್ನು ನಲವತ್ತೆಂಟು ಹಾಡಿಕೇರಿಗಳ ಕುಟುಂಬಕ್ಕೆ ಕೊಟ್ಟು ಅವರಿಂದ ಮಾಹಿತಿ ಸಂಗ್ರಹಿಸಲಾಯಿತು. ಅಷ್ಟೆ ಅಲ್ಲ, ಪೂರ್ವನಿಗದಿತ ಪ್ರಶ್ನೆಗಳಲ್ಲದೆ ಕೆಲವು ಉಪ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ಇದಕ್ಕಾಗಿ ಮೇಲೆ ಹೇಳಿದಂತೆ ಗುಡ್ಡಗಳಲ್ಲಿ ವಾಸಿಸುವ ಹಿಂದುಳಿದ, ಮಧ್ಯಮ ಮತ್ತು ನಗರಕ್ಕೆ ಸಮೀಪವಿರುವ ಹಾಡಿಕೇರಿಗಳ ಕುಟುಂಬಗಳ ಸಮೀಕ್ಷೆ ಮಾಡಲಾಗಿದೆ.

೪) ಗುಂಪುಚರ್ಚೆ ಮತ್ತು ಸಂದರ್ಶನ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಹಸಲರ ಹಾಡಿಕೇರಿ ಮುಖಂಡರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಷ್ಟೇ ಅಲ್ಲ, ಈ ಸಮುದಾಯದ ಸಮಗ್ರ ಮಾಹಿತಿಯನ್ನು ಪಡೆಯುವುದಕ್ಕಾಗಿ ಕೆಲವು ಗುಂಪುಗಳನ್ನು ರಚಿಸಿ, ಸಿದ್ಧಪಡಿಸಿದ ಪ್ರಶ್ನಾವಳಿಯ ಮೂಲಕ ಗುಂಪುಚರ್ಚೆಗಳನ್ನು ಏರ್ಪಡಿಸಲಾಗಿತ್ತು. ಅನೇಕರು ಗುಂಪುಚರ್ಚೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಮುಕ್ತವಾಗಿ ಮತ್ತು ನೇರವಾಗಿ ಮಾತನಾಡಿದರು. ಸಂದರ್ಶಿಸಿದ ವ್ಯಕ್ತಿಯು ಮರೆತಿರುವ ವಿಷಯಗಳನ್ನು ಇನ್ನುಳಿದವರು ವಿವರಿಸಿದ್ದಾರೆ. ಇಂಥ ಚರ್ಚೆಗಳು ವಿಷಯ ಸಂಗ್ರಹಿಸಲು ಅತ್ಯಾವಶ್ಯಕ. ಇದರಿಂದ ವ್ಯಕ್ತಿಗತ ಮತ್ತು ಸಮುದಾಯದ ಅಭಿಪ್ರಾಯಗಳನ್ನು ಏಕಕಾಲದಲ್ಲಿ ಪಡೆಯಲು ಸಾಧ್ಯವಾಗುತ್ತದೆ.

೫) ಅವಲೋಕನ ಮತ್ತು ಸಹಭಾಗಿತ್ವ

ಯಾವುದೇ ಬುಡಕಟ್ಟಿನ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಅಧ್ಯಯನ ಮಾಡಬೇಕಾದರೆ, ಅವಲೋಕನ ಮತ್ತು ಸಹಭಾಗಿತ್ವ ವಿಧಾನ ಅತಿ ಅವಶ್ಯಕ. ಹಸಲರನ್ನು ಕುರಿತು ಅಧ್ಯಯನ ಮಾಡುವಾಗ ಅವರ ಹಾಡಿಕೇರಿಗಳಲ್ಲಿಯೇ ವಾಸ್ತವ್ಯಮಾಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರಲ್ಲಿರುವ ಆಚರಣೆ, ನಂಬಿಗೆ ಮುಂತಾದವುಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಅಂಕಿ-ಅಂಶಗಳಿಗಿಂತ ಸಹಭಾಗಿತ್ವದಿಂದ ಪಡೆಯುವ ಮಾಹಿತಿ ಹೆಚ್ಚು ಸ್ಪಷ್ಟ ಮತ್ತು ನಿಖರವಾಗಿರುತ್ತದೆ.

೬) ವ್ಯಕ್ತಿಗತ ಅಧ್ಯಯನದ ವಿಧಾನ

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಹಸಲರ ಹಾಡಿಕೇರಿಯ ವ್ಯಕ್ತಿಗಳನ್ನು ಸಂದರ್ಶನಕ್ಕೆ ಯಾವುದೇ ಪೂರ್ವಗ್ರಹಪೀಡಿತರಾಗಿರದೇ ಮೌಲ್ಯಾಂಕನದಲ್ಲಿ ಖಚಿತತೆಯನ್ನು ಪಡೆಯುವ ಉದ್ದೇಶದಿಂದ ಈ ಅಧ್ಯಯನ ವಿಧಾನವನ್ನು ಅನುಸರಿಸಲಾಗಿದೆ. ಈ ಅಧ್ಯಯನಕ್ಕಾಗಿ ಕೂಲಿ ಕಾರ್ಮಿಕರನ್ನು, ಸರಕಾರಿ ನೌಕರರನ್ನು, ಸೀಮೆಯ ಮುಖಂಡರನ್ನು, ಪಂಚಾಯತ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ವ್ಯಕ್ತಿ ಸಂದರ್ಶನಕ್ಕೆ ಪ್ರತ್ಯೇಕವಾಗಿ ನಿಶ್ಚಿತವಾದ ಪ್ರಶ್ನಾವಳಿಗಳನ್ನು ರೂಪಿಸಲಾಗಿತ್ತು. ಇದರಿಂದ ಉಪಯುಕ್ತವಾದಂತಹ ಮಾಹಿತಿಯನ್ನು ಪಡೆಯಲು ಸಾಧ್ಯವಾಯಿತು.

೭) ನಮೂನೆ ವಿಧಾನ

ಹಸಲರು ಹೆಚ್ಚಾಗಿ ಇರುವ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿಯ ಹಸಲರ ಹಾಡಿಕೇರಿ ಇರುವ ಪ್ರತಿಯೊಂದು ತಾಲೂಕಿನ ಮೂರು ಹಾಡಿಕೇರಿಗಳನ್ನು ಆಯ್ಕೆಮಾಡಿ ಅಧ್ಯಯನ ಮಾಡಲಾಗಿದೆ. ಹೀಗೆ ಒಟ್ಟು ೧೭ ತಾಲೂಕುಗಳು, ೪೫ ಹಾಡಿಕೇರಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ೧೭ ತಾಲೂಕುಗಳಲ್ಲಿ ನೆಲೆಸಿರುವ ಹಸಲರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಯ ಮಾಹಿತಿಯನ್ನು ಪಡೆಯುವ ಉದ್ದೇಶದಿಂದ ೫೧೭ ಕುಟುಂಬಗಳ ಮುಖ್ಯಸ್ಥರನ್ನು ಸಂದರ್ಶನ ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡು ಮಾಹಿತಿಯನ್ನು ಪಡೆಯಲಾಗಿದೆ.

೧.೫ ಅಧ್ಯಯನದ ಸಾಧನಗಳು

ಈ ಸಂಶೋಧನಾ ಕಾರ್ಯದಲ್ಲಿ ಸಂಶೋಧನೆಗೆ ಪೂರಕವಾದ ಗ್ರಂಥಗಳನ್ನು ಉಪಯೋಗಿಸಲಾಗಿದೆ. ಮಾಹಿತಿದಾರರಿಂದ ಮಾಹಿತಿ ಪಡೆಯಲು ಸಂದರ್ಶನ, ಪ್ರಶ್ನಾವಳಿ, ಸಹಭಾಗಿತ್ವ ಕ್ಷೇತ್ರಕಾರ್ಯ ಮಾಡುವುದರ ಜೊತೆಗೆ ನಿಯತಕಾಲಿಕೆಗಳನ್ನು ಕೂಡಾ ಉಪಯೋಗಿಸಲಾಗಿದೆ. ಅಲ್ಲದೆ ಅಂತರ್ಜಾಲವನ್ನು ಸಹ ಈ ಅಧ್ಯಯನದಲ್ಲಿ ಅಳವಡಿಸಿಕೊಂಡಿರುವುದರ ಜೊತೆಗೆ ಸಂಶೋಧನಾ ಕಾರ್ಯಕ್ಕೆ ಹ್ಯಾಂಡಿಕ್ಯಾಮ, ಟೇಪರಿಕಾರ್ಡರ್, ಕ್ಯಾಸೆಟ್, ಕ್ಯಾಮರಾ, ಬಿಳಿಹಾಳೆ, ಪೆನ್ಸಿಲ್, ಪೆನ್ನು ಮುಂತಾದವುಗಳನ್ನು ಈ ಸಂಶೋಧನೆಯಲ್ಲಿ ಸಾಧನಗಳನ್ನಾಗಿ ಉಪಯೋಗಿಸಲಾಗಿದೆ.

೧.೬ ಸಮಕಾಲಿನ ಸಮಸ್ಯೆಗಳಿಗೆ ಪ್ರಸ್ತುತ ಅಧ್ಯಯನದ ಸಂಬಂಧ

ಅ) ಯಾವುದೇ ದೇಶದ ಸಾಮಾಜಿಕ ಸಮಸ್ಯೆಗಳಿಗೆ ಎರಡು ರೀತಿಯ ಕಾರಣಗಳಿರುತ್ತವೆ. ಒಂದು ಅಂತರ್-ಸಾಮಾಜಿಕ ವ್ಯವಸ್ಥೆಯಲ್ಲಾದ ಪರಿವರ್ತನೆ, ಇನ್ನೊಂದು ಬಾಹ್ಯ-ಪರಿಸರದ (ಸಾಮಾಜಿಕ ಮತ್ತು ಭೌತಿಕ) ಒತ್ತಡದಿಂದಾಗುವ ಪರಿವರ್ತನೆ. ಇದು ಸಾಮಾಜಿಕ ವಿಕಾಸದ ಎಲ್ಲ ಹಂತಗಳಲ್ಲೂ ಸತತವಾಗಿ ನಡೆದು ಬಂದಿರುವ ಪ್ರಕ್ರಿಯೆ.

ಈ ಹಿನ್ನೆಲೆಯಲ್ಲಿ ಹಸಲರ ಅಧ್ಯಯನವು ನಮ್ಮ ರಾಷ್ಟ್ರ ಎದುರಿಸುತ್ತಿರುವ ಸಮಕಾಲಿನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅಂದರೆ ದೇಶದ ಪ್ರಭಾವ ಹಸಲರ ಮೇಲೆ ಅಥವಾ ಹಸಲರ ಪ್ರಭಾವ ದೇಶ/ಇತರ ಬುಡಕಟ್ಟುಗಳ ಮೇಲಾಗಿರುವುದನ್ನು ಸಹ ಪ್ರಸ್ತುತ ಅಧ್ಯಯನದಿಂದ ಅರಿಯಲು ಸಾಧ್ಯವಿದೆ.

ಬ) ಇನ್ನು ಸಮಕಾಲೀನ ಸಮಸ್ಯೆಗಳ ಬೇರುಗಳು ಪ್ರಸಕ್ತ ಕಾಲಿನ ಸಮಾಜದಲ್ಲಿಯೇ ಇವೆ. ಎಂದು ಹೇಳಲಾಗದು. ಅವುಗಳ ಬೇರುಗಳು ಅದರ ಗತಕಾಲದ ಗರ್ಭದಲ್ಲಿರುವುದು ಅನೇಕ ಸಂಶೋಧನೆಗಳಲ್ಲಿ ಖಚಿತಗೊಂಡಿರುವುದನ್ನು ಗುರುತಿಸಿದ್ದೇವೆ.

ಕ) ಯಾವುದೇ ಸಾಮಾಜಿಕ ಸಮಸ್ಯೆಯನ್ನು ಒಂದು ಅಥವಾ ಕೆಲವೇ ಸೀಮಿತ ಕಾರಣಗಳ ಆಧಾರದ ಮೇಲೆ ಅರಿಯುವ ಪ್ರಯತ್ನ ಸರಿಯಲ್ಲ. ಅದನ್ನು ಸಮಸ್ತ ಕಾರಣಗಳ ಮಧ್ಯದಲ್ಲಿಯೇ ಆ ಸಂಕೀರ್ಣ-ಸಮಸ್ಯೆಯನ್ನು ತೆರೆದಿಟ್ಟು ಅವಲೋಕಿಸಬೇಕಾದುದು ಸಂಶೋಧಕರ ಕರ್ತವ್ಯ!

ಡ) ಸಮಗ್ರ ಸಮಾಜವನ್ನು ಅರಿಯಬೇಕಾದರೆ, ಅದು ಒಳಗೊಂಡಿರುವ ಯಾವತ್ತೂ ಸಮೂಹ-ಸಮುದಾಯ ಹಾಗೂ ಅವುಗಳ ಒಳಪರಿಧಿಯಲ್ಲಿರುವ ಬುಡಕಟ್ಟು ಜನಾಂಗಗಳ ಬಗೆಗೆ ಮಾಹಿತಿ ಪಡೆಯಬೇಕಾಗುತ್ತದೆ.

ಈ) ಪ್ರಸ್ತುತ ಹಸಲರ ಅಧ್ಯಯನವು ಪ್ರತ್ಯಕ್ಷ ಅಥವಾ ಪರೋಕ್ಷವಾಗಿಯಾದರೂ ನಮ್ಮ ಸಮಕಾಲೀನ ಸಮಸ್ಯೆಗಳೊಂದಿಗೆ ತಳಕು ಹಾಕಿಕೊಂಡಿರುತ್ತದೆ. ಒಂದು ವೇಳೆ ಅದು ಇಲ್ಲವೆಂದಾದರೂ ನಮ್ಮ ಸಮಾಜದ ಇನ್ನೊಂದು ಸಮಸ್ಯೆಯನ್ನಾಗಲಿ ಅಥವಾ ಇನ್ನೊಂದು ಭಾಗದ ಪರಿಚಯವನ್ನಾಗಲಿ ಮಾಡಿಕೊಡುತ್ತದೆ. ಆದರೆ ಈ ಅಧ್ಯಯನವು ಅದಕ್ಕೆ ಸಂಬಂಧವೇ ಇಲ್ಲವೆಂದು ತಳ್ಳಿ ಹಾಕಲಾಗದು.

ಸಮಾಜ ತನ್ನ ಬೆಳವಣಿಗೆಯ ಅವಶ್ಯಕತೆಗೆ ತಕ್ಕಂತೆ ಸಾಮಾಜಿಕ ಸಂಸ್ಥೆ ಹಾಗೂ ಸಂಸ್ಕೃತಿಯನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಈ ಪ್ರಕ್ರಿಯೆ ವಿಫಲಗೊಂಡಾಗ ಅದರ ಪ್ರತಿಫಲವಾಗಿ ಸಾಮಾಜಿಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಪ್ರಸ್ತುತ ಅಧ್ಯಯನವು ಇಂಥ ವಿಷಯದ ಮೇಲೆ ವಿನೂತನ ವಿಚಾರಗಳನ್ನು ಸ್ಫುರಿಸಬಲ್ಲದು.

ಸ್ವಾತಂತ್ರ್ಯ ಪೂರ್ವದಲ್ಲಿ–ರಾಜಕೀಯ ದಾಸ್ಯತೆ, ಬ್ರಿಟೀಷರು ಅನುಸರಿಸಿದ "ಜೀವಿಸಿ ಮತ್ತು ಜೀವಿಸಗೊಡಿ" ಎಂಬ ಧೋರಣೆ (Laissez Faire Policy) ತದನಂತರ ಸ್ವತಂತ್ರ ಭಾರತದಲ್ಲಿ ದೇಶದ ಐಕ್ಯತೆ, ನಿರಾಶ್ರಿತರ ಸಮಸ್ಯೆ, ಬಡತನ– ಈ ಎಲ್ಲ ಕಾರಣಗಳಿಂದಾಗಿ ಸಾಮಾಜಿಕ ಸಮಸ್ಯೆಗಳತ್ತ ಗಮನ ಹರಿಸುವುದಾಗಿಲ್ಲ. ಕೇಂದ್ರ ಸರಕಾರವು ೧೯೫೪ರಲ್ಲಿ "Central Social Welfare Board" ಸ್ಥಾಪಿಸಿತು. ಯೋಜನಾ ಆಯೋಗವು ೧೯೫೫ರಲ್ಲಿ "Social Welfare" ಪತ್ರಿಕೆ ಪ್ರಕಟಿಸುವ ಮೂಲಕ ಸಾಮಾಜಿಕ ಸಮಸ್ಯೆಗಳತ್ತ "ಕ್ಷ" ಕಿರಣ ಬೀರಲು ಪ್ರಾರಂಭಿಸಿತು. ಈ ದಿಸೆಯಲ್ಲಿ ಹಸಲರ ಅಧ್ಯಯನವು ನಮ್ಮ ಭವಿಷ್ಯದ ಮಾರ್ಗದರ್ಶಿಯಾಗಿ ನಿಲ್ಲುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

೧.೭ ಸಮಾಜ ಅಥವಾ ರಾಷ್ಟ್ರಕ್ಕೆ ಪ್ರಸ್ತುತ ಅಧ್ಯಯನದ ಅವಶ್ಯಕತೆ

(Relevance to the needs of Society/Country)

೧) ಯಾವುದೇ ರಾಷ್ಟ್ರವು ತನ್ನ ಸಾಮರ್ಥ್ಯ ಹಾಗೂ ದೌರ್ಬಲ್ಯ – ಈ ಎರಡನ್ನೂ ಅರಿತುಕೊಂಡಿರಬೇಕು. ಅಂದಾಗ ಅದು ತನ್ನ ಸಾಮರ್ಥ್ಯದ ಸದುಪಯೋಗ ಮಾಡಿಕೊಳ್ಳಲು ಸಾಧ್ಯವಿದೆ. ಹಾಗೆಯೇ ದೌರ್ಬಲ್ಯದ ದುರುಪಯೋಗದಿಂದ ರಕ್ಷಿಸಿಕೊಳ್ಳಲು ಬರುತ್ತದೆ. ಪ್ರಸ್ತುತ ಹಸಲರ ಅಧ್ಯಯನದಲ್ಲಿ ಈ ಮೇಲಿನ ಎರಡೂ ಅಂಶಗಳನ್ನು ಗುರುತಿಸಬೇಕಾಗಿದೆ. ಅದರಲ್ಲಿ ಸಾಮರ್ಥ್ಯದ ಅಂಶಗಳೇ ಹೆಚ್ಚಾಗಿ ಕಂಡಲ್ಲಿ ಕಲ್ಯಾಣಕ್ಕಾಗಿ ಮುಂದಾಗಬೇಕಿರುವ ಕರ್ತವ್ಯದತ್ತ ಗಮನಹರಿಸಬೇಕಾಗುತ್ತದೆ.

೨) "ಹಸಲರು" – ಈ ಬುಡಕಟ್ಟು ಜನಾಂಗದ ಬಗೆಗೆ ಸಮಗ್ರವಾದ ಅಧ್ಯಯನ ನಡೆದಿಲ್ಲ. ಈಗ ಈ ಬುಡಕಟ್ಟಿನ ಸಮಗ್ರ ಅಧ್ಯಯನವನವನ್ನು ಸಮಾಜಶಾಸ್ತ್ರೀಯ ದೃಷ್ಟಿಯಿಂದ ಮಾಡುವುದು ಇಂದಿನ ತುರ್ತು ಅಗತ್ಯ. ಇಂಥ ಅಧ್ಯಯನವನ್ನು ವಿಸ್ತೃತಗೊಳಿಸುತ್ತ ದೇಶದ ಸಮಸ್ತ ಬುಡಕಟ್ಟುಗಳನ್ನು ಆವರಿಸಿ ಬೆಳೆಯಬೇಕಾಗಿದೆ. ಹೀಗೆ ಬುಡಕಟ್ಟುಗಳ ಒಳರಚನೆಯನ್ನು ತಿಳಿದುಕೊಳ್ಳುವ ಮೂಲಕ ರಾಷ್ಟ್ರದ ಸಮಗ್ರ ಒಳರಚನೆಯನ್ನು ತಿಳಿದುಕೊಳ್ಳಲು ಸುಲಭವಾಗುತ್ತದೆ. ತದನಂತರ ನಾವು ಅದರ ಪರಿಶುದ್ಧತೆ/ಸುಧಾರಣೆಯ ಕ್ರಮಗಳತ್ತ ಗಮನ ಹರಿಸಬಹುದಾಗಿದೆ.

೩) ಸಮಾಜವು ತಾನು ಹೊಂದಿರುವ ಸಾಮಾಜಿಕ ರಚನೆ (Social Structure) ಹಾಗೂ ಸಾಮಾಜಿಕ ವ್ಯವಸ್ಥೆ (Social System)ಗಳ ಸ್ಥೂಲ ಪರಿಚಯ ಮಾಡಿಕೊಂಡಿರಬೇಕು. ಜೊತೆಗೆ ಅವುಗಳ ಅಂತರ್ಯದಲ್ಲಿರುವ ಭಾಷೆ, ಧರ್ಮ, ಮತ, ಸಂಪ್ರದಾಯ, ಪದ್ಧತಿ, ಆಚರಣೆ

ಮುಂತಾದ ಅಂಶಗಳನ್ನು ಅರ್ಥೈಸಿಕೊಳ್ಳಬೇಕು. ಯಾಕೆಂದರೆ ಇವು ಆ ಬುಡಕಟ್ಟಿನ ಸಂಸ್ಕೃತಿಯನ್ನು ರೂಪಿಸುತ್ತವೆ. ಅಂದರೆ ಅವು ಆ ಬುಡಕಟ್ಟಿನ ಅಂತಃಸತ್ವದ ಆಳ್ವಿಕೆಯ ಬೀಗದ ಕೈಗಳು! ಹಸಲರ – ಸಂಸ್ಕೃತಿಗೆ ಸಂಬಂಧಿಸಿದ ಆ ಬೀಗದ ಕೈಗಳನ್ನು ಗುರುತಿಸಬೇಕು! ಅವುಗಳಲ್ಲಿ ಒಂದೆರೆಡು "Master Keys" ಪಾತ್ರ ನಿರ್ವಹಿಸುವ ಸಾಧ್ಯತೆ ಇದೆ! ಅಂಥದನ್ನು ಸಂಶೋಧಿಸುವುದು ತುಂಬ ಮಹತ್ವದ್ದು! ಉದಾ: ತಮಿಳರಲ್ಲಿ "ತಮಿಳು ಭಾಷೆ"ಯು ಭಾರತೀಯ ಸಂಸ್ಕೃತಿಯಲ್ಲಿ "ಧರ್ಮ/ಮತ" ಈ ಪಾತ್ರದಲಿದೆ.

೪) ಹಸಲರ ಅಧ್ಯಯನದಿಂದ ಅವರ ಸಂಸ್ಕೃತಿಯನ್ನು ಅರಿತಂತಾಗುತ್ತದೆ. ಹಾಗೆಯೇ ಅವರ ಸಂಸ್ಕೃತಿಯನ್ನು ಇತರ ಬುಡಕಟ್ಟು ಜನಾಂಗಗಳ ಸಂಸ್ಕೃತಿಯೊಂದಿಗೆ ಹೋಲಿಸಿ ತೌಲನಿಕ ಅಧ್ಯಯನ (Comparative Study) ನಡೆಸಲೂ ಸಾಧ್ಯವಾಗುತ್ತದೆ. ಈ ತೌಲನಿಕ ಅಧ್ಯಯನದಿಂದ ವಿನೂತನ ಸಂಸ್ಕೃತಿಯ ಪರಿಕಲ್ಪನೆ ಸಹ ಒಡಮೂಡುವುದು ಸಹಜ.

೫) ಇಂಥ ಬುಡಕಟ್ಟು ಜನಾಂಗಗಳ ಅಧ್ಯಯನ ವಿಸ್ತೃತಗೊಂಡಂತೆ ಸಮಗ್ರ ಭಾರತೀಯ ಸಂಸ್ಕೃತಿಯ ಮೇಲೆ ಹೊಸ ಬೆಳಕು ಚೆಲ್ಲಬಹುದು. ಜೊತೆಗೆ ಭಾರತೀಯ ಸಂಸ್ಕೃತಿಯ ನೈಜ ಲಕ್ಷಣಗಳನ್ನು ಗಟ್ಟಿಗೊಳಿಸಬಹುದು ಅಥವಾ ವೈಶಿಷ್ಟ್ಯಪೂರ್ಣ ಆಯಾಮಗಳ ವಿನೂತನ ಸಾಂಸ್ಕೃತಿಕ ಚಿತ್ರಣ ಅನಾವರಣಗೊಳ್ಳುವ ನೂತನ ಸಂಶೋಧನೆಯನ್ನು ಜನತೆಯ ಮುಂದಿಡಬಹುದು.

೬) "ಕಲ್ಯಾಣ ರಾಜ್ಯ" ಸ್ಥಾಪನೆಯೇ ನಮ್ಮ ಸಂವಿಧಾನದ ಗುರಿಯಾಗಿದೆ. ಹಾಗಾದರೆ ಈ "ಹಸಲರು" ಆ ಕಲ್ಯಾಣ ರಾಜ್ಯದ ಭಾಗವಲ್ಲವೆ? ಹಸಲರ ಕಲ್ಯಾಣದಲ್ಲಿ ರಾಷ್ಟ್ರದ ಕಲ್ಯಾಣವಿದೆ. ರಾಷ್ಟ್ರದ ಕಲ್ಯಾಣದಲ್ಲಿ ಹಸಲರ ಕಲ್ಯಾಣದ ಬೀಜಗಳಿರುವುದು ಸ್ಪಷ್ಟ!

೭) ಪ್ರಸ್ತುತ ಅಧ್ಯಯನದಿಂದ ಸಮಾಜಶಾಸ್ತ್ರಜ್ಞರಿಗೆ ಈ ಸಮಾಜದ ಪರಿಜ್ಞಾನದ ಪರಿಧಿಯ ಹರವು ವಿಸ್ತೃತಗೊಳ್ಳುತ್ತದೆ. ಇದರಿಂದ ಅವರು ರಾಷ್ಟ್ರಕ್ಕೆ ಮಾರ್ಗದರ್ಶನ ಮಾಡಲು ಹೆಚ್ಚು ಅನುಕೂಲವಾಗುತ್ತದೆ.

೧.೮ ಜ್ಞಾನಶಾಖೆಗೆ ಪ್ರಸ್ತುತ ಅಧ್ಯಯನದ ಕೊಡುಗೆ (Its contribution to knowledge)

೧) ಯಾವುದೇ ಬುಡಕಟ್ಟಿನ ನೂತನ ಅಧ್ಯಯನದಿಂದ ಒಟ್ಟು ಜ್ಞಾನಶಾಖೆಗೆ (Total Knowledge) ಒಂದು ವಿಶೇಷ ಗರಿ ಹೊಸದಾಗಿ ಸೇರಿಕೊಳ್ಳುತ್ತ ಹೋಗುತ್ತದೆ. ಅಧ್ಯಯನ ವಿಸ್ತೃತಗೊಂಡಂತೆ ಜ್ಞಾನವೂ ವೃದ್ಧಿಗೊಳ್ಳುತ್ತದೆ. ಹಾಗೆಯೇ ಅದರ ಮುಂದಿರುವ ಅಜ್ಞಾನದ ಕತ್ತಲೆ ಕರಗುತ್ತ ಹೋಗುತ್ತದೆ; ವಿಷಯಗಳ ಬಗೆಗೆ ಸ್ಪಷ್ಟತೆ ಮೂಡುತ್ತದೆ. ಪ್ರಸ್ತುತ ಹಸಲರ ಅಧ್ಯಯನದಿಂದ ಸಮಾಜಶಾಸ್ತ್ರೀಯ ಜ್ಞಾನ ಶ್ರೀಮಂತಗೊಳ್ಳುತ್ತದೆ.

೨) ಹಸಲರ ಅಧ್ಯಯನದಿಂದ ಕಳೆದುಕೊಳ್ಳುವುದೇನೂ ಇಲ್ಲ. ಅವರ ಕೆಲವು ಸಾಂಸ್ಕೃತಿಕ ಸಂಪತ್ತನ್ನು ಪಡೆದುಕೊಳ್ಳುವುದಿದೆ, ಜ್ಞಾನಶಾಖೆಯ ಹರವನ್ನು ಹೆಚ್ಚಿಸಿಕೊಳ್ಳುವುದಿದೆ.

೩) ಹಸಲರ ಅಧ್ಯಯನದಲ್ಲಿ ಸಿಗುವ ಗುಣಾತ್ಮಕ ಅಂಶಗಳು ಒಟ್ಟು ಜ್ಞಾನಶಾಖೆಯ ಮಹತ್ವವನ್ನು ಹೆಚ್ಚಿಸುತ್ತವೆ. ಹಾಗೆಯೇ ಆ ಜನಾಂಗದ ಬಗೆಗಿನ ಜ್ಞಾನವು ಸದೃಢಗೊಳ್ಳುತ್ತದೆ. ಸದೃಢ ಜ್ಞಾನವು ಸದೃಢ ದೇಶವನ್ನು ಕಟ್ಟುವಲ್ಲಿ ನೆರವಾಗುತ್ತದೆ.

೪) ಜ್ಞಾನಶಾಖೆಯು ಒಂದು ಬೃಹತ್ ಸಾಗರವಿದ್ದಂತೆ. ಹಸಲರ ಅಧ್ಯಯನದಿಂದ ಆ ಬೃಹತ್ ಸಾಗರಕ್ಕೆ ಇನ್ನೊಂದು ನೂತನ ನದಿ ಹರಿದು ಬಂದು ಸಂಗಮಿಸಿದಂತಾಗುತ್ತದೆ.

೧.೯ ಅಧ್ಯಯನದ ವಿನ್ಯಾಸ ಮತ್ತು ವಿಧಾನ

ಪ್ರಸಕ್ತ ಸಂಶೋಧನಾ ಅಧ್ಯಯನದಲ್ಲಿ ಹಸಲರ ಬಗ್ಗೆ ಬಂದಿರುವ ಕೃತಿಗಳು, ಲೇಖನಗಳು, ಜನಗಣತಿ ವರದಿಗಳು, ಅಪ್ರಕಟಿತ ಲೇಖನಗಳಿಂದ ಮತ್ತು ವರದಿಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ಅಲ್ಲದೆ ಪ್ರತಿ ಜಿಲ್ಲೆಯ ಒಂದೊಂದು ತಾಲೂಕಿಗೆ ಮೂರು ಹಸಲರ ಹಾಡಿಕೇರಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಒಂದು ವೇಳೆ ಆ ತಾಲೂಕಿನಲ್ಲಿ ಹಸಲರು ಇರದೇ ಇದ್ದರೆ ಆ ತಾಲೂಕನ್ನು ಪರಿಗಣಿಸಿಲ್ಲ. ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಸಮೀಕ್ಷೆ ಮಾಡಿದ ಹಾಡಿಕೇರಿಯ ಅಂಕಿ-ಅಂಶಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಹೀಗೆ ಒಟ್ಟು ೪೫ ಹಾಡಿಕೇರಿಗಳನ್ನು ಸಂಪೂರ್ಣ ಸಮೀಕ್ಷೆ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಲ್ಲದೆ ಐತಿಹಾಸಿಕ, ತುಲನಾತ್ಮಕ, ಏಕ ವಿಷಯ ಮತ್ತು ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

೧.೧೦ ಹಸಲರ ಬಗೆಗಿನ ಇದುವರೆಗಿನ ಸಾಹಿತ್ಯ ಪರಾಮರ್ಶೆ

K.S.Singh ಅವರು ಬರೆದ "People of India" vol-II ಗ್ರಂಥದಲ್ಲಿ ಹಸಲ ಎನ್ನುವ ಶಬ್ದ 'ಕನ್ನಡದ ಹಸುಳೆ' ಎಂಬ ಪದದಿಂದ ಬಂದಿದೆ. ಕನ್ನಡದಲ್ಲಿ 'ಹಸುಳೆ' ಎಂದರೆ ಮುಗ್ಧ ಇವರ ಮುಗ್ಧತೆಯಿಂದಾಗಿಯೇ ಇವರಿಗೆ ಹಸಲ ಅಥವಾ ಹಸಲರು ಎಂದು ಕರೆದಿರಬಹುದು. ಇವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ಇವರು ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಉದ್ಯೋಗಕ್ಕಾಗಿ ವಲಸೆ ಹೋಗಿದ್ದಾರೆ. ಚಿಕ್ಕಮಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಯಲ್ಲಿ ವಾಸಿಸುವ ಹಸಲರನ್ನು ಪರಿಶಿಷ್ಟ ಜಾತಿಗೆ ಸೇರಿಸಲಾಗಿದೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಹಸಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿದೆ ಎಂದು ಲೇಖಕರು ಹೇಳಿದ್ದಾರೆ. ಆದರೆ ವಾಸ್ತವವಾಗಿ ಶಿವಮೊಗ್ಗ ಜಿಲ್ಲೆಯ ಹಸಲರನ್ನು ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿಸಿಸಲಾಗಿದೆ ವಿನಃ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹಸಲರನ್ನಲ್ಲ. ಹಸಲರಲ್ಲಿ ಒಂಬತ್ತು ಪಂಗಡಗಳಿವೆ. ಅವು ಯಾವುವು ಎಂದರೆ, ನಾಮಧಾರಿ ಹಸಲ, ಗೊಡ್ಡ ಹಸಲ, ಉಪ್ಪಾರ ಹಸಲ, ಕರಿಮುಗರ ಹಸಲ, ಬೆಳ್ಳಿ ಹಸಲ, ಬಗ್ಗಾಲಿನ, ಹಸಲ ನಾಡಹಸಲ ಮತ್ತು ಮಳೆ ಹಸಲ ಅಲ್ಲದೇ ಇವರ ಬಳಿಗಳ ಬಗ್ಗೆಯೂ ಕೂಡ ಈ ಗ್ರಂಥದಲ್ಲಿ ಉಲ್ಲೇಖವಿದೆ. ಇವರ ವೈವಾಹಿಕ ಜೀವನ, ವಿವಾಹ ವಯಸ್ಸು, ವಿವಾಹ ವಿಚ್ಛೇದನ, ಮಹಿಳೆಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಯಾವುದೇ ಹಕ್ಕಿಲ್ಲ ಎಂಬ ವಿವರಣೆ ಇದೆ. ಹಸಲರಲ್ಲಿ ಹುಡುಗಿ ಋತುಮತಿಯಾದ ೧೨ ದಿವಸಗಳವರೆಗೆ ಆಕೆಯನ್ನು ಅಶುದ್ಧ

(Impure) ಎಂಬ ಕಾರಣಕ್ಕೆ ಆಕೆಯನ್ನು ಯಾರೂ ಮುಟ್ಟುವಂತಿರಲಿಲ್ಲ. ಸ್ನಾನ ಮಾಡಿಸಿ ಆಕೆಯನ್ನು ಶುದ್ಧಳನ್ನಾಗಿ ಮಾಡುವ ಶಾಸ್ತ್ರ ಮಾಡುವರು. ಇವರಲ್ಲಿ ಇಬ್ಬರು ಸಹೋದರಿಯರನ್ನು ಇಬ್ಬರು ಸಹೋದರರ ಜೊತೆ ಮದುವೆ ಮಾಡುತ್ತಾರೆ. ಮದುವೆಯ ಖರ್ಚು ವರನ ಮತ್ತು ವಧುವಿನ ತಂದೆ–ತಾಯಿಗಳು ಸಮನಾಗಿ ಭರಿಸುವರು. ಹಸಲರಲ್ಲಿ ಶವವನ್ನು ಸುಡುವರು. ಹಸಲರಲ್ಲಿ ಸಾಕ್ಷರತಾ ಪ್ರಮಾಣ ಕಡಿಮೆ. ಇವರ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿದ್ದಾರೆ. ಮೇಲಿನವೆಲ್ಲವೂ ಕೆ ಎಸ್ ಸಿಂಗ್‌ರ ಗ್ರಂಥದಲ್ಲಿ ಉಲ್ಲೇಖಗೊಂಡಿದೆ.

ಎಂಥೋವನ್ ಆರ್ ಇ – ಬರೆದ "ಟ್ರೈಬ್ಸ ಆ್ಯಂಡ್ ಕಾಸ್ಟ್ಸ ಆಫ್ ಬಾಂಬೆ" ಎಂಬ ಗ್ರಂಥದ ಎರಡನೇಯ ಸಂಪುಟದಲ್ಲಿ ಹಸಲರು ದಕ್ಷಿಣ ಕನ್ನಡ ಜಿಲ್ಲೆಯಿಂದ ಶಿವಮೊಗ್ಗ ಜಿಲ್ಲೆಗೆ ವಲಸೆ ಬಂದರು. ಇವರ ಜನಸಂಖ್ಯೆ ೧೯೦೧ ರ ಜನಗಣತಿಯಲ್ಲಿ ೨,೨೬೭. ಅದರಲ್ಲಿ ೧೨೫೯ ಪುರುಷರು ಮತ್ತು ೧೦೦೮ ಮಹಿಳೆಯರು ಇದ್ದಾರೆ. ಇವರು ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಹೊನ್ನಾವರ ತಾಲೂಕುಗಳಲ್ಲಿ ಕಾಣಸಿಗುವರು. ಇವರಲ್ಲಿ ಎರಡು ರೀತಿಯ ಒಳಗುಂಪುಗಳನ್ನು ಕಾಣಬಹುದು. ೧) ಹಸಲರು ೨) ಬಂಟ ಹಸಲರು. ಇವೆರಡೂ ಪಂಗಡದವರು ಕೂಡಿ ಊಟ ಮಾಡುವರು ಮತ್ತು ಮದುವೆಗಳನ್ನು ನಡೆಸುವರು. ಅಲ್ಲದೆ ಇವರ ಬಳಿಗಳ ಬಗ್ಗೆಯೂ ಉಲ್ಲೇಖ ಮಾಡಿದ್ದಾರೆ. ಹಸಲರಲ್ಲಿ ವಿವಾಹ ಪ್ರಸ್ತಾಪವು ವರನ ತಂದೆಯಿಂದ ಮೊದಲು ಬರುತ್ತದೆ. ಇದಕ್ಕಾಗಿ ಆತನು ಕನ್ಯೆಯ ತಂದೆಗೆ ಕನ್ಯಾ ಶುಲ್ಕವಾಗಿ ೧೦ ರೂ, ಕೊಡಬೇಕು. ಇವರು ಹಿಂದೂ ಸಂಪ್ರದಾಯದಂತೆ ವಿವಾಹ ನೆರವೇರಿಸುವರು. ಇವರು ಮಂತ್ರವಾದಿಗೆ ಹೆದರುವರು. ಅಲ್ಲದೆ ಇವರಲ್ಲಿ ಯಾರಾದರೂ ಕಾಯಿಲೆ ಬಿದ್ದರೆ ಅದು ಮಂತ್ರವಾದಿಯ ಅಥವಾ ಸತ್ತವನ ಪ್ರೇತವೇ ಕಾರಣ ಎಂದು ನಂಬುವರು. ಇವರು ಹೆಚ್ಚಾಗಿ ಅಡಿಕೆ ತೋಟದಲ್ಲಿ ಕೂಲಿಗಳಾಗಿ ದುಡಿಯುವರು. ಇವರು ಮಾಂಸಾಹಾರಿಗಳು ಮತ್ತು ಮದ್ಯಸೇವನೆ ಮಾಡುತ್ತಾರೆ ಎಂದು ಹೇಳಲಾಗಿದೆ.

ಥರ್ಸ್ಟನ್ ಇ ಇವರು ಬರೆದ "ಟ್ರೈಬ್ಸ ಆ್ಯಂಡ್ ಕಾಸ್ಟ್ಸ್ ಆಫ್ ಸದರ್ನ ಇಂಡಿಯಾ" ಗ್ರಂಥದಲ್ಲಿ ಹಸಲರು ಸೋಲಿಗರ ಜೊತೆ ಹೋಲಿಕೆಯಾಗುತ್ತಾರೆ ಎಂಬ ಲಿವಿಸ್ ರೈಸ ಅವರ ಮಾತನ್ನು ನೆನಪಿಸಿದ್ದಾರೆ. ಇವರು ಪಶ್ಚಿಮ ಘಟ್ಟಗಳಲ್ಲಿ ವಾಸಿಸುತ್ತಾರೆ. ಇವರು ಕುಳ್ಳರು, ಕಪ್ಪು ಬಣ್ಣ ಮತ್ತು ಗುಂಗರು ಕೂದಲುಗಳ ಬಗ್ಗೆ ಹೇಳುವುದರ ಜೊತೆಗೆ ಇವರು ಕಾಫಿ ಮತ್ತು ಅಡಿಕೆ ತೋಟಗಳಲ್ಲಿ ಕೂಲಿಗಳಾಗಿ ದುಡಿಯುತ್ತಾರೆ. ಇವರ ಮಾತೃಭಾಷೆ ತುಳು. ಇವರ ಜನಸಂಖ್ಯೆಯೂ ಕಡಿಮೆ. ಗುಡಿಸಲುಗಳು ಅಲ್ಲಲ್ಲಿ ಚದುರಿದಂತೆ ಕಾಣುವುದರ ಜೊತೆಗೆ ಒಬ್ಬಂಟಿಗರಾಗಿ ವಾಸಿಸಲು ಇಚ್ಛಿಸುತ್ತಾರೆ. ಇವರು ಅರಣ್ಯ ಉತ್ಪನ್ನಗಳಾದ ಯಾಲಕ್ಕಿ, ದಾಲಚಿನ್ನಿ ಮಾರುವರು. ಅಲ್ಲದೆ ಮದ್ಯಪಾನ ಮಾಡುತ್ತಾರೆ. ಇವರಲ್ಲಿ ರೋಗಗಳು ಕಂಡು ಬಂದರೆ ಸತ್ತ ವ್ಯಕ್ತಿಯು ಪ್ರೇತವಾಗಿ ನಮ್ಮನ್ನು ಕಾಡುತ್ತದೆಂದು ನಂಬಿ ಮಂತ್ರವಾದಿ ಅಥವಾ ಗಾಡಿಗನ ಹತ್ತಿರ ಹೋಗುತ್ತಾರೆ. ೧೮೯೧ ಮೈಸೂರ ಜನಗಣತಿ ವರದಿಯ ಪ್ರಕಾರ ಹಸಲರನ್ನು ಹುಟ್ಟಾಳು ಮತ್ತು ಮಣ್ಣಾಳು ಎಂದು

ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ಹುಟ್ಟಾಳು ಎಂದರೆ ತಂದೆ ಮಾಡಿದ ಸಾಲಕ್ಕಾಗಿ ತಂದೆಯಿಂದ ಮಗನು ಜೀತದಾಳುಗಳಾಗಿ ದುಡಿಯುವವನು. ಇನ್ನು ಮಣ್ಣಾಳು ಎಂದರೆ ಈತನಿಗೆ ಒಕ್ಕಲುತನವೇ ಪ್ರಮುಖ ಉದ್ಯೋಗ. ಇವರು ಮಾದಿಗ ಮತ್ತು ಹೊಲೆಯರಿಗಿಂತಲೂ ಮೇಲು. ಇವರು ಬ್ರಾಹ್ಮಣೇತರರ ಮನೆಗಳನ್ನು ಪ್ರವೇಶಿಸುವುದಿಲ್ಲ. ಇವರು ತಮ್ಮ ಜಾತಿಯಲ್ಲಿಯೇ ಹಜಾಮನನ್ನು ಮತ್ತು ಅಗಸನನ್ನು ನಿಯೋಜಿಸುತ್ತಾರೆ. ಅಲ್ಲದೆ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಪ್ರತ್ಯೇಕವಾದ ಬಾವಿಗಳನ್ನು ತೋಡುವರು. ಎಚ್ ವ್ಹಿ ನಂಜುಂಡಯ್ಯ ಅವರು ಥರ್ಸ್ಟನ್ ಅವರಿಗೆ ಬರೆದ ಪತ್ರದಲ್ಲಿ ಹಸಲರಲ್ಲಿ ಮದುವೆಗಳು ರಾತ್ರಿಯೇ ನಡೆಯುತ್ತವೆ. ಅವರ ಜಾತಿಯ ಪೂಜಾರಿಯೇ ತಾಳಿ ಮತ್ತು ಬಂಗಾರದ ಆಭರಣಗಳನ್ನು ಕನ್ನೆಯ ಕುತ್ತಿಗೆಗೆ ಕಟ್ಟುತ್ತಾನೆ. ಅಲ್ಲದೆ ಮಂತ್ರವಾದಿಯನ್ನು ಈ ಸಮಾರಂಭಕ್ಕೆ ಆಹ್ವಾನಿಸುವರು. ಆದರೆ ಇಂದು ಹಸಲರಲ್ಲಿ ಮದುವೆಗಳು ಹಗಲಿನಲ್ಲಿಯೆ ನಡೆಯುತ್ತವೆ. ವರನೇ ಕನ್ಯೆಯ ಕುತ್ತಿಗೆಗೆ ತಾಳಿ ಕಟ್ಟುತ್ತಾನೆ. ಈಗ ಇವರು ತಮ್ಮ ಮದುವೆಗಳಿಗೆ ಮಂತ್ರವಾದಿಯನ್ನು ಕರೆಸುವ ಸಂಪ್ರದಾಯವು ಕಡಿಮೆಯಾಗಿದೆ.

ಭಟ್ಟ ಜಿ ಎಸ್ ಇವರು ತಮ್ಮ "ಹಸಲರು" ಎಂಬ ಗ್ರಂಥದಲ್ಲಿ 'ಹಸಲ' ಶಬ್ದದ ಉತ್ಪತ್ತಿ, ಅದರ ಪರ್ಯಾಯ ಪದಗಳು, ಅವರ ಉಡಿಗೆ ತೊಡಿಗೆ, ಆಚರಿಸುವ ಹಬ್ಬ ಹರಿದಿನಗಳು, ಅವರ ವೃತ್ತಿ ಮತ್ತು ಶವ ಸಂಸ್ಕಾರದ ಬಗ್ಗೆ ಸಂಕ್ಷಿಪ್ತವಾಗಿ ಉಲ್ಲೇಖಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಡಿಯಲ್ಲಿ ಪ್ರಕಟವಾದ ಉಪಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ "ಹಸಲರ ಸಂಸ್ಕೃತಿ" ಎಂಬ ಗ್ರಂಥದಲ್ಲಿ ಜಿ ಎಸ್ ಭಟ್ಟರವರು ಹಸಲ ಶಬ್ದದ ಉತ್ಪತ್ತಿ, ಪರ್ಯಾಯ ಪದಗಳು, ಅವರ ದೈಹಿಕ ರಚನೆ, ಬಳಿಗಳು, ಪಂಗಡಗಳು, ಅವರಲ್ಲಿರುವ ವಿವಾಹ ಪದ್ಧತಿ, ಜನನ ಸಂಬಂಧಿ ಆಚರಣೆಗಳು, ಭೂತಾರಾಧನೆ, ಶವಸಂಸ್ಕಾರ, ದೀಪಾವಳಿಯಂದು ಆಚರಿಸುವ ಅಂಟಿಗೆ ಪಂಟಿಗೆ ಅಥವಾ ಹಬ್ಬ ಹಾಡುವ ಸಂಪ್ರದಾಯದ ಬಗ್ಗೆಯೂ ವಿವರಿಸಿದ್ದಾರೆ.

ಶೇರಿಂಗ್ ಎಂ ಎ – ಇವರು ಬರೆದ "ಹಿಂದೂ ಟ್ರೈಬ್ಸ ಆ್ಯಂಡ್ ಕಾಸ್ಟ್ಸ್" ಎಂಬ ಗ್ರಂಥದ ಮೂರನೇ ಸಂಪುಟದಲ್ಲಿ ಹಸಲರ ಮೂಲ ಶಬ್ದದ ಉತ್ಪತ್ತಿ, ಅವರ ಬಳಿಗಳು, ವಿವಾಹ, ಉಡಿಗೆ–ತೊಡಿಗೆ, ಅವರಲ್ಲಿರುವ ಆಚರಣೆ, ಸಂಸ್ಕೃತಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ನಾಯಕ ಎನ್ ಆರ್ ಇವರು ತಮ್ಮ ಮಹಾಪ್ರಬಂಧದಲ್ಲಿ "ಕಾರವಾರ ಜಿಲ್ಲೆಯ ಜಾನಪದ ಗೀತೆಗಳು" ಎಂಬ ಗ್ರಂಥದಲ್ಲಿ ಕಾರವಾರ ಜಿಲ್ಲೆಯ ಹಸಲರು ಹಾಡುವ ಜಾನಪದ ಸಾಹಿತ್ಯದ ಬಗ್ಗೆ ವಿವರಿಸಿದ್ದಾರೆ.

ಮೇತ್ರಿ ಕೆ ಎಂ ಇವರು ತಮ್ಮ "ಬುಡಕಟ್ಟು ಕುಲಕಸುಬುಗಳು" ಗ್ರಂಥದ "ಹಸಲರು" ಎಂಬ ಲೇಖನದಲ್ಲಿ ಹಸಲರು ಮಲೆನಾಡಿನ ಬುಡಕಟ್ಟು ಜನಾಂಗ. ಇವರು ಬೇಟೆಗಾರರು, ಹಸಲ ಶಬ್ದದ ಉತ್ಪತ್ತಿ ಮತ್ತು ಅದರ ಪರ್ಯಾಯ ಪದಗಳಾದ ಹಲ್ಸರ, ಹಾಸ್ಲರ, ಹುಲಸ್ವಾರ ಇವರು ಕರ್ನಾಟಕ ರಾಜ್ಯದಲ್ಲಿಯ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಕ್ರಸಂ. ೪೦ರಲ್ಲಿ ಇದ್ದಾರೆ. ಇವರ

ಬಳಿಗಳು, ವಾಸಿಸುವ ಪ್ರದೇಶಗಳು ಜನಸಂಖ್ಯೆಯ ಬಗ್ಗೆ ಮಾಹಿತಿ ಕೊಡುತ್ತ ಹಸಲರು ತಮ್ಮನ್ನು ಅಗ್ನಿ ಹೊನ್ನಯ್ಯನ ಮತದವರೆಂದು ಹೇಳಿಕೊಳ್ಳುತ್ತಾರೆ. ಇವರಲ್ಲಿರುವ ಸಣ್ಣ ಬಳಿಗಳನ್ನು ಗುರುತಿಸಿದ್ದಾರೆ. ಇವರು ತುಳು ಮತ್ತು ಕನ್ನಡ ಭಾಷೆ ಮಾತನಾಡುತ್ತಾರೆ. ಇವರು ಆಚರಿಸುವ ಹಬ್ಬ ಹರಿದಿನಗಳ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಇವರು ಚೌಡಿ, ಭೂತ, ಯಕ್ಷಿ, ಚಂದ್ರಗುತ್ತಿ, ರೇಣುಕಾಂಬ, ದೇವತೆಗಳನ್ನು ಪೂಜಿಸುತ್ತಾರೆ. ಇವರು ಭೂತಗಳನ್ನು ನಂಬುವರು.

ಇವರು ಕಾಡುವಾಸಿಗಳಾಗಿದ್ದು, ಬೇಟೆಗಾರಿಕೆ ಹಾಗೂ ಆಹಾರ ಸಂಗ್ರಹಣೆಯೇ ಇವರ ಕುಲಕಸಬಾಗಿತ್ತು. ಇವರು ಬ್ರಾಹ್ಮಣರ, ದಿವರ ಮತ್ತು ಲಿಂಗಾಯತರ ಅಡಿಕೆ ತೋಟಗಳಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಾರೆ. ಭೂಸುಧಾರಣೆ ಫಲಾನುಭವಿಗಳಾಗಿ ತುಂಡು ಭೂಮಿಯ ಒಡೆಯರಾಗಿದ್ದಾರೆ. ಮರ ಕಡಿಯುವ, ಬುಟ್ಟಿ ಹೆಣೆಯುವ, ಮೀನು ಹಿಡಿಯುವ, ಕೋಳಿಸಾಕುವ, ಜೇನು ಸಂಗ್ರಹಿಸುವ ಕೆಲಸಗಳನ್ನೂ ಮಾಡುತ್ತಾರೆ.

ಅಡಕೆ ಕೊಯ್ಯುವಲ್ಲಿ ನಿಸ್ಸೀಮರು. ಅರಣ್ಯ ಕಿರು ಉತ್ಪನ್ನಗಳನ್ನು ಮಾರಿ ಜೀವನ ಸಾಗಿಸುತ್ತಾರೆ. ಇವರ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂದು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಚಂದ್ರಶೇಖರ ಕಂಬಾರ ಅವರ ಸಂಪಾದಕತ್ವದ "ಕನ್ನಡ ಜಾನಪದ ವಿಶ್ವಕೋಶ" ಸಂಪುಟ ಎರಡರಲ್ಲಿ ಹಸಲರ ಬಗ್ಗೆ ಲೇಖನವಿದೆ. ಈ ಲೇಖನದಲ್ಲಿ ಹಸಲರು ವಾಸಿಸುವ ಜಿಲ್ಲೆಗಳ ಬಗ್ಗೆ ಮಾಹಿತಿ ಕೊಡುತ್ತಾ ಇವರು ಗುಡ್ಡಗಾಡುಗಳಲ್ಲಿ ವಾಸಿಸುವ ಜನಾಂಗ. ಇವರಲ್ಲಿ ೫ ಒಳಪಂಗಡಗಳಿವೆ. ಇವರು ಬ್ರಾಹ್ಮಣರ, ದಿವರ ಮತ್ತು ಲಿಂಗಾಯತರ ಗದ್ದೆ ಮತ್ತು ತೋಟಗಳಲ್ಲಿ ದುಡಿಯುತ್ತಾರೆ. ಇವರ ವಿವಾಹದ ವಿಧಿ ವಿಧಾನಗಳ ಬಗ್ಗೆ ಜನನ ಮತ್ತು ಜಾತಕದ ಬಗೆಗೆ ವಿವರಣೆ ಕೊಟ್ಟಿದ್ದಾರೆ. ಹುಡುಗಿಯರು ಋತುಮತಿಯಾದಾಗ ಆಚರಿಸುವ ವಿಧಿ ವಿಧಾನಗಳ ಬಗ್ಗೆ ಮತ್ತು ವಿಧವೆಯಾದವಳು ಗಂಡನ ಸಹೋದರನನ್ನು ವಿವಾಹವಾಗುವುದರ ಬಗ್ಗೆ ಉಲ್ಲೇಖಿಸಿದ್ದಾರೆ. ಅಲ್ಲದೆ ಹಸಲರಲ್ಲಿ ಹೆಣವನ್ನು ಸುಡುವ ಪದ್ಧತಿ ಇದೆ. ಭೂತ–ಪ್ರೇತಗಳನ್ನು ಇವರು ನಂಬುತ್ತಾರೆ. ಜನ ಜಾನುವಾರುಗಳಿಗೆ ತೊಂದರೆಯಾದಾಗ ಗಾಡಿಗನ ಹತ್ತಿರ ಹೋಗುತ್ತಾರೆ. ಅವರ ದೇಹದ ರಚನೆ ಬಗೆಗೆ ಮತ್ತು ಅವರು ಕುಲಕಸಬುಗಳ ಬಗೆಗೆ ಸಂಕ್ಷಿಪ್ತವಾಗಿ ವಿವರಣೆ ಕೊಡಲಾಗಿದೆ.

ಬೋರಲಿಂಗಯ್ಯ ಹಿ ಚಿ ಅವರ ಸಂಪಾದಕತ್ವದ "ಕರ್ನಾಟಕ ಜನಪದ ಕಲೆಗಳ ಕೋಶ" ಎಂಬ ಗ್ರಂಥದಲ್ಲಿ ಅಂಟಿಗೆ ಪಂಟಿಗೆ ಎಂಬ ಲೇಖನದಲ್ಲಿ ಹಸಲರು ದೀಪಾವಳಿಯಂದು ಆಚರಿಸುವ ಅಂಟಿಗೆ ಪಂಟಿಗೆಯ ಬಗ್ಗೆ ಉಲ್ಲೇಖಿಸಿದ್ದಾರೆ.

ದೀಪಾವಳಿಯಂದು ಆಚರಿಸುವ ಭೂರೆ ಕಳವು ಮತ್ತು ಸೂರ್ಯ ಮುಳುಗಿ ಕತ್ತಲಾವರಿಸಿದಾಗ ಹೊಲ ಗದ್ದೆಗಳಲ್ಲಿ ಕೋಟಿ ದೀಪಗಳು ಬೆಳಗುತ್ತವೆ. ದೀಪಧಾರಿಗಳು ಒಬ್ಬರಿಗೊಬ್ಬರು ಎದುರಾಗ ಬಾರದು, ಎದುರಾದರೆ ಕೆಡಕು ಎಂಬ ನಂಬಿಕೆ ಇವರಲ್ಲಿದೆ. ಈ ಹಾಡಿನ ವೈಶಿಷ್ಟ್ಯ ಹಾಡುವ ಹಾಡು ಮುಂತಾದವುಗಳನ್ನು ಕುರಿತು ಉಲ್ಲೇಖಿಸಲಾಗಿದೆ.

ಬೋರಲಿಂಗಯ್ಯ ಹಿ ಚಿ ಇವರು ತಮ್ಮ ಗ್ರಂಥವಾದ 'ಗಿರಿಜನ ನಾಡಿಗೆ ಪಯಣ' ಎಂಬುವುದರಲ್ಲಿ ಕುಡುಗುಂಜಿ ದ್ವೀಪದಲ್ಲಿರುವ ಹಸಲರ ಬಡತನವನ್ನು ಕುರಿತು ವಿವರಿಸುವುದರ ಜೊತೆಗೆ ಬೈನೆ ಮರದಿಂದ ಮದ್ಯ ತಯಾರಿಸುವದನ್ನು ಕುರಿತು ವಿವರಿಸಿದ್ದಾರೆ.

ವಿಲಿಯಂ ಮಾಡ್ತಾ ಅವರ ಪ್ರಧಾನ ಸಂಪಾದಕತ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಂಗ ಪ್ರಕಟಿಸಿದ ಜಾನಪದ ಸಾಹಿತ್ಯ ದರ್ಶನ ಭಾಗ-೧೭ರ "ಜನಾಂಗಿಕ ಅಧ್ಯಯನ" ಎಂಬ ಗ್ರಂಥದಲ್ಲಿ ಜಗನ್ನಾಥ ಹೇಮಾದ್ರಿ ಬರೆದ "ಹಸಲರು" ಎಂಬ ಲೇಖನದಲ್ಲಿ ಅವರು ವಾಸಿಸುವ ಪ್ರದೇಶಗಳು 'ಹಸಲ' ಶಬ್ದದ ಉತ್ಪತ್ತಿ, ಇವರಿಗೆ ಬಿಲ್ಲಕ್ಷತ್ರಿಯರು ಎಂಬ ಹೆಸರಿನಿಂದ ಕರೆಯಲಾಗುವುದೆಂದು ಹೇಳಲಾಗಿದೆ. ಇವರು ಬೇಟೆಯಾಡುತ್ತಾ ಕಾಡಿನಲ್ಲಿ ವಾಸಿಸುತ್ತಾರೆ. ಇವರಲ್ಲಿರುವ ಅನೇಕ ಬಗೆಯ ಬಳಿಗಳ ಬಗ್ಗೆಯೂ ಉಲ್ಲೇಖಿಸಿದ್ದಾರೆ. ಇವರು ಮಾಂಸಾಹಾರಿಗಳು, ಇವರ ಮನೆಗಳ ರಚನೆ, ಜನಾಂಗದ ದೈಹಿಕ ರಚನೆ, ಹೆಂಗಸರ ಉಡಿಗೆ ತೊಡುಗೆಗಳು, ಜನನ ಕ್ರಮಕ್ಕೆ ಸಂಬಂಧಿಸಿದ ಆಚರಣೆಗಳು, ಹೆಣ್ಣು ಪ್ರಥಮಸಲ ಋತುಮತಿಯಾದಾಗ ಆಚರಿಸುವ ಸಂಪ್ರದಾಯಗಳು, ವಿವಾಹ ಪದ್ಧತಿ, ವಿಧವಾ ವಿವಾಹ, ವಿವಾಹ ವಿಚ್ಛೇದನ, ಶವಸಂಸ್ಕಾರ, ಭೂತಗಳ ಬಗೆಗೂ ಗಾರುಡಿಗ ಮತ್ತು ಇವರ ಆಯುರ್ವೇದ ಪದ್ಧತಿಯನ್ನು ಮತ್ತು ದೀಪಾವಳಿಯಂದು ಆಚರಿಸುವ ಹಬ್ಬ ಹಾಡುವುದರ ಬಗ್ಗೆ ಉಲ್ಲೇಖಿಸಲಾಗಿದೆ.

ವಿಲಿಯಂ ಮಾಡ್ತಾ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ ಜನಪದ ಸಾಹಿತ್ಯ ದರ್ಶನ-೧೭ ಜನಾಂಗಿಕ ಅಧ್ಯಯನ ಎಂಬ ಗ್ರಂಥದಲ್ಲಿ ವಾಮನ ನಂದಾವರ ಇವರು "ಬೈರರು ಒಂದು ಅಧ್ಯಯನ" ಎಂಬ ಲೇಖನದಲ್ಲಿ ಹಸಲರು ಆಚರಿಸುವ ನಾಗೋಲೆ ಶಾಸ್ತ್ರದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಈ ನಾಗೋಲೆ ಶಾಸ್ತ್ರವು ಬೈರರಲ್ಲಿಯೂ ಕೂಡಾ ಪ್ರಚಲಿತವಿದೆ. ಮದುವೆಯಾದ ಕನ್ಯೆಯನ್ನು ಧಾರೆಯಾಗಿ ಒಪ್ಪಿಸಿದ ಬಳಿಕ, ಮದುಮಕ್ಕಳನ್ನು ಮನೆಗೆ ಬಂದಾಗ ಆರತಿ ನಿವಾಳಿಸುವ ಕ್ರಮವಿದೆ. ಅಂದು ಆಚರಿಸುವ ಶಾಸ್ತ್ರವೇ ನಾಗೋಲೆ. ಇದು ಹಸಲರಲ್ಲಿಯೂ ಕೂಡಾ ಪ್ರಚಲಿತವಿದೆ. ಅಂದು ನಡೆಯುವ ಎಲ್ಲ ಸಂಪ್ರದಾಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ವೀರಣ್ಣ ರಾಜೂರ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ ಜನಪದ ಸಾಹಿತ್ಯ ದರ್ಶನ ಭಾಗ-೨೧ರಲ್ಲಿ ಅಭಯಕುಮಾರ ಕೆ ಇವರು "ಮಲೆನಾಡು ಕರ್ನಾಟಕದ ಉಡುಗೆಗಳು" ಎಂಬ ಲೇಖನದಲ್ಲಿ ಹಸಲರ ವಾಸಸ್ಥಾನ, ಹಸಲರ ಉಡುಗೆತೊಡಿಗೆಗಳು, ಕೃಷಿ ಕಾರ್ಯದಲ್ಲಿ ತೊಡಗಿದಾಗಿನ ಉಡುಗೆಗಳು, ಅಡಿಕೆ ಮರ ಹತ್ತುವಾಗಿನ ಉಡುಗೆಗಳು ಮತ್ತು ಮಹಿಳೆಯರ ಉಡುಗೆ ತೊಡುಗೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಮೇತ್ರಿ ಕೆ ಎಂ ಮತ್ತು ಚೆಲುವರಾಜು ಅವರ ಸಂಪಾದಕತ್ವದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ, ಪ್ರಸಾರಂಗ ಪ್ರಕಟಿಸಿರುವ "ಬುಡಕಟ್ಟು ಅಧ್ಯಯನ" ಸಂಪುಟ ೩ ಸಂಚಿಕೆ ೧ ಜನೇವರಿ - ಜೂನ್ ೨೦೦೬ರ ನಿಯತಕಾಲಿಕೆಯಲ್ಲಿ ಮೇತ್ರಿ ಕೆ ಎಂ ಇವರ ೧೨ನೇ ಲೇಖನವಾದ "Tribal

Demography of Karnataka" ಎಂಬುವದರಲ್ಲಿ ಸಮುದಾಯದ ಜಿಲ್ಲಾವಾರು ಗಂಡು ಹೆಣ್ಣು, ನಗರ ಮತ್ತು ಗ್ರಾಮೀಣ ಅಂಕಿ ಅಂಶಗಳು, ೧೨ನೆಯ ಆದಿವಾಸಿಯಾದ ಹಸಲರು ಇವರ ಜಿಲ್ಲಾವಾರು ಜನಸಂಖ್ಯೆ, ಗಂಡು, ಹೆಣ್ಣು, ನಗರ ಮತ್ತು ಗ್ರಾಮೀಣ ಅಂಕಿ ಅಂಶಗಳನ್ನು ಈ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಇವರ ಬೃಹತ್ ಕಾದಂಬರಿ "ಮಲೆಗಳಲ್ಲಿ ಮದುಮಗಳು" ಎಂಬುವುದರಲ್ಲಿ ಹಸಲರು ಯಾವ ರೀತಿಯಾಗಿ ಪಕ್ಷಿ ಮತ್ತು ಪ್ರಾಣಿಗಳನ್ನು ಬೇಟೆಯಾಡುತ್ತಾರೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಪ್ರಜಾವಾಣಿ ೦೪-೧೦-೨೦೧೦ರಂದು ಪ್ರಕಟವಾದ ಶಿವಮೊಗ್ಗ ಆವೃತ್ತಿಯ ಪತ್ರಿಕೆಯ ಮುಖಪುಟದಲ್ಲಿ ಹಸಲರ ಹಬ್ಬ ಹಾಡಿತು ಎಂಬ ಲೇಖನದ ಅಡಿಯಲ್ಲಿ ದೀಪಾವಳಿಯಂದು ಆಚರಿಸುವ ಅಂಟಿಗೆ ಪಂಟಿಗೆ ಹಬ್ಬದ ಮಹತ್ವ ಮತ್ತು ಹಾಡುಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

Ethnological Notes on Scheduled Tribe ೧೯೬೧ ಜನಗಣತಿ ಆಧಾರಿತ ಮತ್ತು ಕ್ಷೇತ್ರ ಕಾರ್ಯಮಾಡಿ ಕರ್ನಾಟಕ ಸರಕಾರ ಪ್ರಕಟಿಸಿದ ಈ ಲೇಖನದಲ್ಲಿ ಸುಮಾರು ೪೦ ಪುಟಗಳಷ್ಟು ಹಸಲರ ಬಗೆಗಿನ ವಿವರಣೆ ಇದೆ.

ಈ ಲೇಖನದಲ್ಲಿ ಹಸಲ ಶಬ್ದದ ಉತ್ಪತ್ತಿ, ಪರ್ಯಾಯ ಪದಗಳು, ಅವರ ಬಳಿಗಳು, ಪಂಗಡಗಳು, ಜನನ ಸಂಬಂಧಿ ಆಚರಣೆಗಳು, ಪ್ರಥಮ ಸಲ ಋತುಮತಿಯಾದ ಹೆಣ್ಣಿಗೆ ಸಂಬಂಧಿಸಿದ ಆಚರಣೆಗಳು, ಅವರ ದೈಹಿಕ ರಚನೆ, ವಾಸಸ್ಥಾನ, ಮನೆಗಳ ರಚನೆ, ಹಸಲರು ಅಡಿಕೆ ಮರ ಹತ್ತುವಾಗ ಉಪಯೋಗಿಸುವ ಸಲಕರಣೆಗಳು, ಬೇಟೆಯ ಕ್ರಮ, ಹೆಣ್ಣು ಮತ್ತು ಗಂಡು ಮಕ್ಕಳ ಕ್ರೀಡೆಗಳು, ಅವರ ವ್ಯವಸಾಯ ಕ್ರಮ, ಆಹಾರ ಪದ್ಧತಿ, ಮದುವೆಗೆ ಸಂಬಂಧಿಸಿದ ಆಚರಣೆಗಳು, ಮತ್ತು ಶವಸಂಸ್ಕಾರ ಪದ್ಧತಿ ಮುಂತಾದವುಗಳ ಬಗ್ಗೆ ವಿವರಿಸಲಾಗಿದೆ.

ರಂಗನಾಥ ಇವರು ತಮ್ಮ ಎಂ ಫಿಲ್ ಪದವಿಗಾಗಿ ಬುಡಕಟ್ಟು ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯಗೆ ಸಲ್ಲಿಸಿದ ನಿಬಂಧ "ಹಸಲರ ಬದಲಾವಣೆಗಳು" ಎಂಬ ತಲೆ ಬರಹದ ಪ್ರಬಂಧದಲ್ಲಿ ಹಸಲರು ಯಾವ ರೀತಿಯಾಗಿ ಅವರ ಜೀವನದಲ್ಲಿ ಪರಿವರ್ತನೆಗಳು ಆಗಿವೆ ಮತ್ತು ಆಗಲು ಪ್ರಾರಂಭಿಸಿವೆ, ಪರಿವರ್ತನೆಗೆ ಎನ್ ಹುಚ್ಚಪ್ಪ ಮಾಸ್ತರರ ಪಾತ್ರವೇನು ಎಂಬುದನ್ನು ವಿವರಿಸಲಾಗಿದೆ.

ಪಿ ಕಮಲಾಕ್ಷಮ್ಮ ಅವರು ಬರೆದಿರುವ ದಕ್ಷಿಣ ಕನ್ನಡ ಜಿಲ್ಲೆಯ "ಹರಿಜನ-ಗಿರಿಜನ ಸಾಮಾಜಿಕ ಇತಿಹಾಸ ಎಂಬ ಪುಸ್ತಕದಲ್ಲಿ ಕುಂದಾಪೂರ ಸುತ್ತಮುತ್ತಲಿನ ಹಸಲರ ಜನನ, ಮರಣ ಹಾಗೂ ವಿವಾಹ ಮುಂತಾದವುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದ್ದಾರೆ.

ನಾ ಡಿಸೋಜಾ ಅವರು ಬರೆದ ಮಂಜಿನ ಕಾನಾ ಎಂಬ ಕಾದಂಬರಿಯಯಲ್ಲಿ ಹಸಲರು ಹುಟ್ಟಾಳುಗಳಾಗಿದ್ದರು. ಒಡೆಯರ ದೌರ್ಜನ್ಯವನ್ನು ಮತ್ತು ಹಸಲರ ಸೇವಾ ಭಾವನೆಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಣೆ ನೀಡಿದ್ದಾರೆ.

ಹೆಗಡೆ ಎಲ್ ಆರ್ ಇವರು ಪ್ರಕಟಿಸಿರುವ ಒಗಟುಗಳು ಮತ್ತು ಕಥೆಗಳು ಎಂಬ ಗ್ರಂಥದಲ್ಲಿ ಹಸಲರ ಪದ್ಯರೂಪದ ಮತ್ತು ಗದ್ಯರೂಪದ ಒಗಟುಗಳನ್ನು ಸಂಗ್ರಹಿಸಿದ್ದಾರೆ.

ಹೆಗಡೆ ಎಲ್ ಆರ್ ಸಂಪಾದಿಸಿರುವ "ಭರತಕಥೆಗಳು" ಎಂಬ ಕೃತಿಯಲ್ಲಿ ಹಸಲರ ಕೆಲವೊಂದು ಕಥೆಗಳನ್ನು ಪ್ರಕಟಿಸಿದ್ದಾರೆ.

ಎ ವಿ ನಾವಡ ಮತ್ತು ಗಾಯತ್ರಿ ನಾವಡ ರಚಿಸಿದ ಕಿರುಹೊತ್ತಿಗೆ ಕಾಡ್ಯನಾಟ ಎಂಬುವುದರಲ್ಲಿ ಹಸಲರ ಸಾಮಾಜಿಕ ಜೀವನದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ವೆಂಕಟರಂಗೋ ಕಟ್ಟಿ ಇವರು ಕನ್ನಡಕ್ಕೆ ಅನುವಾದ ಮಾಡಿದ "ಕೆನರಾ ಗೆಜೆಟಿಯರ್" ಇದು ಬಾಂಬೆ ಪ್ರಾಂತಕ್ಕೆ ಒಳಪಟ್ಟ ಜಿಲ್ಲೆಗಳಾದ ಬೆಳಗಾವಿ, ಬಿಜಾಪೂರ, ಧಾರವಾಡ ಹಾಗೂ ಕೆನರಾಕ್ಕೆ ಸಂಬಂಧಪಟ್ಟಿವೆ. ಈ ಗೆಜೆಟಿಯರ್‌ನಲ್ಲಿ ಹಸಲರನ್ನು ನೀಚಕುಲದವರೆಂದು – ಹಸಲ ಎಂಬ ಶಬ್ದದ ಉತ್ಪತ್ತಿಯನ್ನು ದೇಹದ ಬಣ್ಣ, ಎತ್ತರ, ಸದೃಢಕಾಯ ಹೊಂದಿದವರೆಂದು, ಇವರು ಶಿವಮೊಗ್ಗ ಮೂಲದವರೆಂದು ವಿವರಿಸುವುದರ ಜೊತೆಗೆ ಹುಲ್ಸ್‌ವಾರರು ಎಂಬ ಜನಾಂಗದ ಉಲ್ಲೇಖ ಕೊಡುತ್ತ ಇವರು ಹೊಲೆಯ ಮಾದಿಗರ ಉದ್ಯೋಗ ಮಾಡುವರೆಂದು ಉಲ್ಲೇಖಿಸಲಾಗಿದೆ. ಇದೇ ಕೃತಿಯ ೨೨೪ನೇ ಪುಟದಲ್ಲಿ ವೆಂಕಟರಂಗೋ ಕಟ್ಟಿಯವರು ಹುಲ್ಸವಾರ್‌ರು ಮಹಾರಾಷ್ಟ್ರ ದಲ್ಲಿಯೂ ಕೂಡಾ ಇರುವರೆಂದು ಉಲ್ಲೇಖಿಸಿದ್ದಾರೆ. ಆದರೆ ಈ ಬಗ್ಗೆ ಮಹಾರಾಷ್ಟ್ರದಲ್ಲಿ ವಿಚಾರಿಸಲಾಗಿ ಮಾಹಿತಿ ಲಭ್ಯವಾಗಲಿಲ್ಲ.

ಹುಚ್ಚಪ್ಪ ಮಾಸ್ತರ ಎನ್ ಇವರು ನವಸಾಕ್ಷರರಿಗಾಗಿ ಬರೆದ 'ಹಸಲರು' ಎಂಬ ಕಿರು ಹೊತ್ತಿಗೆಯಲ್ಲಿ ಹಸಲ ಶಬ್ದದ ಉತ್ಪತ್ತಿ, ಉದ್ಯೋಗ, ಆಚಾರ-ವಿಚಾರ, ವೈವಾಹಿಕ ಹಾಗೂ ಶವಸಂಸ್ಕಾರ ಪದ್ಧತಿ ಮುಂತಾದವುಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಅಧ್ಯಾಯ ೨

ಹಸಲರ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ಎರಡು

ಹಸಲರ ಚಾರಿತ್ರಿಕ ಹಿನ್ನೆಲೆ

ಭಾರತವು ವೈವಿಧ್ಯಮಯವಾದ ದೇಶವಾಗಿದೆ. ಇಲ್ಲಿ ಹಲವಾರು ಜಾತಿ, ಜನಾಂಗ ಮತ್ತು ಭಾಷೆಯ ಜನರು ವಾಸಮಾಡುತ್ತಾರೆ. ಆದ್ದರಿಂದಲೇ ಭಾರತವನ್ನು ವೈವಿಧ್ಯತೆಯ 'ಪುಟ್ಟ ಪ್ರಪಂಚ' ಎಂದು ಕರೆಯುತ್ತಾರೆ. ಭಾರತದಲ್ಲಿ ೬೯೮ ಆದಿವಾಸಿ ಸಮೂಹಗಳಿವೆ. ೨೦೦೧ರ ಜನಗಣತಿಯ ಪ್ರಕಾರ ದೇಶದಲ್ಲಿ ೮,೪೩,೨೬,೨೪೦ ಆದಿವಾಸಿಗಳಿದ್ದಾರೆ. ಇದು ಒಟ್ಟು ಜನಸಂಖ್ಯೆಯ ಶೇ. ೮.೧೪ ರಷ್ಟು.

ಕರ್ನಾಟಕದಲ್ಲಿ ೫೦ ಆದಿವಾಸಿಗಳನ್ನು ಸಂವಿಧಾನಾತ್ಮಕವಾಗಿ ಆದಿವಾಸಿಗಳೆಂದು ಘೋಷಿಸಿದ್ದಾರೆ. ಇದರಲ್ಲಿ ೧೨ನೆಯ ಕ್ರಮಾಂಕದಲ್ಲಿ ಹಸಲರಿದ್ದಾರೆ. ಹಸಲರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ಇವರು ದಟ್ಟ ಗುಡ್ಡ ಮತ್ತು ಕಾಡುಗಳಲ್ಲಿ ವಾಸಮಾಡುವ ಜನರಾಗಿದ್ದಾರೆ. ಅಲ್ಲದೇ ಇವರನ್ನು ಹುಟ್ಟಾಳುಗಳೆಂದು ಕರೆಯುತ್ತಿದ್ದರು. ಆದರೆ ಜೀತನಿರ್ಮೂಲನಾ ಕಾಯಿದೆ ಬಂದ ನಂತರ ಜೀತ ವಿಮುಕ್ತಗೊಂಡು ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದ್ದಾರೆ. ಇವರು ಹೆಚ್ಚಾಗಿ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸವಾಗಿದ್ದಾರೆ. ಇವರು ಮುಗ್ಧರು ಮತ್ತು ಏಕಾಂತ ಪ್ರಿಯರಾಗಿದ್ದಾರೆ.

೨.೧ ಶಬ್ದದ ಉತ್ಪತ್ತಿ

'ಹಸಲ' ಎಂಬುದು ಕನ್ನಡದ 'ಹಸುಳೆ' ಎಂಬುದರಿಂದ ಬಂದಿದೆ. ಹಸುಳೆ ಎಂದರೆ, ಮಗು. ಹಸಲರ ಮುಗ್ಧತೆಯಿಂದಲೂ ಅಥವಾ ಇವರು ಸೇವಾ ಕಾರ್ಯದಲ್ಲಿ ತುಂಬಾ ಪ್ರಾಮಾಣಿಕ ರಾಗಿರುವುದರಿಂದಲೂ ಇವರನ್ನು ಹಸುಳೆಗಳೆಂದು ಕರೆದಿದ್ದಾರೆ. ಇವರು ದಕ್ಷಿಣ ಕನ್ನಡದ ಮೂಲ ನಿವಾಸಿಗಳು. ಪ್ರತಿಯೊಂದು ಜನಾಂಗದ ಮೇಲೆ ಸ್ಥಳೀಯ ಸಂಪ್ರದಾಯಗಳು ತಮ್ಮ

[illegible]

[illegible]

[illegible]

[illegible]

[illegible]

ಪ್ರಭಾವವನ್ನು ಬೀರಿವೆ. ಅದೇ ರೀತಿಯಾಗಿ ಭೂತಾರಾಧನೆಯ ಸಂಪ್ರದಾಯ ಹಸಲರಲ್ಲಿದೆ. ಇದು ಕಾರ್ಕಳದ ಒಂದು ಶಾಸನದ ಪ್ರಕಾರ ದಕ್ಷಿಣ ಕನ್ನಡ ಇದರ ಮೂಲ. ಅದೇ ರೀತಿಯಾಗಿ ಹಸಲರ ಮೇಲೆ ಇದರ ಪ್ರಭಾವ ಕಾಣುವುದರಿಂದ ಹಸಲರೂ ಕೂಡಾ ದಕ್ಷಿಣ ಕನ್ನಡದ ಮೂಲ ನಿವಾಸಿಗಳೆಂದು ಹೇಳಬಹುದು.

"ಹಸಲರನ್ನು 'ಹಸಲರ್' ಎಂದು ಕರೆಯುವ ರೂಢಿಯೂ ಇದೆ. ಹಸಲರು ಎಂಬುದು 'ಹಸಿರೆಲೆ' ಎಂಬುವುದರ ಅಪಭ್ರಂಶ ರೂಪ ಇರಬೇಕೆಂದು, ಇದು ಕಾಲಾನುಕ್ರಮದಲ್ಲಿ ಉಚ್ಚಾರದ ಸೌಲಭ್ಯಕ್ಕಾಗಿ ಅಕ್ಷರ ಪಲ್ಲಟವಾಗಿ 'ಹಸಲರ್' ಆಗಿದೆ. ಭಾಷಾ ಚರಿತ್ರೆಯಲ್ಲಿ ಇದು ಸ್ವಾಭಾವಿಕ ಕ್ರಿಯೆ ಎಂಬ ಅಭಿಪ್ರಾಯವೊಂದಿದೆ.

ಇವರನ್ನು ಬಿಲ್ಲಕ್ಷತ್ರಿಯರೆಂದಲೂ (ಬಿಲ್ಲು+ಕ್ಷತ್ರಿಯ) ಕರೆಯುತ್ತಾರೆ. ಬಿಲ್ಲುಗಾರಿಕೆಯಿಂದ ಬೇಟೆಯಾಡುತ್ತಾ ಕಾಡಿನ ಹಸಿರಲ್ಲಿ ಅಲೆದಾಡುತ್ತಾ ಜೀವಿಸುತ್ತಿದ್ದ ಇವರನ್ನು ಹಸರೆಲೆ (ಹಸಿರಲ್ಲಿ ಅಲೆದಾಡುವವ) ಎಂದು ಕರೆದಿರಬಹುದೆಂಬ ಸಮರ್ಥನೆಯನ್ನು ತಳ್ಳಿಹಾಕುವಂತಿಲ್ಲ"(ಹೇಮಾದ್ರಿ ಜಗನ್ನಾಥ :೧೯೯೩ :೫೫) ಬಿಲ್ಲು ಹಿಡಿಯದವ ಹಸಲನಲ್ಲ ಎಂಬ ಪ್ರಚಲಿತ ನಾಣ್ನುಡಿ ಇದೆ. ಇದು ಹಸಲರ ವೃತ್ತಿ ಲಕ್ಷಣವನ್ನು ಹೇಳುತ್ತದೆ. ಇವರು ಬಾಣಕ್ಕೆ ಬದಲಾಗಿ ಕಲ್ಲನ್ನು ಬಳಸುತ್ತಾರೆ. ಬಿಲ್ಲಿನ ಒಂದು ದಾರಕ್ಕೆ ಬದಲಿ ಎರಡು ದಾರ ಕಟ್ಟಿ, ಆ ದಾರಗಳ ಮಧ್ಯ ಒಂದು ಚರ್ಮದ ಚೂರನ್ನು ಸೇರಿಸಿ, ಆ ಚೂರಿನಲ್ಲಿ ಒಂದು ಸಣ್ಣ ಕಲ್ಲನ್ನು ಇಟ್ಟು ಜಗ್ಗಿ, ಎಳೆದು ಸಣ್ಣ ಪ್ರಾಣಿ ಮತ್ತು ಪಕ್ಷಿಗಳಿಗೆ ಗುರಿಯಿಟ್ಟು ಬೇಟೆಯಾಡುವ ಕ್ರಮ ಇವರಲ್ಲಿದೆ.

"ಹಸಲ ಎಂಬ ಪದದ ಮೂಲ 'ಹಸುಳೆ' ಆಗಿರದೆ ಅದು ಹಲಸ್ವಾರ ಆಗಿರುವ ಸಾಧ್ಯತೆಗಳು ಹೆಚ್ಚಾಗಿವೆ. ಇದು ಹಲ+ಸವಾರ>ಹಲಸವಾರ>ಹಲಸ್ವಾರ ಹೀಗೆ ರೂಪಾಂತರ ಹೊಂದಿರುತ್ತದೆ. 'ಹಲ' ಎಂದರೆ ನೇಗಿಲು ಮತ್ತು 'ಸವಾರ' ಎಂದರೆ 'ಉಳುವವನು' ಎಂದರ್ಥವಾಗುವುದು. ಬೇಟೆಗಾರಿಕೆಯಿಂದ ವಿಮುಖಗೊಂಡು ಕೃಷಿಗೆ ಕೂಡಿಕೊಂಡು ನೇಗಿಲಯೋಗಿಯಾದಾಗ ಇವರನ್ನು ಸಾರ್ವಜನಿಕರು 'ಹಲಸ್ವಾರ' ಎಂದು ಕರೆದಂತಿದೆ. 'ಹಲಸವಾರ' ಎಂಬ ಪದ ಅಪಭ್ರಂಶಗೊಂಡು ಹಲಸ್ವಾರ, ಹುಲಸ್ವಾರ, ಹಾಸ್ಲರ್, ಹಲ್ಸರ್, ಹಸ್ಲರ್ ಮತ್ತು ಹಸಲರು ಎಂದು ರೂಪಾಂತರವಾದಂತಿದೆ". (ಮೇತ್ರಿ, ಕೆ ಎಂ :೨೦೦೨ :೮೪)

'ಹಸಲ' ಎನ್ನುವ ಪದವು ಕನ್ನಡದ 'ಹಸ' ಎಂಬ ಶಬ್ದದಿಂದ ಬಂದಿದೆ. 'ಹಸ' ಎಂದರೆ, ಶುದ್ಧ, ಸ್ವಚ್ಛ, ನಿರ್ಮಲ ಎಂದರ್ಥ. ಇವರು ತಮ್ಮ ಮನೆಗಳನ್ನು ಸ್ವಚ್ಛವಾಗಿಡುವುದರಿಂದ ಈ ಶಬ್ದ ಬಳಕೆಯಲ್ಲಿ ಬಂದಿದೆ. ಇದೇ ಶಬ್ದವು ಮುಂದೆ ರೂಪಾಂತರಗೊಂಡು 'ಹಸನ' ವೆಂದಾಯಿತು. ನಂತರ ಹಸಲವೆಂದು ಬಳಕೆಯಲ್ಲಿ ಬಂದಿತು. ಇದನ್ನೇ ಭಾಷಾ ಶಾಸ್ತ್ರದನ್ವಯ ಹಸ>ಹಸನ>ಹಸಲ ಎಂದು ಗುರುತಿಸಬಹುದಾಗಿದೆ. ಈ ರೀತಿಯ ರೂಪ ನಿಷ್ಪತ್ತಿಯು ಬರಿ ಶಬ್ದಾನುಸಾರವಾಗಿರದೆ ಅರ್ಥಾನುಸಾರವಾಗಿ ಮಾರ್ಪಾಡುಗೊಂಡಿದೆ.

"ನಾಮ ಬಿಲ್ಲಕ್ಷತ್ರಿ ಎಂದು ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ವಿಶಿಷ್ಟಾದ್ವೈತ ಮತ ಸಂಸ್ಥಾಪಕರಾದ ಶ್ರೀ ರಾಮಾನುಜಚಾರ್ಯರು ಕನ್ನಡ ನಾಡಿಗೆ ಆಗಮಿಸಿ, ಸಾಮಾನ್ಯರನ್ನು ಆಕರ್ಷಿಸಿದ್ದು, ಐತಿಹಾಸಿಕ ಸತ್ಯ. ಕಾಡಾಡಿಗಳಾಗಿದ್ದ ಹಸಲರನ್ನು ಕರೆತಂದು ಅವರಿಗೂ ವೈಷ್ಣವ ಭಕ್ತಿಯನ್ನು ಉಣಬಡಿಸಿರಬೇಕು. ಹೀಗಾಗಿ ಇವರು ನಾಮಧಾರಿ ಬಿಲ್ಲಕ್ಷತ್ರಿಯರು. ಹಸಲರ ಗುರುಮಠವೊಂದು ಸಿದ್ಧಾಪೂರ ತಾಲೂಕಿನ 'ತರಳಿ' ಎಂಬ ಊರಲ್ಲಿ ಇದೆ. ಇದು ಹಸಲರ ಗುರುಮಠ. ಈ ಮಠದ ಸ್ತುತಿವಾಕ್ಯ 'ಶಿವತೆ ರಾಮಾನುಜಚಾರ್ಯ ನಮಃ' ಅಲ್ಲದೆ ವಿಶಿಷ್ಟಾದ್ವೈತ ಸೂಚಕ ಚಿಹ್ನೆಗಳಾದ ತ್ರೀನಾಮ, ಶಂಖ ಮತ್ತು ಚಕ್ರಗಳಿಂದೊಡಗೂಡಿದೆ. ಈ ಅಂಶವೂ ಕೂಡಾ ನಾಮಧಾರಿ ಬಿಲ್ಲಕ್ಷತ್ರಿಯರು ಎಂಬುದನ್ನು ಪುಷ್ಠೀಕರಿಸುತ್ತದೆ". (ಹೇಮಾದ್ರಿ ಜಗನ್ನಾಥ :೧೯೯೩ :೫೬)

೧೯೩೦ರಲ್ಲಿ ತಿಮ್ಮಪ್ಪ ನಾಯಕ ಬೀಳಗಿಯ ರಾಜನಾಗಿದ್ದ. ಆ ಕಾಲದಲ್ಲಿ ಗಣಪತಿ ದೇವಸ್ಥಾನವನ್ನು ಕಟ್ಟಿಸಿದ. ಇದರ ಪಕ್ಕದಲ್ಲಿಯೇ ತರಳಿಮಠವು ನಿರ್ಮಾಣವಾಯಿತು. ಇದು ಐದು ಜಾತಿಯ ಶಿಷ್ಯವರ್ಗವನ್ನು ಹೊಂದಿದೆ.

೧) ಕರೆ ಒಕ್ಕಲಿಗರು
೨) ಕೊಟ್ಟೆ ಒಕ್ಕಲಿಗರು
೩) ಈಡಿಗರು
೪) ಬಿಲ್ಲಕ್ಷತ್ರಿಯರು / ಹಸಲರು
೫) ನಾಡು ಒಕ್ಕಲಿಗರು

ಈಗ ಈ ಮಠವು ಯಾರಿಗೆ ಸೇರಿದ್ದು ಎಂಬುದರ ಬಗ್ಗೆ ತಕರಾರು ಬಂದಿರುವುದರಿಂದ ಈ ಬಗ್ಗೆ ಬೆಳಗಾವಿಯ ಚಾರಿಟಿ ಕಮಿಷನರ್ ಹತ್ತಿರ ಕೇಸು ನಡೆದಿರುವುದರಿಂದ ಏನನ್ನು ಹೇಳಲಾರೆ ಎಂದು ಆ ಮಠದ ಶ್ರೀಗಳು ಹೇಳುತ್ತಾರೆ. ಇದು ಇನ್ನೂ ಇತ್ಯರ್ಥವಾಗಿಲ್ಲವೆಂದು ಶಿವಮೊಗ್ಗ ಜಿಲ್ಲೆಯ ಬಿಲ್ಲಕ್ಷತ್ರಿ / ಹಸಲರ ಅಧ್ಯಕ್ಷರಾದ ಹಿರೇಮನೆಯ ಎಚ್ ಆರ್ ಚೌಡಪ್ಪನವರು ಹೇಳುವ ಜೊತೆಗೆ, ತರಳಿ ಮಠವು ನಮಗೆ ಸೇರಿದ್ದು ಎಂದೂ ಹೇಳುತ್ತಾರೆ.

ಹಸಲರು ತಮಗೆ ಈ ಹೆಸರು ಬಂದ ಬಗ್ಗೆ ಒಂದು ಪೌರಾಣಿಕ ಕಥೆಯನ್ನು ಹೇಳುತ್ತಾರೆ. ಶ್ರೀರಾಮಚಂದ್ರನಿಂದ ಪರಿತ್ಯಕ್ತೆಯಾದ ಸೀತೆ ವಾಲ್ಮೀಕಿ ಮಹರ್ಷಿಯ ಆಶ್ರಮದಲ್ಲಿದ್ದಳು. ಅವಳು ಅಲ್ಲಿ ಲವನೆಂಬ ಪುತ್ರನಿಗೆ ಜನ್ಮ ನೀಡಿದಳು. ವಾಲ್ಮೀಕಿ ಮಹರ್ಷಿಯ ಆಶ್ರಮದಲ್ಲಿ ಲವ ಬೆಳೆಯುತ್ತಿದ್ದ. ಒಂದು ದಿವಸ ಸೀತಾದೇವಿ ತನ್ನ ಬಟ್ಟೆಗಳನ್ನು ಶುಚಿಗೊಳಿಸಲೆಂದು ನದಿಗೆ ತೆರಳಿದಳಂತೆ. ನದಿ ತೀರದಲ್ಲಿ ಕಪಿಗಳು ನೀರು ಕುಡಿಯುತ್ತಿದ್ದವು. ಇದೊಂದು ಅಪಶಕುನವೆಂದು ಭಾವಿಸಿದಳು. ಆಶ್ರಮದಲ್ಲಿ ಬಿಟ್ಟುಬಂದ ಲವನಿಗೆ ಅಪಾಯ ಕಾದಿದೆ ಎಂದು ಭಾವಿಸಿ, ಅದನ್ನು ವಾಲ್ಮೀಕಿ ಮಹರ್ಷಿ ಆಶ್ರಮದಿಂದ ಎತ್ತಿಕೊಂಡು ಬಂದಳು. ವಾಲ್ಮೀಕಿ ಮಹರ್ಷಿ ಕೆಲ ಸಮಯದ ನಂತರ ಆಶ್ರಮಕ್ಕೆ ತಿರುಗಿ ಬಂದನು. ಮಹರ್ಷಿಗೆ ತೊಟ್ಟಿಲಲ್ಲಿರುವ ಮಗು ಕಾಣಿಸಲಿಲ್ಲ. ಸಾಮಾನ್ಯವಾಗಿ

[illegible]

[illegible]

[illegible]

ಸೀತೆ ಹೊರಗಡೆ ಹೋಗುವಾಗ ಮಗನನ್ನು ಕರೆದುಕೊಂಡು ಹೋಗುತ್ತಿರಲಿಲ್ಲ. ಕಾಡಿನ ಯಾವುದೋ ದುಷ್ಟ ಮೃಗ ಮಗುವನ್ನು ಎತ್ತಿಕೊಂಡು ಹೋಗಿರಬೇಕೆಂದು ಮಹರ್ಷಿ ವಾಲ್ಮೀಕಿ ಭಾವಿಸಿದ. ಸೀತೆ ಹಿಂದಿರುಗಿ ಬಂದು ತನ್ನ ಮಗು ಎಲ್ಲಿ ಎಂದು ಕೇಳಿದಾಗ ಏನೆಂದು ಉತ್ತರಿಸಲಿ ಎಂಬ ದಿಗಿಲಾಯಿತು. ಆವಾಗ ವಾಲ್ಮೀಕಿ ಮಹರ್ಷಿ ಒಂದು ಕಟ್ಟಿಗೆಯ ಸಣ್ಣ ತುಂಡನ್ನು ತನ್ನ ಎರಡು ಹಸ್ತಗಳ ನಡುವೆ ಹಿಡಿದು ತನ್ನ ಮಂತ್ರ ಶಕ್ತಿಯಿಂದ ಆ ಕಡ್ಡಿಗೆ ಜೀವ ತುಂಬಿದ. ಅಷ್ಟೇ ಅಲ್ಲ, ಆ ಮಗುವನ್ನು ತೊಟ್ಟಿಲಲ್ಲಿರಿಸಿದ. ಸ್ವಲ್ಪ ಸಮಯದ ನಂತರ ಸೀತೆ ಲವನೊಂದಿಗೆ ಆಶ್ರಮಕ್ಕೆ ಬಂದಳು. ತೊಟ್ಟಿಲಲ್ಲಿ ಮಗುವೊಂದು ಆಟವಾಡುತ್ತಿತ್ತು. ಇದನ್ನರಿತ ವಾಲ್ಮೀಕಿ ಸೀತೆಗೆ ಇದೆಲ್ಲಾ ನಿನ್ನಿಂದಾಗಿಯೇ ಆದದ್ದು ಎಂದು ಹೇಳಿದನು. ಹಾಗೆಯೇ ಈ ಮಗುವನ್ನು ನಿನ್ನ ಮಗುವಿನೊಂದಿಗೆ ಸಾಕು ಎಂದು ಹೇಳಿದ. ಈ ಮಗುವಿಗೆ 'ಕುಶ' ಎಂದು ನಾಮಕರಣ ಮಾಡಿದರು. ಹಸಲರು ತಾವು 'ಕುಶ' ವಂಶದವರೆಂದು ತಿಳಿಯುತ್ತಾರೆ. ಹಸ್ತದಿಂದ ಜನಿಸಿದುದರಿಂದ ತಮಗೆ ಹಸಲರು ಎಂಬ ಹೆಸರು ಬಂದಿದೆ ಎಂದೂ ಹೇಳುತ್ತಾರೆ.

೨.೨ ಪರ್ಯಾಯ ಪದಗಳು

"ಹಸಲರಿಗೆ 'ಹಸ್ಲರ್', ಹಲ್ಸರ್, ಹುಲ್ಸವಾರ್, ಹಾಸವರ ಎಂಬ ಪರ್ಯಾಯ ಪದಗಳಿವೆ. ಇವರು ಗುಜರಾತ ಮತ್ತು ಮಹಾರಾಷ್ಟ್ರಗಳಲ್ಲಿ ಕಾಣಸಿಗುತ್ತಾರೆ". (ಹುಚ್ಚಪ್ಪ ಮಾಸ್ಟರ್ ಎನ್: ೧೯೯೮ :೬)

ವೆಂಕಟರಂಗೋ ಕಟ್ಟಿಯವರು ಕೆನರಾ ಗೆಜಿಟಿಯರ್‌ನಲ್ಲಿ ಹುಲ್ಸವಾರ್‌ರನ್ನು ಮರಾಠಿ ಭಾಷೆಯನ್ನಾಡುವ ಹೊಲೆಯರು ಎಂದು ಹೇಳಿದ್ದಾರೆ.

ಹಸಲರು ತಮ್ಮನ್ನು ಅಗ್ನಿಹೊನ್ನಯ್ಯನ ಮತದವರೆಂದು ಕರೆದುಕೊಳ್ಳುತ್ತಾರೆ. ಇವರ ಮೂಲ ಪುರುಷ ಹೊನ್ನಪ್ಪ. ಈತ 'ವೀರಶೈವ ಸಂತ' ಇವನು ಮಾದರ ಚೆನ್ನಯ್ಯ, ಮಡಿವಾಳ ಮಾಚಯ್ಯ, ಕುಂಬಾರ ಗುಂಡಯ್ಯ ಇವರ ಸಮಕಾಲೀನನೆಂದು ಹೇಳುತ್ತಾರೆ. ಮೇದಾರರು ತಮ್ಮ ಹತ್ತಿರದ ಸಂಬಂಧಿಗಳೆಂದು ಹಸಲರು ಹೇಳುತ್ತಾರೆ. ಹಸಲರ ಮೂಲ ಪುರುಷ ಹೊನ್ನಯ್ಯ. ಮೇದಾರರ ಮೂಲ ಪುರುಷ ಚನ್ನಯ್ಯ. ಇಬ್ಬರೂ ಸಹೋದರರು. ಆದ್ದರಿಂದ ಮೇದಾರರು, ಹಸಲರು ದಾಯಾದಿಗಳು ಇಲ್ಲವೆ ಸಹೋದರರು ಎಂದು ಹಸಲರು ಹೇಳುತ್ತಾರೆ. ಆದರೆ ಇದಕ್ಕೆ ಮೇದಾರರ ಸಹಮತವಿಲ್ಲ.

ಹಸಲರು ಮೇದಾರರೊಂದಿಗಿನ ಸಂಬಂಧವನ್ನು ದೃಢಪಡಿಸಲು ಕಥೆಯೊಂದನ್ನು ಹೇಳುತ್ತಾರೆ. ಒಬ್ಬ ಹಸಲ, ಒಂದು ಬಿದಿರಿನ ತುಂಡಿನಿಂದ ಒಂದು ವಸ್ತು ಮಾಡಿದ. ಆದರೆ ಒಬ್ಬ ಮೇದಾರ ಅದೇ ಬಿದಿರು ತುಂಡಿನಿಂದ ಎರಡು ವಸ್ತುಗಳನ್ನು ಮಾಡಿದ. ನಂತರ ಇಬ್ಬರಿಗೂ ಜಗಳವಾಗಿ ಮೇದಾರವನು ಚಾಕು ಹಿಡಿದುಕೊಂಡು ಓಡಿಹೋದ. ಹಸಲರವನು ಆತನನ್ನು ಬೆನ್ನಟ್ಟಿಕೊಂಡು ಹೋದ. ನಂತರ ಚಾಕುವಿನ ಹಿಡಿ ಹಸಲನ ಕೈಯಲ್ಲಿ ಹಾಗೂ ಹಿಡಿಯಿಲ್ಲದ ಚಾಕು ಮೇದಾರನ ಕೈಯಲ್ಲಿ ಉಳಿಯಿತಂತೆ.

ಇಂದಿಗೂ ಮೇದಾರರು ತಮ್ಮ ಕೆಲಸದಲ್ಲಿ ಹಿಡಿ ಇರುವ ಚಾಕುವನ್ನು ಬಳಸುವುದಿಲ್ಲ. ಹಾಗೆಯೇ ಬಿದಿರನ್ನು ತಲೆಯ ಮೇಲೆ ಹೊರುವ ಬದಲಾಗಿ ಹೆಗಲ ಮೇಲೆ ಹೊರುತ್ತಾರೆ. ಆದರೆ ಹಸಲರು ಇದಕ್ಕೆ ತದ್ವಿರುದ್ಧವಾಗಿ ಹೆಗಲ ಮೇಲೆ ಹೊರುವ ಬದಲಾಗಿ ತಲೆಯ ಮೇಲೆ ಹೊರುವುದುಂಟು. ಬಹುಶಃ ಈ ಮೇಲಿನ ಕಥೆ ಅವರ ನಂಬಿಕೆಯನ್ನು ಪುಷ್ಟೀಕರಿಸಿರಬೇಕು.

೨.೩ ಬಳಿಗಳು

ಹಸಲರಲ್ಲಿ ಭಿನ್ನ ಗೋತ್ರಗಳಿವೆ. ಅವುಗಳನ್ನು ಬಳಿ ಎಂತಲೂ ಕರೆಯುತ್ತಾರೆ. ಈ ಬಳಿಗಳನ್ನು ಗುರುತಿಸುವುದು ತಾಯಿಯಿಂದ ಇಲ್ಲವೆ ಸೋದರ ಮಾವನಿಂದ.

ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ಶಿಕಾರಿಪುರ, ತೀರ್ಥಹಳ್ಳಿ ಮತ್ತು ಹೊಸನಗರ ತಾಲೂಕಿನಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಿರಸಿ, ಹೊನ್ನಾವರ, ಸಿದ್ಧಾಪೂರ ತಾಲೂಕುಗಳಲ್ಲಿ ಹೆಚ್ಚಾಗಿ ಶೆಟ್ಟಿಬಳಿ, ಸಿರಿನ್‌ಬಳಿ, ಹೊಲೆನ್‌ಬಳಿ, ಶಿವನಬಳಿ, ಆನೆಬಳಿ, ಗಂಗರಬಳಿ ಮತ್ತು ಬಾಲೆಬಳಿಗಳನ್ನು ಕಾಣಬಹುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸ ಮಾಡುವ ಹಸಲರಲ್ಲಿ ಮಲ್ಲಿಗೆಬಳಿ, ಕುಂದಲಬಳಿ, ಕಾಡಾಚಿಬಳಿ, ಕನ್ಯೆಬಳಿಗಳನ್ನು ಗುರುತಿಸಬಹುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುವ ಹಸಲರಲ್ಲಿ ಬೆತ್ತಬಳಿ, ಕಿನಗೇರಬಳಿ, ಮೇದನಬಳಿ, ನಾದೇರಬಳಿ, ಚೆಲ್ದೇರಬಳಿ, ಕುಳ್ಳಿಗಬಳಿಗಳನ್ನು ಕಾಣಬಹುದು. ಆದರೆ ಈಗಿನ ಹಸಲರ ಯುವಕರಿಗೆ ತಮ್ಮ 'ಬಳಿ' ಯಾವುದೆಂಬುವುದರ ಬಗ್ಗೆ ಗೊತ್ತಿಲ್ಲ. ಹಿರಿಯರು ಮರೆಯುತ್ತಿದ್ದಾರೆ. ಆದಾಗ್ಯೂ ಅವರು ವೈವಾಹಿಕ ಸಂಬಂಧಗಳ ಆಧಾರದ ಮೇಲೆಯೇ ತಮ್ಮ ಬಳಿ ಗುರುತಿಸಿಕೊಳ್ಳುವ ಸರಳ ಹಾದಿಯನ್ನು ಹುಡುಕಿದ್ದಾರೆ. ಈ ವಿಭಿನ್ನ ಬಳಿಗಳ ಹಸಲರಲ್ಲಿ ವಿಭಿನ್ನ ಕುಲದೇವತಾ ಆರಾಧನಾ ಪದ್ಧತಿ ಇರುವುದನ್ನು ಗಮನಿಸಬಹುದು.

ಆನೆಬಳಿ – ಆನೆ

ಗಂಗರಬಳಿ – ತೆಂಗಿನಕಾಯಿ

ಬೆತ್ತಬಳಿ – ಬೆತ್ತ

ಕನ್ಯೆಬಳಿ – ಕನ್ಯೆ

ಶೇಂದಿಬಳಿ – ಸರಾಯಿ

ಶೆಟ್ಟಿಬಳಿ – ಮೀನು

ಸಿರಿನ್‌ಬಳಿ – ಒಂದು ಮರ

೨.೪ ಹಸಲರ ಪಂಗಡಗಳು

ಹಸಲರು ಮಾಡುವ ವೃತ್ತಿ ಮತ್ತು ಅವರು ವಾಸಿಸುವ ಪ್ರದೇಶದ ಆಧಾರದ ಮೇಲಿಂದ ಅವರಲ್ಲಿ ಐದು ಪಂಗಡಗಳನ್ನು ಗುರುತಿಸಲಾಗಿದೆ. ಅವು ಈ ಕೆಳಗಿನಂತಿವೆ.

ಬೆಳ್ಳಿಯ ಹಸಲರು

ಬಗ್ಗಾಲಿನ ಹಸಲರು

ನಾಡ ಹಸಲರು

ಮಲೆ ಹಸಲರು

ಕರ ಎಳೆಯುವ ಹಸಲರು

೨.೪.೧ ಬೆಳ್ಳಿಯ ಹಸಲರು

ಇವರು ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡು ಬರುತ್ತಾರೆ. ಈ ಹಸಲರು ಕೆಳಗಿನ ಅಂತಸ್ತಿನವರು. ಇವರನ್ನು ಘಟ್ಟದ ಮೇಲಿನ ಹಸಲರು ಮನೆಯ ಒಳಗೆ ಸೇರಿಸಿಕೊಳ್ಳುವದಿಲ್ಲ. ಅಷ್ಟೇ ಅಲ್ಲ, ಇವರ ಜೊತೆ ಸಹಪಂಕ್ತಿ ಭೋಜನವನ್ನು ಕೂಡಾ ಮಾಡುವುದಿಲ್ಲ. ಇವರ ಜೊತೆ ವೈವಾಹಿಕ ಸಂಬಂಧ ಏರ್ಪಡಿಸುವುದಿಲ್ಲ.

೨.೪.೨ ಬಗ್ಗಾಲಿನ ಹಸಲರು

ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿ ವಾಸಿಸುತ್ತಾರೆ. ಇವರಿಗೆ ಬಗ್ಗಾಲಿನ ಹಸಲರು ಎಂಬ ಹೆಸರು ಬರಲು ಅವರ ವೃತ್ತಿಯೇ ಕಾರಣ. ಇವರು ಅಡಿಕೆ ಮರ ಹತ್ತಿ ಮರದಿಂದ ಮರಕ್ಕೆ ಜಿಗಿಯುತ್ತಾ ಅಡಿಕೆ ಗೊನೆ ಕೊಯ್ಯುವರು. ಅಡಿಕೆ ಬೆಳೆಗೆ ರೋಗ ಬಂದರೆ ಔಷಧೋಪಚಾರ ಮಾಡುವರು. ಕೊಟ್ಟೆ ಕಟ್ಟುವ ಕೆಲಸ ಮಾಡುವುದರಿಂದ ಅವರ ಕಾಲುಗಳು ಸಹಜವಾಗಿ ಬಾಗುವವು. ಆದ್ದರಿಂದ ಇವರಿಗೆ **'ಬಗ್ಗಾಲು ಹಸಲರು'** ಎಂದು ಕರೆಯುತ್ತಾರೆ.

೨.೪.೩ ನಾಡ ಹಸಲರು

ಇವರು ನಾಡಿಗೆ ಸಮೀಪವಿರುವುದರಿಂದ ಇವರಿಗೆ 'ನಾಡ ಹಸಲರು' ಎಂದು ಕರೆಯುತ್ತಾರೆ. ಇನ್ನುಳಿದ ಪಂಗಡಗಳಿಗಿಂತ ಇವರು ಶ್ರೇಷ್ಠರು. ಇವರು ಕೃಷಿ ಚಟುವಟಿಕೆಗಳಲ್ಲಿ ತೊಡಗುವುದರ ಜೊತೆಗೆ ಬಿದಿರನ ಉತ್ಪನ್ನಗಳನ್ನು ಮಾಡಿ ಜೀವನ ಸಾಗಿಸುತ್ತಾರೆ.

೨.೪.೪ ಮಲೆ ಹಸಲರು

ಇವರು ವಾಸಿಸುವ ಪ್ರದೇಶದ ಆಧಾರದ ಮೇಲಿಂದ ಇವರಿಗೆ 'ಮಲೆ ಹಸಲರು' ಎಂದು ಕರೆಯುತ್ತಾರೆ. ಇವರು ಹೆಚ್ಚಾಗಿ ಆಗುಂಬೆ, ಕುದುರೆಮುಖ ಗುಡ್ಡಗಳಲ್ಲಿ ವಾಸಿಸುತ್ತಾರೆ. ಇವರು ಹೆಚ್ಚಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಇವರು ಬೈನೆ ಮರದಿಂದ ಸಿಂದಿಯನ್ನು ತೆಗೆಯುವರು. ಇವರು ಘಟ್ಟದ ಮೇಲಿನ ಹಸಲರೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದ್ದಾರೆ.

೨.೪.೫ ಕರ ಎಳೆಯುವ ಹಸಲರು

ಈ ಪಂಗಡದ ಹಸಲರಿಗೂ ಕೂಡಾ ವೃತ್ತಿಯನ್ನಾಧರಿಸಿ ಈ ಹೆಸರು ಬಂದಿದೆ. ಇವರು ಸತ್ತ ದನಗಳನ್ನು ಎಳೆದು ಹಾಕುವ ಕೆಲಸ ಮಾಡುವುದರಿಂದ ಇವರಿಗೆ 'ಕರ ಎಳೆಯುವ ಹಸಲರು' ಎಂದು ಕರೆಯುತ್ತಾರೆ. ಇವರು ಬ್ರಹ್ಮಾವರ, ಹೆಬ್ರಿ ಸಮೀಪದಲ್ಲಿ ವಾಸಿಸುತ್ತಾರೆ. ಇವರು

ಮೂಲತಃ ಸಮಗಾರರು. ಇವರು ಹಸಲರಾಗಿ ಪರಿವರ್ತನೆಗೊಂಡು ಕರ ಎಳೆಯುವ ವೃತ್ತಿಯನ್ನು ಮಾಡುತ್ತಾರೆ. ಇವರೂ ಕೂಡಾ ಕೀಳು ಸ್ತರದ ಜನಾಂಗ. ಇವರ ಜೊತೆ ಘಟ್ಟದ ಮೇಲಿನ ಹಸಲರು ಸಹಪಂಕ್ತಿ ಭೋಜನ ಮಾಡುವುದಿಲ್ಲ. ಜೊತೆಗೆ ವೈವಾಹಿಕ ಸಂಬಂಧವನ್ನೂ ಬೆಳೆಸುವುದಿಲ್ಲ.

೨.೫ ಹಸಲರ ಜನಸಂಖ್ಯಾ ವಿಂಗಡನೆ

ಹಸಲರು ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹರಿದು ಹಂಚಿಹೋಗಿದ್ದಾರೆ. ಅವುಗಳು ಇಂತಿವೆ.

ಸೊರಬ ತಾಲೂಕು

ಬಿಳುವಾಣಿ, ಕುಮ್ಸೆ, ಬೆದುವಟ್ಟಿ, ಕೌಲಿ, ಕವಡೆ, ದುಗ್ಲಿ, ತೆಕ್ಕೂರ, ಕೆರೆಕೊಪ್ಪ, ಹಿರೇಕಸವಿ, ಕೋಲುಗುಣುಸಿ, ನಿಪ್ರಾಣಿ, ಹೊಸಬಾಳೆ, ಮುಟಗುಪ್ಪೆ, ಹಿರೇಕಾವಲಿ, ಚಿಕ್ಕಕಾವಲಿ, ಶಾಂತಪೂರ, ಹಿರಿಯೋಗಿ, ಕಂದಕ, ಕಾಕಣಬೈಲು, ಕಲ್ಮನೆ, ಚೀನಿ, ಸಿಂಗಪೂರ, ನವಣೆ, ತಲನೀರು, ಹುಲಗಾರು, ಸವಲಕೋರು, ಕೊಡೂರು, ಮುಡಬಾಗಿಲು, ನೆಲ್ಲುಂಡೆ, ಒಳಕಟ್ಟೆ, ಹದಿ, ಅರೋಡಿ, ಬೂರುಮಕ್ಕಿ, ಅತ್ತಿಮನೆ, ಸಂಪಕಟ್ಟೆ, ಅಡುಗೋಡು, ಯಡೂರು, ಹಾಗಲಮನೆ, ನಿಟ್ಟೂರ, ಮಡವಿ, ಅರಮನೆಕೊಪ್ಪ

ಶಿಕಾರಿಪುರ ತಾಲೂಕ

ಗುಡ್ಡದ ಹೊಸಳ್ಳಿ, ತೊಗರ್ಸಿ, ಹಲಸಿನಹಳ್ಳಿ, ದಿಂಡೆ, ಕೈನಲ್ಲಿ, ಕನ್ನಂಗಿ, ಶಿಲಕುಣಿ, ಹೊಂಗೆಹಕ್ಲು, ಕಳ್ಳಿಗದ್ದೆ, ಹೊಸಕೊಪ್ಪ, ಹೊಸಕೊಡಿಗೆ, ಕೋಗಿಲೆ, ಕಾನ್ಸಳ್ಳಿ, ತೀರ್ಥಹಳ್ಳಿ, ಕುಡಲ್ಗಾರ, ಕೊಂಡ್ಲೂರು, ಕಟ್ಟಿನಮನೆ

ಕುಂದಾಪೂರ ತಾಲೂಕು:

ಕಟ್ಟಿನಾಡಿ, ದೇವರಬಾಳು, ಅಗಸರಪಾಲು, ಯಡಿಗೇರಿ, ನ್ಯಾಮರಾಡಿ, ಕಾರೆಬೈಲು, ಕೊಟಗುಳಿ, ಉಂಡಿ ಕೊಲ್ಲೂರು, ಸಂಪ್ರೆ, ಮಗ್ಸಾಲಾ, ಅರಮನೆಗೋಡು, ಹಳ್ಳಿಹೊಳೆ, ಕಬ್ಬಿನಾಲೆ, ಸುಬ್ಬನತಪ್ಪಲು, ಮುಡುವಾಳಮಕ್ಕಿ ಕೆಬಿಗದ್ದೆ, ಮೋಹನಕ್ಲು

ಹೊನ್ನಾವರ ತಾಲೂಕು

ಮಂಕಿ, ಮಾಗೋಡು, ಆಡಕೋಳು, ದಬ್ಬೋಡು,

ಭಟ್ಕಳ ತಾಲೂಕು:

ಬೈಲೂರ

ಸಾಗರ ತಾಲೂಕು

ಹಿರೇಮನೆ, ಅರೆಹದ್ದ, ಹೊಸಗದ್ದೆ, ಬೆಳ್ಳೆಣ್ಣೆ, ಗಿಳಿಗಾರು, ಊಳೂರು, ಸಸರವಳ್ಳಿ, ಖಂಡಿಕಾ, ಗೀಜಗಾರು, ಕಕ್ರಿಕೊಪ್ಪ, ಬೇಳೂರು, ಬೆಳೆಯೂರು, ಚುಟ್ಟಿಕೆರೆ, ಅರಬಳ್ಳಿ, ತುಂಬ್ರಿ, ಮುಪ್ಪಾನೆ, ಕುಡುಗುಂಜಿ, ಕಾಳ್ಮಂಜಿ, ತಲವಾಟ, ಗಾಲಿಮನೆ, ಕಾರ್ಗಲ್ಲ, ತಾರನಬಯಲು, ಕಲಕೊಪ್ಪ, ಮಳಲಿ,

ಖಾನಮನೆ, ಹಿಲಗೋಡು, ಉಳ್ಳೂರು, ಜೋಗಿನಗದ್ದೆ, ಮುಳ್ಳಗುಡ್ಡೆ, ದ್ಯಾವಗುಡ್ಡೆ, ಮುಸೊಳ್ಳಿಕಾನತೋಟ, ಬಚಗಾರ, ತೋರಾಮೆ, ಕಂಚಿಕಾಯಿ, ಮುಪ್ಪಾನೆ, ಬನಕೊಪ್ಪ, ಅದಿಗೋಡು, ಒಳಕಾಟೆ, ಒಡ್ಡಿನಬೈಲು, ಮೇಲಿನಗೋಳಗೋಡು

ಹೊಸನಗರ ತಾಲೂಕು

ಮತ್ತಿಮನೆ, ಮಹಾಕೋಡು, ಓತನಾಡಿ, ಸಿಂಗರಿಕಾ, ತರುವೆ, ಮುಂಡಿಗೆಮನೆ, ಉಂಬಳುಡಿಕಿ, ತಾರಿಜಡ್ಡು, ಹಾಸಗಲ್, ಮಹಾಕೋಡು, ರಾಗಿಹಕ್ಲ, ಅರೋಡಿ, ಹೆದ್ಲಿ, ಕಾರಣಗಿರಿ, ನಾಗರಕುರಡಗೆ, ಬಾಳೆಮನೆ, ಹಾಗಲಮನೆ, ಜಡ್ಡಿನಮನೆ, ನಿಟ್ಟೂರು, ಮರನಕುಡಿ, ಅಡುಗೋಡಿ, ಕೊಳಕಿ, ಕಬ್ಬೂದು, ಬರುವೆ, ಹಿರಿಯೊಗ್ಗಿ, ಕಲ್ಮನೆ, ಗೊಲ್ಸಮನೆ, ಅತ್ತಿಮನೆ, ದೊಡ್ಮನೆ, ಮಾವಿನಕಲ್ಲು, ಗ್ರಾಮದಾರಜಡ್ಡು, ದೋದೂರು, ಜೇಬಳು, ಕೌರಿ, ಯಡ್ನಾಳ, ಕಚ್ಚಿಗೆಬೈಲು

ಸಿದ್ಧಾಪೂರ ತಾಲೂಕು

ಕಾನಳ್ಳಿ, ಕನ್ನಳ್ಳಿ, ಬಾಳಗೋಡು, ಒಂದಾನೆ, ಗುಬಗೋಳು, ದೊಡ್ಮನೆ, ಕುಡಗೋಡು, ತಾರಗೋಡು, ಕಂಸಲೆ, ಬಿಜ್ಜಳ, ಕೆರೆಮನೆ, ಕಡ್ಲಾಳ, ಕ್ಯಾದಿಗೇರಿ, ಲಕ್ಕಿಜಡೆ, ನಾಗಪ್ಪನಜಡೆ, ಕಾರ್ಯಸಾಲು, ಗೊದ್ಲಮನೆ, ಮಿಣಸೆ, ಕುಳಿಬೇಡ, ಹಲ್ಗೇರಿ, ಲಂಬಾಪೂರ, ತಡಗಳ್ಳೆ, ಮುಗ್ದೂರ, ಹಾರೆಕೊಪ್ಪ, ಆಲಳ್ಳಿ, ಆಲೋಳ್ಳಿ, ದೊಡಗದ್ದೆ, ಸಿರಿಗೆ, ಕುಡುಗುಂಪ, ಕಡ್ಲಾಳ, ಯಡದಾರಿ, ಅಳುವಳ್ಳಿ, ಬಳಗದ್ದೆ, ನಗ್ಗುಬೈಲ, ಕಮ್ಮನಕೇವಿ, ಶಾನಬಳಗ್ಯೆ, ಈರಾಸ್, ಕಾಲ್ಕೈ, ಮುಂದಿನಮನೆ, ಮೇಲಿನಮನೆ,

ಶಿರಸಿ ತಾಲೂಕು

ಶಿರಸಿ, ಬನವಾಸಿ, ಕಾಗೇರಿ, ಹೊಸಗದ್ದೆ, ಬಾಳೆಸರ, ಕಲ್ಲಕೊಪ್ಪ, ದಾಸನಕೊಪ್ಪ, ಕುಡಾಲ್‌ಕೊಪ್ಪ, ಬಿಸಿಲ್‌ಕೊಪ್ಪ, ಮುತಾಳಕೊಪ್ಪ, ಹುಡೆಲ್‌ಕೊಪ್ಪ, ಶಿವಳ್ಳಿ, ಬದನಗೋಡು, ಬುಗುಡಿಕೊಪ್ಪ, ಕಲಗದ್ದೆ

ತೀರ್ಥಹಳ್ಳಿ ತಾಲೂಕು

ಕನ್ನಂಗಿ, ಶಿಲೆಕುಣಿ, ಹೊಸಕೊಪ್ಪ, ದಿಂಡ, ಕೈಮರ, ನೊಣಬರ, ಹೊಸಕೊಡುಗೆ, ಹೊಂಗೆಹಕ್ಲು, ಕಳ್ಳಿಗದ್ದೆ, ಕಮ್ಮನಕೇರಿ, ಜಿಗುಳುಗೋಡ, ಆಗುಂಬೆ, ಕೈನಲ್ಲಿ, ಬಿಜ್ಜೋಳ, ನಾಲೂರ, ಗಾಡರಗದ್ದೆ, ಬಬ್ಬಿ, ಶುಂಠೆಹಕ್ಲು, ಕೊಕ್ಕೋಡ, ಧರೆಗುಂಡಿ, ಬಾಳೆಕೊಡ್ಲು, ದೋಣಿಹಕ್ಲು

ಮೂಡಿಗೇರಿ ತಾಲೂಕು

ತನ್ನೋಡಿ, ಕರ್ನಾಳ, ಸಂಕ್ರುಕೊಡಗೆ, ಕಳಸ, ಸಂಸೆ, ಹಿರೇಬೈಲ, ನಿಡುವಳ್ಳಿ, ಕುಂದೂರಾ, ಕಾಳಿಕಟ್ಟೆ, ಕವನಹಳ್ಳಿ, ಬೊಮ್ಮನಕೊಂಡ, ಹಾಡಿನಕೇರೆ, ನೀರಲಗೊಂಡ, ಮಾಗುಡಿ

ಕಾರ್ಕಳ ತಾಲೂಕು

ಕಬ್ಬಿನಾಲೆ ನೀರಾಡಿ, ಅಂಡಾರು, ಕಾಬೆಟ್ಟು, ಕಾರ್ಕಳದುರ್ಗ, ಮಾಳ, ರಂಜಾಳ, ಪಿರುವದ್ದಿ, ಮಂಜಿಕಲ್ಲುಸಿರುವ, ಹಿರೇಅಡಕ, ಬೆಳ್ಮಣಿ, ಬಜಗುಳಿ

ಶೃಂಗೇರಿ ತಾಲೂಕು

ಬೋರ್ಡಗಲ್, ಕಿಗ್ಗಾ, ಮಿಗ್, ಮಾಗೋಡು, ಮೆಣಸೆ

ಕೊಪ್ಪಾ ತಾಲೂಕು

ತಲಗೋಡು, ಹಿರೇಹುಲುಗಾರು, ಕಲಗುಡ್ಡೆ, ಬೆಂಡೆಹಕ್ಲು, ಕೊಗ್ರೆ

ನರಸಿಂಹರಾಜಪುರ ತಾಲೂಕು

ಮುದಗುಣಿ, ಸಿಕೆ, ಬನ್ನೂರಾ, ವಾಟೆಕೊಡುಗೆ, ಚಿಟಮಕ್ಕಿ, ಕುಟ್ರೆಹಡ್ಲು, ಸಿಗೋಡು

ಭಟ್ಕಳ ತಾಲೂಕು

ಬೈಲೂರು,

೨.೬ ಇತರ ಸಮುದಾಯಗಳ ಜೊತೆ ಸಂಬಂಧ

"Society is Web of Social Relationship"(MacIver and Page: ೧೯೯೮:೫)

ಸಮಾಜವು ಸಾಮಾಜಿಕ ಸಂಬಂಧಗಳ ಬಲೆ. ಸಮಾಜದ ಒಂದು ಘಟಕ ವ್ಯಕ್ತಿ. ವ್ಯಕ್ತಿ ವ್ಯಕ್ತಿಗಳು ಕೂಡಿದರೆ ಕುಟುಂಬ, ಕುಟುಂಬ ಕುಟುಂಬ ಕೂಡಿದರೆ ಸಮುದಾಯ.

ಒಂದು ಗಾದೆ, ಯಾರೂ ತನ್ನ ಸೊಂಡಿಯಿಂದ ನೀರು ಕುಡಿಯಲು ಆಗುವುದಿಲ್ಲ. ಈ ಗಾದೆಯು ಇನ್ನಿತರ ಜನರ ಜೊತೆ ಒಬ್ಬ ವ್ಯಕ್ತಿಯ ಸಂಬಂಧದ ಮಹತ್ವವನ್ನು ತಿಳಿಸುತ್ತದೆ. ಒಬ್ಬರಿಗೊಬ್ಬರ ಸಹಾಯ, ಸಹಕಾರ ಬೇಕೇ ಬೇಕು. ಈ ಹಿನ್ನೆಲೆಯಲ್ಲಿ ಹಸಲರು ಇನ್ನಿತರ ಸಮುದಾಯಗಳೊಡನೆ ಉತ್ತಮ ಸಂಬಂಧ ಹೊಂದಿದ್ದಾರೆ. ಇವರು ಆರ್ಥಿಕವಾಗಿ ಬಡವರಾದರೂ, ಹೃದಯ ಶ್ರೀಮಂತಿಕೆಗೆ ಬಡತನವಿಲ್ಲ. ಇದು ಸಂಶೋಧನಾನಿರತರ ಮಾತು.

ಇವರು ಸ್ವಭಾವತಃ ಸರಳ ಮತ್ತು ಸಜ್ಜನಿಕೆಯ ಜನ. ಇವರು ಬ್ರಾಹ್ಮಣರು, ದಿವರು ನಾಯಕರ ಮತ್ತು ಲಿಂಗಾಯತರ ಜೊತೆ ವಾಸಿಸುತ್ತಾರೆ. ಬ್ರಾಹ್ಮಣರ ಮನೆಯಲ್ಲಿ ಯಾವುದೇ ಶುಭ ಕಾರ್ಯಗಳಿದ್ದರೆ ಕಟ್ಟಿಗೆ ಒಡೆಯಲು, ಮದುವೆ ಇದ್ದರೆ ಮದುವೆ ಮಂಟಪ ಹಾಕಲು, ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಬ್ರಾಹ್ಮಣರಿಗೆ ಇವರು ಬೇಕು. ಅಡಿಕೆ ತೋಟದಲ್ಲಿ ಅಡಿಕೆ ಗೊನೆ ಇಳಿಸಲು ಇವರೇ ಬೇಕು. ಒಟ್ಟಿನಲ್ಲಿ ಬ್ರಾಹ್ಮಣರು ಇವರ ಸೇವೆಯ ಮೇಲೆ ಅವಲಂಬಿತರಾಗಿದ್ದಾರೆ. ಇದಕ್ಕೆ ಪ್ರತಿಫಲವಾಗಿ ಅವರು ದವಸ ದಾನ್ಯ ಅಥವಾ ಕೂಲಿ ಕೊಡುತ್ತಾರೆ. ಬ್ರಾಹ್ಮಣರಲ್ಲಿ ಮುಟ್ಟಿದರೆ ದೇಹ ಮಲೀನವಾಗುತ್ತದೆ ಎಂಬ ಬಾವನೆ ಇಲ್ಲ. ಬ್ರಾಹ್ಮಣರು ಎಲ್ಲಿಗೋ ಹೋಗಬೇಕಾದರೆ ಮನೆ ಬೀಗ ಹಾಕಿ ಆ ಕೀಲಿಯನ್ನು ಹಸಲರ ಹುಡುಗನ ಕೈಯಲ್ಲಿ ಕೊಟ್ಟು ಹೋಗುತ್ತಾರೆ. ಅಷ್ಟೇ ಅಲ್ಲ, ಹಸಲರು ದಿವರು ಮತ್ತು ನಾಯಕರ ಜೊತೆ ಒಳ್ಳೆಯ ಸಂಬಂಧ ಹೊಂದಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಸಲರ ಮನೆಗಳು ಚಲವಾದಿ ಸಮುದಾಯದ ಜೊತೆ ಇವೆ. ಇದರಿಂದ ಅವರಿಗೂ ಇವರಿಗೂ ನಾನು ಶ್ರೇಷ್ಠ, ನೀನು ಶ್ರೇಷ್ಠ ಎಂಬ ತಕರಾರು ಆಗಾಗ್ಗೆ

ಆಗುತ್ತದೆ. ಅಲ್ಲದೇ ಚಲವಾದಿಗಳು ಇವರನ್ನು ನೀವೂ ಪರಿಶಿಷ್ಟ ಜಾತಿಯವರೆ ಎಂದು ಮೂದಲಿಸುತ್ತಾರೆ. ಇದರಿಂದಾಗಿ ಇವರ ಮತ್ತು ಚಲವಾದಿಗಳ ನಡುವೆ ಒಳ್ಳೆಯ ಸಂಬಂಧವಿಲ್ಲ.

೨.೭ ಹಸಲರ ಜನಸಂಖ್ಯೆ

ಭಾರತವು ವಿವಿಧ ಜಾತಿ-ಜನಾಂಗವನ್ನೊಳಗೊಂಡ ರಾಷ್ಟ್ರವಾಗಿದೆ. ಇದನ್ನು ವೈವಿಧ್ಯತೆಯ ಪುಟ್ಟ ಪ್ರಪಂಚವೆಂದು ಕರೆಯುತ್ತೇವೆ. ಈ ದೇಶದಲ್ಲಿ ಕೆ.ಎಸ್.ಸಿಂಗ್ ಇವರು ೪೫೧ ಆದಿವಾಸಿ ಪಂಗಡಗಳನ್ನು ಗುರುತಿಸಿದ್ದಾರೆ. ಇವು ೧೭೨ ಭಾಗಗಳಾಗಿ ಹಂಚಿಹೋಗಿವೆ. ಭಾರತದಲ್ಲಿ ಈಗ ೬೯೮ ಆದಿವಾಸಿಗಳನ್ನು ಗುರುತಿಸಿದ್ದಾರೆ. ಇದರಲ್ಲಿ ಆದಿವಾಸಿಗಳ ಗುಂಪು, ಅವರ ಪ್ರತ್ಯೇಕವಾದ ಸ್ಥಳ ಹಾಗೂ ಕೇಂದ್ರಾಡಳಿತ ಘಟಕಗಳನ್ನೊಳಗೊಂಡಿವೆ. ಭಾರತದಲ್ಲಿ ೧೯೮೧ರ ಜನಗಣತಿಯ ಪ್ರಕಾರ ಆದಿವಾಸಿಗಳ ಒಟ್ಟು ಜನ ಸಂಖ್ಯೆ ೫,೧೬,೨೮,೬೩೮. ೧೯೯೧ರ ಜನಗಣತಿಯ ಪ್ರಕಾರ ಆದಿವಾಸಿಗಳ ಒಟ್ಟು ಜನಸಂಖ್ಯೆ ೬,೭೭,೫೮,೦೦೦. ೨೦೦೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಒಟ್ಟು ಆದಿವಾಸಿಗಳ ಸಂಖ್ಯೆ ೮,೪೩,೨೬,೨೪೦. ಇದು ಭಾರತದ ಒಟ್ಟು ಜನಸಂಖ್ಯೆಯ ಶೇಕಡಾ ೮.೧೪ ರಷ್ಟು ಆದಿವಾಸಿಗಳಿದ್ದಾರೆ.

ಕರ್ನಾಟಕದಲ್ಲಿ ೧೫-೦೬-೨೦೦೩ ರಂದು ಸಂವಿಧಾನಾತ್ಮಕವಾಗಿ ೫೦ ಪರಿಶಿಷ್ಟ ಪಂಗಡಗಳನ್ನು ಗುರುತಿಸಿದ್ದಾರೆ. ಇವರಲ್ಲಿ ೧೨ನೇ ಸ್ಥಾನವನ್ನು ಅಲಂಕರಿಸಿದವರೇ ಹಸಲರು. ಇವರು ೧೯೯೧ರ ಜನಗಣತಿಯ ಪ್ರಕಾರ ಒಟ್ಟು ಸಂಖ್ಯೆ ೧೬,೭೮೦. ಇದರಲ್ಲಿ ೧೬,೫೨೩ ಗ್ರಾಮೀಣವಾಸಿಗಳಾಗಿದ್ದರೆ, ಕೇವಲ ೨೫೭ ಜನ ನಗರವಾಸಿಗಳಾಗಿದ್ದಾರೆ. ಇವರಲ್ಲಿ ೧೫೨ ಗಂಡು, ೧೦೫ ಹೆಣ್ಣು.

೧೯೯೧ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಾಸಿಸುವ ಹಸಲರ ಅಂಕಿ-ಸಂಖ್ಯೆಗಳು ಈ ರೀತಿಯಾಗಿವೆ.

ಕೋಷ್ಟಕ ೨.೧ ಗ್ರಾಮೀಣವಾಸಿ ಹಸಲರ ಜನಸಂಖ್ಯೆ (ಜಿಲ್ಲಾವಾರು)

ಜಿಲ್ಲೆಗಳು	ಗಂಡು	ಹೆಣ್ಣು	ಒಟ್ಟು
ಬೆಂಗಳೂರು ಗ್ರಾಮಾಂತರ	೮	೮	೧೬
ಬೆಂಗಳೂರು ನಗರ	೧೬	೬	೨೨
ಬಳ್ಳಾರಿ	೦೨	೦೩	೦೫
ಬೆಳಗಾವಿ	೨೯	೩೧	೬೦
ಬೀದರ	೦೧	೦೧	೦೨
ವಿಜಾಪೂರ	೦೨	೦೪	೦೬
ಚಿಕ್ಕಮಗಳೂರು	೪,೫೧೮	೪,೫೪೩	೯,೦೬೧
ಚಿತ್ರದುರ್ಗ	-	-	-

ದಕ್ಷಿಣ ಕನ್ನಡ	೦೧	೦೧	೦೨
ಧಾರವಾಡ	–	–	–
ಗುಲಬರ್ಗಾ	೦೪	೦೧	೦೫
ಹಾಸನ	೫೨೭	೬೧೯	೧೧೪೬
ಕೊಡಗು	೦೧	೦೨	೦೩
ಕೋಲಾರ	೦೩	೦೩	೦೬
ಮಂಡ್ಯ	–	–	–
ಮೈಸೂರ	೦೧	೦೧	೦೨
ರಾಯಚೂರ	೦೨	೦೩	೦೫
ಶಿವಮೊಗ್ಗ	೩,೦೧೧	೩,೦೨೬	೬,೦೩೭
ತೂಮಕೂರು	೦೧	–	೦೧
ಉತ್ತರ ಕನ್ನಡ	೮೮	೭೯	೧೬೭
ಒಟ್ಟು	**೮,೨೧೫**	**೮,೩೩೦**	**೧೬,೫೪೫**

ಆಧಾರ: ಮೇತ್ರಿ, ಕೆ ಎಂ: ೨೦೦೬:೧೩೨

ಕೋಷ್ಟಕ– ೨.೨ ನಗರವಾಸಿ ಹಸಲರ ಜನಸಂಖ್ಯೆ (ಜಿಲ್ಲಾವಾರು)

ಜಿಲ್ಲೆಗಳು	ಗಂಡು	ಹೆಣ್ಣು	ಒಟ್ಟು
ಬೆಂಗಳೂರು ಗ್ರಾಮಾಂತರ	೦೪	೦೨	೦೬
ಬೆಂಗಳೂರು ನಗರ	–	–	–
ಬಳ್ಳಾರಿ	೦೪	೦೧	೦೫
ಬೆಳಗಾವಿ	–	೦೧	೦೧
ಬೀದರ	–	–	–
ವಿಜಾಪೂರ	–	೦೧	೦೧
ಚಿಕ್ಕಮಗಳೂರು	೨೩	೦೮	೩೧
ಚಿತ್ರದುರ್ಗ	–	–	–
ದಕ್ಷಿಣ ಕನ್ನಡ	೧೯	೦೧	೨೦
ಧಾರವಾಡ	೦೨	೦೧	೦೩

ಗುಲಬರ್ಗಾ	–	೦೧	೦೧
ಹಾಸನ	–	–	–
ಕೊಡಗು	–	–	–
ಕೋಲಾರ	–	–	–
ಮಂಡ್ಯ	–	–	–
ಮೈಸೂರ	–	೦೧	೦೧
ರಾಯಚೂರ	೦೪	೦೧	೦೫
ಶಿವಮೊಗ್ಗ	೮೦	೮೧	೧೬೧
ತೂಮಕೂರು	–	–	–
ಉತ್ತರ ಕನ್ನಡ	–	–	–
ಒಟ್ಟು	೧೩೬	೯೯	೨೩೫

ಆಧಾರ: ಅದೆ :೧೩೨

ಕೋಷ್ಟಕ– ೨.೩ ಜಿಲ್ಲಾವಾರು ಹಸಲರ ಗಂಡು–ಹೆಣ್ಣಿನ ಸಂಖ್ಯೆ

ಜಿಲ್ಲೆಗಳು	ಗಂಡು	ಹೆಣ್ಣು	ಒಟ್ಟು
ಬೆಂಗಳೂರು ಗ್ರಾಮಾಂತರ	೧೨	೧೦	೨೨
ಬೆಂಗಳೂರು ನಗರ	೧೬	೦೬	೨೨
ಬಳ್ಳಾರಿ	೦೬	೦೪	೧೦
ಬೆಳಗಾವಿ	೨೯	೩೨	೬೧
ಬೀದರ	೦೧	೦೧	೦೨
ವಿಜಾಪೂರ	೦೨	೦೫	೦೭
ಚಿಕ್ಕಮಗಳೂರು	೪,೫೪೧	೪,೫೫೧	೯,೦೯೨
ಚಿತ್ರದುರ್ಗ	–	–	–
ದಕ್ಷಿಣ ಕನ್ನಡ	೨೦	೦೧	೨೧
ಧಾರವಾಡ	೦೨	೦೧	೦೩
ಗುಲಬರ್ಗಾ	೦೪	೦೨	೦೬
ಹಾಸನ	೫೨೭	೬೧೯	೧೧೪೬

ಕೊಡಗು	೦೧	೦೨	೦೩
ಕೋಲಾರ	೦೩	೦೩	೦೬
ಮಂಡ್ಯ	–	–	–
ಮೈಸೂರ	೦೧	೦೨	೦೩
ರಾಯಚೂರ	೦೬	೦೪	೧೦
ಶಿವಮೊಗ್ಗ	೩,೦೯೧	೩,೧೦೭	೬,೧೯೮
ತೂಮಕೂರು	೦೧	–	೦೧
ಉತ್ತರ ಕನ್ನಡ	೮೮	೭೯	೧೬೭
ಒಟ್ಟು	**೮,೩೫೧**	**೮೪೨೯**	**೧೬,೭೮೦**

ಆಧಾರ: ಅದೆ: ೧೩೨

ಅಧ್ಯಾಯ ೩

ಹಸಲರ ಸಾಮಾಜಿಕ ಜೀವನ

೩.೧೬ ಅಳಿಕಟ್ಟು

೩.೧೭ ಮಕ್ಕಳಕಟ್ಟು

೩.೧೮ ದತ್ತಕ ಪದ್ಧತಿ

೩.೧೯ ಜಾತಿ ಪಂಚಾಯತ

೩.೨೦ ಶವಸಂಸ್ಕಾರ

ಅಧ್ಯಾಯ ಮೂರು

ಹಸಲರ ಸಾಮಾಜಿಕ ಜೀವನ

ಹಸಲರು ಸ್ನೇಹ ಜೀವಿಗಳು, ನಂಬಿಕೆಗೆ ಅರ್ಹರಾದವರು ಮತ್ತು ಏಕಾಂತ ಪ್ರಿಯರು. ಅಲ್ಲದೇ ಇನ್ನಿತರ ಜನಸಮುದಾಯಗಳೊಡನೆ ಸುಮಧುರ ಬಾಂಧವ್ಯವನ್ನು ಹೊಂದಿದವರಾಗಿದ್ದಾರೆ. ಇವರು ಹೆಚ್ಚಾಗಿ ಬ್ರಾಹ್ಮಣರ ಮನೆಯಲ್ಲಿಯೇ ಕೆಲಸಮಾಡುವುದರಿಂದ ಬ್ರಾಹ್ಮಣರ ನಡೆ-ನುಡಿಗಳು ಇವರ ಮೇಲೆ ಪ್ರಭಾವ ಬೀರಿ ಅವರ ಆಚರಣೆಗಳಲ್ಲಿ ಬ್ರಾಹ್ಮಣರ ರೀತಿ-ನೀತಿಗಳನ್ನು ಅನುಸರಿಸುತ್ತಾರೆ. ಅಲ್ಲದೇ ಇವರು ದ್ರಾವಿಡರ ಲಕ್ಷಣಗಳನ್ನು ಹೊಂದಿದ್ದಾರೆ. ಹುಟ್ಟಿನಿಂದ ಸಾಯುವವರೆಗೆ ಇವರು ಅನೇಕ ಧಾರ್ಮಿಕ ಆಚರಣೆಗಳನ್ನು ಮಾಡುವರು. ಇವರು ಯಾವಾಗಲೂ ತಮ್ಮ ಮನೆಗಳನ್ನು ಸ್ವಚ್ಛ ವಾಗಿಡುವರು. ಹಸಲರು ಸರಳ ಜೀವಿಗಳು. ಅವರ ಸಾಮಾಜಿಕ ಜೀವನವನ್ನು ಕೆಳಗಿನಂತೆ ವಿವರಿಸಲಾಗಿದೆ.

೩.೧ ಹಸಲರ ಶಾರೀರಿಕ ಲಕ್ಷಣಗಳು

ಹಸಲರು ದ್ರಾವಿಡ ಜನಾಂಗದ ದೈಹಿಕ ಲಕ್ಷಣಗಳನ್ನು ಹೊಂದಿರುವರು. ಗಂಡಸರು ಮತ್ತು ಹೆಂಗಸರು ಮಧ್ಯಮ ನಿಲುವನ್ನು (ಎತ್ತರ) ಹೊಂದಿರುತ್ತಾರೆ. ಅವರ ಚರ್ಮದ ಬಣ್ಣ ತಿಳಿಕಪ್ಪು, ದಪ್ಪವಾದ ಮೂಗು, ಗುಂಡನೆಯ ತಲೆ; ಹೆಂಗಸರು ನಯವಾದ ಕಿರಿದಾದ ಕಪ್ಪು ಕೂದಲನ್ನು ಹೊಂದಿದ್ದರೆ ಗಂಡಸರು ವರಟಾದ ಕಪ್ಪು ಕೂದಲನ್ನು ಹೊಂದಿದ್ದಾರೆ. ವಯಸ್ಸಾದ ಮಹಿಳೆಯರು ತಮ್ಮ ತಲೆಗೂದಲನ್ನು ಬಾಚುವದಿಲ್ಲ. ಆದರೆ ಮಧ್ಯ ವಯಸ್ಸಿನ ಹೆಂಗಸರು ಮಾತ್ರ ತಮ್ಮ ತಲೆಗೂದಲನ್ನು ಬಾಚುವರು. ಕಣ್ಣುಗಳು ಕಾಂತಿಯುಕ್ತವಾಗಿವೆ. ಹಳೆಯ ತಲೆಮಾರಿನ ಹೆಂಗಸರು ತಮ್ಮ ಹುಬ್ಬುಗಳನ್ನು ಅಂದವಾಗಿ ಇಟ್ಟಿಲ್ಲ. ಆದರೆ ೨೫ ವರ್ಷಗಳಿಗಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳು ತಮ್ಮ ಹುಬ್ಬುಗಳನ್ನು ಬ್ಯೂಟಿ ಪಾರ್ಲರಗಳಿಗೆ ಹೋಗಿ ಒಪ್ಪವಾಗಿಟ್ಟುಕೊಂಡಿದ್ದಾರೆ. ಗಂಡಸರು ಸುಂದರವಾದ ಮೈಕಟ್ಟನ್ನು ಹೊಂದಿರುವರು.

[illegible]

[illegible]

[illegible]

[illegible]

ಎಲ್ ಕೆ ಅನಂತಕೃಷ್ಣ ಅಯ್ಯರ ಮತ್ತು ಎಚ್. ವ್ಹಿ ನಂಜುಂಡಯ್ಯ 'The Mysore Tribes and Castes' ಎಂಬ ಗ್ರಂಥದ ಸಂಪುಟ ೧ ರಲ್ಲಿ ಪಶ್ಚಿಮ ಘಟ್ಟದ ಶ್ರೇಣಿಗಳಲ್ಲಿ ವಾಸಿಸುವ ಬಹುಮುಖ್ಯ ಎರಡು ಬುಡಕಟ್ಟುಗಳೆಂದರೆ, ಹಸಲರು ಹಾಗೂ ಮಲೇರು. ಜಾತಿ ಅಂತಸ್ತಿನಲ್ಲಿ ಇವರು ಹಳೆಪೈಕರಿಗಿಂತಲೂ ಕೆಳಗೆ, ಹೊಲೆಯರಿಕಿಂತಲೂ ಮೇಲೆ, ಇವರು ಕುಳ್ಳನೆಯ ಶರೀರವಾದರೂ ಮಾಂಸಖಂಡದಿಂದ ತುಂಬಿಕೊಂಡಿರುತ್ತಾರೆ. ಗುಂಗುರು ಕೂದಲು, ಕೆಲವರು ದಪ್ಪನೆ ತುಟಿಗಳನ್ನು ಹೊಂದಿದ್ದರೆ, ಇನ್ನು ಕೆಲವರು ದಪ್ಪದಾದ ಮೂಗನ್ನು ಹೊಂದಿರುತ್ತಾರೆ.

ಇವರಲ್ಲಿ ಜಡೆಬಿಡುವ ಪದ್ಧತಿಯೂ ಇದೆ. ತೋರಾಮೆ, ಸಿದ್ಧಾಪೂರ ತಾಲೂಕಿನ ಕಾನಳ್ಳಿ, ಕವನಳ್ಳಿ, ಸುತ್ಲುಮನೆಯ ವಯಸ್ಸಾದ ಹಸಲರ ಗಂಡಸರು ಜಡೆ ಬಿಟ್ಟ ಉದಾಹರಣೆಗಳಿವೆ. ಹಿಂದೆ ಇವರಿಗೆ ಕ್ಷೌರಿಕರು ಕ್ಷೌರ ಮಾಡುತ್ತಿರಲಿಲ್ಲ. ಅಗಸರು ಇವರ ಬಟ್ಟೆಯನ್ನು ಶುಚಿ ಮಾಡುತ್ತಿರಲಿಲ್ಲ. ಆದರೆ ಈಗಿನ ಹಸಲರು ಪೇಟೆಯಲ್ಲಿರುವ ಕ್ಷೌರದ ಅಂಗಡಿಗೆ ಹೋಗಿ ಕ್ಷೌರ ಮಾಡಿಸಿಕೊಂಡು ಬರುತ್ತಾರೆ. ಕಪ್ಪು ಬಣ್ಣದವರಾದ ಹಸಲರ ಹೆಂಗಸರು ಮೃದು ಸ್ವಭಾವದವರು, ಸೇವಾ ಮನೋಭಾವನೆಯುಳ್ಳವರು, ಚುರುಕು ಬುದ್ಧಿಯವರು ಹಾಗೂ ಪ್ರಾಮಾಣಿಕರು ಆದ ಹಸಲರ ಹೆಂಗಸರನ್ನು ಕೃಷ್ಣ ಸುಂದರಿಯರೆಂದರೂ ತಪ್ಪಾಗಲಿಕ್ಕಿಲ್ಲ.

೩.೧.೧ ದಂತಪಂಕ್ತಿ

ಹಸಲರು ಸಾಮಾನ್ಯವಾಗಿ ವಕ್ರದಂತಪಂಕ್ತಿಯನ್ನು ಹೊಂದಿಲ್ಲ. ಇವರು ಸರಳ ದಂತಪಂಕ್ತಿಯನ್ನು ಹೊಂದಿದ್ದಾರೆ. ಇವರು ಯಾವಾಗಲೂ ಕವಳ (ಎಲೆ, ಅಡಿಕೆ) ಅಗಿಯುವುದರಿಂದ ಇವರ ಹಲ್ಲುಗಳು ಯಾವಾಗಲೂ ಕೆಂಬಣ್ಣದಿಂದ ಕೂಡಿರುತ್ತವೆ. ತಮ್ಮ ಹಲ್ಲುಗಳನ್ನು ಸ್ವಚ್ಛಗೊಳಿಸಲು ಇವರು ಮೂರು ಪ್ರಕಾರದ ವಿಧಾನಗಳನ್ನು ಅನುಸರಿಸುತ್ತಾರೆ.

೧) ಭತ್ತದ ಹೊಟ್ಟನ್ನು ಚೆನ್ನಾಗಿ ಸುಟ್ಟ ನಂತರ ಅದರ ಬೂದಿಯನ್ನು ಸಂಗ್ರಹಿಸಿಟ್ಟು ದಿನಾಲೂ ಅದರಿಂದ ಹಲ್ಲುಜ್ಜುವರು.

೨) ಎರಡನೆ ವಿಧಾನವೆಂದರೆ, ಕಟ್ಟಿಗೆ ತುಂಡನ್ನು ಸುಟ್ಟು ಅದರ ಕೆಂಡವನ್ನು ತೆಗೆದು ಅದು ಆರಿದ ನಂತರ ಮಸಿಗೆ ಉಪ್ಪನ್ನು ಬೆರಸಿ ಕುಟ್ಟುವರು. ಆ ಕುಟ್ಟಿದ ಮಸಿ ಪುಡಿಯನ್ನು ಒಂದು ಡಬ್ಬದಲ್ಲಿ ಶೇಖರಿಸಿ, ದಿನಾಲೂ ಉಪಯೋಗಿಸವರು.

೩) ಈ ವಿಧಾನವನ್ನು ಹೆಚ್ಚಾಗಿ ಗಂಡಸರು ಅನುಸರಿಸುವರು. ಕೆಲವರು ದಿನಾಲೂ ಬಯಲು ಶೌಚಾಲಯಕ್ಕೆ ಹೋಗುವಾಗ ಹುಣಸೆ ಮರದ ಅಥವಾ ಕಾಡು ಮರದ ಕಾಂಡವನ್ನು ಬಾಯಿಯಿಂದ ಅರೆದು ಬ್ರೆಸ್‌ನ ಹಾಗೆ ಮಾಡಿ ಹಲ್ಲುಜ್ಜುವರು.

ಆದರೆ ಈಗಿನ ಯುವಕ-ಯುವತಿಯರು ಈ ಪದ್ಧತಿಯನ್ನು ಕೈ ಬಿಟ್ಟು ಪೇಸ್ಟ್ ಮತ್ತು ಬ್ರಷ್‌ನಿಂದ ಹಲ್ಲುಜ್ಜುವರು.

[illegible]

೩.೨ ಉಡುಗೆ ತೊಡುಗೆಗಳು

ಹಸಲರು ವೇಷ ಭೂಷಣಗಳಲ್ಲಿ ಉಳಿದ ಬುಡಕಟ್ಟುಗಳಿಗಿಂತ ಭಿನ್ನರಲ್ಲ. ಹಸಲರ ಗಂಡಸರು ಆರು ಮೊಳದ ಕುರಗೋಡು ಪಂಜೆಯಿಂದ ಸೊಂಟಕ್ಕೆ ಸುತ್ತಿಕೊಳ್ಳುತ್ತಿದ್ದಾರೆ. ಬಣ್ಣದ ಅಂಗಿಯನ್ನು ಧರಿಸುತ್ತಿದ್ದಾರೆ. ತಲೆಗೆ ಪೇಟಾ ಸುತ್ತಿಕೊಳ್ಳುತ್ತಿದ್ದಾರೆ. ಕಿವಿಗೆ ಕಡಕು, ಬಂಗಾರದ ಒಂಟಿ, ಸೊಂಟಕ್ಕೆ ಬೆಳ್ಳಿಯ ನ್ಯಾವಳ ಧರಿಸುತ್ತಿದ್ದಾರೆ. ದಶಕಗಳ ಹಿಂದೆ ಬೈರಾಸ್ ಬಳಸುತ್ತಿದ್ದರು. ವಯಸ್ಸಾದ ಗಂಡಸರು ಬೈರಾಸ್ ಕಟ್ಟುತ್ತಿದ್ದರು. ಇದಕ್ಕೆ 'ಸೊಂಟ ಸುತ್ತುವುದು' ಎಂದು ಕರೆಯುತ್ತಾರೆ.

ಮಹಿಳೆಯರು ಕರಿ ಮತ್ತು ಕೆಂಪು ದಂಡಿನ ಸೀರೆ ತೊಡುತ್ತಾರೆ. ರವಿಕೆ ಹಾಕಿಕೊಳ್ಳುತ್ತಾರೆ. ಕಿವಿಗೆ ಬೆಂಡೋಲೆ, ಬುಗುಡಿ, ಮೂಗಿಗೆ ನತ್ತು, ಕೈಗೆ ಬೆಳ್ಳಿಯ ಕೋಲ್ಗಡದ, ಸೊಂಟಕ್ಕೆ ಗೆಜ್ಜೆಯ ಪಟ್ಟಿಯನ್ನು ಧರಿಸುವರು. ದಶಕಗಳ ಹಿಂದೆ ಹಸಲರ ಹೆಂಗಸರು ರವಿಕೆ ತೊಡುತ್ತಿರಲಿಲ್ಲ. ಸೀರೆಯ ಸೆರಗಿನಿಂದ ಎದೆಯ ಭಾಗವನ್ನು ಮುಚ್ಚಿಕೊಂಡು ಗೊಬ್ಬೆ ಕಟ್ಟಿಕೊಳ್ಳುತ್ತಿದ್ದರು. ಆಧುನಿಕತೆಯ ಪ್ರಭಾವದಿಂದ ಈ ಪದ್ಧತಿ ನಿಂತು ಹೋಗಿದೆ. ಮೇಲ್ವರ್ಗದ ಮಹಿಳೆಯರು ತೊಡುವ ಸಾಮಾನ್ಯ ಉಡುಗೆಯನ್ನೇ ಹಸಲರ ಮಹಿಳೆಯರು ತೊಡುತ್ತಾರೆ. ಈಗ ಗಂಡಸರು ಲುಂಗಿ, ಅಂಗಿ, ಪ್ಯಾಂಟು ಧರಿಸುತ್ತಾರೆ. ಭುಜದ ಮೇಲೆ ಒಂದು ಶಲ್ಯವನ್ನು ಹಾಕುತ್ತಾರೆ ಕೊರಳಲ್ಲಿ ಹಾಗೂ ಕೈಯಲ್ಲಿ ಕಪ್ಪು ದಾರವನ್ನು ಕಟ್ಟಿರುತ್ತಾರೆ. ಹೆಣ್ಣು ಮಕ್ಕಳು ಸೀರೆ, ಕುಪ್ಪಸ, ಬೆಂಡೋಲೆ, ಬುಗುಡಿ, ನತ್ತ, ಕಾಲಲ್ಲಿ ಚೈನು ಧರಿಸುವರು.

ಹಸಲರ ಹೆಣ್ಣು ಮಕ್ಕಳು ತೋಟ ಮತ್ತು ಗದ್ದೆಗಳಲ್ಲಿ ಕೆಲಸಮಾಡುವಾಗ ಶರ್ಟ ಧರಿಸುವರು. ಅಲ್ಲದೇ ತಲೆಗೆ ಅಡಿಕೆ ಟೋಪಿ ಧರಿಸುವರು. ಭಾರವಾದ ವಸ್ತುವನ್ನು ಹೊರುತ್ತಿದ್ದರೆ ಗೋಣಿ ಚೀಲವನ್ನು ಮಡಚಿ ತಮ್ಮ ತಲೆಯ ಮೇಲೆ ಇಟ್ಟುಕೊಂಡು ಅದನ್ನು ಗದ್ದಕ್ಕೆ ಬಿಗಿಯಾಗಿ ಕಟ್ಟಿಕೊಳ್ಳುವರು.

ಮೊದಲು ಮೂಡಿಗೇರಿ ತಾಲೂಕಿನ ಹಸಲರು ಚರ್ಮದ ಚಪ್ಪಲಿ ಧರಿಸುತ್ತಿರಲಿಲ್ಲ. ಚಪ್ಪಲಿ ಧರಿಸಿದವರಿಗೆ ೫೦/- ರೂ, ದಂಡ ವಿಧಿಸಲಾಗುತ್ತಿತ್ತು. ಈ ಪದ್ಧತಿ ಇನ್ನುಳಿದ ತಾಲೂಕುಗಳಲ್ಲಿ ಇಲ್ಲ. ಇಂದು ಮೂಡಿಗೇರಿಯ ತಾಲೂಕಿನ ಹಸಲರು ಕೂಡಾ ಚಪ್ಪಲಿ ಧರಿಸುತ್ತಾರೆ.

ಮದುವೆಯಾದ ಹಸಲರ ಹೆಂಗಸರು ಬೆಂಡೋಲೆ, ಕರಿಮಣಿಗಳಿಂದ ಪೋಣಿಸಿರುವ ತಾಳೆಸರ, ಕಾಲುಂಗುರ ಧರಿಸುವರು. ವಿಧವೆಯರು ಗಾಜಿನ ಬಳೆ, ಕಾಲುಂಗುರ, ಮೂಗುತಿ, ತಾಳೆಸರ ಧರಿಸುವಂತಿರಲಿಲ್ಲ. ಆದರೆ ಇಂದು ಹಿರೇಮನೆಯ ವಿಧವೆ ಕೂಡಾ ಕುಂಕುಮದ ಬದಲಾಗಿ ಬಿಂದಿಯನ್ನು ಹಣೆಗೆ ಹಚ್ಚಿಕೊಳ್ಳುತ್ತಾರೆ. ಕಪ್ಪು ಮಣಿಗಳ ಸರವನ್ನು ತಾಳಿ ಇರದೇ ಕೊರಳಲ್ಲಿ ಹಾಕಿಕೊಳ್ಳುತ್ತಾರೆ. ಅಲ್ಲದೆ ಬೆಳ್ಳಿಯ ಬಳೆಗಳನ್ನು ಕೈಯಲ್ಲಿ ಹಾಕಿಕೊಳ್ಳಲು ಪ್ರಾರಂಭಿಸಿದ್ದಾರೆ.

"ಕುಡುಗುಂಜಿ ದ್ವೀಪದಲ್ಲಿರುವ ಹಸಲರು ೧೨ ವರ್ಷದವರಾಗುವವರೆಗೂ ಗಂಡಸರು ಬಟ್ಟೆ ಧರಿಸುತ್ತಿರಲಿಲ್ಲ. ಅದೇ ರೀತಿಯಾಗಿ ಹೆಂಗಸರೂ ಕೂಡಾ ಸೊಂಟದ ಕೆಳಗೆ ಒಂದು ಚಿಕ್ಕ

ಲಂಗವನ್ನು ಮಾತ್ರ ಧರಿಸುತ್ತಿದ್ದರು. ಮೇಲೆ ಕುಪ್ಪಸ ಧರಿಸುತ್ತಿರಲಿಲ್ಲ" (ಭಟ್ಟ ಜಿ.ಎಸ್ :೧೯೯೩ :೨೩). ಆದರೆ ಇಂದು ಕುಪ್ಪಸ ತೊಡುತ್ತಾರೆ.

ಹಿಂದೆ ಹಸಲರು ಪಾದರಕ್ಷೆಗಳನ್ನು ಧರಿಸುತ್ತಿರಲಿಲ್ಲ. ಆದರೆ ಇಂದು ರಬ್ಬರ್ ಮತ್ತು ಕಂಪನಿಯ ಪಾದರಕ್ಷೆಗಳನ್ನು ಧರಿಸುತ್ತಾರೆ. ಹಸಲರು ಹೆಂಗಸರು ತಲೆಯಲ್ಲಿ ಹೂವು ಮುಡಿಯುತ್ತಿರಲಿಲ್ಲ. ಆದರೆ ಇಂದು ಧಾರಾಳವಾಗಿ ಹೂವು ಮುಡಿಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಹಸಲರ ಹೆಂಗಸರು ಬೆಳ್ಳಿ, ಬಂಗಾರದ ಒಡವೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿತ್ತು. ಆದರೆ ಇಂದು ಬೆಳ್ಳಿ, ಬಂಗಾರದ ಒಡವೆಗಳನ್ನು ಧರಿಸುತ್ತಾರೆ. ಆದರೆ ಹಿಂದೆ ಧರಿಸುತ್ತಿದ್ದ ಕಂಚಿನ ಹಿಂಬಳೆಯ ಬದಲಿಗೆ ಕಂಚಿನ ಕಡಗ ಬಂದಿದೆ. ಕಂಚಿನ ಸೊಂಟ ಪಟ್ಟಿಯ ಬದಲಿಗೆ ಚಿಕ್ಕ ಡಾಬುಗಳನ್ನು ಹಾಕುವರು. ಇವುಗಳನ್ನು ವಯಸ್ಸಾದ ಹೆಂಗಸರು ಮಾತ್ರ ಧರಿಸುತ್ತಾರೆ. ಆದರೆ ಇಂದಿನ ಯುವತಿಯರು ಚೂಡಿದಾರ, ಮಿಡಿ ಮುಂತಾದವುಗಳನ್ನು ಹಾಕುವುದರಿಂದ ಈ ಪದ್ಧತಿ ಮಾಯವಾಗಿದೆ. ಹಸಲರ ಹೆಂಗಸರು ವಿಶೇಷ ಸಂದರ್ಭಗಳಲ್ಲಿ ಹೊಸ ಸೀರೆ, ಕುಪ್ಪಸ ತೊಡುತ್ತಾರೆ. ಹಸಲರ ಗಂಡಸರು ವಿಶೇಷ ಸಂದರ್ಭಗಳಲ್ಲಿ ಹತ್ತಿ, ಪಾಲಿಸ್ಟರ್ ಮತ್ತು ನಾರು ವಸ್ತುಗಳನ್ನು ಉಪಯೋಗಿಸುತ್ತಾರೆ. ಆದರೆ ಸೊರಬ ತಾಲೂಕಿನ ಹಸಲರು ರೇಷ್ಮೆ ಪಂಜೆ, ಹೆಣ್ಣು ಮಕ್ಕಳು ರೇಷ್ಮೆ ಸೀರೆ ಕೊರಳಲ್ಲಿ ಬಂಗಾರದ ಆಭರಣಗಳನ್ನು ಧರಿಸುತ್ತಾರೆ. ಧಾರ್ಮಿಕ ಕಾರ್ಯಗಳಲ್ಲಿ ಹಸಲರು ಮೈಲಿಗೆಯಾದ ಹರಿದ ಸೀರೆ ಪಂಜೆಗಳನ್ನು ಧರಿಸುವುದಿಲ್ಲ.

೩.೩ ವಸತಿ ವ್ಯವಸ್ಥೆ

ಪ್ರಾಚೀನ ಕಾಲದಲ್ಲಿ ಮಾನವನು ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದನು. ಯಾವಾಗ ರೆಂಟೆ ಮತ್ತು ಕುಂಟೆಗಳ ಸಹಾಯದಿಂದ ಒಕ್ಕಲುತನ ಪ್ರಾರಂಭಿಸಿದನೋ ಆವಾಗ ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದನು. ಒಂದು ಕಡೆ ಆತ ನೆಲೆ ನಿಲ್ಲಬೇಕಾದರೆ, ನೀರಿನ ಸೌಕರ್ಯ ಮತ್ತು ಫಲವತ್ತಾದ ಮಣ್ಣು ಎಲ್ಲಿ ಇರುವುದೋ ಅಲ್ಲಿ ವಾಸಿಸುವನು. ಅದೇ ರೀತಿಯಾಗಿ ಹಸಲರು ಕೂಡಾ ತಮ್ಮ ವಸತಿ ವ್ಯವಸ್ಥೆಯನ್ನು ನೀರಿನ ಹತ್ತಿರವೇ ಮಾಡಿಕೊಂಡಿದ್ದಾರೆ. ಇವರು ತಮ್ಮ ಮನೆಗಳನ್ನು ನಿರ್ಮಿಸಬೇಕಾದರೆ ಭಟ್ಟರು ಅಥವಾ ಗಾರುಡಿಗರ ಹತ್ತಿರ ಹೋಗಿ ಭವಿಷ್ಯ ಕೇಳುವರು. ಆತನು ಸೂಚಿಸಿದ ಜಾಗದಲ್ಲಿಯೆ ಅವರು ವಸತಿ ವ್ಯವಸ್ಥೆಯನ್ನು ಮಾಡುವರು. ಗಾರುಡಿಗ ಕೊಟ್ಟ ಕೆಲವು ಪೂಜಾ ಸಾಮಾನುಗಳನ್ನು ತಂದು ತಾವು ಮನೆ ಕಟ್ಟುವ ಜಾಗದಲ್ಲಿ ಹುಯ್ದು ಅದರ ಮೇಲೆ ಮನೆ ಕಟ್ಟುವರು. ಮೊದಲು ಹಸಲರು ಕಾಡುಗಳಲ್ಲಿ ವಾಸ ಮಾಡುವುದರಿಂದ ಚಿಕ್ಕದಾದ ಗುಡಿಸಲನ್ನು ನಿರ್ಮಿಸಿ, ಅದಕ್ಕೆ ಅಡಕೆ ಸೋಗೆಯನ್ನು ಹೊದಿಸುತ್ತಿದ್ದರು. ಆದರೆ ಈಗ ಅವರು ಗುಡ್ಡದಲ್ಲಿಯ ಕೆಂಪು ಮಣ್ಣನ್ನು ಇಟ್ಟಿಗೆಗಳ ಹಾಗೆ ಕಡಿದು ಆ ಇಟ್ಟಿಗೆಗಳಿಂದ ಮನೆಯನ್ನು ಕಟ್ಟುತ್ತಾರೆ. ಶ್ರೀಮಂತರು ಮಂಗಳೂರು ಹಂಚು ಹೊದಿಸುತ್ತಾರೆ. ಬಡವರು ಅಡಿಕೆಯ ಸೋಗೆಯನ್ನು ಹೊದಿಸುವರು. ಇವರ ಮನೆಗಳು ಆಯತಾಕಾರದಲ್ಲಿವೆ. ಇವರು ಮಲೆನಾಡಿನ ಮನೆಗಳ ಹಾಗೆ

[illegible]

ಮೊದಲಿನ ವರಾಂಡ ಸ್ವಲ್ಪ ಎತ್ತರಕ್ಕೆ ಅಡುಗೆ ಮನೆ ಅದಕ್ಕಿಂತ ಎತ್ತವಿರುತ್ತದೆ. ಅದಕ್ಕೆ ಹೊಂದಿಕೊಂಡಂತೆ ಬಚ್ಚಲು ಮನೆ ಮತ್ತು ಕೊಟ್ಟಿಗೆ ಮನೆಗಳಿರುತ್ತವೆ. ಇವರು ವರಾಂಡಕ್ಕೆ ಎರಡು ಚಿಕ್ಕ ಕಿಡಕಿಗಳನ್ನು ಬಿಟ್ಟಿರುವರು ಮತ್ತು ಒಂದು ಸಣ್ಣ ಬಾಗಿಲನ್ನು ಬಿಡುವರು. ಕಿಡಕಿಗಳಿಗೆ ಮೂರು ಕಬ್ಬಿಣದ ಸರಳುಗಳನ್ನು ಹಾಕಿರುವರು. ಕೆಲವು ಕಡೆ ಬಾಗಿಲು ಬದಲಾಗಿ ಅಡಿಕೆ ಸೋಗೆ ಬಿದಿರಿನಿಂದ ನಿರ್ಮಿಸಿದ ಬಾಗಿಲುಗಳಿವೆ. ಇವರು ಬಾಗಿಲುಗಳಿಗೆ ಬೀಗ ಹಾಕುವ ಬದಲಿ, ಕಬ್ಬಿಣದ ಸರಳಿಗೆ ದಾರವನ್ನು ಕಟ್ಟಿ ಬಾಗಿಲಿಗೆ ಕಟ್ಟುವರು. ಅಡುಗೆ ಮನೆಯ ಹಿಂದುಗಡೆ ಒಂದು ಬಾಗಿಲನ್ನು ಬಿಟ್ಟಿರುತ್ತಾರೆ. ಮನೆಯ ಒಳಗಡೆ ಎಡಭಾಗದಲ್ಲಿ 'ಹೊರಸಲ' ಗುಂಡಿ ಇರುತ್ತದೆ. ಈ ಗುಂಡಿಯ ಮೇಲುಗಡೆ ನಾಲ್ಕು ಅಡಿ ಎತ್ತರದಲ್ಲಿ 'ಬೈಸಲು' ಕಟ್ಟಿರುತ್ತಾರೆ. ಹೊಸಲಿನಲ್ಲಿ ಚಳಿಗಾಲ ಮತ್ತು ಮಳೆಗಾಲದಲ್ಲಿ ಯಾವಾಗಲೂ ಬೆಂಕಿ ಹಾಕಿರುತ್ತಾರೆ. ಅಲ್ಲದೆ ಮಾಂಸವನ್ನು ಕೂಡಾ ಇಲ್ಲೆ ಒಣಗಿಸುತ್ತಾರೆ. ನಡುಮನೆಯ ಒಂದು ಕಡೆ ಭತ್ತ ಕುಟ್ಟಲು ಒರಳನ್ನು ಮಾಡಿರುತ್ತಾರೆ. ಇವರಲ್ಲಿ ಪ್ರತ್ಯೇಕವಾದ ದೇವರ ಮನೆಗಳಿರುವುದಿಲ್ಲ. ಇವರ ಮನೆಯಲ್ಲಿ ಹೆಚ್ಚಾಗಿ ಪ್ರಾದೇಶಿಕವಾದ ಹಿಂದೂ ದೇವರುಗಳ ಫೋಟೋಗಳನ್ನು ತೂಗು ಹಾಕಿರುತ್ತಾರೆ. ಹಸಲರ ಮಹಿಳೆಯರು ಮನೆಯನ್ನು ಯಾವಾಗಲೂ ಸ್ವಚ್ಛವಾಗಿ ಇಡುತ್ತಾರೆ. ಮನೆಯನ್ನು ಕೆಂಪು ಮಣ್ಣು ಅಥವಾ ಸೆಗಣಿಯಿಂದ ಸಾರಿಸುತ್ತಾರೆ. ಮನೆಯ ವರಾಂಡದ ಎದುರಿಗೆ ಎಲ್ಲರ ಮನೆಯಲ್ಲಿಯೂ ತುಳಸಿ ಕಟ್ಟೆಯನ್ನು ಕಟ್ಟಿರುತ್ತಾರೆ. ಹಸಲರ ಹೆಣ್ಣು ಮಕ್ಕಳು ದಿನಾಲು ಮನೆಯ ಅಂಗಳದಲ್ಲಿ ರಂಗೋಲಿ ಹಾಕುವರು. ಕೆಲವರು ಅಂಗಳದ ಹಿಂದುಗಡೆ ತೊಂಡೆ, ಬಸಳೆ ಬಳ್ಳಿಗಳನ್ನು ಬೆಳೆಸುತ್ತಾರೆ. ಇವರು ತಮ್ಮ ಕೈತೋಟ ಮತ್ತು ತಮ್ಮನ್ನು ಕಾಡು ಪ್ರಾಣಿಗಳಿಂದ ರಕ್ಷಿಸಲು ಮನೆಯ ಸುತ್ತಲೂ ಬಿದಿರಿನ ಬೇಲಿ ಹಾಕಿರುವರು. ಬೇಲಿಗೆ ಮನೆಯ ಮುಂದೆ ಒಂದು ಸಣ್ಣ ಬಾಗಿಲನ್ನು ಬಿಟ್ಟಿರುವರು. ಬಾಗಿಲ ಎರಡು ಕಡೆ ಕಟ್ಟಿಗೆಗಳನ್ನು ನೆಟ್ಟು ಮೂರು ರಂಧ್ರಗಳನ್ನು ಕೊರೆಯುವರು. ಆ ರಂಧ್ರದಲ್ಲಿ ಮೂರು ಕೋಲುಗಳನ್ನು ತೂರಿಸುವರು. ಮನೆಯ ಹೊರಗಡೆ ಹೋಗುವಾಗ ಕೋಲುಗಳನ್ನು ರಂಧ್ರದಲ್ಲಿ ಸಿಗಿಸಿ ಹೋಗುತ್ತಾರೆ. ಇವರು ಬೈಲು ಶೌಚಾಲಯಕ್ಕೆ ಹೋಗುತ್ತಾರೆ. ಆದರೆ ಪುನರ್ವಸತಿ ಕಲ್ಪಿಸಿದ ಹಸಲರ ಹಾಡಿಕೇರಿಗಳಲ್ಲಿಯ ಪ್ರತಿ ಮನೆಗೂ ಶೇ. ೧೮ರ ಅನುದಾನದಲ್ಲಿ ನಾಲ್ಕು ಸಾವಿರ ರೂಪಾಯಿಗಳನ್ನು ಶೌಚಾಲಯ ಕಟ್ಟಲು ಧನ ಸಹಾಯ ಮಾಡಿದರೂ ಕೂಡಾ ಯಾರೂ ಶೌಚಾಲಯ ಕಟ್ಟಲು ಮುಂದೆ ಬರಲಿಲ್ಲ. ಏಕೆಂದರೆ, ಶೌಚಾಲಯ ಕಟ್ಟಲು ಸುಮಾರು ೧೦,೦೦೦/- ಗಳವರೆಗೆ ಖರ್ಚು ಇದೆ. ಆದರೆ ಸರಕಾರವು ಕೇವಲ ೪೦೦೦/-ರೂ, ಕೊಡುವುದರಿಂದ ಉಳಿದ ೬೦೦೦/- ರೂ, ಸಾಲ ಮಾಡಿ ತರಬೇಕಾಗುತ್ತದೆ. ಮೊದಲೇ ಬಡತನದಿಂದ ಬಳಲುತ್ತಿರುವ ನಾವು ಅದರ ಗೊಡವೆಯೇ ಬೇಡ ಎಂದು ಬೈಲು ಶೌಚಾಲಯಕ್ಕೆ ಹೋಗುತ್ತೇವೆಂದು ಬೆಳ್ಳೆಣ್ಣೆಯ ಶ್ರೀನಿವಾಸ ತಿಮ್ಮ ಹೇಳುತ್ತಾನೆ.

[illegible]

ಕೋಷ್ಟಕ–೩.೧ ಸಮೀಕ್ಷೆ ಮಾಡಿದ ಹಸಲರ ಮನೆಗಳ ರಚನೆ

ಜಿಲ್ಲೆಗಳು		ಮನೆಗಳ ರಚನೆ		ಒಟ್ಟು
		ಕೂಡು ಮನೆಗಳು	ಚದುರಿದ ಮನೆಗಳು	
ಉತ್ತರ ಕನ್ನಡ	ಒಟ್ಟು	೫೦	೬೬	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೪೩.೧%	೫೬.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೩.೧%	೧೬.೫%	೨೨.೪%
	ಒಟ್ಟು ಪ್ರತಿಶತ	೯.೭%	೧೨.೮%	೨೨.೪%
ಉಡುಪಿ	ಒಟ್ಟು	–	೭೨	೭೨
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೧೮.೦%	೧೩.೯%
	ಒಟ್ಟು ಪ್ರತಿಶತ	–	೧೩.೯%	೧೩.೯%
ಚಿಕ್ಕಮಗಳೂರು	ಒಟ್ಟು	೧	೧೦೫	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೯%	೯೯.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೯.೦%	೨೬.೨%	೨೦.೫%
	ಒಟ್ಟು ಪ್ರತಿಶತ	೨%	೨೦.೩%	೨೦.೫%
ದಕ್ಷಿಣ ಕನ್ನಡ	ಒಟ್ಟು	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೧.೫%	೧.೨%
	ಒಟ್ಟು ಪ್ರತಿಶತ	–	೧.೨%	೧.೨%
ಶಿವಮೊಗ್ಗ	ಒಟ್ಟು	೬೫	೧೫೨	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೩೦.೦%	೭೦.೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	೫೬.೦%	೩೭.೯%	೪೨.೦%
	ಒಟ್ಟು ಪ್ರತಿಶತ	೧೨.೬%	೨೯.೪%	೪೨%
ಒಟ್ಟು	ಒಟ್ಟು	೧೧೬	೪೦೧	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೨೨.೪%	೭೭.೬%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೨೨.೪%	೭೭.೬%	೧೦೦%

ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳು ೫೧೭. ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೧೧೬. ಇದರಲ್ಲಿ ೫೦ ಕೂಡು ಮನೆಗಳನ್ನು ಸಮೀಕ್ಷೆ ಮಾಡಿದರೆ, ೬೬ ಚದುರಿದ ಮನೆಗಳನ್ನು ಸಮೀಕ್ಷೆಮಾಡಲಾಗಿದೆ. ಒಟ್ಟು ೫ ಜಿಲ್ಲೆಗಳನ್ನು ಒಳಗೊಂಡು ೧೧೬ ಮನೆಗಳು ಕೂಡು ಮನೆಗಳಾದರೆ, ೪೦೧ ಚದುರಿದ ಮನೆಗಳಾಗಿವೆ.

ಈ ಅಂಕಿಅಂಶಗಳಿಂದ ತಿಳಿದುಬರುವುದೇನೆಂದರೆ ಹಸಲರು ಏಕಾಂತ ಪ್ರಿಯರು. ಅಲ್ಲದೇ ಒಂಟಿ ಕುಟುಂಬದವರಾಗಿ ಇರಲು ಇಷ್ಟಪಡುತ್ತಾರೆ.

ಕೊಷ್ಟಕ ೩.೨ರಲ್ಲಿ ಇರುವಂತೆ ಸಮೀಕ್ಷೆಗೊಳಪಟ್ಟ ಮಾಹಿತಿದಾರರ ಮನೆಯ ವಿವರ ಈ ಕೆಳಗಿನಂತಿದೆ.

ಸಮೀಕ್ಷೆ ಮಾಡಿದ ಉತ್ತರ ಕನ್ನಡ ಜಿಲ್ಲೆಯ ೧೧೬ ಮನೆಯ ಮಾಹಿತಿದಾರರಲ್ಲಿ ಎರಡು ಗುಡಿಸಲುಗಳಿವೆ. ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ.೧.೭ರಷ್ಟಿದೆ. ಐದು ಜಿಲ್ಲೆಯ ಮಾಹಿತಿದಾರರು ಹೊಂದಿರುವ ಗುಡಿಸಲುಗಳಲ್ಲಿ ಇವರ ಪ್ರಮಾಣ ಶೇ. ೧೫.೪ರಷ್ಟಿದೆ. ಹಂಚಿನ ಮನೆ ಹೊಂದಿರುವವರ ಸಂಖ್ಯೆ ೩೪, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೨೯.೩ರಷ್ಟು ಆದರೆ ಐದು ಜಿಲ್ಲೆಗಳಲ್ಲಿ ಇವರ ಪ್ರಮಾಣ ಶೇ. ೧೦.೪ರಷ್ಟಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಆರ್.ಸಿ.ಸಿ ಮನೆ ಹೊಂದಿದವರ ಸಂಖ್ಯೆ ಒಂದು. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೯ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೯.೧ರಷ್ಟಾಗುತ್ತದೆ. ಆಶ್ರಯ ಮನೆಗಳನ್ನು ಹೊಂದಿದವರ ಸಂಖ್ಯೆ ೭೮, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೬೭.೨ರಷ್ಟು ಐದು ಜಿಲ್ಲೆಗಳನ್ನೊಳ ಗೊಂಡಾಗ ಶೇ. ೩೧.೬ರಷ್ಟಾಗುತ್ತದೆ. ಬಾಡಿಗೆ ಮನೆ ಹೊಂದಿರುವವರ ಸಂಖ್ಯೆ ಕೇವಲ ಒಂದು. ಇವರ ಪ್ರಮಾಣ ಶೇ. ೯ರಷ್ಟಾದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಶೇ. ೩೩.೩ರಷ್ಟಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಗುಡಿಸಲುಗಳು ಹೊಂದಿರುವವರ ಸಂಖ್ಯೆ ಎರಡು. ಇವರ ಶೇ. ಪ್ರಮಾಣ ೨.೮ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೫.೪ರಷ್ಟಾಗುತ್ತದೆ. ಹಂಚಿನ ಮನೆ ಹೊಂದಿರುವವರ ಸಂಖ್ಯೆ ೨೫, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೩೪.೭ರಷ್ಟು ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೦.೩ ರಷ್ಟಾಗುತ್ತದೆ. ಆರ್.ಸಿ.ಸಿ ಮನೆ ಹೊಂದಿರುವವರ ಸಂಖ್ಯೆ ಕೇವಲ ಒಂದು. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧.೪ರಷ್ಟಾದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೯.೧ರಷ್ಟಾಗುತ್ತದೆ. ಆಶ್ರಯ ಮನೆಗಳನ್ನು ಹೊಂದಿರುವವರ ಸಂಖ್ಯೆ ೪೪, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೬೧.೧ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೭.೮ರಷ್ಟಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ಮಾಹಿತಿದಾರರ ಮನೆಗಳು ೧೦೬, ಇದರಲ್ಲಿ ಗುಡಿಸಲುಗಳು ಹೊಂದಿರುವವರ ಸಂಖ್ಯೆ ೨, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧.೯ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ

ಕೋಷ್ಟಕ- ೩.೨ ಸಮೀಕ್ಷೆ ಮಾಡಿದ ಹಸಲರ ಮನೆಗಳ ವಿವರ

ಜಿಲ್ಲೆಗಳು		ಗುಡಿಸಲು	ಹಂಚಿನಮನೆ	ಆರ್.ಸಿ.ಸಿ	ಆಶ್ರಯಮನೆ	ಬಾಡಿಗೆಮನೆ	ಒಟ್ಟು
ಉತ್ತರ ಕನ್ನಡ	ಒಟ್ಟು	೨	೩೪	೧	೭೮	೧	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೧.೭%	೨೯.೩%	೯%	೬೭.೨%	೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೫.೪%	೧೦.೪%	೯.೧%	೩೧.೬%	೩೩.೩%	೨೨.೪%
	ಒಟ್ಟು ಪ್ರತಿಶತ	೪%	೬.೬%	೨%	೧೫.೧%	೨%	೨೨.೪%
ಉಡುಪಿ	ಒಟ್ಟು	೨	೨೫	೧	೪೪	–	೭೨
	ಪ್ರತಿಶತ (ಜಿಲ್ಲೆಯೊಳಗೆ)	೨.೮%	೩೪.೭%	೧.೪%	೬೧.೧%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೫.೪%	೧೦.೩%	೯.೧%	೧೭.೮%	–	೧೩.೯%
	ಒಟ್ಟು ಪ್ರತಿಶತ	೪%	೪.೮%	೨%	೮.೫%	–	೧೩.೯%
ಚಿಕ್ಕಮಗಳೂರು	ಒಟ್ಟು	೨	೫೬	–	೪೭	೧	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೧.೯%	೫೨.೮%	–	೪೪.೩%	೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೫.೪%	೨೩.೦%	–	೧೯.೦%	೩೩.೩%	೨೦.೫%
	ಒಟ್ಟು ಪ್ರತಿಶತ	೪%	೧೦.೮%	–	೯.೧%	೨%	೨೦.೫%
ದಕ್ಷಿಣ ಕನ್ನಡ	ಒಟ್ಟು	–	–	೫	–	೧	೬
	ಪ್ರತಿಶತ (ಜಿಲ್ಲೆಯೊಳಗೆ)	–	–	೮೩.೩%	–	೧೬.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	೪೫.೫%	–	೩೩.೩%	೧.೨%
	ಒಟ್ಟು ಪ್ರತಿಶತ	–	–	೧%	–	೨%	೧.೨%

ಜಿಲ್ಲೆಗಳು		ಗುಡಿಸಲು	ಹಂಚಿನಮನೆ	ಆರ್.ಸಿ.ಸಿ	ಆಶ್ರಯಮನೆ	ಬಾಡಿಗೆಮನೆ	ಒಟ್ಟು
ಶಿವಮೊಗ್ಗ	ಒಟ್ಟು	೭	೧೨೮	೪	೭೮	–	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೩.೨%	೫೯.೦%	೧.೮%	೩೧.೬%	–	೪೨%
	ಪ್ರತಿಶತ (ವರ್ಗಗಳಲ್ಲಿ)	೫೩.೮%	೫೨.೭%	೩೬.೪%	೩೧.೬%	–	೪೨%
	ಒಟ್ಟು ಪ್ರತಿಶತ	೧.೪%	೨೪.೮%	೮%	೧೫.೧%	–	೪೨%
ಒಟ್ಟು	ಒಟ್ಟು	೧೩	೨೪೩	೧೧	೨೪೭	೩	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೨.೫%	೪೭%	೨.೧%	೪೭.೮%	೬%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೨.೫%	೪೭.೦%	೨.೧%	೪೭.೮%	೬%	೧೦೦%

ಪ್ರಮಾಣ ಶೇ. ೧೫.೪ ರಷ್ಟಾಗುತ್ತದೆ. ಹಂಚಿನ ಮನೆ ಹೊಂದಿರುವವ ಸಂಖ್ಯೆ ೫೬, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೫೨.೮ ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೩ ರಷ್ಟಾಗುತ್ತದೆ. ಆಶ್ರಯ ಮನೆಗಳನ್ನು ಹೊಂದಿರುವವರ ಸಂಖ್ಯೆ ೪೭, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೪೪.೩ ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೯.೩ ರಷ್ಟಾಗುತ್ತದೆ. ಬಾಡಿಗೆ ಮನೆ ಹೊಂದಿರುವವರ ಸಂಖ್ಯೆ ಕೇವಲ ಒಂದು. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೯ ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೩೩.೩೩ ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುಡಿಸಲುಗಳನ್ನು ಹೊಂದಿರುವವರು ಇರುವುದಿಲ್ಲ. ಐದು ಆರ್.ಸಿ.ಸಿ ಮನೆಗಳಿದ್ದರೆ, ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೮೩.೩ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೪೫.೫ ರಷ್ಟಾಗುತ್ತದೆ. ಬಾಡಿಗೆ ಮನೆ ಹೊಂದಿದವರ ಸಂಖ್ಯೆ ಕೇವಲ ಒಂದು. ಇವರ ಪ್ರಮಾಣ ಶೇ. ೧೬.೭ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಶೇ. ೩೩.೩೩ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳು ೨೧೫, ಇದರಲ್ಲಿ ೭ ಕುಟುಂಬಗಳು ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೩.೨ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಶೇ. ೫೩.೮ರಷ್ಟಾಗುತ್ತದೆ. ಹಂಚಿನ ಮನೆ ಹೊಂದಿರುವವರ ಸಂಖ್ಯೆ ೧೨೮, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೫೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಶೇ. ೫೨.೭ರಷ್ಟಾಗುತ್ತದೆ. ಆರ್.ಸಿ.ಸಿ ಮನೆ ಹೊಂದಿರುವವರ ಸಂಖ್ಯೆ ೪, ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧.೮ ರಷ್ಟು, ಐದು ಜಿಲ್ಲಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೩೬.೬ರಷ್ಟಾಗುತ್ತದೆ. ಹಿಂದೆ ಹಸಲರು ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಆದರೆ ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಅವರಲ್ಲಿ ಗುಡಿಸಲುವಾಸಿಗಳ ಸಂಖ್ಯೆ ಕಡಿಮೆಯಾಗಿದೆ. ಇದಕ್ಕೆ ಸರಕಾರದ ಆಶ್ರಯ ಮನೆಗಳು ಕಾರಣ. ಅಲ್ಲದೆ ಇವರು ಆರ್ಥಿಕವಾಗಿ ಸಬಲರಾಗಲು ಪ್ರಾರಂಭಿಸಿದ್ದರಿಂದ ಇವರು ಹಂಚಿನ ಮನೆಗಳನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದ್ದಾರೆ.

ಕೋಷ್ಟಕ–೩.೩ ಸಮೀಕ್ಷೆ ಮಾಡಿದ ಕುಟುಂಬಗಳಿಗೆ ಸರಕಾರ ಮಾಡಿದ ನೀರಿನ ಸೌಲಭ್ಯದ ವಿವರ

ಜಿಲ್ಲೆಗಳು		ನೀರಿನ ಸೌಲಭ್ಯ		ಒಟ್ಟು
		ಇದೆ	ಇಲ್ಲ	
ಉತ್ತರ ಕನ್ನಡ	ಒಟ್ಟು	೬೩	೫೩	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೫೪.೩%	೪೫.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೯.೬%	೨೦.೭%	೨೨.೪%
	ಒಟ್ಟು ಪ್ರತಿಶತ	೧೨.೨%	೧೦.೩%	೨೨.೪%
ಉಡುಪಿ	ಒಟ್ಟು	೫೮	೧೪	೭೨
	ಪ್ರತಿಶತ (ಜಿಲ್ಲೆಯೊಳಗೆ)	೮೦.೬%	೧೯.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೮.೧%	೭.೧%	೧೩.೯%
	ಒಟ್ಟು ಪ್ರತಿಶತ	೧೧.೨%	೨.೭%	೧೩.೩%
ಚಿಕ್ಕಮಗಳೂರು	ಒಟ್ಟು	೬೨	೪೪	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೫೮.೫%	೪೧.೫%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೯.೩%	೨೨.೪%	೨೦.೫%
	ಒಟ್ಟು ಪ್ರತಿಶತ	೧೨%	೮.೫%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧.೯%	–	೧.೨%
	ಒಟ್ಟು ಪ್ರತಿಶತ	೧.೨%	–	೧.೨%
ಶಿವಮೊಗ್ಗ	ಒಟ್ಟು	೧೩೨	೮೫	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೬೦.೮%	೩೯.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೧.೧%	೪೩.೪%	೪೨%
ಒಟ್ಟು	ಒಟ್ಟು	೩೨೧	೧೯೬	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೬೨.೧%	೩೭.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೬೨.೧%	೩೭.೯%	೧೦೦%

[illegible]

ಕೋಷ್ಟಕ-೩.೪ ಸಮೀಕ್ಷೆ ಮಾಡಿದ ಹಸಲರು ಅನುಷಂಗಿಕ ಸಹಾಯಪಡೆದು ಕಟ್ಟಿದ ಶೌಚಾಲಯದ ವಿವರ

ಜಿಲ್ಲೆಗಳು		ಶೌಚಾಲಯದ ವಿವರ		ಒಟ್ಟು
		ಅನುಷಂಗಿಕ ಸಹಾಯ ಪಡೆದವರು	ಬಯಲು ಶೌಚಾಲಯ	
ಉತ್ತರ ಕನ್ನಡ	ಒಟ್ಟು	೪೬	೭೦	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೩೯.೭%	೬೦.೩%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೬.೩%	೨೯.೯%	೨೨.೪%
	ಒಟ್ಟು ಪ್ರತಿಶತ	೮.೯%	೧೩.೫%	೨೨.೪%
ಉಡುಪಿ	ಒಟ್ಟು	೩೮	೩೪	೭೨
	ಪ್ರತಿಶತ (ಜಿಲ್ಲೆಯೊಳಗೆ)	೫೨.೮%	೪೭.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೩.೪%	೧೪.೫%	೧೩.೯%
	ಒಟ್ಟು ಪ್ರತಿಶತ	೭.೪%	೬.೬%	೧೩.೯%
ಚಿಕ್ಕಮಗಳೂರು	ಒಟ್ಟು	೭೫%	೩೧%	೧೦೬%
	ಪ್ರತಿಶತ (ಜಿಲ್ಲೆಯೊಳಗೆ)	೭೦.೮%	೨೯.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೬.೫%	೧೩.೨%	೨೦.೫%
	ಒಟ್ಟು ಪ್ರತಿಶತ	೧೪.೫%	೬.೦%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	-	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	-	೧೦೦%
	ಪ್ರತಿಶತ (ವರ್ಗಗಳಲ್ಲಿ)	೨.೧%	-	೧.೨%
	ಒಟ್ಟು ಪ್ರತಿಶತ	೧.೨%	-	೧.೨%
ಶಿವಮೊಗ್ಗ	ಒಟ್ಟು	೧೧೮	೯೯	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೫೪.೪%	೪೫.೬%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೧.೭%	೪೨.೩%	೪೨%
	ಒಟ್ಟು ಪ್ರತಿಶತ	೨೨.೮%	೯೧.೧%	೪೨.೦%
ಒಟ್ಟು	ಒಟ್ಟು	೨೮೩	೨೩೪	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೫೭.೭%	೪೫.೩%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೫೪.೭%	೪೫.೩%	೧೦೦%

ಸಮೀಕ್ಷೆಗೊಳಪಟ್ಟ ಉತ್ತರ ಕನ್ನಡ ಜಿಲ್ಲೆಯ ೧೧೬ ಕುಟುಂಬಗಳಲ್ಲಿ ೪೬ ಕುಟುಂಬಗಳು ಶೌಚಾಲಯವನ್ನು ಹೊಂದಿವೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೯.೭ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೬.೩ ರಷ್ಟಾಗುತ್ತದೆ. ಇನ್ನುಳಿದ ೭೦ ಮನೆಗಳ ಸದಸ್ಯರು ಬಯಲು ಶೌಚಾಲಯಕ್ಕೆ ಹೋಗುತ್ತಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೬೦.೩ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೯.೯ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ಉಡುಪಿ ಜಿಲ್ಲೆಯ ೭೨ ಕುಟುಂಬಗಳಲ್ಲಿ ೩೮ ಕುಟುಂಬಗಳು ಶೌಚಾಲಯವನ್ನು ಹೊಂದಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೫೨.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೩.೪ ರಷ್ಟಾಗುತ್ತದೆ. ಇನ್ನುಳಿದ ೩೪ ಕುಟುಂಬಗಳು ಬಯಲು ಶೌಚಾಲಯಕ್ಕೆ ಹೋಗುತ್ತಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೪೭.೨ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೪.೫ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ಚಿಕ್ಕಮಗಳೂರು ಜಿಲ್ಲೆಯ ೧೦೬ ಕುಟುಂಬಗಳಲ್ಲಿ ೭೫ ಕುಟುಂಬದವರು ಶೌಚಾಲಯವನ್ನು ಹೊಂದಿದ್ದಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೭೦.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೬.೫ ರಷ್ಟಾಗುತ್ತದೆ. ಇನ್ನುಳಿದ ೩೧ ಕುಟುಂಬಗಳು ಬಯಲು ಶೌಚಾಲಯಕ್ಕೆ ಹೋಗುತ್ತಾರೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೨೯.೨ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೩.೮ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ದಕ್ಷಿಣ ಕನ್ನಡ ಜಿಲ್ಲೆಯ ೬ ಕುಟುಂಬಗಳು ಶೌಚಾಲಯವನ್ನು ಹೊಂದಿದ್ದಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦೦ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨.೧ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ಶಿವಮೊಗ್ಗ ಜಿಲ್ಲೆಯ ೨೧೭ ಕುಟುಂಬಗಳಲ್ಲಿ ೧೧೮ ಕುಟುಬಗಳು ಶೌಚಾಲಯವನ್ನು ಹೊಂದಿವೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೫೪.೪ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೧.೭ ರಷ್ಟಾಗುತ್ತದೆ. ಇನ್ನುಳಿದ ೯೯ ಕುಟುಂಬದ ಸದಸ್ಯರು ಬಯಲು ಶೌಚಾಲಯಕ್ಕೆ ಹೋಗುತ್ತಾರೆ. ಜಿಲ್ಲೆಯ ಇದರ ಪ್ರಮಾಣ ಶೇ. ೪೫.೬ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೨.೩ ರಷ್ಟಾಗುತ್ತದೆ.

ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಶೇ.೫೦ ಕ್ಕಿಂತ ಹೆಚ್ಚು ಹಸಲರು ಶೌಚಾಲಯಗಳನ್ನು ಉಪಯೋಗಿಸುತ್ತಾರೆಂಬ ನಿರ್ಣಯಕ್ಕೆ ಬರಬಹುದು. ಆದರೆ ವಾಸ್ತವ ಸ್ಥಿತಿಯೇ ಬೇರೆ ಇದೆ. ಶೌಚಾಲಯಗಳನ್ನು ಕಟ್ಟಲು ಆನುಷಂಗಿಕವಾಗಿ ಹಣಕಾಸಿನ ಸಹಾಯವನ್ನು ಪಡೆದು ಶೌಚಾಲಯಗಳನ್ನು ಕಟ್ಟಿಸಿದ್ದಾರೆ. ಆದರೆ, ಹಣ ಸಾಲದೇ ಇರುವುದರಿಂದ ಶೌಚಾಲಯಗಳು ಅರ್ಧಮರ್ಧ ಕಟ್ಟಿ ಅದರಲ್ಲಿ ಕಟ್ಟಿಗೆ, ತೆಂಗಿನ ಗರಿಕೆ ಮುಂತಾದವುಗಳನ್ನಿಟ್ಟಿದ್ದಾರೆ. ಶೌಚಾಲಯಗಳನ್ನು ವಾಸ್ತವವಾಗಿ ಉಪಯೋಗಿಸುವವರು ಶೇ. ೫ ಕ್ಕಿಂತ ಕಡಿಮೆ. ಏಕೆಂದರೆ, ಶೌಚಾಲಯಕ್ಕೆ ಸರಿಯಾದ ಗುಂಡಿಗಳು ಇರದೇ ಇರುವುದರಿಂದ ಗುಂಡಿಗಳು ತುಂಬಿದರೆ ಎಂಬ ಅಳುಕಿನಿಂದ ಎಲ್ಲರೂ ಬಯಲು ಶೌಚಾಲಯಕ್ಕೆ ಹೋಗುತ್ತಾರೆ.

ಕೋಷ್ಟಕ– ೩.೫ ಸಮೀಕ್ಷೆ ಮಾಡಿದ ಹಸಲರ ಮನೆಗಳಿಗೆ ವಿದ್ಯುತ್ ಸೌಲಭ್ಯ ವಿವರ

ಜಿಲ್ಲೆಗಳು		ವಿದ್ಯುತ್ ಸೌಲಭ್ಯ ಇದೆ	ವಿದ್ಯುತ್ ಸೌಲಭ್ಯ ಇಲ್ಲ	ಒಟ್ಟು
ಉತ್ತರ ಕನ್ನಡ	ಒಟ್ಟು	೧೦೪	೧೨	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೮೯.೭%	೧೦.೩%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೨.೨%	೨೪.೫%	೨೨.೪%
	ಒಟ್ಟು ಪ್ರತಿಶತ	೨೦.೧%	೨.೩%	೨೨.೪%
ಉಡುಪಿ	ಒಟ್ಟು	೬೭	೫	೭೨
	ಪ್ರತಿಶತ (ಜಿಲ್ಲೆಯೊಳಗೆ)	೯೩.೧%	೬.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೪.೩%	೧೦.೨%	೧೩.೯%
	ಒಟ್ಟು ಪ್ರತಿಶತ	೧೩.೦%	೧.೦%	೧೩.೯%
ಚಿಕ್ಕಮಗಳೂರು	ಒಟ್ಟು	೯೩	೧೩	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೮೭.೭%	೧೨.೩%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೯.೯%	೨೬.೫%	೨೦.೫%
	ಒಟ್ಟು ಪ್ರತಿಶತ	೧೮.೦%	೨.೫%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧.೩%	–	೧.೨%
	ಒಟ್ಟು ಪ್ರತಿಶತ	೧.೨%	–	೧.೨%
ಶಿವಮೊಗ್ಗ	ಒಟ್ಟು	೧೯೮	೧೯	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೯೧.೨%	೮.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೨.೩%	೩೮.೮%	೪೨.೦%
	ಒಟ್ಟು ಪ್ರತಿಶತ	೩೮.೩%	೩.೭%	೪೨.೦%
ಒಟ್ಟು	ಒಟ್ಟು	೪೬೮	೪೯	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೯೦.೫%	೯೯.೫%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೯೦.೫%	೯.೫%	೧೦೦%

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಮನೆಗಳಲ್ಲಿ, ೧೦೪ ಮನೆಗಳಿಗೆ ವಿದ್ಯುತ್ ಸೌಲಭ್ಯವಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೮೯.೭ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೨.೨ ರಷ್ಟಾಗುತ್ತದೆ. ಉಳಿದ ೧೨ ಮನೆಗಳಿಗೆ

ವಿದ್ಯುತ್ ಸೌಲಭ್ಯವಿರುವುದಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೦.೩ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೪.೫ ರಷ್ಟಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೭೨ ಮನೆಗಳಲ್ಲಿ ೬೭ ಮನೆಗಳಿಗೆ ವಿದ್ಯುತ್ ಸೌಲಭ್ಯವಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೯೩.೧ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೪.೩ ರಷ್ಟಾಗುತ್ತದೆ. ಜಿಲ್ಲೆಯ ಉಳಿದ ಮನೆಗಳಿಗೆ ವಿದ್ಯುತ್ ಸೌಲಭ್ಯವಿರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೬.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಶೇ. ೧೦.೨ ರಷ್ಟಾಗುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೦೬ ಮನೆಗಳಲ್ಲಿ ೯೩ ಮನೆಗಳಿಗೆ ವಿದ್ಯುತ್ ಸೌಲಭ್ಯವಿದೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೮೭.೭ ರಷ್ಟು, ಐದು ಜಿಲ್ಲೆಗಳನ್ನೊಳ ಗೊಂಡಾಗ ಇದರ ಪ್ರಮಾಣ ಶೇ. ೧೨.೩ ರಷ್ಟಾಗುತ್ತದೆ. ಜಿಲ್ಲೆಯಲ್ಲಿ ಉಳಿದ ೧೩ ಮನೆಗಳಿಗೆ ವಿದ್ಯುತ್ ಸೌಲಭ್ಯವಿರುವುದಿಲ್ಲ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧೨.೩ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೬.೫ ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದಾಗ ೬ ಮನೆಗಳಿಗೆ ವಿದ್ಯುತ್ ಸೌಲಭ್ಯವಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦೦ ರಷ್ಟಿದ್ದರೆ, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧.೩ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೨೧೭ ಮನೆಗಳಲ್ಲಿ ೧೯೮ ಮನೆಗಳಿಗೆ ವಿದ್ಯುತ್ ಸೌಲಭ್ಯವಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೯೧.೨ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೨.೩ ರಷ್ಟಾಗುತ್ತದೆ. ಉಳಿದ ೧೯ ಮನೆಗಳಿಗೆ ವಿದ್ಯುತ್ ಸೌಲಭ್ಯವಿರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೮.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೩೮.೮ ರಷ್ಟಾಗುತ್ತದೆ.

ಈ ಮೇಲಿನ ಅಂಕಿ-ಅಂಶಗಳನ್ನ ಗಮನಿಸಿದಾಗ ವಿದ್ಯುತ್ ಸೌಲಭ್ಯವಿರದೇ ಇರುವ ಮನೆಗಳು ಅರಣ್ಯದಲ್ಲಿ ಚದುರಿದಂತೆ ಇರುವ ಕಾರಣ ವಿದ್ಯುತ್ ಸೌಲಭ್ಯವಿರುವುದಿಲ್ಲ. ಮುಂದಿನ ದಿನಗಳಲ್ಲಿ ವಿದ್ಯುತ್ ಸೌಲಭ್ಯ ಮಾಡಿಕೊಡುವ ಭರವಸೆ ಅವರಿಗೆ ಸಿಕ್ಕಿದೆ.

ಹಸಲರು ವಾಸ ಮಾಡುವ ಕೇರಿಗಳಿಗೆ ಹಾಡಿಕೇರಿಗಳೆಂದು ಹೆಸರು. ಹಸಲರ ವಾಸಸ್ಥಾನವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ೧) ಕಾಡಿನ ಅಂಚಿನಲ್ಲಿರುವ ಹಸಲರ ವಾಸಸ್ಥಾನ ೨) ಕಾಡಿನ ಮಧ್ಯದಲ್ಲಿರುವ ಹಸಲರ ವಾಸಸ್ಥಾನ ೩) ನಗರಕ್ಕೆ ಹೊಂದಿಕೊಂಡಿರುವ ಹಸಲರ ವಾಸಸ್ಥಾನ.

೧) ಕಾಡಿನ ಅಂಚಿನಲ್ಲಿರುವ ಹಸಲರ ವಸತಿ ವ್ಯವಸ್ಥೆಯಲ್ಲಿ ಸಾಲು ಮನೆಗಳನ್ನು ಕಾಣಬಹುದು. ಇವು ಚೌಕಾಕಾರದಲ್ಲಿ ಇವೆ. ಇವುಗಳು ಜಿಲ್ಲಾ ಮುಖ್ಯ ರಸ್ತೆಯಿಂದ ದೂರದಲ್ಲಿವೆ. ಅಲ್ಲಿಗೆ ಕಚ್ಚಾ

ರಸ್ತೆಗಳಿವೆ. ಪ್ರತಿಯೊಂದು ಮನೆಗೂ ತಮ್ಮದೇ ಆದ ಬೇಲಿಯನ್ನು ಹಾಕಿರುವರು. ಪ್ರತಿಯೊಂದು ಮನೆಗೂ ಕೈ ತೋಟ ಇದೆ. ಇಲ್ಲಿ ಹೂ ಹಣ್ಣುಗಳ ಬಳ್ಳಿ ಮತ್ತು ಗಿಡಗಳಿವೆ. ಕಾಡಿನ ಅಂಚಿನಲ್ಲಿರುವ ಹಸಲರ ವಸತಿ ವ್ಯವಸ್ಥೆಯಲ್ಲಿ ೨೦ ಕ್ಕಿಂತ ಹೆಚ್ಚು ಮನೆಗಳನ್ನು ಕಾಣಬಹುದು. ಪ್ರತಿಯೊಂದು ಮನೆಗೂ ವಿದ್ಯುತ್ ಸಂಪರ್ಕವಿದೆ. ಅಷ್ಟೇ ಅಲ್ಲ, ತಮ್ಮದೇ ಆದ ಪ್ರತ್ಯೇಕ ಬಾವಿಗಳಿವೆ. ಇವರಿಗೆ ಪ್ರತ್ಯೇಕವಾದ ಕಕ್ಕಸ ಕೋಣೆಗಳಿಲ್ಲ. ಇವರು ಅರಣ್ಯದಲ್ಲಿ ಬೈಲು ಶೌಚಾಲಯಕ್ಕೆ ಹೋಗುವರು.

೨) ಕಾಡಿನ ಮಧ್ಯದಲ್ಲಿರುವ ಹಸಲರ ವಸತಿ ವ್ಯವಸ್ಥೆಯೂ ತೀರ ಭಿನ್ನವಾಗಿದೆ. ಇವರು ಅಲ್ಲಲ್ಲಿ ಚದುರಿದಂತೆ ತಮ್ಮ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇವರೂ ಕೂಡ ಪ್ರತ್ಯೇಕವಾದ ಬೇಲಿಯನ್ನು ಹಾಕಿ ತಮ್ಮ ಕಂಪೌಂಡನಲ್ಲಿ ಬಳ್ಳಿ ಮತ್ತು ಹಣ್ಣಿನ ಗಿಡಗಳನ್ನು ಬೆಳೆಸಿದ್ದಾರೆ. ಈ ಹಾಡಿಕೇರಿಗೆ ಹೋಗಲು ಕೇವಲ ಕಾಡಿನಲ್ಲಿರುವ ಕಾಲುದಾರಿ ಮಾತ್ರ. ಪ್ರತಿ ಮನೆಗಳಿಗೂ ಪ್ರತ್ಯೇಕವಾದ ಬಾವಿಗಳಿವೆ. ಅಷ್ಟೇ ಅಲ್ಲ ಪ್ರತಿ ಮನೆಗೂ ವಿದ್ಯುತ್ ಸಂಪರ್ಕವಿದೆ. ಮಳೆಗಾಲ ಪ್ರಾರಂಭವಾಯಿತು ಎಂದರೆ, ನಾಲ್ಕು ತಿಂಗಳ ವರೆಗೆ ಇವರು ನಗರದ ಸಂಪರ್ಕವನ್ನು ಕಳೆದು ಕೊಳ್ಳುವರು. ಇದಕ್ಕಾಗಿಯೇ ಅವರು ಮಳೆಗಾಲ ಪ್ರಾರಂಭವಾಗುವದಕ್ಕಿಂತ ಪೂರ್ವದಲ್ಲಿ ನಾಲ್ಕು ತಿಂಗಳಿಗೆ ಬೇಕಾಗುವಷ್ಟು ಆಹಾರ ಪದಾರ್ಥಗಳನ್ನು ಮತ್ತು ಕಟ್ಟಿಗೆಗಳನ್ನು ಶೇಖರಿಸಿ ಇಡುವರು. ಇವರಲ್ಲಿಯೂ ಕೂಡ ಕಕ್ಕಸು ಕೋಣೆಗಳಿಲ್ಲ. ಇವರು ಕೂಡ ಅರಣ್ಯದ ಬೈಲು ಶೌಚಾಲಯಕ್ಕೆ ಹೋಗುವರು. ಮಕ್ಕಳಿಗಾಗಿ ತಮ್ಮ ಮನೆಯ ಹಿತ್ತಲಿನ ಅನತಿ ದೂರದಲ್ಲಿ ಪ್ರತ್ಯೇಕವಾದ ಸ್ಥಳದಲ್ಲಿ ಬೈಲ ಶೌಚಾಲಯವನ್ನು ಹೊಂದಿದ್ದಾರೆ.

೩) ನಗರಕ್ಕೆ ಹೊಂದಿಕೊಂಡಿರುವ ಹಸಲರ ವಸತಿ ವ್ಯವಸ್ಥೆಯ ರೀತಿಯನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ಧಾಪುರ, ಹೊನ್ನಾವರ ತಾಲೂಕುಗಳಲ್ಲಿ ಕಾಣಬಹುದು. ಇವರನ್ನು ಇಲ್ಲಿ ಪರಿಶಿಷ್ಟ ಜಾತಿಯವರೆಂದು ಕರೆಯುತ್ತಾರೆ. ಇವರು ಇನ್ನುಳಿದ ಪರಿಶಿಷ್ಟ ಜಾತಿಯ ಜನರ ಜೊತೆ ವಾಸ ಮಾಡುತ್ತಾರೆ. ಇವರಿಗೆ ಡಾಂಬರೀಕರಣವಾದ ರಸ್ತೆ ಇದೆ. ಅಲ್ಲದೇ ಇವರಿಗೆ ಕೆರೆ ನೀರು ಯೋಜನೆಯ ಮುಖಾಂತರ ನೀರು ಸರಬರಾಜು ಮಾಡುವರು. ಇವರ ಮನೆಗಳ ವಿನ್ಯಾಸವು ಚೌಕಾಕಾರದಲ್ಲಿ ಇದ್ದು, ಪ್ರತಿಯೊಂದು ಮನೆಗೂ ಬೇಲಿ ಹಾಕಲಾಗಿದೆ. ಇವರಲ್ಲಿ ಸಾಲು ಮನೆಗಳನ್ನು ಕಾಣಬಹುದು. ನಾಗರಿಕ ಜನಾಂಗದೊಂದಿಗೆ ಸತತ ಸಂಪರ್ಕ ಇರುವುದರಿಂದ ಇವರ ಜೀವನ ಶೈಲಿ ಇನ್ನಿತರ ಹಾಡಿಕೇರಿಗಳ ಜನರಿಗಿಂತ ಭಿನ್ನವಾಗಿದೆ. ಇವರಲ್ಲಿ ತಮ್ಮ ಮನೆಗಳ ಕಂಪೌಂಡಗಳಿಗೆ ಹೊಂದಿಕೊಂಡಂತೆ ಕಕ್ಕಸುಗಳನ್ನು ಕಾಣಬಹುದು. ಅಲ್ಲದೇ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನಲ್ಲಿ ಆಧುನಿಕ ರೀತಿಯ ಶೌಚಾಲಯಗಳನ್ನು ಕಟ್ಟಿಸಿಕೊಂಡಿದ್ದಾರೆ.

ಕೋಷ್ಟಕ–೩.೬ ಸಮೀಕ್ಷೆ ಮಾಡಿದ ಹಸಲರ ಕುಟುಂಬಗಳ ವರ್ಗೀಕೃತ ಹಾಡಿಕೇರಿಯಲ್ಲಿ ಬರುವ ಮನೆಗಳು

ಜಿಲ್ಲೆಗಳು		ಪ್ರವರ್ಗಗಳು			ಒಟ್ಟು
		ಮುಂದುವರೆದ	ಮಧ್ಯಮ	ಹಿಂದುಳಿದ	
ಉತ್ತರ ಕನ್ನಡ	ಒಟ್ಟು	೪೪	೨೨	೫೦	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೩೭.೯%	೧೯.೦%	೪೩.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೪.೯%	೧೪.೮%	೨೬.೨%	೨೨.೪%
	ಒಟ್ಟು ಪ್ರತಿಶತ	೮.೫%	೪.೩%	೯.೭%	೨೨.೪%
ಉಡುಪಿ	ಒಟ್ಟು	೨೦	೨೭	೨೫	೭೨
	ಪ್ರತಿಶತ (ಜಿಲ್ಲೆಯೊಳಗೆ)	೨೭.೮%	೩೭.೫%	೩೪.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೧.೩%	೧೮.೧%	೧೩.೧%	೧೩.೯%
	ಒಟ್ಟು ಪ್ರತಿಶತ	೩.೯%	೫.೨%	೪.೮%	೧೩.೯%
ಚಿಕ್ಕಮಗಳೂರು	ಒಟ್ಟು	೨೨	೪೨	೪೨	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೨೦.೮%	೩೯.೬%	೩೯.೬%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೨.೪%	೨೨.೨%	೨೨%	೨೦.೫%
	ಒಟ್ಟು ಪ್ರತಿಶತ	೪.೩%	೮.೧%	೮.೧%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೩.೪%	–	–	೧.೨%
	ಒಟ್ಟು ಪ್ರತಿಶತ	೧.೨%	–	–	೧.೨%
ಶಿವಮೊಗ್ಗ	ಒಟ್ಟು	೮೫	೫೮	೭೪	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೩೯.೨%	೨೬.೭%	೩೪.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೮.೦%	೩೮.೯%	೩೮.೭%	೪೨.೦%
	ಒಟ್ಟು ಪ್ರತಿಶತ	೧೬.೪%	೧೧.೨%	೧೪.೨%	೪೨.೦%
ಒಟ್ಟು	ಒಟ್ಟು	೧೭೭	೧೪೯	೧೯೧	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೩೪.೨%	೨೮.೮%	೩೬.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೩೪.೨%	೨೮.೮%	೩೬.೯%	೧೦೦%

ಅಧ್ಯಯನದ ನಿಖರ ಫಲಿತಗಳಿಗಾಗಿ ಹಸಲರ ಹಾಡಿಕೇರಿಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ೧) ಅತ್ಯಂತ ಹಿಂದುಳಿದ ೨) ಮಧ್ಯಮ ೩) ನಗರಕ್ಕೆ ಹೊಂದಿಕೊಂಡಿರುವ ಹಾಡಿಕೇರಿ ಸಮೀಕ್ಷೆ ಮಾಡಿದ ಉತ್ತರ ಕನ್ನಡ ಜಿಲ್ಲೆಯಲ್ಲಿ ೧೧೬ ಮನೆಗಳಲ್ಲಿ, ೫೦ ಮನೆಗಳು ಹಿಂದುಳಿದ ಹಾಡಿಕೇರಿಯಲ್ಲಿ ಬರುತ್ತವೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೪೩.೧೧ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಈ ಪ್ರಮಾಣ ಶೇ. ೨೬.೨ ರಷ್ಟಾಗುತ್ತದೆ. ಇನ್ನು ಮಧ್ಯಮ ಹಾಡಿಕೇರಿಯಲ್ಲಿ ೨೨ ಮನೆಗಳು ಬಂದಿವೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಈ ಪ್ರಮಾಣ ಶೇ. ೧೬.೮ ರಷ್ಟಾಗುತ್ತದೆ. ಇನ್ನು ಮುಂದುವರೆದ ಹಾಡಿಕೇರಿಯಲ್ಲಿ ೪೪ ಮನೆಗಳು ಇದ್ದರೆ, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೭.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೪.೯ ರಷ್ಟಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೭೨ ಕುಟುಂಬಗಳಲ್ಲಿ ಹಿಂದುಳಿದ ಹಾಡಿಕೇರಿಗೆ ಬರುವ ಮನೆಗಳ ಸಂಖ್ಯೆ ೨೫, ಜಿಲ್ಲೆಯಲ್ಲಿಯ ಇದರ ಪ್ರಮಾಣ ಶೇ. ೩೪.೭ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೩.೧ ರಷ್ಟಾಗುತ್ತದೆ. ಮಧ್ಯಮ ಹಾಡಿಕೇರಿಯಲ್ಲಿ ಬರುವ ಮನೆಗಳ ಸಂಖ್ಯೆ ೨೭, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೭.೫ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೩.೧ ರಷ್ಟಾಗುತ್ತದೆ. ಮುಂದುವರೆದ ಹಾಡಿಕೇರಿಗಳಲ್ಲಿ ಬರುವ ಮನೆಗಳ ಸಂಖ್ಯೆ ೨೦, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೨೭.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೧.೩ ರಷ್ಟಾಗುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದಾಗ ೧೦೬ ಮನೆಗಳಲ್ಲಿ ಹಿಂದುಳಿದ ಹಾಡಿಕೇರಿಗಳಲ್ಲಿ ಬರುವ ಮನೆಗಳ ಸಂಖ್ಯೆ ೪೨, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೯.೬ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೨ ರಷ್ಟಾಗುತ್ತದೆ. ಮಧ್ಯಮ ಹಾಡಿಕೇರಿಯಲ್ಲಿ ಬರುವ ಮನೆಗಳ ಸಂಖ್ಯೆ ೨೭, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೭.೫ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೮.೧ ರಷ್ಟಾಗುತ್ತದೆ. ಮುಂದುವರೆದ ಹಾಡಿಕೇರಿಯಲ್ಲಿ ಬರುವ ಮನೆಗಳ ಸಂಖ್ಯೆ ೨೨, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೨೦.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೨.೪ ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೬ ಮನೆಗಳು ಮುಂದುವರೆದ ಹಾಡಿಕೇರಿಯಲ್ಲಿವೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦೦ ರಷ್ಟು; ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೩.೪ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದಾಗ ೨೧೭ ಮನೆಗಳಲ್ಲಿ ಹಿಂದುಳಿದ ಹಾಡಿಕೇರಿಯಲ್ಲಿ ಬರುವ ಮನೆಗಳ ಸಂಖ್ಯೆ ೭೪, ಜಿಲ್ಲೆಯಲ್ಲಿ ಇದರ ಪ್ರಮಾಣ ೩೪.೧ ರಷ್ಟು; ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೩೮.೭ ರಷ್ಟಾಗುತ್ತದೆ. ಮಧ್ಯಮ ಹಾಡಿಕೇರಿಯಲ್ಲಿ ಬರುವ ಮನೆಗಳ ಸಂಖ್ಯೆ ೫೮, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೨೬.೭ ರಷ್ಟು; ಐದು

ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೩೮.೧ ರಷ್ಟಾಗುತ್ತದೆ. ಮುಂದುವರೆದ ಹಾಡಿಕೇರಿಯಲ್ಲಿ ಬರುವ ಮನೆಗಳ ಸಂಖ್ಯೆ ೮೫, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೯.೨ ರಷ್ಟು; ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೮ ರಷ್ಟಾಗುತ್ತದೆ.

ಈ ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಅರಣ್ಯದಲ್ಲಿ ವಾಸವಾಗಿರುವ ಹಸಲರು ನಿಧಾನವಾಗಿ ಮುಂದುವರೆಯುವ ಲಕ್ಷಣಗಳು ಕಾಣುತ್ತವೆ.

೩.೪ ಹಚ್ಚೆ ಹಾಕಿಸಿಕೊಳ್ಳುವ ಪದ್ಧತಿ

ಹಸಲರ ಹೆಂಗಸರು ಹಚ್ಚೆ ಹಾಕಿಸಿಕೊಳ್ಳುವರು. ಇದರಿಂದ ಸೌಂದರ್ಯ ವೃದ್ಧಿಸುತ್ತದೆ ಎಂಬ ನಂಬಿಕೆ ಅವರಿಗಿದೆ. ಹಚ್ಚೆ ಹಾಕಿಸಿಕೊಳ್ಳುವದರಲ್ಲಿ ಇವರಿಗೆ ವಿಶೇಷ ಆಸಕ್ತಿ. ಏಕೆಂದರೆ ಹುಟ್ಟುವಾಗ ಜೊತೆಯಲ್ಲಿ ಏನನ್ನು ತಂದಿರುವದಿಲ್ಲ. ಆದರೆ ಹೋಗುವಾಗ ಹಚ್ಚೆಯನ್ನಾದರೂ ಜೊತೆಯಲ್ಲಿ ತೆಗೆದುಕೊಂಡು ಹೋಗೋಣ ಎಂಬ ಕಾರಣಕ್ಕೆ ಹಚ್ಚೆ ಹಾಕಿಸಿಕೊಳ್ಳುತ್ತೇವೆ ಎಂಬ ಭಾವನೆಯನ್ನು (ಹೇಳಿಕೆ: ಲಕ್ಷಮ್ಮ ಗಂಡ ಗಣಪತಿ; ವಯಸ್ಸು ೭೬ ವೃತ್ತಿ ಕೂಲಿ) ಹೊಂದಿದ್ದಾರೆ. ಹಸಲರ ಹೆಂಗಸರು ವಿವಿಧ ರೀತಿಯ ಹಚ್ಚೆ ಚಿತ್ರಗಳನ್ನು ಹಾಕಿಸಿಕೊಳ್ಳುವರು. ಹಣೆಯ ಮೇಲೆ ಬೊಟ್ಟು, ಮೂಗು ಮತ್ತು ಕಣ್ಣಿನ ನಡುವೆ ಸಣ್ಣ ಬೊಟ್ಟು, ಬಲಗೈ ಮತ್ತು ಎಡಗೈ ಎಲ್ಲ ಬೆರಳುಗಳು ಉಗುರಿನ ನಂತರದ ಭಾಗಕ್ಕೆ ಸಣ್ಣ ಬೊಟ್ಟು ಹಾಕಿಸಿಕೊಳ್ಳುತ್ತಾರೆ. ಎಡಗೈ ಮತ್ತು ಬಲಗೈ ಮೇಲೆ ವಿವಿಧ ರೀತಿಯ ಹಚ್ಚೆ ಹಾಕಿಸಿಕೊಳ್ಳುವರು. ಅವು ಇಂತಿವೆ, ಜೋಗಿಜಡೆ, ಎಲೆಕವಳಿ, ಎಲೆಬಳ್ಳಿ, ಸೀತೆಮಡಿ, ಕೌಳಿಮಟ್ಟಿ, ಲತ್ತು, ಗಿಂಡಿ, ತಾಯಿಯ ಹೆಸರು, ಗಂಡನ ಹೆಸರು, ದೇವರ ಹೆಸರು, ಗೆಳತಿಯ ಹೆಸರು ಮುಂತಾದವುಗಳನ್ನು ಹಾಕಿಸಿಕೊಳ್ಳುವರು. ಈ ಹಚ್ಚೆ ಹಾಕುವವರು ಕೋರಮ ಜಾತಿಯ ಹೆಣ್ಣು ಮಕ್ಕಳು. ಇವರು ಕರ್ನಾಟಕ ರಾಜ್ಯದ ದಾವಣಗೇರಿ, ಹಾವೇರಿ, ಹರಪ್ಪನಹಳ್ಳಿ, ಬಳ್ಳಾರಿ ಮುಂತಾದ ಪ್ರದೇಶಗಳಿಂದ ಬಂದು ಹಚ್ಚೆ ಹಾಕುತ್ತಾರೆ. ಹಚ್ಚೆ ಹಾಕಿದವರಿಗೆ ಧಾನ್ಯ ಅಥವಾ ಹಣ ಕೊಡುವ ಪದ್ಧತಿಯುಂಟು. ಹಚ್ಚೆ ಹಾಕುವವರು ಹಾಕಿಸಿಕೊಳ್ಳುವ ಹೆಣ್ಣು ಮಕ್ಕಳಿಗೆ ನೋವಾಗದಿರಲಿ ಎಂಬ ಕಾರಣಕ್ಕೆ ವಿವಿಧ ಹಾಸ್ಯ ಚಟಾಕಿಗಳನ್ನು ಹೇಳಿ ನಗೆಸುತ್ತ ನೋವನ್ನು ಮರೆಸುತ್ತಾರೆ. ಸಾಗರ, ಸೊರಬ, ಹೊಸನಗರ ತಾಲೂಕುಗಳಲ್ಲಿಯ ಹಸಲರ ಗಂಡಸರು ಕೂಡಾ ಗಣಪತಿ, ರಾಮ, ಬಿಲ್ಲು, ಹೆಂಡತಿಯ ಹೆಸರುಗಳನ್ನು ತಮ್ಮ ಎಡಗೈ ಮೇಲೆ ಹಚ್ಚೆ ಹಾಕಿಸಿಕೊಂಡ ಉದಾಹರಣೆಗಳನ್ನು ಕಾಣುತ್ತೇವೆ. ಸ್ತ್ರೀಯರು ದಿನಾಲೂ ತಲೆ ಬಾಚಿಕೊಳ್ಳುತ್ತಾರೆ. ತರುಣಿಯರು ಎರಡು ಜಡೆ ಹಾಕುವರು. ಹಸಲರ ಹೆಣ್ಣು ಮಕ್ಕಳು ತಮ್ಮ ಮುಖಗಳಿಗೆ ಪೌಡರ ಉಪಯೋಗಿಸುತ್ತಾರೆ. ಸ್ತ್ರೀ ಪುರುಷರಿಬ್ಬರೂ ತಮ್ಮ ತಲೆಗೆ ಕೊಬ್ಬರಿ ಎಣ್ಣೆಯನ್ನು ಹಚ್ಚುವರು.

ಈಗಿನ ಹಸಲರ ಹುಡುಗಿಯರು ಹಚ್ಚೆ ಹಾಕಿಸಿಕೊಳ್ಳುವದನ್ನು ಇಷ್ಟಪಡುವದಿಲ್ಲ. ಅಷ್ಟೇ ಅಲ್ಲದೆ, ಮಾರುಕಟ್ಟೆ (ಜನರಲ್ ಸ್ಟೋರ್ಸ) ಗಳಲ್ಲಿ ಸಿಗುವ ಸೌಂದರ್ಯ ವರ್ಧಕ ವಸ್ತುಗಳನ್ನು ತುಂಬಾ ಇಷ್ಟಪಡುತ್ತಾರೆ.

೩.೫ ಹಸಲರ ಮನೆ ಬಳಕೆಯ ಸಾಮಾನುಗಳು

'Simple living and high thinking' ಸಾದಾ ಜೀವನ ಮತ್ತು ಉನ್ನತ ವಿಚಾರ ಎಂಬ ಉಕ್ತಿಯಂತೆ ಹಸಲರು ಸಾದಾ ಜೀವನವನ್ನು ನಡೆಸುವರು. ಇವರಿಗೆಂದೂ ಮೀಸಲಾದ ಗೃಹೋಪಯೋಗಿ ಸಾಮಾನುಗಳಿಲ್ಲ. ಇತರ ಪರಿಶಿಷ್ಟ ಪಂಗಡದ ಜನರು ಉಪಯೋಗಿಸುವ ಮನೆ ಬಳಕೆಯ ಸಾಮಾನುಗಳನ್ನು ಉಪಯೋಗಿಸುತ್ತಾರೆ. ಸಾಮಾನ್ಯವಾಗಿ ಹಸಲರಲ್ಲಿಯೆ ಶ್ರೀಮಂತರಿರುವ ಸಾಗರ ತಾಲೂಕಿನ ಕೆಳಗಿನ ಗೋಳುಗೋಡು, ಸೊರಬ ತಾಲೂಕಿನ ಮುಟುಗುಪ್ಪೆ, ಹೊಸನಗರ ತಾಲೂಕಿನ ವಂದಾನೆ ಮತ್ತು ಗಾಹಲಮನೆಯ ಹಸಲರು ತಾಮ್ರದ ಕೊಡಪಾನ ಅಲ್ಯೂಮಿನಿಯಂ ಪಾತ್ರೆಗಳನ್ನು ಹೊಂದಿದ್ದರೆ ಬಡವರಾದ ಇತರ ಹಸಲರು ಮಣ್ಣಿನ ಮಡಿಕೆಗಳನ್ನು ಉಪಯೋಗಿಸುತ್ತಾರೆ. ಚಿಕ್ಕದಾದ ಮಣ್ಣಿನ ಮಡಿಕೆಯನ್ನು ಇವರು ಅನ್ನ ಬೇಯಿಸಲಿಕ್ಕೆ ಹಾಗೂ ಸಾಂಬಾರ ಮಾಡಲು ಉಪಯೋಗಿಸುತ್ತಾರೆ. ದೀಪ ಹಚ್ಚಲಿಕ್ಕೆ ಮಣ್ಣಿನ ಹಣತೆಯನ್ನೇ ಉಪಯೋಗಿಸುತ್ತಾರೆ. ಮಣ್ಣಿನ ಬಾಣಲೆಯನ್ನೆ ಪಲ್ಲೆ ಮಾಡಲು ಉಪಯೋಗಿಸುತ್ತಾರೆ. ಇವರ ಸೌಟು ಕೂಡಾ ಸಾದಾ. ಈ ಸೌಟನ್ನು ತಯಾರಿಸಬೇಕಾದರೆ ಬಲಿತ ತೆಂಗಿನಕಾಯಿಯನ್ನು ಕುಡಗೋಲಿನಿಂದ ಸಮನಾಗಿ ಎರಡು ಹೋಳುಗಳಾಗಿ ಅದರಲ್ಲಿರುವ ತೆಂಗಿನ ತಿರುಳನ್ನು ಹೊರಗೆ ತೆಗೆದು ಆ ತೆಂಗಿನ ಪಟ್ಟಿಗೆ ಎರಡು ಸಣ್ಣ ರಂಧ್ರಗಳನ್ನು ಹಾಕಿ ಅ ರಂಧ್ರಕ್ಕೆ ಎರಡು ಬಿದಿರಿನ ಬೆಣೆಗಳನ್ನು ತುರಿಸಿ, ಅದಕ್ಕೆ ಮುಂದೆ ಕಟ್ಟಿಗೆ ತುಂಡಿಗೆ ಜೋಡಿಸಿ ಸೌಟು ತಯಾರು ಮಾಡುತ್ತಾರೆ. ಇದನ್ನು ಈಗಲೂ ತೋರಾಮೆ ಮತ್ತು ಸಿದ್ಧಾಪುರ ತಾಲೂಕಿನ ಸುತ್ಲುಮನೆಯ ಹಸಲರಲ್ಲಿ ಕಾಣಬಹುದು. ಇವರು ಮಣ್ಣಿನ ಪಾತ್ರೆಗಳಲ್ಲಿ ದವಸ ಧಾನ್ಯಗಳನ್ನು ಶೇಖರಿಸುತ್ತಾರೆ. ಇವರು ಈಚಲು ಎಲೆಗಳಿಂದ ಛಾಪೆಯನ್ನು ತಯಾರಿಸಿ, ಅದನ್ನೆ ಹಾಸಿಗೆಯನ್ನಾಗಿ ಉಪಯೋಗ ಮಾಡುತ್ತಾರೆ. ಇವರು ಬಿದಿರಿನ ಬುಟ್ಟಿಗಳನ್ನು ಕೂಡಾ ಹೆಣೆಯುತ್ತಾರೆ. ಅಷ್ಟೇ ಅಲ್ಲ; ಬಿದಿರಿನ ಅಥವಾ ವಾಟೆ ಮರದ ಎಳೆಗಳಿಂದ ಭತ್ತದ ಕಣಜವನ್ನು ತಯಾರಿಸಿ, ಅದರಲ್ಲಿ ಭತ್ತವನ್ನು ತುಂಬುತ್ತಾರೆ. ಇದನ್ನು ಸಿದ್ಧಾಪೂರ ತಾಲೂಕಿನ ಮುಗದೂರ ಹಸಲರ ಮನೆಯಲ್ಲಿ ಕಾಣಬಹುದು. ಹೊಸನಗರ ತಾಲೂಕಿನ ಹಾಗಲಮನೆ, ಸಾಗರ ತಾಲೂಕಿನ ತಲವಾಟಾದಲ್ಲಿಯ ಹಸಲರ ಮನೆಗಳಲ್ಲಿ ಮೀನು ಬಲೆಗಳು, ಶಿಕಾರಿ ಬಲೆಗಳು, ಕಂಬಳಿ ಕೈಗಡಿಯಾರ ಹಿರೇಮನೆಯಲ್ಲಿ ಡಿಶ್ ಟಿ.ವ್ಹಿ ಮತ್ತು ರೇಡಿಯೋ ಸೈಕಲ್‌ಗಳು ಇವೆ. ಆರ್ಥಿಕವಾಗಿ ಚೆನ್ನಾಗಿದ್ದವರು ತಮ್ಮ ಮನೆಯಲ್ಲಿ ಕುರ್ಚಿ, ಮಂಚ, ಟೇಬಲ್, ಫ್ರಿಜ್ ಹಾಗೂ ದ್ವಿಚಕ್ರವಾಹನಗಳನ್ನು ಹೊಂದಿದ್ದಾರೆ.

೩.೬ ಪರಿಸರ ನೈರ್ಮಲ್ಯ

ಹಸಲರು ತಮ್ಮ ಮನೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವರು. ಮನೆಯನ್ನು ಎರಡು ದಿವಸಗಳಿಗೊಮ್ಮೆ ಸಗಣೆಯಿಂದ ಸಾರಿಸುವರು. ಬಚ್ಚಲು ನೀರಿಗೆ ಒಳಚರಂಡಿ ಇರುವುದಿಲ್ಲ. ಅವು ಅಲ್ಲಿಯೇ ಗುಂಡಿಯಲ್ಲಿಯೇ ನಿಲ್ಲುತ್ತವೆ. ಆದರೆ ಪುನರ್ವಸತಿ ಕಲ್ಪಿಸಿದ ಹಸಲರ ಮನೆಗಳ ಸ್ಥಿತಿ ಹಾಗಲ್ಲ.

ಇವರು ಈಗ ಮುಂಜಾನೆ ಸ್ನಾನ ಮಾಡದೆ ಇದ್ದರೂ, ಸಾಯಂಕಾಲ ತಪ್ಪದೆ ಸ್ನಾನ ಮಾಡುತ್ತಾರೆ. ಇವರಲ್ಲಿ ಸ್ನಾನದ ಸಾಬೂನು ಬಳಕೆ ಕಡಿಮೆ ಇದ್ದರೂ ಇತ್ತೀಚೆಗೆ ಕೆಲವು ಯುವಕರು ಸಾಬೂನುಗಳನ್ನು ಉಪಯೋಗಿಸುತ್ತಾರೆ. ತಮ್ಮ ಮನೆಗಳಲ್ಲಿ ಸಾಮಾನುಗಳನ್ನು ಶೇಖರಿಸಲು ಅಡಿಕೆ ಹಾಳೆಯನ್ನು ಉಪಯೋಗಿಸುತ್ತಾರೆ. ತಮ್ಮ ತಲೆಗೆ ಅಂಟುವಾಳು ಮತ್ತು ಸೀಗೆಕಾಯಿಯ ಪುಡಿಯನ್ನು ಉಪಯೋಗಿಸುವರು. ಇವರಲ್ಲಿ ಪ್ಲಾಸ್ಟಿಕ್ ಬಳಕೆಯೂ ಕೂಡಾ ಕಡಿಮೆ. ಯಾರಾದರೂ ಮನೆಗೆ ಅತಿಥಿಗಳು ಬಂದರೆ, ಇವರು ಬಾಳೆ ಎಲೆಯಲ್ಲಿ ಊಟಕ್ಕೆ ಕೊಡುತ್ತಾರೆ. ಒಟ್ಟಿನಲ್ಲಿ ಹಸಲರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಕಾಳಜಿಯಿಂದ ಕಾಪಾಡುವರು.

ಹಸಲರ ಕುಟುಂಬ ಚಿಕ್ಕ ಗಾತ್ರವಿದ್ದು, ಗಂಡ, ಹೆಂಡತಿ ಮತ್ತು ಚಿಕ್ಕ ಮಕ್ಕಳು ವಾಸಿಸುವರು. ಮಕ್ಕಳು ವಯಸ್ಸಿಗೆ ಬಂದ ಮೇಲೆ ಆತನಿಗೆ ಮದುವೆ ಮಾಡಿ ಬೇರೆ ಮನೆಯಲ್ಲಿ ವಾಸಿಸುವ ವ್ಯವಸ್ಥೆ ಮಾಡುವರು. ಇವರದು ವಿಭಕ್ತ ಕುಟುಂಬ.

ಹಸಲರಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಎಂಬ ಭೇದವಿಲ್ಲ. ಇವರ ಕೌಟುಂಬಿಕ ವ್ಯವಸ್ಥೆಯಲ್ಲಿ ಗಂಡನಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಹೆಂಡತಿಗೂ ಇದೆ. (ಕ್ಷೇತ್ರ ಕಾರ್ಯದ ಅನುಭವ ಮತ್ತು ಅವಲೋಕನದ ಆಧಾರದ ಮೇಲಿಂದ ಹೇಳುವದಾದರೆ) ಗಂಡಸರಿಗಿಂತ ಹೆಣ್ಣು ಯಾವಾಗಲೂ ಕೆಲಸದಲ್ಲಿ ತೊಡಗಿರುತ್ತಾಳೆ. ದಿನಾಲೂ ಬೆಳಿಗ್ಗೆ ಗೋಮಯ, ಕೆಂಪು ಮಣ್ಣು ನೀರಿನಲ್ಲಿ ಕಲಸಿ ಮನೆಯನ್ನು ಸಾರಿಸುವಳು ನಂತರ ರಂಗೋಲಿ ಹಾಕಿ, ತುಳಸಿ ಪೂಜೆ ಮಾಡಿದ ನಂತರ ದಿನದ ಕಾರ್ಯ ಪ್ರಾರಂಭ. ನಂತರ ಅಡುಗೆ ಮಾಡಿ ತೋಟಕ್ಕೆ ಅಥವಾ ಗದ್ದೆಗೆ ಹೋಗುವಳು. ತೋಟದಿಂದ ಅಥವಾ ಗದ್ದೆಯಿಂದ ತಿರುಗಿ ಬಂದ ನಂತರ ಹಸುಗಳ ಹಾಲು ಕರೆಯುವಳು. ಸಾಯಂಕಾಲ ಅಡುಗೆ ಮಾಡುವಳು ಕುಟುಂಬದಲ್ಲಿ ಹೆಣ್ಣು ಮಕ್ಕಳು ಪ್ರಮುಖ ಪಾತ್ರ ವಹಿಸುವರು. ಯಾವುದೇ ಧಾರ್ಮಿಕ ಕಾರ್ಯಗಳಿದ್ದರೂ ಹೆಣ್ಣುಮಗಳು ಬೇಕು. ಹೆಣ್ಣು ಮಕ್ಕಳು ವಿವಾಹವಾದ ನಂತರ ತನ್ನ ಮೂಲ ಕುಟುಂಬವನ್ನು ತೊರೆದು ಗಂಡನ ಮನೆಗೆ ಸೇರುವಳು. ಹಸಲರಲ್ಲಿ ಪಿತೃ ಪ್ರಧಾನ ಕುಟುಂಬ ಮತ್ತು ತುಳು ಮಾತನಾಡುವ ಹಸಲರಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ಕಾಣಬಹುದು. ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಗಂಡು ಸ್ಥಾನಿಯವಾಗಿದ್ದು, ಹೆಣ್ಣು ಗಂಡನ ಮನೆಗೆ ಬರುವಳು. ಈ ತೆರನಾದ ಕುಟುಂಬಗಳಲ್ಲಿ ಎಲ್ಲ ಸಾಮಾಜಿಕ, ಆರ್ಥಿಕ ಅಧಿಕಾರಗಳು ಕೇವಲ ಗಂಡು ಮಕ್ಕಳಿಗೆ ದೊರೆಯುತ್ತವೆ. ಅಲ್ಲದೆ ವಂಶವನ್ನು ಕೂಡ ಗಂಡು ಮಕ್ಕಳೇ ಮುಂದುವರೆಸಿಕೊಂಡು ಹೋಗುವರು. ಆದರೆ ತುಳು ಭಾಷೆಯನ್ನಾಡುವ ದಕ್ಷಿಣ ಕನ್ನಡ ಜಿಲ್ಲೆಯ ಹಸಲರಲ್ಲಿ ಮಾತ್ರ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇದೆ. ಇಲ್ಲಿ ಎಲ್ಲ ಅಧಿಕಾರಗಳು ಹೆಣ್ಣು ಮಕ್ಕಳಿಗೆ ಇವೆ. ಆಸ್ತಿಯಲ್ಲಿ ಪಾಲವೂ ಕೂಡ ಹೆಣ್ಣು ಮಕ್ಕಳಲ್ಲಿ ಹಂಚಿ ಹೋಗುವದು. ಗಂಡು ಮಾತ್ರ ಬೇರೆ ಕುಟುಂಬದಿಂದ ಬಂದಿರುವನು. ಅವನಿಗೆ ಆಸ್ತಿಯ ಮೇಲೆ ಯಾವುದೇ ತೆರನಾದ ಹಕ್ಕು ಇರುವುದಿಲ್ಲ. ವಂಶವನ್ನು ಹೆಣ್ಣು ಮಕ್ಕಳ ಮುಖಾಂತರ ಮುಂದುವರೆಸಿಕೊಂಡು ಹೋಗುತ್ತಾರೆ.

೩.೭ ಆಹಾರ ಪದ್ಧತಿ

ಹಸಲರ ಆಹಾರ ಪದ್ಧತಿ ವೈವಿಧ್ಯಮಯವಾಗಿದೆ. ಅವರು ಮಾಂಸಾಹಾರಿಗಳು, ಆದರೂ ಧಾರ್ಮಿಕ ಕಾರ್ಯಗಳಲ್ಲಿ ಸಸ್ಯಾಹಾರವನ್ನು ಮಾಡುವರು. ಈ ಆಹಾರವನ್ನು ತಯಾರಿಸವವರು ಭಟ್ಟರು. ಇವರು ಮದುವೆ ಅಥವಾ ಇನ್ನುಳಿದ ವಿಶೇಷ ಸಂದರ್ಭಗಳಲ್ಲಿ ಕಡಬು, ಹಲಸಿನ ಹಪ್ಪಳ, ಉಪ್ಪಿನ ಸೂಳೆ, ಕಜ್ಜಾಯ, ಅಕ್ಕಿ ಪಾಯಸ ಮುಂತಾದ ತಿನಿಸುಗಳನ್ನು ಮಾಡುವರು.

ಹಸಲರು ಮಾಂಸ ತಿನ್ನುತ್ತಾರೆ. ಆದರೆ ದನ ಮತ್ತು ಕೊಳೆತ ಮಾಂಸವನ್ನು ತಿನ್ನುವದಿಲ್ಲ. ಇವರು ಕುರಿ, ಕೋಳಿ, ಕಾಡುಕುರಿ, ಮೊಲ, ಹಂದಿ ಮುಂತಾದವುಗಳನ್ನು ತಿನ್ನುತ್ತಾರೆ. ಇವರಿಗೆ ಎಲ್ಲ ತರಹದ ಮೀನುಗಳು ಇಷ್ಟ, ಆದರೆ ಆ ಮಿನುಗಳನ್ನು ಆಗಿಂದಾಗೆ ತಂದು ತಿನ್ನುವರೆ ವಿನಃ ಸಂರಕ್ಷಿಸಿದ ಮೀನುಗಳನ್ನಲ್ಲ. ಏಕೆಂದರೆ ಮೀನುಗಳು ಅವರಿಗೆ ಧಾರಾಳವಾಗಿ ದೊರೆಯುವುದರಿಂದ ಅವುಗಳನ್ನು ಅವರು ಸಂರಕ್ಷಿಸಿ ಇಡುವುದಿಲ್ಲ.

ಹಸಲರು ಕಾಡು ಹಂದಿಯನ್ನು ತಿನ್ನುವರು. ಆದರೆ ಅದನ್ನು ಬೇರೆ ಅಡುಗೆ ಮನೆಯಲ್ಲಿ ಬೇಯಿಸುವರು. ಅದಕ್ಕಾಗಿಯೇ ಬೇರೆ ಪಾತ್ರೆಗಳನ್ನಿರಿಸಿಕೊಂಡಿದ್ದಾರೆ. ಈ ಪಾತ್ರೆಗೆ "ಗವಲ ಗಡಿಗೆ" ಎಂದು ಹೆಸರು. ಕಾಡು ಹಂದಿ ಮಾಂಸವನ್ನು ಸೇವಿಸಿದ ನಂತರ ಮನೆಯ ಒಳಗೆ ಪ್ರವೇಶವಿಲ್ಲ. ನದಿಯಲ್ಲಿ ಸ್ನಾನಮಾಡಿ ಬಂದಾಗ ಮಾತ್ರ ಪ್ರವೇಶ. ಇದನ್ನು ಅತಿಥಿಗಳು ಮನೆಗೆ ಬಂದಾಗ ಮಾಡುವ ಪರಿಪಾಠವೂ ಇದೆ. ಹಸಲರು ಕಡಬು ಮಾಡುವರು. ಅಕ್ಕಿ ರವೆಯನ್ನು ಚೆನ್ನಾಗಿ ಬೇಯಿಸಿ ತಿರುವ ಕಲ್ಲಿನಲ್ಲಿ (ಬಿಸುವ ಕಲ್ಲು) ಬೀಸಿ, ಅದಕ್ಕೆ ಸಕ್ಕರೆ ಸೇರಿಸಿ, ಚೆನ್ನಾಗಿ ಹದಮಾಡಿ ಬಾಳೆಕೊಟ್ಟ ಮಾಡಿ ಈ ಹಿಟ್ಟನ್ನು ಬಾಳೆ ಕೊಟ್ಟನಲ್ಲಿ ತುಂಬಿ ಎರಡು ಕಡೆ ಕಟ್ಟಿ ಚೆನ್ನಾಗಿ ಬೇಯಿಸಿದ ನಂತರ ಕಡಬು ತಯಾರಾಗುತ್ತದೆ. ಈ ರೀತಿ ಮಾಡಿದ ಕಡಬು ಮೂರು ದಿನಗಳವರೆಗೆ ಬರುತ್ತದೆ.

ಹಸಲರು ವಿವಿಧ ರೀತಿಯ ಉಪ್ಪಿನ ಕಾಯಿಗಳನ್ನು ಹಾಕುವರು. ಮಾವಿನ ಕಾಯಿ, ದಡ್ಲಿಕಾಯಿ, ಲಿಂಬೆಕಾಯಿ, ಕಂಚಿಕಾಯಿ, ಕರಮಡ್ಲುಕಾಯಿ, ಅಂಬೆಹಡ್ಡಿ, ಕವಳಿಕಾಯಿ, ವಾಟೆಹುಳಿ, ಮುರುಗೆ ಕೆಂಪು, ಉಪ್ಪಂಗೆ ಕಾಯಿ ಇವುಗಳನ್ನು ಕತ್ತರಿಸಿ ಉಪ್ಪು, ಶುಂಠಿ, ಹಸಿಮೆಣಸಿನಕಾಯಿ ಮುಂತಾದವುಗಳನ್ನು ಹಾಕಿ, ಸ್ವಲ್ಪ ಕಾಯಿಸಿ, ಆರಿಸಿದ ನಂತರ ಒಂದು ಮಣ್ಣಿನ ಮಡಕೆಯಲ್ಲಿ ಇಟ್ಟರೆ ಒಂದು ವರ್ಷದ ವರೆಗೆ ಉಪ್ಪಿನ ಕಾಯಿಯನ್ನು ತಿನ್ನಲು ಬಳಸುತ್ತಾರೆ.

ಬೈನೆ ಮರದ ಹಿಟ್ಟನ್ನು ಸಹ ಇವರು ಉಪಯೋಗಿಸುವರು. ಚೆನ್ನಾಗಿ ಬಲಿತ ಮರವನ್ನು ಕತ್ತರಿಸುವರು. ಕತ್ತರಿಸುವಾಗ ಒಂದು ಎಚ್ಚರಿಕೆ ಎಂದರೆ, ಆ ಮರ ಕಡಿಯುವಾಗ ಮೇಲ್ಮುಖವಾಗಿಯೇ ಬೀಳಬೇಕು. ಇಲ್ಲವಾದರೆ ಅದು ಗಿಡದಲ್ಲಿರುವ ನೀರಿನೊಂದಿಗೆ ಸೇರಿ ಹಿಟ್ಟು ಬರುವದಿಲ್ಲ. ಆದ್ದರಿಂದ ಆ ಮರವನ್ನು ಮೇಲ್ಮುಖವಾಗಿಯೇ ಬೀಳಿಸಬೇಕು. ನಂತರ ೩ ಅಡಿಯಂತೆ ತುಂಡುಗಳನ್ನು ಮಾಡಿ ಆ ತುಂಡುಗಳನ್ನು ನೀರಿನಲ್ಲಿ ಹಾಕಿ ೧೫-೨೦ ದಿವಸಗಳವರೆಗೆ ಆ

ನೀರಿನಲ್ಲಿ ಬಿಟ್ಟು, ಸಂಪೂರ್ಣ ಕೊಳೆತ ನಂತರ ನೀರಿನಿಂದ ಬೇರ್ಪಡಿಸಿ, ಅದನ್ನು ಒಣಗಿಸುವರು. ಆ ಮರದ ತುಂಡುಗಳು ಚೆನ್ನಾಗಿ ಒಣಗಿದ ನಂತರ ಚೆನ್ನಾಗಿ ಕುಟ್ಟಿ ಚೂರು ಮಾಡುವರು. ನಂತರ ಒರಳಲ್ಲಿ ಹಾಕಿ ಪುಡಿ ಮಾಡಿ ಹಿಟ್ಟನ್ನು ಒಂದು ನೀರು ತುಂಬಿದ ಡಬರಿಯ ಮೇಲೆ ಕಂಬಳಿಯನ್ನು ಹಾಕಿ ಆ ಹಿಟ್ಟನ್ನು ಸೋಸಿದ ನಂತರ ಆ ನೀರಿನ ತಳ ಭಾಗದಲ್ಲಿರುವ ಹಿಟ್ಟನ್ನು ಮಾತ್ರ ತೆಗೆದು ಅದನ್ನು ಬಿಸಿಲಿನಲ್ಲಿ ಒಣಗಿಸಿ ಅದರಿಂದ ಹಲ್ವ, ಸಕ್ಕರೆ, ಬಣ್ಣ ಮತ್ತು ಉಪ್ಪು ಹಾಕಿ ಸಂಗಟಿಯನ್ನು ಮಾಡುತ್ತಾರೆ. ಸ್ವಲ್ಪ ಅಕ್ಕಿಯ ಹಿಟ್ಟಿನ ಜೊತೆ ಬೈನೆ ಮರದ ಹಿಟ್ಟನ್ನು ಸೇರಿಸಿ ಅದಕ್ಕೆ ಸಕ್ಕರೆ ಉಪ್ಪು ಸೇರಿಸಿ, ಕಜ್ಜಾಯ ಮಾಡಬಹುದು. ಇದು ಬಾಣಂತಿಗೆ ಪೌಷ್ಠಿಕ ಆಹಾರವಾಗಿ ಕೊಡಬಹುದು. ಇದರಲ್ಲಿ ಬಹಳಷ್ಟು ತಾಕತ್ತೂ ಇದೆ. ೨೦ ವರ್ಷಗಳ ಹಿಂದೆ ಕುಡುಗುಂಜಿ ದ್ವೀಪದಲ್ಲಿರುವ ಹಸಲರು ಬಹಳ ಬಡತನವಿರುವದರಿಂದ ಈ ಬೈನೆ ಮರದ ಹಿಟ್ಟನ್ನು ತಿಂದೆ ಜೀವನ ಸಾಗಿಸುತ್ತಿದ್ದರು. ಇವರು ಕೊಗಲ ಗಡ್ಡೆ ಕಾಯಿಯನ್ನು ಬರಿ ಬಾಯಿಯಿಂದ ಏನನ್ನೂ ಸೇರಿಸದೇ ತಿನ್ನುತ್ತಾರೆ.

ಇವರು ಮುಖ್ಯವಾಗಿ ಅಕ್ಕಿ ಉಪಯೋಗಿಸುವರು. ಕೆಲವು ಪ್ರದೇಶಗಳಲ್ಲಿ ಬೆಳಿಗ್ಗೆ ಎಂಟು ಗಂಟೆಗೆ ಮತ್ತು ಸಾಯಂಕಾಲ ಏಳು ಗಂಟೆಗೆ ಊಟ ಮಾಡುತ್ತಾರೆ. ಇವರಲ್ಲಿ ಲಘು ಆಹಾರ (ಟಿಪಿನ) ಸೇವಿಸುವ ಪದ್ಧತಿ ಇಲ್ಲ. ಅಕ್ಕಿ ಗಂಜಿಯೊಂದಿಗೆ ಮೀನುಕರಿ ಬಳಸುವದುಂಟು. ನೀರಿನಲ್ಲಿ ವಾಟೆ ಹುಳಿ ಕಿವುಚಿ, ತಂಬಳಿ ತಯಾರಿಸಿ ಅನ್ನದೊಂದಿಗೆ ಸೇರಿಸಿ ಊಟ ಮಾಡುವರು.

ಇವರು ಸಾಮಾನ್ಯವಾಗಿ ಮಲೆನಾಡಿನಲ್ಲಿ ಸಿಗುವ ಇರುವೆ ಆಕಾರದ ಚಿಗಳಿ ಕೊಟ್ಟಿಯನ್ನು ಮರದಿಂದ ತಂದು ಚಿಗಳಿ ಮೊಟ್ಟೆ ಆರಿಸಿ ಚಟ್ನಿ ಸಿದ್ಧಪಡಿಸುವರು. ಇವರ ವಿಶೇಷ ಸಾರು ಚಿಗಳೆ ಸಾರು. ಮಲೆನಾಡಿನಲ್ಲಿ ವಾಸಿಸುವ ಭಟ್ಟರು ಮತ್ತು ಲಿಂಗಾಯತರನ್ನು ಬಿಟ್ಟು ಉಳಿದವರೆಲ್ಲರೂ ಈ ಸಾರವನ್ನು ಸೇವಿಸುವರು. ಮರದ ಮೇಲೆ ಗೂಡು ಕಟ್ಟಿದ ಚಿಗಳೆಗಳನ್ನು ತಂದು ಅವುಗಳನ್ನು ಮೊಟ್ಟೆಯಿಂದ ಬೇರ್ಪಡಿಸಿ, ಮೊರಕ್ಕೆ ತುಂಬಿ ಅನಂತರ ಉಪ್ಪನ್ನು ನೀರಿಗೆ ಹಾಕಿ ತೇಲುವ ಚಿಗಳೆಗಳನ್ನು ಆರಿಸಿ ತೆಗೆದು ಅದಕ್ಕೆ ಖಾರ ಹಾಕಿ ಸಾರ ಮಾಡುತ್ತಾರೆ.

ಮಳೆಗಾಲದಲ್ಲಿ ಬತ್ತದ ಗದ್ದೆಗಳಲ್ಲಿರುವ ಕಾರೇಡಿ, ಚಳ್ಳೇಡಿ, ಮೀನು ಹಿಡಿದು ತಂದು ಸಾರು ಮಾಡಿ ಊಟ ಮಾಡುವರು. ಕಾಡಿನಲ್ಲಿ ವಿಪುಲವಾಗಿ ದೊರೆಯುವ ಕರಡಿ ಸೊಪ್ಪು ಕಣಪೆಕಾಯಿ, ಕಳಲೆ, ನೆರೆಗೆಣಸು, ಕೆಸುವಿನ ಸೊಪ್ಪು ಮತ್ತಿತರ ಕಾಡುಗಡ್ಡೆಗಳನ್ನು ತಂದು ವಿವಿಧ ರೀತಿಯ ಪಲ್ಯಗಳನ್ನು ಮಾಡುತ್ತಾರೆ. ಹಸಲರಲ್ಲಿ ಕೂಲಿ ಮಾಡುವವರೇ ಹೆಚ್ಚು. ಇವರು ಬೆಳಿಗ್ಗೆ ಅಕ್ಕಿ ಗಂಜಿ ಕುಡಿದು ಕೆಲಸಕ್ಕೆ ಹೋಗುವರು. ಸೊರಬ ತಾಲೂಕಿನ ಹಸಲರು ಶ್ರೀಮಂತರಿರುವುದರಿಂದ ಮತ್ತು ನಗರದ ಪ್ರಭಾವ ಇವರ ಮೇಲೆ ಬಿದ್ದಿರುವುದರ ಪರಿಣಾಮ ಇವರು ದಿನಕ್ಕೆ ಮೂರು ಸಲ ಊಟ ಮಾಡುತ್ತಾರೆ. ಅಷ್ಟೇ ಅಲ್ಲ ಅಕ್ಕಿ, ರಾಗಿ, ಗೋದಿ, ಜೋಳ ಮುಂತಾದವುಗಳನ್ನು ಊಟಕ್ಕೆ ಉಪಯೋಗಿಸುತ್ತಾರೆ.

ಹಸಲರು ಜೇನು ಸಂಗ್ರಹ ಮಾಡುವರು. ಹಲಸಿನ ಹಣ್ಣು, ಮಾವಿನ ಹಣ್ಣು ಮತ್ತು ಕಾಡು ಹಣ್ಣುಗಳನ್ನು ನಿತ್ಯ ಬಳಸುವರು. ನರೆ, ಉಯ್ಯರ, ಮೂಲಗೆಣಸು, ಕಾಡುಗಡ್ಡೆ ಮುಂತಾದವುಗಳನ್ನು ಬಳಸುವರು. ಕೆಸುವಿನದಂಟು ಮತ್ತು ಸೊಪ್ಪಿನಿಂದ ತಯಾರಿಸಿದ ಮೇಲೋಗರ ಇವರಿಗೆ ಪ್ರಿಯವಾದವು. ಗಡ್ಡೆಗಳು ಸಾಮಾನ್ಯವಾಗಿ ಶ್ರಾವಣದಿಂದ ಕಾರ್ತಿಕದವರೆಗೆ ಸಿಗುವುದರಿಂದ ಮಕ್ಕಳು ಮತ್ತು ಹೆಂಗಸರು ಇವುಗಳನ್ನು ಆರಿಸಲು ಕಾಡಿಗೆ ಹೋಗುವರು.

೩.೮ ಶೋಭನ

ಶೋಭನ ನಡೆಯುವದು ಗಂಡಿನ ಮನೆಯಲ್ಲಿ, ಹೆಣ್ಣನ್ನು ಆಕೆಯ ತವರು ಮನೆಯಿಂದ ಗಂಡನ ನೆಂಟರು ಕರೆದುಕೊಂಡು ಬರುವರು. ಆಕೆಯನ್ನು ಪೂಜಿಸಿ, ಮನೆಯೊಳಗೆ ಕರೆದುಕೊಂಡು ಬರುವರು. ನಂತರ ಗಂಡ ಹೆಂಡತಿಯರನ್ನು ಮನೆಯ ಮೊಗಸಾಲೆಯಲ್ಲಿ ಮಲಗಿಸುವರು. "ಇದನ್ನು ಶೋಭನ ಅಥವಾ ಗರ್ಭಧಾನ ಸಂಸ್ಕಾರವೆಂತಲೂ ಕರೆಯುವರು". (ಶಂಕರರಾವ್, ಚ ನ :೧೯೯೮: ೫೩)

ಶೋಭನ ವಿವಾಹದ ಒಂದು ಅಂಗವಾಗಿತ್ತು. ಯಾವಾಗ ವಿವಾಹ ನಡೆದರೂ ಗಂಡು ಹೆಣ್ಣು ಕೂಡಲು ದೀಪಾವಳಿ ತನಕ ಕಾಯಬೇಕಿತ್ತು. ನರಕ ಚತುರ್ದಶಿ ದಿನ ಹೆಣ್ಣು ಗಂಡು ಕೂಡುವುದು ಸಂಪ್ರದಾಯ. ಆದರೆ ಈಗ ಈ ಸಂಪ್ರದಾಯ ಮಾಯವಾಗಿದೆ. ಈಗ ಮದುವೆಯಾದ ನಾಲ್ಕನೇ ದಿನಕ್ಕೆ ಶೋಭನ ಶಾಸ್ತ್ರವನ್ನು ಮಾಡುತ್ತಾರೆ.

೩.೯ ಜನನ ಕ್ರಮ

ಋತು ಚಕ್ರ ನಿಂತ ಮೇಲೆ ಗರ್ಭಿಣಿಯನ್ನು ಗುರುತಿಸುತ್ತಾರೆ. ಚೊಚ್ಚಿಲ ಬಸುರಿಗೆ ವಿಶೇಷ ಕಾಳಜಿ ನೀಡಿ ಆರೈಕೆ ಮಾಡಲಾಗುವುದು. ಮೂರನೇ ತಿಂಗಳವಾಗುವದಕ್ಕಿಂತ ಪೂರ್ವದಲ್ಲಿ ಗರ್ಭಿಣಿ ಸ್ತ್ರೀಯರಿಗೆ ವಿಶೇಷ ತಿಂಡಿಗಳನ್ನು ತಿನಿಸುವರು. ಅಷ್ಟೇ ಅಲ್ಲ ಮೂರು ತಿಂಗಳವರೆಗೆ ಗರ್ಭಿಣಿಯಾಗಿರವುದನ್ನು ಗೌಪ್ಯವಾಗಿ ಇಡುವರು. ಏಕೆಂದರೆ ಮೂರು ತಿಂಗಳೊಳಗಾಗಿ ಚವಿಯಾಗುವ (ಗರ್ಭಪಾತ) ಸಾಧ್ಯತೆ ಇದೆ. ಏಳನೇ ತಿಂಗಳಲ್ಲಿ ಗರ್ಭಿಣಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಮಾಡಿ ಉಣಬಡಿಸಲಾಗುವದು. ಅಂದು ಬಂಧು-ಬಾಂಧವರು ಮನೆಗೆ ಆಗಮಿಸಿ, ಅವಳಿಗೆ ಕಾಣಿಕೆ ನೀಡುವರು. ಈ ಸಮಾರಂಭಕ್ಕೆ ಬಯಕೆಯ ಸಂಮಾನ ಎಂದು ಕರೆಯುತ್ತಾರೆ. ಸೊರಬ, ಹೊಸನಗರ, ತೀರ್ಥಹಳ್ಳಿ, ಸಿದ್ಧಾಪೂರ, ಶಿರಸಿ ತಾಲೂಕಿನಲ್ಲಿ ಇದಕ್ಕೆ "ಹೂ ಮೂಡಿಸುವ ಶಾಸ್ತ್ರ" ಎಂದು ಕರೆಯುತ್ತಾರೆ. ಏಳು ತಿಂಗಳು ತುಂಬಿದ ಬಳಿಕ ಗರ್ಭಿಣಿಯನ್ನು ತವರು ಮನೆಗೆ ಕರೆದುಕೊಂಡು ಹೋಗುವರು.

ಒಂಬತ್ತು ತಿಂಗಳು ತುಂಬುವ ತನಕ ಗರ್ಭಿಣಿ ಯಾವುದೇ ಪ್ರತಿಬಂಧವಿಲ್ಲದೇ ತನ್ನ ನಿತ್ಯದ ಕೆಲಸ ಕಾರ್ಯಗಳನ್ನು ಮಾಡುವಳು. ಹೆರಿಗೆ ದಿವಸ ಸಮೀಪಿಸುತ್ತಿದ್ದಂತೆ ವಿಶ್ರಾಂತಿ ಪಡೆಯುವಳು.

[illegible]

ಗರ್ಭಿಣಿ ಸ್ತ್ರೀಗೆ ಕುಂಬಳ ಕಾಯಿ, ಹುಣಸಿ ಹಣ್ಣು, ಪಪ್ಪಾಯಿ, ಕಳಲೆ ಮತ್ತು ಬದನೆ ಇವುಗಳನ್ನು ತಿನ್ನಲು ಕೊಡುವದಿಲ್ಲ. ಮನೆಯ ಮೂಲೆಯೊಂದರಲ್ಲಿ ಬಟ್ಟೆಯೊಂದನ್ನು ಕಟ್ಟಿ ಅವಳನ್ನು ಪ್ರತ್ಯೇಕ ಇರಿಸಲಾಗುವುದು. ಸಾಗರ ತಾಲೂಕಿನ ಹಿರೇಮನೆ, ಬೆಳ್ಳೆಣ್ಣೆ, ಗಿಳಿಗಾರುಗಳಲ್ಲಿ ಹೆರಿಗೆಗಾಗಿಯೇ ಪ್ರತ್ಯೇಕ ಗುಡಿಸಲುಗಳನ್ನು ಹಾಕುವರು. ಹೆರಿಗೆಯ ನೋವು ಪ್ರಾರಂಭವಾದ ಕೂಡಲೇ ಬುಡಕಟ್ಟಿನ ಹಿರಿಯ ಸೂಲಗಿತ್ತಿಯನ್ನು ಕರೆಸುವದುಂಟು. ಆ ಸೂಲಗಿತ್ತಿ ಗರ್ಭಿಣಿ ಸ್ತ್ರೀಯ ಯೋನಿಗೆ ಎಣ್ಣೆ ಹಚ್ಚುವಳು ಇದರಿಂದ ಮಗುವಿನ ಜನನ ಸರಳವಾಗುತ್ತದೆ. ಸರಳ ಜನನವಾಗಲು ಇನ್ನೂ ಒಂದು ಉಪಾಯವಿದೆ. ಗರ್ಭಿಣಿ ಸ್ತ್ರೀಯನ್ನು ಬಹಿರ್ದೆಸೆಗೆ ಕೂಡುವ ಹಾಗೆ ಕೂಡಿಸುವರು ಇದರಿಂದಲೂ ಮಗು ಸರಾಗವಾಗಿ ಜನಿಸುವದು. ಸೂಲಗಿತ್ತಿಯು ಹೊಕ್ಕಳ ಬಳ್ಳಿಯನ್ನು ಕತ್ತಿಯಿಂದ ಕತ್ತರಿಸಿ ಸತ್ತೆ (ಮಾಸ)ಯನ್ನು ಅಡಿಕೆಯ ಹಾಳಿ ಅಥವಾ ಮಡಿಕೆಯಲ್ಲಿ ತುಂಬವಳು. ಅನಂತರ ಮನೆಯಿಂದ ದೂರ ಒಯ್ದು ಅದನ್ನು ಹುಗಿಯುವಳು. ಇದಕ್ಕಾಗಿ ಸೂಲಗಿತ್ತಿಗೆ ದಕ್ಷಿಣೆ ಮತ್ತು ದವಸ ಧಾನ್ಯ ನೀಡುವರು. ಕೆಲವು ಸಮಯದ ನಂತರ ತಾಯಿಗೆ ಸ್ನಾನ ಮಾಡಿಸುವರು. ಮಗುವಿಗೆ ಸ್ವಲ್ಪ ಹರಳೆಣ್ಣೆ ಇಲ್ಲವೆ ಜೇನು ತುಪ್ಪ ಕುಡಿಸಲಾಗುವದು. ನಂತರ ತಾಯಿ ತನ್ನ ಮಗುವಿಗೆ ಎದೆ ಹಾಲುಣಿಸುವಳು. ಈ ವೇಳೆಯಲ್ಲಿ ತಾಯಿ ಮತ್ತು ಮಗುವನ್ನು ಯಾರೂ ಮುಟ್ಟುವದಿಲ್ಲ. ಬಾಣತಿಗೆ ಅನ್ನಕ್ಕೆ, ಮೆಣಸಿನಕಾಳು ಪುಡಿ ಬೆರೆಸಿ ಊಟ ಮಾಡಿಸುವರು. ಮೂರು ದಿನಗಳಿಂದ ಹದಿನಾರು ದಿನಗಳವರೆಗೆ ಖಾರ ಸಾರ ಮಾಡುವರು. ಐದನೇಯ ದಿವಸಕ್ಕೆ "ಪಂಚಕವಿ" ಮಾಡುವರು. ಪಂಚಕವಿ ಎಂದರೆ ಆಲ, ಹಲಸ, ಮಾವು, ಅತ್ತಿ ಮತ್ತು ಗೋ-ಮೂತ್ರ ಇವುಗಳ ಮಿಶ್ರಣವನ್ನು ಹಾಲು ಮತ್ತು ನೀರಿನೊಂದಿಗೆ ಸೇರಿಸಿ ಬಾಣತಿಗೆ ಕೊಡುವರು. ಇದಕ್ಕೆ ಪಂಚಕವಿ ಎನ್ನುವರು.

ಬಾಣತಿ ಸ್ನಾನ ಮಾಡುವ ಗುಡಿಸಲಿನ ಹಿಂದೆ ಒಂದು ಗುಂಡಿಯನ್ನು ತೋಡುವರು. ಇದಕ್ಕೆ ಆಮೆ ಗುಂಡಿ ಎಂದು ಕರೆಯುತ್ತಾರೆ. ಈ ಗುಂಡಿಯನ್ನು ತೋಡುವವ ಹೆರಿಗೆಯಾದವಳ ಪತಿ. ಹೊಕ್ಕಳು ಬಳ್ಳಿಯನ್ನು ಗುಂಡಿಯಲ್ಲಿ ಹಾಕಿ ಬಾಳೆ ಎಲೆ ಮುಚ್ಚಿ ಸ್ವಲ್ಪ ಮಣ್ಣು ಹಾಕುತ್ತಾರೆ. ಹನ್ನೊಂದನೆಯ ದಿನಕ್ಕೆ ಆ ಗುಂಡಿಯನ್ನು ಸಂಪೂರ್ಣವಾಗಿ ಮುಚ್ಚಿ, ಒಂದು ಬಾಳೆ ಗಿಡ ಮತ್ತು ಒಂದು ಅಡಿಕೆ ಮರವನ್ನು ಆ ಸ್ಥಳದಲ್ಲಿ ನೆಡುವರು. ಅನಂತರ ಅದಕ್ಕೆ ಗೋ ಮೂತ್ರ ಹಾಕುವರು. ಬಾಣಂತಿ ಹನ್ನೊಂದನೆಯ ದಿವಸಕ್ಕೆ ಸ್ನಾನ ಮಾಡಿ ಬಾಳೆ ಗಿಡವನ್ನು ಪೂಜಿಸುತ್ತಾಳೆ. ಹೀಗೆ ಪೂಜೆ ಮಾಡುವಾಗ ಅವಳು ಮಗುವನ್ನು ಜೊತೆಯಾಗಿ ಕರೆದುಕೊಂಡು ಹೋಗುತ್ತಾಳೆ. ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಒಬ್ಬಳೆ ಪೂಜೆ ಮಾಡುವಳು. ಅಂದು ಪಾಯಸ, ಕಡಬು ಮತ್ತು ಅನ್ನ ಮಾಡಿ ಬಂಧು-ಬಾಂಧವರನ್ನು ಊಟಕ್ಕೆ ಆಹ್ವಾನಿಸುವಳು. ಬಾಳೆ ಗಿಡಕ್ಕೆ ಎಡೆ ಹಿಡಿಯುವ ಪದ್ಧತಿ ಇದೆ.

ಬಾಣಂತಿಯ ಮೈಲಿಗೆಯನ್ನು ಕೆಲವು ಕಡೆ ಐದು ದಿನಗಳವೆಗೆ ಆಚರಿಸಿದರೆ, ಇನ್ನೂ ಕೆಲವೆಡೆ ಹನ್ನೊಂದನೆ ದಿನಗಳ ತನಕ ಆಚರಿಸುತ್ತಾರೆ. ಈ ದಿನಗಳಲ್ಲಿ ಮನೆಯ ಎಲ್ಲ ಸದಸ್ಯರನ್ನೂ ಮೈಲಿಗೆಯಾದವರೆಂದು ಪರಿಗಣಿಸಲಾಗುವದು. ಹನ್ನೊಂದನೆಯ ದಿನದ ನಂತರ ಮನೆಯನ್ನೆಲ್ಲಾ ಸಾರಿಸಿ ಶುದ್ಧಗೊಳಿಸುತ್ತಾರೆ. ಅಂದು ಬಾಣಂತಿಗೆ ಅಭ್ಯಂಜನ ಸ್ನಾನ ಮಾಡಿಸುವರು. ಬ್ರಾಹ್ಮಣ ಪುರೋಹಿತ ಅಥವಾ ಲಿಂಗಾಯತ ಜಂಗಮನಿಂದ ತರಿಸಿದ ತೀರ್ಥವನ್ನು ಮನೆಯ ತುಂಬೆಲ್ಲಾ ಸಿಂಪಡಿಸಿ ಶುದ್ಧಗೊಳಿಸುವರು. ಕುಟುಂಬದ ಸದಸ್ಯರು ಸ್ನಾನದ ಬಳಿಕ ಈ ತೀರ್ಥವನ್ನು ಸ್ವೀಕರಿಸುವರು. ಒಂದು ಮಡಿಕೆಯಲ್ಲಿ ನೀರು ಹಾಕಿ ಇಲ್ಲವೆ ಬಾವಿಗೆ ಗಂಗೆಯೆಂದು ಪೂಜಿಸುವರು. ಹದಿನಾರನೇ ದಿನಕ್ಕೆ ಶುದ್ಧ ಕಾರ್ಯ ಮಾಡುವರು. ಸೋದರತ್ತೆ ಎಲೆ, ಅಡಿಕೆ ಮತ್ತು ಅರಿಷಿಣ ಕೊಟ್ಟು ಮಗು ತಾಯಿಯನ್ನು ಒಳಗೆ ಕರೆದುಕೊಂಡು ಬರುವಳು. ಆ ದಿನ ಚಿತ್ರಾನ್ನ, ಪಾಯಸ ಮತ್ತು ಕಡಬು ಮಾಡುವರು. ಅಂದು ಮಗುವಿನ ತಂದೆ ಬರಲೇಬೇಕು.

೩.೧೦ ನಾಮಕರಣ

ಕೆಲವು ಕಡೆ ಹನ್ನೊಂದನೆ ದಿವಸಕ್ಕೆ ನಾಮಕರಣ ಮಾಡಿದರೆ, ಸಾಗರ ತಾಲೂಕಿನ ಹಿರೇಮನೆ ಸುತ್ತಮುತ್ತಲಿನ ಹಸಲರ ಹಾಡಿಕೇರಿಯಲ್ಲಿ ಹದಿನಾರನೇ ದಿವಸಕ್ಕೆ ನಾಮಕರಣ ಮಾಡುವರು. ಮಗುವಿಗೆ ಮೊದಲು ದೇವರ ಹೆಸರಿನಿಂದ ಕರೆಯುವರು. ಮಗುವಿಗೆ ತೊಟ್ಟಲಿಗೆ ಹಾಕುವದು ನಾಮಕರಣವಾದ ಬಳಿಕ. ಅಲ್ಲಿಯ ತನಕ ಮಗುವನ್ನು ಮಲಗಿಸುವದು ಅಡಿಕೆ ಹಾಳಿ ಅಥವಾ ಬಿದಿರಿನ ಬುಟ್ಟಿಯಲ್ಲಿ. ಕೆಲವು ಕಡೆ ತೊಟ್ಟಿಲು ಬದಲಾಗಿ ಗೋಣಿ ಚೀಲವನ್ನೇ ತೊಟ್ಟಿಲನ್ನಾಗಿ ಮಾಡಿ ಮಗುವನ್ನು ಮಲಗಿಸುವರು. ಇವರು ಉಪಯೋಗಿಸುವ ತೊಟ್ಟಿಲುಗಳು ಎರಡು ವಿಧ.

೧)ಹೂ ತೊಟ್ಟಿಲು

೨)ಮಂಕರಿ ತೊಟ್ಟಿಲು

ಗಂಡು ಮಕ್ಕಳಿಗೆ ಬೀರ, ಗಣಪ, ದುಗ್ಗ, ದ್ಯಾವ, ತಿಮ್ಮ, ಬೆನವ ಮತ್ತು ಮರಿಯಪ್ಪ ಎಂದು ಮೊದಲು ನಾಮಕರಣ ಮಾಡುತ್ತಿದ್ದರು. ಆದರೆ ಈಗ ಶ್ರೀನಿವಾಸ, ಕೇಶವ, ಪ್ರಸನ್ನ ಮುಂತಾದ ಹೆಸರುಗಳನ್ನಿಡುವರು. ಮೊದಲು ಹೆಣ್ಣು ಮಕ್ಕಳಿಗೆ ಸೀತವ್ವ, ಗುತ್ಯೆವ್ವ, ಚೌಡವ್ವ, ಗುತ್ತಿ, ಕೂರಿ ಮುಂತಾದ ಹೆಸರುಗಳನ್ನು ಇಡುತ್ತಿದ್ದರು ಆದರೆ ಇಂದು ಗೀತಾ, ಮಂಜರಿ, ಲಕ್ಷ್ಮೀ, ಕೀರ್ತಿ, ಸಾವಿತ್ರಿ ಮೊದಲಾದ ಹೆಸರುಗಳನ್ನಿಡುವರು.

ಮಗುವಿಗೆ ಆಹಾರ ನೀಡಲು ಆರಂಭಿಸುವದು ಆರು ತಿಂಗಳ ಬಳಿಕ, ಜೊತೆಗೆ ತಾಯಿಯ ಎದೆ ಹಾಲನ್ನು ಕುಡಿಸಲಾಗುವದು. ಬಾಣಂತಿಯು ಸುಮಾರು ಒಂದು ತಿಂಗಳವರೆಗೆ ಪಥ್ಯ ಮಾಡುವಳು. ನಲವತ್ತೈದು ದಿವಸಗಳ ನಂತರ ಪತಿ ಮನೆಗೆ ಹೋಗಬಹುದು. ಶಿಶು ಮರಣ ಅಥವಾ ಜನನ ಪೂರ್ವದಲ್ಲಿ ಮಗು ಸಾವನ್ನಪ್ಪುವದನ್ನು ತಪ್ಪಿಸಲು ಇವರು ಹರಕೆ ಹೊರುತ್ತಾರೆ.

೩.೧೧ ಚೌಲ

ಈ ಶಾಸ್ತ್ರವನ್ನು ಸೋದರ ಮಾವ ಮಾಡುತ್ತಾನೆ. ಮಗುವಿಗೆ ಐದು, ಏಳು ಅಥವಾ ಒಂಬತ್ತನೆಯ ವರ್ಷಗಳಲ್ಲಿ ಇವರು ಚೌಲದ ಶಾಸ್ತ್ರ ಮಾಡುವರು. ಈ ಶಾಸ್ತ್ರವನ್ನು ಗಂಡು ಮಕ್ಕಳಿಗೆ ಮಾತ್ರ ಮಾಡುವರು. ಒಂದು ವೇಳೆ ಹರಕೆ ಹೊತ್ತಿದ್ದರೆ ಹೆಣ್ಣು ಮಕ್ಕಳಿಗೂ ಕೂಡಾ ಮಾಡುವರು. ಹರಕೆ ಹೊತ್ತವರು ಸೊರಬ ತಾಲೂಕಿನ ಚಂದ್ರಗುತ್ತಿ ಅಥವಾ ಶಿರಸಿ ತಾಲೂಕಿನ ಗುಡ್ನಾಪೂರಕ್ಕೆ ಅಥವಾ ಸಿಗಂಧಲೂರ ಸಿಗಂಧೇಶ್ವರಿ ದೇವಸ್ಥಾನಕ್ಕೆ ತೆರಳಿ ಹರಕೆ ಸಲ್ಲಿಸಿ ಬರುವರು. ಅಕ್ಕಿಯಿಂದ ಬರೆದ ಹಸೆಯ ಮೇಲೆ ಮಗುವನ್ನು ಕೂರಿಸಿದ ಬಳಿಕ ಸೋದರ ಮಾವ ನಾಲ್ಕು ಕೂದಲನ್ನು ಕತ್ತರಿಸಲೇಬೇಕು. ಇದಕ್ಕಾಗಿ ಈತನಿಗೆ ಅಕ್ಕಿ, ಒಂದು ಪಂಜೆ ಮತ್ತು ದಕ್ಷಿಣೆ ಕೊಡಲಾಗುವದು. ನಂತರ ಮಗುವಿಗೆ ಸುಮಂಗಲೆಯರು ಆರತಿ ಬೆಳಗುವರು. ಗಂಡಸರು ಮುಯ್ಯ ನೀಡುವರು.

೩.೧೨ ವಿವಾಹ

ಹಿಂದೂ ಷೋಡಶ ಸಂಸ್ಕಾರಗಳಲ್ಲಿ ವಿವಾಹ ಹದಿನೈದನೆಯ ಸಂಸ್ಕಾರ೩. (ಹಿರೇಮಠ, ಎಸ್ ಜಿ ೧೯೯೪: ೯೫ :೩೮) ವಿವಾಹ ಎರಡು ಭಿನ್ನ ಕುಟುಂಬಗಳನ್ನು ಸೇರಿಸುವ ಕೊಂಡಿ ಎಂಬ ನಂಬಿಕೆ ಹಸಲರಲ್ಲಿದೆ. ಹಸಲರಲ್ಲಿ ಬಾಲ್ಯ ವಿವಾಹ ಪದ್ಧತಿ ಇಲ್ಲ. ಅಷ್ಟೇ ಅಲ್ಲ. ವಿವಾಹ ಪೂರ್ವ ಲೈಂಗಿಕ ಸಂಪರ್ಕ ಪಾಪ ಎಂಬ ನಂಬಿಕೆ. ಹೆಣ್ಣು ಋತುಮತಿಯಾದ ನಂತರ ವಿವಾಹ ಮಾಡುವರು. ಸಾಮಾನ್ಯವಾಗಿ ಹೆಣ್ಣು ಮಕ್ಕಳ ವಿವಾಹ ವಯಸ್ಸು ೧೬ ರಿಂದ ೨೦ರ ವರೆಗೆ. ಗಂಡು ಮಕ್ಕಳ ವಿವಾಹ ವಯಸ್ಸು ೨೦-೨೫ರ ವರೆಗೆ. ಪ್ರಾಚೀನ ಕಾಲದಲ್ಲಿ ತೆರವು ಕೊಡುವ ಪದ್ಧತಿ ಇತ್ತು. ಇದರಿಂದ ಎಷ್ಟೋ ಗಂಡು ಮಕ್ಕಳು ತೆರವು ಕೊಡದಿದ್ದಕ್ಕಾಗಿ ವಿವಾಹವಾಗದೇ ಬ್ರಹ್ಮಚಾರಿಗಳಾದ ಉದಾಹರಣೆಗಳು ಇವೆ. ಆದರೆ ಇಂದು ಆ ಪದ್ಧತಿ ಮಾಯವಾಗಿ ವರದಕ್ಷಿಣೆ ಬಂದಿದೆ. ಹಿರೇಮನೆ ಸುತ್ತ ಮುತ್ತಲಿನ ಹಸಲರ ಹಾಡಿಕೇರಿಯ ಹಿರಿಯರು ಕೂಡಿಕೊಂಡು ವರದಕ್ಷಿಣೆಯನ್ನು ೧೦೧ (ಒಂದು ನೂರಾ ಒಂದು ರೂ)ಕ್ಕೆ ಸೀಮಿತಗೊಳಿಸಿದ್ದಾರೆ. ಆದರೆ ಸೊರಬ ತಾಲ್ಲೂಕಿನ ಹಸಲರಲ್ಲಿ ೫೦ ಸಾವಿರದಿಂದ ೧ ಲಕ್ಷದವರೆಗೂ ವರದಕ್ಷಿಣೆ ಕೊಟ್ಟದ್ದು ಮತ್ತು ತೆಗೆದುಕೊಂಡ ಉದಾಹರಣೆಗಳಿವೆ. ಹಸಲರಲ್ಲಿ ಹಿರಿಯಕ್ಕನ ಮಗಳನ್ನು ವಿವಾಹವಾಗುವ ಪದ್ಧತಿ ಇದೆ. ಬಹು ಪತ್ನಿತ್ವಕ್ಕೆ ಇವರಲ್ಲಿ ಅವಕಾಶವಿಲ್ಲ. ಆದರೆ ಮೊದಲನೆಯ ಪತ್ನಿಗೆ ಮಕ್ಕಳಾಗದಿದ್ದರೆ ಅಥವಾ ಯಾವುದೇ ವಾಸಿಯಾಗದ ರೋಗದಿಂದ ಬಳಲುತಿದ್ದರೆ ಮರು ಮದುವೆ ಮಾಡಿಕೊಳ್ಳಲು ಅವಕಾಶವಿದೆ.

ಕೋಷ್ಟಕ–೩.೭ ಸಮೀಕ್ಷೆ ಮಾಡಿದ ಹಸಲರ ವೈವಾಹಿಕ ಸ್ಥಾನಮಾನ

ಜಿಲ್ಲೆಗಳು		ಅವಿವಾಹಿತ	ವಿವಾಹಿತ	ವಿಧವೆ	ವಿಚ್ಛೇದಿತ	ಪರಿತ್ಯಜಿತ	ಇನ್ನಿತರ	ಒಟ್ಟು
ಉತ್ತರ ಕನ್ನಡ	ಒಟ್ಟು	೩	೯೪	೧೯	–	–	–	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೨.೬%	೮೧%	೧೬.೪%	–	–	–	೧೦%
	ಪ್ರತಿಶತ (ವರ್ಗಗಳಲ್ಲಿ)	೧೮.೮%	೨೨.೭%	೨೨.೬%	–	–	–	೨೨.೪%
	ಒಟ್ಟು ಪ್ರತಿಶತ	೦.೬%	೧೮.೨%	೩.೭%	–	–	–	೨೨.೪%
ಉಡುಪಿ	ಒಟ್ಟು	೨	೫೭	೧೩	–	–	–	೭೨
	ಪ್ರತಿಶತ (ಜಿಲ್ಲೆಯೊಳಗೆ)	೨.೮%	೭೯.೨%	೧೮.೧%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೨.೫%	೧೩.೮%	೧೫.೫%	–	–	–	೧೩.೯%
	ಒಟ್ಟು ಪ್ರತಿಶತ	೦.೪%	೧೧%	೨.೫%	–	–	–	೧೩.೯%
ಚಿಕ್ಕಮಗಳೂರು	ಒಟ್ಟು	೧	೮೪	೨೧	–	–	–	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೦.೯%	೭೯.೨%	೧೯.೮%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೬.೩%	೨೦.೩%	೨೫%	–	–	–	೨೦.೫%
	ಒಟ್ಟು ಪ್ರತಿಶತ	೦.೨%	೧೬.೨%	೪.೧%	–	–	–	೨೦.೫%
ದಕ್ಷಿಣ ಕನ್ನಡ	ಒಟ್ಟು	–	೬	–	–	–	–	೬
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	–	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೧.೪%	–	–	–	–	೧.೨%
	ಒಟ್ಟು ಪ್ರತಿಶತ	–	೧.೨%	–	–	–	–	೧.೨%

ಜಿಲ್ಲೆಗಳು		ಅವಿವಾಹಿತ	ವಿವಾಹಿತ	ವಿಧವೆ	ವಿಚ್ಛೇದಿತ	ಪರಿತ್ಯಜಿತ	ಇನ್ನಿತರ	ಒಟ್ಟು
ಶಿವಮೊಗ್ಗ	ಒಟ್ಟು	೧೦	೧೭೩	೩೧	–	೧	೨	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೪.೬%	೭೯.೭%	೧೪.೩%	–	೦.೫%	೦.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೬೨.೫%	೪೧.೮%	೩೬.೯%	–	೧೦೦%	೧೦೦%	೪೨%
	ಒಟ್ಟು ಪ್ರತಿಶತ	೧.೯%	೩೩.೫%	೬%	–	೦.೨%	೦.೪%	೪೨%
ಒಟ್ಟು	ಒಟ್ಟು	೧೬	೪೧೪	೮೪	–	೧	೨	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೩.೧%	೮೦.೧%	೧೬.೨%	–	೦.೨%	೦.%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	–	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೩.೧%	೮೦.೧%	೧೬.೨%	–	೦.೨%	೦.೪%	೧೦೦%

ಪ್ರಾಯಕ್ಕೆ ಬಂದ ಹುಡುಗನ ಸಂಬಂಧಿಕರು ವಧುವನ್ನು ಅರಸಲು(ಹುಡುಕಾಟ) ಪ್ರಾರಂಭಿಸುತ್ತಾರೆ. ಸಾಮಾನ್ಯವಾಗಿ ಅಪರಿಚಿತ ಕುಟುಂಬದೊಡನೆ ವಿವಾಹ ಸಂಬಂಧ ಬೆಳೆಸುವುದಿಲ್ಲ. ಸಾಧ್ಯವಾದರೆ ತಮ್ಮ ಹತ್ತಿರದ ಹಾಡಿಕೇರಿ ವಧುವಿನ ಜೊತೆ ಸಂಬಂಧ ಬೆಳೆಸುವರು. ತಾಯಿಯ ಬಳಿಯು ವಿವಾಹ ಸಂಬಂಧದಲ್ಲಿ ಪರಿಗಣನೆಗೆ ತೆಗೆದುಕೊಳ್ಳುವದಿಲ್ಲ. ಇಲ್ಲಿ ತಂದೆಯ ಬಳಿಯನ್ನು ವಿವಾಹ ಸಂದರ್ಭದಲ್ಲಿ ಪರಿಗಣೆನೆಗೆ ತೆಗೆದುಕೊಳ್ಳುವರು. ಒಂದೇ ಬಳಿಯ ವಧು – ವರರಲ್ಲಿ ವೈವಾಹಿಕ ಸಂಬಂಧ ಆಗುವದಿಲ್ಲ. ಯಾಕೆಂದರೆ, ಇವರು ಅಣ್ಣ ತಂಗಿಯರು ಆಗುತ್ತಾರೆ. ಆದ್ದರಿಂದ ಭಿನ್ನ ಬಳಿಗಳ ನಡುವೆ ವಿವಾಹ ಸಂಬಂಧ ಏರ್ಪಡಿಸುವರು. ಸೋದರತ್ತೆ ಅಥವಾ ಸೋದರ ಮಾವನ ಮಗಳನ್ನು ವಿವಾಹವಾಗಬಹುದು. ತುಳು ಮಾತನಾಡುವ ಹಸಲರು ಹಿರಿಯ ಸೋದರಿಯ ಮಗಳನ್ನು ವಿವಾಹವಾಗುವುದು ಧರ್ಮ ಬಾಹಿರವೆಂದು ಭಾವಿಸುತ್ತಾರೆ. ಆದರೆ ಕನ್ನಡ ಮಾತನಾಡುವ ಹಸಲರು ಇಂಥ ಸಂಬಂಧಗಳನ್ನು ಮನ್ನಿಸುವರು. ಎರಡು ಕುಟುಂಬಗಳು ಪರಸ್ಪರ ಒಂದು ಹೆಣ್ಣನ್ನು ಕೊಟ್ಟು ಆ ಮನೆಯಿಂದ ಹೆಣ್ಣನ್ನು ತೆಗೆದುಕೊಳ್ಳಬಹುದು. ಈ ಪದ್ಧತಿಗೆ "ಹೆಣ್ಣಿಗೆಹೆಣ್ಣು" ಎನ್ನುವರು. ಒಂದು ಹೆಣ್ಣು ಹೊರಕ್ಕೆ ಹೋದರೆ ಒಂದು ಹೆಣ್ಣು ಮನೆಗೆ ಬರುವಳು. ಇವರಲ್ಲಿ ಸಹೋದರಿಯರ ಬಹುಪತ್ನಿತ್ವ ಜಾರಿಯಲ್ಲಿದೆ. ಮೊದಲನೆ ಹೆಂಡತಿ ತೀರಿಕೊಂಡರೆ ಆ ಸ್ಥಾನದಲ್ಲಿ ಆಕೆಯ ಸ್ಥಾನವನ್ನು ಆಕೆಯ ಸಹೋದರಿ ತುಂಬುವಳು. ಅಲ್ಲದೇ ಗಂಡ ಸತ್ತ ನಂತರ ವಿಧವೆ, ಗಂಡನ ಸಹೋದರನನ್ನು ಮದುವೆಯಾಗಬಹುದು. ಆದರೆ ಇಂಥ ಉದಾಹರಣೆಗಳು ಅತ್ಯಲ್ಪ. ಇವರಲ್ಲಿ ಬಹುಪತ್ನಿತ್ವ ಜಾರಿಯಲ್ಲಿ ಇದ್ದರೂ ಏಕ ಪತ್ನಿತ್ವ ಪದ್ಧತಿ ಇದೆ. ಇವರಲ್ಲಿ ವಿಧವೆ ಮತ್ತು ವಿಧುರ ಇಬ್ಬರೂ ವಿವಾಹವಾಗಬಹುದು. ಇದಕ್ಕೆ "ಕೂಡಿಕೆ" ಎಂದು ಕರೆಯುತ್ತಾರೆ. ವಿಧುರ ವಿಧವೆಯರ ವಿವಾಹ ಕಾರ್ಯದಲ್ಲಿ ಮುತ್ತೈದೆಯರು ಭಾಗವಹಿಸುವುದಿಲ್ಲ. ಅವರ ಮಕ್ಕಳು ಗ್ರಾಮದ ಹಿರಿಯರು ಸೇರಿ ವಿವಾಹ ಕಾರ್ಯ ನಡೆಸುವರು. ಕೂಡಿಕೆ ಮಾಡುವ ವಧು-ವರರ ಮಧ್ಯೆ ಕಪ್ಪು ಕಂಬಳಿಯ ತೆರೆ ಹಿಡಿದು ಹಣತೆ ದೀಪ ಹಚ್ಚಿಕೊಂಡು ಊರಿನ ಹಿರಿಯರ ಎದುರು ಧಾರೆಯೆರೆದ ಬಳಿಕ ತಾಳಿ ಕಟ್ಟುವ ಪದ್ಧತಿ. ಹೀಗೆ ಕೂಡಿಕೆ ಮಾಡಿಕೊಂಡ ದಂಪತಿಗಳಿಗೆ ಮಂಗಳ ಕಾರ್ಯದಲ್ಲಿ ನಿಷಿದ್ಧ. ಕೂಡಿಕೆ ಮಾಡಿಕೊಂಡು ಹೋಗುವವರು ಕುಬಸ ಕೊಡುವ ಪದ್ಧತಿ ಇದೆ. ವಿಧವೆಯ ಮರು ವಿವಾಹ ನಡೆಯುವದು ಗಂಡಿನ ಮನೆಯಲ್ಲಿ. ಇಂಥ ಮದುವೆಗಳಲ್ಲಿ ಎಲ್ಲರೂ ಪಾಲ್ಗೊಳ್ಳುವುದಿಲ್ಲ. ವಿವಾಹಿತ ಸ್ತ್ರೀ ಪುರುಷರು ಮತ್ತು ವಿಧವೆಯರು ಮಾತ್ರ ಪಾಲ್ಗೊಳ್ಳುತ್ತಾರೆ. ಪ್ರಾಯಕ್ಕೆ ಬಂದ ವರನಿಗೆ ತಂದೆ ತಾಯಿಗಳು ವಧು ಅನ್ವೇಷಣೆಯಲ್ಲಿದ್ದಾಗ ನೆಂಟರೊಬ್ಬರು ತಮ್ಮ ಸಂಬಂಧಿಕರಲ್ಲಿ ವಧು ಇದೆ ಎಂದು ಹೇಳಿದಾಗ ವರನ ಕಡೆಯ ನಾಲ್ಕೈದು ಜನ ಗಂಡಸರು ಕನ್ನೆಯನ್ನು ನೋಡಲು ಹೋಗುವರು. ಕನ್ಯೆ ಒಪ್ಪಿಗೆಯಾದ ಕೂಡಲೇ ತಮ್ಮ ಕುಟುಂಬಕ್ಕೆ ಆಪ್ತರಾದ ಭಟ್ಟರಲ್ಲಿ ಸಾಲಾವಳಿ ಕೇಳುವರು. ಸಾಲಾವಳಿ ಕೂಡಿ ಬರದಿದ್ದರೆ ಆಕೆಯ ಜನ್ಮ ಹೆಸರು, ಕರೆಯುವ ಹೆಸರು, ಹೆಸರು ಬದಲಾಯಿಸಿದರೆ, ಸಾಲಾವಳಿ ಕೂಡುತಿದ್ದರೆ

ವಿವಾಹ ಏರ್ಪಡಿಸುವರು. ಒಂದು ವೇಳೆ ಸಾಲಾವಳಿ ಕೂಡದಿದ್ದರೆ ವಿವಾಹ ಏರ್ಪಡಿಸುವದಿಲ್ಲ. ಸಾಲಾವಳಿ ಕೂಡಿ ಬಂದಲ್ಲಿ ಮಾತ್ರ ವಿವಾಹ ನಿಶ್ಚಯಿಸುವರು. ಗ್ರಾಮ ದೇವತೆ ಇದ್ದಲ್ಲಿಗೆ ತೆರಳಿ ಪ್ರಸಾದ ಕೇಳುವ ಪದ್ಧತಿ ಉಂಟು. ವಿವಾಹ ನಿರ್ಧಾರವಾದ ಬಳಿಕ ಗಂಡಿನ ಮನೆಯವರು ಐದು ಗ್ರಾಮಸ್ಥರೊಂದಿಗೆ ಹೆಣ್ಣಿನ ಮನೆಗೆ ತೆರಳುವರು. ಅಲ್ಲಿ ವಿವಾಹವಾಗುವ ಹೆಣ್ಣನ್ನು ಕಳಸದ ಎದುರು, ಹಸೆ ಗೋಡೆಯ ಎದುರು ಕೂರಿಸಿ ಉಡಿ ತುಂಬುವ ಪದ್ಧತಿ ಇದೆ. ಗುರು ಹಿರಿಯರಿಗೆ ವೀಳ್ಯೆ ಹಂಚುವ ಪದ್ಧತಿ ಇದೆ. ಇದು ಹುಡುಗಿಯ ಮನೆಯಲ್ಲಿ ನಡೆಯುತ್ತದೆ. ಹತ್ತು ಜನಕ್ಕೆ ವೀಳ್ಯೆ ಕೊಟ್ಟು ನಿಮ್ಮ ವಧುವನ್ನು ನಮ್ಮ ಮನೆಗೆ ಸೊಸೆಯಾಗಿ ಸ್ವೀಕರಿಸುವೆವು ಎಂದು ಹೇಳಿ ವೀಳ್ಯೆ ಕೊಡುವರು. ಇದನ್ನು ನಿಶ್ಚಿತಾರ್ಥ ಅಥವಾ ವೀಳ್ಯೆ ಶಾಸ್ತ್ರ ಎಂದು ಕರೆಯುತ್ತಾರೆ. ನಂತರ ವರನ ಮನೆಯವರಿಗೆ ಸಿಹಿ ಊಟ ಹಾಕುವರು. ನಂತರ ಜೋತಿಷ್ಯ ಅಥವಾ ಭಟ್ಟರ ಮನೆಗೆ ಹೋಗಿ ಆತನಿಗೆ ಒಣಕೊಬ್ಬರಿ ಹೋಳುಗಳು, ಒಂಬತ್ತು ಅಡಿಕೆ ಮತ್ತು ಎಲೆ ಮತ್ತು ದುಡ್ಡು ಕಾಣಿಕೆಯಾಗಿ ನೀಡುವರು. ಇವರು ಇಂಥ ದಿನ ವಿವಾಹ ಮೂಹೂರ್ತ ನಿಗದಿ ಮಾಡಲು ಅಡ್ಡಿಯಿಲ್ಲ ಎಂದಾಗ ಆ ದಿವಸ ವಿವಾಹ ನಿಗದಿ ಪಡಿಸುವರು. ನಂತರ ಗಂಡಿನ ಕಡೆಯವರು ಲಗ್ನ ಪತ್ರಿಕೆಗಳನ್ನು ಪ್ರಿಂಟ್ ಹಾಕಿಸಿ ತಮ್ಮ ನೆಂಟರಿಗೂ ಮತ್ತು ಗೆಳೆಯರಲ್ಲಿ ಹಂಚುವರು. ವಧುವಿನ ಮನೆಯಲ್ಲಿಯೇ ವಿವಾಹ ಏರ್ಪಡಿಸುವುದು. ಅದಕ್ಕಾಗಿ ವಧುವಿನ ಮನೆಯವರು ಅಡಿಕೆ ಮರದ ದಬ್ಬೆಗಳನ್ನು ತಂದು ಮನೆಯ ಅಂಗಳದಲ್ಲಿ ಬಿದಿರಿನ ಮತ್ತು ಅಡಿಕೆ ಮರದ ಬಂಬುಗಳನ್ನು ನೆಟ್ಟು "ಕಾವಣ ಚೆಪ್ಪರ" ನಿರ್ಮಿಸುವರು. ಮೇಲೆ ಅಡಿಕೆ ಸೋಗೆಗಳನ್ನು ಹಾಕಿದ ಮೇಲೆ ಟಾರ್ಪಾಲಗಳನ್ನು ಹೊಚ್ಚುವರು. ನಂತರ ಕಾವಣ ಚಪ್ಪರ ತಳಿರು ತೋರಣಗಳಿಂದ ಸಿಂಗರಿಸುವರು. ಅಡಿಯಲ್ಲಿ ಮದುವೆ ಹಂದರ ಹಾಕುವರು. ನಾಲ್ಕು ಬಿದಿರಿನ ಬಂಬುಗಳನ್ನು ತಂದು ನಾಲ್ಕು ಚೌಕಾಕಾರವಾಗಿ ಅಂಗಳದಲ್ಲಿ ರಂಧ್ರ ತೋಡಿ, ರಂಧ್ರದಲ್ಲಿ ನಾಲ್ಕು ಬಿದಿರಿನ ಗಳಗಳನ್ನು ಇಟ್ಟು ಅವುಗಳಿಗೆ ಅಡ್ಡಲಾಗಿ ನಾಲ್ಕು ಬಿದಿರುಗಳನ್ನು ಕಟ್ಟುವರು. ನಂತರ ಬಿದಿರಿನ ಗಳಗಳಿಗೆ ಬಣ್ಣ ಬಣ್ಣದ ಪೇಪರಗಳನ್ನು ಅಂಟಿಸಿ ನಂತರ ಮಾವಿನ ಮತ್ತು ಹಲಸಿನ ತೋರಣ ಕಟ್ಟುವರು. ಕಾವಣ ಚಪ್ಪರಕ್ಕೂ ಮತ್ತು ಮನೆಯ ಮುಖ್ಯ ದ್ವಾರಕ್ಕೂ ಹೊಂದಿಕೊಂಡಂತೆ ಒಂದು ಬಿಳಿ ಬಟ್ಟೆಯನ್ನು ಕಟ್ಟುವರು. ಅದರಲ್ಲಿ ಹಳದಿ ಬಣ್ಣದ ಸೌತೆಕಾಯಿ ಬಾಳೆಕಾಯಿ ಅಕ್ಕಿ ಮತ್ತು ಎಲೆಗಳನ್ನು ಹಾಕುವರು. ಮದುವೆಗಿಂತ ಮುಂಚಿನ ದಿನ ರಾತ್ರಿಯಲ್ಲಿ ವಿವಾಹ ಕಾರ್ಯಗಳನ್ನು ಮಾಡುವರು.

ಕೋಷ್ಟಕ–೩.೮ ಸಮೀಕ್ಷೆ ಮಾಡಿದ ಹಸಲರ ಕುಟುಂಬಗಳ ಪ್ರಕಾರ

ಜಿಲ್ಲೆಗಳು		ಕುಟುಂಬದ ಪ್ರಕಾರ			ಒಟ್ಟು
		ವಿಭಕ್ತ	ಅವಿಭಕ್ತ	ಏಕಸದಸ್ಯ ಕುಟುಂಬ	
ಉತ್ತರ ಕನ್ನಡ	ಒಟ್ಟು	೧೧೪	೨	–	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೯೮.೩%	೧.೭%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೩.೧%	೧೧.೧%	–	೨೨.೪%
	ಒಟ್ಟು ಪ್ರತಿಶತ	೨೨.೧%	೦.೪%	–	೨೨.೪%
ಉಡುಪಿ	ಒಟ್ಟು	೬೭	೪	೧	೭೨
	ಪ್ರತಿಶತ (ಜಿಲ್ಲೆಯೊಳಗೆ)	೯೩.೧%	೫.೬%	೧.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೩.೬%	೨೨.೨%	೨೦%	೧೩.೯%
	ಒಟ್ಟು ಪ್ರತಿಶತ	೧೩%	೦.೮%	೦.೨%	೧೩.೯%
ಚಿಕ್ಕಮಗಳೂರು	ಒಟ್ಟು	೧೦೫	೧	–	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೯೯.೧%	೦.೯%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೩%	೫.೬%	–	೨೦.೫%
	ಒಟ್ಟು ಪ್ರತಿಶತ	೨೦.೩%	೦.೨%	–	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧.೨%	–	–	೧.೨%
	ಒಟ್ಟು ಪ್ರತಿಶತ	೧.೨%	–	–	೧.೨%
ಶಿವಮೊಗ್ಗ	ಒಟ್ಟು	೨೦೨	೧೧	೪	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೯೩.೧%	೫.೧%	೧.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೦.೯%	೬೧.೧%	೮೦%	೪೨%
	ಒಟ್ಟು ಪ್ರತಿಶತ	೩೯.೧%	೨.೧%	೦.೮%	೪೨%
ಒಟ್ಟು	ಒಟ್ಟು	೪೯೪	೧೮	೫	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೯೫.೬%	೩.೫%	೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೯೫.೬%	೩.೫	೧%	೧೦೦%

ಉತ್ತರಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಕುಟುಂಬಗಳಲ್ಲಿ ೧೧೪ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೯೮.೩ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೩.೧ರಷ್ಟು. ಉಳಿದ ೨ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧.೭ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೧.೧ರಷ್ಟು.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೭೨. ಇದರಲ್ಲಿ ೬೭ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧೩.೧ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೩.೬ರಷ್ಟು. ಉಳಿದ ೪ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೫.೬ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೨.೨ರಷ್ಟು. ಉಳಿದ ೧ ಕುಟುಂಬ ಏಕಸದಸ್ಯ ಕುಟುಂಬವಾಗಿದೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೦.೯ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೨.೨ರಷ್ಟು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೦೬ ಕುಟುಂಬಗಳಲ್ಲಿ ೧೦೫ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೯೯.೧ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೧.೩ರಷ್ಟು. ೧ ಕುಟುಂಬ ಮಾತ್ರ ಅವಿಭಕ್ತಕುಟುಂಬವಾಗಿದೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೦೯ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೫.೬ರಷ್ಟು.

ದಕ್ಷಿಣಕನ್ನಡ ಜಿಲ್ಲೆಯ ೬ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೦೦ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧.೨ರಷ್ಟು.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೨೧೭ ಕುಟುಂಬಗಳಲ್ಲಿ ೨೦೨ ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೯೩.೧ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೪೦.೯ರಷ್ಟು. ಉಳಿದ ೧೧ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿವೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೫.೧ ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೬೧.೧ರಷ್ಟು. ಉಳಿದ ೪ ಕುಟುಂಬಗಳು ಏಕ ಸದಸ್ಯಕುಟುಂಬಗಳಾಗಿವೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧.೮ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೮೦ರಷ್ಟು.

ಮೇಲಿನ ಅಂಕಿಅಂಶಗಳಿಂದ ತಿಳಿದುಬರುವುದೇನೆಂದರೆ ಹಸಲರಲ್ಲಿ ವಿಭಕ್ತಕುಟುಂಬಗಳು ಹೆಚ್ಚಾಗಿ ಕಂಡುಬರುತ್ತವೆ.

೩.೧೨.೧ ನಾಗೊಲೆ ಶಾಸ್ತ್ರ

ನಾಗೊಲೆ ಶಾಸ್ತ್ರ ಎಂದರೆ, ಬಾಳೆ ಎಲೆಯ ಮೇಲೆ ಮಣ್ಣನ್ನು ನೀರಿನಲ್ಲಿ ಕಲಿಸಿ ಮಣ್ಣಿನ ಮೂರು ಉಂಡೆಗಳನ್ನು ಮಾಡುವರು. ಆ ಮೂರು ಮಣ್ಣು ಉಂಡೆಗಳನ್ನು ಒಲೆಯ ಆಕಾರದಲ್ಲಿ ಇಟ್ಟು ಅದನ್ನು ಪೂಜಿಸುವರು. ಇದನ್ನು ಸೋದರತ್ತೆ ಅಥವಾ ಸೋದರ ಮಾವ ನಡೆಸಿ ಕೊಡುವರು. ಇದರ ಮುಖ್ಯ ಉದ್ದೇಶ ಹೊಸದಾಗಿ ಮನೆ ಮಾಡುವವರಿಗೆ ಶುಭವಾಗಲಿ ಎನ್ನುವ ಕಾರಣಕ್ಕೆ ನಾಗದೇವತೆಯನ್ನು ಒಲೆಗಳ ಜೊತೆ ಪೂಜಿಸುವರು.

ಈ ರೀತಿಯ ನಾಗೊಲೆ ಶಾಸ್ತ್ರವು ದಕ್ಷಿಣ ಕನ್ನಡದ ಭೈರರಲ್ಲಿಯೂ ಕಾಣಬಹುದು. ಅವರಲ್ಲಿ ಧಾರೆಯೆರೆದು ಹೆಣ್ಣು ಒಪ್ಪಿಸಿದ ಬಳಿಕ ಹುಡುಗಿಯನ್ನು ಗಂಡನ ಮನೆಗೆ ಕರೆತರುವರು. ಇದನ್ನು 'ಹೆಣ್ಣಿನ ದಿಬ್ಬಣ' ಎಂದು ಕರೆಯುತ್ತಾರೆ. ಮದುಮಕ್ಕಳು ವರನ ಮನೆಗೆ ಬಂದಾಗ ಆರತಿ ನಿವಾಳಿಸುವ ಕ್ರಮವಿದೆ. ಅಂದು ನೆರವೇರಿಸುವ ಆಚರಣೆಯಲ್ಲಿ ಆಚರಿಸುವ ಬೀಜ ಬಿತ್ತುವ ಶಾಸ್ತ್ರವೊಂದು ನೆರವೇರುವುದು. ಇದು ಭೈರವರ ವಿಶಿಷ್ಟ ಸಂಪ್ರದಾಯವಾಗಿದೆ. ಅಡ್ಯ ಸ್ಥಳದಲ್ಲಿ ಒಂದು ಹಸೆ ಹಾಕುತ್ತಾರೆ. ಈ ಹಸೆಯ ಮುಂದೆ ಕನ್ಯೆಯಾದವಳು ತೆಂಗಿನ ಕಾಯಿ ಒಡೆಯಬೇಕು. ಮದುಮಗಳು ಅತ್ತಿಸೊಪ್ಪು ಹರಿದುಕೊಡುತ್ತಾಳೆ. ಮದುಮಗಳಿಗೆ ಮುಟ್ಟಾಳೆ ಇಡಿಸಿ ಸೊಪ್ಪು ಹೊರಿಸುತ್ತಾರೆ. ಈ ಸೊಪ್ಪನ್ನು ಮದುಮಗಳು ಗದ್ದೆಗೆ ತಂದು ಹಾಕಬೇಕು. ಗದ್ದೆಗೆ ತಂದ ಸೊಪ್ಪನ್ನು ವರನು ಪುಡಿ ಪುಡಿಯಾಗಿ ಕತ್ತರಿಸಿ ಗದ್ದೆಗೆ ಹರಡುತ್ತಾನೆ. ಹುಡುಗಿ ಒಂದು ಚಿಕ್ಕ ಕತ್ತಿಯಿಂದ ಭೂಮಿಗೆ ಬರೆ ಎಳೆಯುತ್ತಾಳೆ. ಬಳಿಕ ಗಂಡು ಹೆಣ್ಣು ಇಬ್ಬರೂ ಕೂಡಿ ಭತ್ತವನ್ನು ಬಿತ್ತುತ್ತಾರೆ. ಇದನ್ನು ನಾಗೊಲೆ ಶಾಸ್ತ್ರವೆಂದು ಕರೆಯುತ್ತಾರೆ.

"ಭೈರರಲ್ಲಿ ನಾಗೊಲೆ ಶಾಸ್ತ್ರವು ಬಹಳಷ್ಟು ಮುಖ್ಯವಾದುದು. ಇದು ಫಲವತ್ತತೆಯ ಸಂಕೇತ. ಇದು ಪ್ರಸ್ತದ ಮೊದಲು ನಡೆಯುವ ವಿಧಿ. ಅದಕ್ಕೆ ಪೂರ್ವಸಿದ್ಧತೆಯನ್ನು ಇದು ಸೂಚಿಸುತ್ತದೆ" (ವಾಮನ್ ನಂದಾವರ:೧೯೯೩ :೧೧೫-೧೧೬) ಇದೇ ರೀತಿಯ ನಾಗೋಲೆ ಶಾಸ್ತ್ರವು ಹಸಲ ರಲ್ಲಿಯೂ ನಡೆಯುತ್ತದೆ. ಇವರಲ್ಲಿ ಹಸೆಗೋಡೆ ಬರೆಯಬೇಕಾದರೆ ಗಂಡ ಹೆಂಡತಿಯರೇ ಬೇಕು. ಮದುಮಗಳು ಒಬ್ಬಳೆ ಹಸೆಗೋಡೆ ಬರೆಯುವುದೆಂದರೆ ನಾನು ಫಲವತ್ತಳಾಗಿದ್ದೇನೆ ಮತ್ತು ಬೀಜ ಬಿತ್ತುವ ಕ್ರಿಯೆಗೆ ಸಿದ್ಧಳಾಗಿದ್ದೇನೆ ಎಂಬುವದನ್ನು ಇದು ಧ್ವನಿಸುತ್ತದೆ. ಆಕೆ ಕಾಯಿ ಒಡೆಯುವ ಕ್ರಿಯೆಯೂ ಇದಕ್ಕೆ ಪೂರಕವಾಗಿದೆ.

ಈ ಬಗ್ಗೆ ಜಾನಪದ ವಿದ್ವಾಂಸರಾದ ಎಂ.ಎಂ. ಪಡಶೆಟ್ಟಿಯವರು 'ನಾಗ' ಇದು ಲೈಂಗಿಕತೆಯ ಸಂಕೇತ ನಾಗೊಲೆ ಶಾಸ್ತ್ರ ಎಂದರೆ ಬೀಜ ಬಿತ್ತುವ ಕ್ರಿಯೆ ಎಂದು ಚರ್ಚೆಯಲ್ಲಿ ಪಾಲ್ಗೊಂಡಾಗ ಹೇಳಿದ್ದಾರೆ. ಹಸಲರಲ್ಲಿ ಮೂರು ಮಣ್ಣಿನ ಉಂಡೆಗಳನ್ನು ಒಲೆ ಆಕಾರದಲ್ಲಿ ಇಡುವುದರಿಂದ ಹಾಗೂ ಹಾಲಗಂಬ ನೆಡುವುದರಿಂದ ಇದು ಬೇರೆ ಮನೆ ಮಾಡುವುದು ಮತ್ತು ಲೈಂಗಿಕತೆಯ ಸಂಕೇತ. ಹಸಲರಲ್ಲಿ ಮದುಮಗಳು ಹಸಿಗೋಡೆ ಬರೆಯುವದು ಮತ್ತು ಭೈರರ ಮದುಮಗಳು ಒಂದು ಕತ್ತಿಯಿಂದ ಭೂಮಿ ಬರೆಯುವದು ಇವೆರಡು ಒಂದೇ ರೀತಿಯ ಅರ್ಥವನ್ನು ಕೊಡುತ್ತವೆ.

[illegible]

೩.೧೨.೨ ಜವಳಿ ಎದುರುಗೊಳ್ಳುವುದು

ಜವಳಿ ಎದುರುಗೊಳ್ಳುವುದು ಎಂದರೆ, ಮದುವೆಗೆ ತಂದ ಎಲ್ಲಾ ಜವಳಿ, ಪಾತ್ರೆ, ಬಂಗಾರ ಒಡವೆ ಮತ್ತು ಮಣ್ಣಿನ ಮಡಕೆ ಮುಂತಾದವುಗಳನ್ನು ಪೂಜಿಸುವರು. ಜವಳಿ ಹೊತ್ತ ಹಸಲರ ಐದು ಜನ ಗಂಡಸರು ತಮ್ಮ ತಲೆಗೆ ಪೇಟಾ ಸುತ್ತಿ ಪೇಟಾದ ಒಳಗೆ ಹಲಸಿನ ಮರದ ಸೊಪ್ಪು, ಅತ್ತಿ ಮರದ ಸೊಪ್ಪು, ಮಾವಿನ ಮರದ ಸೊಪ್ಪು ಮತ್ತು ನವಿಲು ಗರಿಗಳನ್ನು ಚುಚ್ಚಿಕೊಳ್ಳುವರು. ಈ ಐದು ಜನರು ತುಳಸಿ ಕಟ್ಟೆಗೆ ಐದು ಸುತ್ತು ಹಾಕಿದ ನಂತರ ಕನ್ಯೆ ಬಂದು ಎಲ್ಲರಿಗೂ ಪೂಜೆ ಮಾಡಿ ಅವರನ್ನು ಎದುರುಗೊಳ್ಳುವಳು.

೩.೧೨.೩ ಸುರಗಿ ಸುತ್ತುವುದು

ನಾಗೊಲೆ ಶಾಸ್ತ್ರದ ನಂತರ ಒಲೆ ಆಕಾರದ ಮಣ್ಣಿನ ಉಂಡೆಗಳ ಹತ್ತಿರ ನೆಲವನ್ನು ಅಗೆದು ಅದರಲ್ಲಿ ದುಡ್ಡು ಮತ್ತು ಹಾಲು ಹಾಕಿ, ಹಾಲುಗಂಬ ಮರದ ರೆಂಬೆಯನ್ನು ತಂದು ಅದನ್ನು ನೆಲ ಅಗೆದ ಜಾಗದಲ್ಲಿ ಕನ್ಯೆ ಸೇರಿ ಐದು ಜನ ಸುಮಂಗಲೆಯರು ಎತ್ತಿ ರಂಧ್ರದಲ್ಲಿ ನೆಟ್ಟ ನಂತರ ಸೋದರ ಮಾವ ಅಥವಾ ನೆಂಟರು ಅದನ್ನು ಭದ್ರಪಡಿಸುವರು. ಇದಕ್ಕೆ ಹಾಲು ಮರದ ರೆಂಬೆಯೇ ಬೇಕು. ತದ ನಂತರ ಹಾಲುಗಂಬ ರೆಂಬೆಗೆ "⌋" ಆಕಾರದ ಒಂದು ಕಟ್ಟಿಗೆಯನ್ನು ಕಟ್ಟುವರು. ನಂತರ "⌋" ಇದರ ಮೇಲೆ ದೀಪವನ್ನು ಇಟ್ಟು ಅದರ ಮುಂದೆ ಬಾಳೆ ಎಲೆಯಲ್ಲಿ, ಬಾಳೆ ಹಣ್ಣು, ಅಕ್ಕಿ ಹಾಕಿ ಪೂಜಿಸುವರು. ನಂತರ ಮುಂಡಿಗೆ ಚಾಪೆ ಹಾಸಿ ಚಾಪೆಯ ಮೇಲೆ ಮೂರು ಇರಿಕೆಯನ್ನು ಇಟ್ಟು, ಇರಿಕೆಯ ರಂಧ್ರದಲ್ಲಿ ಸ್ವಲ್ಪ ಅಕ್ಕಿಯನ್ನು ಹಾಕುವರು. ಪ್ರತಿ ಇರಿಕೆಯ ಮೇಲೆ ದೊಡ್ಡ ಗಾತ್ರದ ಒಂದೊಂದು ಮಡಿಕೆಯನ್ನು ಇಡುವರು. ಮಡಿಕೆಗೆ ಅಕ್ಕಿ, ಹಾಲು, ನೀರು ಹಾಕುವರು. ನಂತರ ಮಡಿಕೆಯ ಮೇಲೆ ಅದಕ್ಕಿಂತ ಸಣ್ಣದಾದ ಮಡಿಕೆಯನ್ನು ಇಡುವರು. ಇದರಲ್ಲಿಯೂ ಅಕ್ಕಿ, ಹಾಲು, ನೀರು ಹಾಕಿ ಅದರ ಮೇಲೆ ಅದಕ್ಕಿಂತ ಸಣ್ಣ ಮಡಿಕೆಯನ್ನು ಇಡುವರು. ಅದರಲ್ಲಿಯೂ ಹಾಲು, ನೀರು, ಅಕ್ಕಿ ಹಾಕಿದ ನಂತರ ನಾಲ್ಕನೆಯ ಅತೀ ಸಣ್ಣ ಮಡಿಕೆಯನ್ನು ಅದರ ಮೇಲೆ ಇಡುವರು. ಅದರಲ್ಲಿ ನೀರು ಅಕ್ಕಿ, ಹಾಲು ಹಾಕಿದ ನಂತರ ಪ್ರತಿ ಮಡಿಕೆಯ ಮೇಲೆ ಒಂದೊಂದು "ಶಿಖೆ ಮಡಿಕೆ" ಯನ್ನು ಬೋರಲಾಗಿ ಇಡುವರು. ನಂತರ ಐದು ಜನ ಸುಮಂಗಲೆಯರು ಮೂರು ಶಿಖೆ ಮಡಿಕೆಗಳಿಗೆ ಮೂರು ಸುತ್ತು ನೂಲು ಸುತ್ತುವರು. ನೂಲು ಸುತ್ತಿದ ನಂತರ ಎಲ್ಲ ಮಡಿಕೆಗಳ ಮೇಲೆ ಮಾವಿನ ತೊಳಲನ್ನು ಇಟ್ಟು, ಅರಿಷಿಣ ಕುಂಕುಮದಿಂದ ಎಲ್ಲ ಮಡಿಕೆಗಳನ್ನು ಪೂಜಿಸುವರು.

೩.೧೨.೪ ಭೂಮ ತೊಳಿಸುವ ಕಾರ್ಯಕ್ರಮ

ಪೇಟೆಯಿಂದ ಮದುವೆಗಾಗಿ ತಂದ ಎಲ್ಲ ಜವಳಿ, ಬಂಗಾರ, ಪಾತ್ರೆಗಳನ್ನು ಹಾಸಿದ ಕಂಬಳಿಯ ಮೇಲಿಟ್ಟು ಪೂಜೆ ಮಾಡಿದ ನಂತರ ಅದರ ಮುಂದೆ ಒಂದು ಬಿದಿರಿನ ಬುಟ್ಟಿಯಲ್ಲಿ ಅಕ್ಕಿಯನ್ನು ಹಾಕಿ, ಐದು ಜನ ಮತ್ತೈದೆಯರು ಒಣಕೆಗೆ ತಮ್ಮ ಬಲಗೈಯನ್ನು ಮಾತ್ರ ಹಿಡಿದು ಕುಟ್ಟುವರು. ಇದಕ್ಕೆ ಭೂಮ ತೊಳಿಸುವುದು ಎಂದು ಕರೆಯುತ್ತಾರೆ.

೩.೧೨.೫ ಹಸೆ ಗೋಡೆ ಬರೆಯುವುದು

ಹಸೆ ಗೋಡೆಗೆ ಮೊದಲು ಕನ್ನೆಯಾದವಳು ಲಂಬಾಂತರ ಮತ್ತು ಸಮಾಂತರವಾಗಿ ಬಣ್ಣ ನೂಲನ್ನು ಗಟ್ಟಿಯಾಗಿ ಹಿಡಿದು ಅದನ್ನು ಬಿಲ್ಲಿನಂತೆ ಜಗ್ಗಿ ಇಳಿ ಬಿಟ್ಟಾಗ ಹಸೆ ಗೋಡೆಯ ಮೇಲೆ ಚಿತ್ರ ಬೀಳುವುದು. ನಂತರ ಐದು ಜನ ಮತ್ತೈದೆಯರು ತಮ್ಮ ಗಂಡಂದಿರರೊಂದಿಗೆ ಲಂಬಾಂತರ ಮತ್ತು ಸಮಾಂತರವಾಗಿ ಗೋಡೆಗೆ ಬಣ್ಣದ ನೂಲನ್ನು ಹಿಡಿದು ಒಬ್ಬರು ಹಗ್ಗವನ್ನು ಬಿಲ್ಲಿನಂತೆ ಜಗ್ಗುವರು. ಆಗ ಆ ಬಣ್ಣ ಗೋಡೆಗೆ ಮೂಡುವುದು. ಇದಕ್ಕೆ ಹಸಿ ಗೋಡೆ ಬರೆಯುವುದು ಎಂದು ಕರೆಯುತ್ತಾರೆ.

೩.೧೨.೬ ದಿಬ್ಬಣ ಎದುರುಗೊಳ್ಳುವುದು

ಇದು ಮದುವೆಯ ದಿವಸ ವಧುವಿನ ಹಾಡಿಕೇರಿಯಲ್ಲಿ ನಡೆಯುವುದು. ವರ ತನ್ನ ಕುಟುಂಬದ ನೆಂಟರೊಂದಿಗೆ ವಧುವಿನ ಹಾಡಿಕೇರಿಗೆ ಬಂದು ವಧುವಿನ ಮನೆಯ ಸ್ವಲ್ಪ ದೂರದಲ್ಲಿ ಇದ್ದಾಗ ದಿಬ್ಬಣಕ್ಕೆ ಬಂದ ನೆಂಟರು ಮತ್ತು ಗೆಳೆಯರು ತಾವು ತಂದ ವಾಹನದಿಂದ ಇಳಿದು ಒಂದು ಪಟಾಕ್ಷಿ ಸಿಡಿಸುವರು. ಇದು ನಾವು ಬಂದಿದ್ದೇವೆ ಎಂಬ ಸುದ್ದಿ ಮುಟ್ಟಿಸುವ ಸೂಚನೆ. ಆವಾಗ ವಧುವಿನ ಕಡೆಯವರು ಒಂದು ಪಟಾಕ್ಷಿ ಸಿಡಿಸುವರು. ನಾವು ಎಲ್ಲ ತಯಾರಿಯಲ್ಲಿ ಇದ್ದೇವೆ ಎಂಬ ಸೂಚನೆ ಪಟಾಕ್ಷಿ ಮುಖಾಂತರ ತಿಳಿಸುವರು. ವರ ಮತ್ತು ಆತನ ಕುಟುಂಬದ ಪರಿವಾರವು ವಧುವಿನ ಹಾಡಿಕೇರಿಯ ಒಂದು ಮನೆಯಲ್ಲಿ ಇಳಿಸಿದ ನಂತರ ವಧುವಿನ ಇಬ್ಬರು ನೆಂಟರು ಹಾಲು ಮತ್ತು ಜೇನು ತೆಗೆದುಕೊಂಡು ಹೋಗಿ ವರನಿಗೆ ಕುಡಿಸಿದ ಬಳಿಕ ವಧುವಿನ ಕಡೆಯವರು "ಉಂಗುಲುಡಗೆ" ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಬಿಡಾರದ ಮನೆಯಲ್ಲಿರುವ ಮದುಮಗನಿಗೆ ನೀಡುತ್ತಾರೆ. ಆನಂತರ ವರನ ಕಡೆಯವರು "ಉಂಗುಲುಡಗೆ" ಸಾಮಾನನ್ನು ವಧುವಿಗೆ ಕೊಡುತ್ತಾರೆ. ಉಂಗುಲುಡಗೆ ವಧುವಿಗೆ ನೀಡುವುದಾದಲ್ಲಿ ಧಾರೆ ಸೀರೆ, ಬುಗುಡಿ, ಬೆಂಡೋಲೆ, ಕಾಲ್ಗಡಗಗಳು ಇರುತ್ತವೆ. ಗಂಡಿಗೆ ಪಂಚೆ ಉಂಗುರಗಳಿರುತ್ತವೆ. ವರನನ್ನು ಮದುವೆ ಮಂಟಪದ ಮುಖ್ಯ ದ್ವಾರಕ್ಕೆ ಕರೆದುಕೊಂಡು ಬಂದಾಗ ಆತನಿಗೆ ಪೂಜೆ ಮಾಡಿ ಬೆಂಕಿಯಲ್ಲಿ ಬೇಳೆ ಕಾಳುಗಳನ್ನು ಹಾಕಿ ಅರಳುಗಳನ್ನು ವರನ ಪಕ್ಷದವರಿಗೆ ಕೊಡುವರು. ಪ್ರತಿಯಾಗಿ ವರನ ಕಡೆಯವರು ವಧುವಿನ ಕಡೆಯವರಿಗೆ ಕೊಡುವರು. ಆವಾಗ ಇಬ್ಬರೂ ಪರಸ್ಪರ ಅರಳುಗಳನ್ನು ವರನ ಕಡೆಯವರು ವಧುವಿನ ಕಡೆಯವರಿಗೆ ಹಾಗೂ ವಧುವಿನ ಕಡೆಯವರು ವರನ ಕಡೆಯವರ ತಲೆಯ ಮೇಲೆ ಹಾಕುವರು. ವರನನ್ನು ಮದುವೆಯ ಹಂದರಕ್ಕೆ ಕರೆದುಕೊಂಡು ಬರುವರು. ಭಟ್ಟರು ವಧುವಿನ ಅಣ್ಣನಿಗೆ ಮೂರು ಎಳೆಯ ಜನಿವಾರ ಹಾಕುವರು. ವಧುವಿನ ಅಣ್ಣ ಧಾರೆ ಎರೆದುಕೊಡುವನು. ವಧು ಮತ್ತು ವರನ ನಡುವೆ ಬಿಳಿಯ ಬಟ್ಟೆಯನ್ನು ಹಿಡಿಯುವರು. ವಧು ಮತ್ತು ವರ ಮದುವೆಯ ಹಂದರದಲ್ಲಿ ನಿಲ್ಲಿಸಿ, ಭಟ್ಟರು ಮಂತ್ರ ಘೋಷ ಮಾಡುವರು. ಮದುವೆಯ ಮೂಹೂರ್ತ ಬಂದಾಗ ಆ ಬಿಳಿ ಬಟ್ಟೆಯನ್ನು ತೆಗೆಯುವರು. ಆವಾಗ ವರ ವಧುವಿನ ಕೊರಳಿಗೆ ಮಾಲೆ ಹಾಕುವನು. ವಧು-ವರನ ಕೊರಳಿಗೆ ಮಾಲೆ

ಹಾಕುವಳು. ನಂತರ ಭಟ್ಟರು ಮಂತ್ರಗಳನ್ನು ಪಠಿಸಿದ ನಂತರ ಅಕ್ಷತೆ ಹಾಕುವರು. ವಧು–ವರರ ಕೈಗಳನ್ನು ಪರಸ್ಪರ ಜೋಡಿಸಿ ಅವರ ಕೈಯಲ್ಲಿ ತೆಂಗಿನ ಕಾಯಿ ಅಕ್ಕಿಕಾಳು, ಗರಿಕೆ ಹುಲ್ಲುಗಳನ್ನಿಡುವರು. ನಂತರ ಮುತ್ತೈದೆಯರು ನೀರು ಬಿಡುವರು. ಇದನ್ನೆ ಧಾರೆ ಎರೆಯುವದು ಎಂದು ಕರೆಯುತ್ತಾರೆ. ವಿವಾಹ ಮಂಟಪದಲ್ಲಿ ವಧುವಿನ ಸೆರಗು ಹಿಡಿದು ಪತಿಯ ಹೆಸರು ಕೇಳುವದುಂಟು. "ಗುಣದಿಂದ ಹೇಳುವೆ ಗುರುವಿನ ಹೆಸರು,

ಮನದಿಂದ ಹೇಳಿವೆ ಮೈದುನನ ಹೆಸರು,
ಸತ್ಯಕ್ಕೆ ಹೇಳುವೆ ಅತ್ತೆ ಮಾವಂದಿರ ಹೆಸರು,
ಪುಣ್ಯಕ್ಕೆ ಹೇಳುವೆ ತಾಯಿ ತಂದೆಯ ಹೆಸರು,
ನಿಮ್ಮ ಪ್ರೀತಿಗೆ ಹೇಳುವೆ ಪತಿರಾಯನ ________ ಹೆಸರು".

"ಆಕಾಶಕ್ಕೆ ನಕ್ಷತ್ರ ಚಂದ,
ಹುಣ್ಣಿಮೆಗೆ ಚಂದ್ರ ಚಂದ,
ನನ್ನವರಿಗೆ ನನ್ನ ಪತಿ ______ ಚಂದ".

ಅಕ್ಷತೆಯ ನಂತರ ಬಂದ ಬೀಗರಿಗೆ ಸಾಮೂಹಿಕವಾಗಿ ಸಿಹಿ ಭೋಜನ ಏರ್ಪಡಿಸುವರು. ಭೋಜನದ ವೇಳೆ ಯಾರೂ ಏಳುವಂತಿಲ್ಲ. ಊಟ ಮಾಡಿದ ನಂತರವೇ ಎಲ್ಲರೂ ಏಳಬೇಕು. ಒಂದು ವೇಳೆ ಮೊದಲೇ ಎದ್ದರೆ ಆತನಿಗೆ "ಕಟ್ಟು" (ದಂಡ) ವಿಧಿಸುವರು. ದಂಡವನ್ನು ಆ ಹಾಡಿಕೇರಿಯ ಹಿರಿಯರು ನಿಶ್ಚಯಿಸುವರು. ಊಟದ ನಂತರ ವರನ ಕಡೆಯವರು ತಮ್ಮೂರಲ್ಲಿಯೂ ದಿಬ್ಬಣ ಮೂಹೂರ್ತ ನಿಗದಿಪಡಿಸುವರು. ಆದ್ದರಿಂದ ಮದುವೆ ಮಂಟಪದಿಂದ ಬಹು ಬೇಗನೆ ಕನ್ನೆಯೊಂದಿಗೆ ತಮ್ಮೂರಿಗೆ ಹೊರಟು ಹೋಗುವರು. ವಧು ವರನ ಮನೆಗೆ ಬಂದಾಗ ಸುಮಂಗಲೆಯರು ಆಕೆಯ ಕಾಲು ತೊಳೆದು ಅರಿಷಿಣ, ಕುಂಕುಮ ಹಚ್ಚಿದ ನಂತರ ಮನೆಯೊಳಗೆ ಕರೆದು ಕೊಳ್ಳುವಾಗ ಒಂದು ಸೇರು ಅಕ್ಕಿಯನ್ನು ಅದರ ಮೇಲೆ ಅಚ್ಚುಬೆಲ್ಲನ್ನು ಮುಖ್ಯ ದ್ವಾರದ ಹೊಸ್ತಿಲ ಮೇಲೆ ಇಡುವರು. ಅದನ್ನು ವಧು ಬಲಗಾಲಿನಿಂದ ಬೀಳಿಸಿ ಒಳಗೆ ಬರುವಳು. ಇದಾದ ನಂತರ ವಧುವಿನ ವರನ ಮನೆಯ ಹಂದರದಲ್ಲಿ ಗಂಡ ಹೆಂಡತಿಯರನ್ನು ಕೂಡಿಸಿ, ಹಾಡಿಕೇರಿ ಹೆಣ್ಣು ಮಕ್ಕಳು ಜಾನಪದ ಹಾಡುಗಳನ್ನು ಹಾಡುವರು. ಮಧ್ಯಾಹ್ನ ಹಾಡಿಕೇರಿಯ ಹಿರಿಯರನ್ನು ಕೂಡಿಸಿ, "ವೀಳ್ಯೆ ಕೊಡುವ" ಶಾಸ್ತ್ರ ಮಾಡುವರು ವರನ ಕಡೆಯ ಒಬ್ಬ ವ್ಯಕ್ತಿ ವೀಳ್ಯೆಗಳನ್ನು ಅಡಿಕೆಯ ಹಾಳಿಯಲ್ಲಿ ಹಾಕಿ ಅದನ್ನು ಕಟ್ಟಿ ಎದ್ದು ನಿಂತು ವೀಳ್ಯೆ ಕೊಡಲು ಅನುಮತಿ ಕೊಡುವಿರಾ? ಎಂದು ಕೇಳಿದಾಗ ಹಿರಿಯರು ಒಪ್ಪಿಗೆ ಸೂಚಿಸುವರು. ವೀಳ್ಯೆ ಹಿಡಿದ ವ್ಯಕ್ತಿ ಎರಡೆರಡು ವೀಳ್ಯೆ ಗಳನ್ನು ಹಿಡಿದು ಇದು ದುಗ್ಗಪ್ಪವರ ವೀಳ್ಯೆ ಎಂದು ಕೂಗಿದಾಗ ದುಗ್ಗಪ್ಪ ಅಥವಾ ಆತನ ಕಡೆಯವರು ಬಂದು ವೀಳ್ಯೆ ಹಿಡಿಯುವರು. ಹೀಗೆ ಊರಿಗೂ, ವ್ಯಕ್ತಿಗೂ ವೀಳ್ಯೆ ಕೊಟ್ಟ ನಂತರ ಎಲ್ಲರಿಗೂ ವರನ ಮನೆಯಲ್ಲಿ ಸಿಹಿ ಊಟ ಏರ್ಪಡಿಸುವರು. ಇದನ್ನು ಭಟ್ಟರೆ ತಯಾರು ಮಾಡುವರು.

ಹಸಲರ ವಿವಾಹದ ನಾಲ್ಕನೆಯ ದಿನ "ಮುರುವರಿ ಶಾಸ್ತ್ರ" ಎಂದು ಹೆಸರು. ಮದುಮಗ ಬೆಳಿಗ್ಗೆ ಎದ್ದು ಸೂರ್ಯದೇವರಿಗೆ ನಮಸ್ಕರಿಸಿ, ಹಸೆಯೇರುವವನು ವಧು ಪತಿಯ ಪಾದ ತೊಳೆದು ಪೂಜೆ ಮಾಡುವಳು. ಅವನ ಪಾದದ ನೀರನ್ನು ತಲೆಗೆ ಪ್ರೋಕ್ಷಿಸಿಕೊಳ್ಳುವಳು. ಅನಂತರ ಓಕುಳಿ ಆಡುವ ಪದ್ಧತಿ ಇದೆ. ಓಕುಳಿ ಆಡಿದ ನಂತರ ವಧು ವರರಿಬ್ಬರೂ ಸ್ನಾನ ಮಾಡಿ ಹೊಸ ಬಟ್ಟೆ ತೊಡುವರು. ಬಾಸಿಂಗ ತೊಂಡಿಲುಗಳನ್ನು ಪೂಜಿಸಿ ಮನೆಯ 'ಕೋಳುಕಂಬ'ಕ್ಕೆ ಕಟ್ಟುವರು. ಹಸಲರ ವಿವಾಹವನ್ನು ಬ್ರಾಹ್ಮಣರು ನಡೆಸಿಕೊಡುವರು. ತೀರ್ಥಹಳ್ಳಿ, ಹೊಸನಗರ, ಅಂಕೋಲಾ, ಕುಂದಾಪೂರ ಕಡೆಗಳಲ್ಲಿ ಸ್ವಾಮಿಗಳು ಕೂಡಾ ನಡೆಸಿಕೊಡುವರು.

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ವಾಸವಾಗಿರುವ ಹಸಲರ ವಿವಾಹ ಸಂಪ್ರದಾಯಗಳಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು. ಭಟ್ಟ ಜೆ.ಎಸ್. ಇವರು ತಮ್ಮ 'ಹಸಲರ ಸಂಸ್ಕೃತಿ" ಗ್ರಂಥದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹಸಲರು ನಲ್ಕೆ ಕುಣಿತದವರನ್ನು ಕರೆಸುವ ಪದ್ಧತಿ ಇದೆ. ನಲ್ಕೆ ಕುಣಿತದವರು ಹಿಡಿದ ಖಡ್ಗವನ್ನು ವರ ಸ್ಪರ್ಶಿಸುತ್ತಾನೆ. ತಮ್ಮ ಕುಲದೇವರಿಗೆ ಕೋಲು ಭೂತದ ಮೂಲಕ ಪೂಜೆ ಮಾಡುವ ಪದ್ಧತಿ ಇದೆ. ಆದರೆ ಈ ಪದ್ಧತಿ ಈಗ ಮಾಯವಾಗಿದೆ. ಹಲಸಿನ ಹಳ್ಳಿಯಲ್ಲಿ ವರನೇ ವಧುವಿಗೆ ತಾಳಿ ಕಟ್ಟುವನು. ಬ್ರಾಹ್ಮಣ ಪುರೋಹಿತರು ವಿವಾಹವನ್ನು ನಡೆಸಿಕೊಡುವರು. ಮದುವೆ ಚಪ್ಪರದ ಮುಂದಿನ ಭಾಗವನ್ನು ಆಲದ ಮರದಿಂದ ನಿರ್ಮಿಸಬೇಕೆಂಬ ನಿಯಮವಿದೆ. ಇದಲ್ಲದೆ ವಧು ವರರಿಗೆ ಐರಣಿ ತಂಬಿಗೆಯ ಮೂಲಕ ಸ್ನಾನ ಮಾಡಿಸುವ ಪದ್ಧತಿ ಇದೆ.

ತೀರ್ಥಹಳ್ಳಿ ಸುತ್ತ ಮುತ್ತಲಿನ ಹಸಲರ ಹಾಡಿಕೇರಿಗಳಲ್ಲಿ ಬ್ರಾಹ್ಮಣರು ಹಸಲರ ವಿವಾಹಗಳಲ್ಲಿ ಭಾಗವಹಿಸುವದಿಲ್ಲ. ಇಲ್ಲಿ ಲಿಂಗಾಯತ ಸ್ವಾಮಿಗಳು ನಡೆಸಿಕೊಡುವರು.

ಅನವಟ್ಟಿಯಲ್ಲಿ ನಡೆದ ಹಸಲರ ವಿವಾಹವೊಂದನ್ನು "ಎಚ್.ವ್ಹಿ. ನಂಜುಂಡಯ್ಯ ಮತ್ತು ಎಲ್.ಕೆ.ಅಯ್ಯರ ಬರೆದ "ಮೈಸೂರ ಟ್ರೈಬ್ಸ್ ಅಂಡ್ ಕಾಸ್ಟ್" ಪುಸ್ತಕದಲ್ಲಿ ಹೀಗೆ ಬಣ್ಣಿಸಿದ್ದಾರೆ. "ವಿವಾಹ ನಡೆಯುವದು ವರನ ಮನೆಯಲ್ಲಿ. ಬ್ರಾಹ್ಮಣರು ಭಾಗವಹಿಸುವುದಿಲ್ಲ. ಜಂಗಮ ತಾಳಿಗೆ ಪೂಜೆ ಮಾಡುವನು. ಲಿಂಗಾಯತ ಧರ್ಮದಂತೆ ವಿವಾಹ ನಡೆಯುವದು.

ಸೊರಬ ತಾಲೂಕಿನಲ್ಲಿ ಹಸಲರ ವಿವಾಹ ನಡೆಸುವಾತ ಬ್ರಾಹ್ಮಣ ಇಲ್ಲವೇ ಲಿಂಗಾಯತ ಜಂಗಮ. ಹಸಲರ ವಿವಾಹವು ಈ ಭಾಗದಲ್ಲಿ ಲಿಂಗಾಯತರಿಗಿಂತ ಭಿನ್ನವೇನು ಇಲ್ಲ.

ಹಿಂದಿನ ಕಾಲದಲ್ಲಿ ಹಸಲರು ವಿವಾಹ ಸಂದರ್ಭದಲ್ಲಿ ಬೆಳ್ಳಿ, ಬಂಗಾರ, ಜವಳಿ ಮುಂತಾದವು ಗಳಿಗಾಗಿ ಭಟ್ಟರು, ಈಡಿಗರು ಅಥವಾ ನಾಯಕರ ಹತ್ತಿರ ಸಾಲ ಮಾಡಿ, ತೀರಿಸಲು ಆಗದಿದ್ದಕ್ಕಾಗಿ ಜೀವನ ಪರ್ಯಂತರ ಜೀತ ಮಾಡಿದ ಉದಾಹರಣೆಗಳು ಬೆಳ್ಳಣ್ಣಿಯ ಹಸಲರ ಹಾಡಿಕೇರಿಯಲ್ಲಿ ಸಿಗುತ್ತವೆ.

ಅಂಗವಿಕಲ ಹುಡುಗಿಯ ವಿವಾಹವನ್ನು ಅಂಗವಿಕಲ ಹುಡುಗನೊಂದಿಗೆ ಮಾಡಿಕೊಡುತ್ತಾರೆ. ಆದರೆ ದೈಹಿಕ ದೃಢಕಾಯರಾದ ಹುಡುಗಿಯರನ್ನು ಅಂಗವಿಕಲರಿಗೆ ಮಾಡುವದಿಲ್ಲ. ಇವರಲ್ಲಿ ಅನುಲೋಮ ಮತ್ತು ಪ್ರತಿಲೋಮ ವಿವಾಹ ಪದ್ಧತಿಗಳು ಅಲ್ಲೊಂದು ಇಲ್ಲೊಂದು ಕಾಣಸಿಗುತ್ತವೆ. ಅನುಲೋಮ ವಿವಾಹವೆಂದರೆ ಉಚ್ಚವರ್ಣದ ಪುರುಷನು ಕೆಳವರ್ಣದ ಸ್ತ್ರೀಯನ್ನು ವಿವಾಹವಾಗುವುದು. ಇಂಥ ವಿವಾಹದ ಉದಾಹರಣೆ ಇಂದ್ರೂಡಿ ಮನೆಯಲ್ಲಿ ಸಿಗುತ್ತದೆ. ಬ್ರಾಹ್ಮಣ ಪುರುಷನು ಹಸಲರ ಸ್ತ್ರೀಯನ್ನು ಮದುವೆಯಾಗಿದ್ದಾನೆ. ಈ ಬಗ್ಗೆ ಕೇಳಲಾಗಿ (ಕೇಶವ ದುಗ್ಗಪ್ಪ ಕೂಳಕಾರ ವಯಸ್ಸು ೬೨ ವೃತ್ತಿ ಕೂಲಿ) ಈತನು ಇಂಥ ವಿವಾಹ ಪದ್ಧತಿಗಳಿಗೆ ಹಸಲರು ಹರ್ಷ ವ್ಯಕ್ತಪಡಿಸುತ್ತಾರೆ ಎಂದು ಹೇಳಿದ್ದಾನೆ. ಏಕೆಂದರೆ, ನಾನು ಉಚ್ಚ ವರ್ಣದ ವರನ ಜೊತೆ ಸಂಬಂಧ ಬೆಳೆಸಿರುವ ಕಾರಣಕ್ಕೆ ನಮಗೆ ಸಂತೋಷವಾಗುತ್ತದೆ. ಆದರೆ ಅವರಿಂದ ಹುಟ್ಟಿದ ಮಕ್ಕಳ ಜೊತೆ ವೈವಾಹಿಕ ಸಂಬಂಧ ಬೆಳೆಸುವದಿಲ್ಲ. ಏಕೆಂದರೆ ವಂಶಾವಳಿ ತಂದೆಯಿಂದ ನಿರ್ಧಾರವಾಗುವುದರಿಂದ ಅವರಿಂದ ಹುಟ್ಟುವ ಮಕ್ಕಳು ಬ್ರಾಹ್ಮಣರಾಗುತ್ತಾರೆ. ಈ ಕಾರಣಕ್ಕಾಗಿ ಅವರ ಮಕ್ಕಳ ಜೊತೆ ವಿವಾಹ ಸಂಬಂಧ ಬೆಳೆಸುವುದಿಲ್ಲ. ಇದಕ್ಕೆ ಪ್ರತಿಯಾಗಿ ಪ್ರತಿಲೋಮ ವಿವಾಹ ಪದ್ಧತಿಯು ಕೂಡಾ ಆದ ಉದಾಹರಣೆಗಳಿವೆ. ಹೊಸ ನಗರ ತಾಲೂಕಿನ ಹಾಗಲ ಮನೆಯಲ್ಲಿ ಇಂಥ ಉದಾಹರಣೆ ಸಿಗುತ್ತದೆ. ಇಲ್ಲಿ ಹಸಲರ ಯುವಕ ಭಟ್ಟರ ಹುಡಗಿಯ ಜೊತೆ ವಿವಾಹವಾಗಿದ್ದಾನೆ. ಇವರಿಂದ ಹುಟ್ಟಿದ ಮಕ್ಕಳ ಜೊತೆ ನಾವು ವೈವಾಹಿಕ ಸಂಬಂಧ ಬೆಳೆಸುತ್ತೇವೆ. ಏಕೆಂದರೆ ವಂಶಾವಳಿ ಗಂಡನಿಂದ ನಿರ್ಧಾರವಾಗುವದರಿಂದ ಅವರ ಮಕ್ಕಳ ಜೊತೆ ವಿವಾಹ ಸಂಬಂಧ ಏರ್ಪಡಿಸುತ್ತೇವೆ. ಆದರೆ ಅನುಲೋಮ ಪದ್ಧತಿಯಿಂದ ಹುಟ್ಟಿದ ಮಕ್ಕಳು ನಮ್ಮ ಮನೆಗೆ ಬಂದರೆ ಅವರನ್ನು ಒಳ್ಳೆಯ ಭಾವನೆಯಿಂದ ನೋಡಿಕೊಳ್ಳುತ್ತೇವೆ. ಇಲ್ಲಿ ಯಾವುದೇ ರೀತಿಯ ಸಂಕೋಚವಿಲ್ಲ.

ಹಸಲರಲ್ಲಿ ಪುನರ್ವಿವಾಹ ಪದ್ಧತಿ ಇದೆ. ಬ್ರಹ್ಮಚಾರಿಯನ್ನು(ಅವಿವಾಹಿತ) ವಿಧವೆ ವಿವಾಹ ವಾಗಲು ಅವಕಾಶವಿಲ್ಲ. ಆದರೆ ಅವನು ಅವಳನ್ನು ಪ್ರೀತಿಸಿ ಅವಳನ್ನೇ ವಿವಾಹವಾಗಬಯಸಿದರೆ ಮೊದಲಿಗೆ ಅವನ ವಿವಾಹವನ್ನು ಎಕ್ಕದ ಗಿಡದೊಂದಿಗೆ ಮಾಡಲಾಗುತ್ತದೆ. ಅನಂತರ ವಿಧವೆಯೊಂದಿಗೆ ವಿವಾಹ. ಹೀಗೆ ವಿವಾಹ ಮಾಡಿಕೊಂಡವರು "ಕಟ್ಟು"(ದಂಡ) ಕೊಡಬೇಕಾಗುತ್ತದೆ. ಇದನ್ನು ಹಾಡಿಕೇರಿಯ ಜನರು ನಿರ್ಧರಿಸುತ್ತಾರೆ.

ಹಸಲರಲ್ಲಿ ಬಹು ಪತ್ನಿತ್ವಕ್ಕೆ ಅವಕಾಶವಿಲ್ಲ. ಸ್ತ್ರೀ ಉಪ ಪತ್ನಿಯಾಗಿ ಜೀವನ ನಡೆಸುತ್ತಿದ್ದಲ್ಲಿ ಅವಳನ್ನು ಅವಳ ಪತಿ ತಿರಸ್ಕರಿಸಿದ್ದಲ್ಲಿ ಹಾಗೂ ಅವಳು ಪಕ್ಕದ ಹಳ್ಳಿಯಲ್ಲಿ ವಾಸಿಸುತ್ತಿದ್ದಲ್ಲಿ ಆ ಸಂಗತಿಯನ್ನು ಹಿರಿಯರ ಗಮನಕ್ಕೆ ತರಲಾಗುವದು. ಆಗ ಅವಳ ಮಿಂಡನಿಗೆ ದಂಡ ವಿಧಿಸಲಾಗುತ್ತದೆ. ಇದನ್ನು ಹಿರಿಯರು ನಿರ್ಧರಿಸುವರು.

ಹಸಲರು ಹಿಂದೆ ಬಹಳಷ್ಟು ಮಕ್ಕಳಿಗೆ ಜನ್ಮ ಕೊಡುತ್ತಿದ್ದರು. ಆದರೆ ಇಂದು ಅವರೂ ಕೂಡಾ ಕುಟುಂಬ ಯೋಜನೆಯನ್ನು ಅನುಸರಿಸಲು ಪ್ರಾರಂಭಿಸಿದ್ದಾರೆ.

ಕೋಷ್ಟಕ-೩.೯ ಸಮೀಕ್ಷೆ ಮಾಡಿದ ಹಸಲರ ಕುಟುಂಬದಲ್ಲಿ ವಾಸಿಸುವ ಸದಸ್ಯರ ಸಂಖ್ಯೆ

ಜಿಲ್ಲೆಗಳು		ಕುಟುಂಬ ಸದಸ್ಯರ ಸಂಖ್ಯೆ			ಒಟ್ಟು
		೦-೩	೪-೬	೬ರ ಮೇಲ್ಪಟ್ಟು	
ಉತ್ತರ ಕನ್ನಡ	ಒಟ್ಟು	೩೫	೭೧	೧೦	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೩೦.೨%	೬೧.೨%	೮.೬%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೬.೩%	೨೧.೫%	೧೮.೫%	೨೨.೪%
	ಒಟ್ಟು ಪ್ರತಿಶತ	೬.೮%	೧೩.೭%	೧.೯%	೨೨.೪%
ಉಡುಪಿ	ಒಟ್ಟು	೨೨	೩೧	೧೯	೭೨
	ಪ್ರತಿಶತ (ಜಿಲ್ಲೆಯೊಳಗೆ)	೩೦.೬%	೪೩.೧%	೨೬.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೬.೫%	೯.೪%	೩೫.೨%	೧೩.೯%
	ಒಟ್ಟು ಪ್ರತಿಶತ	೪.೩%	೬%	೩.೭%	೧೩.೯%
ಚಿಕ್ಕಮಗಳೂರು	ಒಟ್ಟು	೧೫	೮೧	೧೦	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೧೪.೨%	೭೬.೪%	೯.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೧.೩%	೨೪.೫%	೧೮.೫%	೨೦.೫%
	ಒಟ್ಟು ಪ್ರತಿಶತ	೨.೯%	೧೫.೭%	೧.೯%	೨೦.೫%
ದಕ್ಷಿಣ ಕನ್ನಡ	ಒಟ್ಟು	-	೬	-	೬
	ಪ್ರತಿಶತ (ಜಿಲ್ಲೆಯೊಳಗೆ)	-	೧೦೦%	-	೧೦೦%
	ಪ್ರತಿಶತ (ವರ್ಗಗಳಲ್ಲಿ)	-	೧.೮%	-	೧.೨%
	ಒಟ್ಟು ಪ್ರತಿಶತ	-	೧.೨%	-	೧.೨%
ಶಿವಮೊಗ್ಗ	ಒಟ್ಟು	೬೧	೧೪೧	೧೫	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೨೮.೧%	೬೫%	೬.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೫.೯%	೪೨.೭%	೨೭.೮%	೪೨%
	ಒಟ್ಟು ಪ್ರತಿಶತ	೧೧.೮%	೨೭.೩%	೨.೯%	೪೨%
ಒಟ್ಟು	ಒಟ್ಟು	೧೩೩	೩೩೦	೫೪	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೨೫.೭%	೬೩.೮%	೧೦.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೨೫.೭%	೬೩.೮%	೧೦.೪%	೧೦೦%

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಕುಟುಂಬಗಳಲ್ಲಿ ೩೫ ಕುಟುಂಬಗಳು ಒಂದರಿಂದ ಮೂರು ಸದಸ್ಯರು ಮನೆಯಲ್ಲಿ ವಾಸಮಾಡುತ್ತಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೩೦.೨ರಷ್ಟು ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೬.೩ರಷ್ಟು. ೪ ರಿಂದ ೬ ಸದಸ್ಯರನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ೭೧. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೬೧.೨ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೧.೫ರಷ್ಟು. ೬ ಕ್ಕಿಂತ ಮೇಲ್ಪಟ್ಟು ಸದಸ್ಯರನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ೧೦. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೮.೬ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೮.೫ರಷ್ಟು.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೭೨. ಇದರಲ್ಲಿ ೨೨ ಕುಟುಂಬಗಳು ೧ ರಿಂದ ೩ ಸದಸ್ಯರನ್ನೊಳಗೊಂಡಿದೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೩೦.೬ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೬.೫ರಷ್ಟು, ೩೧ ಕುಟುಂಬಗಳ ೪ ರಿಂದ ೬ ಸದಸ್ಯರನ್ನು ಹೊಂದಿದೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೪೩.೧ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೯.೪ರಷ್ಟು. ಉಳಿದ ೧೯ ಕುಟುಂಬಗಳು ೬ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿವೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೨೬.೪ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೩೫.೨ರಷ್ಟು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೧೦೬. ಇದರಲ್ಲಿ ೧೫ ಕುಟುಂಬಗಳು ೧ ರಿಂದ ೩ ಸದಸ್ಯರನ್ನು ಹೊಂದಿದೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧೪.೨ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೧.೩ರಷ್ಟು. ೮೧ ಕುಟುಂಬಗಳು ೪ ರಿಂದ ೬ ಸದಸ್ಯರನ್ನು ಹೊಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೭೬.೪ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೪.೫ರಷ್ಟು. ಉಳಿದ ೧೦ ಕುಟುಂಬಗಳು ೬ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೯.೪ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಶೇ. ೧೮.೫ರಷ್ಟಾಗುತ್ತದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೬. ಈ ಎಲ್ಲಾ ಕುಟುಂಬಗಳು ೪ ರಿಂದ ೬ ಸದಸ್ಯರನ್ನು ಹೊಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೦೦ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧.೮ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೨೧೭. ಇದರಲ್ಲಿ ೬೧ ಕುಟುಂಬಗಳು ೧ ರಿಂದ ೩ ಸದಸ್ಯರನ್ನು ಹೊಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೨೮.೧ರಷ್ಟಾಗುತ್ತದೆ. ೧೪೧ ಕುಟುಂಬಗಳು ೪ ರಿಂದ ೬ ಸದಸ್ಯರನ್ನು ಹೊಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೬೫ರಷ್ಟು. ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೪೨.೭ರಷ್ಟು. ಉಳಿದ ೧೫ ಕುಟುಂಬಗಳು ೬ಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೬.೯ರಷ್ಟು, ೫ ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೭.೮ರಷ್ಟಾಗುತ್ತದೆ.

ಈ ಮೇಲಿನ ಅಂಕಿ ಅಂಶಗಳಿಂದ ತಿಳಿದುಬರುವುದೇನೆಂದರೆ ಹಸಲರು ಹಿಂದೆ ಬಹಳಷ್ಟು ಮಕ್ಕಳನ್ನು ಹೆರುತ್ತಿದ್ದರು. ಆದರೆ ಇಂದು ಅವರೂ ಕೂಡಾ ಕಡಿಮೆ ಮಕ್ಕಳನ್ನು ಹೊಂದಲು ಪ್ರಾರಂಭಿಸಿದ್ದಾರೆ. ಇದಕ್ಕಾಗಿ ಅವರು ಕುಟುಂಬಯೋಜನೆಯನ್ನು ಅನುಸರಿಸಲು ಪ್ರಾರಂಭಿಸಿದ್ದಾರೆ.

ಕೋಷ್ಟಕ–೩.೧೦ ಸಮೀಕ್ಷೆ ಮಾಡಿದ ಹಸಲರು ಕುಟುಂಬ ಯೋಜನೆ ಅನುಸರಿಸಿರುವವರ ವಿವರ

ಜಿಲ್ಲೆಗಳು		ಕುಟುಂಬ ಯೋಜನೆ ವಿವರ		ಒಟ್ಟು
		ಇದೆ	ಇಲ್ಲ	
ಉತ್ತರ ಕನ್ನಡ	ಒಟ್ಟು	೭೦	೪೬	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೬೦.೩%	೩೯.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೯%	೨೩.೨%	೨೨.೪%
	ಒಟ್ಟು ಪ್ರತಿಶತ	೧೩.೫%	೮.೯%	೨೨.೪%
ಉಡುಪಿ	ಒಟ್ಟು	೪೧	೩೧	೭೨
	ಪ್ರತಿಶತ (ಜಿಲ್ಲೆಯೊಳಗೆ)	೫೬.೯%	೪೩.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೨.೯%	೧೫.೭%	೧೩.೯%
	ಒಟ್ಟು ಪ್ರತಿಶತ	೭.೯%	೬%	೧೩.೯%
ಚಿಕ್ಕಮಗಳೂರು	ಒಟ್ಟು	೭೮	೨೮	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೭೩.೬%	೨೬.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೪.೫%.	೧೪.೧%	೨೦.೫%
	ಒಟ್ಟು ಪ್ರತಿಶತ	೧೫.೧%	೫.೪%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧.೯%	–	೧.೨%
	ಒಟ್ಟು ಪ್ರತಿಶತ	೧.೨%	–	೧.೨%
ಶಿವಮೊಗ್ಗ	ಒಟ್ಟು	೧೨೪	೯೩	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೫೭.೧%	೪೨.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೩೮.೯%	೪೭.%	೪೨%
	ಒಟ್ಟು ಪ್ರತಿಶತ	೨೪%	೧೮%	೪೨%
ಒಟ್ಟು	ಒಟ್ಟು	೩೧೯	೧೯೮	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೬೧.೭%	೩೮.೩%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೬೧.೭%	೩೮.೭%	೧೦೦%

[illegible]

[illegible]

ಸಮೀಕ್ಷೆ ಮಾಡಿದ ಕುಟುಂಬಗಳು ಒಟ್ಟು ೫೧೭, ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳು ೧೧೬, ಅದರಲ್ಲಿ ೭೦ ಕುಟುಂಬಗಳು ಕುಟುಂಬ ಯೋಜನೆಯನ್ನು ಪಾಲಿಸಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೬೦.೩ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾದ ಇವರ ಪ್ರಮಾಣ ಶೇ. ೨೧.೯ ಉಳಿದ ೪೬ ಕುಟುಂಬಗಳು ಕುಟುಂಬ ಯೋಜನೆಯನ್ನು ಅನ್ವಯಿಸಿಕೊಂಡಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೩೯.೭, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೩.೨ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ಉಡುಪಿ ಜಿಲ್ಲೆಯಲ್ಲಿಯ ಕುಟುಂಬಗಳ ಸಂಖ್ಯೆ ೭೨, ಅದರಲ್ಲಿ ೪೧ ಕುಟುಂಬಗಳು ಕುಟುಂಬ ಯೋಜನೆಯನ್ನು ಮಾಡಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಅವರ ಪ್ರಮಾಣ ಶೇ. ೫೬.೯, ಐದು ಜಿಲ್ಲೆಗಳನ್ನೊಳಗೊಂಡಾಗ ಅವರ ಪ್ರಮಾಣ ಶೇ. ೧೨.೯, ಉಳಿದ ೩೧ ಕುಟುಂಗಳು ಕುಟುಂಬ ಯೋಜನೆಯನ್ನು ಅನ್ವಯಿಸಿಕೊಂಡಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೪೩.೧ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೫.೭ ರಷ್ಟಾಗುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಒಟ್ಟು ಕುಟುಂಗಳು ೧೦೬, ಅದರಲ್ಲಿ ೭೮ ಕುಟುಂಬಗಳು ಕುಟುಂಬ ಯೋಜನೆಯನ್ನು ಅನ್ವಯಿಸಿಕೊಂಡಿದ್ದಾರೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೭೩.೬ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾದ ಇವರ ಪ್ರಮಾಣ ಶೇ. ೨೪.೫ ರಷ್ಟಾಗುತ್ತದೆ. ಉಳಿದ ೨೮ ಕುಟುಂಬಗಳು ಕುಟುಂಬ ಯೋಜನೆಯನ್ನು ಅನ್ವಯಿಸಿಕೊಂಡಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೨೬.೪ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೪.೧ ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೬, ಈ ೬ ಕುಟುಂಬ ಗಳೂ ಕುಟುಂಬ ಯೋಜನೆಯನ್ನು ಅನ್ವಯಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೦೦ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧.೯ ರಷ್ಟು.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೨೧೭, ಇದರಲ್ಲಿ ೧೨೪ ಕುಟುಂಬಗಳು ಕುಟುಂಬ ಯೋಜನೆಯನ್ನು ಅನ್ವಯಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೫೭.೧ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೩೮.೯ ರಷ್ಟಾಗುತ್ತದೆ. ಉಳಿದ ೯೩ ಕುಟುಂಬಗಳು ಕುಟುಂಬ ಯೋಜನೆಯನ್ನು ಅನ್ವಯಿಸಿಕೊಂಡಿರುವುದಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೪೨.೯ ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೪೭ ರಷ್ಟಾಗುತ್ತದೆ.

ಕೋಷ್ಟಕ-೩.೧೧ ಸಮೀಕ್ಷೆ ಮಾಡಿದ ಹಸಲರು ಕುಟುಂಬ ಯೋಜನೆ ಮಾಡಿಕೊಂಡವರ ವಿವರ

ಜಿಲ್ಲೆಗಳು		ಕುಟುಂಬ ಯೋಜನೆ ಮಾಡಿಕೊಂಡವರ ವಿವರ				ಒಟ್ಟು
		ಶಸ್ತ್ರ ಚಿಕಿತ್ಸೆ	ಸಂತಾನಹರಣ ಚಿಕಿತ್ಸೆ	ಗುಳಿಗೆ	ಕುಟುಂಬ ಯೋಜನೆ ಮಾಡಿಕೊಳ್ಳದೇ ಇರುವವರು.	
ಉತ್ತರ ಕನ್ನಡ	ಒಟ್ಟು	೭೦	–	–	೪೬	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೬೦.೩	–	–	೩೯.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೨.೩%	–	–	೨೩.೫%	೨೨.೪%
	ಒಟ್ಟು ಪ್ರತಿಶತ	೧೩.೫%	–	–	೮.೯%	೨೨.೪%
ಉಡುಪಿ	ಒಟ್ಟು	೪೧	–	–	೩೧	೭೨
	ಪ್ರತಿಶತ (ಜಿಲ್ಲೆಯೊಳಗೆ)	೫೬.೯%	–	–	೪೩.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೩.೧%	–	–	೧೫.೮%	೧೩.೯%
	ಒಟ್ಟು ಪ್ರತಿಶತ	೭.೯%	–	–	೬%	೧೩.೯%
ಚಿಕ್ಕಮಗಳೂರು	ಒಟ್ಟು	೭೮	–	–	೨೮	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೭೩.೬%	–	–	೨೬.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೪.೮%	–	–	೧೪.೩%	೨೦.೫%
	ಒಟ್ಟು ಪ್ರತಿಶತ	೧೫.೧%	–	–	೫.೪%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	–	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧.೯%	–	–	–	೧.೨%
	ಒಟ್ಟು ಪ್ರತಿಶತ	೧.೨%	–	–	–	೧.೨%
ಶಿವಮೊಗ್ಗ	ಒಟ್ಟು	೧೧೯	೬	೧	೯೧	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೫೪.೮%	೨.೮%	೦.೫%	೪೧.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೩೭.೯%	೧೦೦%	೧೦೦%	೪೬.೪%	೪೨%
	ಒಟ್ಟು ಪ್ರತಿಶತ	೨೩%	೧.೨%	೦.೨%	೧೭.೬%	೪೨%
ಒಟ್ಟು	ಒಟ್ಟು	೩೧೪	೬	೧	೧೯೬	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೬೦.೭%	೧.೨%	೦.೨%	೩೭.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೬೦.೭%	೧.೨%	೦.೨%	೩೭.೯%	೧೦೦%

ಸಮೀಕ್ಷೆ ಮಾಡಿದ ಒಟ್ಟು ೫೧೭ ಕುಟುಂಬಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೧೧೬ ಇದರಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಕೊಂಡ ಕುಟುಂಬಗಳು ೭೦, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೬೦.೩ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೨.೩ ರಷ್ಟಾಗುತ್ತದೆ. ಉಳಿದ ೪೬ ಕುಟುಂಬಗಳು ಕುಟುಂಬ ಯೋಜನೆ ಅನುಸರಿಸಿಲ್ಲ.

ಉಡುಪಿ ಜಿಲೆಯಲ್ಲಿ ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳು ೭೨, ಇದರಲ್ಲಿ ೪೧ ಕುಟುಂಬಗಳು ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೫೬.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೩.೧ ರಷ್ಟಾಗುತ್ತದೆ. ಉಳಿದ ೩೧ ಕುಟುಂಬಗಳು ಕುಟುಂಬ ಯೋಜನೆಯನ್ನು ಪಾಲಿಸಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳ ಸಂಖ್ಯೆ ೧೦೬, ಇದರಲ್ಲಿ ೭೮ ಕುಟುಂಬಗಳು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೭೩.೬ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೪.೮ ರಷ್ಟಾಗುತ್ತದೆ. ಉಳಿದ ೨೮ ಕುಟುಂಬ ಯೋಜನೆಯನ್ನು ಪಾಲಿಸಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೬ ಕುಟುಂಬಗಳು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦೦ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧.೯ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೨೧೭ ಕುಟುಂಬಗಳಲ್ಲಿ ೧೧೯ ಕುಟುಂಬಗಳು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೫೪.೮ ರಷ್ಟು, ೬ ಕುಟುಂಬಗಳು ಉದರ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೨.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೦೦ ರಷ್ಟಾಗುತ್ತದೆ. ಉಳಿದ ೯೧ ಕುಟುಂಬಗಳು, ಕುಟುಂಬ ಯೋಜನೆಯನ್ನು ಅನುಸರಿಸಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೪೧.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೬.೪ ರಷ್ಟಾಗುತ್ತದೆ.

ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಹಸಲರು ಕೂಡಾ ಯೋಜನೆಯನ್ನು ಅನುಸರಿಸಲು ಪ್ರಾರಂಭಿಸಿದ್ದಾರೆ ಎಂಬುದು ಮನದಟ್ಟಾಗುತ್ತದೆ.

೩.೧೩ ಬಹುಪತ್ನಿತ್ವ

ಭಾರತೀಯ ಸಾಂಪ್ರದಾಯಿಕ ವಿವಾಹ ಪದ್ಧತಿಗಳಲ್ಲಿ ಬಹುಪತ್ನಿತ್ವವೂ ಕೂಡಾ ಒಂದು. ಇದು ಏಕಪತ್ನಿತ್ವದಷ್ಟು ಸಾರ್ವತ್ರಿಕವಲ್ಲದಿದ್ದರೂ ಕೂಡಾ ಬಹುಪತಿತ್ವಕ್ಕಿಂತಲೂ ಹೆಚ್ಚು ಪ್ರಚಲಿತವಿದೆ. ಬಹುಪತ್ನಿತ್ವ ವಿವಾಹ ಪದ್ಧತಿ ಆಚರಣೆಯಲ್ಲಿ ಬರಬೇಕಾದರೆ ಹೆಣ್ಣು ಮತ್ತು ಗಂಡುಗಳ ಸಂಖ್ಯೆಯ

[illegible]

[illegible]

[illegible]

[illegible]

[illegible]

ಅಸಮಾನತೆಯೇ ಕಾರಣ. ಗಂಡು ಸಂತಾನದ ಸಂಖ್ಯೆ ಕಡಿಮೆಯಾಗಿ ಹೆಣ್ಣು ಸಂತಾನದ ಸಂಖ್ಯೆ ಹೆಚ್ಚಾದಾಗ ಬಹುಪತ್ನಿತ್ವ ಅಸ್ತಿತ್ವದಲ್ಲಿ ಬರುತ್ತದೆ.

ಒಬ್ಬ ಪುರುಷ ಒಂದಕ್ಕಿಂತ ಹೆಚ್ಚು ಸ್ತ್ರೀಯರನ್ನು ವಿವಾಹವಾಗುವ ಪದ್ಧತಿಗೆ ಬಹುಪತ್ನಿತ್ವ ಎಂದು ಕರೆಯುತ್ತಾರೆ. ಈ ಪದ್ಧತಿಯು ಎಸ್ಕಿಮೋ, ಪ್ಲೈನ್ಸ್ ಇಂಡಿಯನ್‌ರು, ಕ್ರೋ ಇಡಿಯನ್‌ರು, ಉತ್ತರ ಅಮೇರಿಕಾದ ಹಿದಾತ್ಸ್, ಆಫ್ರೀಕಾದ ಗುನಿ ಮತ್ತು ಹಿಹಿ, ಭಾರತದ ನಾಗಾ, ಗೊಂಡ, ಬೈಗಾ, ಸಂತಾಲರು ದಕ್ಷಿಣ ಕನ್ನಡದ ಮೂಲ ನಿವಾಸಿಗಳಾದ ಹಸಲರಲ್ಲಿಯೂ ಈ ಪದ್ಧತಿಯನ್ನು ಕಾಣಬಹುದು.

ಬಹುಪತ್ನಿತ್ವದಲ್ಲಿ ಎರಡು ಪ್ರಭೇದಗಳಿವೆ. ೧) ಭಗೀನಿ ಬಹುಪತ್ನಿತ್ವ ೨) ಭಗಿನೇತರ ಬಹುಪತ್ನಿತ್ವ

ಭಗೀನಿ ಬಹುಪತ್ನಿತ್ವದಲ್ಲಿ ಮೊದಲ ಸಹೋದರಿಗೆ ಮದುವೆಯಾದ ನಂತರ ಉಳಿದ ಸಹೋದರಿಯರೆಲ್ಲರೂ ಸಹಜವಾಗಿ ಆತನ ಹೆಂಡತಿಯರು ಆಗುವರು. ಈ ಪದ್ಧತಿಯು ಕೆಲವು ಆದಿವಾಸಿಗಳಲ್ಲಿ ಅಸ್ತಿತ್ವದಲ್ಲಿತ್ತು. ಆದರೆ ಇಂದು ಭಗೀನಿ ಬಹುಪತ್ನಿತ್ವ ಸಾವಕಾಶವಾಗಿ ಮಾಯವಾಗುತ್ತಲಿದೆ. ಆದರೆ ಭಗಿನೇತರ ಬಹುಪತ್ನಿತ್ವ ಹಸಲರಲ್ಲಿ ಅಸ್ತಿತ್ವದಲ್ಲಿದೆ. ಮೊದಲು ಹಸಲರಲ್ಲಿ ಯಾರೂ ಹೆಚ್ಚು ಜನ ಹೆಂಡಂದಿರರನ್ನು ಹೊಂದಿರುವನೋ ಅವನೇ ಆ ವಲಯದ ಕೊಂಡಿಕಾರ ಅಥವಾ ಕೋಲಕಾರನಾಗಿರುತ್ತಿದ್ದನು. ಆದರೆ ಹಸಲರಲ್ಲಿ ಬಹುಪತ್ನಿತ್ವ ಹೊಂದಿರುವವನಿಗೆ ಪ್ರತಿಷ್ಠೆ ಜಾಸ್ತಿ ಇರುತ್ತಿತ್ತು. ಈ ಪದ್ಧತಿ ಅವರಲ್ಲಿ ಜಾರಿಯಾಗಬೇಕಾದರೆ ಸ್ತ್ರೀ ಮತ್ತು ಪುರುಷರ ಸಂಖ್ಯೆಯಲ್ಲಿಯ ವ್ಯತ್ಯಾಸವೂ ಕೂಡಾ ಕಾರಣವಾಗಿರಬಹುದು.

ಹಸಲರಲ್ಲಿ ಬಹುಪತ್ನಿತ್ವ ಅಸ್ತಿತ್ವದಲ್ಲಿ ಬರಲು ಕಾರಣವೇನೆಂದರೆ, ಮದುವೆಯಾಗಿ ಬಹಳ ದಿವಸಗಳವರೆಗೆ ಮಕ್ಕಳು ಆಗದಿದ್ದರೆ ಅಂತವರು ಇನ್ನೊಂದು ಮದುವೆಯಾಗಲು ತಮ್ಮ ಮೊದಲ ಹೆಂಡತಿಯ ಅಪ್ಪಣೆ ಪಡೆದು ಮದುವೆಯಾಗುತ್ತಿದ್ದರು. ಕೆಲವು ಸಲ ಆ ವಲಯದ ಕೋಲಕಾರ ಅಥವಾ ಕೊಂಡಿಕಾರನ ಅಪ್ಪಣೆಯನ್ನು ಪಡೆದು ವಿವಾಹವಾಗುತ್ತಿದ್ದರು. ಹಸಲರಲ್ಲಿ ಒಂದು ನಂಬಿಕೆ ಇದೆ. ಮಕ್ಕಳಿರದೆ ಇದ್ದರೆ ಮೋಕ್ಷವಿಲ್ಲ. ಆದ್ದರಿಂದ ಹೇಗಾದರೂ ಮಾಡಿ ಒಂದು ಗಂಡು ಮಗುವನ್ನು ಪಡೆಯಲೇಬೇಕು ಎಂಬ ಉದ್ದೇಶದೊಂದಿಗೆ ಅವರು ಬಹುಪತ್ನಿತ್ವಕ್ಕೆ ಮೊರೆಹೋಗುತ್ತಾರೆಂದು ಸಿದ್ಧಾಪೂರ ತಾಲೂಕಿನ ಸುತ್ಲುಮನೆಯ ತಿಮ್ಮ ಹೇಳುತ್ತಾನೆ. ಇನ್ನು ಕೆಲವರು ಕೇವಲ ಹೆಣ್ಣು ಮಕ್ಕಳಿಗೆ ಜನ್ಮ ಕೊಡುವುದರಿಂದ ಒಂದು ಗಂಡು ಸಂತಾನ ಇರಲಿ ಎಂಬ ಕಾರಣಕ್ಕೆ ಬಹುಪತ್ನಿತ್ವ ಮಾಡಿಕೊಂಡ ಉದಾಹರಣೆಗಳು ಇವೆ ಎಂದು ಕಾರ್ಗಲ್‌ದ ರಾಮಣ್ಣ ಕೂಳಕರ ಹೇಳುತ್ತಾನೆ. ಇನ್ನು ಕೆಲವರು ಹೆಚ್ಚು ಹೆಂಡಂದಿರನ್ನು ಹೊಂದಿದ್ದರೆ ತಮ್ಮ ಬಡತನ ನಿರ್ಮೂಲನೆಯಾಗಬಹುದು ಎಂಬ ಕಾರಣಕ್ಕೆ ಬಹುಪತ್ನಿತ್ವವನ್ನು ಮಾಡಿಕೊಳ್ಳುವವರಿದ್ದಾರೆಂದು ಕಾರ್ಗಲ್‌ದ ಕೇಶವ ತಿಮ್ಮ ಹೇಳುತ್ತಾನೆ.

ಬಹುಪತ್ನಿತ್ವ ಮಾಡಿಕೊಳ್ಳಬೇಕಾದರೆ ಹಸಲರಲ್ಲಿ ಮೊದಲನೆ ಹೆಂಡತಿಗೆ ವಾಸಿಯಾಗದ ರೋಗವಿದ್ದರೆ, ಆಕೆಯ ಅನುಮತಿಯನ್ನು ಪಡೆದು ಮತ್ತೊಂದು ವಿವಾಹವಾದ ಪ್ರಸಂಗಗಳು ಕೂಡಾ ಇವೆ.

ಎಚ್.ಆರ್.ಚೌಡಪ್ಪನವರ ಪ್ರಕಾರ ಹೆಚ್ಚು ಹೆಂಡಂದಿರನ್ನು ಹೊಂದಿರುವುದರಿಂದ ಅವರು ಆರ್ಥಿಕ ಸಂಕಷ್ಟತೆಯಿಂದ ಪಾರಾಗಬಹುದು. ಅರಣ್ಯ ಕಿರು ಉತ್ಪನ್ನದಿಂದ ಹೆಚ್ಚಿನ ಆದಾಯ ಬರಬಹುದು ಎಂಬ ನಂಬಿಕೆಯಿಂದಲೂ ಅವರು ಬಹುಪತ್ನಿತ್ವವನ್ನು ಅಸ್ತಿತ್ವದಲ್ಲಿ ತಂದಿದ್ದಾರೆಂದು ಹೇಳುತ್ತಾನೆ. ಅಷ್ಟೆ ಅಲ್ಲ, ಕನ್ನಡದ ಒಂದು ಉಕ್ತಿಯಂತೆ "ನೂರು ಎತ್ತು ಇದ್ದರೆ ಒಕ್ಕಲುತನ ಮುರಿಯುವದಿಲ್ಲ, ಇಬ್ಬರು ಹೆಂಡರಿದ್ದರೆ ಮನೆ ಮುರಿಯುವದಿಲ್ಲ." ಕೆಲವರು ತಮ್ಮ ಕಾಮ ತೃಷೆಗಾಗಿಯೂ ಕೂಡಾ ಹೆಚ್ಚು ಜನ ಹೆಂಡಂದಿರನ್ನು ಹೊಂದಿದವರು ಇದ್ದಾರೆ. ಮೊದಲು ಹೆಚ್ಚು ಹೆಂಡಂದಿರನ್ನು ಹೊಂದಿರುವವನನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಬಲಿಷ್ಠನೆಂದು ಹಸಲರಲ್ಲಿ ಪರಿಗಣಿಸುತ್ತಿದ್ದರು. ಆದರೆ ಇಂದು ಬಹುಪತ್ನಿತ್ವ ಮಾಡಿಕೊಳ್ಳುವವರ ಸಂಖ್ಯೆ ಬಹಳಷ್ಟು ಕಡಿಮೆಯಾಗಿದೆ. ಆದರೂ ಅಲ್ಲೊಂದು ಇಲ್ಲೊಂದು ಪ್ರಕರಣಗಳು ಹಿರೇಮನೆ, ತೋರಾಮೆ, ಬಚಗಾರುಗಳಲ್ಲಿ ಬಹುಪತ್ನಿತ್ವ ಹೊಂದಿದವರನ್ನು ಕಾಣಬಹುದು.

೩.೧೪ ಪ್ರೇಮ ವಿವಾಹ

ಪ್ರೇಮ ವಿವಾಹವೆಂದರೆ, ಗಂಡು ಮತ್ತು ಹೆಣ್ಣು ಒಬ್ಬರನ್ನೊಬ್ಬರು ಪರಸ್ಪರ ಪ್ರೀತಿಸಿ ಮದುವೆಯಾಗುವುದು. ಇದಕ್ಕೆ ಯಾವುದೇ ಜಾತಿ, ಅಂತಸ್ತು, ಉಚ್ಚ, ನೀಚ, ಪಂಡಿತ, ಪಾಮರ, ಬಡವ, ಶ್ರೀಮಂತ ಭೇದವನ್ನೆಣಿಸದೇ ವಿವಾಹವಾಗುವುದಾಗಿದೆ. ಆದ್ದರಿಂದ ಆಂಗ್ಲ ಭಾಷೆಯ ಒಂದು ಉಕ್ತಿಯಂತೆ 'Love is blind'- ಪ್ರೇಮಕ್ಕೆ ಕಣ್ಣಿಲ್ಲ.

ಹಸಲರಲ್ಲಿಯೂ ಕೂಡಾ ಪ್ರೇಮ ವಿವಾಹಗಳು ನಡೆದಿವೆ. ಹಸಲರ ಗಂಡು ಬ್ರಾಹ್ಮಣ ಅಥವಾ ಮಡಿವಾಳರ ಹೆಣ್ಣು ಪರಸ್ಪರ ಪ್ರೀತಿಸಿ ಮದುವೆಯಾದ ಪ್ರಸಂಗವೂ ಸಾಗರ ಪಟ್ಟಣದಲ್ಲಿಯೇ ನಡೆದಿದೆ. ಈ ವಿವಾಹದ ಬಗ್ಗೆ ಹಸಲರನ್ನು ಪ್ರಶ್ನಿಸಿದಾಗ ಅವರು ಈ ಮದುವೆಯನ್ನು ಸ್ವಸಂತೋಷದಿಂದ ಒಪ್ಪಿಕೊಳ್ಳುತ್ತೇವೆ. ಏಕೆಂದರೆ, ನಮ್ಮದು ಪಿತೃ ಪ್ರಧಾನವಾದ ಕುಟುಂಬ ನಮ್ಮ ವಂಶಾವಳಿ ನಿರ್ಧಾರವಾಗುವುದು ಗಂಡು ಮಕ್ಕಳಿಂದ, ನಮ್ಮ ಜಾತಿಯ ಗಂಡು ಬ್ರಾಹ್ಮಣ ಜಾತಿಯ ಹೆಣ್ಣನ್ನು ಮದುವೆಯಾಗುವುದರಿಂದ ಅವರಿಗೆ ಹುಟ್ಟಿದ ಮಕ್ಕಳನ್ನು ನಮ್ಮ ಮಕ್ಕಳೆಂದು ಒಪ್ಪಿಕೊಳ್ಳುತ್ತೇವೆ. ಅಷ್ಟೇ ಅಲ್ಲ, ಈ ಮಕ್ಕಳ ಜೊತೆ ಮುಂದೆ ವೈವಾಹಿಕ ಸಂಬಂಧವನ್ನು ಕೂಡಾ ನಮ್ಮ ಹಸಲರಲ್ಲಿಯೇ ಮುಂದುವರೆಸುತ್ತೇವೆ. ಕಾರಣ ಉಚ್ಚ ಜಾತಿಯವರೊಂದಿಗೆ ನಾವು ಸಂಬಂಧ ಬೆಳೆಸಿರುವುದೇ ಕಾರಣವಾಗಿದೆ. ಆಕೆ ತನ್ನ ತವರು ಮನೆಗೆ ಹೋಗಿ ಬರುತ್ತೇವೆಂದರೂ ಕೂಡಾ ಅವಳಿಗೆ ತವರು ಮನೆಗೆ ಕಳುಹಿಸುತ್ತೇವೆ. ಒಂದು ವೇಳೆ ತವರು ಮನೆಯವರು ಆಕೆಯನ್ನು ನಿಂದಿಸಿ ಕಳುಹಿಸಿದರೆ, ಪುನಃ ಆಕೆ ತವರು ಮನೆಗೆ ಹೋಗಲು ಇಚ್ಛೆ ವ್ಯಕ್ತಪಡಿಸಿದರೂ ಹೋಗಲು ನಾವು ಅನುಮತಿ ಕೊಡುವುದಿಲ್ಲ. ಆಕೆ ತನ್ನ ತವರಿನ ಸಂಬಂಧವನ್ನು ಸಂಪೂರ್ಣವಾಗಿ

ತ್ಯಜಿಸಬೇಕಾಗುತ್ತದೆ. ಒಂದು ವೇಳೆ ಆಕೆಯ ತಂದೆ ತಾಯಿಗಳು ಒಪ್ಪಿ ಆಕೆಯನ್ನು ಬರಮಾಡಿಕೊಂಡರೆ ಆಕೆಗೆ ನಾವು ತವರು ಮನೆಗೆ ಹೋಗಲು ಕಳುಹಿಸಿಕೊಡುತ್ತೇವೆ. ಅಷ್ಟೇ ಅಲ್ಲ, ಈಕೆಯ ಮಕ್ಕಳ ಜೊತೆ ಅವರು ವೈವಾಹಿಕ ಸಂಬಂಧವೇರ್ಪಡಿಸುತ್ತಿದ್ದಿದ್ದೆಯಾದರೂ, ನಮ್ಮ ಅಭ್ಯಂತರವಿಲ್ಲ. ಒಂದು ವೇಳೆ ಅವರು ಆಕೆಯ ಮಕ್ಕಳ ಜೊತೆಗೆ ವೈವಾಹಿಕ ಸಂಬಂಧವೇರ್ಪಡಿಸದಿದ್ದರೆ ನಮಗೆ ಯಾವುದೇ ರೀತಿಯ ಬೇಜಾರವೂ ಆಗುವುದಿಲ್ಲವೆಂದು ಕಾರ್ಗಲ್‌ದ ರಾಮಣ್ಣ ಕೂಳಕಾರ ಈತನು ಹೇಳುತ್ತಾನೆ.

ಇದಕ್ಕೆ ಪ್ರತಿಯಾಗಿ ಹಸಲರ ಹೆಣ್ಣು ಬ್ರಾಹ್ಮಣ ಜಾತಿಯ ಗಂಡು ಪರಸ್ಪರ ಪ್ರೀತಿಸಿ ಮದುವೆಯಾದರೆ ಆ ಹೆಣ್ಣನ್ನು ಪುನಃ ನಮ್ಮ ಮನೆಗೆ ಸೇರಿಸಿಕೊಳ್ಳುವುದಿಲ್ಲ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರತು' ಎನ್ನುವ ಗಾದೆಯಂತೆ ಆ ಹೆಣ್ಣನ್ನು ನಮ್ಮ ಮನೆಗೆ ಸೇರಿಸಿಕೊಳ್ಳುವುದಿಲ್ಲ. ಏಕೆಂದರೆ, ನಮ್ಮದು ಪಿತೃ ಪ್ರಧಾನವಾದ ಕುಟುಂಬವಿರುವುದರಿಂದ ಬ್ರಾಹ್ಮಣ ಯುವಕನಿಗೆ ಹುಟ್ಟಿದ ಮಕ್ಕಳು ಬ್ರಾಹ್ಮಣರಾಗುತ್ತಾರೆ ವಿನಃ ಹಸಲರು ಆಗುವುದಿಲ್ಲ. ಈ ಮಕ್ಕಳನ್ನು ನಮ್ಮ ಹಸಲರ ಮಕ್ಕಳೆಂದು ಪರಿಗಣಿಸಲು ಸಾಧ್ಯವಿಲ್ಲ. ಆದರೆ ಮೇಲ್ಜಾತಿಯವರ ಜೊತೆ ಸಂಬಂಧ ಬೆಳೆಸಿದ್ದೇವೆ ಎಂಬ ಸಂತೋಷ ಮಾತ್ರವಿದೆ ವಿನಃ ಅವರ ಜೊತೆ ಯಾವುದೇ ರೀತಿಯ ಸಂಬಂಧವನ್ನು ಬೆಳೆಸುವುದಿಲ್ಲ. ಒಂದು ವೇಳೆ ಮೇಲ್ಜಾತಿಯವರಿಗೆ ಮದುವೆಯಾದ ಹೆಣ್ಣು ನಮ್ಮ ಹಾಡಿಕೇರಿಗೆ ಅಥವಾ ಮನೆಗೆ ಬಂದಾಗ ಆಕೆಯನ್ನು ನಾವು ನಾಲ್ಕು ದಿನ ಇದ್ದು ಹೋಗಲು ಅವಕಾಶ ಕೊಡುತ್ತೇವೆ. ಇಂತಹ ಉದಾಹರಣೆಯು ತೋರಾಮೆಯಲ್ಲಿ ಸಿಗುತ್ತದೆ. ಈ ಬಗ್ಗೆ ದಂಪತಿಗಳೀರ್ವರನ್ನು ಪ್ರಶ್ನಿಸಿದಾಗ ಈಗ ನಾವು ಸಂತೋಷದಿಂದ ಇದ್ದೇವೆ ನಮ್ಮಿಬ್ಬರ ನಡುವೆ ಜಾತಿ ಭೇದವೇ ಇಲ್ಲ. ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಟ್ಟು ಒಳ್ಳೆಯ ಪ್ರಜೆಯನ್ನಾಗಿ ರೂಪಿಸುತ್ತೇವೆ ವಿನಃ ಜಾತಿಯ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲವೆಂದು ಶ್ರೀನಿವಾಸ ಹೇಳುತ್ತಾನೆ. ಒಂದು ವೇಳೆ ಹಸಲರ ಹೆಣ್ಣು ತನಗಿಂತ ಕೀಳಾದ ಜಾತಿಯವನ ಜೊತೆ ಪ್ರೇಮ ವಿವಾಹವಾದರೆ, ಆಕೆಗೆ ಮನೆಯಲ್ಲಿ ಸೇರಿಸಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ, ಆಕೆ ಎಂದು ಮದುವೆಯಾಗುತ್ತಾಳೋ ಅಂದೇ ನಮ್ಮ ಪಾಲಿಗೆ ಸತ್ತಂತೆ. ಆಕೆಗೆ ಜಾತಿಯಿಂದ ಕೋಲಕಾರ ಅಥವಾ ಕೊಂಡಿಕಾರನು ಬಹಿಷ್ಕಾರ ಹಾಕಿದ ಪ್ರಸಂಗಗಳೂ ಇವೆ.

ಒಟ್ಟಿನಲ್ಲಿ ಇತ್ತೀಚಿನ ದಿನಗಳಲ್ಲಿ ಹಸಲರಲ್ಲಿ ಗಂಡು ಹೆಣ್ಣು ಪರಸ್ಪರ ಪ್ರೀತಿಸಿ, ಅಂತರ್‌ಜಾತಿಯ ವಿವಾಹವಾಗುವ ಪ್ರಕರಣಗಳು ಹೆಚ್ಚಾಗುತ್ತಲಿವೆ.

೩.೧೫ ವಿವಾಹ ವಿಚ್ಛೇದನ

ಹಸಲರಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ. ವಿವಾಹ ವಿಚ್ಛೇದನ ಬಯಸುವಾತ ತನ್ನ ಜಾತಿ ಜನರನ್ನು, ಹಿರಿಯರನ್ನು ಸೇರಿಸಿ ಹೆಂಡತಿಯನ್ನು ಬಿಡುವದಕ್ಕೆ ಕಾರಣಗಳನ್ನು ಹೇಳಬೇಕು. ನಂತರ ಜಾತಿಯ ಜನರಿಂದ, ಹಿರಿಯರಿಂದ ಒಪ್ಪಿಗೆ ಪಡೆದ ಬಳಿಕ ಮಾತ್ರ ವಿಚ್ಛೇದನ ಮಾಡಿಕೊಳ್ಳಬಹುದು. ಹೆಂಡತಿ ಗಂಡನೊಡನೆ ಬಾಳಲು ನಿರಾಕರಿಸಿದರೆ, ಅವಳು ವಿವಾಹ

ವಿಚ್ಛೇದನ ಬಯಸಿದರೆ ವಿವಾಹಕ್ಕೆ ತಗುಲಿದ ವೆಚ್ಚವನ್ನು ಗಂಡನಿಗೆ ಅವಳ ಸಂಬಂಧಿಕರು ಕೊಡಬೇಕಾಗುತ್ತದೆ. ಪತಿ ಪತ್ನಿಯನ್ನು ವಿಚ್ಛೇದಿಸಿದಲ್ಲಿ ತಕ್ಷಣ ಅವಳನ್ನು ತವರು ಮನೆಗೆ ಕರೆತಂದು ಅವಳ ತಪ್ಪನ್ನು ಆಕೆಯ ತಂದೆ ತಾಯಿಗಳಿಗೆ ವಿವರಿಸಬೇಕು. ಆತನು ಹೇಳಿದರಲ್ಲಿ ಸತ್ಯಾಂಶವಿದೆ ಎಂದು ಆಕೆಯ ತಂದೆ–ತಾಯಿಗಳಿಗೆ ಮನದಟ್ಟದಾಗ ವಿಚ್ಛೇದನ ಕೊಡಬಹುದು. ವಿಚ್ಛೇದನ ಕೊಡುವುದೆಂದರೆ, ಹೆಂಡತಿಯ ಸೀರೆಯ ಸೆರಗಿನ ತುದಿಯನ್ನು ಹರಿಯುವದರ ಮೂಲಕ ಮತ್ತು ಅವಳ ಹೆಸರಿನಲ್ಲಿ ಸಂಸ್ಕಾರ ವಿಧಿ ಜರುಗಿಸುವದರ ಮೂಲಕ ವಿವಾಹ ವಿಚ್ಛೇದನ ಜಾರಿಯಲ್ಲಿ ಬರುವುದು.

ಪತಿಯಿಂದ ತಿರಸ್ಕೃತಳಾದ ಮಹಿಳೆ ಪುನರ್ ವಿವಾಹ ಮಾಡಿಕೊಳ್ಳಲು ಅವಕಾಶವಿದೆ. ಆಕೆ ವಿಚ್ಛೇದಿತ, ವಿಧುರ ಅಥವಾ ಆತನು ಪುನರ್ ವಿವಾಹವಾಗುವವನಾಗಿರಬೇಕು.

೩.೧೬ ಅಳಿಕಟ್ಟು

ಅಳಿಕಟ್ಟು ಎನ್ನುವ ಪದ್ಧತಿ ಘಟ್ಟದ ಕೆಳಗಿನ ಹಸಲರಲ್ಲಿ ಇತ್ತೀಚೆಗೆ ಮರೆಯಾಗುತ್ತಿದೆ. ಅಳಿಕಟ್ಟು ಎಂದರೆ, ಅಳಿಯನನ್ನು ಮನೆಗೆ ಬರಮಾಡಿಕೊಳ್ಳುವದು. ಈ ಪದ್ಧತಿ ಬರಲು ಪ್ರಮುಖ ಕಾರಣವೆಂದರೆ ಹಸಲರಲ್ಲಿ ವಧು ದಕ್ಷಿಣೆ ಕೊಡಬೇಕಾಗಿತ್ತು. ಇದು ಘಟ್ಟದ ಕೆಳಗಿನ ಮತ್ತು ಮೇಲಿನ ಹಸಲರಲ್ಲಿಯೂ ಇತ್ತು. ಘಟ್ಟದ ಮೇಲಿನ ಹಸಲರು ವರನಿಗೆ ವಧು ದಕ್ಷಿಣೆ ಕೊಡುವಷ್ಟು ಆರ್ಥಿವಾಗಿ ಸ್ಥಿತಿವಂತರಿಲ್ಲ. ವಧು ದಕ್ಷಿಣೆ ಕೊಡಲಾರದಕ್ಕಾಗಿ ಕೆಲವು ಹಾಡಿಕೇರಿ ಪುರುಷರು ಅವಿವಾಹಿತರಾಗಿಯೇ ಉಳಿದಿದ್ದಾರೆ. ಇದರಿಂದ ಘಟ್ಟದ ಕೆಳಗಿನ ಹಸಲರು ತಮ್ಮ ಹೆಣ್ಣು ಮಕ್ಕಳಿಗೆ ವರ ಹುಡುಕುವುದೇ ಒಂದು ಕೆಲಸವಾಯಿತು. ಆದರೂ ವರಗಳು ಸಿಗುತ್ತಿರಲಿಲ್ಲ. ಇದರಿಂದ ಘಟ್ಟದ ಕೆಳಗಿನ ಹಸಲರು ಅಳಿಕಟ್ಟು ಎಂಬ ಸಂಪ್ರದಾಯವನ್ನು ಹುಟ್ಟುಹಾಕಿದರು. ಅಂದರೆ ವರನಾದವನು ಘಟ್ಟದ ಕೆಳಗಿನ ಕನ್ಯೆಯನ್ನು ಲಗ್ನವಾದ ನಂತರ ಆತ ತನ್ನ ಸಂಸಾರವನ್ನು ಹೆಂಡತಿಯ ಮನೆಯಲ್ಲಿಯೇ ಹೂಡಬೇಕು. ಅಲ್ಲದೇ ಆತನು ತನ್ನ ತಂದೆಯ ಆಸ್ತಿಯಲ್ಲಿ ಪಾಲು ಕೇಳಬಾರದು. ಕನ್ಯೆಯ ತಾಯಿಯು ತನ್ನ ಆಸ್ತಿಯಲ್ಲಿ ಎಷ್ಟು ಹೆಣ್ಣು ಮಕ್ಕಳು ಇರುವರೋ ಅಷ್ಟು ಭಾಗವನ್ನು ಮಾಡುವಳು. ಇಲ್ಲಿ ಹಿರಿಯ ಮಗಳು ಮೊದಲು ಜಮೀನು ಹಿಡಿದುಕೊಳ್ಳಬೇಕು. ನಂತರ ಕಿರಿಯವಳು. ಈ ಜಮೀನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕಾದರೆ, ತಾಯಿ ತೀರಿಕೊಂಡ ನಂತರವೇ. ಒಂದು ವೇಳೆ ಆಕೆ ಜೀವಂತವಿದ್ದರೆ, ಅವಳು ಬದುಕಿರುವವರೆಗೂ ಮಕ್ಕಳು ತಮ್ಮ ವಶಕ್ಕೆ ತೆಗೆದುಕೊಳ್ಳುವ ಹಾಗಿಲ್ಲ. ಒಮ್ಮೆ ಹಂಚಿಕೆಯಾದ ಜಮೀನನ್ನು ಅಳಿಯ ಮಾರಾಟ ಮಾಡುವಂತಿರಲಿಲ್ಲ. ಒಂದು ವೇಳೆ ಆತನ ಹೆಂಡತಿ ತೀರಿಕೊಂಡರೆ, ಆತ ಮರುಮದುವೆಯಾದರೆ ಈ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲ. ಮಕ್ಕಳು ಇದ್ದರೆ ಈ ಆಸ್ತಿ ಹೆಣ್ಣು ಮಕ್ಕಳಲ್ಲಿ ಹಂಚಿಕೆಯಾಗುತ್ತದೆ. ಒಂದು ವೇಳೆ ಮಕ್ಕಳಾಗದೇ ಹೆಂಡತಿ ತೀರಿಕೊಂಡರೆ ಆತ ಮರುಮದುವೆ ಯಾಗದೇ ಇದ್ದರೆ ಆತನು ಜೀವಂತ ಇರುವವರೆಗೂ ಅದನ್ನು ಉಪಯೋಗಿಸಬಹುದು. ಆತ ಸತ್ತ ನಂತರ ಉಳಿದ ಹೆಣ್ಣು ಮಕ್ಕಳಲ್ಲಿ ಆತನ ಆಸ್ತಿ ಹಂಚಿಕೆಯಾಗುತ್ತದೆ. ಒಂದು ವೇಳೆ

ಹೆಂಡತಿಯ ತಂಗಿಯೂ ಅವಿವಾಹಿತಳಿದ್ದರೆ ಆಕೆಯನ್ನು ಮದುವೆಯಾದರೆ ಆಕೆಗೆ ಮೀಸಲಿಟ್ಟ ಆಸ್ತಿಯಲ್ಲಿ ಅರ್ಧ ಭಾಗವನ್ನು ಮಾತ್ರ ಪಡೆಯುವುದರ ಜೊತೆಗೆ ಮೊದಲಿನ ಆಸ್ತಿಯಲ್ಲಿ ಅದನ್ನು ಸೇರಿಸಬಹುದು. ಇನ್ನುಳಿದ ಅರ್ಧ ಭಾಗವನ್ನು ಉಳಿದ ಸಹೋದರಿಯರಲ್ಲಿ ಹಂಚಿಹೋಗುವದು.

ಅಳಿಕಟ್ಟು ಪದ್ಧತಿಯ ಜೊತೆಗೆ ವಿಮಕ್ಕಳ ಕಟ್ಟುಹಿ ಎನ್ನುವ ಸಂಪ್ರದಾಯವೂ ಇದೆ. ಮಕ್ಕಳಕಟ್ಟು ಎಂದರೆ, ಒಂದು ಕುಟುಂಬದಲ್ಲಿ ಇರುವ ಎಲ್ಲ ಹೆಣ್ಣು ಗಂಡು ಮಕ್ಕಳಲ್ಲಿ ಆಸ್ತಿ ಹಂಚಿ ಹೋಗುವದು. ಈ ಪದ್ಧತಿಯಲ್ಲಿ ಹೆಣ್ಣು ವಿಧವೆಯಾದರೆ ಆಕೆ ಮರುಮದುವೆಯಾಗದಿದ್ದರೆ ತನ್ನ ಪಾಲಿನ ಆಸ್ತಿಯನ್ನು ಆಕೆ ಯಾರು ತನಗೆ ಸಾಕುವರೋ ಅವರಿಗೆ ತನ್ನ ಆಸ್ತಿಯನ್ನು ಕೊಡಬಹುದು. ಈ ಪದ್ಧತಿಯೂ ದಕ್ಷಿಣ ಕನ್ನಡ ಜಿಲ್ಲೆಯ ಕಬ್ಬಿನಾಲೆ, ಹಳ್ಳಿಕೊಳೆ, ಕೊಲ್ಲೂರಿನ ಹಸಲರ ಹಾಡಿಕೇರಿಯಲ್ಲಿ ಈ ಪದ್ಧತಿ ಇತ್ತು. ಈಗ ಇದು ಮಾಯವಾಗಿದೆ. (ಮಾಹಿತಿದಾರರು: ಕೃಷ್ಣ ಜಿ. ಹಸ್ಲರ್ ಸಾ॥ ಕಬ್ಬಿನಾಲೆ ವಯಸ್ಸು ೫೭ ಉದ್ಯೋಗ ಕೃಷಿ ಮತ್ತು ಯಕ್ಷಗಾನ).

೩.೧೭ ಮಕ್ಕಳಕಟ್ಟು

ಘಟ್ಟದ ಕೆಳಗಿನ ಹಸಲರಲ್ಲಿ ಅಳಿಕಟ್ಟು ಎಂಬ ಸಂಪ್ರದಾಯ ಮಾಯವಾಗುತ್ತಿರುವುದರಿಂದ ಮಕ್ಕಳಕಟ್ಟು ಎಂಬ ಸಂಪ್ರದಾಯ ಅಸ್ತಿತ್ವದಲ್ಲಿ ಬರುತ್ತಲಿದೆ. ಈ ಸಂಪ್ರದಾಯದಲ್ಲಿ ತಂದೆಯ ಆಸ್ತಿಯು ಗಂಡು ಮಕ್ಕಳಲ್ಲಿ ಮಾತ್ರ ಹಂಚಿಹೋಗುತ್ತದೆ. ಹೆಣ್ಣು ಮಕ್ಕಳು ಮದುವೆ ಮಾಡಿಕೊಟ್ಟ ಮನೆಗೆ ಹೋಗಬೇಕು. ಇವರಿಗೆ ತಂದೆಯ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಇರುವುದಿಲ್ಲ. ಗಂಡುಮಕ್ಕಳು ತಮ್ಮ ತಂದೆಯ ಆಸ್ತಿಯನ್ನು ಹಂಚಿಕೊಂಡ ನಂತರ ಅದನ್ನು ಅವರು ಬೇರೆಯವರಿಗೆ ಮಾರಬಹುದು. ಒಂದು ವೇಳೆ ಮದುವೆಯಾಗದೆ ಇರುವ ಗಂಡು ಮಗು ತೀರಿಕೊಂಡರೆ ಆತನ ಆಸ್ತಿಯು ಎಲ್ಲರಲ್ಲಿ ಸಮನಾಗಿ ಹಂಚಿಹೋಗುವುದು. ಈ ಪದ್ಧತಿಯು ಪಿತೃ ಪ್ರಧಾನದ ಲಕ್ಷಣವನ್ನು ಹೊಂದಿದೆ. ಇಲ್ಲಿ ಎಲ್ಲ ಅಧಿಕಾರಿಗಳು ಕುಟುಂಬದ ಹಿರಿಯ ಮಗನಿಗೆ ಮಾತ್ರ ಇದೆ. ತಂದೆ ತೀರಿಕೊಂಡ ನಂತರ ಶ್ರಾದ್ಧ ಮಾಡುವವನು ಹಿರಿಯ ಮಗ.

೩.೧೮ ದತ್ತಕ ಪದ್ಧತಿ

ಇವರಲ್ಲಿ ದತ್ತಕ ತೆಗೆದುಕೊಳ್ಳುವ ಪದ್ಧತಿಯೂ ಇದೆ. ಯಾರಿಗಾದರೂ ಮಕ್ಕಳಾಗದೆ ಇದ್ದರೆ ಆತನು ತನಗೆ ಬೇಕಾದ ಅಂದರೆ ಸಹೋದರನ ಮಗನನ್ನು ಅಥವಾ ಗೆಳೆಯನ ಮಗನನ್ನು ದತ್ತಕ್ಕೆ ತೆಗೆದುಕೊಳ್ಳಬಹುದು. ದತ್ತಕ್ಕೆ ಮಗುವನ್ನು ಕೊಡುವಾಗ ಸಹೋದರ ಅಥವಾ ಗೆಳೆಯರು ಹಾಡಿಕೇರಿಯ ಜನರ ಸಮ್ಮುಖದಲ್ಲಿ ಆತನ ಸೊಂಟಕ್ಕೆ ಕಟ್ಟಿರುವ ಉಡಿದಾರ ಮತ್ತು ಆತನ ಶರ್ಟಿನ ಒಂದು ಭಾಗವನ್ನು ಹರಿದುಕೊಳ್ಳುವನು. ಇದಕ್ಕೆ 'ಋಣಶಾಸ್ತ್ರ' ಎಂದು ಕರೆಯುತ್ತಾರೆ. ದತ್ತಕ್ಕೆ ತೆಗೆದುಕೊಂಡಿರುವ ವ್ಯಕ್ತಿ ತನ್ನ ಹಾಡಿಕೇರಿಗೆ ಹೋಗಿ ಹಾಡಿಕೇರಿಯ ಜನರ ಸಮ್ಮುಖದಲ್ಲಿ ಮತ್ತು ಕೋಲಕಾರ ಅಥವಾ ಕೊಂಡಿಕಾರರ ಸಮ್ಮುಖದಲ್ಲಿ ಆತನಿಗೆ ಹೊಸ ಉಡಿದಾರ ಮತ್ತು ಹೊಸ ಶರ್ಟನ್ನು ಹಾಕಿ ಋಣಶಾಸ್ತ್ರವನ್ನು ಮಾಡಿ ತನ್ನ ಹಾಡಿಕೇರಿಯ ಜನರಿಗೆ ಸಿಹಿ ಊಟವನ್ನು ಹಾಕುವನು. ಒಂದು ವೇಳೆ ದತ್ತಕ್ಕೆ ತೆಗೆದುಕೊಂಡ ನಂತರ ತನಗೆ ಮಕ್ಕಳಾದರೆ ಈ ಮಗುವನ್ನು ಅವರು

ಬಿಡುವಂತಿಲ್ಲ. ಅಲ್ಲದೆ ಆಸ್ತಿಯಲ್ಲಿ ಆತನಿಗೂ ಪಾಲು ಕೊಡಬೇಕು. ಒಂದು ವೇಳೆ ಕೊಡದಿದ್ದರೆ ಕೋಲಕಾರ ಅಥವಾ ಕೊಂಡಿಕಾರರು ವಿಧಿಸುವ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

೩.೧೯ ಜಾತಿ ಪಂಚಾಯತ

ಹಸಲರು ತಮ್ಮ ಸಾಮಾಜಿಕ ಸುವ್ಯವಸ್ಥೆಯ ಪರಿಪಾಲನೆಗಾಗಿ ಜಾತಿ ಪಂಚಾಯತಿಯನ್ನುವ ವ್ಯವಸ್ಥೆಯನ್ನು ಜಾರಿಯಲ್ಲಿ ತಂದಿದ್ದಾರೆ. ಈ ಜಾತಿ ಪಂಚಾಯತಿಯ ಸದಸ್ಯರನ್ನು ಸಮಾಜ ಹಿರಿಯರೇ ಆಯ್ಕೆ ಮಾಡುವರು. ಈ ಆಯ್ಕೆಯಲ್ಲಿ ಸದಸ್ಯರ ಬುದ್ಧಿವಂತಿಕೆ, ಆರ್ಥಿಕ ಹಿನ್ನಲೆ, ಅನುಭವ ಮುಂತಾದವುಗಳನ್ನು ಪರಿಗಣನೆಗೆ ತೆಗೆದುಕೊಂಡು ಚುನಾಯಿಸುವರು. ಇವರಿಗೆ ಕೋಲಕಾರ ಅಥವಾ ಕೊಂಡಿಕಾರ ಎಂದು ಕರೆಯುತ್ತಾರೆ. ಇವರ ಸ್ಥಾನವು ವಂಶಪಾರಂಪರ್ಯವಾಗಿ ಬಂದಿರುವುದು. ಹಸಲರು ತಮ್ಮ ಹಾಡಿಕೇರಿಗಳನ್ನು ಸೀಮೆಗಳನ್ನಾಗಿ ವಿಂಗಡಿಸುವರು. ಪ್ರತಿ ಸೀಮೆಗೆ ಒಬ್ಬ ಕೋಲಕಾರ ಅಥವಾ ಕೊಂಡಿಕಾರ ಪೋಲಿಸ ಪಟೇಲ ಮತ್ತು ದಾಸಯ್ಯ ಇರುವರು. ಇವರೆಲ್ಲರ ಸ್ಥಾನಗಳು ವಂಶಪಾರಂಪರ್ಯಗತವಾಗಿ ಬಂದಿವೆ. ಇವರು ತಮ್ಮ ಹಾಡಿಕೇರಿಗಳನ್ನು ವಿವಿಧ ಸೀಮೆಗಳಾಗಿ ವಿಂಗಡಿಸಿ, ಅವುಗಳ ಒಳಾಡಳಿತ ವ್ಯವಸ್ಥೆಯನ್ನು ನೋಡಿ ಕೊಳ್ಳುವುದಕ್ಕಾಗಿ ಮೇಲಿನ ಕೋಲಕಾರ ಅಥವಾ ಕೊಂಡಿಕಾರ ಇರುವರು. ಇವರಲ್ಲಿ ಹಲವಾರು ಸೀಮೆಗಳಿವೆ. ಕರೂರ ಸೀಮೆ, ಬಳಿಗಿ ಸೀಮೆ, ಕಬ್ಬಿನಾಡು ಸೀಮೆ, ಕೆಳದಿ ಸೀಮೆ, ಮರುಗುಡಿ ಸೀಮೆ, ಸಿರಿವಂತೆ ಸೀಮೆ ಹೀಗೆ ಸೀಮೆಗಳಿವೆ. ಈ ಸೀಮೆಗಳ ಒಳಾಡಳಿತವನ್ನು ಬೇರೆ ಬೇರೆ ಕೋಲಕಾರ ಅಥವಾ ಕೊಂಡಿಕಾರ ನೋಡಿಕೊಳ್ಳುವರು. ಇದರಿಂದ ಬಹಳಷ್ಟು ಕೋಲಕಾರ ಅಥವಾ ಕೊಂಡಿಕಾರರನ್ನು ಕಾಣಬಹುದು.

ಹಸಲರಲ್ಲಿ ಯಾವುದೇ ರೀತಿಯ ವ್ಯಾಜ್ಯಗಳಾದರೆ ಅವರು ಅದನ್ನು ನಿಭಾಯಿಸುವರು. ಮದುವೆ ಸಂದರ್ಭದಲ್ಲಿ ವರನ ಕಡೆಯವರು ಕನ್ಯೆಗೆ ಕಾಲುಂಗುರ ಅಥವಾ ಸೀರೆ ತರದೇ ಇದ್ದರೆ, ಆಗ ಕೋಲಕಾರ ಅಥವಾ ಕೊಂಡಿಕಾರ ಸೀಮೆಯ ಜನರ ಜೊತೆಗೂಡಿ ಪಂಚಾಯತಿ ನಡೆಸುವರು. ಈ ಪಂಚಾಯತಿಯಲ್ಲಿ ವರನ ಕಡೆಯಿಂದ ಲೋಪವಾಗಿದ್ದೆ ಆದರೆ ಅವರಿಗೆ ಸರಾಯಿ ದಂಡ ಹಾಕುವರು. ಅದನ್ನು ಕೋಲಕಾರ ಅಥವಾ ಕೊಂಡಿಕಾರ ಮತ್ತು ಹಾಡಿಕೇರಿಯ ಹಿರಿಯರು ಕೂಡಿ ಕುಡಿಯುತ್ತಾರೆ.

ಹಸಲರು ತಮ್ಮ ಅಕ್ಕಪಕ್ಕದ ಜನರ ಜೊತೆಗೆ ಜಗಳವಾಡಿದರೆ, ದೊಂಬಿ ನಡೆಸಿದರೆ ಕೋಲಕಾರ ಅಥವಾ ಕೊಂಡಿಕಾರ ಇವರು ಬಗೆಹರಿಸಿ, ತಪ್ಪಿತಸ್ಥರಿಗೆ ಸರಾಯಿ ದಂಡ ಹಾಕುವರು. ಒಂದು ವೇಳೆ ಅವರ ಜಗಳಗಳು ತಾರಕ್ಕೆ ಹೋದರೆ ಕೋಲಕಾರನೆ ಪೋಲಿಸ ಪಟೇಲನೊಂದಿಗೆ ಪೋಲಿಸ ಸ್ಟೇಷನಗೆ ಹೋಗಿ ಕಂಪ್ಲೆಂಟ್ ಕೊಟ್ಟು ಬರುವನು. ಅವರ ವ್ಯಾಜ್ಯವು ಪೋಲಿಸ ಸ್ಟೇಷನದಲ್ಲಿಯೇ ಬಗೆಹರಿಯಬೇಕು. ಒಂದು ವೇಳೆ ಜಗಳ ಮಾಡುವಾಗ ಯಾವನಿಗಾದರೂ ಚಪ್ಪಲಿಯಿಂದ ಹೊಡೆದರೆ ತೀರ್ಥ ತೆಗೆದುಕೊಂಡು ಶುದ್ಧರಾಗಬೇಕು. ಹೊಡೆದವನಿಗೆ ಕೋಲಕಾರ ಅಥವಾ ಕೊಂಡಿಕಾರರು ಹತ್ತು ರೂಪಾಯಿ ದಂಡವನ್ನು ವಿಧಿಸುವರು. ಅಲ್ಲದೆ ಸ್ಥಳಿಯ ಜಾತ್ರೆ

ಹಬ್ಬ ಹರಿದಿನ ಮತ್ತು ಉತ್ಸವಗಳಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ವಂಶಪಾರಂಪರಿಕವಾದ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಆ ಜವಾಬ್ದಾರಿಯನ್ನು ಯಾರಾದರೂ ಉಲ್ಲಂಘಿಸಿದರೆ ಅವರಿಗೂ ದಂಡ ಹಾಕುವ ಹಕ್ಕು ಈ ಕೋಲಕಾರ ಅಥವಾ ಕೊಂಡಿಕಾರನಿಗಿದೆ.

ಕೆಲವು ಸಣ್ಣ ಪುಟ್ಟ ವ್ಯಾಜ್ಯಗಳು ಬಂದಾಗ ತಮ್ಮ ಸೀಮೆಯಲ್ಲಿ ಬರುವ ಪ್ರಸಿದ್ಧ ದೇವಸ್ಥಾನದ ಜಾತ್ರೆಯ ಸಂದರ್ಭದಲ್ಲಿ ಮೂರು ಅಥವಾ ನಾಲ್ಕು ವರ್ಷಗಳವರೆಗೆ ಬಿಟ್ಟಿ ಸೇವೆಯನ್ನು ಮಾಡಬೇಕು ಎಂಬ ಕಟ್ಟಪ್ಪಣೆಯನ್ನು ಮಾಡಿದ ಉದಾಹರಣೆಗಳಿವೆ ಎಂದು ರಾಮಣ್ಣ ಕೂಳಕಾರ ಹೇಳುತ್ತಾರೆ.

ವಿಧವೆಯು ಮರುವಿವಾಹವಾಗದೆ ಬಸುರಿಯಾದರೆ ಆಕೆಗೆ ಸಮಾಜದಿಂದ ಬಹಿಷ್ಕಾರ ಹಾಕುವರು. ಬಹಿಷ್ಕಾರಕ್ಕೆ ಒಳಪಟ್ಟವರ ಜೊತೆ ಬೆಂಕಿ ಮತ್ತು ನೀರು ಇವುಗಳನ್ನು ಹಾಡಿಕೇರಿಯ ಜನರು ಆಕೆಯ ಜೊತೆ ಹಂಚಿಕೊಳ್ಳುವಂತಿಲ್ಲ.

ಮದುವೆಯಾದ ಕನ್ಯೆಯು ಗಂಡನ ಮನೆಗೆ ಬಂದಾಗ ವೀಳ್ಯೆ ಕೊಡುವ ಶಾಸ್ತ್ರವನ್ನು ಮಾಡುವರು. ಈ ವೀಳ್ಯೆಶಾಸ್ತ್ರದಲ್ಲಿ ತಮ್ಮ ಸೀಮೆಯ ಪ್ರತಿಯೊಬ್ಬ ಹಾಡಿಕೇರಿಯ ಮುಖಂಡನಿಗೂ ಕೊಡಬೇಕು. ಒಂದು ವೇಳೆ ಯಾರನ್ನಾದರೂ ವೀಳ್ಯೆ ಕೊಡುವುದನ್ನು ಮರೆತಿದ್ದೆ ಆದರೆ ಅವರಿಗೂ ಕೂಡಾ ಕೋಲಕಾರ ಅಥವಾ ಕೊಂಡಿಕಾರ ಸರಾಯಿ ದಂಡವನ್ನು ಹಾಕುವರು. ಅದನ್ನು ಹಿರಿಯರೆಲ್ಲರೂ ಕೂಡಿ ಕುಡಿಯುವರು.

ಕೋಲಕಾರ ಅಥವಾ ಕೊಂಡಿಕಾರ ಏನಾದರೂ ತಪ್ಪು ಮಾಡಿದರೆ ಅವರನ್ನು ತೆಗೆದು ಹಾಕುವ ಕೆಲಸವನ್ನು ದಾಸಯ್ಯ ಮಾಡುತ್ತಾನೆ. ಅವರಿಗೆ ತೆಗೆದು ಹಾಕಿದ ನಂತರ ಸೀಮೆಯ ಎಲ್ಲರೂ ಕೂಡಿಕೊಂಡು ಕೋಲಕಾರನನ್ನು ನೇಮಿಸುವಾಗ ಆತನ ಆರ್ಥಿಕ ಹಿನ್ನೆಲೆ ಅನುಭವ, ಬುದ್ಧಿವಂತಿಕೆ ಹಾಗೂ ಸಮಯೋಚಿತ ನಿರ್ಣಯವನ್ನು ಮಾಡುವವನನ್ನು ಕೋಲಕಾರ ಅಥವಾ ಕೊಂಡಿಕಾರನನ್ನಾಗಿ ನೇಮಿಸುತ್ತಾರೆ. ಮುಂದೆ ಈ ಸ್ಥಾನವು ವಂಶಪಾರಂಪರಿಕವಾಗಿ ಮುಂದುವರೆಯುತ್ತದೆ.

ಕೋಲಕಾರ ತಮ್ಮ ಸೀಮೆಯ ಜನರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾಗ ಅವರಿಗೆ ಸಾಲ ಕೊಡಬೇಕು. ಇಲ್ಲವೆ ಎಲ್ಲಿಯಾದರೂ ಸಾಲ ಕೊಡಿಸಬೇಕು. ಒಂದು ವೇಳೆ ಅವರು ಸಾಲ ತೀರಿಸದೆ ಇದ್ದರೆ, ಅವರ ಗದ್ದೆ ತೋಟ ಅಥವಾ ಮನೆಯನ್ನು ಮಾರಿ ತಮ್ಮ ಹಣವನ್ನು ಪಡೆಯುವ ಅಧಿಕಾರ ಈ ಕೋಲಕಾರ ಅಥವಾ ಕೊಂಡಿಕಾರನಿಗಿದೆ. ಇದಲ್ಲದೆ ಸಾಲ ತೆಗೆದುಕೊಂಡವನ ಗದ್ದೆ ಅಥವಾ ತೋಟವನ್ನು ಮೂರು ಅಥವಾ ನಾಲ್ಕು ವರ್ಷಗಳವರೆಗೆ ಉಪಭೋಗ ಮಾಡಿ ಆತನಿಗೆ ಹಿಂದಿರುಗಿಸಬೇಕು. ಆದರೆ ಈಗ ಇವರ ಜಾತಿ ಪಂಚಾಯತಿಯೂ ಕೂಡಾ ಮಾಯವಾಗಲು ಪ್ರಾರಂಭಿಸಿದೆ. ಈಗ ಏನಾದರೂ ವ್ಯಾಜ್ಯಗಳಾದರೆ ಈಗ ಎಲ್ಲರೂ ಕೋಲಕಾರ ಅಥವಾ ಕೊಂಡಿಕಾರ ಹತ್ತಿರ ಹೋಗದೆ ನೇರವಾಗಿ ಪೋಲಿಸ ಸ್ಟೇಷನ್‌ಗೆ ಹೋಗಿ ತಮ್ಮ ಕೇಸನ್ನು

ದಾಖಲಿಸುತ್ತಾರೆ. ಇವರ ವ್ಯಾಜ್ಯಗಳು ನ್ಯಾಯಾಲಯದಲ್ಲಿಯೆ ಇತ್ಯರ್ಥವಾಗುತ್ತವೆ ಎಂದು ಹೇಳುವ ರಾಮಮೂರ್ತಿ ಬೆಳ್ಳೆಣ್ಣೆಯವರು ಬೇಸರವ್ಯಕ್ತಪಡಿಸುತ್ತಾರೆ.

೩.೨೦ ಶವ ಸಂಸ್ಕಾರ

ಹಸಲರಲ್ಲಿ ಪೂರ್ವ ಸಂಸ್ಕಾರದಂತೆ ಉತ್ತರ ಸಂಸ್ಕಾರಕ್ಕೂ ಹಲವು ವಿಧಿ–ವಿಧಾನಗಳನ್ನು ಆಚರಿಸುವರು. ಹಸಲರಲ್ಲಿ ಸತ್ತ ವ್ಯಕ್ತಿಯನ್ನು ಸುಡುವ ಮತ್ತು ಹುಗಿಯುವ ಎರಡು ಪದ್ಧತಿಗಳಿವೆ. ಸಾಗರ, ಸೊರಬ ಹಾಗೂ ತೀರ್ಥಹಳ್ಳಿ ಮುಂತಾದ ಪ್ರದೇಶಗಳಲ್ಲಿ ವಿವಾಹಿತರು ಸತ್ತರೆ ಸುಡುವದು. ಅವಿವಾಹಿತರು ಸತ್ತರೆ ಹೂಳುವದು ರೂಢಿಯಲ್ಲಿದೆ.

ಒಬ್ಬ ವ್ಯಕ್ತಿ ಇನ್ನೇನು ಸಾಯುತ್ತಾನೆ ಎಂಬುದು ಖಚಿತವಾದಾಗ ಅವನ ಗಂಡು ಮಕ್ಕಳು ಹತ್ತಿರದ ಸಂಬಂಧಿಗಳು ಆತನ ಬಾಯಿಗೆ ನೀರು ಹೊಯ್ಯುತ್ತಾರೆ. ಸತ್ತ ನಂತರ ಶವದ ಬಟ್ಟೆ ಬರೆ ಕಳಚಿ ಹೊರಾಂಡದಲ್ಲಿ ಮಲಗಿಸಿ, ಮೇಲೆ ಬಿಳಿ ಹೊಸ ಬಟ್ಟೆಯಿಂದ ಶವವನ್ನು ಮುಚ್ಚಿದ ನಂತರ ಆತನ ಸಂಬಂಧಿಗಳು ಅಥವಾ ಆ ಹಾಡಿಕೇರಿಯ ಓರ್ವ ವ್ಯಕ್ತಿ ಸತ್ತ ವ್ಯಕ್ತಿಯ ಸಂಬಂಧಿಗಳಿಗೆ ಸುದ್ದಿ ಮುಟ್ಟಿಸಲು ಹೋಗುತ್ತಾನೆ. ಇನ್ನುಳಿದ ಆತನ ಸಂಬಂಧಿಕರು ಶವದ ತಲೆ ಮತ್ತು ಕಾಲಿನ ಬುಡದಲ್ಲಿ ಸ್ವಲ್ಪ ಮಣ್ಣನ್ನು ತೆಗೆದು ಒಂದು ಬಾಳೆಎಲೆಯಲ್ಲಿ ಒಂದು ಹಿಡಿ ಅಕ್ಕಿಯನ್ನು ಜೊತೆಗೆ ಮಣ್ಣು ಸೇರಿಸಿ ಶವದ ಬಲ ಭಾಗದಲ್ಲಿ ಹೊದಿಸಿದ ಪಂಜಿಗೆ ವಸ್ತ್ರ ಗಂಟು ಹಾಕುತ್ತಾರೆ. ಹಾಗೆಯೇ ತೆಂಗಿನ ಕಾಯಿಯನ್ನು ಒಡೆದು ಇರಿಸಲಾಗುವುದು. ಸಾಯಂಕಾಲ ಅಥವಾ ರಾತ್ರಿ ಸತ್ತರೆ ಮಾತ್ರ ಬೆಳಗಾಗುವರೆಗೂ ಮನೆಯಲ್ಲಿಟ್ಟು ಕೊಳ್ಳಲಾಗುವುದು. ಆ ದಿನ ರಾತ್ರಿ ಸಂಬಂಧಿಗಳು ಮತ್ತು ಹಾಡಿಕೆರಿ ಜನರು ಬೆಳಗಾಗುವರೆಗೂ ಅದೇ ಮನೆಯಲ್ಲಿಯೆ ಇರುವರು. ಬೆಳಿಗ್ಗೆ, ಬೇರೆ ಸ್ಥಳದ ಆತನ ಸಂಬಂಧಿಕರು ಬಂದ ನಂತರವೇ ಹೆಣಕ್ಕೆ ಹೂ ಹಾಕಿ, ಗಂಧದ ಕಡ್ಡಿ ಹಚ್ಚಿಡಲಾಗುವುದು. ಪತ್ನಿ ಬದುಕಿದ್ದರೆ ಶವದ ಪಕ್ಕದಲ್ಲಿಯೇ ಕುಳಿತುಕೊಳ್ಳುವಳು. ಬೇರೆ ಸ್ಥಳದಿಂದ ಬಂದವರಿಗೆ ಆಕೆ ವೀಳ್ಯೆ ಕೊಡುವಾಗ ವಿಧವೆಗೆ ಅವರು ಉಡಿ ತುಂಬುತ್ತಾರೆ. ಈ ಸಂದರ್ಭದಲ್ಲಿ ವಿಧವೆಯ ತಂದೆ ಅಥವಾ ಸಹೋದರ ಹೊಸ ಸೀರೆಯನ್ನು ನೀಡುವನು. ಹೆಣ ಹೂಳಲು ಗುಂಡಿಯನ್ನು ಹಸಲರೇ ತೋಡುತ್ತಾರೆ. ಹೆಣ ಸುಡುವುದಾದಲ್ಲಿ ಆ ಹಾಡಿಕೆರಿಯ ಜನರು ಅಥವಾ ಆತನ ಸಂಬಂಧಿಗಳು ಅರಣ್ಯಕ್ಕೆ ಕಟ್ಟಿಗೆ ತರಲು ಹೋಗುತ್ತಾರೆ. ಕಟ್ಟಿಗೆ ಆರು ಅಡಿ ಉದ್ದ ಮತ್ತು ನಾಲ್ಕು ಅಡಿ ಅಗಲ ಸುಮಾರು ನಾಲ್ಕು ಅಡಿ ಎತ್ತರ ಕಟ್ಟಿಗೆಗಳನ್ನು ಜೋಡಿಸುವರು ಇದು ಶವದ ದೈಹಿಕ ಗಾತ್ರದ ಆಧಾರದ ಮೇಲಿಂದ ಸಿದ್ಧಪಡಿಸಿದ ನಂತರ ಬಂದು ಸುದ್ದಿ ಮುಟ್ಟಿಸುತ್ತಾರೆ. ಆನಂತರ ಎರಡು ಬಾಳೆ ಗಿಡದ ತುಂಡುಗಳನ್ನು ತರುತ್ತಾರೆ. ಇದನ್ನು ಹೊರಗಿನ ಅಂಗಳದಲ್ಲಿ ಬಿಡಿ ಬಿಡಿಯಾಗಿರಿಸಿ ಬಾಳೆ ದಿಂಡಿನ ಮೇಲೆ ಎರಡು ಗಟ್ಟಿಯಾದ ಅಡಿಕೆ ದಬ್ಬೆಯನ್ನಿರಿಸಿ, ಅಡ್ಡಲಾಗಿ ದಬ್ಬೆ ಕಟ್ಟಿ ಅಡಿಕೆ ಸೊಗೆ ಹಾಕಿ ಅನಂತರ ಶವವನ್ನು ತಂದು ಮಲಗಿಸುವರು. ಉರಿನೀರು, ಮಡಿಕೆಗೆ ತುಂಬಿಸುತ್ತಿರುವಾಗ ಕೊಡದಿಂದ ಶವಕ್ಕೆ ನೀರು ಹಾಕಲಾಗುತ್ತದೆ. ಉರಿನೀರು ಮಡಿಕೆಯನ್ನು ಇಬ್ಬರು ಹಿಡಿದಿರುತ್ತಾರೆ. ಶವ

ಮಲಗಿಸಿದ ನಂತರ ಅಡಿಕೆ ದಬ್ಬೆ ಹಾಕಿ ಹಸಿ ಬಾಳೆ ಪಟ್ಟೆಯಿಂದ ಬಿಗಿದು ಕಟ್ಟುವರು. ಇನ್ನೊಂದು ಮಡಕೆಯಲ್ಲಿ ಬೆಂಕಿ ಕೆಂಡ ಹಾಕಿಕೊಂಡ ಕವೇ ಕೋಲಿನಿಂದ ಕಟ್ಟಿ ಹಿಡಿದುಕೊಂಡಿರುತ್ತಾರೆ. ಇಬ್ಬರು ಶವವನ್ನು ಹೊರುತ್ತಾರೆ. ಶವದ ಬುಡದಲ್ಲಿದ್ದ ಬಿಡಿ ಬಿಡಿ ಬಾಳೆಯ ದಿಂಡನ್ನು ತೆಗೆದು ದೂರ ಎಸೆಯುವರು. ಶವ ಹೊತ್ತು ಸ್ವಲ್ಪ ದೂರ ತೆಗೆದುಕೊಂಡು ಹೋದ ನಂತರ ಅದನ್ನು ಇಳಿಸಿ, ಶವದ ಬಾಯಿಗೆ ಶವ ಸಂಸ್ಕಾರಕ್ಕೆ ಹೊರುವರೆಲ್ಲರೂ ತಿಳಿಗಂಜಿ ಹಾಕುವರು. ಒಂದು ವೇಳೆ ಗಂಡು ಮಕ್ಕಳಿಲ್ಲದಿದ್ದರೆ ಹೆಣ್ಣು ಮಕ್ಕಳು ಗಂಜಿಯನ್ನು ಹಾಕುವರು. ಶವದ ಬಾಯಿಗೆ ಹೊಯ್ಯಲೆಂದೇ ಸಣ್ಣ ಹಾಳೆ ಕೊಟ್ಟೆಯಲ್ಲಿ ತಿಳಿಗಂಜಿ ಒಯ್ಯುತ್ತಾರೆ. ಉರಿನೀರು ಮಡಿಕೆಯನ್ನು ಹಿರಿಯ ಮಗ ಹಿಡಿದುಕೊಂಡಿರುತ್ತಾನೆ. ಶವವನ್ನು ಕಟ್ಟಿಗೆಯ ಮೇಲೆ ಮಲಗಿಸುವಾಗ ಶವದ ತಲೆ ಪೂರ್ವ ಅಥವಾ ಪಶ್ಚಿಮ ದಿಕ್ಕಿಗೆ ಬರುವ ಹಾಗೆ ಕಟ್ಟಿಗೆಯ ಮೇಲೆ ಮಲಗಿಸುತ್ತಾರೆ. ಹಿರಿಯ ಮಗ ಶವದ ಮೂರು ಕಡೆ ಅಂದರೆ ತಲೆ ಮಧ್ಯ ಕಾಲು ಕಡೆಗೆ ಬೆಂಕಿ ಹಚ್ಚುವನು. ಬೆಂಕಿ ಹಚ್ಚಿದ ನಂತರ ಶವದ ಸುತ್ತಲೂ ಉರಿನೀರು ಮಡಿಕೆಯೊಂದಿಗೆ ಹಿರಿಯ ಮಗ ಶವದ ಸುತ್ತಲೂ ಮೂರು ಪ್ರದಕ್ಷಿಣೆ ಹಾಕುವನು. ಪ್ರತಿ ಪ್ರದಕ್ಷಿಣೆಗೂ ಉರಿ ನೀರು ಮಡಿಕೆಗೆ ಮೂರು ಪ್ರದಕ್ಷಿಣೆಗೆ ಕಬ್ಬಿಣದ ಸಣ್ಣ ಸಲಾಕೆಯಿಂದ ಮಡಿಕೆಗೆ ತೂತು ಹಾಕುವರು. ಹೀಗೆ ಮೂರು ಸುತ್ತು ಮುಗಿದ ನಂತರ ತಿರುಗಿ ನೋಡದೇ ಆ ಮಡಿಕೆಯನ್ನು ಎಸೆಯುವನು. ಬೆಂಕಿ ಪೂರ್ಣ ಹೊತ್ತಿಕೊಳ್ಳುವ ತನಕ ಇದ್ದು, ನಂತರ ಹಿಂದಿರುಗುತ್ತಾರೆ. ಮೃತನ ಪತ್ನಿಯ ತಾಳಿಯನ್ನು ಸ್ಮಶಾನದಲ್ಲಿ ಕಳಚಿ, ಕಾಲುಂಗರ, ಮೂಗುತಿ ಬೆಂಡೋಲೆಗಳನ್ನು ಕಳಚಿದ ನಂತರ ಬಳೆಗಳನ್ನು ಒಡೆಯುತ್ತಾರೆ. ಶವ ಸಂಸ್ಕಾರಕ್ಕೆ ಹೋದವರೆಲ್ಲರೂ ಹಿಂದಿರುಗಿ ಬರುವಾಗ ಸುಮಾರು ಒಂದು ಕಿಲೋ ಮೀಟರ ಕ್ರಮಿಸಿದ ಬಳಿಕ ಕಾರೆಮರದ ಸೊಪ್ಪಿನ ಕೊನೆ ಮುರಿದು ನೆಲದ ಮೇಲಿರಿಸಿ, ಅದರ ಮೇಲೆ ಬಿಳಿಯ ಕಲ್ಲನ್ನಿಡುವರು. ಇದನ್ನು ಶವ ಸಂಸ್ಕಾರಕ್ಕೆ ಹೊದವರೆಲ್ಲರೂ ದಾಟಿ ಬರಬೇಕು ಬಳಿಕ ಎಲ್ಲರೂ ಹತ್ತಿರದ ಕೆರೆ ಅಥವಾ ನದಿಯಲ್ಲಿ ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ ಬಂದು ಗೋಮಯ ಹಾಕಿಕೊಂಡು ಬಿಸಿ ನೀರಿನ ಸ್ನಾನ ಮಾಡುವರು. ಸಮಾಧಾನ ಹೇಳಲು ಬಂದ ಬಂಧು ಬಾಂಧವರು ಮನೆಯಲ್ಲಿ ತಂಗುವದಿಲ್ಲ. ಅವರು ಊಟ ಮಾಡದೇ ಕೇವಲ ಸ್ನಾನ ಮಾಡಿ ಹೋಗುತ್ತಾರೆ.

ಇನ್ನು ಶವ ಸಮಾಧಿ ಮಾಡಬೇಕಾದರೆ ಶವವನ್ನು ಸ್ಮಶಾನಕ್ಕೆ ಒಯ್ದು ನೆಲದ ಮೇಲೆ ಇಳಿಸಿ, ಹೂ ಹಾಕಿ ಊದುಬತ್ತಿ ಹಚ್ಚಿದ ಬಳಿಕ ಗುಂಡಿಯೊಳಕ್ಕೆ ಇಳಿಸಲಾಗುವದು. ಈ ಗುಂಡಿಯನ್ನು ಹಸಲರು ತೋಡುತ್ತಾರೆ. ಹಿರಿಯ ಮಗ ಶವದ ಸುತ್ತಲೂ ಮೂರು ಬಾರಿ ಪ್ರದಕ್ಷಿಣೆ ಹಾಕಿದ ಬಳಿಕ ಮಡಿಕೆಯನ್ನು ಎಡ ಭುಜದಿಂದ ಹಿಂದಕ್ಕೆ ಬೀಳಿಸುತ್ತಾನೆ. ಹಿಡಿ ಮಣ್ಣನ್ನು ಹಿರಿಯ ಮಗನು ಮೊದಲಿಗೆ ಹಾಕುವನು. ಶವವನ್ನು ಸಮಾಧಿ ಮಾಡಿ ಅದರ ಮೇಲೆ ಮೂರು ಕಲ್ಲುಗಳನ್ನಿಟ್ಟು ಬರುತ್ತಾರೆ. ಒಂದು ತಲೆಯ ಭಾಗದಲ್ಲಿ ಮತ್ತೊಂದು ಮಧ್ಯ ಭಾಗದಲ್ಲಿ ಇನ್ನೊಂದು ಕಾಲಿನ ಭಾಗದಲ್ಲಿ ತಲೆಯ ಸಮೀಪ ಒಂದು ತಟ್ಟೆಯಲ್ಲಿ ನೀರನ್ನು ಇರಿಸಿ, ಊದಬತ್ತಿ ಹಚ್ಚಿ ಎಲೆ ಅಡಿಕೆಗಳನ್ನಿಡುತ್ತಾರೆ.

ಸಾವು ಸಂಭವಿಸಿದ ಮನೆಯಲ್ಲಿ ಸಿದ್ಧಪಡಿಸಿದ ಅಡುಗೆಗೆ "ಹುಳಿಕೋಳ್" ಎಂದು ಹೆಸರು. ಈ ಊಟವನ್ನು ಮನೆಯವರಷ್ಟೇ ಮಾಡಬೇಕು. ಸಾವು ಸಂಭವಿಸಿದ ಸ್ಥಳದಲ್ಲಿ ಸಮನಾಗಿ ಬೂದಿ ಎರಚಲಾಗುವುದು. ಬಳಿಕ ಹೂಜಿಯ ತುಂಬ ನೀರನ್ನಿಟ್ಟು ಹಣತೆಯೊಂದನ್ನು ಹಚ್ಚಲಾಗುವದು. ಮೃತನ ಆತ್ಮ ತನಗೆ ಬೇಕಾದ ಜನ್ಮವನ್ನು ಭೂಮಿಯ ಮೇಲೆ ಗುರುತಿಸಿಕೊಳ್ಳುವದರ ಮೂಲಕ ಮರುಜನ್ಮ ಪಡೆಯಲೆಂಬುದು ಬೂದಿ ಎರಚುವದರ ಉದ್ದೇಶ, ಬೂದಿ ಎರಚಿದ ಸ್ಥಳವನ್ನು ಮಾರನೆಯ ದಿವಸ ಸೂಕ್ಷ್ಮವಾಗಿ ಪರಿಶೀಲಿಸಲಾಗುವುದು. ಅಲ್ಲಿ ಇರುವ ಗೆರೆಗಳ ಸಹಾಯದಿಂದ ಯಾವ ಪ್ರಾಣಿ ಅಥವಾ ಪಕ್ಷಿಗೆ ಹೋಲಿಕೆಯಾಗುವದು ಎಂಬುದನ್ನು ವಿವರಿಸಲಾಗುವುದು.

ಸತ್ತ ಮೂರನೆ ದಿವಸಕ್ಕೆ ಸೂತಕ ಕಳೆಯುವ ಕಾರ್ಯಕ್ರಮ ಜರುಗುವದು. ಮನೆ ಮಂದಿಯೆಲ್ಲ ಗೋಮಯ ಹಾಕಿಕೊಂಡು ಸ್ನಾನ ಮಾಡಿ ಶುದ್ಧರಾಗಬೇಕು. ಏಳನೆಯ ದಿವಸಕ್ಕೆ ಪುನಃ ಮನೆ ಮಂದಿಯೆಲ್ಲ ಗೋಮಯ ಹಾಕಿಕೊಂಡು ಸ್ನಾನ ಮಾಡಿ ಪರಿಶುದ್ಧರಾಗುವರು. ಹನ್ನೊಂದನೆಯ ದಿವಸ ಹಿರಿಯ ಮಗ ಮತ್ತು ಇತರ ಸಂಬಂಧಿಗಳು ಬೆಳಿಗ್ಗೆ ಸ್ಮಶಾನಕ್ಕೆ ತೆರಳಿ ಶವದ ಬೂದಿಯನ್ನು "ವಬ್ಬಳಿಸಿ" (ಒಟ್ಟುಗೂಡಿಸಿ) ಬಿದಿರಿನ ಬುಟ್ಟಿಯಲ್ಲಿರಿಸಿಕೊಂಡು ಒಂದು ತುಳಸಿ ಗಿಡ ನೆಟ್ಟು ಗೋಮಯ ಹಾಕಿ ಸಾರಿಸಿ ಬರುವರು. ಅನಂತರ ಮನೆಗೆ ಬಂದು ಸ್ನಾನ ಮಾಡಿ ಕೋಳಿಸಾರು ಮತ್ತು ಮೂರು ರೊಟ್ಟಿಗಳನ್ನು ಮಾಡಿಕೊಂಡು ಮೂರುಜನ ಮಾತ್ರ ಸ್ಮಶಾನಕ್ಕೆ ಹೋಗಿ ಅಲ್ಲಿ ತುಳಸಿ ಗಿಡದ ಬಳಿ ಹಣತೆ ದೀಪ ಹಚ್ಚಿ ಎಡೆ ಮಾಡುತ್ತಾರೆ. ಆ ಎಡೆಗೆ ಕಾಗೆ ಬಂದು ಆ ಎಡೆಯನ್ನು ಮುಟ್ಟಿದ ನಂತರವೇ ಸ್ಮಶಾನಕ್ಕೆ ಹೋದ ಮೂವರು ವಾಪಸ ಬರುವರು.

ಹನ್ನೊಂದನೆಯ ದಿವಸದ ಸೂತಕ ಕಳೆಯುವವರೆಗೂ ಮನೆಯ ಯಜಮಾನ ಕೆಲಸಕ್ಕೂ ಊರಿನವರ ಮನೆಗೂ ಹೋಗುವದಿಲ್ಲ. ಅವನು ಮೈ ಮೇಲೆ ಬಟ್ಟೆ ಹಾಕುವಂತಿಲ್ಲ. (ಪಂಜೆ ಹೊರತುಪಡಿಸಿ) ಉಪ್ಪು ಖಾರ ಹಾಕಿದ ಅಡುಗೆ ಆತ ಮುಟ್ಟುವಂತಿಲ್ಲ.

ದುಃಖ ತಪ್ತರನ್ನು ಸಂತೈಸಲು ಬರುವ ಬಂಧು ಬಾಂಧವರು ಅವಲಕ್ಕಿ, ಬತ್ತದ ಅರಳನ್ನು ತರುವರು. ಅದನ್ನು ಮನೆಯಲ್ಲಿ ಎಲ್ಲರೂ ತಿನ್ನುತ್ತಾರೆ. ಹಿರಿಯ ಮಗ ತಲೆ ಮತ್ತು ಗಡ್ಡ ಬೋಳಿಸುವ ಪದ್ಧತಿ ಇದೆ. ಹನ್ನೊಂದನೆಯ ದಿನದಿಂದ ಪ್ರತಿ ದಿನವು ಮನೆಯನ್ನು ಶುದ್ಧ ಮಾಡುವ ಕಾರ್ಯಕ್ರಮ ಜರುಗುವದು. ದಿನಾಲೂ ಗೋಮಯದಿಂದ ಮನೆಯನ್ನು ಸಾರಿಸುವದು. ಬ್ರಾಹ್ಮಣ ಅಥವಾ ಜಂಗಮ ಇವರಿಂದ ತಂದ ತೀರ್ಥವನ್ನು ಮನೆಯ ತುಂಬೆಲ್ಲ ಸಿಂಪಡಿಸಿ ಶುದ್ಧಗೊಳಿಸುವರು. ನಂತರ ಕುಟುಂಬದ ಸದಸ್ಯರೆಲ್ಲರೂ ಸ್ನಾನವಾದ ಬಳಿಕ ಪಾದೋದಕ ಅಥವಾ ತೀರ್ಥ ಸ್ವೀಕರಿಸಬೇಕು. ಮೃತಾತ್ಮಕ್ಕೆ ಎಡೆ ಇಡಲು ಪ್ರತ್ಯೇಕ ಅಡಿಗೆ ಮಾಡುವರು ಅಲ್ಲದೆ ಹಾಡಿಕೇರಿಯ ಎಲ್ಲ ಜನರು ತೀರಿಕೊಂಡವರ ಮನೆಯವರಿಗೆ ಹೊಸಬಟ್ಟೆ ಕೊಡುವ ಸಂಪ್ರದಾಯ ಹಿರೇಮನೆ, ಬೆಳ್ಳೆಣ್ಣೆ, ಬಚಗಾರು, ಗಿಳಿಗಾರು ಮುಂತಾದ ಪ್ರದೇಶಗಳಲ್ಲಿ ಇದೆ.

ಹದಿನಾರನೆಯ ದಿವಸ ಮೃತರಿಗೆ ಅನ್ನ ಹಾಕುವ ಶಾಸ್ತ್ರ ನಡೆಯುವದು ಈ ಪದ್ಧತಿಗೆ "ತಿಂಗಳನ್ನ ಹಾಕುವದು" ಎನ್ನುವರು. ಕುರಿ ಅಥವಾ ಕೋಳಿ ಮಾಂಸದ ಸಾರು ಸಿದ್ಧಪಡಿಸಿ

ಮಂತ್ರವಾದಿಯನ್ನು ಕರೆಸುವರು. ಕಡಬು, ಕಜ್ಜಾಯ, ಪಾಯಸ ಚಿತ್ರಾನ್ನ ಮೊದಲಾದ ವಿವಿಧ ಬಗೆಯ ಭಕ್ಷ್ಯ ತಯಾರಿಸಿ, ಒಂದು ಎಡೆಯಲ್ಲಿ ಬಡಿಸಿ, ಅದನ್ನು ತೆಗೆದುಕೊಂಡು ಊರ ಹೊರಗೆ ಹೋಗಿ ಗುಳಿ ಕರೆದು ಇರಿಸಿ ಬರುತ್ತಾರೆ. ಅನಂತರ ರಾತ್ರಿ ಮನೆಯಲ್ಲಿ ಒಂದು ತಾಮ್ರದ ಕೊಡ ಅಥವಾ ಮಡಿಕೆಯಲ್ಲಿ ನೀರು ತುಂಬಿ ಬಂಧು ಬಾಂಧವರು ತೆಗೆದುಕೊಂಡು ಬಂದ ತಿಂಡಿ ತಿನಸುಗಳಿಂದ ಎಡೆ ಸಿದ್ಧಪಡಿಸುತ್ತಾರೆ. ಮಂತ್ರವಾದಿ ಮಂತ್ರಿಸಿ ಕೊಟ್ಟ ನಿಂಬೆಕಾಯಿ, ಅಕ್ಕಿ ಕಾಳುಗಳನ್ನು ಮನೆಯ ಮೇಲಿರಿಸುತ್ತಾರೆ. ಎರಡು ಹಣತೆಯಲ್ಲಿ ದೀಪಗಳನ್ನು ಹಚ್ಚಿ ಮಣೆಯ ಮೇಲಿಡುತ್ತಾರೆ. ಈ ದೀಪಗಳಿಗೆ ಎರಡೆರಡು ಬತ್ತಿಗಳನ್ನು ಹಾಕಿರುತ್ತಾರೆ. ದೀಪದ ಸುಳಿಗಳು ಕೂಡಿ ಒಂದಾಗಬೇಕು. ಇದಕ್ಕೆ ಹಸಲರು ದೀಪ ಕೂಡಿತು ಎನ್ನುತ್ತಾರೆ. ದೀಪದ ಸುಳಿಗಳು ಒಂದನ್ನೊಂದು ಕೂಡಿದರೆ ಸತ್ತವರಿಗೆ ಸಮಾಧಾನವಾಗಿದೆ ಎಂದು ಹಸಲರು ಭಾವಿಸುತ್ತಾರೆ. ಇದನ್ನು ನೋಡಲು ಬೇರೆ ಊರಿನಿಂದ ಗಾಡಿಗನನ್ನು ಕರೆತರುವರು.

ಮೇಜವಾನಿಗೆ ಪೂರ್ವದಲ್ಲಿ ಮೃತರ ಆತ್ಮ ಪೂರ್ವಜರನ್ನು ಸೇರುವಂತೆ ಪ್ರಾರ್ಥಿಸುವ ಕಾರ್ಯಕ್ರಮವೊಂದು ಜರುಗುವದು. ದೇವರ ಮನೆ ಸಮೀಪ ಒಂದು ಅಥವಾ ಎರಡು ಮಡಿಕೆಯಲ್ಲಿ ನೀರನ್ನಿರಿಸುವರು. ನಂತರ ಆತನ ಗಂಡು ಮಕ್ಕಳು ಅದನ್ನು ಪೂಜಿಸುವರು. ಮನೆಗೆ ಬಂದ ಬಂಧು ಬಾಂಧವರೆಲ್ಲರೂ ಲೋಬಾನ ಹಾಕುವರು. ಎರಡು ಎಡೆಗಳನ್ನು ಎರಡು ಮಡಿಕೆಯ ಎದುರು ಇರಿಸಲಾಗುವುದು. ಅನಂತರ ಮಣ್ಣಿನ ಹಣತೆಯಲ್ಲಿ ಹರಳೆಣ್ಣೆಯನ್ನು ಪೂರ್ತಿ ತುಂಬಿ ಸ್ವಲ್ಪ ಸ್ಥಳ ಬಿಟ್ಟು ಎರಡೆರಡು ಬತ್ತಿ ಹಚ್ಚಿಡಲಾಗುವದು. ಅನಂತರ ಮೃತನ ಆತ್ಮ ಅವನ ಪೂರ್ವಜರನ್ನು ಸೇರಬೇಕೆಂದು ಕೋರಲಾಗುವದು. ಆತ್ಮ ಪೂರ್ವಜರನ್ನು ಸೇರಿದ್ದನ್ನು ಎರಡೂ ಬತ್ತಿಗಳು ಒಂದಾಗುವದರ ಮೂಲಕ ತೋರಿಸಬೇಕೆಂದು ಪ್ರಾರ್ಥಿಸಲಾಗುವದು. ಬತ್ತಿಗಳು ಒಂದಾದ ಬಳಿಕವೇ ಮೇಜವಾನಿ ನಡೆಯುವದು. ಮೇಜವಾನಿಗೆ ಗ್ರಾಮದ ಅಕ್ಕ ಪಕ್ಕದ ತಮ್ಮ ಸಮುದಾಯದ ಪ್ರತಿಯೊಂದು ಕುಟುಂಬದವರನ್ನು ಆಹ್ವಾನಿಸುತ್ತಾರೆ.

ಹಸಲರಲ್ಲಿ ಯಾರಾದರೂ ನಿಧನರಾದರೆ ಅದಕ್ಕೆ ಭೂತ ಚೇಷ್ಟೆಯೇ ಕಾರಣ ಎಂದು ಭಾವಿಸಿರುತ್ತಾರೆ. ಆಗ ಮಂತ್ರವಾದಿಯ ನೆರವು ಪಡೆಯುತ್ತಾರೆ. ಮಂತ್ರವಾದಿ ನೆರೆ ಮನೆಯ ಯಾವನನ್ನಾದರೂ ಭೂತದ ಕಳ್ಳನೆಂದು ಹೆಸರಿಸುತ್ತಾನೆ. ಆತನ ಕೂದಲು ಕಿತ್ತೆಸೆಯುವವರ ಮೂಲಕ ಮೃತನ ಆತ್ಮಕ್ಕೆ ಶಾಂತಿ ಸಿಗುತ್ತದೆಂದು ನಂಬಿಕೆ.

ಸಾಗರ, ಸೊರಬ, ಸಿದ್ಧಾಪೂರ ಮತ್ತು ತೀರ್ಥಹಳ್ಳಿ ಪ್ರದೇಶಗಳಲ್ಲಿ ಸತ್ತವರ ಆತ್ಮಕ್ಕೆ ಭೋಗ ಕೊಡುವ ಪದ್ಧತಿ ಉಂಟು. ವರ್ಷಕ್ಕೊಮ್ಮೆಯಾದರೂ ಪೂರ್ವಜರ ಆತ್ಮವನ್ನು ಆಹ್ವಾನಿಸುವ ಪದ್ಧತಿ ಇದೆ. ಈ ಸಮಾರಂಭದಲ್ಲಿ ಎಡೆಯಿಡುವ ಪದ್ಧತಿ ಇದೆ. ಪೂರ್ವಜರ ಆತ್ಮ ತೃಪ್ತಿಗಾಗಿ ಹೊಸ ಬಟ್ಟೆಗಳನ್ನಿಡುವ ಪದ್ಧತಿಯೂ ಇದೆ. ಮಾನವನ ಪ್ರಾಚೀನ ಆರಾಧನಾ ಸಂಪ್ರದಾಯ ಪಿತೃ ಪೂಜೆ ಇದನ್ನು "ಕುಲಭೂತ ಪೂಜೆ" ಎಂದು ಹಸಲರು ಕರೆಯುತ್ತಾರೆ. ಸತ್ತವರಿಗೆ ವರ್ಷಕ್ಕೊಮ್ಮೆ ಮೀಸಲ ಬಳಕೆಯುಂಟು ಪಿತೃಗಳನ್ನು ಕಲ್ಲುಗಳ ರೂಪದಲ್ಲಿ ಆರಾಧಿಸುವದುಂಟು.

ಪ್ರತಿ ವರ್ಷವೂ ಮೃತರನ್ನು ಕಳಸದ ರೂಪದಲ್ಲಿ ಆಹ್ವಾನಿಸಿ ಪೂಜಿಸುವರು. ಬೆಳ್ಳಿಯ ಕಳಸದ ಬೊಟ್ಟನ್ನು ಸತ್ತವರ ಪ್ರತಿನಿಧಿ ಎಂದು ಕಳಸದ ಸಮೀಪದಲ್ಲಿ ಇಡುವರು. ಇವರು ಪಿತೃಪಕ್ಷ ಆಚರಿಸುವರು. ಆರಿದ್ರ ಮಳೆ ಬೀಳುವ ಸಂದರ್ಭದಲ್ಲಿ ಪಿತೃಪಕ್ಷದ ಹಿಂದಿನ ದಿವಸ ಕುಟುಂಬದಲ್ಲಿ ಹಿರಿಯರಿರಲಿ, ಚಿಕ್ಕವರಿರಲಿ ಯಾರೂ ಊಟ ಮಾಡುವದಿಲ್ಲ. ಪಿತೃ ಪಕ್ಷವನ್ನು ಇವರು "ಹಿರೇರಿಗೆ ಊಟ ಹಾಕುವ ದಿನ" ಎಂದು ಕರೆಯುವರು. ಎರಡು ಎಲೆಗಳಿಗೆ ಊಟ ಬಡಿಸಿ ಒಂದನ್ನು ಹೊರಗೆ ತೆಗೆದುಕೊಂಡು ಹೋಗಿ ವಿಸರ್ಜಿಸುವರು. ಇನ್ನೊಂದು ಎಲೆಯ ಊಟವನ್ನು ಪ್ರಸಾದವೆಂದು ಭಾವಿಸಿ ಸ್ವೀಕರಿಸುವರು. ಹಿರಿಯರಿಗೆ ಆ ದಿನ ನೈವೇದ್ಯ ಇಡುವರು. ಇದರಿಂದ ಹಿರಿಯರ ಆತ್ಮಕ್ಕೆ ಶಾಂತಿ ಸಿಗುತ್ತದೆ. ಎಂಬ ನಂಬಿಕೆ. ಹಸಲರಲ್ಲಿ ಹಿರಿಯರಿಂದ ಊಟವಾದ ಬಳಿಕ ಕೆಲವೆಡೆ ಸೆರೆ ಸೇವಿಸುವ ಪದ್ಧತಿಯೂ ಇದೆ.

ಚಿಕ್ಕ ಮಕ್ಕಳು ಸತ್ತ ನಂತರ ಆ ಮಗುವಿನ ಶವವನ್ನು ಹೊಸ ಅರಿವೆಯಿಂದ ಕಟ್ಟಿ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿ ಅಂಗಾತ ಶವವನ್ನು ಮಲಗಿಸಿ ಅರಣ್ಯಕ್ಕೆ ತೆಗೆದುಕೊಂಡು ಹೋಗಿ ಒಂದು ಚಿಕ್ಕ ಗುಂಡಿಯನ್ನು ತೋಡಿ ಆ ಗುಂಡಿಯಲ್ಲಿ ಶವವನ್ನಿಟ್ಟು ಮಣ್ಣು ಮುಚ್ಚುವರು. ಈ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಬರಬಹುದು ಇಲ್ಲವೆ ಬರದೇ ಇರಬಹುದು. ಸಮಾಧಿಯಾದ ನಂತರ ಯಾವುದೇ ರೀತಿಯ ಧಾರ್ಮಿಕ ಕಾರ್ಯಗಳು ನಡೆಯುವುದಿಲ್ಲ.

ಅಧ್ಯಾಯ ೪

ಹಸಲರ ಆರ್ಥಿಕ ಜೀವನ

ಅಧ್ಯಾಯ ನಾಲ್ಕು

ಹಸಲರ ಆರ್ಥಿಕ ಜೀವನ

ಹಸಲರು ಆಹಾರ ಶೋಧನೆಯ ಹಂತದಲ್ಲಿ ಗಡ್ಡೆ-ಗೆಣಸುಗಳನ್ನರಿಸುತ್ತ ಅಲೆಮಾರಿ ಬದುಕನ್ನು ಸಾಗಿಸುತ್ತಿದ್ದರು. ಯಾವಾಗ ಇವರು ಒಂದು ಕಡೆ ನೆಲೆ ನಿಂತು ವ್ಯವಸಾಯ ಮಾಡಲು ಪ್ರಾರಂಭಿಸಿದರೋ ಆವಾಗ ಅವರ ಆರ್ಥಿಕ ಸ್ಥಿತಿಗತಿಗಳಲ್ಲಿ ಬದಲಾವಣೆಗಳನ್ನು ತಂದರು. ಇವರು ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸುತ್ತಾ ತಮ್ಮ ಜೀವನ ನಡೆಸುತ್ತಿದ್ದರು. ಆದರೆ ಅರಣ್ಯ ಕಾಯಿದೆ ಬಂದ ನಂತರ ಅರಣ್ಯ ಕಿರು ಉತ್ಪನ್ನ ಸಂಗ್ರಹಿಸುವುದರ ಮೇಲೆ ನಿರ್ಬಂಧ ಹೇರಲಾಯಿತು. ಇದರಿಂದ ಕಂಗೆಟ್ಟ ಹಸಲರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿ ವ್ಯವಸಾಯ ಪ್ರಾರಂಭಿಸಿದರು. ಇದು ಅವರ ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆ ತಂದರೂ ಅಷ್ಟೊಂದು ಬದಲಾವಣೆಯಾಗದೇ ಕೆಲವೊಂದು ಹಾಡಿಕೇರಿ ಹಸಲರು ಆರ್ಥಿಕ ಸಂಕಷ್ಟದಲ್ಲಿರುವುದನ್ನು ಕಾಣುತ್ತೇವೆ. ಅವರ ಆರ್ಥಿಕ ಜೀವನವನ್ನು ಕೆಳಗಿನಂತೆ ವಿವರಿಸಲಾಗಿದೆ.

೪.೧ ಕೃಷಿ

'ಭಾರತವು ಹಳ್ಳಿಗಳ ನಾಡು, ಒಕ್ಕಲಿಗರ ಬೀಡು' ಎಂಬ ಗಾದೆಯು ಪ್ರಚಲಿತದಲ್ಲಿದೆ. ಭಾರತದಲ್ಲಿ ಶೇ. ೭೦ ರಷ್ಟು ಜನರು ಒಕ್ಕಲುತನವನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ. ಭಾರತದ ಉದ್ದಗಲಕ್ಕೂ ಒಕ್ಕಲುತನವನ್ನೆ ಆಧರಿಸಿ ಜೀವನ ಸಾಗಿಸುವರು ಬೇರೆ ಬೇರೆ ಜನಾಂಗಗಳಲ್ಲಿ ಇದ್ದಾರೆ. ಅಂಥವರಲ್ಲಿ ಹಸಲರು ಕೂಡಾ ಒಂದು ಜನಾಂಗ.

ಕೋಷ್ಟಕ- ೪.೧ ಸಮೀಕ್ಷೆ ಮಾಡಿದ ಹಸಲರ ಆಸ್ತಿ ವಿವರ

ಜಿಲ್ಲೆಗಳು		ಆಸ್ತಿ ವಿವರ		ಒಟ್ಟು
		ಆಸ್ತಿ ಇರುವವರು	ಆಸ್ತಿ ಇಲ್ಲದವರು	
ಉತ್ತರ ಕನ್ನಡ	ಒಟ್ಟು	೪೪	೭೨	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೩೭.೯%	೬೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೮.೪%	೨೫.೮%	೨೨.೪%
	ಒಟ್ಟು ಪ್ರತಿಶತ	೮.೫%	೧೩.೯%	೨೨.೪%
ಉಡುಪಿ	ಒಟ್ಟು	೩೯	೩೩	೭೨
	ಪ್ರತಿಶತ (ಜಿಲ್ಲೆಯೊಳಗೆ)	೫೪.೧%	೪೫.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೬.೩%	೧೧.೮%	೧೩.೯%
	ಒಟ್ಟು ಪ್ರತಿಶತ	೭.೫%	೬.೩%	೧೩.೯%
ಚಿಕ್ಕಮಗಳೂರು	ಒಟ್ಟು	೫೨	೫೪	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೪೯%	೫೦.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೭%	೧೯.೪%	೨೦.೫%
	ಒಟ್ಟು ಪ್ರತಿಶತ	೧೦%	೧೦.೪%	೨೦.೫%
ದಕ್ಷಿಣ ಕನ್ನಡ	ಒಟ್ಟು	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೨.೧%	೧.೨%
	ಒಟ್ಟು ಪ್ರತಿಶತ	–	೧.೧%	೧.೨%
ಶಿವಮೊಗ್ಗ	ಒಟ್ಟು	೧೦೪	೧೧೩	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೪೭.೯%	೫೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೩.೫%	೪೦.೬%	೪೨.೦%
	ಒಟ್ಟು ಪ್ರತಿಶತ	೨೦.೧%	೨೧.೮%	೪೨.೦%
ಒಟ್ಟು	ಒಟ್ಟು	೨೩೯	೨೭೮	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೪೬.೨%	೫೩.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೪೬.೨%	೫೩.೮%	೧೦೦%

ಸಮೀಕ್ಷೆ ಮಾಡಿದ ೫೧೭ ಕುಟುಂಬಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಕುಟುಂಬಗಳಲ್ಲಿ, ೪೪ ಕುಟುಂಬಗಳು ಮಾತ್ರ ಜಮೀನು ಹೊಂದಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೩೭.೯ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೮.೪ ರಷ್ಟಾಗುತ್ತದೆ. ಉಳಿದ ೭೨ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೬೨ ರಷ್ಟು, ಐದು ಜಿಲ್ಲೆಯಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೫.೮ ರಷ್ಟಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೭೨ ಕುಟುಂಬಗಳಲ್ಲಿ ೩೯ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೫೪.೧ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೬.೩ರಷ್ಟಾಗುತ್ತದೆ. ಉಳಿದ ೩೩ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೪೫.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೧.೮ ರಷ್ಟಾಗುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೦೬ ಕುಟುಂಬಗಳಲ್ಲಿ, ೫೨ ಕುಟುಂಬಗಳಿಗೆ ಜಮೀನು ಇದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೪೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೧.೭ ರಷ್ಟಾಗುತ್ತದೆ. ಉಳಿದ ೫೪ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೫೦.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೯.೪ ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಸಮೀಕ್ಷೆ ಮಾಡಿದ ೬ ಕುಟುಂಬಗಳಿಗೆ ಯಾವುದೇ ರೀತಿಯ ಜಮೀನು ಇರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨.೧ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೨೧೭ ಕುಟುಂಬಗಳಲ್ಲಿ, ೧೦೪ ಕುಟುಂಬಗಳಿಗೆ ಜಮೀನು ಇದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೪೭.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೩.೫ ರಷ್ಟು, ಇನ್ನುಳಿದ ೧೧೩ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೫೨ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೦.೬ ರಷ್ಟಾಗುತ್ತದೆ.

ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಜಮೀನು ಇರುವವರಿಗಿಂತ, ಜಮೀನು ಇರಲಾರದವರೇ ಹೆಚ್ಚು, ಹೀಗಾಗಿ ಇವರು ಬೇರೆಯವರ ಜಮೀನಿನಲ್ಲಿ ಕೂಲಿ ಕೆಲಸವನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ.

ಕೋಷ್ಟಕ– ೪.೨ ಸಮೀಕ್ಷೆ ಮಾಡಿದ ಹಸಲರ ಆಸ್ತಿಯ ವಿವರ (ಎಕರೆ ಮತ್ತು ಗುಂಟೆಗಳಲ್ಲಿ)

ಜಿಲ್ಲೆಗಳು		ಎಕರೆ ಮತ್ತು ಗುಂಟೆಗಳಲ್ಲಿ			ಒಟ್ಟು
		೧ರಿಂದಳ ಎಕರೆ	೫ರಿಂದ೧೦ ಎಕರೆ	ಜಮೀನು ಇರುವುದಿಲ್ಲ.	
ಉತ್ತರ ಕನ್ನಡ	ಒಟ್ಟು	೪೨	೨	೭೨	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೩೬.೨%	೧.೭%	೬೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೭.೭%	೧೦೦%	೨೫.೮%	೨೨.೪%
	ಒಟ್ಟು ಪ್ರತಿಶತ	೮.೧%	೦.೩%	೧೩.೯%	೨೨.೪%
ಉಡುಪಿ	ಒಟ್ಟು	೩೯	–	೩೩	೭೨
	ಪ್ರತಿಶತ (ಜಿಲ್ಲೆಯೊಳಗೆ)	೫೪.೧%	–	೪೫.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೬.೪%	–	೧೧.೮%	೧೩.೯%
	ಒಟ್ಟು ಪ್ರತಿಶತ	೭.೫%	–	೬.೩%	೧೩.೯%
ಚಿಕ್ಕಮಗಳೂರು	ಒಟ್ಟು	೫೨	–	೫೪	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೪೯%	–	೫೦.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೯%	–	೧೯.೪%	೨೦.೫%
	ಒಟ್ಟು ಪ್ರತಿಶತ	೧೦%	–	೧೦.೪%	೨೦.೫%
ದಕ್ಷಿಣ ಕನ್ನಡ	ಒಟ್ಟು	–	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	೨.೧%	೧.೨%
	ಒಟ್ಟು ಪ್ರತಿಶತ	–	–	೧.೧%	೧.೨%
ಶಿವಮೊಗ್ಗ	ಒಟ್ಟು	೧೦೪	–	೧೧೩	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೪೭.೯%	–	೫೨.೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೩.೮%	–	೪೦.೬%	೪೨.೦%
	ಒಟ್ಟು ಪ್ರತಿಶತ	೨೦.೧%	–	೨೧.೮%	೪೨.೦%
ಒಟ್ಟು	ಒಟ್ಟು	೨೩೭	೨	೨೭೮	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೪೫.೮%	೦.೩%	೫೩.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೪೫.೮%	೦.೩%	೫೩.೭%	೧೦೦%

ಸಮೀಕ್ಷೆ ಮಾಡಿದ ಒಟ್ಟು ೫೧೭ ಕುಟುಂಬಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೧೧೬. ಇದರಲ್ಲಿ ೧ ಎಕರೆದಿಂದ ೪ ಎಕರೆವರೆಗೆ ಆಸ್ತಿ

ಹೊಂದಿರುವವರ ಸಂಖ್ಯೆ ೪೨. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೩೨.೨ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೭.೭ ರಷ್ಟಾಗುತ್ತದೆ. ೫ ಎಕರೆಗಿಂತ ಹೆಚ್ಚು, ೧೦ ಎಕರೆಗಿಂತ ಕಡಿಮೆ ಜಮೀನು ಹೊಂದಿರುವವ ಸಂಖ್ಯೆ ೨, ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧.೭ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೦೦ ರಷ್ಟಾಗುತ್ತದೆ. ಜಮೀನು ಇರದೇ ಇರುವ ಕುಟುಂಬಗಳ ಸಂಖ್ಯೆ ೭೨, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೬೨ ರಷ್ಟಾದರೆ, ಐದು ಜಿಲ್ಲೆಗಳನ್ನೊಳಗೊಂಡಾದ ಇದರ ಪ್ರಮಾಣ ಶೇ. ೨೫.೮ ರಷ್ಟಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೭೨ ಕುಟುಂಬಗಳಲ್ಲಿ ೧ ಎಕರೆಗಿಂತ ಹೆಚ್ಚು, ೪ ಎಕರೆಗಿಂತ ಕಡಿಮೆ ಆಸ್ತಿ ಹೊಂದಿರುವವರ ಸಂಖ್ಯೆ ೩೯, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೫೪.೧ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೬.೪ ರಷ್ಟಾಗುತ್ತದೆ. ಜಮೀನುರಹಿತವಾದ ಕುಟುಂಬಗಳ ಸಂಖ್ಯೆ ೩೩, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೪೫.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೧.೮ ರಷ್ಟಾಗುತ್ತದೆ. ೫ ಎಕರೆದಿಂದ ೧೦ ಎಕರೆವರೆಗೆ ಜಮೀನು ಹೊಂದಿರುವವರು ಉಡುಪಿ ಜಿಲ್ಲೆಯಲ್ಲಿ ಇರುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳು ೧೦೬, ಇದರಲ್ಲಿ ೧ ಎಕರೆಗಿಂತ ಹೆಚ್ಚು, ೪ ಎಕರೆಗಿಂತ ಕಡಿಮೆ ಜಮೀನು ಹೊಂದಿರುವವರ ಕುಟುಂಬಗಳ ಸಂಖ್ಯೆ ೫೨, ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೪೯ ರಷ್ಟಾಗುತ್ತದೆ. ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೧.೯ ರಷ್ಟಾಗುತ್ತದೆ. ೫ ಎಕರೆಕ್ಕಿಂತ ಹೆಚ್ಚು, ೧೦ ಎಕರೆಕ್ಕಿಂತ ಕಡಿಮೆ ಜಮೀನು ಹೊಂದಿರುವ ಕುಟುಂಬಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವುದಿಲ್ಲ. ೫೪ ಕುಟುಂಬಗಳು ಜಮೀನುರಹಿತವಾಗಿವೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೫೦.೯ ರಷ್ಟು, ಐದು ಜಿಲ್ಲೆಗಳನ್ನೊಳ ಗೊಂಡಾಗ ಇದರ ಪ್ರಮಾಣ ಶೇ. ೧೯.೪ ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೬ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೦೦ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨.೧ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೨೧೭ ಕುಟುಂಬಗಳಲ್ಲಿ ೧ ಎಕರೆದಿಂದ ೪ ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ಕುಟುಂಬಗಳ ಸಂಖ್ಯೆ ೧೦೪, ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೪೭.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೩.೮ ರಷ್ಟಾಗುತ್ತದೆ. ೫ ಎಕರೆದಿಂದ ೧೦ ಎಕರೆವರೆಗೆ ಜಮೀನು ಹೊಂದಿರುವ ಕುಟುಂಬಗಳು ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳಿಗೆ ಇರುವುದಿಲ್ಲ. ೧೧೩ ಕುಟುಂಬಗಳಿಗೆ ಯಾವುದೇ ರೀತಿಯ ಜಮೀನು ಇರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೫೨ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೦.೬ ರಷ್ಟಾಗುತ್ತದೆ.

ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಜಮೀನು ಇರದೇ ಇರುವವರ ಸಂಖ್ಯೆ ಜಾಸ್ತಿ. ಆದುದ್ದರಿಂದ ಇವರು ಬೇರೆಯವರ ಜಮೀನಿನಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ.

ಕೋಷ್ಟಕ- ೪.೩ ಸಮೀಕ್ಷೆ ಮಾಡಿದ ಹಸಲರ ಜಮೀನಿನ ಸ್ವರೂಪ

ಜಿಲ್ಲೆಗಳು		ವಂಶಪಾರಂಪರೆ	ಸರಕಾರ ಕೊಟ್ಟಿದ್ದು	ಉಳುವವನೇ ಭೂ ಒಡೆಯ	ಬಗರ ಹುಕುಂ	ಜಮೀನು ಇರದವರು	ಒಟ್ಟು
ಉತ್ತರ ಕನ್ನಡ	ಒಟ್ಟು	೨೬	೨	೪	೧೨	೭೨	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೨೨.೪%	೧.೭%	೩.೪%	೧೦.೩%	೬೨.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೯.೮%	೧೩.೩%	೨೦.೦%	೧೬.೪%	೨೫.೯%	೨೨.೪%
	ಒಟ್ಟು ಪ್ರತಿಶತ	೫%	೪%	೮%	೨.೩%	೧೩.೯%	೨೨.೪%
ಉಡುಪಿ	ಒಟ್ಟು	೨೨	೪	೨	೧೧	೩೩	೭೨
	ಪ್ರತಿಶತ (ಜಿಲ್ಲೆಯೊಳಗೆ)	೩೦.೬%	೫.೬%	೨.೮%	೧೫.೩%	೪೫.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೬.೮%	೨೬.೭%	೧೦.೦%	೧೫.೧%	೧೧.೯%	೧೩.೯%
	ಒಟ್ಟು ಪ್ರತಿಶತ	೪.೩%	೮%	೪%	೨.೧%	೬.೪%	೧೩.೯%
ಚಿಕ್ಕಮಗಳೂರು	ಒಟ್ಟು	೨೭	೧	೧	೨೩	೫೪	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೨೫.೫%	೯%	೯%	೨೧.೭%	೫೦.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೦.೬%	೬.೭%	೫.೦%	೩೧.೫%	೧೯.೪%	೨೦.೫%
	ಒಟ್ಟು ಪ್ರತಿಶತ	೫.೨%	೨%	೨%	೪.೪%	೧೦.೪%	೨೦.೫%
ದಕ್ಷಿಣ ಕನ್ನಡ	ಒಟ್ಟು	–	–	–	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	–	–	–	೧೦೦%	೧೦೦%

	ಪ್ರತಿಶತ (ವರ್ಗಗಳಲ್ಲಿ)	–	–	–	–	೨.೨%	೧.೨%
	ಒಟ್ಟು ಪ್ರತಿಶತ	–	–	–	–	೧.೨%	೧.೨%
ಶಿವಮೊಗ್ಗ	ಒಟ್ಟು	೫೬	೮	೧೩	೨೭	೧೧೩	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೨೫.೮%	೩.೭%	೬.೦%	೧೨.೪%	೫೨.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೨.೭%	೫೩.೩%	೬೫.೦%	೩೭.೦%	೪೦.೬%	೪೨.೦%
	ಒಟ್ಟು ಪ್ರತಿಶತ	೧೦.೮%	೧.೫%	೨.೫%	೫.೨%	೨೧.೯%	೪೨%
ಒಟ್ಟು	ಒಟ್ಟು	೧೩೧	೧೫	೨೦	೭೩	೨೭೮	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೨೫.೩%	೨.೯%	೩.೯%	೧೪.೧%	೫೩.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೨೫.೩%	೨.೯%	೩.೯%	೧೪.೧%	೫೩.೮%	೧೦೦%

ಸಮೀಕ್ಷೆ ಮಾಡಿದ ಒಟ್ಟು ೫೧೭ ಕುಟುಂಬಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಕುಟುಂಬಗಳಲ್ಲಿ ೪೪ ಕುಟುಂಬಗಳು ಜಮೀನನ್ನು ಹೊಂದಿವೆ. ಇದರಲ್ಲಿ ೨೬ ಕುಟುಂಬಗಳಿಗೆ ಜಮೀನು ವಂಶಪಾರಂಪರೆಯಿಂದ ಬಂದಿದೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೨೫.೦೮ ರಷ್ಟು. ೨ ಕುಟುಂಬಗಳಿಗೆ ಸರಕಾರ ಮಂಜೂರು ಮಾಡಿದ ಜಮೀನು ಇದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧.೭ ರಷ್ಟು. ಉಳುವವನೇ ಭೂ ಒಡೆಯ ಕಾಯಿದೆ ಪ್ರಕಾರ ೪ ಕುಟುಂಬಗಳು ಜಮೀನು ಪಡೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೩.೪ ರಷ್ಟು. ಬಗರಹುಕುಂ ಸಾಗುವಳಿ ಮಾಡಿದ ಕುಟುಂಬಗಳ ಸಂಖ್ಯೆ ೧೨. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦.೩ ರಷ್ಟು. ಉಳಿದ ೭೨ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೬೨.೧ ರಷ್ಟಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೭೨ ಕುಟುಂಬಳಲ್ಲಿ ೩೯ ಕುಟುಂಬಗಳು ಜಮೀನು ಹೊಂದಿವೆ. ಇದರಲ್ಲಿ ೨೨ ಕುಟುಂಬಗಳಿಗೆ ವಂಶಪಾರಂಪರೆಯಿಂದ ಜಮೀನು ಬಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೩೦.೬ ರಷ್ಟು. ೪ ಕುಟುಂಬಗಳಿಗೆ ಸರಕಾರ ಮಂಜೂರು ಮಾಡಿದ ಜಮೀನು ಇದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೫.೬ರಷ್ಟು. ಉಳುವವನೇ ಭೂ ಒಡೆಯ ಯೋಜನೆಯನ್ವಯ ೨ ಕುಟುಂಬಗಳು ಜಮೀನು ಹೊಂದಿವೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೨.೮ ರಷ್ಟು. ಬಗರಹುಕುಂ ಸಾಗುವಳಿ ಮಾಡಿದ ಕುಟುಂಬಗಳ ಸಂಖ್ಯೆ ೧೧. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧೫.೩ ರಷ್ಟು. ಉಳಿದ ೩೩ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೪೫.೮ ರಷ್ಟಾಗುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೦೬ ಕುಟುಂಬಗಳಲ್ಲಿ ೫೨ ಕುಟುಂಬಗಳು ಜಮೀನು ಹೊಂದಿದವರಾಗಿದ್ದಾರೆ. ೨೬ ಕುಟುಂಬಗಳಿಗೆ ವಂಶಪಾರಂಪರೆಯಿಂದ ಜಮೀನು ಬಂದಿದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೨೫.೫ ರಷ್ಟು. ಒಂದು ಕುಟುಂಬಕ್ಕೆ ಸರಕಾರ ಮಂಜೂರ ಮಾಡಿದ ಜಮೀನು ಇದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೯ ರಷ್ಟಾಗುತ್ತದೆ. ಉಳುವವನೇ ಭೂ ಒಡೆಯ ಕಾಯಿದೆಯನ್ವಯ ಒಂದು ಕುಟುಂಬ ಜಮೀನು ಹೊಂದಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೯ ರಷ್ಟು. ಬಗರಹುಕುಂ ಸಾಗುವಳಿಯ ಮುಖಾಂತರ ಜಮೀನು ಪಡೆದ ಕುಟುಂಬಗಳ ಸಂಖ್ಯೆ ೨೩. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೨೧.೭ರಷ್ಟು. ೫೪ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೫೦.೯ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೬ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧೦೦ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೨೧೭ ಕುಟುಂಬಗಳಲ್ಲಿ ೧೦೪ ಕುಟುಂಬಗಳಿಗೆ ಜಮೀನು ಇದೆ. ಇದರಲ್ಲಿ ೫೬ ಕುಟುಂಬಗಳಿಗೆ ವಂಶಪಾರಂಪರೆಯಿಂದ ಜಮೀನು ಬಂದಿದೆ.

ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೨೫.೮ ರಷ್ಟು, ೮ ಕುಟುಂಬಗಳಿಗೆ ಸರಕಾರ ಮಂಜೂರು ಮಾಡಿದ ಭೂಮಿ ಇದೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ.೩.೭ರಷ್ಟು, ಉಳುವವನೇ ಭೂ ಒಡೆಯ ಕಾಯಿದೆಯ ಮೂಲಕ ೧೩ ಕುಟುಂಬಗಳು ಜಮೀನು ಹೊಂದಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೬ ರಷ್ಟು, ಬಗರಹುಕುಂ ಸಾಗುವಳಿ ಮುಖಾಂತರ ಜಮೀನು ಹೊಂದಿದ ಕುಟುಂಬಗಳ ಸಂಖ್ಯೆ ೨೭. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೨.೪ ರಷ್ಟಾಗುತ್ತದೆ. ಉಳಿದ ೧೧೩ ಕುಟುಂಬಗಳಿಗೆ ಯಾವುದೇ ರೀತಿಯ ಜಮೀನು ಇರುವುದಿಲ್ಲ.

ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಜಮೀನು ಇರದೇ ಇರುವವರ ಸಂಖ್ಯೆ ೨೭೦. ಇವರ ಒಟ್ಟು ಪ್ರಮಾಣ ೫೩.೮ ರಷ್ಟಾಗುತ್ತದೆ. ಇದರಿಂದ ತಿಳಿದುಬರುವುದೇನೆಂದರೆ ಭೂಮಿ ಹೊಂದಿರುವವರಿಗಿಂತ ಹೊಂದದೇ ಇರುವವರು ಹೆಚ್ಚು. ಇದರಿಂದ ಅವರಲ್ಲಿರುವ ಬಡತನ ಎದ್ದು ಕಾಣುತ್ತದೆ. ಸರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾತ್ರ ಬಗರಹುಕುಂ ಸಾಗುವಳಿ ಮಾಡಿದ ಜಮೀನಿಗೆ ಪಹಣಿ ಪತ್ರ ನೀಡಿದೆ. ಇನ್ನುಳಿದ ೪ ಜಿಲ್ಲೆಗಳಲ್ಲಿ ನೀಡಿಲ್ಲ.

ಕೋಷ್ಟಕ– ೪.೪ ಸಮೀಕ್ಷೆ ಮಾಡಿದ ಹಸಲರ ಬೇಸಾಯ ಕ್ರಮದ ವಿವರ

ಜಿಲ್ಲೆಗಳು		ಬೇಸಾಯದ ಕ್ರಮದ ವಿವರ ಮಳೆ ಯಾಶ್ರಿತ	ನೀರಾವರಿ	ಜಮೀನು ಇರುವುದಿಲ್ಲ.	ಒಟ್ಟು
ಉತ್ತರ ಕನ್ನಡ	ಒಟ್ಟು	೩೩	೧೧	೭೨	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೨೮.೪%	೯.೫%	೬೨.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೮.೯%	೧೭.೨%	೨೫.೯%	೨೨.೪%
	ಒಟ್ಟು ಪ್ರತಿಶತ	೬.೪%	೨.೧%	೧೩.೯%	೨೨.೪%
ಉಡುಪಿ	ಒಟ್ಟು	೨೪	೧೫	೩೩	೭೨
	ಪ್ರತಿಶತ (ಜಿಲ್ಲೆಯೊಳಗೆ)	೩೩.೩%	೨೦.೮%	೪೫.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೩.೭%	೨೩.೪%	೧೧.೮%	೧೩.೯%
	ಒಟ್ಟು ಪ್ರತಿಶತ	೪.೬%	೨.೯%	೬.೩%	೧೩.೯%
ಚಿಕ್ಕಮಗಳೂರು	ಒಟ್ಟು	೩೭	೧೫	೫೪	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೩೪.೯%	೧೪.೧%	೫೦.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೧%	೨೩.೪%	೧೯.೪%	೨೦.೫%
	ಒಟ್ಟು ಪ್ರತಿಶತ	೭.೨%	೨.೯%	೧೦.೪%	೨೦.೫%
ದಕ್ಷಿಣ ಕನ್ನಡ	ಒಟ್ಟು	–	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	–	೧೦೦%	೧೦೦%

	ಪ್ರತಿಶತ (ವರ್ಗಗಳಲ್ಲಿ)	–	–	೨.೨%	೧.೨%
	ಒಟ್ಟು ಪ್ರತಿಶತ	–	–	೧.೨%	೧.೨%
ಶಿವಮೊಗ್ಗ	ಒಟ್ಟು	೮೧	೨೩	೧೧೩	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೩೭.೩%	೧೦.೫%	೫೨.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೬.೩%	೩೧.೩%	೪೧.೭%	೪೨.೦%
	ಒಟ್ಟು ಪ್ರತಿಶತ	೧೫.೭%	೩.೯%	೨೨.೪%	೪೨.೦%
ಒಟ್ಟು	ಒಟ್ಟು	೧೭೫	೬೪	೨೭೮	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೩೩.೮%	೧೨.೪%	೫೩.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೩೩.೮%	೨೨.೪%	೫೩.೮%	೧೦೦%

ಸಮೀಕ್ಷೆ ಮಾಡಿದ ಒಟ್ಟು ೫೧೭ ಕುಟುಂಬಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಕುಟುಂಬಗಳಲ್ಲಿ ಜಮೀನು ಹೊಂದಿದವರ ಸಂಖ್ಯೆ ೩೯, ಇದರಲ್ಲಿ ೩೩ ಕುಟುಂಬಗಳು ಮಳೆಯಾಶ್ರಿತ ಬೆಳೆಯನ್ನು ಬೆಳೆಯುತ್ತಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೨೮.೪ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೮.೯ ರಷ್ಟು, ಉಳಿದ ೧೧ ಕುಟುಂಬಗಳ ಜಮೀನುಗಳಿಗೆ ನೀರಾವರಿ ಸೌಲಭ್ಯವಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೯.೫ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೭.೨ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ಉಡುಪಿ ಜಿಲ್ಲೆಯಲ್ಲಿಯ ೭೨ ಕುಟುಂಬಗಳಲ್ಲಿ ೨೪ ಕುಟುಂಬಗಳ ಜಮೀನುಗಳಲ್ಲಿ ಮಳೆಯಾಶ್ರಿತ ಬೆಳೆಯನ್ನು ಬೆಳೆಯುತ್ತಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೩೩.೩ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೩.೭ ರಷ್ಟಾಗುತ್ತದೆ. ಉಳಿದ ೧೫ ಕುಟುಂಬಗಳ ಜಮೀನಿಗೆ ನೀರಾವರಿ ಸೌಲಭ್ಯವಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೨೦.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೩.೪ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ಚಿಕ್ಕಮಗಳೂರು ಜಿಲ್ಲೆಯ ೧೦೬ ಕುಟುಂಬಗಳಲ್ಲಿ ೩೭ ಕುಟುಂಬಗಳು ಮಳೆಯಾಶ್ರಿತ ಜಮೀನನ್ನು ಹೊಂದಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೩೪.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೧.೧ ರಷ್ಟಾಗುತ್ತದೆ. ಉಳಿದ ೧೫ ಕುಟುಂಬಗಳ ಜಮೀನು ನೀರಾವರಿ ಸೌಲಭ್ಯ ಹೊಂದಿವೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧೪.೧ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೩.೪ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ದಕ್ಷಿಣ ಕನ್ನಡ ಜಿಲ್ಲೆಯ ೬ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦೦ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨.೨ ರಷ್ಟು.

ಸಮೀಕ್ಷೆ ಮಾಡಿದ ಶಿವಮೊಗ್ಗ ಜಿಲ್ಲೆಯ ೨೧೭ ಕುಟುಂಬಗಳಲ್ಲಿ ೮೧ ಕುಟುಂಬಗಳು ಮಳೆಯಾಶ್ರಿತ ಜಮೀನು ಹೊಂದಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೩೭.೩ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೬.೩ ರಷ್ಟಾಗುತ್ತದೆ. ಉಳಿದ ೨೩ ಕುಟುಂಬಗಳು ನೀರಾವರಿ ಜಮೀನು ಹೊಂದಿವೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦.೫ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೩೧.೩ ರಷ್ಟಾಗುತ್ತದೆ.

ಮೇಲಿನ ಅಂಕಿ–ಅಂಶಗಳನ್ನು ಗಮನಿಸಿದಾಗ ಮಳೆಯಾಶ್ರಿತ ಜಮೀನನ್ನು ಹೊಂದಿರುವವರೇ ಬಹಳ. ಇದರಲ್ಲಿ ಕೇವಲ ಒಂದು ಬೆಳೆಯನ್ನು ಮಾತ್ರ ಬೆಳೆಯುತ್ತಾರೆ. ಇದರಿಂದ ಇವರಲ್ಲಿ ಬಡತನ ಜಾಸ್ತಿ. ನೀರಾವರಿ ಜಮೀನು ಹೊಂದಿದವರು ವರ್ಷದಲ್ಲಿ ಎರಡು ಬೆಳೆಗಳು ಅಥವಾ ಅಡಕೆ, ಬಾಳೆ ಬೆಳೆಯನ್ನು ಬೆಳೆಯುತ್ತಾರೆ. ಹೀಗಾಗಿ ಇವರು ಆರ್ಥಿಕವಾಗಿ ಸಬಲರಾಗಿದ್ದಾರೆ.

ಹಸಲರು ಕರ್ನಾಟಕ ರಾಜ್ಯದಲ್ಲಿ ಕಂಡು ಬರುವ ಪರಿಶಿಷ್ಟ ಪಂಗಡದ ಜನರು. ಇವರು ಹೆಚ್ಚಾಗಿ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಾಸ ಮಾಡುತ್ತಾರೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಹಿರೇಮನೆಯ ಹಸಲರು ೧೯೫೪ ರಲ್ಲಿ ಪ್ರಾರಂಭವಾದ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಪ್ರದೇಶದವರಾಗಿರುವುದರಿಂದ ಇವರಿಗೆ ಹಿರೇಮನೆಯಲ್ಲಿ ಪುನರ್ವಸತಿ ಕಲ್ಪಿಸಲಾಯಿತು. ಇವರಿಗೆ ಕೊಡಬೇಕಾದ ಎರಡು ಸಾವಿರ ರೂಪಾಯಿ ಪರಿಹಾರದ ಜೊತೆಗೆ ಹಿರೇಮನೆಯ ಗುಡ್ಡದ ಮೇಲುಗಡೆಯ ಪ್ರದೇಶದಲ್ಲಿ ಒಂದೊಂದು ಎಕರೆ ಭೂಮಿಯನ್ನು ಸರಕಾರ ಹಂಚಿತು. ಈ ಭೂಮಿಯು ಗುಡ್ಡದ ಮೇಲಿರುವುದರಿಂದ ಮಳೆಯಾಶ್ರಿತ ಭತ್ತದ ಬೆಳೆಯನ್ನು ಬೆಳೆಯುವುದರಿಂದ ವರ್ಷದಲ್ಲಿ ಮಳೆಗಾಲದಲ್ಲಿ ಒಂದು ಭತ್ತದ ಬೆಳೆಯನ್ನು ಮಾತ್ರ ಬೆಳೆಯುತ್ತಾರೆ. ಇದಕ್ಕೆ 'ಮಕ್ಕಿಗದ್ದೆ' ಎಂದು ಕರೆಯುತ್ತಾರೆ.

ಇವರಲ್ಲಿ ಇನ್ನೊಂದು ಪದ್ಧತಿಯೂ ಇದೆ. ಅದನ್ನು ನೀರಿನ ಗದ್ದೆ ಎಂದು ಕರೆಯುತ್ತಾರೆ. ಇಲ್ಲಿ ನೀರಿನ ಸೌಲಭ್ಯವು ಕಾಲುವೆಯ ಮುಖಾಂತರ ಇರುವುದರಿಂದ ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಈ ಸೌಲಭ್ಯ ಹಿರೇಮನೆ ಹಸಲರಿಗಿಲ್ಲ.

ಸೊರಬ ತಾಲೂಕಿನ ಕೆಲವು ಹಾಡಿಕೇರಿಯ ಹಸಲರು ಕೃಷಿ ಭೂಮಿಯನ್ನು ನಾಲ್ಕು ಎಕರೆಗಿಂತ ಹೆಚ್ಚಾಗಿ ಹೊಂದಿದವರಾಗಿದ್ದಾರೆ. ಇವರಲ್ಲಿ ಗೇಣಿ ಪದ್ಧತಿ ಇದೆ. ಇವರು ತಮ್ಮ ಜಮೀನನ್ನು ಬೇರೆಯವರಿಗೆ ಒಂದು ಬೆಳೆಗೆ, ಒಂದು ಎಕರೆಗೆ ಸುಮಾರು ೧೫–೧೮ ಚೀಲದವರೆಗೆ ಭತ್ತ ಕೊಡಬೇಕು. ಮತ್ತು ೮೦–೯೦ ಕಟ್ಟುಗಳ ವರೆಗೆ ಭತ್ತದ ಸೊಪ್ಪು ಕೊಡಬೇಕೆಂದು ಹೇಳಿ ಗೇಣಿ ಕೊಡುವರು. ಇದು ಒಂದು ಬೆಳೆಗೆ ಮಾತ್ರ, ಬೇಸಿಗೆ ಬೆಳೆಗೆ ಇಳುವರಿ ಕಡಿಮೆಯಾಗುವುದರಿಂದ ಒಂದು ಎಕರೆಗೆ ಸುಮಾರು ೬–೮ ವರೆಗೆ ಚೀಲ ಭತ್ತ ಮತ್ತು ೪೦–೫೦ ಕಟ್ಟು ಭತ್ತದ ಸೊಪ್ಪು ಗೇಣಿಯಾಗಿ ಕೊಡಬೇಕೆಂದು ಕರಾರು ಮಾಡುವರು. ಸೊರಬ ತಾಲೂಕಿನ ಕಲ್ಲಂಬಿ ಹಿರಿಯಪ್ಪನು

ಸುಮಾರು ೧೪ ಎಕರೆ ಕೃಷಿ ಭೂಮಿಯನ್ನು ಹೊಂದಿದ್ದಾನೆ. ಈತನು ಸೊರಬ ಮತ್ತು ಸಾಗರ ತಾಲೂಕಿನ ಹಸಲರಲ್ಲಿಯೆ ಹೆಚ್ಚು ಭೂಮಿಯನ್ನು ಹೊಂದಿರುವಾತ. ಹಸಲರು ಸಾಮಾನ್ಯವಾಗಿ ಭಟ್ಟರು ಅಥವಾ ನಾಯಕರು ಅಥವಾ ದಿವರ ಹತ್ತಿರ ಕೂಲಿಗಳಾಗಿ ದುಡಿಯುತ್ತಾರೆ ಆದರೆ ಹಿರಿಯಪ್ಪನ ಜಮೀನಿನಲ್ಲಿ ಭಟ್ಟರು ದಿವರು ಕೂಲಿಗಳಾಗಿ ದುಡಿಯುತ್ತಾರೆ.

ಹಸಲರು ಭತ್ತವನ್ನು ಬೆಳೆಯಬೇಕಾದರೆ ಸುಧಾರಿತ ಭತ್ತದ ತಳಿಯನ್ನು ಆಯ್ಕೆ ಮಾಡಿ ಅದನ್ನು ಚೆನ್ನಾಗಿ ಒಣಗಿಸುವರು. ಚೆನ್ನಾಗಿ ಒಣಗಿದ ಭತ್ತದ ಕಾಳುಗಳನ್ನು ನೀರಿನಲ್ಲಿ ಎದ್ದಿ ಅದರ ಮೇಲೆ ಒಂದು ಗೋಣಿ ಚೀಲವನ್ನು ಮುಚ್ಚುವರು. ೩-೪ ದಿನಗಳ ನಂತರ ಚೆನ್ನಾಗಿ ಉಳುಮೆ ಮಾಡಿದ ಒಂದು ಭತ್ತದ ಹಾಳೆಯಲ್ಲಿ (ತುಂಡು ಜಮೀನು) ಆ ಮೊಳಕೆಯೊಡೆದ ಭತ್ತದ ಕಾಳುಗಳನ್ನು ಚೆಲ್ಲುವರು. ನಂತರ ಸುಮಾರು ಒಂದು ತಿಂಗಳಿನಿಂದ ಒಂದುವರೆ ತಿಂಗಳಾಗುವವರೆಗೂ ಚೆನ್ನಾಗಿ ಪ್ರತಿ ವಾರಕ್ಕೊಮ್ಮೆ ನೀರು ಹಾಯಿಸುವರು. ಈ ಭತ್ತದ ಸಸಿಗಳನ್ನು ಚೆನ್ನಾಗಿ ಬೆಳೆಸುವರು. ಇತ್ತ ಭತ್ತದ ಗದ್ದೆಯನ್ನು ಚೆನ್ನಾಗಿ ಹದ ಮಾಡುವರು. ಭತ್ತದ ಗದ್ದೆಯ ಕೊಳೆಯೆಲ್ಲಾ ಕೊಳೆತ ನಂತರ ಕೊರಡು ಅಥವಾ ಗೋರುಮಣೆಯಿಂದ ಚೆನ್ನಾಗಿ ಸಮಾಂತರ ಮಾಡಿದ ನಂತರ ಭತ್ತದ ಸಸಿಗಳನ್ನು ಮಹಿಳೆಯರು ನಾಟಿ ಮಾಡುವರು. ಭತ್ತವನ್ನು ನಾಟಿ ಮಾಡುವುದರಲ್ಲಿ ಎರಡು ಪ್ರಕಾರಗಳಿವೆ. ಒಂದು ಸಾಲುಗಟ್ಟಿ ಅಂದರೆ ಸಮಾಂತರ ಮಾಡಿದ ಭೂಮಿಯಲ್ಲಿ ಒಂದು ಸಾಲಿನಂತೆ ವ್ಯವಸ್ಥಿತವಾಗಿ ನಾಟಿ ಮಾಡಿದರೆ ಅದನ್ನು "ಸಾಲುಗಟ್ಟಿ" ಎಂದು ಕರೆಯುತ್ತಾರೆ. ಇದಕ್ಕೆ ಬಹಳಷ್ಟು ಆಳುಗಳು ಬೇಕಾಗಿರುವುದರಿಂದ ಇವರು ಇನ್ನೊಂದು ಪದ್ಧತಿಯನ್ನು ಅಸ್ತಿತ್ವದಲ್ಲಿ ತಂದಿದ್ದಾರೆ. ಈ ಪದ್ಧತಿಗೆ ಸಾಲುಗಟ್ಟಿ ನಾಟಿ ಮಾಡುವ ಅವಶ್ಯಕತೆ ಇರುವುದಿಲ್ಲ. ಅಂದರೆ ಹೆಣ್ಣು ಮಕ್ಕಳು ತಮ್ಮ ಮನಸ್ಸಿಗೆ ಬಂದ ಹಾಗೆ ಸಾಲು ಮಾಡುವರು. ಇದರಿಂದ ಇಳುವರಿ ಕಡಿಮೆ. ಆದರೆ ಆಳುಗಳ ಸಂಖ್ಯೆ ಕೂಡಾ ಕಡಿಮೆ. ಈ ಪದ್ಧತಿಯನ್ನು "ನಾಟಿ" ಎಂದು ಕರೆಯುತ್ತಾರೆ. ಈ ಎರಡು ಪದ್ಧತಿಗಳು ಇವರಲ್ಲಿ ಈಗ ಪ್ರಚಲಿತದಲ್ಲಿವೆ. ಸಿದ್ಧಾಪೂರ ತಾಲೂಕಿನ ಮಗದೂರು, ಕಾನಳ್ಳಿ, ಕವನಳ್ಳಿ ಮತ್ತು ಉಡುಪಿ ಜಿಲ್ಲೆಯ ಹಳ್ಳಿಹೊಳೆ, ಕಬ್ಬಿನಾಲೆ, ಹೊನ್ನಾವರ ತಾಲೂಕಿನ ದಬ್ಬೋಡು ಮುಂತಾದ ಕಡೆ ಈ ಎರಡೂ ರೀತಿಯ ಭತ್ತದ ಬೆಳೆ ಬೆಳೆಯುವರು. ಇವರು ಹೆಚ್ಚಾಗಿ ಸಾವಯವ ಕೃಷಿಯನ್ನು ಅಳವಡಿಸಿಕೊಂಡಿದ್ದರೂ ಇತ್ತೀಚಿನ ದಿನಗಳಲ್ಲಿ ಸರಕಾರಿ ಗೊಬ್ಬರಗಳನ್ನು ಉಪಯೋಗಿಸಲು ಪ್ರಾರಂಭಿಸಿದ್ದಾರೆ.

೪.೧.೧ ದೀಡ ಪತ್ರ

ಕೃಷಿ ಭೂಮಿಯನ್ನು ಹೊಂದಿರುವಾತ ತನ್ನ ಅಡಚಣೆಗಾಗಿ ಬೇರೆಯವರಿಂದ ಸಾಲ ಪಡೆದು ತನ್ನ ಜಮೀನನ್ನು ಅವರಿಗೆ ಉಪಭೋಗಕ್ಕೆ ಕೊಡುವ ಪದ್ಧತಿಯನ್ನು 'ದೀಡಪತ್ರ' ಕೃಷಿ ಎಂದು ಕರೆಯುತ್ತಾರೆ. ದೀಡಪತ್ರ ಮಾಡುವಾಗ ಆ ಸೀಮೆಯ ಕೋಲಕಾರ ಅಥವಾ ಕೊಂಡಿಕಾರನ ಮುಖಾಂತರವೇ ಆಗಬೇಕು. ಈ ಪದ್ಧತಿಯಲ್ಲಿ ಒಂದು ಎಕರೆಗೆ ಸುಮಾರು ಹತ್ತು ಸಾವಿರ ರೂಪಾಯಿಗಳಿಗೆ ಎರಡು ಅಥವಾ ಮೂರು ವರ್ಷಗಳವರೆಗೆ ಹಣ ಕೊಟ್ಟವನಿಗೆ ಉಪಭೋಗಕ್ಕೆ

ಕೊಡುವರು. ಈ ಜಮೀನಿನಲ್ಲಿ ಬೆಳೆದ ಬೆಳೆಗಳಲ್ಲಿ ದೀಡಪತ್ರ ಮಾಡಿಕೊಂಡ ವ್ಯಕ್ತಿಗೆ ಸಂಪೂರ್ಣ ಅಧಿಕಾರವಿದೆ. ಎರಡು ಅಥವಾ ಮೂರು ವರ್ಷ ಕಳೆದ ಮೇಲೆ ಆ ಜಮೀನನ್ನು ಆತನಿಗೆ ಮರಳಿ ವಶಕ್ಕೆ ಬರುತ್ತದೆ. ಒಂದು ವೇಳೆ ದೀಡಪತ್ರ ಮಾಡಿಕೊಂಡ ವ್ಯಕ್ತಿ ಜಮೀನು ಬಿಟ್ಟುಕೊಡದೆ ಇದ್ದರೆ, ಕೋಲಕಾರ ಅಥವಾ ಕೊಂಡಿಕಾರನು ಬಿಡಿಸಿಕೊಡಬೇಕಾಗುತ್ತದೆ.


೪.೧.೨ ಮೈಯಾಳು ಪದ್ಧತಿ

ಹಸಲರ ಕೃಷಿ ಪದ್ಧತಿಯಲ್ಲಿ "ಮೈಯಾಳು ಪದ್ಧತಿ" ಕೂಡಾ ಪ್ರಚಲಿತದಲ್ಲಿದೆ. ಇದನ್ನು ಉತ್ತರ ಕರ್ನಾಟಕದಲ್ಲಿ "ಸವಡಿ" ಎಂದು ಕರೆಯುತ್ತಾರೆ. ಈ ಪದ್ಧತಿಯಲ್ಲಿ ಜಮೀನು ಹೊಂದಿದ ರೈತ, ಆಳುಗಳು ಸಿಗದೇ ಇದ್ದಾಗ ಈತನು ಇತರ ಜಮೀನು ಹೊಂದಿದವರ ಜೊತೆಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ಅದೇನೆಂದರೆ ತನ್ನ ಜಮೀನಿನಲ್ಲಿ ಕೆಲಸವಿದ್ದಾಗ ಬೇರೆ ಜಮೀನಿನ ಜನರನ್ನು ದುಡಿಸಿಕೊಳ್ಳುವುದು. ಇಲ್ಲಿ ಸಂಬಳ (ಕೂಲಿ) ಕೊಡುವುದರ ಬದಲಾಗಿ ಈತನು ಅವರ ಜಮೀನಿನಲ್ಲಿ ಎಷ್ಟು ದಿನ ದುಡಿದಿರುವರೋ ಅಷ್ಟು ದಿನ ದುಡಿಯುವನು. ಈ ಪದ್ಧತಿಯನ್ನು ಅವರು 'ಮೈಯಾಳು' ಎಂದು ಕರೆಯುತ್ತಾರೆ. ಇಲ್ಲಿ ಕೂಲಿ ಅಥವಾ ಸಂಬಳದ ಪ್ರಶ್ನೆ ಬರುವುದಿಲ್ಲ. ಇದನ್ನು ದುಡಿತಕ್ಕಾಗಿ ದುಡಿತ ಪದ್ಧತಿ ಎಂದರೂ ತಪ್ಪಾಗಲಿಕ್ಕಿಲ್ಲ.

೪.೧.೩ ಸಮಪಾಲು

ಸಮಪಾಲು ಎಂಬ ಪದ್ಧತಿಯೂ ಇವರಲ್ಲಿದೆ. ತಮ್ಮ ಜಮೀನು ತನಗೆ ಉಳುಮೆ ಮಾಡುವುದು ಆಗದೇ ಇದ್ದಾಗ ಇತರರಿಗೆ ಆ ಜಮೀನನ್ನು ಸಮಪಾಲು ಎಂಬ ಪದ್ಧತಿಗನುಗುಣವಾಗಿ ಆತನಿಗೆ ಉಳುಮೆ ಮಾಡಲು ಕೊಡುವುದಾಗಿದೆ. ಈ ಪದ್ಧತಿಯಲ್ಲಿ ಆ ಜಮೀನಿಗೆ ಸದರಿ ವರ್ಷದಲ್ಲಿ ಮಾಡಿದ ಒಟ್ಟು ಖರ್ಚನ್ನು ಇಬ್ಬರೂ ಸಮನಾಗಿ ಭರಿಸಿ, ಮುಂದೆ ಬಂದ ಉತ್ಪನ್ನದಲ್ಲಿ ಇಬ್ಬರೂ ಸಮನಾಗಿ ಹಂಚಿಕೊಳ್ಳುವರು. ಈ ಪದ್ಧತಿಯೂ ಕೂಡಾ ಈಗಲೂ ಜಾರಿಯಲ್ಲಿದೆ. ಇದು ಒಂದು ವರ್ಷಕ್ಕೆ ಮಾತ್ರ ಸೀಮಿತವಾದುದು. ಇಬ್ಬರೂ ಪರಸ್ಪರ ಒಪ್ಪಿಗೆ ಇದ್ದರೆ ಮತ್ತೊಂದು ವರ್ಷ ಮುಂದುವರಿಸಬಹುದು. ತೋಟವನ್ನು ಕೂಡಾ ಸೊರಬ ತಾಲೂಕಿನ ಕೆಲವು ಹಸಲರು ಗೇಣಿ ಕೊಡುವ ಪದ್ಧತಿ ಇದೆ. ತೋಟದಲ್ಲಿ ಅಡಕೆ ಬೆಳೆಯನ್ನು ಬೆಳೆಸುವ ರೀತಿಯು ಈ ಕೆಳಗಿನಂತಿದೆ.

• ಸರಿಯಾಗಿ ಬಲಿತ ಅಡಕೆಯ ಸಿಪ್ಪೆಯನ್ನು ಸುಲಿಯದೆ ಗೊಬ್ಬರ ಗುಂಡಿಯಲ್ಲಿ ಹಾಕಿ ಅದಕ್ಕೆ ವಾರಕ್ಕೊಮ್ಮೆ ನೀರು ಹಾಯಿಸುವರು. ಅಡಕೆಗೆ ಮೊಳಕೆ ಬಂದ ನಂತರ ಅದನ್ನು ಪ್ಲಾಸ್ಟಿಕ್ ಚೀಲದಲ್ಲಿ ಸಾವಯವ ಗೊಬ್ಬರ ಹಾಕಿ, ಆ ಅಡಕೆ ಮೊಳಕೆಯನ್ನು ನೆರಳಿನಲ್ಲಿಟ್ಟು ನೀರು ಬಿಡುವರು. ಆ ಮೊಳಕೆ ಬೆಳೆದು ಸುಮಾರು ಆರು ತಿಂಗಳ ನಂತರ ಅದನ್ನು ತೋಟದಲ್ಲಿ ನಾಲ್ಕು ಅಡಿ ಅಂತರದಲ್ಲಿ ಒಂದೊಂದು ಸಸಿಯನ್ನು ನೆಡುವರು. ಮಧ್ಯದಲ್ಲಿ ಒಂದು ಬಾಳೆ ಗಿಡವನ್ನು ನೆಡುವರು. ಮಲೆನಾಡಿನಲ್ಲಿ ಮಳೆಯು ಅತಿ ಹೆಚ್ಚು. ಕಾರಣ ಜಮೀನು ಜವುಳು ಆಗಬಾರದೆಂದು ಪ್ರತಿ ಎರಡು ಅಡಕೆ ಸಾಲಿನಲ್ಲಿ ಖಾದಿಗೆಯನ್ನು ತೆಗೆಯುವರು. ಜಮೀನಿನ ಮಧ್ಯದಲ್ಲಿ ಎಲ್ಲಾ ನೀರು ಬಸಿಯಲಿ ಎಂಬ ಕಾರಣಕ್ಕೆ ಹೆಗ್ಗಾದಿಗೆಯನ್ನೂ ತೆಗೆಯುವರು.



• ಎರಡು ಸಸಿಗಳ ನಡುವಿನ ಜಾಗವನ್ನು "ಬಣ್ಣ" ಎಂದು ಕರೆಯುತ್ತಾರೆ. ಅಡಕೆ ಗೊನೆಗಳಿಗೆ ವರ್ಷದಲ್ಲಿ ಅದರ ಕಾಂಡಕ್ಕೆ ಮಣ್ಣನ್ನು ಹಾಕುವರು. ಇದು ಬೆಳೆಗೆ ಪೌಷ್ಠಿಕಾಂಶ ಕೊಡುವುದು. ಅಲ್ಲದೆ ಹಸಲರು ದರಕಲು, ಸೊಪ್ಪು, ಸೆಗಣಿಯಿಂದ ಕೂಡಿದ ಮೇಲುಗೊಬ್ಬರವನ್ನು ಕೊಡುವರು. ಇದರಿಂದ ಬೆಳೆ ಚೆನ್ನಾಗಿ ಬೆಳೆಯುತ್ತದೆ. ಅಡಕೆ ಬೆಳೆ ನಾಟಿ ಮಾಡಿದ ಆರು ವರ್ಷಗಳ ನಂತರ ಫಸಲನ್ನು ಕೊಡುತ್ತದೆ. ಇವರು ಗೇಣಿ ಹಾಕಬೇಕಾದರೆ ಅಡಕೆ ಸಸಿ ನೆಟ್ಟು ಆರು ವರ್ಷಗಳ ನಂತರವೇ ಗೇಣಿ ಹಾಕಬೇಕು. ಒಂದು ಎಕರೆಗೆ ಸುಮಾರು ಎಪ್ಪತ್ತೈದು ಸಾವಿರದಿಂದ ಒಂದು ಲಕ್ಷದವರೆಗೂ ಗೇಣಿ ಹಾಕುವರು. ಗೇಣಿ ತೆಗೆದುಕೊಂಡ ವ್ಯಕ್ತಿಯು ಗೇಣಿ ಹಾಕಿದ ವ್ಯಕ್ತಿಗೆ ಒಂದು ವರ್ಷಕ್ಕೆ ಹತ್ತು ಕಿಲೋ ಹಸಿ ಅಡಕೆಯನ್ನೂ ಕೊಡಬೇಕಾಗುತ್ತದೆ. ಇದು ಅವರು ಮಾಡಿಕೊಂಡ ಒಪ್ಪಂದದಂತೆ ನಡೆಯುತ್ತದೆ. ಕೆಲವೊಮ್ಮೆ ಇದು ಹೆಚ್ಚುಕಡಿಮೆಯಾಗುವ ಸಂಭವವೂ ಇದೆ.

೪.೧.೪ ಅಡಕೆ ರಾಶಿ ಮಾಡುವ ರೀತಿ

ಅಡಕೆಯನ್ನು ಹೆಣ್ಣು ಮಕ್ಕಳು ಸುಲಿದ ನಂತರ ಅಡಕೆಯನ್ನು ಕೆಂಪು ಬಣ್ಣದ ಬಿಸಿ ನೀರಿನಲ್ಲಿ ಕುದಿಸುವರು. ಆಗ ಅಡಕೆಯಿಂದ ಕೆಂಪು ನೀರು ಬರುವುದು. ಅದನ್ನು ಮುಂದಿನ ರಾಶಿಗಾಗಿ ಆ ನೀರನ್ನು ಜೋಪಾನವಾಗಿ ಕಾಯುತ್ತಾರೆ. ಹೀಗೆ ಕುದಿಸಿದ ನಂತರ ಏಳು ದಿವಸಗಳವರೆಗೆ ಬಿಸಿಲಿನಲ್ಲಿ ಒಣಗಿಸುವರು. ಒಣಗಿಸಿದ ನಂತರ ಸಣ್ಣ ಅಡಕೆ ಮತ್ತು ದೊಡ್ಡ ಅಡಕೆಗಳನ್ನು ಬೇರ್ಪಡಿಸಿ ಚೀಲಗಳಲ್ಲಿ ಬೇರೆ ಬೇರೆಯಾಗಿ ತುಂಬುವರು. ಸಣ್ಣ ಅಡಕೆಗೆ ಬೆಲೆ ಜಾಸ್ತಿ ಆದರೆ ದೊಡ್ಡ ಅಡಕೆಗೆ ಬೆಲೆ ಕಡಿಮೆ. ಇದನ್ನು ನೇರವಾಗಿ ಉಡುಪಿ, ಕುಂದಾಪೂರ, ಸಾಗರ ಮತ್ತು ಮಂಗಳೂರು ಮುಂತಾದ ಸ್ಥಳಗಳಲ್ಲಿ ಅಡಕೆ ಮಾರಾಟ ಮಾಡುವ ಕೇಂದ್ರಗಳಿಗೆ ಕಳುಹಿಸುವರು. ಸಾಗರ ತಾಲೂಕಿನ ನಾಮಕೋಸ್ ಸಂಸ್ಥೆ ಸಾಗರ ಅಥವಾ ಕಾಮ್ಕೋ ಉಡುಪಿ ಮತ್ತು ಮಂಗಳೂರು ಸಂಸ್ಥೆಗಳಲ್ಲಿ ಅಡಕೆ ಬೆಳೆಗಾರರು ಷೇರುದಾರರಾಗಿದ್ದು, ಅವುಗಳನ್ನು ಬೆಳೆಗಾರರ ಅನುಮತಿಯ ಮೇರೆಗೆ ಹರಾಜು ಹಾಕುವರು. ಇದರಿಂದ ರೈತರಿಗೆ ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆಂದು ಸೊರಬ ತಾಲೂಕಿನ ಹಸಲರು ಹೇಳುತ್ತಾರೆ.

೨೦೧೦-೧೧ ನೇ ಸಾಲಿನಲ್ಲಿ ಅಡಕೆಗೆ ಬಂಪರ ಬೆಲೆ ಬಂದಿದೆ ಎಂದು ರೈತರು ಸಂತೋಷ ದಿಂದ ಹೇಳುತ್ತಾರೆ. ಅಲ್ಲದೆ ಅಡಕೆ ಸಸಿಗಳ ಮಧ್ಯ ಬೆಳೆದ ಬಾಳೆಯ ಗಿಡಗಳನ್ನು ಕೂಡಾ ಕೆ.ಜಿ.ಗೆ ೯ ರಿಂದ ೧೧ ರೂಪಾಯಿಗಳ ವರೆಗೆ ಮೆಟ್ಲು ಬಾಳೆ ಅಥವಾ ಕರಿಬಾಳೆ ಮಾರಿದರೆ ಪಚ್ಚೆಯ ಬಾಳೆ ಸುಮಾರು ೧೦ ರಿಂದ ೧೩ ರೂಪಾಯಿಗಳ ವರೆಗೆ ಒಂದು ಕೆ.ಜಿ.ಗೆ ಮಾರುತ್ತಾರೆ.

ಇದರಿಂದ ನಮಗೆ ಲಾಭ ಜಾಸ್ತಿ ಎಂದು ಹೇಳುತ್ತಾರೆ. ಇವರಲ್ಲಿ ತೋಟಗಳನ್ನು ಕೂಡಾ ದೀಡಪತ್ರದ ಮುಖಾಂತರ ಮತ್ತೊಬ್ಬರಿಗೆ ಹಾಕಿದ ಪ್ರಸಂಗಗಳು ಇವೆ. ಒಂದು ವರ್ಷಕ್ಕೆ ಮಾತ್ರ ಸೀಮಿತ. ಮುಂದಿನ ವರ್ಷ ಇವರೀರ್ವರ ಅನುಮತಿಯ ಮೇರೆಗೆ ಮತ್ತೊಂದು ವರ್ಷ ಮುಂದುವರೆಸುವರು.

ಘಟ್ಟದ ಕೆಳಗಿನ ಹಸಲರು 'ಸುವಿದಾ' ಎನ್ನುವ ಯೋಜನೆಯ ಫಲಾನುಭವಿಗಳು. ಹಸಲರು ಐದು ಜನರ ಗುಂಪುಗಳನ್ನು ರಚನೆ ಮಾಡಿಕೊಂಡು ತಿಂಗಳಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ಜಮೀನುಗಳಲ್ಲಿ ಕಡ್ಡಾಯವಾಗಿ ಒಂದು ದಿನವಾದರೂ ದುಡಿಯಲೇಬೇಕು. ಇದಕ್ಕೆ ಇನ್ನುಳಿದ ನಾಲ್ವರಿಗೆ ಸಂಬಳ ಕೊಡುವ ಬದಲಿ ಈತನು ಅವರ ಜಮೀನಿನಲ್ಲಿ ನಾಲ್ಕು ದಿನ ಕಡ್ಡಾಯವಾಗಿ ದುಡಿಯಬೇಕು. ಇದರಿಂದ ಎಲ್ಲರಿಗೂ ಅನುಕೂಲವಾಗುವುದರ ಜೊತೆಗೆ ತಿಂಗಳ ಅವಧಿಯಲ್ಲಿ ತಮ್ಮ ತೋಟದಲ್ಲಿ ಐದು ದಿನ ದುಡಿದ ಹಾಗೆ ಆಗುತ್ತದೆ ಎಂದು ಕಬ್ಬಿನಾಲೆಯ ಕೃಷ್ಣಾ ಹೇಳುತ್ತಾನೆ.

ಇವರ ಕೃಷಿ ಉಪಕರಣಗಳೆಂದರೆ ಕಬ್ಬಿಣದ ನೇಗಿಲು, ಮರದ ನೇಗಿಲು, ಭತ್ತದ ಗದ್ದೆಯನ್ನು ಸಮತಟ್ಟಾಗಿ ಮಾಡಲು ಕೊರಡು ಇದನ್ನು ಬೈನೆ ಮರದಿಂದ ಮಾಡಿರುತ್ತಾರೆ. ಪಿಕಾಸಿ, ಆರೆಕೋಲು, ಗುದ್ದಲಿ, ನಗಾ, ಜೋತುಗಾ, ಕಣ್ಣಿ, ಈಸು, ಕುರುಕಿ, ಕುಡಗೋಲು, ಕಂದ್ಲೆ, ಕೊಡ್ಲಿ, ಎತ್ತು ಮತ್ತು ಕೋಣಗಳನ್ನು ಉಪಯೋಗಿಸುವರು.

೪.೨ ಬೇಟೆ

"ಬೇಟೆಯಾಡದವ ಹಸಲನಲ್ಲ" ಎಂಬ ಗಾದೆ ಮಾತೊಂದಿದೆ. ಬೇಟೆಯಾಡುವದು ಜೀವನೋಪಾಯಕ್ಕಾಗಿ ಕಂಡುಕೊಂಡ ದಾರಿಯಾಗಿದ್ದರೂ ಇದು ಅವರ ಬೇಟೆಯ ನೈಪುಣ್ಯತೆಯನ್ನು ಎತ್ತಿ ತೋರಿಸುತ್ತದೆ. ಆದಿಮ ಸಮಾಜದ ಮಾನವನು ತನ್ನ ಜೀವನ ನಿರ್ವಹಣೆಗಾಗಿ ಕಾಡಿನಲ್ಲಿ ಗಡ್ಡೆ ಗೆಣಸುಗಳನ್ನು ಅಗೆದು ಜೀವನವನ್ನು ಸಾಗಿಸುತ್ತಿದ್ದನು. "ಆದಿವಾಸಿ ಸಮುದಾಯದವರು ಸುಮಾರು ಒಂದು ಸಾವಿರದ ಐದನೂರು ಗಡ್ಡೆ ಗೆಣಸುಗಳನ್ನು ಕಾಡಿನಲ್ಲಿ ಪತ್ತೆ ಹಚ್ಚಿ ಅವುಗಳನ್ನು ಸೇವಿಸುತ್ತಿದ್ದರು" (Ameer Hassan :೧೯೮೬: ೭) ಆದರೆ ಬರಬರುತ್ತಾ ಅವುಗಳ ಬಳಕೆ ಜಾಸ್ತಿಯಾದಾಗ ಅದರ ಕೊರತೆಯುಂಟಾಗತೊಡಗಿತು. 'ಕೊರತೆ ಹುಡುಕಾಟದ ತಾಯಿ' ಎಂಬಂತೆ ಅದು (Necessity is the mother of invention) ಪ್ರಾಣಿಗಳನ್ನು ಬೇಟೆಯಾಡಲು ಪ್ರೇರೇಪಿಸಿತು. ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿ ಅವುಗಳ ಚರ್ಮವನ್ನು ತನ್ನ ದೇಹದ ರಕ್ಷಣೆಗಾಗಿ ಉಪಯೋಗಿಸತೊಡಗಿದನು.

ಬೇಟೆಯು ಹಸಲರಲ್ಲಿ ಆಹಾರ ಸಂಗ್ರಹಣೆಯ ಮುಖ್ಯ ಮಾರ್ಗವಾಗಿದ್ದಿತು. ಆಗುಂಬೆ ಬೆಟ್ಟದಿಂದ ಹಿಡಿದು ಕೊಲ್ಲೂರಿನ ಬೆಟ್ಟಗಳವರೆಗಿನ ದಟ್ಟ ಅರಣ್ಯದಲ್ಲಿ ವಿವಿಧ ರೀತಿಯ ಮತ್ತು ಅಪೂರ್ವವಾದ ಕಾಡು ಮೃಗಗಳ ಸಂಪತ್ತು ಅಡಗಿದೆ. ಆ ಕಾಡಿನಲ್ಲಿ ಹೇರಳವಾಗಿ ದೊರೆಯುವ ಜಿಂಕೆ, ಕಡ, ಕಾಡುಕೋಳಿ, ಕಾಡುಹಂದಿ, ಬರಕ್ಕ, ಕಾಡುಕುರಿ, ಮುಳ್ಳುಹಕ್ಕಿ, ಕಾಡೆಮ್ಮೆ, ಕಾಡುಕೋಣ,

ಮೊಲ, ಉಡ, ಕಬ್ಬೆಕ್ಕು ಮುಂತಾದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುವರು. ಇವುಗಳನ್ನು ಬೇಟೆಯಾಡುವಾಗ ಅವರು ಒಂದೇ ತೆರನಾದ ಬೇಟೆಯ ಕ್ರಮವನ್ನು ಅನುಸರಿಸುವುದಿಲ್ಲ. ಬೇರೆ ಬೇರೆ ಪ್ರಾಣಿ ಪಕ್ಷಿಗಳಿಗೆ ಬೇರೆ ಬೇರೆ ರೀತಿಯ ಬೇಟೆ ಪದ್ಧತಿಗಳನ್ನು ಬಳಸುತ್ತಾರೆ.

ಬೇಟೆಯಾಡಲು ಸುಮಾರು ಎಂಟು ಜನರಿಂದ ಹತ್ತು ಜನರ ಗುಂಪು ರಾತ್ರಿ ಈಟಿ, ಭರ್ಚಿ, ತಲವಾರ, ಕೋವಿ, ಬಲೆ, ಪಾಜಿಗಳೊಂದಿಗೆ ತಲೆಗೆ ಸರ್ಚಲೈಟ್ ಕಟ್ಟಿಕೊಂಡು ಹೋಗುತ್ತಾರೆ. ದೊಡ್ಡ ಪ್ರಾಣಿಗಳನ್ನು ಬೇಟೆಯಾಡಲು ರಾತ್ರಿ ವೇಳೆ ಹೋಗುತ್ತಾರೆ. ಸಣ್ಣ ಪ್ರಾಣಿ ಮತ್ತು ಪಕ್ಷಿಗಳನ್ನು ಹಗಲಿನಲ್ಲಿಯೇ ಬೇಟೆಯಾಡುತ್ತಾರೆ.

ಹಸಲರು ಕಾಡುಕೋಳಿಯನ್ನು ಬೇಟೆಯಾಡುವ ಸಂದರ್ಭದಲ್ಲಿ ಅನೇಕ ಬಗೆಯ ತಂತ್ರಗಳನ್ನು ಅನುಸರಿಸುತ್ತಾರೆ. 'ಪಿಟರುಗೊಳವೆ' ಇದು ಒಂದು ಬಿದಿರಿನ ಸುಸಜ್ಜಿತವಾದ ಕೊಳವೆ. ಇದರೊಳಗೆ ಸಿರೆಹೊನ್ನ ಕಾಯಿಯನ್ನು ತುಂಬಿ ಗುರಿಯಿಟ್ಟು ಕಾಡುಕೋಳಿಗೆ ಹೊಡೆಯುತ್ತಾರೆ. ಅವರ ಹೊಡೆತಕ್ಕೆ ಕಾಡುಕೋಳಿ ಗಾಯಗೊಂಡು ಕೆಳಗುರುಳಿದಾಗ ಅದನ್ನು ಹೋಗಿ ಹಿಡಿದುಕೊಳ್ಳುವರು.

ಹಸಲರು ಕಾಡುಕೋಳಿಯನ್ನು ಬೇಟೆಯಾಡುವಾಗ ಇನ್ನೊಂದು ವಿಧಾನವನ್ನು ಅನುಸರಿಸುತ್ತಾರೆ. ಇದಕ್ಕೆ 'ಪಾಜಿ' ಎಂದು ಕರೆಯುತ್ತಾರೆ. ಇದನ್ನು ಬಿದಿರಿನ ಕಡ್ಡಿಗಳಿಂದ ಮಾಡಿರುತ್ತಾರೆ. ಬಿದಿರಿನ ಕಡ್ಡಿಗಳನ್ನು ಕಿಟಕಿಯ ಆಕಾರಕ್ಕೆ ಜೋಡಿಸುತ್ತಾರೆ. ಈ ಕಡ್ಡಿಗಳ ಮೂಲೆಗಳನ್ನು ಬೆಣೆಯಿಂದ ಒಂದಕ್ಕೊಂದು ಸಂಬಂಧ ಕಲ್ಪಿಸುತ್ತಾರೆ. ಹಾಗೆಯೇ ಇದರೊಳಗೆ ಚೌಕಾಕಾರವಾಗಿ ದಾರವನ್ನು ಬಿಗಿದು ಆ ಚೌಕದಲ್ಲಿ ಉರಲನ್ನು ವ್ಯವಸ್ಥಿತವಾಗಿ ಸಿದ್ಧಗೊಳಿಸುವರು. ಈ ಬಗೆಯ ನಾಲ್ಕಾರು ಪಾಜಿಗಳನ್ನು ತೆಗೆದುಕೊಂಡು ಹೋಗಿ, ಎಲ್ಲಿ ಕಾಡುಕೋಳಿಗಳಿವೆ ಎಂಬುದನ್ನು ಪತ್ತೆ ಹಚ್ಚಿ, ಆ ಸ್ಥಳಕ್ಕೆ ಹೋಗಿ ಸಮತಟ್ಟಾದ ಪ್ರದೇಶಗಳಲ್ಲಿ ನಾಲ್ಕು ಮೂಲೆಗಳಿಗೂ ನಾಲ್ಕು ಪಾಜಿಗಳನ್ನೊಡ್ಡುವರು. ಪಾಜಿ ಇಲ್ಲದಿರುವ ಜಾಗಕ್ಕೆ ಸೊಪ್ಪಿನಿಂದ ಮುಚ್ಚುವರು. ಒಬ್ಬ ಅನುಭವಿ ಬೇಟೆಗಾರನು ಈ ನಾಲ್ಕು ಪಾಜಿಗಳ ಮಧ್ಯ ಕುಳಿತುಕೊಳ್ಳುವನು. ಮೈಯನ್ನು ಸಂಪೂರ್ಣವಾಗಿ ಸೊಪ್ಪಿನಿಂದ ಮುಚ್ಚಿಕೊಳ್ಳುತ್ತಾನೆ. ಉಳಿದವರು ದೂರ ಹೋಗಿ ಕುಳಿತುಕೊಳ್ಳುತ್ತಾರೆ. ಸೊಪ್ಪಿನಿಂದ ಮೈ ಮುಚ್ಚಿಕೊಂಡ ನುರಿತ ಬೇಟೆಗಾರನು ಕಾಡುಕೋಳಿ ಯಾವ ರೀತಿಯಾಗಿ ಶಬ್ದ ಮಾಡುತ್ತದೆಯೋ ಅದೇ ರೀತಿಯಾಗಿ ಕೂಗುವನು. ಈತನ ಧ್ವನಿಗೆ ಕಾಡುಕೋಳಿಗಳು ತಮ್ಮ ಪ್ರಿಯಕರ ಅಥವಾ ಪ್ರಿಯತಮೆ ಕೂಗುತ್ತಿರಬಹುದೆಂದು ನಂಬಿ ಪಾಜಿ ಇದ್ದ ಕಡೆಗೆ ಬರುತ್ತವೆ. ಕಾಡುಕೋಳಿಗಳು ಪಾಜಿಯ ಸಮೀಪ ಬಂದಾಗ ಪಾಜಿಯ ನಡುವೆ ಕುಳಿತ ವ್ಯಕ್ತಿಯೂ ಕೂಗುವುದನ್ನು ನಿಲ್ಲಿಸಿಬಿಡುತ್ತಾನೆ. ಪಾಜಿಯ ನಡುವೆ ಸೊಪ್ಪಿನ ಹತ್ತಿರ ಅತ್ತಿಂದ ಇತ್ತ, ಇತ್ತಿಂದ ಅತ್ತ ತಿರುಗುವಾಗ ಪಾಜಿಯ ಉರುಲಿಗೆ ಸಿಕ್ಕು ಬೀಳುತ್ತವೆ. ಉರಿಲಿನಿಂದ ಕತ್ತು ಬಿಗಿದುಕೊಳ್ಳುವುದರಿಂದ ಅವು ಒದ್ದಾಡುವುದರಿಂದ ಉರಲು ಇನ್ನಷ್ಟು ಬಿಗಿಯಾಗಿ, ತಪ್ಪಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಆಗ ಬೇಟೆಗಾರನು ಸೊಪ್ಪನ್ನು ಕಳಚಿ ಕಾಡುಕೋಳಿಗಳ ಉರಲನ್ನು ಬಿಡಿಸಿ ಅವುಗಳನ್ನು ಸಾಯಿಸಿ, ತನ್ನ ಚೀಲದಲ್ಲಿ ತುಂಬಿಕೊಳ್ಳುತ್ತಾನೆ. ಈ ಬಗೆಯ ಬೇಟೆಯಲ್ಲಿ ಮೈಗೆ ಸೊಪ್ಪನ್ನು ಮುಚ್ಚಿಕೊಂಡಿರುವ ವ್ಯಕ್ತಿ ಬಹಳ

ಜಾಗರೂಕನಾಗಿರಬೇಕಾಗುತ್ತದೆ. ಆತನು ಜೋರಾಗಿ ಕೆಮ್ಮುವಂತಿಲ್ಲ. ಜೋರಾಗಿ ಉಸಿರಾಡಿಸುವಂತಿಲ್ಲ. ಆಕಳಿಕೆ ಅಥವಾ ಸೀನು ಬಂದರೆ ನಿಯಂತ್ರಿಸುವುದು ಅನಿವಾರ್ಯ. ಅಂದಾಗ ಮಾತ್ರ ಬೇಟೆ ಕೈಗೆ ಸಿಗುತ್ತದೆ.

ಹಸಲರು ಕಡ, ಜಿಂಕೆ, ಸಾರಂಗ, ಕಾಡುಹಂದಿ, ಮೊಲ, ಬರಕ್ಕ ಮುಂತಾದವುಗಳನ್ನು ಬೇಟೆಯಾಡಿ ತಿನ್ನುತ್ತಾರೆ. ಈ ಪ್ರಾಣಿಗಳನ್ನು ಬೇಟೆಯಾಡಲು ಅವರು ಅನೇಕ ತಂತ್ರಗಳನ್ನು ಬಳಸುತ್ತಾರೆ. ಈ ಪ್ರಾಣಿಗಳು ಆಹಾರಕ್ಕಾಗಿ ಅಲೆಯುವ ಮಾರ್ಗಗಳನ್ನು ಗುರುತಿಸಿಕೊಂಡಿರುತ್ತಾರೆ. ಈ ದಾರಿಯಲ್ಲಿ ಪ್ರಾಣಿಗಳು ಬರುವದನ್ನು ಗಮನಿಸಿ ಬಹು ಜಾಗರೂಕತೆಯಿಂದ ಸಿಡಿಮದ್ದನ್ನಿಡುವರು. ಪ್ರಾಣಿಗಳು ಆ ಸಿಡಿಮದ್ದನ್ನು ತುಳಿದಾಗ ಅದು ಸ್ಫೋಟಗೊಂಡು ಪ್ರಾಣಿಗಳು ನೆಲಕ್ಕುರುಳಿದಾಗ ಅವುಗಳನ್ನು ಈಟಿಯಿಂದ ತಿವಿದು ಸಾಯುವ ಹಾಗೆ ಮಾಡಿ ನಂತರ ಅದನ್ನು ಹೊತ್ತುಕೊಂಡು ಮನೆಗೆ ಬರುವರು.

ಹಸಲರು ಕಡವನ್ನು ಬೇಟೆಯಾಡಲು ಚಿತ್ರ-ವಿಚಿತ್ರವಾದ ತಂತ್ರಗಳನ್ನು ಅನುಸರಿಸುವರು. ಕಡ ಇದು ಕಾಡೆಮ್ಮೆ ಕಾಡುಕೋಣಗಳಿಗಿಂತ ದೊಡ್ಡದಾದ ಮತ್ತು ಶಕ್ತಿಯುತವಾದ ಪ್ರಾಣಿ. ಇದನ್ನು ಬೇಟೆಯಾಡಲು ಹತ್ತು ಹನ್ನೆರಡು ಜನರ ಗುಂಪು ಬೇಕು. ಇದು ಹೆಚ್ಚಾಗಿ ಕೊಲ್ಲೂರಿನ ಅರಣ್ಯಗಳಲ್ಲಿ ಕಾಣಸಿಗುತ್ತದೆ. ಇವುಗಳನ್ನು ಬೇಟೆಯಾಡಲು ಮೊದಲು ಹಸಲರು ಆ ಪ್ರಾಣಿಯ ಚಲನವಲನಗಳ ಮೇಲೆ ನಿಗಾ ಇಡುವರು. ನಂತರ ಹತ್ತು ಹನ್ನೆರಡು ಜನರ ಗುಂಪು ಕೂಡಿಕೊಂಡು ಅದನ್ನು ಬೆನ್ನಟ್ಟಿ ಕೊಲ್ಲಬೇಕಾದರೆ ಕೋವಿಯೇ ಬೇಕು. ನಾಡುಕೋವಿಯಿಂದ ಹೊಡೆದು ಉರುಳಿಸಿದ ನಂತರ ತಲವಾರ, ಭರ್ಚಿ ಮುಂತಾದವುಗಳಿಂದ ತಿವಿದು ಅದು ಸತ್ತ ನಂತರ ಅದನ್ನು ಹೊತ್ತುಕೊಂಡು ಹೋಗಿ ಎಷ್ಟು ಜನರು ಬೇಟೆಗೆ ಬಂದಿರುವರೋ ಅವರೆಲ್ಲರಿಗೂ ಸಮಾನವಾಗಿ ಹಂಚಿ ತಿನ್ನುತ್ತಾರೆ.

ಇದೇ ಪ್ರಾಣಿಯನ್ನು ಇನ್ನೊಂದು ತಂತ್ರದ ಮುಖಾಂತರವೂ ಬೇಟೆಯಾಡುವರು. ಕಾಡಿನ ಮಧ್ಯ ಅವು ನಿರಂತರವಾಗಿ ಬರುವ ಜಾಗಕ್ಕೆ ಸುಮಾರು ನಾಲ್ಕು ಅಡಿ ಉದ್ದ, ನಾಲ್ಕು ಅಡಿ ಅಗಲದ ಒಂದು ಗಾರೆಯನ್ನು ತೆಗೆದು, ಆ ಗಾರೆಯ ಒಳಗೆ ಹರಿತವಾದ ಅಲಗುಳ್ಳ ಭರ್ಚಿಯನ್ನು ಜೋಡಿಸುವರು. ನಂತರ ಆ ಗಾರೆಯ ಮೇಲೆ ಬಿದಿರಿನ ಅಥವಾ ಅಡಕೆಯ ಕಡ್ಡಿಗಳನ್ನು ಹಾಕಿ ಅದರ ಮೇಲೆ ಸೊಪ್ಪನ್ನು ಹಾಕಿ ಮುಚ್ಚುವರು. ನಂತರ ಎಲ್ಲರೂ ಕೂಡಿಕೊಂಡು ಆ ಪ್ರಾಣಿ ಗಾರೆಯ ಕಡೆಗೆ ಬರುವುದನ್ನು ನೋಡಿ ಗದ್ದಲೆಬ್ಬಿಸುವರು. ಆಗ ಕಡವು ಆ ಗಾರೆಯಲ್ಲಿ ಬಿದ್ದಾಗ ಹರಿತವಾದ ಭರ್ಚಿಯು ಅದಕ್ಕೆ ಚುಚ್ಚಿಕೊಂಡು ಗಾರೆಯಲ್ಲಿ ಒದ್ದಾಡುತ್ತದೆ. ಆಗ ಅವರು ಅಲ್ಲಿಗೆ ಬಂದು ತಲವಾರಿನಿಂದ ಅದರ ತಲೆಯನ್ನು ಕಡಿದು ಅದನ್ನು ಗಾರೆಯಿಂದ ಎತ್ತಿ ತಮ್ಮ ಹಾಡಿಕೇರಿಗೆ ಒಯ್ದು ಬೇಟೆಗೆ ಹೋದ ಎಲ್ಲರೂ ಸಮನಾಗಿ ಹಂಚಿಕೊಂಡು ತಿನ್ನುವರು. ಆದರೆ ಅರಣ್ಯ ಉತ್ಪನ್ನ ಕಾಯ್ದೆ ಮತ್ತು ಬೇಟೆಯಾಡುವದನ್ನು ನಿಷೇಧಿಸುವ ಕಾಯ್ದೆ ಬಂದ ನಂತರ ಇಂತಹ ಪ್ರಾಣಿಗಳ ಬೇಟೆಯಾಡುವದನ್ನು ನಿಲ್ಲಿಸಿದ್ದಾರೆ. ಈಗ ಏನಾದರೂ ಬೇಟೆಯಾಡುತ್ತಿದ್ದರೆ

ಕದ್ದು ಮುಚ್ಚಿ ಬೇಟೆಯಾಡಬೇಕು. ಒಂದು ವೇಳೆ ಅರಣ್ಯ ಸಿಬ್ಬಂದಿ ಕೈಗೆ ಸಿಕ್ಕು ಬಿದ್ದರೆ ಅದರಲ್ಲಿ ಅವರಿಗೂ ಪಾಲುಕೊಡಬೇಕು. ಇಲ್ಲದಿದ್ದರೆ ಅವರಿಗೆ ನಿರಂತರ ಕಿರುಕುಳ ತಪ್ಪಿದ್ದಲ್ಲ.

ಜಿಂಕೆ, ಸಾರಂಗ ಮುಂತಾದವುಗಳನ್ನು ಬೇಟೆಯಾಡಲು ಹಸಲರು ಬಿಲ್ಲು ಬಾಣಗಳನ್ನು ಉಪಯೋಗಿಸುವರು. ಜಿಂಕೆ ಕಂಡ ಕೂಡಲೇ ನುರಿತ ಬಿಲ್ಲುಗಾರನು ಅದರ ಚಲನವಲನಗಳ ಮೇಲೆ ನಿಗಾಯಿಟ್ಟು, ಅದರ ಹೆಜ್ಜೆಗಳನ್ನು ಗುರುತಿಸುತ್ತಾ ಆ ಕಡೆಗೆ ಬಿಲ್ಲಿನಿಂದ ಬಾಣ ಹೊಡೆಯುವನು. ಆವಾಗ ಆ ಬಾಣ ಅದರ ದೇಹದೊಳಗೆ ಹೊಕ್ಕಾಗ ಆ ಪ್ರಾಣಿ ನೆಲಕ್ಕುರುಳುವದು. ಅದನ್ನು ಆಗ ಆತ ಸಾಯಿಸಿ ತನ್ನ ಚೀಲದಲ್ಲಿ ತುಂಬಿಕೊಳ್ಳುವನು. ಜಿಂಕೆ, ಸಾರಂಗ ಬೇಟೆಯಾಡಲು ಹಸಲರು ಇನ್ನೊಂದು ಬೇಟೆಯ ತಂತ್ರವನ್ನು ಬಳಸುತ್ತಾರೆ. ಇದು ಉರಲು ಹಾಕುವ ಪದ್ಧತಿ. ಹಸಲರು ಜಿಂಕೆ ಬೇಟೆಯಾಡುವದಕ್ಕಿಂತ ಪೂರ್ವದಲ್ಲಿ ಅವು ಎಲ್ಲಿ ಹಿಂಡು ಹಿಂಡಾಗಿ ಓಡಾಡುವ ಜಾಗೆಯನ್ನು ಗುರುತಿಸುವರು. ಆ ಜಾಗದಲ್ಲಿ ರೇಷ್ಮೆ ದಾರದಿಂದ ಮಾಡಿದ ಉರುಲನ್ನು ಜೋಡಿಸುತ್ತಾರೆ. ಆಹಾರವನ್ನು ಹುಡುಕುತ್ತಾ ಬಂದ ಪ್ರಾಣಿಗಳು ಈ ಉರುಲೊಳಗೆ ತಲೆಯನ್ನು ಸಿಕ್ಕಿಸಿದಾಗ ಉರಲು ಬೀಳುವದು. ಇದರಿಂದ ಬಿಡಿಸಿಕೊಳ್ಳಲು ಒದ್ದಾಡಿದಾಗ, ಉರಲು ಮತ್ತಷ್ಟು ಬಿಗಿಯಾಗುತ್ತಾ ಹೋಗುವದು. ಆ ಪ್ರಾಣಿ ಒದ್ದಾಡಿ ಒದ್ದಾಡಿ ಸಾಯುತ್ತದೆ. ಆಗ ಅದನ್ನು ಆತ ತನ್ನ ಸಹಚರರ ಜೊತೆ ಎತ್ತಿಕೊಂಡು ಹೋಗುವನು.

ಮೊಲ ಬೇಟೆಯಾಡಲು ಹಸಲರು ಎರಡು ತಂತ್ರಗಳನ್ನು ಉಪಯೋಗಿಸುತ್ತಾರೆ. ಒಂದು, ಮೊಲವನ್ನು ಬೇಟೆಯಾಡುವಾಗ ಬಿಲ್ಲನ್ನು ಅರಣ್ಯಕ್ಕೆ ತೆಗೆದುಕೊಂಡು ಹೋಗಿ ಎಲ್ಲಿ ಹುಲುಸಾಗಿ ಹುಲ್ಲು ಬೆಳೆಯುವುದೋ ಅಲ್ಲಿ ಮೊಲಗಳು ಬರುತ್ತವೆ ಎಂಬ ನಂಬಿಕೆ ಇರುವುದರಿಂದ ಅಲ್ಲಿ ಹೋಗಿ ಗಿಡದ ಅಡಿಯಲ್ಲಿ ಅವಿತುಕೊಂಡು ಮೊಲ ಬರುವದನ್ನು ಗಮನಿಸಿ ಆತ ಗುರಿಯಿಟ್ಟು ಅದಕ್ಕೆ ಬಾಣದಿಂದ ಹೊಡೆಯುವನು ಆಗ ಬಾಣವು ಅದಕ್ಕೆ ತಗುಲಿದಾಗ ಮೃದುವಾದ ಮೊಲ ನೆಲಕ್ಕುರುಳುವದು. ಆಗ ಆತ ಅದನ್ನು ಎತ್ತಿಕೊಂಡು ಹೋಗಿ ಮನೆಯಲ್ಲಿ ಬೇಯಿಸಿ ತಿನ್ನುವನು.

ಇನ್ನೊಂದು ಬೇಟೆಯ ಕ್ರಮವೆಂದರೆ, ನಾಯಿಗಳನ್ನು ತೆಗೆದುಕೊಂಡು ಹೋಗಿ ಬೇಟೆ ಯಾಡುವದು. ಮೊಲಗಳು ಇರುವ ಜಾಗವನ್ನು ಪತ್ತೆ ಹಚ್ಚಿ ಆ ಜಾಗಕ್ಕೆ ನಾಯಿಗಳೊಂದಿಗೆ ಹೋಗಿ ಛೂ ಬಿಡುವರು. ನಾಯಿಯು ತನ್ನ ಬಾಯಿಯಲ್ಲಿ ಮೊಲವನ್ನು ಹಿಡಿದು ಎಳೆದಾಡುವಾಗ ಬೇಟೆಗಾರರು ಬಂದು ಅದನ್ನು ನಾಯಿಯ ಬಾಯಿಯಿಂದ ಬಿಡಿಸಿಕೊಳ್ಳುವನು. ಆ ಬಿಡಿಸಿಕೊಂಡ ಪ್ರಾಣಿಯನ್ನು ತನ್ನ ಚೀಲದಲ್ಲಿ ಹಾಕಿ ಮನೆಗೆ ತೆಗೆದುಕೊಂಡು ಒಯ್ಯುವರು.

ಹಸಲರು ಕಾಡುಹಂದಿನ್ನು ಬೇಟೆಯಾಡುತ್ತಾರೆ. ಕಾಡುಹಂದಿಯನ್ನು ಬೇಟೆಯಾಡಬೇಕಾದರೆ ಒಬ್ಬರಿಂದ ಸಾಧ್ಯವಿಲ್ಲ. ಏಕೆಂದರೆ, ಇದು ಆಕ್ರಮಣಕಾರಿ ಪ್ರಾಣಿ. ಆದ್ದರಿಂದ ಅವರು ಗುಂಪುಗೂಡಿ ಬೇಟೆಯಾಡುತ್ತಾರೆ. ಗುಂಪಿನ ನಾಯಕ ಕಾಡು ಹಂದಿ ಇರುವ ಜಾಗವನ್ನು ಪತ್ತೆ ಹಚ್ಚಿ ಆ ಜಾಗದ ಸುತ್ತಲೂ ಗುಂಪಿನ ಇನ್ನುಳಿದ ಸದಸ್ಯರು ಬಲೆಯನ್ನು ಬೀಸಿ ಗದ್ದಲ ಎಬ್ಬಿಸುವರು. ಆಗ ಕಾಡು ಹಂದಿ ಗಾಬರಿಯಾಗಿ ಓಡಲು ಪ್ರಾರಂಭಿಸುವುದು. ಸುತ್ತಲೂ ಜನರು ಇರುವುದರಿಂದ

ಕಾಡು ಹಂದಿ ಹೋಗಲು ಸ್ವಲ್ಪ ದಾರಿ ಬಿಡುವರು. ಅಲ್ಲಿಯೇ ಬಲೆಯನ್ನು ನೆಲಕ್ಕೆ ಸಮಾಂತರವಾಗಿ ಹಿಡಿದು ನಿಂತಿರುವರು. ಕಾಡುಹಂದಿ ಓಡಿ ಬರುವಾಗ ಆ ದಾರಿಗೆ ಹಾಕಿದ ಬಲೆಯನ್ನು ಎತ್ತುವರು. ಅದು ಬಲೆಯಲ್ಲಿ ಸಿಕ್ಕಿ ಬಿದ್ದಾಗ ಭರ್ಚಿಯಿಂದ ತಿವಿದು ಅದನ್ನು ಸಾಯಿಸುವರು.

ಎನ್. ಹುಚ್ಚಪ್ಪ ಮಾಸ್ತರರು ನವಸಾಕ್ಷರರಿಗಾಗಿ ಬರೆದ "ಹಸಲರು" ಎಂಬ ಗ್ರಂಥದಲ್ಲಿ ಹಸಲರು ಹಂದಿಯನ್ನು ತಿನ್ನುತ್ತಾರೆ ಎಂದು ಬರೆದಿದ್ದರು. ಇದನ್ನು ಓದಿದ ಸಾಗರ, ಸೊರಬ, ಹೊಸನಗರ ತಾಲೂಕಿನ ವಿವಿಧ ಹಾಡಿಕೇರಿಯ ಜನರು ಹುಚ್ಚಪ್ಪ ಮಾಸ್ತರರರ ಮನೆಯ ಮುಂದೆ ಜಮಾಯಿಸಿ ಧರಣಿ ಮಾಡುವದಲ್ಲದೇ ಸಾಗರದ ತಹಶೀಲ್ದಾರ ಕಛೇರಿಯ ಮುಂದೆ ಮೂರು ದಿನ ಧರಣಿ ಮಾಡಿದರು. ಅಷ್ಟೇ ಅಲ್ಲ, ಗಿರಿಜನ ಆಶ್ರಮ ಶಾಲೆಯ ಶಿಕ್ಷಕ ಹುದ್ದೆಯಿಂದಲೂ ಕೂಡಾ ಅವರನ್ನು ಅಮಾನತ್ತು ಮಾಡಬೇಕೆಂದು ಉಪವಾಸ ಕುಳಿತರು. ಅವರ ಪತ್ರಿಕೃತಿಯನ್ನು ದಹನ ಮಾಡಿದರು. ಆದರೆ ಕಾಗೋಡು ತಿಮ್ಮಪ್ಪನವರ ಮಧ್ಯಸ್ಥಿಕೆಯಿಂದ ಅವರು ಧರಣಿ ಬಿಟ್ಟು ಮಾತುಕತೆಗೆ ಮುಂದಾದಾಗ ಹುಚ್ಚಪ್ಪ ಮಾಸ್ತರರು ಎಲ್ಲವನ್ನು ಸವಿವರವಾಗಿ ಹೇಳಿದರು. ಇದನ್ನು ಧರಣಿ ನಿರತ ಜನರು ಒಪ್ಪಿ ತಮ್ಮ ಧರಣಿಯನ್ನು ಹಿಂದಕ್ಕೆ ಪಡೆದರು ಎಂದು ಹುಚ್ಚಪ್ಪ ಮಾಸ್ತರರು ಸಂದರ್ಶನದಲ್ಲಿ ಹೇಳಿದರು.

"ಹಂದಿಗಳನ್ನು ಹಿಡಿಯಲು ಹಸಲರು ಮಿಣಿ ಬಲೆಗಳನ್ನು ಉಪಯೋಗಿಸುತ್ತಾರೆ. ಇದನ್ನು ರೇಷ್ಮೆಯಿಂದ ತಯಾರಿಸುತ್ತಾರೆ". (ಕುವೆಂಪು :೧೯೬೨ :೧೩೬)

ಹಸಲರು ಹಂದಿಯ ಮಾಂಸವನ್ನು ಮನೆಯೊಳಗೆ ಬೇಯಿಸುವದಿಲ್ಲ. ಇದನ್ನು ಮನೆಯ ಹೊರಗಡೆಯೇ ಬೇಯಿಸುತ್ತಾರೆ. ಅಲ್ಲದೆ ಅದಕ್ಕೆ ಪ್ರತ್ಯೇಕವಾದ ಪಾತ್ರೆಗಳನ್ನು ಉಪಯೋಗಿಸುತ್ತಾರೆ. ಇದಕ್ಕೆ ಅವರು ಗೌಲುಗಡಿಗೆ ಎಂದು ಕರೆಯುತ್ತಾರೆ.

ಉಡ: ಇದು ಹಲ್ಲಿ ಜಾತಿಗೆ ಸೇರಿದ ಪ್ರಾಣಿ. ಇದನ್ನು ಹಸಲರು ಬೇಟೆಯಾಡುತ್ತಾರೆ. ಉಡ ಇದು ಔಷಧಿಯ ಗುಣವನ್ನು ಹೊಂದಿರುವ ಪ್ರಾಣಿ. ಹಸಲರು ಉಡ ಇರುವ ಜಾಗವನ್ನು ಪತ್ತೆಹಚ್ಚಿ ಆ ನೆಲವನ್ನು ಪಿಕಾಸಿಯಿಂದ ಅಗೆದು ಅದನ್ನು ಹಿಡಿದು ಕೊಲ್ಲುವರು. ಅದರ ಮುಖವನ್ನು ಅಡುಗೆ ಮನೆಯ ಒಲೆಯ ಮೇಲೆ ತೂಗುಹಾಕಿ ಅದು ಒಣಗಿದ ನಂತರ ಔಷಧಿಯನ್ನಾಗಿ ಉಪಯೋಗಿಸುತ್ತಾರೆ.

೪.೨.೧ ಕಾಡುಕುರಿ

ಇದು ಪಶ್ಚಿಮ ಘಟ್ಟದ ಅರಣ್ಯದಲ್ಲಿ ಹೇರಳವಾಗಿ ಸಿಗುವ ಪ್ರಾಣಿ. ಇದನ್ನು ಬೇಟೆಯಾಡ ಬೇಕಾದರೆ, ನಾಲ್ಕು ಜನರಿಗಿಂತ ಹೆಚ್ಚು ಜನ ಬೇಕು. ಬೇಟೆಯಾಡುವವರು ಕಾಡುಕುರಿಯನ್ನು ನೋಡಿದ ಕೂಡಲೇ ಅದನ್ನು ಸುತ್ತುವರೆದು ಗದ್ದಲು ಎಬ್ಬಿಸುವರು. ಅದು ಓಡಲು ಪ್ರಾರಂಭಿಸಿದಾಗ ಯಾರ ಸಮೀಪಕ್ಕೆ ಅದು ಬರುವದೋ ಆಗ ಅವನು ಬಿಲ್ಲು ಬಾಣಗಳಿಂದ ಅಥವಾ ಭರ್ಚಿಯಿಂದ ಹೊಡೆಯುವನು. ಬಾಣ ಅಥವಾ ಭರ್ಚಿ ನೆಟ್ಟು ಒದ್ದಾಡುತ್ತಿರುವಾಗ ಅದನ್ನು ಹೊಡೆದು

ಸಾಯಿಸಿ, ಚೀಲದಲ್ಲಿ ತುಂಬುವರು. ನಂತರ ಬೇಟೆಗೆ ಬಂದ ಎಲ್ಲರೂ ಸರಿಸಮಾನವಾಗಿ ಹಂಚಿಕೊಳ್ಳುವರು.

೪.೨.೨ ಕಬ್ಬೆಕ್ಕು

ಕಬೆಕ್ಕನ್ನು ಹೊಡೆಯಲು ಡೊಣ್ಣೆ ಅಥವಾ ಬಾಣಗಳನ್ನು ಉಪಯೋಗಿಸುವರು. ಈ ಬೆಕ್ಕು ಕಂಡಕೂಡಲೇ ಡೊಣ್ಣೆ ಬೀಸುವರು. ಡೊಣ್ಣೆ ತಾಗಿದ ಕೂಡಲೇ ಬೆಕ್ಕು ಉರುಳಿ ಬೀಳುವದು. ಆವಾಗ ಅದನ್ನು ಸಾಯಿಸಿ, ಮನೆಗೆ ತರುವರು. ಹಸಲರು ಈ ಮೇಲಿನ ಎಲ್ಲಾ ತಂತ್ರಗಳನ್ನು ಉಪಯೋಗಿಸಿ ಬೇಟೆಯಾಡುತ್ತಿದ್ದರು. ಆದರೆ ಅರಣ್ಯ ಕಾಯ್ದೆ ಜಾರಿಯಾದ ನಂತರ ಬೇಟೆಯಾಡುವುದು ಕಡಿಮೆಯಾಗಿದೆ. ಆದರೂ ಅರಣ್ಯ ಸಿಬ್ಬಂದಿಯ ಕಣ್ತಪ್ಪಿಸಿ ಬೇಟೆಯಾಡುತ್ತಾರೆ. ಒಂದು ವೇಳೆ ಅರಣ್ಯ ಪ್ರದೇಶದಲ್ಲಿ ಅರಣ್ಯ ಸಿಬ್ಬಂದಿಯ ಕೈಗೆ ಸಿಕ್ಕರೆ ಅದರಲ್ಲಿ ಅವರಿಗೂ ಪಾಲುಕೊಟ್ಟು ಬರುವರು. ಹೀಗೆ ಪಾಲುಕೊಟ್ಟ ಉದಾಹರಣೆಗಳು ಸಾಕಷ್ಟಿವೆ ಎಂದು ರಾಮಣ್ಣ ಕೂಳಕಾರ (ವಯಸ್ಸು ೭೦ ಸಾ॥ ಕಾರ್ಗಲ್) ಹೇಳುತ್ತಾನೆ.

ಹಸಲರು ಮೀನು ಬೇಟೆಯಾಡುವರು. ಮೀನನ್ನು ಹಿಡಿಯಲು ಅವರು ಸಾಮಾನ್ಯವಾಗಿ ಬಲೆ ಹಾಕಿ ಹಿಡಿಯುವರು. ಬಲೆ ಎಂದರೆ, ರೇಷ್ಮೆ ದಾರದಿಂದ ಸಣ್ಣ ಸಣ್ಣ ರಂಧ್ರಗಳನ್ನು ಬಿಟ್ಟು ಒಂದಕ್ಕೊಂದು ಸೇರುವ ಹಾಗೆ ಗಂಟುಗಳನ್ನು ಹಾಕಿ ಬಲೆ ತಯಾರಿಸುವರು. ಇದನ್ನು ಮೀನುಗಳು ಎಲ್ಲಿ ಹೇರಳವಾಗಿ ಇರುತ್ತವೆಯೋ ಅಲ್ಲಿ ರಾತ್ರಿಯ ಸಮಯದಲ್ಲಿ ಬಲೆಯನ್ನು ಹಾಕಿ ಮರುದಿನ ಬೆಳಗ್ಗೆ ಹೋಗಿ ಬಲೆಗೆ ಬಿದ್ದ ಮೀನುಗಳನ್ನು ಆರಿಸಿಕೊಂಡು ಬರುತ್ತಾರೆ. ಕೆಲವರು ಅಲ್ಲಿಯೆ ಸುಟ್ಟು ತಿನ್ನುತ್ತಾರೆ.

ಇವರು ಮೀನು ಬೇಟೆಯಾಡುವ ಇನ್ನೊಂದು ಕ್ರಮವೆಂದರೆ, ಗಾಳಹಾಕುವದು. ಇದು ಸಾಮಾನ್ಯವಾಗಿ ಶರಾವತಿ, ವರಾಹಿ ಮತ್ತು ಚೆಕ್‌ಡ್ಯಾಂ ಹಿನ್ನೀರಿನಲ್ಲಿ ಗಾಳ ಹಾಕಿ ಮೀನು ಹಿಡಿಯುವ ಪದ್ಧತಿ ಇದೆ. ಗಾಳ ಎಂದರೆ ಒಂದು ಬಿದಿರಿನ ಉದ್ದವಾದ ಕೋಲಿಗೆ ಸುಮಾರು ಒಂದುವರೆ ಅಡಿಯ ದಾರದ ಒಂದು ತುದಿಯನ್ನು ಕೋಲಿಗೆ ಕಟ್ಟಿ ಇನ್ನೊಂದು ತುದಿಗೆ ತಂತಿಯನ್ನು ಕಟ್ಟಿ ಆ ತಂತಿಗೆ ಎರೆಹುಳ ಅಥವಾ ಮೀನು ತಿನ್ನುವ ಇತರ ಹುಳಗಳನ್ನು ಸಿಗಿಸಿ, ನೀರಿನಲ್ಲಿ ಒಗೆಯುವರು. ಒಗೆದ ತಂತಿಗೆ ಮೀನು ಬಾಯಿ ಹಾಕಿದಾಗ ಬಿದಿರಿನ ಕೋಲು ಅಲುಗಾಡುವದು. ಆಗ ಅದನ್ನು ಇವರು ಮೇಲಕ್ಕೆ ಎತ್ತಿದಾಗ ಮೀನಿನ ಬಾಯಿ ಆ ತಂತಿಗೆ ಸಿಕ್ಕುಬೀಳುವುದು. ಆಗ ಅದನ್ನು ತಂತಿಯಿಂದ ಬೇರ್ಪಡಿಸಿ ತಮ್ಮ ಚೀಲದಲ್ಲಿ ತುಂಬಿಕೊಳ್ಳುವರು.

ಇನ್ನೊಂದು ಕ್ರಮವೆಂದರೆ, ಬಿದಿರಿನ ಗೋಲಾಕಾರವಾದ ಸಣ್ಣ ಕಿಂಡಿಗಳಿರುವ ಬುಟ್ಟಿಯನ್ನು ಹೆಣೆದು ಉಳಿದ ಬಿದಿರಿನ ಎಸಳುಗಳ ತುದಿಯನ್ನು ಕಟ್ಟಿ ಅದರ ಒಳಗೆ ಅದೇ ಮಾದರಿಯ ಸಣ್ಣ ಬುಟ್ಟಿಯನ್ನು ಇಡುವರು. ನಂತರ ನೀರು ಮೇಲಿನಿಂದ ಬೀಳುವ ಜಾಗವನ್ನು ಗುರುತಿಸಿ, ಆ ಬಲೆಯನ್ನು ಅಲ್ಲಿ ಇಡುವರು. ಮೀನು ಬಲೆಯಲ್ಲಿ ಬಿದ್ದು ಒದ್ದಾಡುವವು. ಆಗ ಇವರು ಬಂದು ಅವುಗಳನ್ನು ಆರಿಸಿಕೊಳ್ಳುವರು ಇದಕ್ಕೆ 'ಕುಳಿ' ಎಂದು ಕರೆಯುತ್ತಾರೆ.

ಹಸಲರು ಮೀನು ಬೇಟೆಯನ್ನು ಬೇಸಿಗೆ ಕಾಲದಲ್ಲಿ ಆಡುವ ಇನ್ನೊಂದು ವಿಧವೆಂದರೆ, ಕಡಿಮೆ ನೀರು ಇರುವ ಗುಂಡಿಗಳನ್ನು ಆಯ್ಕೆ ಮಾಡಿ ಅಲ್ಲಿರುವ ನೀರನ್ನು ಬೇರೆ ಕಡೆಗೆ ಚೆಲ್ಲಿ ನಂತರ ಮೀನು ಹಿಡಿಯುವರು. ಹಸಲರು ಮೀನುಗಳನ್ನು ಒಣಗಿಸಿ ಸಂಗ್ರಹಿಸಿಟ್ಟುಕೊಳ್ಳುವುದಿಲ್ಲ. ಏಕೆಂದರೆ, ಅವು ಎಲ್ಲಾ ಕಾಲಗಳಲ್ಲಿಯೂ ಹೇರಳವಾಗಿ ಸಿಗುವುದರಿಂದ ಅವುಗಳನ್ನು ಸಂಗ್ರಹಿಸುವುದಿಲ್ಲ.

ಹಸಲರು ಕಾರೇಡಿಗಳನ್ನು ತಿನ್ನವರು. ನೀರು ಹರಿಯುವ ಪ್ರದೇಶದಲ್ಲಿ ಕಾರೇಡಿಗಳು ಇರುವುದನ್ನು ಗಮನಿಸಿ, ಅದನ್ನು ಬರಿಗೈಯಿಂದ ಹಿಡಿದು ಅದರ ಕಾಲುಗಳನ್ನು ಮುರಿದು ನಂತರ ಬೆಂಕಿಯಲ್ಲಿ ಹಾಕಿ ಸುಟ್ಟು ಅಲ್ಲಿಯೇ ತಿನ್ನುವರು. ಇದನ್ನು ರಾಷ್ಟ್ರಕವಿ ಕುವೆಂಪು ಅವರು ತಮ್ಮ ಬೃಹತ್ ಕಾದಂಬರಿಯಾದ "ಮಲೆಗಳಲ್ಲಿ ಮದುಮಗಳು" ಎಂಬುವುದರಲ್ಲಿ ಈ ರೀತಿಯಾಗಿ ಹೇಳಿದ್ದಾರೆ. "ಆ ಹಸಲರ ಬಿಡಾರದವರು ಇದ್ದಾರಲ್ಲ ಅವರು ಕೆಲಸಕ್ಕೆ ಬರದೆ ಉಳಿ ಕುಳಿತಾಗಲೆಲ್ಲಾ ಈ ಹಳ್ಳಕ್ಕೆ ಬಂದು ಕಲ್ಲು ಮುಗುಚುತ್ತಾರಲ್ಲ? ಏಡಿ ಎಲ್ಲಾ ಅವರ ಪಾಲಿಗೆ ಆಗಿ ಹೋಗುತ್ತವೆ". (ಕುವೆಂಪು :೧೯೬೨ :೧೩೪) ಇತ್ತೀಚಿಗೆ ಕರ್ನಾಟಕ ಸರಕಾರವು ವನ್ಯ ಮೃಗಗಳ ಸಂರಕ್ಷಣ ಕಾನೂನು ಜಾರಿಯಲ್ಲಿ ತಂದಿರುವುದರಿಂದ ಕಾಡು ಪ್ರಾಣಿಗಳನ್ನು ಬೇಟೆಯಾಡುವಂತಿಲ್ಲ. ಈ ಕಾರಣಕ್ಕಾಗಿ ಅವರು ಬೇಟೆಯಾಡುವುದನ್ನು ಕಡಿಮೆ ಮಾಡಿದ್ದಾರೆ.

೪.೩ ಇನ್ನಿತರ ಕಸುಬುಗಳು

೪.೩.೧ ಜೇನು ಸಂಗ್ರಹಣೆ

ಜೇನು ಸಂಗ್ರಹಣೆ ಹಸಲರ ಇನ್ನೊಂದು ಮುಖ್ಯವಾದ ವೃತ್ತಿ. ಜೇನು ತುಪ್ಪ ಅವರ ಪೂರಕ ಆಹಾರಗಳಲ್ಲಿ ಒಂದು. ಸಾಮಾನ್ಯವಾಗಿ ಜೇನು ಎರಡು ಋತುಗಳಲ್ಲಿ ಸಂಗ್ರಹಿಸುತ್ತಾರೆ. ವಸಂತ ಋತುವಿನ ಆಗಮನದ ನಂತರ ಮತ್ತು ಮೇ ತಿಂಗಳಿನಿಂದ ಜೂನ್ ತಿಂಗಳ ಮೊದಲನೆ ವಾರದಲ್ಲಿ ಮಳೆ ಬರುವುದಕ್ಕಿಂತ ಪೂರ್ವದಲ್ಲಿ ಜೇನು ಸಂಗ್ರಹಣೆ ಮಾಡುವರು. ವಸಂತ ಋತುವಿನ ಆಗಮನದಲ್ಲಿ ಕಾಡು ಹೂಗಳು ಅರಳುವವು. ಅದರಿಂದ ಮಧುವನ್ನು ಹೀರಿ, ಜೇನು ನೊಣಗಳು ಗೂಡನ್ನು ಕಟ್ಟುವವು. ಸಾಮಾನ್ಯವಾಗಿ ಜೇನು ನೊಣಗಳು ದೊಡ್ಡ ಕೊಂಬೆಗಳಲ್ಲಿ, ಮರದ ಪೊಟರೆಗಳಲ್ಲಿ, ದೊಡ್ಡ ಕಲ್ಲು ಬಂಡೆಗಳಲ್ಲಿ, ಬಿದಿರಿನ ಗಳಗಳಲ್ಲಿ ಜೇನು ಕಟ್ಟುತ್ತವೆ. ಇದು ಬಿಡಿಸುವುದು ಪ್ರಯಾಸದ ಕೆಲಸ.

ಪಶ್ಚಿಮ ಘಟ್ಟದ ಅರಣ್ಯಗಳನ್ನು ವಲಯಗಳನ್ನಾಗಿ ಅರಣ್ಯ ಇಲಾಖೆಯು ವಿಂಗಡಿಸಿದೆ. ಕಿರು ಅರಣ್ಯ ವಲಯವು ಕಿರು ಅರಣ್ಯ ಉತ್ಪನ್ನಗಳನ್ನು ಟೆಂಡರ್ ಮೂಲಕ ಹರಾಜು ಹಾಕುವರು. ಈ ಟೆಂಡರ್‌ನ್ನು ಪಡೆದ ಗುತ್ತಿಗೆದಾರರು ಹಸಲರನ್ನು ಜೇನು ಬಿಡಿಸುವುದಕ್ಕಾಗಿ ಇವರಿಗೆ ಆಹ್ವಾನ ನೀಡುವರು. ಬಿಡಿಸಿದ ಜೇನಿನಲ್ಲಿ ಸ್ವಲ್ಪ ಭಾಗವನ್ನು ಇವರಿಗೆ ಕೊಡುವರು. ಇದಕ್ಕಾಗಿ ಅವರು ಕೂಲಿ ಕೇಳುವುದಿಲ್ಲ. ಬದಲಾಗಿ ಜೇನನ್ನು ತೆಗೆದುಕೊಳ್ಳುತ್ತಾರೆ.

ಅರಣ್ಯಗಳಲ್ಲಿ ಹಸಲರು ಮೂರು ಪ್ರಕಾರದ ಜೇನುಗಳನ್ನು ಗುರುತಿಸಿದ್ದಾರೆ.

೧) ಹೆಜ್ಜೇನು ೨) ತುಡುಜೇನು ೩) ಕೋಲುಜೇನು

೪.೩.೧.೧ ಹೆಜ್ಜೇನು : ಈ ಜೇನಿನ ಹುಳಗಳು ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ಇವು ದೊಡ್ಡ ಮರಗಳಲ್ಲಿ ಜೇನು ಗೂಡುಗಳನ್ನು ಕಟ್ಟುತ್ತವೆ. ಹೆಜ್ಜೇನು ನೊಣಗಳು ತುಂಬಾ ಅಪಾಯಕಾರಿ. ಜೇನು ಬಿಡಿಸಲು ಅರಣ್ಯಕ್ಕೆ ಸುಮಾರು ನಾಲ್ಕಾರು ಜನರು ಹೋಗುತ್ತಾರೆ. ಈ ಜೇನನ್ನು ಬಿಡಿಸಬೇಕಾದರೆ, ಜೇನು ಇರುವ ಮರದಡಿ ಜೇನಿನ ನೇರಕ್ಕೆ ಬೆಂಕಿಯನ್ನು ಹಾಕಿ ಅದರ ಮೇಲೆ ಹಸಿ ಸೊಪ್ಪನ್ನು ಹಾಕಿ, ಹೊಗೆ ಎಬ್ಬಿಸುವರು. ಈ ಹೊಗೆಗೆ ಸಿಕ್ಕಿದ ಜೇನು ಹುಳುಗಳು ಜೇನುಗೂಡಿನಿಂದ ಎದ್ದು ಓಡುತ್ತವೆ. ಹೀಗೆ ಹುಳುಗಳು ಸಂಪೂರ್ಣವಾಗಿ ಹಾರಿ ಹೋದ ಮೇಲೆ ಮರಕ್ಕೆ ಹತ್ತಿ ಜೇನನ್ನು ಕೊಯ್ದು ಬುಟ್ಟಿಯೊಳಕ್ಕೆ ತುಂಬಿ ಕೆಳಗಡೆ ಸಾಗಿಸುವರು. ಮರದ ಕೆಳಗಡೆ ಇರುವ ವ್ಯಕ್ತಿಗಳು ಜೇನನ್ನು ತೆಗೆದು ಪಾತ್ರೆಗಳಿಗೆ ಹಿಂಡಿ ಗಾಜಿನ ಬುರುಡೆಗಳಿಗೆ ತುಂಬುವರು.

ಹೆಜ್ಜೇನು ಬಿಡಿಸುವ ಇನ್ನೊಂದು ತಂತ್ರವೆಂದರೆ, ಜೇನು ಗೂಡು ಇರುವ ಮರವನ್ನು ಹತ್ತುವಾಗ ಕೈಯಲ್ಲಿ ಪಂಜಿಯನ್ನು ಹಿಡಿದು ಮರವನ್ನೇರಿ ಆ ಪಂಜಿಯನ್ನು ಜೇನು ಗೂಡಿಗೆ ನೇರವಾಗಿ ಹಿಡಿಯುವನು. ಆಗ ಬೆಂಕಿಗೆ ಹುಳುಗಳು ಸತ್ತು ಕೆಳಗೆ ಬೀಳುವವು. ಆ ನಂತರ ಆತನು ಆ ಜೇನು ಗೂಡನ್ನು ಕಿತ್ತಿ ಜೇನಿನ ಬುಟ್ಟಿಗೆ ತುಂಬಿ ಕೆಳಗೆ ಸಾಗಿಸುವನು. ಒಂದು ಹೆಜ್ಜೇನು ಗೂಡು ಒಂದು ಕೊಡಪಾನ ಜೇನು ಆಗುವದು. ಇದು ತಿನ್ನಲು ಅಷ್ಟೊಂದು ರುಚಿಯಾಗಿರುವುದಿಲ್ಲ ಅಲ್ಲದೇ ಬೆಲೆಯು ಕಡಿಮೆ.

೪.೩.೧.೨ ತುಡುಜೇನು : ಈ ಜೇನಿನ ಹುಳುಗಳು ಗಾತ್ರದಲ್ಲಿ ಸಣ್ಣದಾಗಿರುತ್ತವೆ. ಈ ಜೇನು ಗೂಡುಗಳು ಮರದ ಪೊಟರೆಗಳಲ್ಲಿ ಗಿಡಕಂಟಿಗಳಲ್ಲಿ ಹೆಚ್ಚಾಗಿ ಇರುತ್ತವೆ. ಇದನ್ನು ಬಿಡಿಸಬೇಕಾದರೆ, ಅಷ್ಟೊಂದು ತ್ರಾಸದಾಯಕವಲ್ಲ. ಜೇನು ಗೂಡು ಇರುವ ಜಾಗವನ್ನು ಗುರುತಿಸಿ, ಆ ಗೂಡಿಗೆ ಕಾಡು ಸೊಪ್ಪಿನ ಎಲೆಗಳನ್ನು ಮೇಲೆ ಆಡಿಸುವುದರಿಂದ ಹುಳಗಳು ಮೇಲಕ್ಕೆ ಹಾರುವವು. ಅಷ್ಟೇ ಅಲ್ಲ ಅವು ಕೆಲವೊಂದು ಸಲ ಜೇನು ಬಿಡಿಸುವವನನ್ನು ಕಚ್ಚುತ್ತವೆ. ಜೇನು ಬಿಡಿಸುವವ ಕಚ್ಚಿದರೂ ಕೂಡಾ ಜೇನು ಗೂಡನ್ನು ಮರದ ರೆಂಬೆಯಿಂದ ಬೇರ್ಪಡಿಸಿ, ಜೇನು ತೊಟ್ಟಿಯಲ್ಲಿ ಹಾಕಿ ಕೆಳಗೆ ಇಳಿದ ನಂತರ ಅದನ್ನು ಹಿಂಡಿ ಗಾಜಿನ ಭರಣಿಯಲ್ಲಿ ಸಂಗ್ರಹಿಸುವನು. ಈ ಜೇನು ತುಪ್ಪ ಔಷಧಿ ಗುಣವನ್ನು ಹೊಂದಿರುತ್ತದೆ. ಅಲ್ಲದೆ ಹೆಜ್ಜೇನಿಗಿಂತ ಇದಕ್ಕೆ ಬೆಲೆ ಹೆಚ್ಚು. ತುಡು ಜೇನು ಹುಳುಗಳು ಕಚ್ಚಿದರೆ ಕೆಲವೊಂದು ರೋಗಗಳು ಮಾಯವಾಗುವುವೆಂದು ನಾಟಿ ವೈದ್ಯ ಕಾರ್ಗಲ್ಲಿನ ಕೇಶವ ಹಸ್ಲರ್ (ವಯಸ್ಸು ೫೭ ಉದ್ಯೋಗ: ನಾಟಿವೈದ್ಯ) ಹೇಳುತ್ತಾನೆ.

೪.೩.೧.೩ ಕೋಲುಜೇನು : ಇದು ಬಿದಿರಿನ ಸೀಳು ಜಾಗದಲ್ಲಿ ಜೇನು ಗೂಡನ್ನು ಕಟ್ಟುತ್ತವೆ. ಈ ಕೋಲು ಜೇನು ಹುಳುಗಳು ಕೂಡಾ ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ಬಿದಿರಿನ ಸೀಳಿದ ಭಾಗದಲ್ಲಿ ಜೇನು ಗೂಡನ್ನು ಕಟ್ಟುವುದರಿಂದ ಆ ಸೀಳಿದ ಜಾಗವನ್ನು ಸಾವಕಾಶವಾಗಿ ಕೊಯ್ದು ಅದರಲ್ಲಿರುವ ಹುಳಗಳನ್ನು ಜಾಡಿಸಿ, ಸೀಳಿದ ಭಾಗವನ್ನು ಕಡಿದು ಜೇನು ಸಂಗ್ರಹಿಸುವರು. ಈ ಜೇನು ಹಲವಾರು ಔಷಧಿಗಳಿಗಾಗಿ ಉಪಯೋಗಿಸುವರು.

ಇವರು ಎಷ್ಟೇ ಜೇನು ಬಿಡಿಸಲು ನಿಪುಣರಿದ್ದರೂ ಕೂಡಾ ಇವರಿಗೆ ಲಾಭ ಮಾತ್ರ ಕಡಿಮೆ. ಏಕೆಂದರೆ, ಟೆಂಡರ್ ಮೂಲಕ ಗುತ್ತಿಗೆ ಹಿಡಿದ ವ್ಯಕ್ತಿಗೆ ಸ್ವಲ್ಪ ಪ್ರಮಾಣದ ಜೇನನ್ನು ಕೊಟ್ಟು ಉಳಿದದ್ದನ್ನು ತೆಗೆದುಕೊಂಡು ಹೋಗುವನು. ಆತ ಕೊಟ್ಟ ಜೇನನ್ನು ಪೇಟೆಯಲ್ಲಿ ಮಾರಬೇಕಾದರೆ ದಲ್ಲಾಳಿಗಳು ಬೇಕು. ದಲ್ಲಾಳಿಗಳ ಮುಖಾಂತರ ಜೇನು ವ್ಯಾಪಾರ ಮಾಡಿದರೆ ಇವರಿಗೆ ಲಾಭ ಕಡಿಮೆ. ಅಲ್ಲದೆ ಇವರು ಬಿಳಿಗಿರಿ ರಂಗಯ್ಯನ ಬೆಟ್ಟದಲ್ಲಿ ವಾಸಿಸುವ ಸೋಲಿಗರ ಹಾಗೆ ಅರಣ್ಯ ಕಿರು ಉತ್ಪನ್ನ ಸಹಕಾರಿ ಸಂಘಗಳು ಕೂಡಾ ಇಲ್ಲ. ಆದ್ದರಿಂದ ಇವರು ಕಡಿಮೆ ಬೆಲೆಯಲ್ಲಿ ರೋಡಿನ ಬದಿಗೆ ಇಟ್ಟು ಮಾರುವರು.

೪.೩.೨ ಬೆತ್ತ : ಇದು ಬಿದಿರು ಪ್ರಬೇಧದ ಸಸ್ಯ. ಇದು ಹೊಸ ನಗರ ತಾಲೂಕಿನಿಂದ ಕೊಲ್ಲೂರು ಅರಣ್ಯದಿಂದ ಆಗುಂಬೆ ಬೆಟ್ಟದವರೆಗೂ ಹೇರಳವಾಗಿ ಸಿಗುವುದು. ಈ ಬೆತ್ತವನ್ನು ಅರಣ್ಯದಿಂದ ಅರಣ್ಯ ಸಿಬ್ಬಂದಿಯ ಕಣ್ಣು ತಪ್ಪಿಸಿ, ಕಡಿದು ಬೆತ್ತದಿಂದ ಕುರ್ಚಿ, ಅರಾಮ ಕುರ್ಚಿ, ಟಿಪಾಯಿ ಮಾಡುವವರಿಗೆ ಕಡಿಮೆ ಬೆಲೆಗೆ ಮಾರಿ ಹಣವನ್ನು ಸಂಪಾದಿಸುತ್ತಾರೆ.

೪.೩.೩ ನಿಷ್ಣೆಸೊಪ್ಪು (ದಾಲ್ಚಿನ್ನಿ) : ದಟ್ಟ ಅರಣ್ಯದಲ್ಲಿ ಬಲಿತ ನಿಷ್ಣೆಗಿಡವನ್ನು ನೋಡಿ ಅದರ ತೊಗಟೆಯನ್ನು ಸಣ್ಣ ಹರಿತವಾದ ಕುಡುಗೋಲಿನಿಂದ ತೆಗೆದು ಅದನ್ನು ನಾಲ್ಕಾರು ದಿನ ಬಿಸಿಲಿನಲ್ಲಿ ಒಣಗಿಸಿ, ಮಾರಾಟ ಮಾಡುತ್ತಾರೆ.

೪.೩.೪ ರಾಮಪತ್ರಿ : ಇದು ಸಾಂಬಾರು ಪದಾರ್ಥದ ಸಸ್ಯ. ರಾಮಪತ್ರಿ ಗಿಡಗಳು ಪಶ್ಚಿಮ ಘಟ್ಟದಲ್ಲಿ ಹೇರಳವಾಗಿ ಸಿಗುವ ಸಸ್ಯ ಸಂಪತ್ತು. ರಾಮಪತ್ರಿ ಗಿಡದಿಂದ ಬಲಿತ ಎಲೆಗಳನ್ನು ಕೀಳಿ ಅದನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿದ ನಂತರ ಮಾರುವರು. ಇದರಿಂದ ಸ್ವಲ್ಪ ಆದಾಯ ಬರುವುದು.

೪.೩.೫ ಸೀಗೆಕಾಯಿ : ಸೀಗೆಕಾಯಿಯೂ ಕೂಡಾ ಪಶ್ಚಿಮ ಘಟ್ಟಗಳಲ್ಲಿ ಹೇರಳವಾಗಿ ಸಿಗುವ ಸಂಪತ್ತು. ಇದನ್ನು ಅರಣ್ಯ ಕಿರು ಉತ್ಪಾದನೆ ಎಂದು ಪರಿಗಣಿಸಿ, ಅರಣ್ಯ ಇಲಾಖೆಯ ಟೆಂಡರ್ ಮೂಲಕ ಹರಾಜು ಹಾಕುವರು. ಟೆಂಡರ್ ಹಿಡಿದ ಗುತ್ತಿಗೆದಾರರು ಹಸಲರನ್ನು ಸೀಗೆಕಾಯಿ ಕೀಳಲು ಇವರನ್ನು ಕೂಲಿಗಳಾಗಿ ದುಡಿಸಿಕೊಳ್ಳುವರು. ಇವರಿಗೆ ಕೂಲಿಯ ಬದಲಾಗಿ ಸೀಗೆಕಾಯಿಯನ್ನೇ ಕೊಡುವರು. ಇವರು ತೆಗೆದುಕೊಂಡ ಸೀಗೆಕಾಯಿಯನ್ನು ಸುತ್ತಮುತ್ತಲಿನ ಸಂತೆಗಳಲ್ಲಿ ಮಾರಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುತ್ತಾರೆ. ಕೆಲವೊಮ್ಮೆ ಶಾಂಪೂ ತಯಾರು ಮಾಡುವ ಕಂಪನಿಗಳು ಕೂಡಾ ಇವರಿಂದ ಕಡಿಮೆ ಬೆಲೆಯಲ್ಲಿ ಸೀಗೆಕಾಯಿಯನ್ನು ಖರಿದಿಸುವರು.

೪.೩.೬ ಅಂಟೋಳಕಾಯಿ : ಇದು ಕೂಡಾ ಅರಣ್ಯ ಕಿರು ಉತ್ಪನ್ನವಾಗಿರುವುದರಿಂದ ಅರಣ್ಯ ವಲಯದ ಅನುಗುಣವಾಗಿ ಹರಾಜು ಹಾಕುತ್ತಾರೆ. ಅಂಟೋಳಕಾಯಿಯನ್ನು ಗಿಡದಿಂದ ಬಿಡಿಸಲು ಯುವಕರನ್ನು ನೇಮಿಸುವರು. ಇವರಿಗೂ ಕೂಲಿಯ ಬದಲಾಗಿ ಅಂಟೋಳ ಕಾಯಿಯನ್ನೇ ಕೊಡುವರು. ಇದನ್ನು ಅವರು ಪೇಟೆಯಲ್ಲಿ ಮಾರಿ ತಮ್ಮ ಜೀವನವನ್ನು ಸಾಗಿಸುವರು.

೪.೩.೭ ಉಪ್ಪೆಕಾಯಿ : ಇದನ್ನು ಉಪ್ಪಿನಕಾಯಿ ಹಾಕಲು ಬಳಸುತ್ತಾರೆ. ಇದು ಅರಣ್ಯದಲ್ಲಿ ಹೇರಳವಾಗಿ ಸಿಗುವುದರಿಂದ ಇದನ್ನು ಗುತ್ತಿಗೆ ಮುಖಾಂತರ ಹರಾಜು ಹಾಕುವದಿಲ್ಲ. ಹಸಲರು ಜನೇವರಿ ತಿಂಗಳಿನಿಂದ ಏಪ್ರೀಲ್ ತಿಂಗಳವರೆಗೆ ಅರಣ್ಯಗಳಲ್ಲಿ ಸಿಗುವುದರಿಂದ ಅವುಗಳನ್ನು ಕೀಳಿ ಪೇಟೆಯಲ್ಲಿ ಮಾರುವರು.

೪.೩.೮ ಕಾಡುಮೆಣಸು : ಇದು ಸಾಂಬಾರ ಪದಾರ್ಥ. ಇದು ಕಾಫಿ ತೋಟದಲ್ಲಿ ಬೆಳೆದ ಮೆಣಸಿಗಿಂತ ಹೆಚ್ಚು ಖಾರವಾಗಿರುತ್ತದೆ. ಇದು ಅರಣ್ಯದಲ್ಲಿ ತನ್ನಿಂದ ತಾನೇ ಬೆಳೆಯುತ್ತದೆ. ಇದನ್ನು ಕೂಡಾ ಅರಣ್ಯ ಕಿರು ಉತ್ಪನ್ನವೆಂದು ಪರಿಗಣಿಸಿ ಟೆಂಡರ್ ಮೂಲಕ ಹರಾಜು ಹಾಕುವರು. ಆದರೂ ಇವರು ಅರಣ್ಯ ಸಿಬ್ಬಂದಿ ಮತ್ತು ಗುತ್ತಿಗೆದಾರರ ಕಣ್ಣು ತಪ್ಪಿಸಿ, ಅರಣ್ಯದಿಂದ ತೆಗೆದುಕೊಂಡು ಬಂದು ಪೇಟೆಯಲ್ಲಿಟ್ಟು ಮಾರುವರು.

೪.೩.೯ ಧೂಪದ ಮರ : ಧೂಪದ ಮರದಿಂದ ಅದರ ಅಂಟನ್ನು ತೆಗೆದು ಅದನ್ನು ಒಂದು ಬತ್ತಿ ಆಕಾರದಲ್ಲಿ ಹೊಸೆದು ಪೇಟೆಯಲ್ಲಿಟ್ಟು ಮಾರುತ್ತಾರೆ. ಮಲೆನಾಡಿನಲ್ಲಿ ದೇವರ ಪೂಜೆಗಾಗಿ ಇದನ್ನು ವಿಶೇಷವಾಗಿ ಬಳಸುತ್ತಾರೆ.

೪.೩.೧೦ ಕಾಡು ಎಲೆ : ಕಾಡಿನಿಂದ ಎಲೆಗಳನ್ನು ಆರಿಸಿಕೊಂಡು ಅದನ್ನು ನೇರವಾಗಿ ಪೇಟೆಯಲ್ಲಿಟ್ಟು ಮಾರುತ್ತಾರೆ. ಈ ಎಲೆಗಳು ಅತ್ಯಂತ ಖಾರವಾಗಿರುವವು. ಇದನ್ನು ಅವರು ವಿಕಾಡೆಲೆ ಕವಳಹಿ ಎಂದು ಕರೆಯುತ್ತಾರೆ. ಈ ಕಾಡೆಲೆಗಳನ್ನು ಬೆಳ್ಳೆಣ್ಣೆ, ಗೀಜಗಾರು, ಬಚಗಾರು, ಹಾಡಿಕೇರಿಯ ಹಸಲರ ಹೆಣ್ಣು ಮಕ್ಕಳು ತಾಳುಗಪ್ಪಾ ಸಂತೆಯಲ್ಲಿ ಮಾರಾಟ ಮಾಡಿ ವಾರಕ್ಕೆ ಎರಡು ನೂರು ರೂಪಾಯಿಯಂತೆ ಆದಾಯ ತೆಗೆಯುವರು.

೪.೩.೧೧ ಬುರ್ಲುಮರ : ಇದು ಔಷಧಿಯ ಸಸ್ಯ. ಕಾಡಿನಲ್ಲಿರುವ ಬುರ್ಲುಮರವು ಡಿಸೆಂಬರ್‌ದಿಂದ ಮೇ ತಿಂಗಳವರೆಗೆ ಮೊಗ್ಗು ಬಿಡುವುದು. ಇದು ಕೂಡಾ ಕಿರು ಅರಣ್ಯ ಉತ್ಪನ್ನವಾಗಿರುವುದರಿಂದ ಅದನ್ನು ಟೆಂಡರ್ ಮೂಲಕ ಹರಾಜು ಹಾಕುತ್ತಾರೆ. ಆದರೂ ಕೂಡಾ ಇವರು ಬುರ್ಲುಮರದಿಂದ ಮೊಗ್ಗುಗಳನ್ನು ಕೊಯ್ದುಕೊಂಡು ಬರುವರು. ಇದನ್ನು ಆಯುರ್ವೇದಿಕ್ ಔಷಧ ತಯಾರು ಮಾಡುವವರಿಗೆ ಕೊಟ್ಟು ಅವರಿಂದ ಹಣವನ್ನು ತೆಗೆದುಕೊಳ್ಳುವರು. ಆಯುರ್ವೇದ ಔಷಧ ತಯಾರು ಮಾಡುವವರು ಟೆಂಡರ್ ಹಿಡಿದವರಿಂದ ತೆಗೆದುಕೊಳ್ಳದೇ ಇವರಿಂದ ಖರಿದಿಸುತ್ತಾರೆ. ಏಕೆಂದರೆ, ಇವರು ಇದನ್ನು ಕಡಿಮೆ ದರದಲ್ಲಿ ಕೊಡುತ್ತಾರೆ. ಇದನ್ನು ಕೇವಲ ನೂರು ರೂಪಾಯಿಗಳಿಗೆ ಅವರಿಂದ ಪಡೆದು, ಇವರು ಪ್ರತಿ ಕೆ.ಜಿ.ಗೆ ಸುಮಾರು ೧೫೦–೨೫೦ ರೂ, ಗಳವರೆಗೆ ಮಾರಾಟ ಮಾಡುತ್ತಾರೆ.

೪.೩.೧೨ ಮಲ್ಲಿಗೆ ಹೂ : ಘಟ್ಟದ ಕೆಳಗಿನ ಹಸಲರು ಅದರಲ್ಲಿಯೂ ಕೊಲ್ಲೂರಿನ ಸಮೀಪವಿರುವ ಹಳ್ಳಿಹೊಳೆ, ಕಬ್ಬಿನಾಲೆ, ಹಸಲರು ಬ್ರಹ್ಮಾವರ ಮತ್ತು ಹೆಬ್ರಿಯಿಂದ ಮಲ್ಲಿಗೆ ಹೂವಿನ ಸಸಿಗಳನ್ನು ತೆಗೆದುಕೊಂಡು ಬಂದು ತಮ್ಮ ತೋಟದಲ್ಲಿ ನಾಟಿ ಮಾಡುವರು. ಸಸಿ ಹೂ ಬಿಟ್ಟ ನಂತರ ಅದನ್ನು ಕೊಲ್ಲೂರಿನ ಮೂಕಾಂಬಿಕಾ ದೇವಾಲಯದ ಹತ್ತಿರ ಹೂವನ್ನು ದಂಡಿಗಳಾಗಿ ಕಟ್ಟಿ ಅದನ್ನು ಮಾರುವರು. ಒಬ್ಬ ಮಹಿಳೆ ಒಂದು ಋತುಮಾನದಲ್ಲಿ ಒಂದು ದಿವಸಕ್ಕೆ ಸುಮಾರು ೮೦ ರಿಂದ ೨೦೦ ರೂ.ಗಳವರೆಗೆ ಹಣ ಗಳಿಸುತ್ತಾಳೆ.

ಕೋಷ್ಟಕ– ೪.೫ ಸಮೀಕ್ಷೆ ಮಾಡಿದ ಹಸಲರ ವಾರ್ಷಿಕ ಆದಾಯ

ಜಿಲ್ಲೆಗಳು		೧೦೦೦೦ ಕ್ಕಿಂತ ಕಡಿಮೆ	೧೦೦೦೧ ರಿಂದ ೨೦೦೦೦	೨೦೦೦೧ ರಿಂದ ೩೦೦೦೦	೩೦೦೦೧ ರಿಂದ ೪೦೦೦೦	೪೦೦೦೧ ಕ್ಕಿಂತ ಅಧಿಕ	ಒಟ್ಟು
ಉತ್ತರ ಕನ್ನಡ	ಒಟ್ಟು	೯೦	೨೬	–	–	–	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೭೭.೬%	೨೨.೪%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೦.೫%	೪೦%	–	–	–	೨೨.೪%
	ಒಟ್ಟು ಪ್ರತಿಶತ	೧೭.೪%	೫%	–	–	–	೨೨.೪%
ಉಡುಪಿ	ಒಟ್ಟು	೭೨	೧೦	–	–	–	೮೨
	ಪ್ರತಿಶತ (ಜಿಲ್ಲೆಯೊಳಗೆ)	೮೬.೧%	೧೩.೯%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೪.೧%	೧೫.೪%	–	–	–	೧೩.೯%
	ಒಟ್ಟು ಪ್ರತಿಶತ	೧೨%	೧.೯%	–	–	–	೧೩.೯%
ಚಿಕ್ಕಮಗಳೂರು	ಒಟ್ಟು	೯೬	೧೦	–	–	–	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೯೦.೬%	೯.೪%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೯%	೧೫.೪%	–	–	–	೨೦.೫%
	ಒಟ್ಟು ಪ್ರತಿಶತ	೧೮.೬%	೧.೯%	–	–	–	೨೦.೫%

ದಕ್ಷಿಣ ಕನ್ನಡ	ಒಟ್ಟು	–	–	೩	–	೩	೬
	ಪ್ರತಿಶತ (ಜಿಲ್ಲೆಯೊಳಗೆ)	–	–	೫೦%	–	೫೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	೪೨.೯%	–	೫೦%	೧.೨%
	ಒಟ್ಟು ಪ್ರತಿಶತ	–	–	೦.೬%	–	೦.೬%	೧.೨%
ಶಿವಮೊಗ್ಗ	ಒಟ್ಟು	೧೯೧	೧೯	೪	–	೩	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೮೮%	೮.೮%	೧.೮%	–	೧.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೩.೫%	೨೯.೨%	೫೭.೧%	–	೫೦%	೪೨%
	ಒಟ್ಟು ಪ್ರತಿಶತ	೩೬.೯%	೩.೭%	೦.೮%	–	೦.೬%	೪೨%
ಒಟ್ಟು	ಒಟ್ಟು	೪೩೯	೬೫	೭	–	೬	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೮೪.೯%	೧೨.೬%	೧.೪%	–	೧.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	–	೧೦೦%	೧೦೦%
	ಒಟ್ಟು ಪ್ರತಿಶತ	೮೪.೯%	೧೨.೬%	೧.೪%	–	೧.೨%	೧೦೦%

ಕೋಷ್ಟಕ– ೪.೬ ಸಮೀಕ್ಷೆ ಮಾಡಿದ ಹಸಲರ ಕುಟುಂಬಗಳ ಆರ್ಥಿಕ ಸ್ಥಿತಿಗತಿ

ಜಿಲ್ಲೆಗಳು		ಕುಟುಂಬದ ಸ್ಥಿತಿ			ಒಟ್ಟು
		ಬಡತನ ರೇಖೆಗಿಂತ ಕೆಳಗೆ	ಬಡತನ	ಬಡತನ ಇಲ್ಲ	
ಉತ್ತರ ಕನ್ನಡ	ಒಟ್ಟು	೭೧	೪೫	–	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೬೧.೨%	೩೮.೮%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೨.೮%	೨೩.೯%	–	೨೨.೪%
	ಒಟ್ಟು ಪ್ರತಿಶತ	೧೩.೭%	೮.೭%	–	೨೨.೪%
ಉಡುಪಿ	ಒಟ್ಟು	೪೧	೩೧	–	೭೨
	ಪ್ರತಿಶತ (ಜಿಲ್ಲೆಯೊಳಗೆ)	೫೬.೯%	೪೩.೧%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೩.೨%	೧೬.೫%	–	೧೩.೯%
	ಒಟ್ಟು ಪ್ರತಿಶತ	೭.೯%	೬.೬%	–	೧೩.೯%
ಚಿಕ್ಕಮಗಳೂರು	ಒಟ್ಟು	೬೧	೪೦	೫	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೫೭.೫%	೩೭.೭%	೪.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೯.೬%	೨೧.೩%	೨೭.೮%	೨೦.೫%
	ಒಟ್ಟು ಪ್ರತಿಶತ	೧೧.೮%	೭.೭%	೧.೦%	೨೦.೫%
ದಕ್ಷಿಣ ಕನ್ನಡ	ಒಟ್ಟು	–	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	೩೩.೩%	೧.೨%
	ಒಟ್ಟು ಪ್ರತಿಶತ	–	–	೧.೨%	೧.೨%
ಶಿವಮೊಗ್ಗ	ಒಟ್ಟು	೧೩೮	೭೨	೭	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೬೩.೬%	೩೩.೨%	೩.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೪.೪%	೩೮.೩%	೩೮.೯%	೪೨%
	ಒಟ್ಟು ಪ್ರತಿಶತ	೨೬.೭%	೧೩.೯%	೧.೪%	೪೨%
ಒಟ್ಟು	ಒಟ್ಟು	೩೧೧	೧೮೮	೧೮	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೬೦.೨%	೩೬.೪%	೩.೫%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೬೦.೨%	೩೬.೪%	೩.೫%	೧೦೦%

೪.೪ ಪಶುಸಂಗೋಪನೆ

ಘಟ್ಟದ ಕೆಳಗಿನ ಮತ್ತು ಘಟ್ಟದ ಮೇಲಿನ ಹಸಲರು ಎಮ್ಮೆ ಮತ್ತು ಆಕಳುಗಳನ್ನು ಸಾಕುವರು. ಎಮ್ಮೆ ಮತ್ತು ಆಕಳುಗಳು ಹೆಚ್ಚಿಗೆ ಹಾಲು ಕರೆದರೆ ತಮಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದದ್ದನ್ನು ಹಾಲು ಉತ್ಪಾದಕರ ಮಂಡಳಿಗೆ ಒಂದು ಲೀಟರಗೆ ೧೫ ರೂಪಾಯಿಯಂತೆ ಬೆಲೆ ನಿಗದಿಪಡಿಸಿ, ಒಂದುವರೆ ಲೀಟರ ಹಾಲನ್ನು ಮಾತ್ರ ಹಾಲು ಉತ್ಪಾದಕರ ಮಂಡಳಿಗೆ ಕೊಡುವರು. ಏಕೆಂದರೆ, ಕೆಲವರು ಹಾಲು ಉತ್ಪಾದಕರ ಮಂಡಳಿಯ ಸದಸ್ಯತ್ವವನ್ನು ಪಡೆದಿರುವುದಿಲ್ಲ. ಆದ್ದರಿಂದ ಅವರು ಒಂದುವರೆ ಲೀಟರ ಹಾಲನ್ನು ಮಾತ್ರ ಹಾಕುವರು. ಹಾಲು ಉತ್ಪಾದಕ ಮಂಡಳಿಗೆ ಷೇರುದಾರರಾದ ಹಸಲರು ತಾವು ಬೇಕಾದಷ್ಟು ಹಾಲನ್ನು ಹಾಲು ಉತ್ಪಾದಕರ ಮಂಡಳಿಗೆ ಕೊಡಬಹುದು. ಇವರ ಹಾಲಿಗೆ ಸುಮಾರು ೧೯ ರಿಂದ ೨೧ ರೂಪಾಯಿಗಳ ವರೆಗೆ ಖರೀದಿಸುವರು. ಇದರ ಜೊತೆಗೆ ಕೋಳಿ, ಮೇಕೆ ಮುಂತಾದವುಗಳನ್ನು ಸಾಕುವರು.

ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳ ಸಂಖ್ಯೆ	–	**೫೧೭**
ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ	–	**೧೧೬**
ಕೋಳಿ ಮತ್ತು ಹಸುಗಳನ್ನು ಸಾಕಿದವರು	–	೯೩
ಎತ್ತುಗಳನ್ನು ಸಾಕಿದವರು	–	೦೯
ಪ್ರಾಣಿಗಳನ್ನು ಸಾಕದೇ ಇರುವವರು	–	೧೪
ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ	–	**೭೨**
ಕೋಳಿ ಮತ್ತು ಹಸುಗಳನ್ನು ಸಾಕಿದವರು	–	೬೧
ಎತ್ತುಗಳನ್ನು ಸಾಕಿದವರು	–	೦೭
ಪ್ರಾಣಿಗಳನ್ನು ಸಾಕದೇ ಇರುವವರು	–	೦೪
ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ	–	**೧೦೬**
ಕೋಳಿ ಮತ್ತು ಹಸುಗಳನ್ನು ಸಾಕಿದವರು	–	೯೩
ಎತ್ತುಗಳನ್ನು ಸಾಕಿದವರು	–	೦೪
ಪ್ರಾಣಿಗಳನ್ನು ಸಾಕದೇ ಇರುವವರು	–	೦೯
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ	–	**೦೬**
ಪ್ರಾಣಿಗಳನ್ನು ಸಾಕದೇ ಇರುವವರು	–	೦೬
ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ	–	**೨೧೭**
ಕೋಳಿ ಮತ್ತು ಹಸುಗಳನ್ನು ಸಾಕಿದವರು	–	೧೬೧
ಎಮ್ಮೆಗಳನ್ನು ಸಾಕಿದವರು	–	೧೭
ಎತ್ತುಗಳನ್ನು ಸಾಕಿದವರು	–	೩೮
ಪ್ರಾಣಿಗಳನ್ನು ಸಾಕದೇ ಇರುವವರು	–	೦೧

೪.೫ ಶ್ರಮ ವಿಭಜನೆ

ಚತುರ್ವರ್ಣಗಳಲ್ಲಿ ಶ್ರಮ ವಿಭಜನೆಯು ಗುಣ ಮತ್ತು ಕರ್ಮಗಳ ಆಧಾರದ ಮೇಲೆ ವಿಂಗಡನೆಯಾಗಿತ್ತು. ಇದಕ್ಕೆ ಒಂದು ಸಂಸ್ಕೃತದ ಶ್ಲೋಕ ಆಧಾರವಾಗಿದೆ. "ಚಾತುರ್ವರ್ಣಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ" ಆದರೆ ಬರಬರುತ್ತಾ ಶ್ರಮವಿಭಜನೆಯು ಲಿಂಗಗಳ ಆಧಾರದ ಮೇಲೆ ವಿಭಜನೆಗೊಂಡಿತ್ತು. ಇದಕ್ಕೆ ಒಂದು ಗಾದೆಯು ಆಧಾರವಾಗಿದೆ. "ಹೊಲಕ್ಕೆ ಪುರುಷ, ಒಲೆಗೆ ಸ್ತ್ರೀ". ಈ ಗಾದೆಯಂತೆ ಹೊರಗಿನ ಕೆಲಸವನ್ನು ಅಂದರೆ ತೋಟ ಮತ್ತು ಗದ್ದೆಯ ಕೆಲಸವನ್ನು ಪುರುಷರು ನಿಭಾಯಿಸುವರು. ಹೆಣ್ಣು ಮಗಳು ಮನೆಯ ಒಳಗಡೆ ಅಂದರೆ ಮಕ್ಕಳ ಪಾಲನೆ ಪೋಷಣೆ, ಅಡಿಗೆ ಮತ್ತು ಮನೆಯನು ಸ್ವಚ್ಛವಾಗಿಡುವುದು ಸ್ತ್ರೀಯರ ಕೆಲಸವಾಗಿತ್ತು. "ಶ್ರಮವಿಭಜನೆಯಿಂದ ಹೆಚ್ಚಿನ ಲಾಭ ಪಡೆಯಬಹುದೆಂದು ಅರ್ಥಶಾಸ್ತ್ರದ ಪಿತಾಮಹನಾದ ಆ್ಯಡಂ ಸ್ಮೀತ್‌ನ ಅಭಿಪ್ರಾಯ". (ಶಂಕರರಾವ್,ಚ ನ :೧೯೯೮ :೫೩)

ಹಿಂದೂ ಧರ್ಮದಲ್ಲಿ ಮಹಿಳೆಗೆ ವಿಶೇಷ ಸ್ಥಾನವಿದೆ. ತಾಯಿ ಮಗುವಿನ ಪ್ರಥಮ ಗುರು. ಆಕೆ ಮಗುವಿನ ಸರ್ವತೋಮುಖ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವಳು. ಮಗುವಿಗೆ ಸಾಮಾಜೀಕರಣದ ದೀಕ್ಷೆ ಮತ್ತು ಸಂಸ್ಕಾರ ನೀಡುವುದರಲ್ಲಿ ಅವಳದೆ ನಾಯಕತ್ವ.

ಮಹಿಳೆ ಮನೆಗೆ ಎಂದು ಹೇಳಬಹುದಾದರೂ ದ್ವಿಮುಖ ಪಾತ್ರದಲ್ಲಿ ಕಾರ್ಯನಿರ್ವಹಿಸುವುದನ್ನು ಹಸಲರಲ್ಲಿ ಕಾಣುತ್ತೇವೆ. ಮನೆಯಲ್ಲಿ ಅಡಿಗೆ ಮಾಡುವುದು, ಪಾತ್ರೆ, ಪಗಡೆ ಉಜ್ಜುವುದು, ಬಟ್ಟೆ ತೊಳೆಯುವುದು, ಮನೆಯ ಕಸಗೂಡಿಸುವುದು ಮತ್ತು ಸೆಗಣಿ / ಕೆಂಪು ಮಣ್ಣಿನಿಂದ ಸಾರಿಸುವುದು ಒಂದೆಡೆಯಾದರೆ ಇನ್ನೊಂದೆಡೆ ಭತ್ತವನ್ನು ನಾಟಿ ಮಾಡುವುದು, ಅದು ಕಟಾವಿಗೆ ಬಂದಾಗ ಕೊಯ್ಯುವುದು, ಸೊಪ್ಪನ್ನು ಒಟ್ಟುಗೂಡಿಸುವುದು, ಅಡಕೆ ಸುಲಿಯುವುದು ಮುಂತಾದ ಕಾರ್ಯಗಳ ಮೂಲಕ ಪುರುಷರಿಗೆ ನೆರವಾಗುವರು. ಅಡಕೆ ಸುಲಿಯುವ ಹಾಯಗತ್ತಿಯ ಮೇಲೆ ಕುಳಿತು ಅಡಕೆ ಸುಲಿಯಲು ಪ್ರಾರಂಭಿಸಿದರೆ, ಯಂತ್ರದಂತೆ ಪಟಪಟನೆ ಕಾರ್ಯನಿರ್ವಹಿಸುವರು.

ಕೆಲವೊಮ್ಮೆ ಇವರು ಅಡಕೆ ಸುಲಿಯಲು ಭಟ್ಟರ, ದಿವರ ಅಥವಾ ನಾಯಕರ ಮನೆಗೆ ಹೋಗಿ ಬರುವಾಗ ರಾತ್ರಿಯಾದರೆ ಅಡಕೆಯ ಮರವನ್ನು ಸೀಳಿ ಅದರ ಒಂದು ತುಂಡನ್ನು ತೆಗೆದು ಅದಕ್ಕೆ ಬೆಂಕಿ ಹಚ್ಚಿ ಮುನ್ನಡೆಯವರು. ಇದಕ್ಕೆ ಅವರು 'ದೊಂದಿ' ಎಂದು ಕರೆಯುತ್ತಾರೆ. ಏಕೆಂದರೆ, ರಾತ್ರಿಯಾದರೆ ಕಾಡು ಪ್ರಾಣಿಗಳ ಹಾವಳಿ ತುಂಬಾ ಇರುವುದರಿಂದ ಈ ದೊಂದಿ ಅವಶ್ಯಕ.

ಬೇಸಿಗೆಯ ಕಾಲದಲ್ಲಿ ಹಸಲರ ಮಹಿಳೆಯರು ದರಕಲು (ಒಣಗಿದ ಎಲೆ) ಗಳನ್ನು ಆಯಲು ಕಾಡಿಗೆ ಹೋಗುವರು. ಈ ದರಕಲುಗಳನ್ನು ಮಳೆಗಾಲದಲ್ಲಿ ಬೆಂಕಿ ಹೊತ್ತಿಸಲು ಉಪಯೋಗಿಸುವರು. ಉಳಿದ ದರಕಲುಗಳನ್ನು ಅಡಕೆಯ ತೋಟದಲ್ಲಿ ಸಾವಯವ ಗೊಬ್ಬರ ತಯಾರು ಮಾಡಲು ಉಪಯೋಗಿಸುತ್ತಾರೆ. ಅರಣ್ಯದಲ್ಲಿ ಬೇಸಿಗೆ ಕಾಲದಲ್ಲಿ ಕರಡು ಕಡಿಯುವುದನ್ನೂ ಮಾಡುತ್ತಾರೆ.

ಅದನ್ನು ತಂದು ದನ-ಕರುಗಳಿಗೆ ಹಾಕುತ್ತಾರೆ. ಉಳಿದದ್ದನ್ನು ಸಾವಯವ ಕೃಷಿಗೆ ಬಳಸುತ್ತಾರೆ. ಅರಣ್ಯದಲ್ಲಿಯ ಒಣಗಿದ ಕಟ್ಟಿಗೆಗಳನ್ನು ಆಯುವುದು ಕೂಡಾ ಮಹಿಳೆಯರ ಕೆಲಸ.

ಘಟ್ಟದ ಕೆಳಗಿನ ಹಸಲರಲ್ಲಿ ಅದರಲ್ಲಿಯೂ ಕಬ್ಬಿನಾಲೆ, ಹಳ್ಳಿಹೊಳೆ, ಕಾರೆಬೈಲು ಮತ್ತು ಕೊಲ್ಲೂರಿನ ಹಸಲರ ಹೆಣ್ಣು ಮಕ್ಕಳು ಹೂವನ್ನು ಮಾರುತ್ತಾರೆ. ಅಲ್ಲದೆ ಗೇರು ಬೀಜವನ್ನು ಬಿಡಿಸಲು ಕೂಡಾ ಹೆಣ್ಣು ಮಕ್ಕಳೆ ಹೋಗುತ್ತಾರೆ. 'ಸ್ವರ್ಣ ವಸ್ತ್ರ' ಯೋಜನೆಯನ್ವಯ ಹೆಣ್ಣು ಮಕ್ಕಳಿಗೆ ಜವಳಿ ಖಾತೆಯು ಬಟ್ಟೆ ನೇಯುವ ತರಬೇತಿ ಕೇಂದ್ರವನ್ನು ಪ್ರತಿ ಹಾಡಿಕೇರಿಯಲ್ಲಿಯೂ ತೆರೆದಿದೆ. ಈ ಕೆಲಸವನ್ನು ಮಹಿಳೆಯರೆ ಮಾಡುತ್ತಾರೆ.

ಹಸಲ ಪುರುಷರು ಮಾಡುವ ಕೆಲಸವೆಂದರೆ, ಅಡಕೆ ಗೊನೆ ಕೊಯ್ಯುವುದು, ಅಡಕೆ ಮರವನ್ನು ಹತ್ತಿ ಒಂದು ಮರದಿಂದ ಮತ್ತೊಂದು ಮರಕ್ಕೆ ಜಿಗಿಯುತ್ತಾ ಅಡಕೆ ಗೊನೆ ಕೊಯ್ಯುವಾಗ ಸಣ್ಣದಾದ ಮತ್ತು ಬಿಸಿಲಿನಿಂದ ಸೀಳಿದ ಮರವನ್ನು ಇವರು ಹತ್ತುವುದಿಲ್ಲ. ಏಕೆಂದರೆ, ಇವು ಮುರಿದು ಬೀಳುವ ಸಂಭವವಿರುತ್ತದೆಂದು ಅದನ್ನು ಹತ್ತುವುದಿಲ್ಲ.

ಹಸಲರ ಪುರುಷರು ಮಾಡುವ ಮತ್ತೊಂದು ಕೆಲಸವೆಂದರೆ, ಪ್ರಾಣಿಗಳನ್ನು ಭೇಟಿಯಾಡುವುದು, ಭತ್ತದ ರಾಶಿಯನ್ನು ಮಾಡುವುದು, ದಿವರ ಅಥವಾ ಭಟ್ಟರ ಮನೆಯಲ್ಲಿ ಕಟ್ಟಿಗೆಯನ್ನು ಒಡೆಯುವುದು, ಅರಣ್ಯ ಕಿರು ಉತ್ಪನ್ನಗಳಾದ ನಿಷ್ಣೆ ಸೊಪ್ಪು ಬಿಡಿಸುವುದಾಗಿದೆ.

ದೀಪಾವಳಿಯಂದು ಆಚರಿಸುವ ಅಂಟಿಗೆ ಪಂಟಿಗೆ ಅಥವಾ ಹಬ್ಬ ಹಾಡುವುದನ್ನು ಪುರುಷರೆ ಮಾಡುತ್ತಾರೆ.

ಅಡಕೆ ಮರದ ನಡುವಿನ ಸ್ಥಳದಲ್ಲಿ ಮಣ್ಣು ಹಾಕುವ ಕಾರ್ಯವನ್ನು ಪುರುಷರೇ ಮಾಡುತ್ತಾರೆ. ಇದರ ಜೊತೆಗೆ ಗದ್ದೆ ಉಳುವುದು, ತೋಟದಲ್ಲಿ ಖಾದಿಗೆ ತೆಗೆಯುವುದು, ಗದ್ದೆಗೆ ಗೊಬ್ಬರ ಮತ್ತು ಸೊಪ್ಪನ್ನು ಹಾಕುವುದು, ಭತ್ತದ ಕೆವಿ ಹೊರೆಯನ್ನು ಹೊತ್ತು ತರುವುದು ಮತ್ತು ಭತ್ತದ ಒಕ್ಕಲು ಮಾಡುವುದು ಇವರ ಕೆಲಸವಾಗಿದೆ.

೪.೬ ವಿನಿಮಯ ಪದ್ಧತಿ

ನಾಣ್ಯಗಳ ಚಲಾವಣೆ ಅಸ್ತಿತ್ವದಲ್ಲಿ ಬರುವುದಕ್ಕಿಂತ ಪೂರ್ವದಲ್ಲಿ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಇದಕ್ಕೆ ಅರ್ಥಶಾಸ್ತ್ರಜ್ಞರು ವಿನಿಮಯ ಪದ್ಧತಿ ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದ ಒಂದು ಗಾದೆ ಮಾತಿನಂತೆ "ಕಲ್ಲವ್ವ ಕಡಬು ಕೊಟ್ಟರೆ, ಮಲ್ಲವ್ವ ದೋಸೆ ಕೊಡುತ್ತಾಳೆ" ಇದು ವಿನಿಮಯ ಪದ್ಧತಿಯ ಮಹತ್ವವನ್ನು ತಿಳಿಸಿಕೊಡುತ್ತದೆ.

ಹಸಲರು ಬಡವರಾಗಿರುವುದರಿಂದ ಅವರಲ್ಲಿ ಅಷ್ಟೇನೂ ವಿನಿಮಯ ಪದ್ಧತಿ ನಡೆಯದೇ ಇರದಿದ್ದರೂ ಸ್ವಲ್ಪ ಪ್ರಮಾಣದ ವಿನಿಮಯ ಪದ್ಧತಿ ಇವರಲ್ಲಿದೆ. ಇವರಲ್ಲಿ ಊಟಕ್ಕೆ ಉಪಯೋಗಿಸುವ ಭತ್ತವನ್ನು ಯಾರಿಗಾದರೂ ಕಡಿಮೆ ಬಿದ್ದರೆ ಯಾರ ಹತ್ತಿರ ಭತ್ತ ಜಾಸ್ತಿ ಇರುವುದೋ ಅವರು

ಅವನಿಗೆ ಕೊಳಗದ ಮುಖಾಂತರ ಅಳೆದು ಕೊಡುವನು. ತೆಗೆದುಕೊಂಡ ವ್ಯಕ್ತಿ ಭತ್ತ ಬಂದ ನಂತರ ತಾನು ಎಷ್ಟು ತೆಗೆದುಕೊಂಡಿರುವನೋ ಅಷ್ಟನ್ನು ವಾಪಸ್ಸು ಮಾಡುವನು.

ಹಸಲರಲ್ಲಿ ತಾವು ಉಪಯೋಗಿಸುವ ಮೀನಿನ ಸಾರು, ಚಿಕನ್ ಸಾರು, ಮಟನ್ ಸಾರು ಯಾರು ಮಾಡಿರುವುದಿಲ್ಲವೋ ಅವರಿಗೆ ಇವರು ಕೊಡುವರು. ಅವರು ಮಾಡಿದಾಗ ಇವರು ಮಾಡದೇ ಇದ್ದಾಗ ಇವರು ತಿರುಗಿ ಕೊಡುವರು.

ಮಲೆನಾಡಿನಲ್ಲಿ ಸತತವಾಗಿ ಮಳೆ ಸುರಿಯುವುದರಿಂದ ದಿನನಿತ್ಯದ ಸಾಮಾನುಗಳ ಕೊರತೆಯುಂಟಾದಾಗ ಬೇರೆಯವರಿಂದ ತೆಗೆದುಕೊಳ್ಳುವರು. ಮಳೆ ನಿಂತ ನಂತರ ಪೇಟೆಗೆ ಹೋಗಿ ಸಾಮಾನುಗಳನ್ನು ಖರೀದಿಸಿ, ಅವರಿಗೆ ಮರಳಿ ಕೊಡುವರು.

ಈ ಪದ್ಧತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅದು ಕುಟುಂಬಗಳ ಮಧ್ಯ ಸಾಮರಸ್ಯವನ್ನುಂಟು ಮಾಡುತ್ತದೆ. ಅಷ್ಟೇ ಅಲ್ಲ, ಅವರೀರ್ವರ ಕುಟುಂಬಗಳ ಮಧ್ಯ ಸಹಕಾರವನ್ನು ವೃದ್ಧಿಸುತ್ತದೆ.

ಹಸಲರ ಹಾಡಿಕೇರಿಗಳಲ್ಲಿ ತಮಗೆ ಯಾವ ವಸ್ತುವಿನ ಅವಶ್ಯಕತೆ ಇರುವುದೋ ಅದನ್ನು ಬೇರೆಯವರಿಂದ ಪಡೆದು ಅವರ ಹತ್ತಿರ ಬಂದಾಗ ವಾಪಸ್ಸು ಕೊಡುತ್ತಾರೆ. ಇದು 'ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ' ಎಂಬ ತತ್ವವನ್ನು ಬಿಂಬಿಸುತ್ತದೆ.

೪.೭ ಆಹಾರ ಸಂರಕ್ಷಣೆ

ಅಕ್ಕಿ ಗೂಡನ್ನು ವಾಟೆಯಿಂದ ತಯಾರಿಸಿ, ಅದಕ್ಕೆ ಸಗಣಿ ಸಾರಿಸಿ, ಅಕ್ಕಿಯನ್ನು ಸಂರಕ್ಷಣೆ ಮಾಡುತ್ತಾರೆ. ಭತ್ತವನ್ನು ವಾಟೆಯಿಂದ ತಯಾರಿಸಿದ ಕಣಜಕ್ಕೆ ಸಗಣಿ ಸಾರಿಸಿ, ಚೆನ್ನಾಗಿ ಒಣಗಿದ ಬಳಿಕ ಭತ್ತವನ್ನು ತುಂಬುತ್ತಾರೆ. ಇದಕ್ಕೆ ಭತ್ತದ "ಕಣಜ" ಎಂದು ಕರೆಯುತ್ತಾರೆ. ಖಾರದ ಪುಡಿಯನ್ನು ಇವರು ಸಂರಕ್ಷಿಸುವದಿಲ್ಲ. ಏಕೆಂದರೆ ಅವತ್ತಿನ ಖಾರವನ್ನು ಅಂದೇ ತಯಾರಿಸಿಕೊಂಡು ಅಡುಗೆ ಮಾಡಿ ಊಟ ಮಾಡುತ್ತಾರೆ. ಆದರೆ ಮೆಣಸಿನ ಕಾಯಿಯನ್ನು ಅವರು ಸಂರಕ್ಷಿಸುತ್ತಾರೆ. ಮೆಣಸಿನ ಕಾಯಿಯನ್ನು ಚೆನ್ನಾಗಿ ಒಲೆಯ ಮೇಲೆ ಹುರಿದು ಆರಿಸಿದ ನಂತರ ಗೋಣಿ ಚೀಲದಲ್ಲಿ ಅದನ್ನು ಸಂರಕ್ಷಿಸುತ್ತಾರೆ. ಬಲಿತ ಬಾಳೆಕಾಯಿಯನ್ನು ಬೋಳಾಲು ಸೊಪ್ಪಿನಿಂದ ಕಟ್ಟಿ ಮನೆಯ ಮೂಲೆಯಲ್ಲಿ ಇಟ್ಟುಕೊಂಡು ಇಪ್ಪತ್ತು ದಿವಸಗಳ ವರೆಗೂ ಅದನ್ನು ತಿನ್ನಬಹುದು. ಇವರು ಭಟ್ಟಿ ಸರಾಯಿಯನ್ನು ಕೂಡ ತಯಾರು ಮಾಡುತ್ತಾರೆ.

೪.೭.೧ ಗೇರು ಸರಾಯಿ

ಗೇರು ಕಾಯಿಯನ್ನು ಅಚ್ಚು ಬೆಲ್ಲದಲ್ಲಿ ಹಾಕಿ ಚೆನ್ನಾಗಿ ಕುಲಿಕಿ ಇಪ್ಪತ್ತೈದು ದಿವಸಗಳವರೆಗೆ ಕಾಡಿನಲ್ಲಿ ಹೂತಿಡುವರು. ಕೊಳೆತ ನಂತರ ಚೆನ್ನಾಗಿ ಕುಲಿಕಿ ಒಂದು ಪಾತ್ರೆಯಲ್ಲಿ ಹಾಕಿ ಕಾಯಿಸಿ ಭಟ್ಟಿ ಇಳಿಸುವರು. ನಂತರ ಇದನ್ನು ಮಣ್ಣಿನ ಮಡಿಕೆಯಲ್ಲಿ ಸಂರಕ್ಷಿಸಿ, ಬೇಕಾದಷ್ಟು ದಿವಸ ಇಡಬಹುದು. ಸಾರಾಯಿಯನ್ನು ಮನೆಯಲ್ಲಿ ಹಿರಿಯರು ಇದ್ದರೆ ಕಿರಿಯರು ಸೇವಿಸುವದಿಲ್ಲ.

ಮದುವೆ ಮಂಟಪದಲ್ಲಿಯೂ ಕೂಡ ಇವರು ಕುಡಿಯುವದಿಲ್ಲ. ಒಂದು ವೇಳೆ ಕುಡಿದರೆ "ಕಟ್ಟು"(ದಂಡ) ಹಾಕುವರು.

೪.೭.೨ ಬಾಳೆಕಾಯಿ ಸರಾಯಿ

ಬಲಿತ ಪಚ್ಚೆ ಬಾಳಿಕಾಯಿಯನ್ನು ಅಚ್ಚು ಬೆಲ್ಲದಲ್ಲಿ ಸೇರಿಸಿ, ಕುಲಿಕಿ ಇಪ್ಪತ್ತೈದು ದಿವಸಗಳ ವರೆಗೆ ಅರಣ್ಯದಲ್ಲಿ ಹೂತಿಟ್ಟು ಒಂದು ಪಾತ್ರೆಯಲ್ಲಿ ಹಾಕಿ ಕಾಯಿಸಿ ಭಟ್ಟಿ ಇಳಿಸಿದ ನಂತರ ಅದನ್ನು ಮಡಿಕೆಯಲ್ಲಿ ಸಂರಕ್ಷಿಸಿ ಇಟ್ಟು ಬೇಕಾದಾಗ ಕುಡಿಯುತ್ತಾರೆ. ಆದರೆ ಈ ಸರಾಯಿಯನ್ನು ಮಾರಾಟ ಮಾಡುವದಿಲ್ಲ.

೪.೭.೩ ಮಾವಿನ ಕೊಟ್ಲು

ಚೆನ್ನಾಗಿ ಹಣ್ಣಾದ ಮಾವಿನ ಹಣ್ಣನ್ನು ಅದುಮಿ ಒಂದು ತೆಳುವಾದ ಬಿಳಿಯ ಬಟ್ಟೆಯ ಮೇಲೆ ಅದನ್ನು ಹಿಸುಕಿದಾಗ ಆ ಬಟ್ಟೆಯ ಮೇಲೆ ಮಾವಿನ ರಸ ಬೀಳುವದು. ಆ ಬಿಳಿಯ ಬಟ್ಟೆಯನ್ನು ಚೆನ್ನಾಗಿ ಒಣಗಿಸಿದಾಗ ಅದರ ಮೇಲಿದ್ದ ರಸವು ಒಣಗುವುದು. ಆಗ ಬಟ್ಟೆಯಿಂದ ಒಣಗಿದ ಮಾವಿನ ರಸವನ್ನು ಬೇರ್ಪಡಿಸಿ, ಅದನ್ನು ಅಡಕೆ ಹಾಳಿಯಲ್ಲಿಟ್ಟು, ಬೇಕೆಂದಾಗ ಅದನ್ನು ಬಿಸಿ ನೀರಿನಲ್ಲಿ ಹಾಕಿದಾಗ ಮಾವಿನ ಕೊಟ್ಲು ತಯಾರಾಗುತ್ತದೆ. ಇದನ್ನು ಕಜ್ಜಾಯದ ಜೊತೆ ಊಟ ಮಾಡಬಹುದು.

೪.೭.೪ ಕುನ್ನೇರಲ ಗಿಡದ ಚಹಾ

ಒಂದು ಪಾತ್ರೆಯಲ್ಲಿ ನೀರು ಹಾಕಿ ಅದಕ್ಕೆ ಸಕ್ಕರೆ ಬೆರೆಸಿ, ಕುದಿಯುವವರೆಗೂ ಅದನ್ನು ಕಾಯಿಸಬೇಕು. ಕುದಿಯಲು ಪ್ರಾರಂಭವಾದರೆ ಕುನ್ನೇರಲ ಗಿಡದ ಹಸಿ ಎಲೆಗಳನ್ನು ಅದರಲ್ಲಿ ಹಾಕಿ ಮತ್ತೆ ಕಾಯಿಸಬೇಕು. ಇದಕ್ಕೆ ಹಾಲು ಬೆರೆಸುವಂತಿಲ್ಲ. ಈ ಕಷಾಯ (ಚಹಾ) ದೇಹಕ್ಕೆ ಉತ್ತೇಜನ ಕೊಡುತ್ತದೆ. ಇದರಿಂದ ಕಫ ಆಗುವದಿಲ್ಲ.

೪.೮ ಆಯುರ್ವೇದಿಕ್ ಪದ್ಧತಿ

ಪಶ್ಚಿಮ ಘಟ್ಟಗಳಿಂದ ಆವರಿಸಿದ ಹಚ್ಚಹಸರಿನ ವನ ಸಿರಿಯ ಗರ್ಭದಲ್ಲಿ ಹಸಲರು ವಾಸಿಸುತ್ತಾರೆ. ಇವರು ಪ್ರಕೃತಿ ಮಡಿಲಲ್ಲಿ ವಾಸ ಮಾಡುವದರಿಂದ ಸ್ವಚ್ಛ ಗಾಳಿ ಸ್ವಾಭಾವಿಕವಾಗಿ ಸಿಗುತ್ತದೆ. ಆದ್ದರಿಂದ ಅವರು ಉತ್ತಮ ಆರೋಗ್ಯವನ್ನು ಹೊಂದಿರುವರು. ಇವರು ಯಾವಾಗಲೂ ದುಡಿಮೆ ಮಾಡುವದರಿಂದ ಕಾಡಿನ ವಾಸನೆ ಹಿರಿಕೊಳ್ಳುವದರಿಂದ ಸಹಜವಾಗಿ ಸದೃಢಕಾಯದವರಾಗಿರುತ್ತಾರೆ. ಆದರೂ ಕೂಡ ಕೆಲವೊಂದು ಕಾಯಿಲೆಗಳು ಅವರನ್ನು ಭಾದಿಸುವದುಂಟು. ಹಸಲರು ಸಾಂಪ್ರದಾಯಿಕ ವಾಗಿ ನಂಬಿಕೊಂಡು ಬಂದ ಹಾಗೂ ಕಾಡಿನಲ್ಲಿ ಸಿಗುವ ಗಿಡ ಮೂಲಿಕೆಗಳಿಂದ ಔಷಧ ತಯಾರಿಸಿ ತಮಗೆ ಬರುವ ಹಲವಾರು ರೋಗಗಳನ್ನು ವಾಸಿ ಮಾಡಿಕೊಳ್ಳುತ್ತಾರೆ. ಈ ಕೆಳಗಿನಂತೆ ವಿವಿಧ ರೋಗಗಳಿಗೆ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಗಳನ್ನು ಸೇವಿಸುವ ಕ್ರಮಗಳನ್ನು ಅನುಸರಿಸುತ್ತಾರೆ.

೪.೮.೧ ಗುದ್ದಮ್ಮನ ಕಾಯಿಲೆ

ಗುದ್ದಮ್ಮನ ಕಾಯಿಲೆ ಅಂದರೆ ಮನುಷ್ಯ ಸಾಯುವದೇ ಈ ಕಾಯಿಲೆಯ ಗುಣ. ಈ ಕಾಯಿಲೆ ಬಂದ ವ್ಯಕ್ತಿಗೆ ಮರಗಳಿಂದ ಬೇರ್ಪಡಿಸಿದ ಜಿಗಳಿ ಗೂಡನ್ನು ತಂದು ಹುಳ ಮತ್ತು ಮೊಟ್ಟೆಗಳನ್ನು ಬೇರ್ಪಡಿಸಿ, ಮೊಟ್ಟೆಗಳಿಗೆ ಕಾಡು ಮೆಣಸು ಹಾಕಿ ಒರಳಲ್ಲಿ ಕುಟ್ಟಿ ದಿನಾಲು ಮೂರು ಗುಳಿಗೆ ಮಾಡಿ ನುಂಗುವುದರಿಂದ ಈ ರೋಗ ವಾಸಿಯಾಗುತ್ತದೆ. ಆದರೆ ಇಂದು ಇಂಥ ರೋಗಗಳನ್ನು ಕಾಣುವದಿಲ್ಲವೆಂದು ರಾಮಪ್ಪ ಕನ್ನಪ್ಪ ಕುಳಕಾರು (ವಯಸ್ಸು ೭೮ ವೃತ್ತಿ ಕೂಲಿ, ಸಾ॥ ಕುಳಕಾರ) ಹೇಳುತ್ತಾರೆ.

೪.೮.೨ ತಂಡಿ (ಚಳಿ)

ಚಳಿ ಬಂದ ರೋಗಿಗೆ ಅಮೃತ ಬಳ್ಳಿಯ ಕಾಂಡವನ್ನು ತೆಗೆದು ಅದಕ್ಕೆ ಮೆಣಸು, ಜೀರಿಗೆ, ಬಳ್ಳೊಳ್ಳಿ, ಬೆಲ್ಲ ಹಾಕಿ ಕುದಿಸಿ ಆರಿಸಿದ ನಂತರ ಈ ಕಷಾಯ ಕುಡಿಸಿದರೆ ಚಳಿ ಕಡಿಮೆಯಾಗುತ್ತದೆ.

೪.೮.೩ ನಾಯಿಗೆ ಹುಚ್ಚುಹಿಡಿದರೆ

ನಾಯಿಗೆ ಹುಚ್ಚುಹಿಡಿದರೆ, ಉಡದ ತಲೆಯನ್ನು ತಂದು ಬಚ್ಚಲು ಮನೆಯಲ್ಲಿ ಒಲೆಯ ಮೇಲೆ ನೇತುಹಾಕಿ ಅದು ಸಂಪೂರ್ಣವಾಗಿ ಒಣಗಿದ ನಂತರ ಅದನ್ನು ತೆಯ್ದು ನಾಯಿಗೆ ಕುಡಿಸಿದರೆ ಹುಚ್ಚು ಬಿಡುತ್ತದೆ.

೪.೮.೪ ಜ್ವರ

ಜ್ವರ ಬಂದ ರೋಗಿಗೆ ನಿಂಬೆ ಸೊಪ್ಪು, ಕಂಬಿ ಸೊಪ್ಪು, ಪಚ್ಚೆತ್ತಾನ ಮೂರನ್ನು ಜೊತೆಗೆ ಮೆಣಸಿನಕಾಳು, ಬಳ್ಳೊಳ್ಳಿಗಳೊಂದಿಗೆ ಕುಟ್ಟಿ ಅದನ್ನು ಒಂದು ಬಾಣಲೆಯಲ್ಲಿ ಹಾಕಿ ಕುದಿಸಿ ಆರಿಸಿದ ನಂತರ ರೋಗಿಗೆ ಕುಡಿಸುವುದರಿಂದ ರೋಗ ವಾಸಿಯಾಗುತ್ತದೆ.

೪.೮.೫ ಪಾರ್ಸಿ (ಪಾರ್ಶ್ವವಾಯು)

ಈ ರೋಗಿಗೆ ಕಾಡು ಮರದ ಚಕ್ಕೆಯನ್ನು ಕುಟ್ಟಿ ಎಳೆನೀರಿನಲ್ಲಿ ಕೂಡಿಸಿ, ಕುಡಿಯುವದರಿಂದ ಈ ರೋಗ ವಾಸಿಯಾಗುತ್ತದೆ.

ಇದೇ ರೋಗಕ್ಕೆ ಇನ್ನೊಂದು ಮದ್ದು ಇದೆ. ಅದು ಯಾವುದೆಂದರೆ ಕಾಡು ಮರದ ಚಕ್ಕೆಯನ್ನು ತಂದು ಕುಟ್ಟಿ ಇದಕ್ಕೆ ಬಳ್ಳೊಳ್ಳಿ, ಮೆಣಸಿನಕಾಳು ಹಾಕಿ ಕುದಿಸಿ, ಆರಿಸಿದ ನಂತರ ಈ ಕಷಾಯ ಕುಡಿದರೆ ಈ ರೋಗ ಸಂಪೂರ್ಣ ಗುಣಮುಖವಾಗುತ್ತದೆ.

೪.೮.೬ ಎಲುಬು ಮುರಿದರೆ

ಕಾಡು ಸೊಪ್ಪನ್ನು ತಂದು ಅದನ್ನು ಅರೆದು ೨೧ ಗುಳಿಗೆಗಳನ್ನು ಮಾಡಿ ಆಕಳ ತುಪ್ಪದ ಜೊತೆ ಸೇರಿಸಿ ತಿನ್ನಬೇಕು. ಇದರಿಂದ ಎಲುಬು (ಮೂಳೆ) ಮೊದಲಿನಂತೆ ಕೂಡುತ್ತದೆ. ಇನ್ನೊಂದು ಚಿಕಿತ್ಸಾ ಕ್ರಮವಿದೆ. ಅದು ಯಾವುದೆಂದರೆ, ಅತ್ತಿ ಗಿಡದ ಟೊಂಗೆಗಳಿಗೆ ಕಲ್ಲಿನಿಂದ ಜಜ್ಜಿದಾಗ ಹಾಲು ಬರುತ್ತದೆ. ಆ ಹಾಲನ್ನು ಒಂದು ತಿಳುವಾದ ಬಟ್ಟೆಗೆ ಹಾಕಿ ಆ ಬಟ್ಟೆಯನ್ನು ಎಲಬು (ಮೂಳೆ) ಮುರಿದ ಜಾಗಕ್ಕೆ ಬಿಗಿಯಾಗಿ ಕಟ್ಟುವುದರಿಂದ ಎಲುಬು ಹತ್ತುತ್ತದೆ.

೪.೮.೭ ವಾತ ಮತ್ತು ಕಫ

ಕಾಡು ಸೊಪ್ಪನ್ನು ತಂದು ಒಂದು ಲಿಂಬೆ ಹಣ್ಣಿನ ರಸ ಸೇರಿಸಿ ಅರೆದು, ಜೇನು ತುಪ್ಪದ ಜೊತೆ ತಿನ್ನುವುದರಿಂದ ವಾತ ಮತ್ತು ಕಫ ಕಡಿಮೆಯಾಗುತ್ತದೆ.

೪.೮.೮ ಚರ್ಮರೋಗ

ಕಾಡು ಸೊಪ್ಪನ್ನು ತಂದು ಅದಕ್ಕೆ ಶೇಂಗಾಎಣ್ಣೆ, ಕೊಬ್ರಿಎಣ್ಣೆ ಮತ್ತು ಹರಳೆಣ್ಣೆ ಈ ಮೂರು ಸಮ ಭಾಗದಲ್ಲಿ ಹಾಕಿ ಆ ಸೊಪ್ಪನ್ನು ಅರೆದು ಬೇಯಿಸಿ, ಆರಿಸಿದ ನಂತರ ಸ್ನಾನ ಮಾಡುವ ಪೂರ್ವದಲ್ಲಿ ಅಂದರೆ ಒಂದು ತಾಸು ಮುಂಚಿತವಾಗಿ ಹಚ್ಚಿಕೊಂಡು ಸ್ನಾನ ಮಾಡಿದರೆ ಚರ್ಮರೋಗ ವಾಸಿಯಾಗುತ್ತದೆ. ಸ್ನಾನ ಮಾಡುವಾಗ ಸೋಪನ್ನು ಹಚ್ಚಬಾರದು. ಆದರೆ ಸೀಗೆಕಾಯಿ ನಡೆಯುತ್ತದೆ, ಚರ್ಮರೋಗಕ್ಕೆ ಇದು ತುಂಬ ಒಳ್ಳೆಯದು.

೪.೮.೯ ಸಕ್ಕರೆ ಕಾಯಿಲೆ

ಕಾಡು ಸೊಪ್ಪನ್ನು ತಂದು ಒಣಗಿಸಿ ಕಲ್ಲಿನಿಂದ ಸಣ್ಣಗೆ ಜಜ್ಜಿ ಪುಡಿಮಾಡಿ ದಿನಾಲು ಒಂದು ಚಮಚ ಪುಡಿ ತೆಗೆದು ಕೊಂಡು ೧ ಲೋಟ ನೀರು ಕುಡಿದರೆ ಸಕ್ಕರೆ ಕಾಯಿಲೆ ವಾಸಿಯಾಗುತ್ತದೆ.

೪.೮.೧೦ ಚವಿ

(ಗರ್ಭಶ್ರಾವ) ಕಾಡು ಮಲ್ಲಿಗೆ (ತಿರುಗಲ ಬಳ್ಳಿ) ಬಳ್ಳಿಯನ್ನು ತಂದು ಕಲ್ಲಿನಿಂದ ಜಜ್ಜಿ, ಆಕಳ ಹಾಲಿಗೆ ತಾಂಬಾಲೂ, ಕಲ್ಲು ಸಕ್ಕರೆ, ಸೇರಿಸಿ, ಒಂದು ಲೋಟ ಮಿಶ್ರಣವನ್ನು ಏಳು ದಿವಸಗಳವರೆಗೆ ಹೊಟ್ಟೆಯಲ್ಲಿ ತೆಗೆದುಕೊಂಡರೆ ರೋಗ ವಾಸಿಯಾಗುತ್ತದೆ.

೪.೮.೧೧ ಕಣ್ಣುನೋವು

ಕಾಡು ಮಲ್ಲಿಗೆ ಬಳ್ಳಿಯನ್ನು ಒಂದು ಮುಷ್ಠಿಯಲ್ಲಿ ಹಿಡಿದು ಎರಡು ಬದಿ ಕತ್ತರಿಸಿ, ಮೇಲ್ಮುಖವಾಗಿ ಹಿಡಿದುಕೊಂಡು ಬಂದು ಆ ಬಳ್ಳಿಯ ರಸವನ್ನು ಕಣ್ಣಿನಲ್ಲಿ ಹಾಕುವುದರಿಂದ ರೋಗ ವಾಸಿಯಾಗುತ್ತದೆ.

೪.೮.೧೨ ಹಲ್ಲು ನೋವು

ನಾಯಿ ವಾಟೆಯ ಗಿಡಕ್ಕೆ ಸೂರ್ಯನ ವಿರುದ್ಧ ದಿಕ್ಕಿನಲ್ಲಿ ಆ ಗಿಡಕ್ಕೆ ಕಲ್ಲಿನಿಂದ ಜಜ್ಜಿ ತೆಗೆದ ಚಕ್ಕೆಯನ್ನು ಬಾಯಲ್ಲಿ ಹಿಡಿಯುವದರಿಂದ ಹಲ್ಲು ನೋವು ವಾಸಿಯಾಗುತ್ತದೆ.

ಇನ್ನೊಂದು ಚಿಕಿತ್ಸೆ ಇದೆ. ಯಾವುದೆಂದರೆ, ಲವಂಗವನ್ನು ಉಗುರಿನಿಂದ ಅದರ ಮೇಲಿನ ಸಿಪ್ಪೆಯನ್ನು ತೆಗೆದು ಅದನ್ನು ನೋವು ಆದ ಜಾಗದಲ್ಲಿ ಇಟ್ಟು ಸುಮಾರು ೩೦ ನಿಮಿಷಗಳವರೆಗೆ ಬಾಯಲ್ಲಿ ಹಿಡಿದು ಕೊಳ್ಳುವುದರಿಂದ ಹಲ್ಲು ನೋವು ವಾಸಿಯಾಗುತ್ತದೆ.

೪.೮.೧೩ ಕಪಾಲಗುರು

ಚುಕ್ಕಿ ಮರದ ಚಕ್ಕಿಯನ್ನು ತಂದು ಕೊಬ್ರಿಎಣ್ಣೆಯಲ್ಲಿ ಕುದಿಸಿ ಆರಿಸಿದ ನಂತರ ಕಿವಿಯಲ್ಲಿ ಹಾಕುವುದರಿಂದ ಕಪಾಲಗುರು ವಾಸಿಯಾಗುತ್ತದೆ.

೪.೮.೧೪ ಪಿತ್ತ

ರೇಷ್ಮೆ ಸೊಪ್ಪಿನ ಅರ್ಧ ಅಡಿ ಬೇರನ್ನು ಪೂರ್ವ ದಿಕ್ಕಿನಿಂದ ತೆಗೆದು ತೊಳೆದ ನಂತರ ಜಜ್ಜಿ ಒಂದು ಚಮಚ ಗೋ ಮೂತ್ರ ಎರಡು ಚಮಚ ಆಕಳ ಹಾಲು ಮೂರು ಚಮಚ ನೀರು ಈ ಮೂರನ್ನು ಸೇರಿಸಿ ದಿನಾಲು ಬೆಳಿಗ್ಗೆ ಮತ್ತು ಸಾಯಂಕಾಲ ಕುಡಿಯಲಿಕ್ಕೆ ಕೊಡಬೇಕು. ಇದರಿಂದ ರೋಗ ವಾಸಿಯಾಗುತ್ತದೆ.

೪.೮.೧೫ ಕೈ ಮಾಸ ಮಾಡಿಸಿದ್ದು

ಒಂದು ಕಾಡು ಮರದ ಚಕ್ಕಿಯನ್ನು ನಿಂಬೆ ರಸದಲ್ಲಿ ತೆಯ್ದು ಮೂರು ಚಮಚ ಮಾಡಿ ಬೆಳಿಗ್ಗೆ ಮತ್ತು ಸಾಯಂಕಾಲ ಕುಡಿದರೆ ರೋಗ ವಾಸಿಯಾಗುತ್ತದೆ.

ಇನ್ನೊಂದು ಚಿಕಿತ್ಸಾ ಕ್ರಮವಿದೆ. ಕಣಗಿಲ ಮರವನ್ನು 'V' ಆಕಾರದಲ್ಲಿ ಕತ್ತರಿಸಿ, ಆ ಚಕ್ಕಿಯನ್ನು ಜಜ್ಜಿ ಆಕಳ ಹಾಲಿನೊಂದಿಗೆ ಕುಡಿಯಲು ಕೊಟ್ಟರೆ ಅರ್ಧ ಗಂಟೆಯಲ್ಲಿ ವಾಂತಿಯಾಗಿ, ಮಾಡಿಸಿದ್ದು ಬೀಳುತ್ತದೆ.

೪.೮.೧೬ ಭೂತ

ಭೂತೊಳ್ಳಿ ಮರದ ಕಾಯಿಯನ್ನು ತಂದು ಮಕ್ಕಳ ಕೊರಳಲ್ಲಿ ಕಟ್ಟಿದರೆ ಆ ಮಕ್ಕಳಿಗೆ ಭಯ ಬರುವದಿಲ್ಲ. ಕರಡಿಯ ಕೂದಲನ್ನು ಮಕ್ಕಳ ಕೊರಳಲ್ಲಿ ಕರಿದಾರದಲ್ಲಿ ಸೇರಿಸಿ ಕಟ್ಟುವುದರಿಂದ ಮಕ್ಕಳಲ್ಲಿಯ ಭಯ ದೂರವಾಗುತ್ತದೆ.

೪.೮.೧೭ ಹುಚ್ಚ ನಾಯಿ ಕಡಿತಕ್ಕೆ

ಇಸುಮುಂಗ್ರಿ ಗಿಡವನ್ನು ಮೇಲೆ ಮತ್ತು ತಳವನ್ನು ಬಿಟ್ಟು ಆ ಗಿಡವನ್ನು ಕತ್ತರಿಸಿ, ಮುಷ್ಠಿಯಲ್ಲಿ ಹಿಡಿದು ತಂದು ಅದನ್ನು ಮೂರು ಸಮ ಭಾಗಗಳಾಗಿ ಮಾಡಿ ಮೊದಲನೆಯ ದಿವಸ ಆಕಳ ಹಾಲಿನಲ್ಲಿ, ಎರಡನೆಯ ದಿವಸ ತೆಂಗಿನಕಾಯಿ ಒಡೆದು ತುರಿದು ಆ ಸೊಪ್ಪಿನೊಂದಿಗೆ ರುಬ್ಬಿ ಒಂದು ಲೋಟ ತಯಾರಿಸಿ, ಕುಡಿಯಲು ಕೊಡಬೆಕು. ಮೂರನೇಯ ದಿವಸ ಒಂದು ಲೋಟ ಕಡ್ಲೆಕಾಯಿ ಎಣ್ಣೆಯಲ್ಲಿ ಕಲಸಿಕೊಡಬೇಕು. ಇದರಿಂದ ರೋಗ ವಾಸಿಯಾಗುತ್ತದೆ.

೪.೮.೧೮ ಕೆಂಪು ಮುಟ್ಟುರೋಗ

ಗಡ್ಡೆ ಕಾವಲಿನ ಬಿಳಿಮರವನ್ನು ಹುಡುಕಿ ಅದರ ಚಕ್ಕಿಯನ್ನು ತೆಗೆದು ಜಜ್ಜಿ ಅದರ ಅರ್ಧ ಲೋಟ ತಂಬಾಲು ತಯಾರಿಸಿ, ಅರ್ಧಲೋಟ ಕಾಯಿಸಿದ ಆಕಳ ಹಾಲು, ಕಸಕಸಿ, ಐದು ಚಮಚ ಹಾಕಿ ಕಲಸಿ ಐದು ದಿವಸ ಖಾಲಿ ಹೊಟ್ಟೆಯಲ್ಲಿ ಬೆಳಿಗ್ಗೆ ತೆಗೆದುಕೊಳ್ಳಬೇಕು. ಇದರಿಂದ ರೋಗ ವಾಸಿಯಾಗುತ್ತದೆ.

೪.೮.೧೯ ಬಿಳಿ ಮುಟ್ಟು ರೋಗ

ಬಿಳಿ ಬೊರಲು ಮರದ ಚಕ್ಕಿಯನ್ನು ತಂದು ಕುಟ್ಟಿ ಒಂದು ಲೋಟ ತಂಬಾಲು, ಕುಟ್ಟಿದ ಜೀರಿಗೆ, ಕುಟ್ಟಿದ ಕಲ್ಲು ಸಕ್ಕರೆಯನ್ನು ಹಾಕಿ ಅದರಲ್ಲಿ ಐದು ಭಾಗಗಳಾಗಿ ಮಾಡಿ ದಿನಾಲು ಒಂದು ಭಾಗವನ್ನು ಹೊಟ್ಟೆಯಲ್ಲಿ ತೆಗೆದುಕೊಳ್ಳುತ್ತಿದ್ದರೆ ರೋಗ ವಾಸಿಯಾಗುವದು.

೪.೮.೨೦ ನಾಗರ ಹಾವು ಕಚ್ಚಿದ್ದಕ್ಕೆ

ಮದರ್ಸಾ ಮರದ ಚಕ್ಕಿಯನ್ನು ತಂದು ಕುಟ್ಟಿ ಅದನ್ನು ತೆಂಗಿನ ಕಾಯಿಯ ನೀರಿನಲ್ಲಿ ಕಲಿಸಿ ಕುಡಿಯಲಿಕ್ಕೆ ಕೊಡಬೇಕು. ಇದರಿಂದ ವಿಷ ಇಳಿಯುವದು, ಅದೇ ಚಕ್ಕಿಯನ್ನು ಲಿಂಬೇರಸದಲ್ಲಿ ತೆಯಿದು ಹಾವು ಕಚ್ಚಿದ ಜಾಗಕ್ಕೆ ಹಚ್ಚುವುದರಿಂದ ವಿಷ ಸಂಪೂರ್ಣ ಇಳಿಯುತ್ತದೆ.

೪.೮.೨೧ ಚೇಳು ಕಚ್ಚಿದ್ದಕ್ಕೆ

ಹೊರ ಮುಚುಕ ಸೊಪ್ಪನ್ನು ತಂದು ಅದನ್ನು ಚೆನ್ನಾಗಿ ಕುಟ್ಟಿ ಒಂದು ಲೋಟ ಆಕಳ ಹಾಲಲ್ಲಿ ಕುಡಿಯಲಿಕ್ಕೆ ಕೊಟ್ಟರೆ ವಿಷ ಇಳಿಯುವದು.

೪.೮.೨೨ ಹಸು ಹಾಲು ಕೊಡದಿದ್ದರೆ

ಅನಾರಸದ ಗಡ್ಡೆಯನ್ನು ತೆಗೆದು ಅಕ್ಕಿ ತೊಳೆದ ನೀರಿನಲ್ಲಿ (ಅಕ್ಕಚ್ಚು) ರುಬ್ಬಬೇಕು. ನಂತರ ಅದನ್ನು ಹಿಂಡಿ ಹಸುವಿಗೆ ಏಳು ದಿವಸದ ವರೆಗೆ ಕುಡಿಸಿದರೆ ಹಾಲು ಕೊಡುತ್ತದೆ.

೪.೮.೨೩ ಒಣ ಮುಟುಕ (ಜಾನುವಾರಗಳಿಗೆ)

ಮುಂಡಿಗೆ ಸುಳಿಯ ದಂಟನ್ನು ಬೆಣತಿಗೆ ಅಕ್ಕಿಯ ಜೊತೆ ರುಬ್ಬಿ ಅದನ್ನು ಜಾನುವಾರುಗಳಿಗೆ ಕುಡಿಸಿದರೆ ಆ ರೋಗ ವಾಸಿಯಾಗುತ್ತದೆ.

೪.೮.೨೪ ಜಾನುವಾರುಗಳ ಎಲುಬು ಮುರಿದರೆ

ಉಪ್ಪಿನ ಬಳ್ಳಿಯನ್ನು ತೆಗೆದುಕೊಂಡು ಹೋಗಿ ಒಲೆಯಲ್ಲಿ ಬಿಸಿ ಬೂದಿಯೊಂದಿಗೆ ಕಾಲು ಮುರಿದ ಜಾಗಕ್ಕೆ ಕಟ್ಟಿ ಮತ್ತು ಅದೇ ಉಪ್ಪಿನ ಬಳ್ಳಿಯನ್ನು ಅಕ್ಕಿಯ ತೌಡಿನೊಂದಿಗೆ ಐದು ದಿವಸಗಳ ವರೆಗೆ ತಿನ್ನಲು ಕೊಟ್ಟರೆ ಎಲುಬು ಹತ್ತಿಕೊಳ್ಳುತ್ತದೆ.

೪.೮.೨೫ ಕಮಚೇಳು ಕಡಿದರೆ

ಸೀಗೆ ಸೊಪ್ಪನ್ನು ತೆಗೆದುಕೊಂಡು ಹೋಗಿ ಮೂರು ಸಮಭಾಗ ಮಾಡಿ ಮೊದಲನೆಯ ಪಾಲನ್ನು ಕುಟ್ಟಿ ಕಾಯಿಸಿದ ನೀರಿನಲ್ಲಿ ಹಾಕಿ ಮತ್ತೆ ಕಾಯಿಸಿ, ತಕ್ಷಣ ಬೆಳಿಗ್ಗೆ ಕುಡಿಯಲು ಕೊಡಬೇಕು. ಎರಡನೇಯ ಪಾಲನ್ನು ಮರುದಿನ ಬೆಳಿಗ್ಗೆ ಸೊಪ್ಪನ್ನು ಕುಟ್ಟಿ ಬಿಸಿ ನೀರಿನೊಂದಿಗೆ ಸೇರಿಸಿ, ತಕ್ಷಣ ಕುಡಿಯಲು ಕೊಡಬೇಕು. ಮೂರನೆಯ ದಿನ ಕುಟ್ಟಿದ ಸೊಪ್ಪನ್ನು ಬಿಸಿ ನೀರಿನಲ್ಲಿ ಸೇರಿಸಿ ಬೆಳಿಗ್ಗೆ ತಕ್ಷಣ ಕುಡಿಯಲಿಕ್ಕೆ ಕೊಡಬೇಕು. ಇದರಿಂದ ರೋಗ ವಾಸಿಯಾಗುತ್ತದೆ.

ಇಷ್ಟಕ್ಕೂ ವಾಸಿಯಾಗದೇ ಉಳಿದ ರೋಗಗಳನ್ನು ಗುಣಪಡಿಸಿಕೊಳ್ಳಲು ಅಲೋಪತಿ ಕ್ರಮದ ವೈದ್ಯರೆಡೆಗೆ ಹೋಗುತ್ತಾರೆ.

೪.೮.೨೬ ಕಾಡು ಅರಿಷಿಣ ಕಷಾಯ

ಕಾಡು ಅರಿಷಿಣವನ್ನು ತಂದು ಅದನ್ನು ಅರೆದು ಹಿಟ್ಟು ಮಾಡಿ ಆ ಹಿಟ್ಟನ್ನು ನೀರಿನಲ್ಲಿ ಹಾಕಿ ಅದರ ಸಿಪ್ಪೆಯನ್ನು ತೆಗೆದು ನೀರಿನ ತಳದಲ್ಲಿರುವ ಹಿಟ್ಟನ್ನು ಕುಡಿದರೆ ವಾಂತಿ ಭೇದಿ ವಾಸಿಯಾಗುತ್ತದೆ.

೪.೯ ನಕ್ಸಲ್ ಪೀಡಿತ ಸಮಗ್ರ ಯೋಜನೆ

ನಕ್ಸಲೈಟ್‌ರನ್ನು ಶಿಥಿಲವಾದ ಅರ್ಥದಲ್ಲಿ ನಕ್ಸಲರು ಎಂದು ಕರೆಯುತ್ತಾರೆ. ನಕ್ಸಲರೆಂದರೆ, ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗುವವರ ಗುಂಪು. ಈ ಗುಂಪು ಭೂರಹಿತ ಕಾರ್ಮಿಕರ ಮತ್ತು ಆದಿವಾಸಿಗಳ ಅಭ್ಯುದಯಕ್ಕಾಗಿ ಹೋರಾಡುವ ಒಂದು ಗುಂಪೆ ನಕ್ಸಲರು.

'The Earth Times News paper'ದ ಪ್ರಕಾರ ನಕ್ಸಲರೆಂದರೆ, ಜನರ ಶತ್ರುಗಳು.

'Voice of America'ದ ಪ್ರಕಾರ ಬಿನಾಯಕ ಗುಂಪಿಗೆ ನಕ್ಸಲರೆಂದು, ಇದು ೧೯೬೭ ರಲ್ಲಿ ಸಂಘಟಿತ ಹೋರಾಟ ಪ್ರಾರಂಭಿಸಿತು. ಇದು ಮಧ್ಯ ಮತ್ತು ಪೂರ್ವ ಭಾರತದಲ್ಲಿ ಇದು ಮೊದಲು ಕೇಂದ್ರಿಕೃತವಾಗಿತ್ತೆಂದು ತಿಳಿಸುತ್ತದೆ. (ಕೃಪೆ: ಅಂತರ್ಜಾಲ)

ಮುಂಬೈ ಪೋಲಿಸ್ ಅಧಿಕಾರಿ ಜಾಧವ ಇವರ ಪ್ರಕಾರ ನಕ್ಸಲರು ರಮಾಬಾಯಿ ಅಂಬೇಡ್ಕರರ ೧೧೦ನೇ ಜಯಂತ್ಯುತ್ಸವದ ಸಂದರ್ಭದಲ್ಲಿ ಮಹಾರಾಷ್ಟ್ರ ರಾಜ್ಯದ ವಿದರ್ಭದಲ್ಲಿ ನಕ್ಸಲರು ವಿಗ್ರಹಗಳನ್ನು ಭಗ್ನಗೊಳಿಸಿ, ಬೆಂಕಿ ಹಚ್ಚುವ ಕಾರ್ಯದಲ್ಲಿ ನಿರತರಾದ ಗುಂಪೆ ನಕ್ಸಲರು. (ಕೃಪೆ: ಅಂತರ್ಜಾಲ)

ನಕ್ಸಲ್ ಚಟುವಟಿಕೆಗಳ ಬಗ್ಗೆ ಖ್ಯಾತ ಪತ್ರಕರ್ತ ಕುಲದೀಪ ನಯ್ಯರ ಇವರು ೨೬-೧೧-೨೦೧೧ ರಂದು ಪ್ರಜಾವಾಣಿಯ ಅಂತರಂಗ ಅಂಕಣದಲ್ಲಿ ಆದಿವಾಸಿಗಳ ನಿರ್ಲಕ್ಷ್ಯ, ನಕ್ಸಲ್ ಸಮಸ್ಯೆ ಮೂಲ ಎಂದು ಹೇಳಿದ್ದಾನೆ.

ಗುಂಡಿನ ಚಕಮಕಿ (ಎನ್‌ಕೌಂಟರ್) ಹೆಸರಿನಲ್ಲಿ ಪೋಲಿಸರು ದೇಶದ ಪ್ರಜೆಗಳನ್ನು ಬೇಟೆಯಾಡು ವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಟೀಕಿಸಿದ್ದರೂ, ನಮ್ಮ ನಾಗರಿಕ ಸಮಾಜ ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದಿರುವುದು ಕಂಡು ನನಗೆ ಸೋಜಿಗ ಎನಿಸುತ್ತದೆ. ಖಾಸಗಿ ಶಾಂತಿ ಸಂಧಾನ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಇಬ್ಬರು ನಕ್ಸಲೀಯರನ್ನು ಪೋಲಿಸರು ಕೊಂದು ಹಾಕಿದ ಘಟನೆಗೆ ಕೋರ್ಟ್ ಛೀಮಾರಿ ಹಾಕಿತ್ತು.

ಭಿನ್ನಮತ ಬಗ್ಗುಬಡಿಯಲು ಬಲಪ್ರಯೋಗ ನಡೆಸುವುದಕ್ಕೇನೆ ಸರ್ಕಾರ ದೃಢವಾಗಿ ನಿಲ್ಲುವುದು ಏಕೆ ಎನ್ನುವುದು ನನಗೆ ಇದುವರೆಗೂ ಅರ್ಥವಾಗಿಲ್ಲ. ಸಮಸ್ಯೆಯೊಂದಕ್ಕೆ ಪರಿಹಾರ ಕಂಡುಕೊಳ್ಳಲು ಹಿಂಸಾಮಾರ್ಗ ತುಳಿಯುವುದನ್ನು ನಾನು ಯಾವತ್ತೂ ಇಷ್ಟಪಡುವುದಿಲ್ಲ. ಮಾವೋವಾದಿಗಳು ಮತ್ತು ನಕ್ಸಲೀಯರು ಬಂದೂಕು ಬಳಸುವುದರ ಮೂಲಕ ತಮ್ಮ ಹೋರಾಟಕ್ಕೆ ಕಳಂಕ ಹಚ್ಚಿಕೊಂಡಿದ್ದಾರೆ.

ನಕ್ಸಲೀಯರ ಹೋರಾಟವು ದೇಶದ ಆಂತರಿಕ ಭದ್ರತೆಗೆ ಅತಿ ದೊಡ್ಡ ಬೆದರಿಕೆಯಾಗಿದೆ ಎಂದು ಬಿಂಬಿಸುತ್ತಲೇ ಬಂದಿರುವ ಸರ್ಕಾರ, ಅವರ ವಿರುದ್ಧ ಗರಿಷ್ಠ ಪ್ರಮಾಣದ ಪೋಲಿಸ್ ಬಲ ಬಳಸುತ್ತಿರುವುದು ರಹಸ್ಯವಾಗಿ ಉಳಿದಿಲ್ಲ. ದಂಡಕಾರಣ್ಯ ಪ್ರದೇಶದಲ್ಲಿ ನಕ್ಸಲೀಯರು ಮತ್ತು ಪೋಲೀಸರ ಮಧ್ಯೆ ತೀವ್ರ ಸ್ವರೂಪದ ಗುಂಡಿನ ಚಕಮಕಿಗಳು ನಡೆಯುತ್ತಲೇ ಇವೆ. ಈ

ಪ್ರದೇಶದ ಸಮಗ್ರ ಅಭಿವೃದ್ಧಿಗೆ ೧೯೫೮ ರಲ್ಲಿಯೇ ಪ್ರಧಾನಿ ಜವಾರಲಾಲ್ ನೆಹರೂ, ದಂಡಕಾರಣ್ಯ ಅಭಿವೃದ್ಧಿ ಪ್ರಾಧಿಕಾರದ ಉದ್ಘಾಟನೆ ನೆರವೇರಿಸಿ ವಿಶೇಷ ಪುನರ್ವಸತಿ ಯೋಜನೆ ಕಾರ್ಯಗತ ಗೊಳಿಸುವುದಾಗಿ ಪ್ರಕಟಿಸಿದ್ದರು. ಆ ಯೋಜನೆಯನ್ನು ಇದುವರೆಗೂ ಕೈಗೆತ್ತಿಕೊಂಡಿಲ್ಲ.

ಈ ಪ್ರದೇಶದಲ್ಲಿ ಬಂದೂಕುಗಳು ೧೯೬೦ ರಲ್ಲಿಯೇ ಗುಂಡಿನ ಸದ್ದು ಮೊಳಗಿಸತೊಡಗಿದವು. ಪಶ್ಚಿಮ ಬಂಗಾಳ ಮತ್ತು ಆಂಧ್ರಪ್ರದೇಶದ ಶ್ರೀಕಾಕುಲಂನಲ್ಲಿ ನಕ್ಸಲ್ ಬಾರಿ ಹೋರಾಟ ಇದೇ ಹೊತ್ತಿಗೆ ಆರಂಭಗೊಂಡಿತು. ೧೯೮೦ರಲ್ಲಿ ಆಂಧ್ರಪ್ರದೇಶದ ಕೆಲ ನಕ್ಸಲ್ ಗುಂಪುಗಳು ಆಶ್ರಯ ಮತ್ತು ತರಬೇತಿಗಾಗಿ ಮಧ್ಯಪ್ರದೇಶದ ಬಸ್ತರ್ ಪ್ರದೇಶ ಪ್ರವೇಶಿಸಿದವು. ಆದಿವಾಸಿಗಳು ನೆಲೆಸಿರುವ ಪ್ರದೇಶಗಳಲ್ಲಿ ನಕ್ಸಲೀಯರ್ ಉಪಸ್ಥಿತಿಯ ಫಲವಾಗಿ 'ಪಟ್ವಾರಿ-ಹವಾಲ್ದಾರ್ ಮತ್ತು ದಫೇದಾರ್'ಗಳ ಉಪಟಳಕ್ಕೆ ಮಾತ್ರ ಕೆಲಮಟ್ಟಿಗೆ ಕಡಿವಾಣ ಬಿದ್ದಿತು.

ಬಸ್ತರ್‌ನಲ್ಲಿ ನಕ್ಸಲೀಯರು ಬಲವಾಗಿ ಬೇರೂರಲು ಭಾಷಾ ಅಡಚಣೆಯೂ ನೆರವಿಗೆ ಬಂದಿತು. ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯಲ್ಲಿಯೆ ಶಿಕ್ಷಣ ಇರಬೇಕೆಂಬ ರಾಷ್ಟ್ರೀಯ ನೀತಿಗೆ, ಹಿಂದಿ ಭಾಷೆ ಹೇರಿಕೆಯು ಅಡ್ಡಿಯಾಗಿ ಪರಿಣಮಿಸಿತು. ರಾಜ್ಯ ಸರ್ಕಾರಗಳ ಅಧಿಕಾರಿಗಳು ಆದಿವಾಸಿಗಳ ಭಾಷೆ ಕಲಿಯುವುದನ್ನೂ ನಿರ್ಲಕ್ಷಿಸಿದರು.

ಹೀಗಾಗಿ ಆದಿವಾಸಿಗಳು ಮಧ್ಯವರ್ತಿಗಳ ಅಥವಾ ಕೆಲವೇ ಕೆಲವು ಜನರ ಮೂಲಕವೇ ಪ್ರಪಂಚದ ಜೊತೆ ವ್ಯವಹರಿಸಲು ಸಾಧ್ಯವಾಯಿತು. ಆದಿವಾಸಿಗಳ ಜೊತೆ ನೇರವಾಗಿ ವಿಶ್ವಾಸ ಕುದುರಿಸಲು ನಕ್ಸಲೀಯರು ವಿಳಂಬ ಮಾಡಲೇ ಇಲ್ಲ. ಬೇರೆ ಮಾಹಿತಿ ಮತ್ತು ವಿಚಾರಗಳ ಅನುಪಸ್ಥಿತಿಯಲ್ಲಿ ನಕ್ಸಲೀಯರು ಆದಿವಾಸಿ ಯುವಕರನ್ನು ಮರಳು ಮಾಡುವಲ್ಲಿ ಸಾಕಷ್ಟು ಸಫಲರೂ ಆದರು. ನಕ್ಸಲೀಯರು ಅಬುಜಾಮರ್ ಪ್ರದೇಶವು ಸರ್ಕಾರದ ಆಡಳಿತ ವ್ಯಾಪ್ತಿಗೆ ಬರದಂತೆ ನೋಡಿಕೊಂಡರು. ಹೊರಗಿನವರು ಈ ಪ್ರದೇಶ ಪ್ರವೇಶಿಸದಂತೆಯೂ ನಿರ್ಬಂಧ ವಿಧಿಸಿದರು. ಹೀಗಾಗಿ ನಕ್ಸಲೀಯರು ಬಸ್ತರ್ ಪ್ರದೇಶದಲ್ಲಿ ತಮ್ಮ ಹಿಡಿತ ಗಟ್ಟಿ ಮಾಡಿಕೊಳ್ಳುವಲ್ಲಿ ಸಫಲರಾದರು.

ಆಂತರಿಕ ಭದ್ರತೆಗೆ ಬೆದರಿಕೆ ಒಡ್ಡಿದ್ದನ್ನು ಸವಾಲಾಗಿ ಸ್ವೀಕರಿಸಿದ ರಾಜ್ಯ ಸರ್ಕಾರವು ಈ ಪ್ರದೇಶದಲ್ಲಿನ ನಕ್ಸಲೀಯರ ಹಾವಳಿ ಮತ್ತು ಪ್ರಭಾವ ಬಗ್ಗುಬಡಿಯಲು ಸೇನೆ ಹೊರತುಪಡಿಸಿ ಎಲ್ಲ ಬಗೆಯ ಶಕ್ತಿಗಳನ್ನು ಬಳಸಿಕೊಂಡಿದೆ. ಸರ್ಕಾರಿ ಭದ್ರತಾ ಪಡೆಗಳ ದಾಳಿ, ಕಿರುಕುಳದಿಂದ ತಪ್ಪಿಸಿಕೊಳ್ಳಲು ನೂರಾರು ಗ್ರಾಮಸ್ಥರು ಈ ಪ್ರದೇಶ ತೊರೆದಿದ್ದಾರೆ. ಇಲ್ಲವೇ ಅಡಗುದಾಣಗಳಲ್ಲಿ ತಲೆಮರೆಸಿಕೊಂಡಿದ್ದಾರೆ. ಅನೇಕರು ನೆರೆಹೊರೆ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಇಲ್ಲಿ ನಕ್ಸಲೀಯರು ಮತ್ತು ರಾಜ್ಯ ಸರ್ಕಾರದ ಮಧ್ಯೆ ಸಂಧಾನ ಮಾತುಕತೆ ನಡೆಯುವ ಸಾಧ್ಯತೆಗಳೇ ಇಲ್ಲ. ಈ ನಿಟ್ಟಿನಲ್ಲಿ ಆಂಧ್ರಪದೇಶದಲ್ಲಿ ನಡೆದ ಪ್ರಯತ್ನಗಳು ಯಾವುದೇ ಫಲ ನೀಡಲಾರವು ಎನ್ನುವುದನ್ನು ಸಾಬೀತುಪಡಿಸಿವೆ.

ನಿರ್ಲಕ್ಷಿತ ಬಡ ಆದಿವಾಸಿಗಳ ಉದ್ಧಾರದ ಹೆಸರಿನಲ್ಲಿ ಮೂಲ ಸೌಕರ್ಯ ಮತ್ತು ಸಮಾಜ ಕಲ್ಯಾಣ ಯೋಜನೆಗಳಿಗಾಗಿ ಸಾಕಷ್ಟು ಹಣ ವೆಚ್ಚ ಮಾಡಲಾಗಿದೆ. ಅವು ನಿರೀಕ್ಷಿತ ಫಲಿತಾಂಶವನ್ನೂ ನೀಡಿಲ್ಲ.

ಆದಿವಾಸಿ ಜನರು ಎದುರಿಸುತ್ತಿರುವ ನಿಜವಾದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಮೊದಲ ಹೆಜ್ಜೆಯಲ್ಲಿಯೇ ಸರ್ಕಾರಿ ಪ್ರಭುಗಳು ಎಡವಿದ್ದಾರೆ.

ಬಡ ಆದಿವಾಸಿಗಳ ಅಭಿವೃದ್ಧಿ ಹೆಸರಿನಲ್ಲಿ ಅಧಿಕಾರಿಗಳು ಮತ್ತಿತರರು ಸಾಕಷ್ಟು ಅವ್ಯವಹಾರ ನಡೆಸಿರುವುದು ಸ್ವಾಭಿಮಾನಿ ಆದಿವಾಸಿಗಳನ್ನು ಘಾಸಿಗೊಳಿಸಿದೆ. 'ನಾವೆಲ್ಲ ಆದಿವಾಸಿಗಳ ಹಿತಚಿಂತಕರು' ಎಂದು ರಾಜಕಾರಣಿಗಳು, ಅಧಿಕಾರಿಗಳು ಮತ್ತಿತರು ಹೇಳಿಕೊಳ್ಳುತ್ತಲೇ ಅವರನ್ನು ವಂಚಿಸಿದ್ದಾರೆ. ಆದಿವಾಸಿಗಳು ನಿಜವಾಗಿಯೂ ಬಡವರಲ್ಲ. ಅವರನ್ನು ಅವರ ನಾಗರಿಕ ಹಕ್ಕುಗಳಿಂದ ವಂಚಿತಗೊಳಿಸಲಾಗಿದೆ ಎನ್ನುವುದೇ ಕಹಿ ಸತ್ಯ.

ಆದಿವಾಸಿ ಪ್ರದೇಶಗಳಲ್ಲಿ ಅಮಲು ಪದಾರ್ಥಗಳ ವಾಣೀಜ್ಯ ಮಾರಾಟವನ್ನು ೧೯೭೪ ರಲ್ಲಿಯೇ ನಿಷೇಧಿಸುವ ಮೂಲಕ ಮತ್ತು ಸಣ್ಣಪುಟ್ಟ ಅರಣ್ಯ ಉತ್ಪನ್ನಗಳ ಮೇಲೆ ಆದಿವಾಸಿಗಳಿಗೆ ೧೯೭೬ರಲ್ಲಿ ಅಧಿಕಾರ ನೀಡುವುದರ ಮೂಲಕ ಅವರ ಬದುಕಿಗೆ ತಿರುವು ನೀಡುವ ನಿಟ್ಟಿನಲ್ಲಿ ರಚನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಯಿತು. ಆದರೆ, ೭೦ರ ದಶಕದ ಅಂತ್ಯದ ಹೊತ್ತಿಗೆ ಈ ಮಹತ್ವದ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರುವುದನ್ನು ನಿರ್ಲಕ್ಷಿಸಲಾಯಿತು. ಜತೆಗೆ ಈ ಪ್ರದೇಶಗಳಲ್ಲಿ ಆಡಳಿತಾತ್ಮಕ ಸ್ವರೂಪ ಹೆಚ್ಚಿಸುವುದನ್ನೂ ಮರೆತು ಬಿಡಲಾಯಿತು. ಅರಣ್ಯ ಉತ್ಪನ್ನಗಳ ಲೂಟಿ ಮಾಡಲು ಅವಕಾಶ ಮಾಡಿಕೊಡಲಾಯಿತು.

ದೇಶದಲ್ಲಿನ ವಿವಿಧ ಆದಿವಾಸಿ ಪಂಗಡಗಳು ತಮ್ಮದೇ ಆದ ವಿಶಿಷ್ಟ ಭೂಪ್ರದೇಶ ಹೊಂದಿವೆ. ತಮ್ಮ ತಮ್ಮ ಸಂಪ್ರದಾಯ ಮತ್ತು ಆಚರಣೆ ಅನುಗುಣವಾಗಿ ಆದಿವಾಸಿ ಪಂಗಡಗಳು 'ಗ್ರಾಮ ಸ್ವರಾಜ್ಯ' ಪರಿಕಲ್ಪನೆಯಡಿ ತಮ್ಮೆಲ್ಲ ವ್ಯವಹಾರಗಳನ್ನು ನಿಭಾಯಿಸಿಕೊಂಡು ಬರುತ್ತಿವೆ. ತಾವು ನೆಲೆಸಿದ ಪ್ರದೇಶದಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನೇ ಅವರು ತಮ್ಮ ಜೀವನೋಪಾಯಕ್ಕೆ ಅವಲಂಬಿಸಿದ್ದಾರೆ.

ಸರ್ಕಾರಗಳು ವೈಯಕ್ತಿಕ ಮಾಲೀಕತ್ವ ಮಾದರಿ ಜಾರಿಗೆ ಒತ್ತಾಯಿಸುತ್ತಿದ್ದರೂ, ಅವರ ಪಾಲಿಗೆ ಭೂಮಿಯು ಇನ್ನೂ ಆಸ್ತಿಯಾಗಿಲ್ಲ. ಸಮುದಾಯ ಮಾಲೀಕತ್ವ ಮತ್ತು ವೈಯಕ್ತಿಕ ಬಳಕೆ'ಯ ಸಾಂಪ್ರದಾಯಿಕ ನಂಬಿಕೆಯನ್ನೇ ಇನ್ನೂ ಅವರು ನೆಚ್ಚಿಕೊಂಡಿದ್ದಾರೆ ಬಹುತೇಕ ಆದಿವಾಸಿ ಸಮುದಾಯಗಳಲ್ಲಿ ಅದರಲ್ಲೂ ವಿಶೇಷವಾಗಿ ಈಶಾನ್ಯ ರಾಜ್ಯಗಳಲ್ಲಿ ಇದೇ ವ್ಯವಸ್ಥೆ ರೂಢಿಯಲ್ಲಿದೆ.

ಸದ್ಯಕ್ಕೆ ಆದಿವಾಸಿಗಳಲ್ಲಿ ಭವಿಷ್ಯದ ಬಗ್ಗೆ ಯಾವುದೇ ಆತಂಕ ಮನೆ ಮಾಡಿಲ್ಲ. ಅನೇಕ ಆದಿವಾಸಿ ಪಂಗಡಗಳಲ್ಲಿ ಭವಿಷ್ಯ ಎಂದರೆ ಏನು ಎಂಬುದೇ ಗೊತ್ತಿಲ್ಲ. ನಿಸರ್ಗವು ಅಪಾರ ಪ್ರಮಾಣದಲ್ಲಿ ಉಂಬಳಿಯಾಗಿ ನೀಡಿರುವ ಅರಣ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನೇ ಇವರು ಬಹುವಾಗಿ ನೆಚ್ಚಿಕೊಂಡಿದ್ದಾರೆ.

ಆದಿವಾಸಿಗಳು ಮಾತಿಗೆ ತಪ್ಪದ ಜಾಯಮಾನದವರು. ಆ ಬಗ್ಗೆ ಅವರಿಗೆ ಸಾಕಷ್ಟು ಅಭಿಮಾನವೂ ಇದೆ. ನಾಗಾ ಮುಖಂಡರೊಬ್ಬರನ್ನು ಕೋರ್ಟ್‌ನಲ್ಲಿ ವಕೀಲನೊಬ್ಬ ವಿಚಾರಣೆಗೆ ಗುರಿಪಡಿಸಿದಾಗ ಅವರು ಕೋರ್ಟ್‌ಗೆ ಇನ್ನೆಂದೂ ಕಾಲಿಡಲಾರೆ ಎಂದು ಹೇಳಿ ನಿರ್ಗಮಿಸಿದ ಘಟನೆ ನನಗೆ ಈ ಸಂದರ್ಭದಲ್ಲಿ ನೆನಪಾಗುವುದು.

ಆದಿವಾಸಿಗಳ ಪ್ರದೇಶದ ಮೇಲೆ ನಿಯಂತ್ರಣ ಸಾಧಿಸುವ ಹಲವಾರು ಪ್ರಯತ್ನಗಳು ವಿಫಲವಾದ ನಂತರ, ಆದಿವಾಸಿ ಜನರ ಸ್ವಾತಂತ್ರ್ಯವನ್ನು ಉತ್ಕಟವಾಗಿ ಪ್ರೀತಿಸುವ ಸ್ವಭಾವವನ್ನು ಬ್ರಿಟಿಷರೂ ಒಪ್ಪಿಕೊಂಡಿದ್ದರು. ಆದಿವಾಸಿಗಳನ್ನು ಎದುರು ಹಾಕಿಕೊಳ್ಳುವುದು ಸರಿಯಲ್ಲ ಎನ್ನುವ ನಿರ್ಧಾರಕ್ಕೂ ಬಂದಿದ್ದರು. ಬ್ರಿಟಿಷರು ಆದಿವಾಸಿಗಳ ನೆಲೆಗಳ ಮೇಲೆ ನಿಯಂತ್ರಣ ಸಾಧಿಸಿದ್ದರು ಎನ್ನುವುದು ಇತಿಹಾಸವನ್ನೇ ತಿರುಚಿದಂತೆ. ಬ್ರಿಟಿಷರ ಆಡಳಿತ ಒಪ್ಪಿಕೊಳ್ಳಲು ಜನರು ತಿರಸ್ಕರಿದ್ದೇ, ಆದಿವಾಸಿ ಪ್ರದೇಶಗಳಲ್ಲಿ ಕೆಲ ಪ್ರಮುಖ ದಂಗೆಗಳು ಕಂಡು ಬರಲು ಪ್ರಮುಖ ಕಾರಣವಾಗಿತ್ತು.

ಸಂವಿಧಾನ ಅಂಗೀಕರಿಸಿದ ನಂತರ ಆದಿವಾಸಿಗಳ ಪ್ರದೇಶಗಳಲ್ಲಿ ಗುಣಾತ್ಮಕ ಬದಲಾವಣೆ ಕಂಡು ಬರಲಾರಂಭಿಸಿತು. ಸಂವಿಧಾನದ ೫ನೇ ಪರಿಚ್ಛೇದಡಿ ವಿವಿಧ ಪ್ರಾಂತ್ಯಗಳು ಮತ್ತು ಈ ಮೊದಲಿನ ಅರಸರ ಆಳ್ವಿಕೆಯಲ್ಲಿದ್ದ ಪ್ರದೇಶಗಳನ್ನು ವಿಶಿಷ್ಟವಾಗಿ ಗುರುತಿಸಲಾಯಿತು.

ಸಂವಿಧಾನದ ಆಶಯದಂತೆ ಕಾಯ್ದೆ ಕಾನೂನುಗಳು ಜಾರಿಗೆ ಬಂದ ನಂತರವೂ ಬಸ್ತರ್‌ನಲ್ಲಿ ವಿವಾದಗಳನ್ನು ಇತ್ಯರ್ಥಪಡಿಸುವ ಸ್ಥಳೀಯ ವಿಧಾನವು ಸಾಕಷ್ಟು ಜನಪ್ರಿಯವಾಗಿತ್ತು. ಇಡೀ ಜಿಲ್ಲೆಯಲ್ಲಿ ವರ್ಷಕ್ಕೆ ಒಂದೊ ಎರಡು ಪ್ರಕರಣಗಳು ಮಾತ್ರ ಪೋಲೀಸ್ ಠಾಣೆಯಲ್ಲಿ ದಾಖಲಾಗು ತ್ತಿದ್ದವು. ಆದರೆ, ಈ ವ್ಯವಸ್ಥೆಗೆ ಕಾನೂನಿನ ಮಾನ್ಯತೆ ಇದ್ದಿರಲಿಲ್ಲ. ಹೀಗಾಗಿ ಗ್ರಾಮ ಮಂಡಳಿಗಳಲ್ಲಿ ಅದರಲ್ಲೂ ಜಾಮೀನುರಹಿತ ಪ್ರಕರಣಗಳಲ್ಲಿ ಕಾಯ್ದೆ ಉಲ್ಲಂಘಿಸಲಾಗುತ್ತಿತ್ತು. ಈ ಕಾರಣಕ್ಕೆ ಪೋಲಿಸರು ಗ್ರಾಮ ಮಂಡಳಿಗಳ ಸದಸ್ಯರ ವಿರುದ್ಧವೇ ಪ್ರಕರಣ ದಾಖಲಿಸಿಕೊಳ್ಳಲು ಆರಂಭಿಸಿದರು. ವಿವಾದಕ್ಕೆ ಸಂಬಂಧಿಸಿದ ಎಲ್ಲರೂ ತೀರ್ಪಿನ ಬಗ್ಗೆ ಒಮ್ಮತಾಭಿಪ್ರಾಯಕ್ಕೆ ಬಂದಿದ್ದರೂ ಪೋಲೀಸರು ಇಂತಹ ಕ್ರಮಕ್ಕೆ ಮುಂದಾಗುತ್ತಿದ್ದರು.

ಅನಂತರ ರಾಜ್ಯ ಸರ್ಕಾರವು ಬಸ್ತರ್ ಜಿಲ್ಲೆಯಲ್ಲಿನ ಕೆಲ ಗ್ರಾಮಗಳನ್ನು (ಡಿನೋಟಿಫಿಕೇಷನ್) ಅಧಿಸೂಚನೆಯಿಂದ ಕೈಬಿಟ್ಟಿತು. 'ಪಂಚಾಯತ್ (ಷೆಡ್ಯೂಲ್ಡ್ ಪ್ರದೇಶ ವಿಸ್ತರಣೆ) ಕಾಯ್ದೆ-೧೯೯೬' ಯು ಈ ಗ್ರಾಮಗಳಿಗೆ ಅನ್ವಯಿಸುವುದಿಲ್ಲ ಎಂದೂ ಹೇಳಿತು. ತಮ್ಮ ಭೂಮಿ ಮೇಲೆ ನಿಯಂತ್ರಣ ಹೊಂದಲು ಆದಿವಾಸಿಗಳು ಅಧಿಕಾರ ಸಿಗುವಂತೆ ಈ ಕಾಯ್ದೆಯನ್ನು ವಿಶೇಷವಾಗಿ ರೂಪಿಸಲಾಗಿತ್ತು. ರಾಜ್ಯ ಸರ್ಕಾರವು ಇದುವರೆಗೂ ತನ್ನ ತಪ್ಪಿನಿಂದ ಪಾಠ ಕಲಿತಿಲ್ಲ. ಇದು ನಮ್ಮ ವ್ಯವಸ್ಥೆಯ ವೈಫಲ್ಯವೇ ಸರಿ. (ಕೃಪೆ: ಪ್ರಜಾವಣಿ ದಿನಪತ್ರಿಕೆ ೨೧-೦೧-೨೦೧೧)

ಮಹೇಂದ್ರ ಚಾಮರನು ಏಕೆ ನಕ್ಸಲ್‌ನಾದನು ಎಂಬುದನ್ನು ದಿಪೇಂದ್ರ ರಾಯಚೌಧರಿ ಇವರು ತಮ್ಮ ಗ್ರಂಥವಾದ 'A Naxal Story' ಎಂಬುದರಲ್ಲಿ ಈ ಕೆಳಗಿನಂತೆ ವಿವರಿಸಿದ್ದಾರೆ.

"ಮಹೇಂದ್ರ ಚಾಮರನು ಅಸ್ಪೃಶ್ಯ ಕುಟುಂಬದಲ್ಲಿ ಹುಟ್ಟಿದವನು. ಇವನ ತಂದೆ ತಾಯಿಗಳು ಮೇಲ್ವರ್ಗದ ಜನರ ಮನೆಯಲ್ಲಿ ಹುಟ್ಟಾಳುಗಳಾಗಿ ದುಡಿಯುತ್ತಿದ್ದರು. ೧೯೭೨ ರಲ್ಲಿ ದೇಶದಲ್ಲಿ ಭೀಕರ ಬರಗಾಲ ಬಂದಿತ್ತು. ಆಗ ಈತನ ತಂದೆ ತಾಯಿಗಳನ್ನು ಮೇಲ್ವರ್ಗದವರು ಕೆಲಸದಿಂದ ತೆಗೆದರು. ಈತನ ತಂದೆ ತಾಯಿಗಳು ಎಷ್ಟೇ ಪರಿಪರಿಯಾಗಿ ಬೇಡಿಕೊಂಡರೂ ಜಮೀನ್ದಾರರ ಮನಸ್ಸು ಕರಗಲಿಲ್ಲ. ಆ ವೇಳೆಗಾಗಲೇ ಕಲ್ಕತ್ತಾದಲ್ಲಿ ಕಾಮ್ರೇಡ್‌ಗಳು ಭೂರಹಿತ ಕಾರ್ಮಿಕರ ಮತ್ತು ಆದಿವಾಸಿಗಳ ಪರವಾಗಿ ಹೋರಾಟ ಮಾಡುತ್ತಿದ್ದರು. ಮಹೇಂದ್ರ ಚಾಮರನು ಆ ಹೋರಾಟದಲ್ಲಿ ಕೂಡಿಕೊಂಡು ಸಮಾಜದಲ್ಲಿ ದೊಂಬಿ, ಹಿಂಸೆ ಲೂಟಿಗಿಳಿದನು. ಇದನ್ನು ಮೊದಲು ಪಶ್ಚಿಮ ಬಂಗಾಳದ ಸರಕಾರ ನಗಣ್ಯವಾಗಿ ನೋಡಿತು. ನಂತರ ಮಹೇಂದ್ರ ಚಾಮರನು ಗುಂಪು ಕಟ್ಟಿಕೊಂಡು ಶ್ರೀಮಂತರ ವಿರುದ್ಧ ರಣಕಹಳೆ ಮೊಳಗಿಸಿದನು. ಆಗ ಈತನಿಗೆ ನಕ್ಸಲ್ ಎಂದು ಕರೆದರು.

ಪಶ್ಚಿಮ ಬಂಗಾಳ ಸರಕಾರವು ಈತನ ತಲೆಗೆ ೫೦ ಸಾವಿರ ರೂಪಾಯಿ ಬಹುಮಾನ ನಿಗದಿಪಡಿಸಿತು. ಆದರೆ ಈತ ಪೋಲೀಸ್ ಎನ್‌ಕೌಂಟರ್‌ನಲ್ಲಿ ಹತನಾದನು. ಆತ ಹತನಾದರೂ ಆತನು ಹಚ್ಚಿದ ಬೆಂಕಿ ಇನ್ನೂ ಪಶ್ಚಿಮ ಬಂಗಾಳದಲ್ಲಿ ಆರಿಲ್ಲವೆಂದು ದೀಪೇಂದ್ರ ರಾಯಚೌಧರಿ ೧೯೮೨ ರಿಂದ ೨೦೦೦ರ ವರೆಗಿನ ನಕ್ಸಲ್‌ರ ಪ್ರತಿ ಹೆಜ್ಜೆಗಳನ್ನು ಈ ಗ್ರಂಥದಲ್ಲಿ ವಿವರಿಸಿದ್ದಾನೆ". (Deependra Ray Choudhary ೨೦೦೯: ೩೩)

ವಿಜಯ ಕರ್ನಾಟಕ ದಿನ ಪತ್ರಿಕೆಯು (ಶಿವಮೊಗ್ಗ ಆವೃತ್ತಿ) ತನ್ನ ಮುಖಪುಟದಲ್ಲಿ ದಿನಾಂಕ: ೨೪-೦೪-೨೦೧೧ ರಂದು 'ಕಾಡಿನಿಂದ ಕಾಲ್ಕಿತ್ತ ನಕ್ಸಲ್'ರು ಎಂಬ ಲೇಖನದಲ್ಲಿ ಆಗುಂಬೆ ಬೆಟ್ಟದಿಂದ ಕೊಲ್ಲೂರಿನ ಅಭಯಾರಣ್ಯದವರೆಗಿನ ದಟ್ಟ ಅರಣ್ಯದಲ್ಲಿ ಅವಿತುಕೊಂಡಿರುವ ನಕ್ಸಲ್‌ರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ೨೦೦೫ ರಲ್ಲಿ ನಕ್ಸಲ್ ಮುಖಂಡನಾದ ಸಾಕೇತ ರಾಜನ್ ಬಲಿಯಾದ ನಂತರ ಮತ್ತು ಆದಿವಾಸಿಗಳ ಬೆಂಬಲವೂ ಈಗ ದೊರೆಯುವದಿಲ್ಲ. ಮೊದಲು ಅವರಿಗೆ ಯಾವುದೇ ರೀತಿಯ ಸಹಾಯ ಇರಲಿಲ್ಲ. ಇಂತಹ ವೇಳೆಯಲ್ಲಿ ನಕ್ಸಲ್‌ರು ಅವರ ಬೇಡಿಕೆಗಳನ್ನು ಈಡೇರಿಸಲು ಸಹಾಯ ಮಾಡುತ್ತಿದ್ದರು. ಇದರಿಂದ ಆದಿವಾಸಿಗಳ ಬೆಂಬಲ ನಕ್ಸಲ್‌ರಿಗೆ ದೊರೆಯುತ್ತಿತ್ತು. ಆದರೆ ಸರಕಾರವು ಸಮಗ್ರ ನಕ್ಸಲ್ ಪೀಡಿತ ಯೋಜನೆ ಜಾರಿಗೆ ತಂದಾಗಿನಿಂದ ಆದಿವಾಸಿಗಳಿಗೆ ವಿಶೇಷ ಸೌಲಭ್ಯಗಳನ್ನು ಈ ಯೋಜನೆಯ ಮುಖಾಂತರ ಕೊಡುವುದರಿಂದ ನಕ್ಸಲ್‌ರಿಗೆ ಆದಿವಾಸಿಗಳು ಬೆಂಬಲಿಸುವುದನ್ನು ನಿಲ್ಲಿಸಿದ್ದಾರೆ. ಇದರಿಂದ ಕೆಲವು ನಕ್ಸಲ್‌ರು ಕೊಪ್ಪ ಪೋಲೀಸ್ ಸ್ಟೇಷನ್‌ನಲ್ಲಿ ಶರಣಾಗಿದ್ದಾರೆ. ಎನ್‌ಕೌಂಟರ್‌ನ ಹೆಸರಿನಲ್ಲಿ ಹತರಾಗಿದ್ದಾರೆ. ಈಗ ನಕ್ಸಲ್‌ರು ಸಮಾಜದ ಮುಖ್ಯವಾಹಿನಿಗೆ ಬರಲು ತವಕಿಸುತ್ತಿದ್ದಾರೆ. ಅಷ್ಟೇ ಅಲ್ಲ, ಅವರ ಸಂಖ್ಯೆಯೂ ಕೂಡ ಕ್ಷೀಣಿಸಹತ್ತಿದೆ.

ಪಶ್ಚಿಮ ಘಟ್ಟದ ತಪ್ಪಲು ಪ್ರದೇಶ ಈದು ಮತ್ತು ಮಾಳ ಗ್ರಾಮದಲ್ಲಿ ನಕ್ಸಲ್ ಚಲನವಲನ ಮಗದೊಮ್ಮೆ ಕಾಣಿಸಿಕೊಂಡಿದೆ. ತಂಡದ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡ ನಕ್ಸಲರು ಸಂಘಟನೆ ಬಲಪಡಿಸುವುದರಲ್ಲಿಯೂ ನಿರತರಾಗಿದ್ದಾರೆ.

ಕಳೆದ ವರ್ಷ ರಾಜ್ಯ ಸರಕಾರ ಘೋಷಿಸಿದ ನಕ್ಸಲರ ಶರಣಾಗತಿ ಪ್ಯಾಕೇಜ್‌ನಿಂದ ಹಲವು ನಕ್ಸಲರು ತಮ್ಮ ಚಟುವಟಿಕೆಯನ್ನು ಬಹಿಷ್ಕರಿಸಿ ಹೊರಬಂದಿದ್ದರೆ, ಇನ್ನೊಂದೆಡೆ ಕಾರ್ಕಳದ ಮೈರೊಳ್ಳಿಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ನಕ್ಸಲ್ ನಾಯಕ ವಸಂತ ಗೌಡ ಹತನಾಗಿದ್ದ. ಆ ಬಳಿಕದ ದಿನಗಳಲ್ಲಿ ಪಶ್ಚಿಮ ಘಟ್ಟದ ಕಾರ್ಕಳ ಭಾಗದಲ್ಲಿ ನಕ್ಸಲ್ ಚಟುವಟಿಕೆ ಸಂಪೂರ್ಣ ಇಳಿಮುಖವಾಗಿತ್ತು.

ಆದರೆ ಎರಡು ತಿಂಗಳ ಹಿಂದೆ ಹೆಬ್ರಿ ಕಬ್ಬಿನಾಲೆಯ ಬಳಿಯಲ್ಲಿ ಕಾಣಿಸಿಕೊಂಡ ನಕ್ಸಲರು, ತಮ್ಮ ಚಲನವಲನಗಳನ್ನು ಮಾಳ ಮತ್ತು ಈದು ಗ್ರಾಮಗಳಲ್ಲಿ ಹೆಚ್ಚು ಕೇಂದ್ರೀಕೃತಗೊಳಿಸಿದ್ದಾರೆ.

೨೦೦೮ರಲ್ಲಿ ನಾಡ್ಪಾಲು ಸೀತಾನದಿಯ ಶಿಕ್ಷಕ ಭೋಜ ಶೆಟ್ಟಿ ಮತ್ತು ಸುರೇಶ್ ಶೆಟ್ಟಿ ಅವಳಿ ಹತ್ಯೆಯ ಬಳಿಕ, ನಕ್ಸಲ್ ನಿಗ್ರಹ ದಳವು ತಮ್ಮ ಕಾರ್ಯಾಚರಣೆಗೆ ಆ ಭಾಗದಲ್ಲಿ ಹೆಚ್ಚು ಮಹತ್ವ ನೀಡಿತ್ತು. ಹೀಗಾಗಿ ಅವರ ಕಣ್ಣು ತಪ್ಪಿಸಿ ತಮ್ಮ ಸಂಘಟನೆಯನ್ನು ಬಲಪಡಿಸುವತ್ತ ನಕ್ಸಲರು, ಈದು ಮತ್ತು ಮಾಳ ಗ್ರಾಮಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆಂದು ಹೇಳಲಾಗುತ್ತಿದೆ.

ಈದು-ಮಾಳದಲ್ಲಿ ..... ೨೦೦೩ರಲ್ಲಿ ಈದು ಗ್ರಾಮದ ಬೋಲ್ಯೊಟ್ಟುವಿನಲ್ಲಿ ಹಾಜಿಮಾ ಮತ್ತು ಪಾರ್ವತಿ ಪೋಲೀಸ್ ಗುಂಡಿಗೆ ಬಲಿಯಾಗಿದ್ದರು. ೨೦೦೫ರಲ್ಲಿ ಅರಣ್ಯ ಇಲಾಖೆಯ ಕಟ್ಟೆಯನ್ನು ನಕ್ಸಲರು ಒಡೆದಿದ್ದರು. ಅನಂತ ಆ ಭಾಗದಲ್ಲಿ ನಕ್ಸಲ್ ಚಟುವಟಿಕೆ ಗಣನೀಯ ಕುಂಠಿತವಾಗಿತ್ತು. ಇದೀಗ ನಕ್ಸಲ್‌ರ ಚಲನವಲನ ಹೆಚ್ಚುತ್ತಿರುವ ಬಗ್ಗೆ ವದಂತಿಗಳು ಹಬ್ಬಿವೆ.

ವೇಣೂರು ವ್ಯಾಪ್ತಿ ಸಮೀಪದ ಹುಲ್ಲುಗುಡ್ಡೆ, ನೂರಾಳ್‌ಬೆಟ್ಟು ಬಳಿಯ ಕನ್ಯಾನದಲ್ಲಿ ಮಾಳ ಬೆಜ್ಜಾಲು ಭಾಗದಲ್ಲಿ ನಕ್ಸಲರು ಬಂದು ಹೋಗಿರುವ ಬಗ್ಗೆ ನಿರಂತರ ಸುದ್ದಿಯಾಗುತ್ತಿದೆ. ಇದೀಗ ನಕ್ಸಲ್ ತಂಡಕ್ಕೆ ತಮಿಳು ಮೂಲಕ ಅನೇಕ ಜನ ಹೊಸತಾಗಿ ಸೇರ್ಪಡೆಗೊಂಡಿದ್ದು, ನಕ್ಸಲರ ಸಂಖ್ಯಾಬಲ ಹೆಚ್ಚಿದೆ ಎಂದು ಹೇಳಲಾಗುತ್ತಿದೆ.

ಅಲ್ಲದೆ, ಇದೀಗ ಸೇರ್ಪಡೆಗೊಂಡ ಹೊಸಮುಖಗಳಿಗೆ ಪಶ್ಚಿಮಘಟ್ಟವನ್ನು ಪರಿಚಯಿಸಿ ತರಬೇತಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆನ್ನುವ ವದಂತಿಯಿದೆ. ಈಗಾಗಲೇ ೧೮ಕ್ಕೂ ಮಿಕ್ಕಿದ ನಕ್ಸಲರ ತಂಡ ಆ ಭಾಗದಲ್ಲಿ ಕಾರ್ಯನಿರ್ವಹಿಸುತ್ತವೆ ಎನ್ನಲಾಗಿದೆ. (ಕೃಪೆ: ವಿಜಯ ಕರ್ನಾಟಕ ೨೫-೦೫-೨೦೧೧)

ಮಲೆನಾಡಿನ ದಟ್ಟ ಅರಣ್ಯದಲ್ಲಿ ನಕ್ಸಲ್ ಚಟುವಟಿಕೆಗಳು ಆಗೊಮ್ಮೆ ಈಗೊಮ್ಮೆ ನಡೆಯುತ್ತವೆ. ಇದಕ್ಕೆ ಸ್ಥಳೀಯ ಆದಿವಾಸಿಗಳ ಬೆಂಬಲವೂ ಇದೆ. ಕರ್ನಾಟಕ ರಾಜ್ಯದಲ್ಲಿ ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉತ್ತರ ಕನ್ನಡ, ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಕ್ಸಲ್ ಚಟುವಟಿಕೆಗಳು ನಡೆಯುವ ತಾಣಗಳಾಗಿವೆ. ನಕ್ಸಲ್‌ರು ಇಲ್ಲಿನ ಆದಿವಾಸಿಗಳಿಗೆ ತಮ್ಮ ಬಡತನದ ಗೋಳಿನ ಬಗ್ಗೆ ಅರಿವು ಮೂಡಿಸುವುದು, ಮೇಲ್ವರ್ಗದ ಜನರ ಕೈಯಲ್ಲಿ ಹುಟ್ಟಾಳುಗಳಾಗಿ ದುಡಿಯುವುದು, ತಂದೆ ಮಾಡಿದ ಸಾಲಕ್ಕಾಗಿ ಇಡಿ ಕುಟುಂಬವೇ ದುಡಿಯುವುದು, ದುಡಿದರೂ ಹೊಟ್ಟೆ ತುಂಬದೇ

ಇರುವುದು ಮುಂತಾದವುಗಳ ಬಗ್ಗೆ ಇಲ್ಲಿನ ನಿವಾಸಿಗಳಿಗೆ ತಿಳಿಹೇಳಿ ಅವರನ್ನು ಕೂಡಾ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗುವ ಹಾಗೆ ಉತ್ತೇಜನ ಕೊಡುತ್ತಾರೆ. ಆಗುಂಬೆ, ಕುದುರೆಮುಖ, ಕೊಟ್ಟಿಗೆಹಾರ, ಕಬ್ಬಿನಾಲೆ, ಹಳ್ಳಿಹೊಳೆ, ಶೃಂಗೇರಿ ಮುಂತಾದ ಕಡೆಗಳಲ್ಲಿ ೨೦೦೫ ಕ್ಕಿಂತ ಪೂರ್ವದಲ್ಲಿ ನಕ್ಸಲ್‌ರು ಈ ಸ್ಥಳಗಳಿಗೆ ರಾತ್ರಿ ೧೦ ಗಂಟೆ ಮೇಲೆ ಭೇಟ್ಟಿಕೊಟ್ಟು ಅಲ್ಲಿನ ನಿವಾಸಿಗಳಿಗೆ ಅಡುಗೆ ಮಾಡಲು ಹೇಳಿ, ಅಡುಗೆ ಮಾಡುವವರಿಗೂ ಅವರಿಗೆ ನಕ್ಸಲ್ ಚಟುವಟಿಕೆಗಳಿಗೆ ಸಹಕಾರ ಕೊಡುವಂತೆ ಕೇಳಿಕೊಳ್ಳುವರು. ಊಟ ಮಾಡಿದ ನಂತರ ಅವರ ಕೈಯಲ್ಲಿ ಕೆಲವೊಂದು ಕರಪತ್ರಗಳನ್ನು ಕೊಟ್ಟು ಹೋಗುವರು. ಈ ಸುದ್ದಿಯನ್ನು ಯಾರಾದರೂ ಪೋಲೀಸರಿಗೆ ಮುಟ್ಟಿಸಿದ್ದಾರೆಂಬ ಗುಮಾನೆ ಬಂದರೆ ಅವರನ್ನು ಅವರ ಮನೆಯಲ್ಲಿ ಕಂಬಕ್ಕೆ ಕಟ್ಟಿ ಗುಂಡು ಹಾರಿಸುವರು. ಇಂತಹ ಘಟನೆಯು ೨೦೧೦ರಲ್ಲಿ ಕಬ್ಬಿನಾಲೆಯ ಸಮೀಪ ಇರುವ ಬ್ರಾಹ್ಮಣರ ಒಂಟಿ ಮನೆಯ ಸುರೇಶ ಎಂಬುವವನನ್ನು ಪೋಲೀಸರಿಗೆ ಮಾಹಿತಿ ಕೊಟ್ಟಿದ್ದಾನೆಂಬ ಗುಮಾನಿಯ ಮೇಲೆ ಅವನನ್ನು ಗುಂಡಿಕ್ಕಿ ಕೊಂದರು. ನಂತರ ೧೫ ದಿವಸಗಳಾದ ಮೇಲೆ ಪುನಃ ಆ ಸ್ಥಳಕ್ಕೆ ಬೆಟ್ಟಿಕೊಟ್ಟು ಯಾರಾದರೂ ಪೋಲಿಸರಿಗೆ ಮಾಹಿತಿ ಕೊಟ್ಟರೆ ನಿಮಗೂ ಇದೇ ಗತಿಯೆಂದು ಹೇಳಿಹೋಗಿದ್ದಾರೆಂದು ಕಬ್ಬಿನಾಲೆಯ ರಾಜು ಈತನು ಹೇಳುತ್ತಾನೆ.

ಇವರಿಗೆ ಬೆಂಬಲವಾಗಿ ಕೆಲವು ಆದಿವಾಸಿಗಳು ಕೆಲಸ ಮಾಡುತ್ತಿದ್ದರು. ಅವರ ನೀಡಿದ ಕರಪತ್ರಗಳನ್ನು ಗೋಡೆಗೆ ಅಂಟಿಸುವುದು, ಪೋಲೀಸರ ಬಗ್ಗೆ ನಕ್ಸಲ್‌ರಿಗೆ ಮಾಹಿತಿ ಕೊಡುವುದು, ಅವರಿಗೆ ಊಟ ಮತ್ತು ಬಟ್ಟೆಗಳನ್ನು ಒದಗಿಸುವುದು, ಆಹಾರ ಸಾಮಗ್ರಿಗಳನ್ನು ಒದಗಿಸುವುದು ಇವರ ಕೆಲಸವಾಗಿತ್ತು. ಕೆಲವು ಹಸಲರ ಯುವಕರು ಕೂಡಾ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಲು ಉತ್ಸುಕರಾಗಿದ್ದರು. ಯಾವಾಗ ೨೦೦೫ರಲ್ಲಿ ವಿಶೇಷ ಕ್ಷಿಪ್ರ ಕಾರ್ಯಾಚರಣೆಯ ದಳ ನಕ್ಸಲ್ ಮುಖಂಡನನ್ನು ಹತ್ಯೆಗೈದ ನಂತರ ಸರಕಾರವು ೨೦೦೮ರಲ್ಲಿ ಸಮಗ್ರ ನಕ್ಸಲ್ ಪೀಡಿತ ಯೋಜನೆ ಅಸ್ತಿತ್ವದಲ್ಲಿ ತಂದಿತು. ಈ ಯೋಜನೆ ಬಂದ ನಂತರ ಕೆಲವು ಹಸಲರ–ಯುವಕರು ತಮ್ಮ ಮನಸ್ಸನ್ನು ಬದಲಿಸಿದರು ಎಂಬ ಮಾಹಿತಿಯನ್ನು ಹಳ್ಳಿಹೊಳೆಯ ಹಸಲರ ಮುಖಂಡ ಶ್ರೀನಿವಾಸ್ (ಹೆಸರು ಬದಲಾಯಿಸಿದೆ) ಹೇಳುತ್ತಾನೆ.

ಕರ್ನಾಟಕ ಸರಕಾರವು ೨೦೦೮ರಲ್ಲಿ ಸಮಗ್ರ ನಕ್ಸಲ್ ಪ್ಯಾಕೇಜ್‌ನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಜಾರಿಯಲ್ಲಿ ತಂದಿತು. ಒಟ್ಟು ನಕ್ಸಲ್ ಪೀಡಿತ ಪ್ರದೇಶವನ್ನು ಕ್ಷಿಪ್ರ ಕಾರ್ಯಾಚರಣೆಯ ದಳದ ವರದಿಯ ಆಧಾರದ ಮೇಲಿಂದ ಆದ್ಯತಾ ವಲಗಳನ್ನಾಗಿ ಮಾಡಿ ಆ ವಲಯಗಳಲ್ಲಿ ಆದ್ಯತೆಯ ಮೇರೆಗೆ ಈ ಯೋಜನೆಯನ್ನು ಜಾರಿಯಲ್ಲಿ ತಂದಿತು. ಈ ಯೋಜನೆಯನ್ವಯ ಎಲ್ಲಿ ನಕ್ಸಲ್‌ರು ಮೇಲಿಂದ ಮೇಲೆ ಯಾವ ಪ್ರದೇಶಕ್ಕೆ ಭೇಟ್ಟಿಕೊಡುವರೋ ಅಂತಹ ಪ್ರದೇಶದ ಆದಿವಾಸಿಗಳಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡುವರು.

ಕಬ್ಬಿನಾಲೆ, ಹಳ್ಳಿಹೊಳೆ, ಕುಂದಲಬೈಲು, ಕಾರೆಬೈಲು ಮತ್ತು ದಬ್ಬೋಡಿನ ಕೆಲವು ಹಸಲರ ಹಾಡಿಕೇರಿಯ ಪ್ರತಿ ಮನೆಗೆ ಸೋಲಾರ್ ವ್ಯವಸ್ಥೆಯನ್ನು ಅಳವಡಿಸಿ, ಒಂದು ಬಣ್ಣದ ಟಿ.ವ್ಹಿ.

ಆರು ಬಲ್ಬಗಳು, ಎರಡು ಪವರ್ ಬ್ಯಾಕ ಅಫ್ ಬ್ಯಾಟರಿಗಳು, ಒಂದು ಟೇಬಲ್ ಮತ್ತು ಬ್ಯಾಟರಿಗಳನ್ನಿಡಲು ಒಂದು ಪ್ಲಾಸ್ಟಿಕ್ ಕೇಸಗಳನ್ನು ಕೊಡಲಾಗಿದೆ.

ನಕ್ಸಲ್ ಹಾವಳಿ ಕಂಡು ಬರುವ ಹಸಲರ ಹಾಡಿಕೇರಿಗಳಿಗೆ 'ಸುವರ್ಣ ವಸ್ತ್ರ ಯೋಜನೆ' ಯನ್ವಯ ಜವಳಿ ಮತ್ತು ಕೈಮಗ್ಗ ಇಲಾಖೆಯು ಕ್ಷೇತ್ರ ಕಾರ್ಯ ಮಾಡಿ ಎಲ್ಲಿ ಆದಿವಾಸಿಗಳಿಗೆ ಅಥವಾ ಪರಿಶಿಷ್ಟ ಜಾತಿಯವರಿಗೆ ವರ್ಷದಲ್ಲಿ ಕೆಲವೇ ದಿವಸ ಕೂಲಿ ಸಿಕ್ಕು ಉಳಿದ ದಿವಸಗಳನ್ನು ಹಾಗೆ ಕಳೆಯುವವರನ್ನು ಗುರುತಿಸಿತು. ಏಕೆಂದರೆ, 'ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು' ಎಂಬ ಗಾದೆಯಂತೆ ಅವರಿಗೆ ಹೊಟ್ಟೆಗೆ ಅನ್ನವಿರದಿದ್ದಾಗ ಅವರು ಸಮಾಜ ಘಾತುಕ ಚಟುವಟಿಕೆಗಳಲ್ಲಿ ತೊಡಗುವುದು ಅನಿವಾರ್ಯ. ಆದ್ದರಿಂದ ಇವರಿಗೆ ವರ್ಷವಿಡಿ ಕೆಲಸ ಕೊಡುವ ಒಂದು ಯೋಜನೆಯನ್ನು ಜಾರಿಯಲ್ಲಿ ತಂದರು. ಅದುವೇ 'ಸುವರ್ಣ ವಸ್ತ್ರ ಯೋಜನೆ'.

ಈ ಯೋಜನೆಯನ್ವಯ ಜವಳಿ ಮತ್ತು ಕೈಮಗ್ಗ ಇಲಾಖೆಯು ಕಬ್ಬಿನಾಲೆಯ ಹಸಲರ ಹಾಡಿಕೇರಿಯ ಸಮೀಪದಲ್ಲಿಯೇ ಒಂದು ಶಾಶ್ವತವಾದ ಟೆಂಟನ್ನು ಹಾಕಿ ಅಲ್ಲಿ ಇವರಿಗೆ ನೇಯುವ ತರಬೇತಿಯನ್ನು ಕೊಡುವರು. ಈ ತರಬೇತಿಯನ್ನು ಕೊಡುವುದಕ್ಕಾಗಿ ಜವಳಿ ಮತ್ತು ಕೈಮಗ್ಗ ಇಲಾಖೆಯು ನುರಿತ ತರಬೇತಿದಾರನನ್ನು ಸುಮಾರು ಆರು ತಿಂಗಳವರೆಗೆ ಹಸಲರಿಗೆ ತರಬೇತಿ ಕೊಡಲು ನಿಯೋಜಿಸಿದ್ದಾರೆ. ಈತನು ಹಸಲರ ಹಾಡಿಕೇರಿಗೆ ಹೋಗಿ ತರಬೇತಿ ಕೊಡಬೇಕು. ಇದಕ್ಕಾಗಿ ಆತನಿಗೆ ತಿಂಗಳಿಗೆ ಆರು ಸಾವಿರ ರೂಪಾಯಿ ಸಂಬಳದ ಜೊತೆಗೆ ವಿಶೇಷ ಭತ್ಯೆಯನ್ನು ಸರಕಾರವು ಕೊಡುವುದು. ಅಲ್ಲದೆ ತರಬೇತಿಯಲ್ಲಿ ನಿರತರಾದ ಹೆಣ್ಣು ಮಕ್ಕಳಿಗೆ ತಿಂಗಳಿಗೆ ೨೫೦೦/–ಗಳನ್ನು ಸ್ಟೈಪಂಡ್‌ನ್ನು ಕೊಡಲಾಗುವುದು. ತರಬೇತಿ ಪೂರ್ಣಗೊಳಿಸಿದ ಹಸಲರ ಹೆಣ್ಣು ಮಕ್ಕಳಿಗೆ ತಮ್ಮ ಮನೆಯಲ್ಲಿಯೇ ಮಗ್ಗ ಹಾಕುತ್ತಿದ್ದರೆ ಸುಮಾರು ೪೫,೦೦೦ ರೂಪಾಯಿಗಳ ವರೆಗೆ ಸಾಲವನ್ನು ನೀಡುವರು. ಅಲ್ಲದೆ ಇದಕ್ಕೆ ೨೦% ಸಬ್ಸಿಡಿ ಇದೆ. ಆ ಹಣವನ್ನು ಅವರು ತಿಂಗಳ ಕಂತಿನಲ್ಲಿ ಮರುಪಾವತಿಸಬೇಕು. ಜವಳಿ ಮತ್ತು ಕೈಮಗ್ಗ ನಿಗಮವು ಪ್ರತಿ ಹದಿನೈದು ದಿವಸಗಳಿಗೊಮ್ಮೆ ನೂಲು ಸರಬರಾಜು ಮಾಡುತ್ತಾರೆ. ಈ ನೂಲಿಗೆ ಅವರು ಹಣ ಕೊಡುವಂತಿಲ್ಲ. ಆದರೆ ಇವರು ಒಂದು ಲುಂಗಿ ನೈಯ್ದು ಕೊಟ್ಟರೆ ಇವರಿಗೆ ೪೨ ರೂಪಾಯಿಗಳ ವರೆಗೆ ಹಣವನ್ನು ಕೊಡುತ್ತಾರೆ. ದಿನಕ್ಕೆ ಒಬ್ಬರು ೨ ಲುಂಗಿಗಳನ್ನು ನೇಯುವರು. ಆದರೆ ರಾಣೆಬೆನ್ನೂರು, ಹಾವೇರಿ, ಹಾನಗಲ್, ದಾವಣಗೇರೆ ಮುಂತಾದ ಕಡೆ ನೇಕಾರರಿಗೆ ಒಂದು ಲುಂಗಿ ನೇಯ್ದು ಕೊಟ್ಟರೆ ೩೬ ರೂಪಾಯಿಯನ್ನು ಮಾತ್ರ ಕೊಡುತ್ತಾರೆ. ನಕ್ಸಲ್ ಪ್ಯಾಕೇಜಿನನ್ವಯ ಇವರಿಗೆ ಒಂದು ಲುಂಗಿಗೆ ೮ ರೂಪಾಯಿಗಳ ವರೆಗೆ ಹೆಚ್ಚಿನ ದರವನ್ನು ಕೊಡುವರು. ಇದರಿಂದ ನಮ್ಮ ಆದಾಯವು ಕೂಡಾ ಹೆಚ್ಚಾಗಿದೆ ಎಂದು ನಳಿನಿ ವಯಸ್ಸು ೨೨ ಕಬ್ಬಿನಾಲೆ ಇವಳು ಹೆಮ್ಮೆಯಿಂದ ಹೇಳುತ್ತಾಳೆ.

ಕರ್ನಾಟಕ ಸರಕಾರವು ಖಾಸಗಿ ವ್ಯಕ್ತಿಗಳೊಡನೆ ಕೂಡಿಕೊಂಡು ನಕ್ಸಲ್ ಪೀಡಿತ ಪ್ರದೇಶದಲ್ಲಿ ಗೇರು ಬೀಜ ಬಿಡಿಸುವ ಯಂತ್ರಗಳನ್ನು ಸ್ಥಾಪಿಸಿದೆ. ಹೆಬ್ರಿಯ ಬಲ್ಲಾಳರ ಜೊತೆಗೂಡಿ ಸರಕಾರವು ಕಬ್ಬಿನಾಲೆ, ಹಳ್ಳಿಹೊಳೆ, ಯಡಿಗೇರಿ ಮತ್ತು ಕಾರೆಬೈಲಿನಲ್ಲಿ ಒಂದು ಶಾಶ್ವತವಾದಂತ ಟೆಂಟನ್ನು

ಹಾಕಿ ಹಸಲರ ಹೆಣ್ಣು ಮಕ್ಕಳಿಗೆ ಗೇರಿ ಬೀಜದ ಚೀಲಗಳನ್ನು ಕೊಟ್ಟು ಹೋಗುವರು. ಇವರು ಗೇರು ಬೀಜಗಳನ್ನು ಸಿಪ್ಪೆಯಿಂದ ಬೇರ್ಪಡಿಸಿ ಅದರ ಗುಣಮಟ್ಟದ ಆಧಾರದ ಮೇಲಿಂದಲೆ ೧೧ ಪ್ರಕಾರದ ಗೋಡಂಬೆಗಳನ್ನು ಪುನಃ ಅವರಿಗೆ ಕೊಡಬೇಕು. ಒಂದು ಕೆ.ಜಿ ಗೇರು ಬೀಜಕ್ಕೆ ೧೦ ರೂಪಾಯಿಯಂತೆ ಕೂಲಿ, ಇಬ್ಬರೂ ಕೂಡಿ ದಿನಾಲು ೨೫ ಕೆ.ಜಿ ಗಿಂತಲೂ ಹೆಚ್ಚು ಗೇರು ಬೀಜಗಳನ್ನು ಬಿಡಿಸುವರು. ಬಿಡಿಸಿದ ಗೇರು ಬೀಜಿನ ಸಿಪ್ಪೆಯನ್ನು ಕೂಡಾ ಅವರಿಗೆ ಮರಳಿ ಕೊಡಬೇಕು. ಪ್ರತಿ ಹದಿನೈದು ದಿನಗಳಿಗೊಮ್ಮೆ ಬಂದು ಗೇರು ಬೀಜವನ್ನು ಕೊಟ್ಟು ಗೋಡಂಬಿಯನ್ನು ತೆಗೆದುಕೊಂಡು ಹೋಗುತ್ತಾರೆ. ಈ ಕಾರ್ಯವೂ ಕೂಡಾ ಮಳೆಗಾಲದಲ್ಲಿಯೂ ನಡೆಯುವುದರಿಂದ ಅವರಿಗೆ ಮೊದಲು ಮಳೆಗಾಲದಲ್ಲಿ ಯಾವುದೇ ರೀತಿಯ ಕೆಲಸ ಇರಲಿಲ್ಲ. ಆದರೆ ಈ ಯೋಜನೆ ಬಂದ ನಂತರ ಮಳೆಗಾಲದಲ್ಲಿಯೂ ಕೂಡಾ ಅವರು ದುಡಿಯಬಹುದು. ಇದರಿಂದ ಮಳೆಗಾಲದಲ್ಲಿ ಆದಾಯ ಇರದಿದ್ದ ನಾವು ಈಗ ಮಳೆಗಾಲದಲ್ಲಿಯೂ ಕೂಡಾ ಹಣವನ್ನು ಗಳಿಸಬಹುದೆಂದು ಹಳ್ಳಿಹೊಳೆಯ ಲಕ್ಷ್ಮೀ ಅಭಿಪ್ರಾಯಪಡುತ್ತಾಳೆ. ನೇಯುವ ಮತ್ತು ಗೇರು ಬೀಜ ಬಿಡಿಸುವ ಕಾರ್ಯವನ್ನು ಮಹಿಳೆಯರೇ ಮಾಡುತ್ತಾರೆ. ಇಂತಹ ಯೋಜನೆಗಳನ್ನು ಜಾರಿಯಲ್ಲಿ ತರುವುದರಿಂದ ಇವರು ಆರ್ಥಿಕವಾಗಿ ಸಬಲರಾಗುವರಲ್ಲದೆ ನಕ್ಸಲ್ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವುದಿಲ್ಲ. ಇದರಿಂದ ನಕ್ಸಲ್ ಚಟುವಟಿಕೆಗಳನ್ನು ನಿಗ್ರಹಿಸಬಹುದೆಂದು ಕಬ್ಬಿನಾಲೆಯ ಕೃಷ್ಣ ಅಭಿಪ್ರಾಯಪಡುತ್ತಾನೆ.

೪.೧೦ ಶ್ರೀ ಮಂಜುನಾಥೇಶ್ವರ ಗ್ರಾಮೀಣ ಅಭಿವೃದ್ಧಿ ಯೋಜನೆ

ಮಹಾತ್ಮ ಗಾಂಧೀಜಿಯವರು ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಮತ್ತು ದೇಶ ಅಭಿವೃದ್ಧಿಯಾಗಬೇಕಾದರೆ ಮೊದಲು ಗ್ರಾಮಗಳ ಅಭಿವೃದ್ಧಿಯಾಗಬೇಕು ಅಂದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು. ಈ ಮಹಾನ್ ಉದ್ದೇಶವನ್ನಿಟ್ಟುಕೊಂಡು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವಿರೇಂದ್ರ ಹೆಗಡೆಯವರು ತೊಂಬತ್ತರ ದಶಕದಲ್ಲಿ ಶ್ರೀ ಮಂಜುನಾಥೇಶ್ವರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಹಾಕಿಕೊಂಡರು. ಇದರನ್ವಯ ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಕಲ್ಪಿಸಲು, ಅವರಿಗೆ ಹಣಕಾಸಿನ ಸಹಾಯ ಮಾಡಲು ಪ್ರಾರಂಭಿಸಿದರು. ಇದರನ್ವಯ ಗ್ರಾಮೀಣ ಬಡ ಮತ್ತು ನಿರುದ್ಯೋಗಿ ಯುವಕರು ಪಶುಸಂಗೋಪನೆ ಮತ್ತು ಸ್ವಯಂ ಉದ್ಯೋಗ ಕೈಕೊಳ್ಳಲು ಅವರ ವಿದ್ಯಾರ್ಹತೆ ಮತ್ತು ಸಾಲ ಮರುಪಾವತಿಯ ಭರವಸೆಯ ಮೇಲೆ ಸುಮಾರು ೭೦ ರಿಂದ ೧ ಲಕ್ಷದವರೆಗೆ ಸಾಲ ವಿತರಿಸುವರು. ಇದಕ್ಕೆ ಅವರು ಶೇ. ೧೪ ರ ಬಡ್ಡಿದರದಲ್ಲಿ ಕೊಡುವರು. ಸಾಲ ತೆಗೆದುಕೊಂಡ ವ್ಯಕ್ತಿ ತಾನು ತೆಗೆದುಕೊಂಡ ಸಾಲವನ್ನು ಮೂರು ವರ್ಷಗಳಲ್ಲಿ ಅದನ್ನು ಪ್ರತಿ ತಿಂಗಳು ಮರುಪಾವತಿಸಬೇಕು. ಘಟ್ಟದ ಮೇಲಿನ ಹಸಲರು ಸಾಲ ತೆಗೆದುಕೊಂಡು ಸಾಲ ಮರುಪಾವತಿ ಮಾಡಲಿಲ್ಲ. ಇದರಿಂದ ಆ ಯೋಜನೆಯನ್ನು ಘಟ್ಟದ ಮೇಲಿನ ಹಸಲರಿಗೆ ಕೊಡಲು ಅಧಿಕಾರಿಗಳು ನಿರಾಕರಿಸಲು ಪ್ರಾರಂಭಿಸಿದರು. ಆದರೆ ಘಟ್ಟದ ಕೆಳಗಿನ ಹಸಲರು ಈ ಯೋಜನೆಯ ಲಾಭ ಪಡೆದು ಆರ್ಥಿಕವಾಗಿ ಸುಭದ್ರರಾಗಲು ಪ್ರಾರಂಭಿಸಿದ್ದಾರೆ.

ಈ ಯೋಜನೆಯ ಫಲಾನುಭವಿ ಶಂಕರ ತಿಮ್ಮ ಸಾ॥ ಕಾರೆಬೈಲು ಇವನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ೭೫ ಸಾವಿರ ರೂಪಾಯಿ ಸಾಲ ಪಡೆದು ಹಸು ಮತ್ತು ಎಮ್ಮೆಗಳನ್ನು ಸಾಕಿದ್ದಾನೆ. ಹಸು ಮತ್ತು ಎಮ್ಮೆಗಳ ಹಾಲನ್ನು ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ದಿನಾಲೂ ಹಾಲು ಕೊಡುವನು. ಇದರಿಂದ ಆತನಿಗೆ ದಿನಾಲೂ ಸುಮಾರು ೫೦೦ ರಿಂದ ೮೦೦ ರೂಪಾಯಿಗಳವರೆಗೆ ಆದಾಯ ಬರುತ್ತದೆ ಎಂದು ಹೇಳುತ್ತಾನೆ ಇದರಿಂದ ಉತ್ತೇಜನಗೊಂಡು ಈ ವರ್ಷ ಸುಮಾರು ಒಂದು ಲಕ್ಷ ರೂಪಾಯಿಯವರೆಗೆ ಸಾಲ ತೆಗೆದುಕೊಂಡು ಹೆಚ್ಚಿಗೆ ಎಮ್ಮೆಗಳನ್ನು ಸಾಕಬೇಕೆಂದು ಆಶಿಸುತ್ತಾನೆ. ಈ ಆಸೆಯು ಈಡೇರಲೆಂದು ಧರ್ಮಸ್ಥಳದ ಮಂಜುನಾಥೇಶ್ವರನಲ್ಲಿ ಬೇಡಿಕೊಳ್ಳುತ್ತಾನೆ. ಘಟ್ಟದ ಕೆಳಗಿನ ಹಸಲರು ಧರ್ಮಸ್ಥಳದ ಮಂಜುನಾಥೇಶ್ವರ ಭಯದಿಂದ ಸಾಲ ಮರುಪಾವತಿಯನ್ನು ಸರಿಯಾದ ಸಮಯಕ್ಕೆ ಮಾಡುತ್ತಾರೆಂದು ಸಿದ್ಧಾಪೂರ ಕದ್ರಿ ಶ್ರೀ ಮಂಜುನಾಥೇಶ್ವರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಅಧಿಕಾರಿಗಳು ಹೇಳುವುದರ ಜೊತೆಗೆ ಹಸಲರು ಆರ್ಥಿಕವಾಗಿಯೂ ಸದೃಢವಾಗಿದ್ದಾರೆಂದು ಹೇಳುತ್ತಾರೆ.

೪.೧೧ ಸುವಿದಾ

ಈ ಯೋಜನೆಯು ಶ್ರೀ ಧರ್ಮಸ್ಥಳದ ಮಂಜುನಾಥೇಶ್ವರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಒಂದು ಗುಂಪು ಯೋಜನೆ. ಈ ಯೋಜನೆಯಲ್ಲಿ ಸದಸ್ಯತ್ವ ಪಡೆಯಬೇಕಾದರೆ ನಾಲ್ಕರಿಂದ ಐದು ಜನರ ಗುಂಪು ಬೇಕು. ಈ ಗುಂಪಿನ ಸದಸ್ಯತ್ವವನ್ನು ಪಡೆದ ನಂತರ ಪ್ರತಿಯೊಬ್ಬ ಸದಸ್ಯನು ಆರು ತಿಂಗಳವರೆಗೆ ಪ್ರತಿವಾರ ರೂಪಾಯಿ ೧೦ ರಂತೆ ವಾರದ ವಂತಿಗೆ ಕಟ್ಟಬೇಕು. ಆರು ತಿಂಗಳ ನಂತರ ಯಾರು ಸರಿಯಾದ ರೀತಿಯಲ್ಲಿ ವಾರದ ವಂತಿಗೆಯನ್ನು ಕಟ್ಟಿರುವರೋ ಅವರಿಗೆ ಈ 'ಸುವಿದಾ' ಯೋಜನೆಯ ಮುಖಾಂತರ ೪೫ ಸಾವಿರ ರೂಪಾಯಿಗಳ ವರೆಗೆ ಶೇ. ೧೨ರ ಬಡ್ಡಿದರದಲ್ಲಿ ಸಾಲ ನೀಡುವರು. ಸಾಲ ತೆಗೆದುಕೊಂಡು ಪ್ರತಿಯೊಬ್ಬ ಸದಸ್ಯನು ಪ್ರತಿ ೧೦ ಸಾವಿರ ರೂಪಾಯಿಗಳಿಗೆ ಪ್ರತಿ ವಾರಕ್ಕೆ ೯೦ ರೂಪಾಯಿಯಂತೆ ಎರಡುವರೆ ವರ್ಷದಿಂದ ಮೂರು ವರ್ಷಗಳವರೆಗಿನ ಅವಧಿಯಲ್ಲಿ ಸಾಲ ಮರುಪಾವತಿ ಮಾಡಬಹುದು. ಅಲ್ಲದೆ ಪ್ರತಿವಾರವೂ ಪ್ರತಿ ಸದಸ್ಯನು ೧೦ ರೂಪಾಯಿಯಂತೆ ಉಳಿತಾಯ ಮಾಡುವುದನ್ನು ಕಡ್ಡಾಯಗೊಳಿಸಿದ್ದಾರೆ. ಗುಂಪಿನ ಯಾವುದೇ ಸದಸ್ಯನು ವಾರದ ವಂತಿಗೆ ಮತ್ತು ಸಾಲ ಮರುಪಾವತಿ ಹಣವನ್ನು ಸಂಸ್ಥೆಗೆ ಕಟ್ಟದಿದ್ದರೆ ಗುಂಪಿನ ಮತ್ತೊಬ್ಬ ಸದಸ್ಯನು ಅವನ ವಾರದ ವಂತಿಗೆ ಮತ್ತು ಸಾಲದ ಕಂತನ್ನು ಕಟ್ಟುವನು. ಮುಂದಿನ ವಾರ ಆತನು ಸಾಲ ಮರುಪಾವತಿ ಮಾಡಿದ ಸದಸ್ಯನ ಸಾಲ ಮತ್ತು ವಾರದ ವಂತಿಗೆಯನ್ನು ಕಟ್ಟುವನು. ಈ ವಾರ ಮತ್ತೊಬ್ಬ ಸದಸ್ಯನು ಅವನ ವಾರದ ವಂತಿಗೆ ಮತ್ತು ಸಾಲದ ಕಂತನ್ನು ಕಟ್ಟುವನು. ಮುಂದಿನ ವಾರ ಆತನು ಸಾಲ ಮರುಪಾವತಿ ಮಾಡಿದ ಸದಸ್ಯನ ಸಾಲ ಮತ್ತು ವಾರದ ವಂತಿಗೆಯನ್ನು ಕಟ್ಟುವನು.

ಈ ಯೋಜನೆಯ ಇನ್ನೊಂದು ಲಾಭವೆಂದರೆ, ಪ್ರತಿ ಸದಸ್ಯನು ಒಂದು ವಾರದಲ್ಲಿ ಒಬ್ಬರ ಗದ್ದೆ ಅಥವಾ ತೋಟದಲ್ಲಿ ಕಡ್ಡಾಯವಾಗಿ ದುಡಿಯಲೇಬೇಕು. ದುಡಿತಕ್ಕೆ ಅವರಿಗೆ ಯಾವುದೆ

ರೀತಿಯ ಕೂಲಿ ಕೊಡಬೇಕಾಗಿಲ್ಲ. ಏಕೆಂದರೆ, ಪ್ರತಿ ವಾರಕ್ಕೊಮ್ಮೆ ಪ್ರತಿಯೊಬ್ಬ ಸದಸ್ಯರು ತಮ್ಮ ತಮ್ಮ ಗದ್ದೆಗಳಲ್ಲಿ ಗುಂಪಿನ ಸದಸ್ಯರೊಂದಿಗೆ ತಿಂಗಳಲ್ಲಿ ಐದು ದಿವಸಗಳವರೆಗೆ ದುಡಿಯಲೇಬೇಕು. ಕೊಲ್ಲೂರಿನ ಗುಂಪಿನ ಸದಸ್ಯರು ಪ್ರತಿ ಗುರುವಾರ ಒಬ್ಬೊಬ್ಬ ಸದಸ್ಯನ ಗದ್ದೆ ಅಥವಾ ತೋಟದಲ್ಲಿ ದುಡಿಯಬೇಕೆಂದು ನಿರ್ಧರಿಸಿ, ವೇಳಾಪಟ್ಟಿಯನ್ನು ತಯಾರಿಸುವರು. ಅದರಂತೆ ಪ್ರತಿ ಗುರುವಾರ ಪ್ರತಿಯೊಬ್ಬ ಸದಸ್ಯನ ಗದ್ದೆ ಅಥವಾ ತೋಟದಲ್ಲಿ ದುಡಿಯುವರು. ಇದರಿಂದ ಒಂದು ತಿಂಗಳಲ್ಲಿ ಪ್ರತಿ ಸದಸ್ಯನ ಗದ್ದೆ ಅಥವಾ ತೋಟದಲ್ಲಿ ಐದು ದಿವಸಗಳವರೆಗೆ ಕಡ್ಡಾಯವಾಗಿ ದುಡಿಮೆ ಮಾಡಿದ ಹಾಗೆ ಆಗುತ್ತದೆ. ಅಲ್ಲದೆ ಗದ್ದೆ ಅಥವಾ ತೋಟದ ಮೇಲೆ ನಿಗಾವಹಿಸಲು ಸಾಧ್ಯವೆಂದು ಕೃಷ್ಣಯ್ಯ ಅಣ್ಣಪ್ಪ (ಸಾ॥ ಕೊಲ್ಲೂರ) ಹೇಳುತ್ತಾನೆ. ಈ ಯೋಜನೆಯಲ್ಲಿ ಕೇವಲ ಹಸಲರೆ ಇರಬೇಕೆಂಬ ನಿಯಮವಿಲ್ಲ. ಕೊಲ್ಲೂರಿನ ಹಸಲರು ಬ್ರಾಹ್ಮಣರ ಜೊತೆಗೂಡಿ ಗುಂಪು ರಚನೆ ಮಾಡಿಕೊಂಡು ಎಲ್ಲರ ಗದ್ದೆಗಳಲ್ಲಿ ದುಡಿಯುತ್ತಾರೆ. ಇದರಿಂದ ಮೇಲು ಕೀಳು ಎಂಬ ಭಾವನೆ ಬರುವುದಿಲ್ಲ. ಅಷ್ಟೆ ಅಲ್ಲ, ಬೇರೆ ಬೇರೆ ಜಾತಿಯ ಜನರ ನಡುವೆ ಸಾಮರಸ್ಯ ಮತ್ತು ಸಹಕಾರ ವೃದ್ಧಿಯಾಗುತ್ತದೆಂದು ಕಬ್ಬಿನಾಲೆಯ ಕೃಷ್ಣ ಹೇಳುತ್ತಾನೆ.

ಕುಂದಾಪೂರ ತಾಲೂಕಿನ ಕೊಲ್ಲೂರಿನ ಸುವಿದಾ ಯೋಜನೆಯ ಅಡಿಯಲ್ಲಿ ಸುಮಾರು ೨೨ ಗುಂಪುಗಳಿವೆ. ಈ ೨೨ ಗುಂಪಿನ ಸದಸ್ಯರು ಪ್ರತಿ ತಿಂಗಳು ಒಂದು ದಿನ ಕಡ್ಡಾಯವಾಗಿ ಸಭೆ ಸೇರಿ ಈ ಯೋಜನೆಯ ಬಗ್ಗೆ ಚರ್ಚಿಸುವರು. ಈ ಸಭೆಯಲ್ಲಿ ಯಾವ ಗುಂಪಿನ ಸದಸ್ಯರು ವಾರದ ವಂತಿಗೆ ಅಥವಾ ಸಾಲ ಮರುಪಾವತಿ ಮಾಡಿರುವುದಿಲ್ಲವೋ ಅಂತಹ ಗುಂಪುಗಳಿಗೆ ಎಚ್ಚರಿಕೆ ಕೊಡುವರು. ಒಂದು ವೇಳೆ ಅವರಿಂದ ಕೊಡಬೇಕಾದ ವಂತಿಗೆ ಒಂದು ತಿಂಗಳಾದರೂ ಬರದಿದ್ದರೆ ಅಂತಹ ಗುಂಪಿಗೆ ಮುಂದೆ ಯಾವುದೇ ರೀತಿಯ ಸಾಲ ಸೌಲಭ್ಯ ನೀಡುವುದಿಲ್ಲ. ಇದಕ್ಕೆ ಹೆದರಿ ಅವರು ಸರಿಯಾಗಿ ಸಾಲ ಮರುಪಾವತಿ ಮಾಡುತ್ತಾರೆ. ಈ ಯೋಜನೆಯ ಲಾಭವನ್ನು ಹಳ್ಳಿಹೊಳೆ, ಕಬ್ಬಿನಾಲೆ, ಕಾರೆಬೈಲು, ಕುಂದಲೆಬೈಲು, ಕೊಲ್ಲೂರಿನ ಹಸಲರು ಪಡೆದುಕೊಂಡಿದ್ದಾರೆ.

ಈ ಯೋಜನೆಯ ಸಹಾಯ ಪಡೆದುಕೊಂಡು ಕೊಲ್ಲೂರಿನ ಕೃಷ್ಣಯ್ಯ ಅಣ್ಣಪ್ಪ ಈತನು ಒಂದು ಎಕರೆ ಗದ್ದೆಯನ್ನು ತೋಟವನ್ನಾಗಿ ಮಾಡಿ ಅದರಲ್ಲಿ ಅಡಕೆ, ತೆಂಗು ಮತ್ತು ಬಾಳೆಗಿಡಗಳನ್ನು ನೆಟ್ಟಿದ್ದಾನೆ. ಈ ವರ್ಷ ಅಡಕೆಯಿಂದ ತುಂಬಾ ಲಾಭವಾಗಿದೆಯೆಂದು ಹಸನ್ಮುಖಿಯಾಗಿ ಹೇಳುತ್ತಾನೆ.

೪.೧೨ ಸ್ವ-ಸಹಾಯ ಗುಂಪುಗಳು

ಸ್ವ-ಸಹಾಯ ಗುಂಪುಗಳು ಹಸಲರ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿವೆ. ಸ್ವಸಹಾಯ ಗುಂಪು ಎಂದರೆ, ತಮ್ಮಿಂದ ತಮಗೆ ಸಹಾಯ ಮಾಡುವುದು ಎಂದರ್ಥ. ಖ್ಯಾತ ಅರ್ಥಶಾಸ್ತ್ರಜ್ಞ ನೋಬಲ್ ಪಾರಿತೋಷಕ ಪಡೆದ ಅಮೃರ್ತ್ಯ ಸೇನ್ ಇವರು ಸ್ವಸಹಾಯ ಅಥವಾ ಕಿರು ಹಣಕಾಸಿನ ವ್ಯವಹಾರ ಅಥವಾ ಸೂಕ್ಷ್ಮ ಹಣಕಾಸು ವ್ಯವಸ್ಥೆ ಜನರ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದ್ದಾರೆ.

ಕೋಷ್ಟಕ– ೪.೭ ಸಮೀಕ್ಷೆ ಮಾಡಿದ ಹಸಲರ ಸ್ವ–ಸಹಾಯ ಗುಂಪಿನ ಸದಸ್ಯರ ವಿವರ

ಜಿಲ್ಲೆಗಳು		ಹೌದು	ಇಲ್ಲ	ಒಟ್ಟು
ಉತ್ತರ ಕನ್ನಡ	ಒಟ್ಟು	೬೩	೫೩	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೫೪.೩%	೪೫.೭%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೯.೬%	೨೭%	೨೨.೪%
	ಒಟ್ಟು ಪ್ರತಿಶತ	೧೨.೨%	೧೦.೩%	೨೨.೪%
ಉಡುಪಿ	ಒಟ್ಟು	೫೮	೧೪	೭೨
	ಪ್ರತಿಶತ (ಜಿಲ್ಲೆಯೊಳಗೆ)	೮೦.೬%	೧೯.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೮.೧%	೭.೧%	೧೩.೯%
	ಒಟ್ಟು ಪ್ರತಿಶತ	೧೧.೨%	೨.೭%	೧೩.೯%
ಚಿಕ್ಕಮಗಳೂರು	ಒಟ್ಟು	೬೨	೪೪	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೫೮.೫%	೪೧.೫%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೯.೩%	೨೨.೪%	೨೦.೫%
	ಒಟ್ಟು ಪ್ರತಿಶತ	೧೨%	೮.೫%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧.೯%	–	೧.೨%
	ಒಟ್ಟು ಪ್ರತಿಶತ	೧.೨%	–	೧.೨%
ಶಿವಮೊಗ್ಗ	ಒಟ್ಟು	೧೩೨	೮೫	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೬೦.೮%	೩೯.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೧.೧%	೪೩.೪%	೪೨%
	ಒಟ್ಟು ಪ್ರತಿಶತ	೨೫.೫%	೧೬.೪%	೪೨%
ಒಟ್ಟು	ಒಟ್ಟು	೩೨೧	೧೯೬	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೬೨.೧%	೩೭.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೬೨.೧%	೩೭.೧%	೧೦೦%

ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳ ಸಂಖ್ಯೆ ೫೧೭, ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಕುಟುಂಬಗಳಲ್ಲಿ ೬೩ ಕುಟುಂಬಗಳು ಕುಟುಂಬ ಸ್ವ-ಸಹಾಯ ಗುಂಪಿನ ಸದಸ್ಯರಾಗಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೮೦.೬ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೮.೧ ರಷ್ಟು, ಉಳಿದ ೫೩ ಕುಟುಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವುದಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೪೫.೭ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೭ ರಷ್ಟಾಗುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೭೨ ಕುಟುಂಬಗಳಲ್ಲಿ ೫೮ ಕುಟುಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೮೦.೬ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೮.೧ ರಷ್ಟು. ಉಳಿದ ೧೪ ಕುಟುಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವುದಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೯.೪ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೭.೧ ರಷ್ಟಾಗುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೦೬ ಕುಟುಂಬಗಳಲ್ಲಿ ೬೨ ಕುಟುಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿದ್ದಾರೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೫೮.೫ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧೯.೩ ರಷ್ಟಾಗುತ್ತದೆ. ಉಳಿದ ೪೪ ಕುಟಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವುದಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೪೧.೫ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೨೨.೪ ರಷ್ಟಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೬, ಈ ಎಲ್ಲ ಕುಟುಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿದ್ದಾರೆ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೧೦೦ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೧.೯ ರಷ್ಟು.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೨೧೬, ಇದರಲ್ಲಿ ೧೩೨ ಕುಟುಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿದ್ದಾರೆ. ಇವರ ಪ್ರಮಾಣ ಜಿಲ್ಲೆಯಲ್ಲಿ ಶೇ. ೬೦.೮ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೪೧.೧ ರಷ್ಟು. ಉಳಿದ ೮೫ ಕುಟುಂಬಗಳು ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವುದಿಲ್ಲ. ಜಿಲ್ಲೆಯಲ್ಲಿ ಇವರ ಪ್ರಮಾಣ ಶೇ. ೩೯.೨ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇವರ ಪ್ರಮಾಣ ಶೇ. ೪೩.೪ ರಷ್ಟಾಗುತ್ತದೆ.

ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಹಸಲರೂ ಕೂಡಾ ತಮ್ಮ ಹಾಡಿಕೇರಿಯಲ್ಲಿ ಸ್ವ-ಸಹಾಯ ಗುಂಪುಗಳನ್ನು ರಚನೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಲು ಹವಣಿಸುತ್ತಾರೆ.

ಕೋಷ್ಟಕ- ೪.೮ ಸಮೀಕ್ಷೆ ಮಾಡಿದ ಹಸಲರ ಸ್ವ-ಸಹಾಯ ಗುಂಪಿನ ವಾರದ ವಂತಿಗೆ ವಿವರ

ಜಿಲ್ಲೆಗಳು		ವಾರದ ವಂತಿಗೆ ವಿವರ				ಒಟ್ಟು
		೧೦ರೂ	೨೦ರೂ	೫೦ರೂ	ಸದಸ್ಯ ರಿರುವುದಿಲ್ಲ.	
ಉತ್ತರ ಕನ್ನಡ	ಒಟ್ಟು	೬೦	೨	೧	೫೩	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೫೧.೭%	೧.೭%	೦.೮%	೪೫.೬%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೧%	೧೦%	೬.೨%	೨೭%	೨೨.೪%
	ಒಟ್ಟು ಪ್ರತಿಶತ	೧೧.೬%	೦.೪%	೦.೧%	೧೦.೨%	೨೨.೪%
ಉಡುಪಿ	ಒಟ್ಟು	೫೦	೬	೨	೧೪	೭೨
	ಪ್ರತಿಶತ (ಜಿಲ್ಲೆಯೊಳಗೆ)	೬೯.೪%	೮.೩%	೨.೮%	೧೯.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೭.೫%	೩೦%	೧೦%	೭.೩%	೧೩.೯%
	ಒಟ್ಟು ಪ್ರತಿಶತ	೯.೭%	೧.೨%	೦.೪%	೨.೭%	೧೩.೯%
ಚಿಕ್ಕಮಗಳೂರು	ಒಟ್ಟು	೫೭	೪	೧	೪೪	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೫೩.೮%	೩.೮%	೦.೯%	೪೧.೫%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೦%	೨೦%	೫%	೨೨.೯%	೨೦.೫%
	ಒಟ್ಟು ಪ್ರತಿಶತ	೧೧%	೮%	೨%	೮.೫%	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	–	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨.೧%	–	–	–	೧.೨%
	ಒಟ್ಟು ಪ್ರತಿಶತ	೧.೨%	–	–	–	೧.೨%
ಶಿವಮೊಗ್ಗ	ಒಟ್ಟು	೧೧೨	೮	೧೨	೮೫	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೫೧.೬%	೩.೭%	೫.೫%	೩೯.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೩೯.೩%	೪೦%	೭೫%	೪೩.೩%	೪೨%
	ಒಟ್ಟು ಪ್ರತಿಶತ	೨೧.೭%	೧.೫%	೨.೩%	೧೬.೪%	೩೨%
ಒಟ್ಟು	ಒಟ್ಟು	೨೮೫	೨೦	೧೬	೧೯೬	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೫೫.೧%	೩.೯%	೩.೯%	೩೭.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೫೫.೧%	೩.೯%	೩.೯%	೩೭.೧%	೧೦೦%

ಈ ಸ್ವಸಹಾಯ ಗುಂಪು ಯೋಜನೆ ಶ್ರೀ ಎಸ್.ಎಮ್.ಕೃಷ್ಣ ಮುಖ್ಯ ಮಂತ್ರಿಗಳಾಗಿದ್ದಾಗ ಜಾರಿಯಲ್ಲಿ ತಂದರು. ಈ ಯೋಜನೆಯಲ್ಲಿ ಸುಮಾರು ೧೦ ರಿಂದ ೧೬ ರ ವರೆಗೆ ಸದಸ್ಯರಿರಬೇಕು. ಅವರು ಪ್ರತಿವಾರವೂ ವಾರದ ವಂತಿಗೆಯನ್ನು ಮತ್ತು ಅವರು ನಿಗದಿಪಡಿಸಿದ ಹಣವನ್ನು ಕಟ್ಟಬೇಕು. ಸ್ವಸಹಾಯ ಗುಂಪು ರಚನೆ ಮಾಡಿಕೊಂಡ ಆರು ತಿಂಗಳವರೆಗೆ ಪ್ರತಿಯೊಬ್ಬ ಸದಸ್ಯನು ಪ್ರತಿವಾರವು ವಾರದ ವಂತಿಗೆಯನ್ನು ತಪ್ಪದೇ ಕಟ್ಟಬೇಕು. ಅಲ್ಲದೆ ಪ್ರತಿಯೊಂದನ್ನು ವಾರದ ವಂತಿಗೆಯ ರಜಿಸ್ಟರ್‌ನಲ್ಲಿ ಬರೆಯಬೇಕು. ಯಾವ ಸ್ವಸಹಾಯ ಗುಂಪುಗಳು ತಪ್ಪದೇ ವಾರದ ವಂತಿಗೆಯನ್ನು ಕಟ್ಟುತ್ತವೆಯೋ ಅವುಗಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಹೆಸರು ನೋಂದಾಯಿಸಬೇಕು. ನೋಂದಾಯಿಸಿದ ಸ್ವಸಹಾಯ ಗುಂಪುಗಳಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಪ್ರತಿ ಸ್ವಸಹಾಯ ಗುಂಪುಗಳಿಗೆ ೨೦ ಸಾವಿರದಿಂದ ೨೫ ಸಾವಿರ ರೂಪಾಯಿಗಳ ವರೆಗೆ ಬೀಜ ಹಣವನ್ನು ಕೊಡುವರು. ಈ ಹಣವು ಸ್ವಸಹಾಯ ಗುಂಪು ಅಸ್ತಿತ್ವದಲ್ಲಿರುವವರೆಗೂ ಆ ಹಣವನ್ನು ತಮ್ಮಲ್ಲಿ ಇಟ್ಟುಕೊಂಡಿರಬೇಕು. ಇದಕ್ಕೆ ಯಾವುದೇ ರೀತಿಯ ಬಡ್ಡಿ ಕೊಡುವಂತಿಲ್ಲ. ಸ್ವಸಹಾಯ ಗುಂಪು ರಚನೆ ಮುರಿದು ಬಿದ್ದಾಗ ಆ ಹಣವನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಖಾಂತರ ಸಮಾಜ ಕಲ್ಯಾಣ ಇಲಾಖೆಗೆ ತುಂಬಬೇಕು. ಇದರ ಆಡಳಿತ ನೋಡಿಕೊಂಡು ಹೋಗಲು ಪ್ರತಿನಿಧಿ–೧, ಪ್ರತಿನಿಧಿ–೨ ಎಂಬ ಸದಸ್ಯರನ್ನು ಆರಿಸುವರು. ಇವರು ಸ್ವಸಹಾಯ ಗುಂಪಿನ ಸದಸ್ಯರಿಗೆ ಸಾಲ ಬೇಕಾದಾಗ ಠರಾವು ಪುಸ್ತಕದಲ್ಲಿ ಬರೆದು ಪ್ರತಿವಾರ ಸಭೆ ಸೇರಿದಾಗ ಸಭೆಯ ಒಪ್ಪಿಗೆ ಪಡೆದು ಆ ಸ್ವಸಹಾಯ ಗುಂಪಿನ ಆರ್ಥಿಕ ಭದ್ರತೆಯನ್ನು ನೋಡಿಕೊಂಡು ಸದಸ್ಯರಿಗೆ ಸಾಲ ವಿತರಣೆ ಮಾಡುವರು. ಇದಕ್ಕೆ ಬಡ್ಡಿದರ ಶೇಕಡಾ ೨ ಕ್ಕಿಂತ ಹೆಚ್ಚಿಗೆ, ಶೇಕಡಾ ಒಂದಕ್ಕಿಂತ ಕಡಿಮೆ ಮಾಡು ವಂತಿಲ್ಲ. ಪ್ರತಿ ಸದಸ್ಯನು ಸಾಲ ತೆಗೆದುಕೊಂಡಾಗ ಸಾಮಾನ್ಯವಾಗಿ ಹತ್ತು ಅಥವಾ ಹನ್ನೆರಡು ಕಂತುಗಳಲ್ಲಿ ಅಸಲಿನೊಂದಿಗೆ ಬಡ್ಡಿಸೇರಿ ಕಟ್ಟಬೇಕಾಗುತ್ತದೆ. ಇದಕ್ಕೆ ಯಾವುದೇ ರೀತಿಯ ದಂಡದ ಬಡ್ಡಿ ಹಾಕುವಂತಿಲ್ಲ.

ಇಂತಹ ಸ್ವಸಹಾಯ ಗುಂಪುಗಳು ಹಸಲರು ತಮ್ಮ ತಮ್ಮ ಹಾಡಿಕೇರಿಯಲ್ಲಿಯೇ ರಚನೆ ಮಾಡಿಕೊಂಡಿದ್ದಾರೆ. ಕುಂದಾಪೂರ ತಾಲ್ಲೂಕಿನ ಹಳ್ಳಿಹೊಳೆ, ಕಬ್ಬಿನಾಲೆ, ಕುಂದಲಬೈಲು, ಕಾರೆಬೈಲು ಸಾಗರ ತಾಲೂಕಿನ ಮೇಲಿನಗೋಳಗೋಡು, ಬೆಳ್ಳೆಣ್ಣೆ, ಹಿರೇಮನೆ, ತೋರಾಮೆ, ತುಂಬ್ರಿ, ಸೊರಬ ತಾಲೂಕಿನ ಮುಟುಗುಪ್ಪೆ, ಹೊನ್ನಾವರ ತಾಲೂಕಿನ ದಬ್ಬೋಡು, ಮುರಡೇಶ್ವರ, ಸಿದ್ಧಾಪೂರ ತಾಲೂಕಿನ ಮುಗದೂರು, ಸುತ್ಲುಮನೆ ಮುಂತಾದ ಕಡೆಗಳಲ್ಲಿ ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡಿದ್ದಾರೆ. ಹಸಲರು ಸ್ವಸಹಾಯ ಗುಂಪಿನಲ್ಲಿ ಪ್ರತಿವಾರವೂ ವಾರದ ವಂತಿಗೆಯನ್ನು ರೂಪಾಯಿ ೧೦ ರಿಂದ ೫೦ ರೂಪಾಯಿಗಳ ವರೆಗೆ ಅವರವರ ಆರ್ಥಿಕ ಸ್ಥಿತಿಗತಿಯ ಮೇಲೆ ನಿರ್ಧರಿಸಿದ್ದಾರೆ. ಈ ಹಣವನ್ನು ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಖಾತೆಯನ್ನು ತೆರೆದು ಆ ಹಣವನ್ನು ಅಲ್ಲಿ ಜಮಾ ಮಾಡುವರು. ಯಾರಾದರೂ ಸಾಲಕ್ಕೆ ಅರ್ಜಿ ಹಾಕಿದಾಗ ಇಬ್ಬರು

ಜಾಮೀನುದಾರರ ಸಹಿ ಪಡೆದುಕೊಂಡು ತಿಂಗಳಿಗೆ ಇಂತಿಷ್ಟು ಅಸಲು ಮತ್ತು ಬಡ್ಡಿ ಸೇರಿ ಹಣ ಕಟ್ಟಬೇಕಾಗುತ್ತದೆ. ಇವರಿಗೆ ಆ ಸ್ವಸಹಾಯ ಗುಂಪುಗಳ ಆರ್ಥಿಕ ಸ್ಥಿತಿಯ ಆಧಾರದ ಮೇಲೆ ೧೦ ಸಾವಿರ ರೂ.ಗಳಿಂದ ೧೨ ಸಾವಿರ ರೂ.ಗಳ ವರೆಗೆ ಕೆಲವು ಸ್ವಸಹಾಯ ಗುಂಪುಗಳು ೧೦ ಸಾವಿರ ರೂ.ಗಳಿಂದ ೫೦ ಸಾವಿರ ರೂ.ಗಳ ವರೆಗೆ ಸಾಲ ವಿತರಣೆ ಮಾಡುವರು. ಈ ಹಣವನ್ನು ೧೦ ರಿಂದ ೧೨ ತಿಂಗಳಲ್ಲಿ ಕಟ್ಟಬೇಕಾಗುತ್ತದೆ. ಕಬ್ಬಿನಾಲೆಯ ಹಸಲರು ಗೇರುಬೀಜ ವಿಂಗಡಿಸುವ ಕೆಲಸದಲ್ಲಿ ತೊಡಗಿರುವುದರಿಂದ ಅವರಿಗೆ ದಿನಾಲೂ ೧೦೦ ರಿಂದ ೧೫೦ ರೂ.ಗಳ ವರೆಗೆ ಕೂಲಿ ದೊರೆಯುವುದರಿಂದ ಇವರು ಸ್ವಸಹಾಯ ಗುಂಪುಗಳಲ್ಲಿ ೫೦ ರೂ, ವಾರದ ವಂತಿಗೆಯನ್ನು ಕಟ್ಟುವರು. ಇವರ ಸ್ವಸಹಾಯ ಗುಂಪಿನಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ಸುಮಾರು ೫೦ ಸಾವಿರ ರೂಪಾಯಿಗಳ ವರೆಗೆ ಸಾಲ ಕೊಡುತ್ತಾರೆ. ಒಂದು ವೇಳೆ ಸ್ವಸಹಾಯ ಗುಂಪಿನ ಖಾತೆಯಲ್ಲಿ ಹಣವಿರದಿದ್ದರೆ, ಚಕ್ರ ಮೈದಾನದ ಸಿಂಡಿಕೇಟ್ ಬ್ಯಾಂಕವು ಆ ಸಂಘದ ಮೇಲೆ ಸಾಲ ಹಾಕುತ್ತದೆ. ಇದನ್ನು ಅವರು ಒಂದು ವರ್ಷದಲ್ಲಿ ಬಡ್ಡಿಸಮೇತ ಕಟ್ಟಬೇಕಾಗುತ್ತದೆ. ಈ ಸಾಲವನ್ನು ತೆಗೆದುಕೊಂಡ ಕಬ್ಬಿನಾಲೆಯ ಹಸಲರು ಎಮ್ಮೆ ಮತ್ತು ಆಕಳುಗಳನ್ನು ಸಾಕಿಕೊಂಡಿದ್ದಾರೆ. ಹಸು ಮತ್ತು ಎಮ್ಮೆಯ ಹಾಲುಗಳನ್ನು ಹಾಲು ಉತ್ಪಾದಕರ ಸಂಘಕ್ಕೆ ದಿನಾಲೂ ೬ ಲೀಟರ್ ಹಾಲನ್ನು ಕೊಡುತ್ತಾರೆ. ಇದಕ್ಕೆ ಅವರು ಪ್ರತಿ ಲೀಟರ್‌ಗೆ ೧೮ ರೂಪಾಯಿಗಳ ವರೆಗೆ ಆದಾಯ ಬರುತ್ತದೆ. ಅಲ್ಲದೆ ಇವರು ಹಾಲು ಉತ್ಪಾದಕರ ಮಹಾಮಂಡಳದ ಸದಸ್ಯರಾಗಿದ್ದಾರೆ. ಇವರು ಹಾಲು ಉತ್ಪಾದಕರ ಸಂಘದಿಂದ ಪ್ರೋತ್ಸಾಹ ಧನವೆಂದು ಒಂದು ಲೀಟರ್ ಹಾಲಿಗೆ ಒಂದು ರೂಪಾಯಿಯಿಂದ ಎರಡು ರೂಪಾಯಿಗಳವರೆಗೆ ಪಡೆದಿದ್ದಾರೆ. ಸೊರಬ ತಾಲೂಕಿನ ಮುಟುಗುಪ್ಪೆ ಹಸಲರು ಕೂಡಾ ಸ್ವಸಹಾಯ ಗುಂಪುಗಳನ್ನು ರಚನೆ ಮಾಡಿಕೊಂಡು ಇದರಿಂದ ಸಾಕಷ್ಟು ಲಾಭವನ್ನು ಪಡೆದಿದ್ದೇವೆಂದು ಕಡ್ಲಪ್ಪ ಈತನು ಹೇಳುತ್ತಾನೆ.

ಒಟ್ಟಿನಲ್ಲಿ ಸ್ವಸಹಾಯ ಗುಂಪುಗಳು ಹಸಲರ ಆರ್ಥಿಕ ಚಿತ್ರಣವನ್ನು ಬದಲಿಸಿವೆ. ಇಂತಹ ಸ್ವಸಹಾಯಗಳಲ್ಲಿ ಗೋಳುಗೋಡು, ಕಬ್ಬಿನಾಲೆ, ಹಾಗಲಮನೆ, ಮುಟುಗುಪ್ಪೆ, ದಬ್ಬೋಡು ಇವು ಹೆಚ್ಚಿನ ಆರ್ಥಿಕ ಬಲಿಷ್ಠತೆಯನ್ನು ಪಡೆದ ಸ್ವಸಹಾಯ ಗುಂಪುಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಹಸಲರು ಬೇರೆ ಬೇರೆ ಜಾತಿಯ ಜನರ ಜೊತೆಗೂಡಿ ಸ್ವಸಹಾಯ ಗುಂಪುಗಳನ್ನು ರಚಿಸಿದ್ದಾರೆ. ಇದಕ್ಕೆ ಕೆಳಗಿನ ಗೋಳುಗೋಡು ಉತ್ತಮ ಉದಾಹರಣೆಯಾಗಿದೆ. ಇಲ್ಲಿ ಹಸಲರು ಭಟ್ಟರು, ದಿವರುಗಳ ಜೊತೆಗೆ ರಚಿಸಿಕೊಂಡಿದ್ದಾರೆ. ಇಂತಹ ಸ್ವಸಹಾಯ ಗುಂಪುಗಳು ಅವರಲ್ಲಿ ಉಚ್ಚ ಮತ್ತು ನೀಚವೆಂಬ ಭೇದವನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಎಲ್ಲರೂ ಸೌಹಾರ್ದದಿಂದ ಬದುಕಲು ಸ್ವಸಹಾಯ ಗುಂಪುಗಳು ಸಹಾಯ ಮಾಡುತ್ತವೆಂದು ಬೆಳ್ಳೆಣ್ಣೆಯ ರಾಮಮೂರ್ತಿ ಹೇಳುತ್ತಾನೆ.

ಅಧ್ಯಾಯ ೫

ಸಾಹಿತ್ಯ, ಸಂಸ್ಕೃತಿ, ಕಲೆ, ಕ್ರೀಡೆ ಮತ್ತು ಸಾಹಸ

ಅಧ್ಯಾಯ ಐದು

ಸಾಹಿತ್ಯ, ಸಂಸ್ಕೃತಿ, ಕಲೆ, ಕ್ರೀಡೆ ಮತ್ತು ಸಾಹಸ

ಹಸಲರು ಜನಪದ ಸಾಹಿತ್ಯದ ಕಣಜ. ಇವರು ತಮ್ಮ ಪ್ರತಿಯೊಂದು ಚಟುವಟಿಕೆಗಳಲ್ಲಿ ದಣಿವಾಗಿರುವದನ್ನು ಮರೆಮಾಚಲು ತಮ್ಮದೇ ಆದ ಒಗಟು, ಗಾದೆ ಮತ್ತು ಆಚರಣೆಗಳನ್ನು ತಂದಿದ್ದಾರೆ. ಇವರು ದೀಪಾವಳಿಯಂದು ಆಚರಿಸುವ ಅಂಟಿಗೆ–ಪಂಟಿಗೆಯೂ ಒಂದು. ಮಳೆಗಾಲದಲ್ಲಿ ಇವರಿಗೆ ಕೆಲಸವೇ ಇರದಿದ್ದರಿಂದ ಬೇಜಾರು ಕಳೆಯಲು ಕಥೆಗಳನ್ನು ಹೇಳುತ್ತಾರೆ. ಅಲ್ಲದೇ ವಿವಿಧ ವಿನೋದಾವಳಿಗಳ ಆಟವನ್ನು ಆಡುವರು. ಇವರ ಸಾಂಸ್ಕೃತಿಕ ಜೀವನ ಅನನ್ಯವಾದುದು. ಇದನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

೫.೧ ಭಾಷೆ

ದಕ್ಷಿಣ ಕನ್ನಡದ ಮೂಲ ನಿವಾಸಿಗಳಾದ ಹಸಲರು ಕನ್ನಡವನ್ನು ತಮ್ಮ ಮಾತೃ ಭಾಷೆಯನ್ನಾಗಿಸಿ ಕೊಂಡಿದ್ದಾರೆ. ಕನ್ನಡವಲ್ಲದೆ ಇತರ ಭಾಷೆಗಳನ್ನು ಅವರು ಮಾತನಾಡುವುದಿಲ್ಲ. ಆದರೆ ಮೂರಿಗೇರಿ ತಾಲೂಕಿನ ಹಸಲರು ಮತ್ತು ಹೆಬ್ರಿ, ಬ್ರಹ್ಮಾವರ, ಕಾಮ ಹಾಗೂ ಕುಂದಾಪೂರಿನ ಸಮೀಪ ವಾಸಿಸುವ ಹಸಲರು ತುಳು ಭಾಷೆಯನ್ನೂ ಮಾತನಾಡುತ್ತಾರೆ. ಆದರೆ ಈ ಬಗ್ಗೆ ಅವರನ್ನು ಸಂದರ್ಶಿಸಿ, ವಿಚಾರಿಸಲಾಗಿ ಇವರ ಮಾತೃ ಭಾಷೆ ತುಳುವಲ್ಲ. ಈ ಭಾಷೆ ಮಾತನಾಡುವ ಜನರಿಂದ ಹಸಲರು ಸುತ್ತುವರಿದಿರುವುದರಿಂದ ಅವರ ಸಂಪರ್ಕಕ್ಕಾಗಿ ಅವರು ತುಳು ಮಾತನಾಡುತ್ತಾರೆ ವಿನಃ ತುಳು ಅವರ ಮಾತೃ ಭಾಷೆಯಲ್ಲ. ಈಗ ಹಸಲರು ಕೂಡಾ ತುಳು ಭಾಷೆಯ ಬದಲಾಗಿ ಕನ್ನಡವನ್ನೇ ಹೆಚ್ಚಾಗಿ ಮಾತನಾಡುವುದರಿಂದ ತುಳು ಭಾಷೆ ಅವರಿಂದ ಸಾವಕಾಶವಾಗಿ ಮಾಯವಾಗಲು ಪ್ರಾರಂಭಿಸಿದೆ ಎಂದು ಹೆಬ್ಬಿ ಸಮೀಪದ ಹಸಲರು ಹೇಳುತ್ತಾರೆ.

೫.೨ ಗಾದೆಗಳು

ಗಾದೆಯು ಜನಪದ ಪ್ರಕಾರಗಳಲ್ಲೊಂದು. ಯಾವುದೇ ಜನಾಂಗದಲ್ಲಿ ಗಾದೆಗಳು ಇರದೇ ಇರುವುದು ಒಂದು ಸಮಾಜಶಾಸ್ತ್ರೀಯ ಮಿಥ್ಯ. ಪ್ರತಿಯೊಂದು ಜನಾಂಗದಲ್ಲಿ ತಮ್ಮದೆಯಾದ ಗಾದೆಗಳು ಇರುತ್ತವೆ.

ಕನ್ನಡ ಉಕ್ತಿಯಂತೆ "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಇವು ಮಾನವನು ತನ್ನ ಬಹುದಿನಗಳ ವರೆಗಿನ ಅನುಭವದಿಂದ ಕಂಡುಕೊಂಡ ಅಂತಿಮ ಸತ್ಯಗಳಾಗಿವೆ.

"ಗಾದೆಗಳನ್ನು ನಾಣ್ಣುಡಿ, ಜಾಣ ನುಡಿ ಎಂದು ಕರೆಯುವುದುಂಟು. ಇಂಗ್ಲಿಷ್‌ನಲ್ಲಿ ಗಾದೆಗಳಿಗೆ Proverbs ಎಂದು ಕರೆಯುತ್ತಾರೆ. ಈ ಶಬ್ದವು ಲ್ಯಾಟಿನ್ ಭಾಷೆಯ "Proverbium" ದಿಂದ ಬಂದಿದೆ. ಇದರ ಅರ್ಥ. A word uttered in public ಎಂದಿದೆ. ಸಂಸ್ಕೃತದ 'ಗಾಥಾ' ಎಂಬ ಶಬ್ದ ಪ್ರಾಕೃತದಲ್ಲಿ 'ಗಾಹೆ' ಯಾಗಿ, ಕನ್ನಡದಲ್ಲಿ ಅದುವೆ ಗಾದೆ ಎಂದಾದದ್ದು" (ಹೆಂಡಿ ಬಿ.ವ್ಹಿ. ಮತ್ತು ಲಠ್ಠೆ ಎಮ್.ಎಸ್ :೧೯೯೦ :೪) ಈ ಗಾದೆಗಳು ತಮ್ಮ ಅನುಭವದಿಂದ ಜನಸಾಮಾನ್ಯರಲ್ಲಿ ಪ್ರಚಲಿತದಲ್ಲಿವೆ. ಅದೆ ರೀತಿಯಾಗಿ ಹಸಲರಲ್ಲಿಯೂ ಕೂಡಾ ಕೆಲವು ಗಾದೆಗಳು ಪ್ರಚಲಿತದಲ್ಲಿವೆ. ಅವು ಈ ಕೆಳಗಿನಂತಿವೆ;

- ಬೇಟೆಯಾಡದವ ಹಸಲನಲ್ಲ.
- ಎಲ್ಲಿಯವರೆಗೆ ಅಡಿಕೆ ಮರಗಳಿವೆಯೋ ಅಲ್ಲಿಯವರೆಗೆ ಹಸಲರಿರುವರು.
- ಹಣ್ಣನ್ನು ಹಂಚಿ ತಿನ್ನಬಹುದು, ಆದರೆ ಹೆಣ್ಣನ್ನು ಹಂಚಿ ತಿನ್ನಲಾಗದು.
- ಅಡಿಕೆ ಮರಕ್ಕೆ ಅಂಜಿದವ ಹಸಲನಲ್ಲ.
- ಕೊಟ್ಟ ಹೆಣ್ಣು ಕುಲಕ್ಕೆ ಹೊರತು
- ಹಲ್ಲು ಬಿದ್ದ ನಾಯಿ ; ಎಲ್ಲಿ ಇದ್ದರೇನು.
- ಹಗಲ ನೋಡಿದ ಕರಿಬೆಕ್ಕು ; ಅಮಾಸ್ಯೆ ಕತ್ತಲಲ್ಲಿ ಹುಡುಕಿದಂತಾಯಿತು.
- ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ; ಜುಟ್ಟಕ್ಕೆ ಮಲ್ಲಿಗೆ
- ಸಂಕಟ ಬಂದಾಗ ವೆಂಕಟರಮಣ
- ಹಗ್ಗ ಹರಿಲಿಲ್ಲ ; ಕೋಲು ಮುರಿಲಿಲ್ಲ
- ಬಿದಿರು ಹೂವು ಬಿಟ್ಟಿಲ್ಲ ; ಹಸಲರ ಹೊಟ್ಟೆ ತುಂಬಿಲ್ಲ
- ಸಾಲ ಅಂದರೆ ಸೂಲ
- ಶಕ್ತಿಗಿಂತ ಯುಕ್ತಿ ಮೇಲು

ಇಂತಹ ಅನೇಕ ಗಾದೆಗಳು ಹಸಲರಲ್ಲಿ ಪ್ರಚಲಿತದಲ್ಲಿವೆ.

೫.೩ ಹಸಲರಲ್ಲಿರುವ ಒಗಟುಗಳು

ಚಿಪ್ಪುಂಟು ಆಮೆಯಲ್ಲ
ಜುಟ್ಟುಂಟು ಪೂಜಾರಿಯಲ್ಲ
ಮೂರು ಕಣ್ಣುಗಳುಂಟು ಮುಕ್ಕಣ್ಣನಲ್ಲ

ಉತ್ತರ: **ತೆಂಗಿನ ಕಾಯಿ**

ಅಂಗೈ ಅಗಲ ಗದ್ದೆ
ಗದ್ದೆಯೊಳಗೆ ನೀರು
ನೀರಿನೊಳಗೆ ಬೇರು
ಬೇರಿನ ತುದಿಗೆ ಬೆಂಕಿ
ಬೆಂಕಿಗೆ ಸಾವಿರ ಕಣ್ಣು

ಉತ್ತರ: **ದೀಪ**

ಚಿನ್ನದ ಪೆಟಿಗ್ಯಾಗ ಬೆಳ್ಳಿಲಿಂಗ

ಉತ್ತರ: **ಹಲಸಿನ ತೊಳೆ**

ಅಪ್ಪ ಆಕಾಶಕ್ಕೆ ಹೋದ
ಅವ್ವ ಪಾತಾಳಕ್ಕೆ ಹೋದಳು
ಮಗ ವ್ಯಾಪಾರಕ್ಕೆ ಹೋದ

ಉತ್ತರ: **ಅಡಿಕೆ ಮರ**

ಹೋದ ಪುಟ್ಟಾ ಬಂದ ಪುಟ್ಟಾ
ಪುಟ್ಟನ ಹೆಜ್ಜೆ ಕಾಣ್ಸೂದಿಲ್ಲ

ಉತ್ತರ: **ದೋಣಿ**

ನೀರಲ್ಲೆ ಹುಟ್ಟೂದು, ನೀರಲ್ಲೆ ಬೆಳೆವುದು
ನೀರು ಕಂಡರೆ ಜರಿಯುವದು ಲಾ ಪದುಮ
ಬಲ್ಲಂತ ಜಾಣ ಒಳಡೆದೋಳೆ

ಉತ್ತರ: **ಉಪ್ಪು**

ಮಳೆ ಹುಯ್ಯಲಿಲ್ಲ
ಬೆಳೆ ಆಗಲಿಲ್ಲ ಹಸುರಿದೆ
ಅಗಿಲಲ್ಲಿ ಉಗಿಲಿಲ್ಲ ಕೆಂಪಗಿದೆ

ಉತ್ತರ: ಗಿಳಿ

ಅವ್ವನ ಸೀರಿ, ಮಡಚಾಕಾಗುವದಿಲ್ಲ
ಅಪ್ಪನ ರೊಕ್ಕಾ ಎಣಿಸೋಕಾಗಲ್ಲ

ಉತ್ತರ: **ಆಕಾಶ ಮತ್ತು ನಕ್ಷತ್ರ**

ಒಂದು ಆಡತೈತಿ
ಒಂದು ಓಡತೈತಿ
ಒಂದು ನಿಂತು ನೋಡತೈತಿ

ಉತ್ತರ: **ಮೀನು, ನೀರು, ಕಲ್ಲು**

ಅಟ್ಟಂ, ಬಟ್ಟಂ, ಆರ್‍ಯಾಣದಾಗ ಶೆಟ್ಟಿ ಅಂಗಡಿ ಇಟ್ಟಾನ

ಉತ್ತರ: **ಜೇನು**

ಹಿಡಿಯಾಕ ಹೋದ್ರ
ಕಡಿಯಾಕ ಬರತೈತಿ

ಉತ್ತರ: **ಚೇಳು**

ಹುಟ್ಟುವಾಗ ಒಂದು ಸತ್ತಾಗ ಸಾವಿರ

ಉತ್ತರ: **ಬಿದಿರು**

ಮೊದಲ ಕೂರಿಗೆ
ಮುಗಿಲಗಲ ಬಚ್ಚಲು
ಬಿತ್ತೋದು ಕಾಣಲ್ಲ
ಭೂಮಿ ತುಂಬ ಬೀಜ ಮಾತ್ರ ಇಟ್ಟಾಡ್ತವೆ.

ಉತ್ತರ: **ಮಳೆ ಹನಿ**

ಆ ನಾಡ ಹಕ್ಕಿ
ಈ ನಾಡ ಹಕ್ಕಿ
ಬರಬರ ಬಂತು
ಬಂಗಾರ ಗುಡಿ ಕಟ್ಟಿತು
ಬರ ಬಂತು
ಹಾಳಾಗಿ ಹೋಯ್ತು

ಉತ್ತರ: **ಜೇನು**

ತಳ್ಳೂರು ಗೌಡನ ಹೇಣ್ತಿ
ತೊಡೆಯಲ್ಲಿ ಬಸುರಾಗ್ತಾಳ

ಉತ್ತರ: **ಅಡಕೆ ಗೊನೆ**

ಚೂರ್‍ಯಾದ ಸೂಡ್ಯವಳು ಲಣ್ಣನೇ
ಹಸುರಾದ ಮೈಯವಳು ಲಣ್ಣನೇ
ಕದುರಾಡಿ ಮೇಯಾದೂ
ನೋಡಂತ ಬಲ್ಲದಣ್ಣಾ ನೀನಗೇ
ತೆಳಿದಂಗೆ ಹೇಳಬೇಕು
ಜಾಣ ಬಲ್ಲದಣ್ಣಾ ನೀನೀಗೇ
ಹೊಡಚೊಂದು ಹೇಳಬೇಕು.

ಉತ್ತರ: **ಕೋಳಿ**

ತಿಂಗಳ ಬೆಳಕಲ್ಲೇ ಲಣ್ಣನೆ
ಮುಂಗಯ್ಯ ತೋರುವಳೇ
ನೀನರತ ಜಾಣ ಹೊಡಚೊಂದು
ದರಿಗೊಡೆ ಹೋಗುವೇನು ನಾ
ಸರಹಿಡ್ಡಿ ಯೆಳಿಯೋಳೆ
ನೀನಂತ ನೋಡು ಜಾಣ ಹೊಡಚೆಂದ

ಉತ್ತರ: **ಸಿಗೆ ಮುಳ್ಳು**

ಹಸಲರಲ್ಲಿ ಗದ್ಯ ರೂಪದ ಒಗಟುಗಳೂ ಇವೆ. ಆದರೆ ಇವೆಲ್ಲವೂ ಅವರ ಒಗಟುಗಳೆಂದೂ ಖಚಿತವಾಗಿ ಹೇಳಲೂ ಬಾರದಿದ್ದರೂ ಅವರು ನಿತ್ಯ ಬಳಕೆಯಲ್ಲಿ ಕೆಲವು ಒಗಟುಗಳನ್ನು ಉಪಯೋಗಿಸುವರು.

ಸರದಾರ ಮುಂದೆ ಸಾವಿರ ಜನ ಹಿಂದೆ

ಉತ್ತರ: **ಬಾಳೆಗೊನೆ**

ಸೀರೆ ಸುಟ್ಟರೂ ಸೀರೆದಡಿ ಸುಡುವದಿಲ್ಲ

ಉತ್ತರ: **ದಾರಿ**

ಅಕ್ಕಕ್ಕ ಗಿಡ ನೋಡೆ
ಗಿಡತುಂಬ ಕಾಯಿನೋಡೆ
ಕಾಯಿಕೆರೆದು ಬಾಯಿ ನೋಡೆ

ಉತ್ತರ: **ಮೆಣಸಿನಕಾಯಿ**

ಎಲೆಲೆ! ರಾಮಚಂದ್ರನೆ,
ಕೋಕಟ್ಟು ಕೂಗಲಾರೆ
ರೆಕ್ಕುಂಟು ಹಾರಲಾರೆ

ತಾನಾಗಿ ಕಚ್ಚಿದರೆ
ಬಾಯೆಲ್ಲಾ ಉರಿ

ಉತ್ತರ: **ಶುಂಠಿ**

ಎಷ್ಟು ದೂರದಿಂದ ಕಡಿದರೂ
ನಮ್ಮ ಹತ್ತಿರ ಬರುತ್ತದೆ

ಉತ್ತರ: **ಗುದ್ದಲಿ**

ಒಡಪು

ಹಾವಿಗೆ ಹುತ್ತು ಚೆಂದ
ಕೊರಳಿಗೆ ಹಾರ ಚೆಂದ
ನನಗೆ __________ ನನ್ನ ಪತಿದೇವರೆ ಚೆಂದ

ಹಾಸ ಹಾಸ ಮಂಚ
ರೇಷ್ಮೆ ಕುಂಚ
ದೇಶಕ್ಕೆಲ್ಲಾ ಹೆಸರಾಗಿದ್ದಾರೆ
ನಮ್ಮ ______________ ನವರು

ಊಟಕ್ಕೆ ಉಪ್ಪು ಚೆಂದ
ತೋಟಕ್ಕೆ ಸೊಪ್ಪು ಚೆಂದ
ನಮ್ಮ ಮನೆಗೆ ಮಹಾಲಕ್ಷ್ಮೀ ಚೆಂದ
ನನಗೆ ನನ್ನ _____________ ರು ಚೆಂದ

ವನವನ ನಾರಿ
ವನಸುಂದರಿ
ಹೊಲದಲ್ಲಿರುವ ಗರುಡ ಪಕ್ಷಿ
ಸಿಂಗಾರ ಕೋಲಿನ ಮೇಲೆ ಕುಳಿತು
ಶಿವಪೂಜೆ ಮಾಡುತ್ತಾರೆ
ನಮ್ಮ ____________ ರವರು

ಗೋಟಾ ಹಾಕಿದ ಗೋಣಿ ಚೀಲಾ
ಹುಡುಗರಿಗೆ ಕರೆದುಕೊಂಡು
ಗೋಲಿಯಾಡುತ್ತಾರೆ
_____________ ನವರು

೫.೪ ಆಚರಣೆಗಳು

ಹಸಲರು ಪ್ರಮುಖವಾಗಿ ಆಚರಿಸುವ ಹಬ್ಬಗಳೆಂದರೆ, ನಾಗರ ಪಂಚಮಿ, ಯುಗಾದಿ, ಗೌರಿ ಹಬ್ಬ, ಆರಿದ್ರಾ ಮಳೆಹಬ್ಬ, ದೀಪಾವಳಿ, ಸಂಕ್ರಾಂತಿ, ಇತ್ಯಾದಿಗಳು. ಇವರು ಆಚರಿಸುವ ಹಬ್ಬಗಳಲ್ಲಿ ಸ್ಥಳೀಯರ ಮತ್ತು ಪ್ರಾದೇಶಿಕ ಪ್ರಭಾವ ಹೆಚ್ಚಾಗಿ ಕಾಣುತ್ತೇವೆ. ಹವ್ಯಕ್ ಬ್ರಾಹ್ಮಣರ ಸಾಮಿಪ್ಯದಲ್ಲಿರುವ ಹಸಲರು ಹವ್ಯಕ್‌ರ ಆಚರಣೆಗಳನ್ನು, ಲಿಂಗಾಯತರ ಸಾಮಿಪ್ಯದಲ್ಲಿರುವ ಹಸಲರು ಲಿಂಗಾಯತರ ಆಚರಣೆಗಳನ್ನು ಆಚರಿಸುವರು. ಸಾಗರ ತಾಲೂಕಿನ ಬೆಳ್ಳೆಣ್ಣಿಯಲ್ಲಿ ಯುಗಾದಿ ಅಮವಾಸ್ಯೆಯ ಐದನೆಯ ದಿವಸಕ್ಕೆ ಶ್ರೀ ಶಂಭುಲಿಂಗೇಶ್ವರ ರಥೋತ್ಸವ ಜರುಗುವುದು. ಈ ರಥದ ಮೂರು ಅಂಕಣಗಳು ಖಾಯಂ ಆಗಿ ಮರದ ತುಂಡುಗಳಿಂದ ಕೆತ್ತಿ ನಿರ್ಮಿಸಲಾಗಿದೆ. ಉಳಿದ ನಾಲ್ಕು ಅಂಕಣಗಳನ್ನು ಪ್ರತಿ ವರ್ಷ ಜಾತ್ರೆ ಸಮೀಪಿಸಿದಾಗ ಬೆಳ್ಳೆಣ್ಣಿ, ತಾಳಗುಪ್ಪಾ, ಅರೆಹದ್ದಗಳಿಂದ ಮಡಿವಾಳ ಸಮುದಾಯದ ಜನರು ಆಗಮಿಸಿ, ತಾತ್ಪೂರ್ತಿಕವಾಗಿ ರಥದ ನಾಲ್ಕು ಅಂಕಣಗಳನ್ನು ನಿರ್ಮಿಸುವರು. ಈ ರಥದ ಏಳೂ ಅಂಕಣಕ್ಕೆ ಹಸಲರು ಬಿಳಿ ಅರಿವೆಯನ್ನು ಹೊದಿಸಿ ತೆಂಗಿನಗರಿ, ಅಡಿಕೆಯ ಗೊನೆ, ಮಾವಿನ ತೊಳಲು, ಅತ್ತಿಸೊಪ್ಪು, ಕಬ್ಬು ಬಾಳೆಗಿಡದಿಂದ ಸಿಂಗರಿಸಿ ರಥದ ಮೇಲೆ ಕಳಸವನ್ನಿಡುವರು. ಇದಾದ ನಂತರ ಹಸಲರು 'ಮೃಗ ಬೇಟೆ' ಎಂಬ ಸಂಪ್ರದಾಯವನ್ನು ಆಚರಿಸುವರು. ಮೃಗ ಬೇಟೆ ಎಂದರೆ, ಬೇಟೆಯಲ್ಲಿ ಪ್ರವೀಣನಾಗಿರುವವನನ್ನು ಕರೆದು ಒಂದು ತೆಂಗಿನ ಕಾಯಿಯನ್ನು ಸಂಪೂರ್ಣವಾಗಿ ಸುಲಿದು ಆ ತೆಂಗಿನ ಕಾಯಿಯನ್ನು ಅನತಿ ದೂರಲ್ಲಿ ಒಂದು ಕಲ್ಲಿನ ಮೇಲೆ ಇಡುವರು. ಆ ತೆಂಗಿನ ಕಾಯಿಯ ಕಣ್ಣುಗಳಿಗೆ ಹಸಲನು ಬಿಲ್ಲಿಗೆ ಬಾಣಗಳನ್ನು ಹೂಡಿ ಗುರಿಯಿಟ್ಟು ಹೊಡೆಯುವನು. ಆಗ ಆ ತೆಂಗಿನ ಕಾಯಿಯ ಕಣ್ಣುಗಳಿಂದ ನೀರು ಸೋರುವುದು. ಆಗ ಅಲ್ಲಿ ನೆರೆದ ಸಮಸ್ತ ಜನರು (ದಿವುಗಳು, ಲಿಂಗಾಯತರು, ಬ್ರಾಹ್ಮಣರು ಮತ್ತು ನಾಯಕರು) ಕೇಕೆ ಹಾಕಿ ಹರ್ಷಿಸುವರು. ಇಲ್ಲಿ ಮೃಗ ಎಂದರೆ, ಸುಲಿದ ತೆಂಗಿನ ಕಾಯಿ ಅದರ ಕಣ್ಣುಗಳಿಂದ ಸುರಿಯುವ ನೀರು ರಕ್ತದ ಸಂಕೇತ. ಇದು ಸಾಂಕೇತಿಕವಾಗಿ ಪ್ರಾಣಿಯನ್ನು ಬಲಿಕೊಡುವ ಒಂದು ಸಂಪ್ರದಾಯ. ಈ ಬಗ್ಗೆ ಬೆಳ್ಳಣ್ಣಿಯವರೇ ಆದ ಸಂಸ್ಕೃತ ವಿದ್ವಾಂಸರು ಮತ್ತು ಪ್ರಾಧ್ಯಾಪಕರಾದ ಶ್ರೀ ಚಂದ್ರಶೇಖರ ಇವರನ್ನು ಸಂಪರ್ಕಿಸಿದಾಗ ಪ್ರಾಣಿಬಲಿ ಕೊಡುವುದರ ಬದಲಾಗಿ ತೆಂಗಿನ ಕಾಯಿಯನ್ನು ಸಾಂಕೇತಿಕವಾಗಿ ಬಲಿಕೊಡುವರು. ಇದು ಬಹಳ ವರ್ಷಗಳಿಂದಲೂ ಆಚರಿಸಿಕೊಂಡು ಬಂದ ಒಂದು ಸಂಪ್ರದಾಯ. ಸಾಗರ ತಾಲ್ಲೂಕಿನ ಸಿರಿವಂತೆಯಲ್ಲೂ ಕೂಡಾ ಇದೇ ರೀತಿಯ ಸಂಪ್ರದಾಯವನ್ನು ಆಚರಿಸುವರೆಂದು ಹೇಳಿದರು. ಗಣೇಶ ಹಬ್ಬಕ್ಕೆ ಮನೆಗೆ ಗೌರಿ ತರುವರು. ಗೌರಿ ಹಬ್ಬದ ದಿವಸ ಭೂತಪ್ಪನನ್ನು ಪೂಜಿಸುವರು. ಅಲ್ಲದೇ ಗಣೇಶನನ್ನು ನೋಡಲು ಮನೆ ಮಂದಿಯೆಲ್ಲ ಕೂಡಿಕೊಂಡು ಪೇಟೆಗೆ ತೆರಳುವರು. ಆರಿದ್ರಾ ಮಳೆ ಪ್ರಾರಂಭ ಅಥವಾ ಮುಕ್ತಾಯದ ಯಾವುದಾದರೊಂದು ಭಾನುವಾರ ಅಥವಾ ಮಂಗಳವಾರ ಈ ಹಬ್ಬವನ್ನು ಆಚರಿಸುತ್ತಾರೆ. ಇದರಲ್ಲಿ "ಗ್ರಾಮ ದೇವರು" ಮತ್ತು "ಚೌಡಿ"ಯನ್ನು ಪೂಜಿಸುತ್ತಾರೆ. ಗ್ರಾಮದೇವರು ಮತ್ತು "ಚೌಡಿ"ಗೆ ಕುರಿ, ಕೋಳಿ ಬಲಿಕೊಡುವರು. ಇದು ಮಳೆಗಾಲದಲ್ಲಿ ನಡೆಯುವ ಹಬ್ಬವಾದ್ದರಿಂದ ಕುರಿ ಕೊಯ್ಯಲು ಮಕ್ಕಳೊಡಗೂಡಿ ಕಂಬಳಿಕೊಪ್ಪೆ

ಹಾಕಿಕೊಂಡು ಹೋಗುತ್ತಾರೆ. ಸಂಕ್ರಾಂತಿ ಹಬ್ಬದ ದಿವಸ ಹಸಲರು "ಹೊಸಲು" ಪೂಜೆ ಮಾಡಿ ತೆಂಗಿನಕಾಯಿ ಒಡೆಯುತ್ತಾರೆ. ನಂತರ ಪಾಯಸ ಅನ್ನಸಾರ ಮಾಡಿ ಊಟ ಮಾಡುತ್ತಾರೆ. ಕೊಡೆ ಅಮವಾಸ್ಯೆಯ ದಿವಸ ಹೊಸದಾಗಿ ಮದುವೆಯಾದ ಮನೆಯ ಅಳಿಯ ಬರುತ್ತಾನೆ. ಅಳಿಯನಿಗೆ ಕೊಡೆ ಮತ್ತು ಬೆಳ್ಳಿ ಉಂಗುರ ಉಡುಗೊರೆಯಾಗಿ ಕೊಡುವ ಪದ್ಧತಿಯಿದೆ. ಮನೆಗೆ ಬಂದ ಅಳಿಯಂದಿರರಿಗೆ ಕೋಳಿ ಮಾಂಸದ ಅಡಿಗೆಯನ್ನು ತಯಾರಿಸಿ ಊಟ ಹಾಕುವರು. ಹಬ್ಬ ಆಚರಿಸುವ ಸಂದರ್ಭದಲ್ಲಿ ಹಸಲರು ಸೇಂದಿ, ಸರಾಯಿಯನ್ನು ಕುಡಿಯುವರು. ಹಬ್ಬದ ಮೂರನೇ ದಿವಸ ತಮ್ಮ ನಾಯಿಗಳೊಂದಿಗೆ ಬೇಟೆಗೆ ತೆರಳುವರು.

ಘಟ್ಟದ ಕೆಳಗಿನ ಹಸಲರು ಮೇ ಕೊನೆಯವಾರ ಅಥವಾ ಜೂನ ಮೊದಲನೆಯವಾರ ಹಿರಿಯ ಹಬ್ಬವನ್ನು ಆಚರಿಸುತ್ತಾರೆ. ಈ ದಿವಸ ಗ್ರಾಮದೇವರಿಗೆ ಪೂಜೆ ಮಾಡಿ ಹಾಲು ಹಣ್ಣು ಅರ್ಪಿಸುವುದರ ಜೊತೆಗೆ ಕಾಯಿಕಡಬು ಮಾಡುತ್ತಾರೆ. ಮೃತರಾದವರು ಏನನ್ನು ಇಷ್ಟಪಡುತ್ತಿದ್ದರೋ ಅವೆಲ್ಲವನ್ನು ಮಾಡಿ, ಊಟ ಮಾಡಿಸುವರು. ಈ ಊಟಕ್ಕೆ ಅಕ್ಕಪಕ್ಕದ ಮನೆಯಲ್ಲಿ ಒಬ್ಬರನ್ನು ಊಟಕ್ಕೆ ಕರೆಯುತ್ತಾರೆ ಇದಕ್ಕೆ ವಿಜಕಣಿಹಿ ಎಂತಲೂ ಕರೆಯುತ್ತಾರೆ.

೫.೪.೧ ಹೊಸವಂತ ಪೂಜೆ

ಘಟ್ಟದ ಕೆಳಗಿನ ಹಸಲರು ತಿರುಪತಿ "ತಿಮ್ಮಪ್ಪನಿಗೆ ಹರಕೆ ಹೊತ್ತುಕೊಂಡವರು ತಿರುಪತಿ ದರ್ಶನ ಮಾಡಿಕೊಂಡು ಬಂದ ನಂತರ ಈ ಹೊಸವಂತ ಪೂಜೆ ಮಾಡುತ್ತಾರೆ. ಈ ದಿವಸ ತಮ್ಮ ಮನೆಯ ಎದುರುಗಡೆ ಇರುವ ತುಳಸಿ ಕಟ್ಟೆಗೆ ತಿರುಪತಿಗೆ ಹೋದ ಎಲ್ಲ ಜನರು ಮಾತ್ರ ಪೂಜೆ ಮಾಡಬೇಕು. ತಿರುಪತಿಯಿಂದ ತಂದ ಪ್ರಸಾದದ ಜೊತೆಗೆ ತಮ್ಮ ಮನೆಯಲ್ಲಿಯೇ ತಯ್ಯಾರ ಮಾಡಿದ ಪ್ರಸಾದದೊಂದಿಗೆ ಸೇರಿಸಿ, ಹಾಡಿಕೇರಿಯ ಎಲ್ಲ ಜನರಿಗೂ ಹಂಚುತ್ತಾರೆ. ಈ ದಿವಸ ಸಿಹಿ ಊಟ ಮಾತ್ರ ಮಾಡುವರು.

೫.೪.೨ ನಾಗರ ಪಂಚಮಿ

ಕುಂದಾಪೂರ ತಾಲೂಕಿನ ಸಿದ್ಧಾಪೂರ ಹೋಬಳಿಯಲ್ಲಿರುವ ಹಸಲರು ನಾಗರ ಪಂಚಮಿಯ ದಿನ ಹೊರಗಿನ ನಾಗದೇವತೆಯ ಕಲ್ಲಿಗೆ ಹೋಗಿ ಪೂಜೆ ಸಲ್ಲಿಸುವರು. ಆ ದಿನ ಭೂಮಿಯನ್ನು ಉಳುಮೆ ಮಾಡುವದಿಲ್ಲ ಅಥವಾ ಗಾಯ ಮಾಡುವದಿಲ್ಲ. ಕಾರಣ ಹಾವಿನ ಬಿಲಗಳು ಮುಚ್ಚಿ ಹೋಗುತ್ತವೆ ಎಂಬ ಕಾರಣಕ್ಕೆ ಭೂಮಿಗೆ ಗಾಯ ಮಾಡುವದಿಲ್ಲ.

೫.೪.೩ ಹೊಸ್ತ

ನವರಾತ್ರಿಯ ಒಂಬತ್ತು ದಿನದಲ್ಲಿ ಒಂದು ದಿನ ಮಾತ್ರ ಈ ಹಬ್ಬವನ್ನು ಆಚರಿಸುವರು. ಆ ದಿನ ಕೃಷಿ ಉಪಕರಣಗಳಾದ ಗುದ್ದಲಿ, ಪಿಕಾಸಿ, ಹಾರಿ, ನೇಗಿಲು ಮುಂತಾದವುಗಳಿಗೆ ಕದರು ಕಟ್ಟಿ ಧೂಪ ದೀಪ ಹಾಕಿ ಪೂಜಿಸಿ ಸಿಹಿ ಊಟ ಮಾಡುತ್ತಾರೆ. ಆ ದಿನ ಗದ್ದೆಯಿಂದ ಹೊಸ ಭತ್ತವನ್ನು ತಂದು ಕುಟ್ಟಿ ಅಕ್ಕಿ ಮಾಡಿ ಆ ದಿವಸ ಹೊಸ ಅಕ್ಕಿ ಪಾಯಸ ಮಾಡಿ ಊಟ ಮಾಡುತ್ತಾರೆ.

೫.೪.೪ ಗಣೇಶ ಪೂಜೆ

ಚೌತಿ ದಿನ ಹಾಡಿಕೇರಿಯ ಎಲ್ಲ ಜನರೂ ಸಾಮೂಹಿಕವಾಗಿ ಪೇಟೆಯಿಂದ ಗಣೇಶನ ಮೂರ್ತಿ ತಂದು, ಅದನ್ನು ತಮ್ಮ ಹಾಡಿಕೇರಿಯಲ್ಲಿ ಸಾರ್ವಜನಿಕವಾಗಿ ಪ್ರತಿಷ್ಠಾಪಿಸಿ, ೫ ದಿನಗಳ ವರೆಗೆ ಧೂಪ ದೀಪ ಹಾಕಿ, ಹೂ ಹಣ್ಣು, ಹಿಂಗಾರ, ಅಡಿಕೆ ಹಾರ ಮುಂತಾದವುಗಳಿಂದ ಸಿಂಗರಿಸಿ ಪೂಜಿಸುವರು. ಕೊನೆಯ ದಿನ ಸಾಮೂಹಿಕ ಪ್ರಸಾದವನ್ನು ಮಾಡಿ ಹಾಡಿಕೇರಿಯ ಎಲ್ಲರಿಗೂ ಹಂಚುವರು. ಈ ಪದ್ಧತಿ ಸಾಗರ, ಕುಂದಾಪೂರ ತಾಲೂಕುಗಳಲ್ಲಿ ಜರುಗುತ್ತದೆ.

ಕೊಲ್ಲೂರಿನ ಸಮೀಪ ಇರುವ ಹಸಲರು ಕೊಲ್ಲೂರಿನ ಮೂಕಾಂಬಿಕಾ ದೇವಿಯ ಸಹೋದರಿ ಮೂಡಾಡೆಮ್ಮ ದೇವಿಯನ್ನು ಪೂಜಿಸುತ್ತಾರೆ. ಒಂದು ಐತಿಹ್ಯದ ಪ್ರಕಾರ ಕೊಲ್ಲೂರಿನ ಮೂಕಾಂಬಿಕಾ ಮತ್ತು ಮೂಡಾಡೆಮ್ಮ ಇಬ್ಬರೂ ಅಕ್ಕ ತಂಗಿಯರು. ಈ ವಿಗ್ರಹಗಳು ಶಂಕರಾಚಾರ್ಯರಿಂದ ಪ್ರತಿಷ್ಠಾಪಿನೆಗೊಂಡಿವೆ. ಒಂದನ್ನು (ಮೂಡಾಡೆಮ್ಮ) ಕೊಡಚಾದ್ರಿ ಬೆಟ್ಟಗಳಲ್ಲಿ ಪ್ರತಿಷ್ಠಾಪಿಸಿದರೆ, ಇನ್ನೊಂದು ಸೌಪರ್ಣಿಕಾ ನದಿಯ ದಂಡೆಯ ಮೇಲೆ ಪ್ರತಿಷ್ಠಾಪಿಸಿದ್ದಾರೆ (ಮೂಕಾಂಬಿಕಾ) ಬೆಟ್ಟಗಳಲ್ಲಿ ವಾಸ ಮಾಡುವ ಮೂಡಾಡೆಮ್ಮ ದೇವಿಯನ್ನು ಹಸಲರು ಪೂಜಿಸುತ್ತಾರೆ. ನದಿಯ ದಂಡೆಯ ಮೇಲಿರುವ ಮೂಕಾಂಬಿಕಾ ವಿಗ್ರಹವನ್ನು ಭಟ್ಟರು ಪೂಜಿಸುತ್ತಾರೆ. ಮೂಡಾಡೆಮ್ಮ ದೇವಸ್ಥಾನವೂ ಮೂಕಾಂಬಿಕಾ ದೇವಸ್ಥಾನದಿಂದ ಸುಮಾರು ೬ ಕಿ.ಮೀ ದೂರದಲ್ಲಿದೆ. ಇಲ್ಲಿಗೆ ಹೋಗಬೇಕಾದರೆ ಸೌಪರ್ಣಿಕಾ ನದಿಯನ್ನು ದಾಟಬೇಕು. ಈ ದೇವಸ್ಥಾವು ಬಯಲಲ್ಲಿ ಇದೆ. ಸುತ್ತಲೂ ಆವರಣಗೋಡೆ ಇದೆ. ಇದನ್ನು ಹಸಲರು ಪೂಜಿಸುತ್ತಾರೆ. ಈ ಮೂಡಾಡೆಮ್ಮ ದೇವಿಯನ್ನು ಪೂಜಿಸಬೇಕಾದರೆ ಅಳಿಯನೇ ಬೇಕು. (ಅಕ್ಕನ ಅಥವಾ ತಂಗಿಯ ಮಕ್ಕಳು) ಪ್ರತಿ ವರ್ಷವೂ ಜನೇವರಿ ೧೬ ರಂದು ಜಾತ್ರೆ ಇರುತ್ತದೆ. ಈ ಜಾತ್ರೆಯಲ್ಲಿ ಪೂಜಿಸುವ ಹಸಲರು ದಿನಾಂಕ: ೧೬ ಜನೇವರಿ ಕ್ಕಿಂತ ಮೊದಲೇ ಹನ್ನೆಡರು ದಿನ ಆತನು ಮನೆಯನ್ನು ಬಿಟ್ಟು ಅಲ್ಲೆ ವಾಸಿಸಿ, ತನ್ನ ಅಡಿಗೆಯನ್ನು ತಾನೇ ತಯಾರಿಸಿ, ಊಟ ವಾಡಿಕೊಂಡಿರಬೇಕು. ಇದಕ್ಕೆ ಕಾರಣ ಮೈಲಿಗೆಯಾಗಬಾರದು ಎನ್ನುವಕಾರಣದಿಂದ ಈ ಜಾತ್ರೆಯಲ್ಲಿ ಪ್ರಸಾದ ಸೇವೆ ಮಾಡುವರು. ಇದನ್ನು ಭಟ್ಟರು, ದಿವರು, ಲಿಂಗಾಯತರೆಲ್ಲರೂ ಪ್ರಸಾದವನ್ನು ತೆಗೆದುಕೊಳ್ಳುವರು. ಆ ದಿನ ಮೂಡಾಡೆಮ್ಮ ದೇವಿಯನ್ನು ಹೂಗಳಿಂದ ಅಲಂಕರಿಸಿ ಧೂಪ ದೀಪ ಹಾಕಿ ಪೂಜಿಸುವರು. ಇದು ವರ್ಷದಲ್ಲಿ ಒಮ್ಮೆ ಮಾತ್ರ ನಡೆಯುತ್ತದೆ.

೫.೪.೫ ದುರ್ಗಾಪರಮೇಶ್ವರಿ ದೀಪ ಹಿಡಿಯುವ ಕಾರ್ಯ

ಕಮಲಶಿಲೆ ದುರ್ಗಾಪರಮೇಶ್ವರಿ ದೇವಸ್ಥಾನದ ದೀಪ ಹಿಡಿಯುವ ಕಾರ್ಯವನ್ನು ಕೋಟುಗುಳಿ ಹಸಲರ ಹಾಡಿಕೇರಿಯ ರಾಮನ ವಂಶಸ್ಥರು ಮಾಡುತ್ತಾರೆ. ಇದಕ್ಕೆ ಒಂದು ಐತಿಹ್ಯವಿದೆ.

ರಾಮ ಇವರ ಕುಟುಂಬದ ವಂಶಸ್ಥನು. ದನಕಾಯಲು ಹೋದಾಗ ಒಂದು ಹಸು ದಿನಾಲು ಒಂದು ದಿಬ್ಬದ ಮೇಲಿನ ಶಿಲೆಗೆ ಹಾಲು ಹಾಕುತ್ತಿತ್ತು. ಇದನ್ನು ಒಂದು ದಿನ ನೋಡಿದ ದನಕಾಯುವವನು ಬಂದು ಮನೆಯಲ್ಲಿ ನಡೆದ ಎಲ್ಲಾ ಸಂಗತಿಗಳನ್ನು ಹೇಳಿದನು. ಆ ಮನೆಯವರು

ತಮ್ಮ ಹಾಡಿಕೇರಿಯ ಸಮೀಪವಿರುವ ಭಟ್ಟರ ಮನೆಗೆ ಹೋಗಿ ನಡೆದ ಎಲ್ಲಾ ಸಂಗತಿಗಳನ್ನು ಹೇಳಿದರು. ಆಗ ಭಟ್ಟರು ಹಾಡಿಕೇರಿಯ ಎಲ್ಲ ಜನರು ಕೂಡಿಕೊಂಡು ಆ ಶಿಲೆಯನ್ನು ನೋಡಲು ಬಂದರು. ಆ ಶಿಲೆಯನ್ನು ಹಾಡಿಕೇರಿಯ ಜನರು ಕೂಡಿಕೊಂಡು ಅಗೆದು ತೆಗೆದಾಗ ಒಂದು ಹೆಣ್ಣುದೇವರ ಮೂರ್ತಿ ಇತ್ತು. ಆಗ ಅದಕ್ಕೆ ದುರ್ಗಾಪರಮೇಶ್ವರಿ ಎಂದು ನಾಮಕರಣಮಾಡಿ, ಆ ಶಿಲೆಯನ್ನು ಪೂಜಿಸಿ ಮೆರವಣಿಗೆಯಲ್ಲಿ ತಂದು ದೇವಸ್ಥಾನವನ್ನು ಕಟ್ಟಿದರು. ಪ್ರತಿವರ್ಷವೂ ಜಾತ್ರೆ ನೆರವೇರುತ್ತದೆ. ಈ ಜಾತ್ರೆಯಲ್ಲಿ ಇವತ್ತಿಗೂ ಹಸಲರ ರಾಮನ ವಂಶಸ್ಥರು ದೀಪ ಹಿಡಿಯುವ ಕಾರ್ಯವನ್ನು ಮಾಡುವರು.

ದೀಪಾವಳಿ ಮಲೆನಾಡಿನ ಎಲ್ಲಾ ಜನಾಂಗದವರಿಗೆ ಸಂಭ್ರಮದ ಹಬ್ಬ. ಈ ಹಬ್ಬ ಐದು ದಿನಗಳವರೆಗೆ ನಡೆಯುತ್ತದೆ. ಈ ಹಬ್ಬಕ್ಕೆ "ದೊಡ್ಡ ಹಬ್ಬ" ಎನ್ನುವರು ಬೂರೆ, ಅಮವಾಸ್ಯೆ, ಪಾಡ್ಯ, ಮರಿಪಾಡ್ಯ ಮತ್ತು ವರ್ಷ ತೂಡಕ" ಎಂದು ಹಸಲರು ತುಂಬಾ ಸಡಗರದಿಂದ ಆಚರಿಸುವರು.

ದೀಪಾವಳಿಯ ಮೊದಲನೆಯ ದಿವಸ ನರಕ ಚತುರ್ದಶಿ ಅಥವಾ ಬೂರೆ ದಿನ ಆಚರಿಸುವರು. ಈ ದಿವಸ ಬಲೀಂದ್ರ ಪಾತಾಳ ಲೋಕದಿಂದ ಭೂ ಲೋಕಕ್ಕೆ ಬರುವನು ಎಂಬ ನಂಬಿಕೆ ಹಸಲರಲ್ಲಿದೆ. ಈ ದಿವಸ ಪ್ರತಿ ಹಸಲರ ಕುಟುಂಬದವರು ಬಲೀಂದ್ರನನ್ನು ತರುವರು. ಹೊಸದಾಗಿ ಮಣ್ಣಿನ ಮಡಿಕೆಯನ್ನು ತಂದು ಬೂರೆ ದಿವಸ ಬೆಳಗಿನ ಜಾವ ಬಾವಿಗೆ ಹೋಗಿ ಮಣ್ಣಿನ ಮಡಿಕೆಯಲ್ಲಿ ನೀರನ್ನು ತುಂಬಿ ತೆಗೆದುಕೊಂಡು ಬರುತ್ತಾರೆ. ಇದಕ್ಕೆ "ಬೂರೆ ನೀರು" ಎನ್ನುವರು. ಮೀಯುವ ಹಂಡೆ ಹರವಿಗಳಿಗೆ ಜೋಡಿ ಕೆಮ್ಮಣ್ಣು ಸಾರಸಿ ಅದಕ್ಕೆ ಅಡಿಕೆಕಾಯಿ, ಪಚ್ಚೆತೆನೆ, ಮಾವಿನತೊಳಲು ಕಟ್ಟಿ ಧೂಪ ದೀಪ ಹಚ್ಚಿ ಅವುಗಳನ್ನು ಪೂಜಿಸುವರು.

"ಬೂರೆಕಳವು" ಆಚರಣೆ ಅಂದರೆ ಆ ಒಂದು ರಾತ್ರಿ ಕಳ್ಳತನ ಮಾಡಲು ಅನುಮತಿ ಉಂಟು ಅಂದು ಕದ್ದವರಿಗೆ ಶಿಕ್ಷೆ ಇಲ್ಲ. ಆದರೆ ಸಿಕ್ಕಿ ಬೀಳಬಾರದು. ಒಂದು ಪಕ್ಷ ಸಿಕ್ಕಿ ಬಿದ್ದರೆ ಅಪಶಕುನದ ಸೂಚನೆ ಎಂಬ ನಂಬಿಕೆ ಇದೆ. ಮನೆಯ ಹಿತ್ತಲಲ್ಲಿ ತರಕಾರಿ ಹೂ, ಹಣ್ಣುಗಳು ಕೂಡಾ ಕಳವು ಮಾಡಿ ಆ ದಿನ ರಾತ್ರಿ ಕದ್ದ ಕಾಯಿಗಳನ್ನು ರಾತ್ರಿಯೇ ಸಾರ ಮಾಡಿ ಊಟ ಮಾಡುವರು. ಈ ಊಟಕ್ಕೆ ಬೇರೆಯವರನ್ನೂ ಕರೆಯುತ್ತಾರೆ. ಆದರೆ ಯಾರ ತೋಟದಲ್ಲಿ ಕದ್ದಿರುವರೋ ಅವರನ್ನು ಊಟಕ್ಕೆ ಕರೆಯುವದಿಲ್ಲ. ಏಕೆಂದರೆ ಆ ಕಾಯಿಗಳು ನಮ್ಮ ತೋಟದ್ದೇ ಅಂತ ತಿಳಿಯಬಹುದು. ಹಾಗೇ ತಿಳಿದರೆ ಅದು ಅಪಶಕುನ. ಅಷ್ಟೇ ಅಲ್ಲ, ಬರುವ ವರ್ಷದವರೆಗೂ ಏನಾದರೂ ಮನೆಯಲ್ಲಿ ಕೆಟ್ಟದಾದರೆ ಆ ಬೂರೆಯ ಪರಿಣಾಮ ಎಂದು ತಿಳಿಯುತ್ತಾರೆ.

ಐದು ದಿವಸ ಬಲೀಂದ್ರನನ್ನಿಟ್ಟು ಪೂಜಿಸಿದರೆ ಮಗೆಯ ಮೇಲೆ ದೀಪವನ್ನು ಇಟ್ಟು, ಮಗೆಯ ಕೆಳಗೆ ಸಗಣಿಯನ್ನು ಸುತ್ತಲೂ ಇಟ್ಟು ಹಸಿ ಅಡಿಕೆಕಾಯಿ ಕಹಿ ಅಂಡ್ಲೆಕಾಯಿ ಸಗಣಿಯಲ್ಲಿ ಹುಗಿದು ಮುಂದೆ ಬಸವನ ಪಾದದ ಶೇಡಿ ಬರೆಯುವರು

ದೀಪಾವಳಿ ಎರಡನೆ ದಿವಸ ಬೆಳಿಗ್ಗೆ ಮನೆಯಲ್ಲಿರುವ ಎಲ್ಲಾ ಜಾನುವಾರುಗಳನ್ನು ಹತ್ತಿರದ ಕೆರೆಗೋ ಅಥವಾ ಬಾವಿ ಹತ್ತಿರ ತೆಗೆದುಕೊಂಡು ಹೋಗಿ ಮೈ ತೊಳೆಯುವರು. ಕೆಲವರು ಅಮವಾಸ್ಯೆ ಹಬ್ಬವನ್ನು ಆಚರಿಸುವರು.

ಅಮವಾಸ್ಯೆಯ ದಿವಸ ಗೋವುಗಳನ್ನು ಕೆರೆಗೋ ಅಥವಾ ಬಾವಿಗೋ ತೆಗೆದುಕೊಂಡು ಹೋಗಿ ಗೋವುಗಳ ಮೈಯನ್ನು ತೊಳೆದು ಮನೆಗೆ ಹೊಡೆದುಕೊಂಡು ಬರುವರು. ಮನೆಯ ಬಾಗಿಲಲ್ಲಿ ಅದರ ಪಾದಗಳಿಗೆ ನೀರನ್ನು ಹಾಕಿ ತೊಳೆದು ಮನೆಯ ಒಳಗಡೆ ಕರೆದುಕೊಂಡು ಬರುವರು. ಅಲ್ಲಿ ಹಾಲುಗಂಬದ ಅಥವಾ ಬೂರೆ ಕಂಬ ನೆಡುವರು. ಆ ಕಂಬಕ್ಕೆ ಕೆಂಪು ಮಿಶ್ರಿತ ಮಣ್ಣನ್ನು ಹಚ್ಚಿ ಸುಣ್ಣದಿಂದ ಚಿತ್ರಗಳನ್ನು ಬರೆಯುವರು ನಂತರ ಗೋಪೂಜೆಗೆ ಬೇಕಾಗುವ ಮಾವಿನ ಸೊಪ್ಪು, ಬಚ್ಚಲುಬಳ್ಳಿ, ಪಚ್ಚೆತೆನೆ, ಅಂಬಾಡಿ ಎಲೆ, ಹಸಿ ಅಡಿಕೆ ಮುಂತಾದ ಸಾಮಾನುಗಳನ್ನು ಸಂಗ್ರಹಿಸುವರು. ರಾತ್ರಿ ಮಹಿಳೆಯರು ಮಡಿಯಾಗಿ ಉಪ್ಪು ಹಾಕದೇ ಚಿಕ್ಕ ಚಿಕ್ಕ ಸಪ್ಪೆಯ ರೊಟ್ಟಿ ಮಾಡುವರು. ಪಾಡ್ಯದ ದಿವಸ ಮುಂಜಾನೆ ಎದ್ದು ಹಿಂದಿನ ದಿವಸ ತಂದ ಎಲ್ಲಾ ಸಾಮಾನುಗಳನ್ನು ಒಪ್ಪವಾಗಿ ಜೋಡಿಸಿ, ಗೊಂಚಲು ಗೊಂಚಲಾಗಿ ಬಚ್ಚಲು ಬಳ್ಳಿಯಿಂದ ದಂಡೆ ಕಟ್ಟುವರು. ಇದಕ್ಕೆ ಪ್ರಸಾದ ಎನ್ನುವರು. ಜಾನುವಾರುಗಳ ಕೋಡಿಗೆ ಹುರಿಮಂಜು ಬಣ್ಣ ಹಚ್ಚಿ, ನಾರಿನಿಂದ ತಯಾರಿಸಿದ ಹಣೆಕಟ್ಟು ದಂಡೆಗಳನ್ನು ಹಣೆ ಮತ್ತು ಕೊರಳುಗಳಿಗೆ ಕಟ್ಟುವರು. ಚಪ್ಪೆ ರೊಟ್ಟೆ, ಹಸಿ ಅಡಿಕೆ ಚಂಡು ಹೂವಿನ ದಂಡೆಗಳನ್ನು ಕಟ್ಟುವರು. ನಂತರ ಪ್ರಸಾದ ದಂಡೆಗಳನ್ನು ಕಟ್ಟುವರು. ಜೇಡಿ ಮತ್ತು ಕೆಮ್ಮಣ್ಣು ನೀರಿನಲ್ಲಿ ಬೆರಸಿ, ಒಂದು ಮರದ ಸಿಪ್ಪೆಯಿಂದ ಜಾನುವಾರುಗಳಿಗೆ ದಾಕ ಹಾಕುವರು. ನಂತರ ನೆನೆಅಕ್ಕಿ ನೆನೆಕಡಲೆ ಪಟ್ಟಿಕಡುಬುಗಳನ್ನಿಟ್ಟು ಗೋ ಪೂಜೆ ಮಾಡುವರು ನಂತರ ನೆನೆಅಕ್ಕಿ, ನೆನೆಕಡಲೆ ಕೊಟ್ಟಿ ಕಡುಬುಗಳನ್ನು ಜಾನುವಾರುಗಳಿಗೆ ತಿನಿಸುವರು. ನಂತರ ಕೇರಿಯವರೆಲ್ಲರ ಜಾನುವಾರುಗಳನ್ನು ಒಟ್ಟಿಗೆ ಬಿಟ್ಟು ಓಡಿಸುವರು. ಕೆಲವರು ಜಾನುವಾರುಗಳ ಹಿಂದೆ ಓಡಿ ಪ್ರಸಾದ ದಂಡೆಗಳನ್ನು ಹರಿಯುವರು. ಇವರಿಗೆ ಉಳಿದವರು ಪ್ರೋತ್ಸಾಹ ನೀಡಲು ಕೇಕೆ ಹಾಕುವರು. ಇದರಿಂದ ಜಾನುವಾರುಗಳು ಇನ್ನಷ್ಟು ರಭಸದಲ್ಲಿ ಓಡುವವು. ಆಗ ಎಲ್ಲರೂ ಸಂಭ್ರಮದಿಂದ ಕೂಗಾಡುವರು.

ಪಾಡ್ಯದ ದಿವಸ ಬಲಿಂದ್ರನನ್ನು ಪೂಜಿಸುವರು ಈ ದಿವಸ ಬೂರೆ ಕಂಬಕ್ಕೆ ಚಿಕ್ಕ ಚಿಕ್ಕ ಸಪ್ಪೆ ರೊಟ್ಟಿಯನ್ನು ಕಟ್ಟಿ ಪಚ್ಚೆತೆನೆ, ಹಿಂಗಾರ, ಎಲೆ ಅಡಿಕೆ ಮಾವಿನ ತೊಳಲು ಬಚ್ಚಲುಬಳ್ಳಿ ಮುಂತಾದವುಗಳಿಂದ ಸಿಂಗರಿಸುವರು. ನಂತರ ಹೊಸ ಬಟ್ಟೆಗಳನ್ನಿಟ್ಟ ಪೆಟ್ಟಿಗೆಯನ್ನು ಬೂರೆ ಕಂಬದ ಮುಂದೆ ಇಟ್ಟು ತಾವು ಒಕ್ಕಲುತನಕ್ಕೆ ಉಪಯೋಗಿಸುವ ವ್ಯವಸಾಯ ಉಪಕರಣಗಳಾದ ಪಿಕಾಸಿ, ಗುದ್ದಲಿ ರುಬ್ಬುಕಲ್ಲು, ಗುರಿಕಾಯಿ ಮುಂತಾದವುಗಳನ್ನು ಸಿಂಗರಿಸಿ ಧೂಪ ದೀಪ ಹಾಕುವರು. ನಂತರ ಆಯುಧಗಳನ್ನು ತೊಳೆದು ಬೂರೆಮಗನ (ಬಲೀಂದ್ರ) ಹತ್ತಿರ ಸರಿಯಾಗಿ ಜೋಡಿಸುವರು. ಅಲ್ಲದೇ ಹೊಲಗದ್ದೆಗಳ ಪೈರನ್ನು ಹೊಸದಾಗಿ ಮನೆಗೆ ತಂದು ಪೂಜೆ ಮಾಡಿ, ಊರಿನ ದೇವರಿಗೆಲ್ಲಾ ತೆಗೆದುಕೊಂಡು ಹೋಗಿ ಅರ್ಪಿಸುತ್ತಾರೆ. ಇದನ್ನು ದೇವರಿಗೆ 'ಕದುರು

ಹಾಕುವದು" ಎಂದು ಕರೆಯುತ್ತಾರೆ. ಈ ದಿವಸ ಭೂತ, ಚೌಡಿ, ಯಕ್ಷಿ, ಇತ್ಯಾದಿ ದೇವತೆಗಳಿಗೆ ಹಣ್ಣು ಕಾಯಿ ಮಾಡಿ ಪೂಜೆ ಸಲ್ಲಿಸುವರು. ಇದೇ ದಿವಸ ರಾತ್ರಿ ಹಿರಿಯರ ಪೂಜೆ ಮಾಡುವರು.

ಹಸಲರ ಪ್ರತಿ ಮನೆಗಳಲ್ಲಿ ತಮ್ಮದೇ ಆದ ದೇವತೆಗಳ ವಿಗ್ರಹಗಳಿವೆ. ದೇವತೆಗಳನ್ನು ಪ್ರಾದೇಶಿಕವಾಗಿ ಪೂಜಿಸುವರು. ಕೆಲವೆಡೆ ಚೌಡಿ, ಗುತ್ತಮ್ಮ, ಭೂತ ಮುಂತಾದ ಪಂಚಲೋಹದ ವಿಗ್ರಹಗಳ ಜೊತೆಗೆ ಹಿತ್ತಾಳೆ ಹಣತೆ ದೀಪಾರತಿ ಜಾಗಟೆಗಳಿವೆ. ಇವೆಲ್ಲವುಗಳನ್ನು ಅಟ್ಟದ ಮೇಲೆ ಮನೆಯ ಕೋಲಿಗೆ ಅಡಿಕೆ ಹಾಳೆಯಲ್ಲಿಟ್ಟು ಕಟ್ಟುವರು. ದೀಪಾವಳಿಯ ಪಾಡ್ಯದ ದಿವಸ ಅಟ್ಟದ ಮೇಲಿಂದ ಇಳಿಸಿ, ಬೆಳಿಗ್ಗೆ ಪೂಜೆ ಸಲ್ಲಿಸುವರು.

೫.೪.೬ ಹಿರಿಯರ ಪೂಜೆ

ಹಸಲರಲ್ಲಿ ಪೂರ್ವ ಸಂಸ್ಕಾರದಂತೆ ಉತ್ತರ ಸಂಸ್ಕಾರದ ಬಗ್ಗೆಯೂ ಕೆಲವೊಂದು ಆಚರಣೆಗಳಿವೆ. ತಮ್ಮ ಕುಟುಂಬದಲ್ಲಿ ಮರಣ ಹೊಂದಿದ ಹಿರಿಯರಿಗೆ ಪಾಡ್ಯದ ದಿವಸ ರಾತ್ರಿ ಪೂಜೆ ಸಲ್ಲಿಸುತ್ತಾರೆ. ಬಾವಿಯಿಂದ ನೀರು ತಂದು ತಂಬಿಗೆಗೆ ಹಾಕಿ, ತಂಬಿಗೆಯ ಮೇಲೆ ತೆಂಗಿನ ಕಾಯಿ ಇಟ್ಟು, ಒಂದು ಕಳಸ ಮಾಡುವರು. ಒಂದು ಮಣೆಯ ಮೇಲೆ ಕುಡಿ ಬಾಳೆಯಲ್ಲಿ ಒಂದು ಬೊಗಸೆ ಅಕ್ಕಿ ಹಾಕಿ, ಮಣೆ ಮೇಲೆ ಇಡುವರು. ಇದರ ಮೇಲೆ ಕಳಸವನ್ನು ಮತ್ತು ಪಕ್ಕದಲ್ಲಿ ತಾವು ಪೂಜಿಸುವ ದೇವರುಗಳನ್ನಿಡುವರು. ಕೆಸವಿನ ಸೊಪ್ಪು, ಹಾಗಲಕಾಯಿ, ಸೌತೆಕಾಯಿಂದ ಪ್ರತ್ಯೇಕ ಸಾರು ಮಾಡುವರು. ಅಕ್ಕಿಯಿಂದ ಚರವು ಮಾಡಿ, ಎಡೆ ಹಿಡಿಯುತ್ತಾರೆ. ತಂದೆ ಮತ್ತು ತಾಯಿ ಇಬ್ಬರೂ ಮರಣ ಹೊಂದಿದ್ದರೆ ಎರಡು ಪ್ರತ್ಯೇಕ ಚರವು ಮಾಡಿ ಎಡೆ ಹಿಡಿಯುತ್ತಾರೆ. ತೀರ್ಥಹಳ್ಳಿ ಮತ್ತು ಕುಂದಾಪೂರ ತಾಲೂಕಿನ ಹಸಲರ ಹಾಡಿಕೇರಿಯಲ್ಲಿ ಮರಣ ಹೊಂದಿದ ಪ್ರತಿಯೊಬ್ಬರ ಸಮಾಧಿಗೂ ಪ್ರತ್ಯೇಕವಾಗಿ ಎಡೆ ಹಿಡಿಯುತ್ತಾರೆ. ಪಾಡ್ಯದ ದಿವಸ ವ್ಯವಸಾಯ ಮಾಡುವ ಉಪಕರಣಗಳನ್ನು ಮತ್ತು ಆಯುಧಗಳನ್ನು ಹೂ ಹಣ್ಣುಗಳಿಂದ ಪೂಜಿಸಿ ನಂತರ ತೆಂಗಿನ ಕಾಯಿಯನ್ನು ಒಡೆಯುವರು. ಇದಾದ ನಂತರ ಕುಟುಂಬದ ಎಲ್ಲ ಸದಸ್ಯರು ಕೂಡಿಕೊಂಡು ಸಿಹಿಗಡಬಿನ ಊಟ ಮಾಡುತ್ತಾರೆ. ಊಟವಾದ ಮೇಲೆ ಕೇರಿಯ ಹಿರಿಯರೊಂದಿಗೆ ಕೂಡಿಕೊಂಡು ಉತ್ಸಾಹಿ ಯುವಕರು ಹಬ್ಬದ ಹಾಡು ಹಾಡಲು ತೆರಳುವರು.



ಛಾಯಾಚಿತ್ರ- ೫.೧ ಹಿರಿಯರ ಪೂಜೆ

೫.೪.೭ ಹಬ್ಬ ಹಾಡುವ ಸಂಪ್ರದಾಯ

ದೀಪಾವಳಿಯ ಪಾಡ್ಯದಿಂದ ಪ್ರಾರಂಭಿಸಿ, ವರ್ಷತೊಡಕಿನವರೆಗೆ ಮೂರು ದಿವಸಗಳ ರಾತ್ರಿ ನಡೆಯುವ ಜನಪದ ಗೀತೆ ಸಂಪ್ರದಾಯವೇ ಹಬ್ಬ ಹಾಡುವದು ಅಥವಾ ಅಂಟಿಗೆ ಪಂಟಿಗೆ ಎನ್ನುವರು.

ಅಂಟಿಗೆ ಪಂಟಿಗೆಯು ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಕೆಲವೊಂದು ಭಾಗಗಳಲ್ಲಿ ಪ್ರಚಲಿತವಿರುವ ಜಾನಪದಕಲೆ ಇದನ್ನು ಆವಂಟಿಗ್ಯೋ ಪವಂಟಿಗ್ಯೋ, ಅಡೀ ಪೀಡಿ, ಬಿಂಗಿ ಪದ, ಬಲ್ಲಾಳಿ ಪದ, ಅಂಟಿ ಸುಂಠಿ ಉತ್ತರ ಕರ್ನಾಟಕದಲ್ಲಿ ಆಣಿ ಪೀಣಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ಹಬ್ಬದಲ್ಲಿ ಮಲೆನಾಡಿನ ಎಲ್ಲ ಜನಾಂಗದವರು ಪಾಲ್ಗೊಳ್ಳುತ್ತಾರೆ.



ಛಾಯಾಚಿತ್ರ- ೫.೨ ಅಂಟಿಗೆ ಪಂಟಿಗೆ ದೀಪಧಾರಿಗಳು

"ಅಂಟಿಗೆ ಪಂಟಿಗೆ ಪದಗಳಲ್ಲಿ ಅಂಟಿಗೆ ಕುರಿತು ಗೋಜಲುಗಳಿಲ್ಲ. 'ಅಂಟುಸುವದೇ' ಅಂಟಿಗೆ ಎನ್ನುವ ಅರ್ಥದಲ್ಲಿ ಆ ಪದವನ್ನು ಇಲ್ಲಿ ಪರಿಗಣಿಸುವದು ವೈಜ್ಞಾನಿಕ. ಆದರೆ ಪಂಟಿಗೆಯ ಬಗೆಗೆ ಇನ್ನೂ ಗೊಂದಲವಿದೆ. ವಿದ್ವಾಂಸರು ತಮಿಳಿನ 'ಪಂಟಿಗೈ' ಪದ ಕುರಿತು ಉಲ್ಲೇಖಿಸಿದ್ದಾರೆ. ಪಂಟಿಗೈ ಪದಕ್ಕಿರುವ ಅರ್ಥ 'ಹಬ್ಬ' ಅಂಟಿಗೆ ಪಂಟಿಗೆಯನ್ನು ದೀಪಾವಳಿ ಹಬ್ಬ ಎಂದು ಹೇಳಿರಬಹುದು". (ಸಂ ಬೋರಲಿಂಗಯ್ಯ, ಹಿ ಚಿ :೧೯೯೬: ೧೪೩) "ಪಂಟಂ ಎಂಬ ಪದ ತಮಿಳು ಮತ್ತು ಮಲೆಯಾಳದಲ್ಲಿದೆ. ಇದರ ಅರ್ಥ 'ದೀಪ' ಎಂಬುದಾಗಿದೆ. ತುಳುವಿನಲ್ಲಿ ಇದು 'ಪಂಟೈ' ಅದುವೇ ಕನ್ನಡದ ಪಂಟಿಗೆ ಹಾಗಾದುದರಿಂದ 'ಪಂಟಿಗೈ' ಪದದಿಂದ ಪಂಟಿಗೆಯ ನಿಷ್ಪತ್ತಿಯನ್ನು ಸಾಧಿಸಬೇಕಾಗಿಲ್ಲ. ಪಂಟ ಪಂಟೈ; ಮೂಲದಿಂದ 'ಅಂಟಿಗೆ ಪಂಟಿಗೆ' ನಿಷ್ಪತ್ತಿಯನ್ನು ಹೇಳುವದಾದರೆ ದೀಪ ಅಂಟಿಸುವದು ಅಥವಾ ಜ್ಯೋತಿ ಅಂಟಿಸುವದು ಎಂದಾಗುತ್ತದೆ. ಅಂಟಿಗೆ



ಪಂಟಿಗೆ ಆಚರಣೆಯೂ ಕೂಡಾ ಇದೆ. ಆದುದರಿಂದ ಇದರಲ್ಲಿ ಹೆಚ್ಚಿನ ಗೊಂದಲಗಳಿಲ್ಲ". (ಅದೆ:೧೪೪)

ಪಾಡ್ಯದ ದಿನ ಸೂರ್ಯ ಮುಳುಗಿ ಕತ್ತಲಾವರಿಸುತ್ತಿರುವಾಗಲೇ ಹೊಲಗದ್ದೆಗಳ ಅಂಚುಗಳಲ್ಲಿ ಕೋಟಿ ದೀಪಗಳು ಬೆಳಗುತ್ತವೆ. ಚಾವಡಿಯಲ್ಲಿ ಹಣತೆಗಳು ಸಾಲುಗಟ್ಟುತ್ತವೆ. ಪ್ರತಿಯೊಬ್ಬರ ಮನೆ ಮನೆಯ ಮುಂದೆ ಇರುವ ತುಳಸಿ ಕಟ್ಟೆಯ ಗೂಡುದೀಪ ಹಚ್ಚುತ್ತಾರೆ. ಊರಿನ ಉತ್ಸಾಹಿ ಯುವಕರು ದೇವಸ್ಥಾನದಲ್ಲೋ, ಜಟ್ಟಿಗನ ಬನದಲ್ಲೋ ಬಂದು ಸೇರುತ್ತಾರೆ. ದೇವರಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿ ಆಗ ಜ್ಯೋತಿ ಹಚ್ಚುವ ಪದ ಆರಂಭವಾಗುತ್ತದೆ. ಈ ತಂಡದ ಮುಖ್ಯಸ್ಥನು ಕಚ್ಚೆ ಪಂಜೆಯುಟ್ಟು ಶರ್ಟಿನ ಮೇಲೆ ಹಳೆಯ ಕಪ್ಪು ಕೋಟು ಹಾಕಿಕೊಳ್ಳುವನು. ತಲೆಗೆ ಪೇಟಾ ಸುತ್ತಿಕೊಂಡಿರುತ್ತಾನೆ. ಉಳಿದವರು ಸಾದಾ ದಿನನಿತ್ಯದ ಉಡುಪಿನಲ್ಲೇ ಇರುವರು. ಕೆಲವರು ಕೈಯಲ್ಲಿ ದೊಣ್ಣೆ ಹಿಡಿದಿರುತ್ತಾರೆ. ತಂಡದಲ್ಲಿ ಒಬ್ಬ ಹಿರಿಯ ವ್ಯಕ್ತಿ ಜ್ಯೋತಿ ಹಿಡಿದಿರುತ್ತಾನೆ. ಕೆಲವರು ಕಂಬಳಿ ಕೊಪ್ಪೆ ಹಾಕಿಕೊಂಡಿರುತ್ತಾರೆ. ರಾತ್ರಿ ಎಂಟು ಗಂಟೆಗೆ ನಾಮದೇವರ ವಕ್ಕಲಾಗಿರುವ ಕೇರಿಯ ಯಜಮಾನನ ಮನೆಯಲ್ಲಿರುವ ಕಂಚಿನ ದೀಪ ಅಥವಾ ಮಣ್ಣಿನ ಹಿಡಿಕೆ ಇರುವ ದೊಡ್ಡ ಹಣತೆ ದೀಪವನ್ನು ಆ ಮನೆಯ ಬಲೀಂದ್ರನ ದೀಪದಿಂದ ಹಚ್ಚಿಕೊಳ್ಳುವರು. ದಿಪ್ಪಾಡು, ದಿಪ್ಪಡು, ಹೋಳಿಗ್ಯೋ, ಹಬ್ಬಕ್ಕೊಂದು ಹೋಳಿಗ್ಯೋ ಎಂದು ಹೇಳಿದಾಗ ತಂಡದ ಹಿಮ್ಮೇಳದವರು 'ದಿಮಸಾಲೋ' ಎಂದು ದನಿಗೂಡಿಸುತ್ತಾರೆ. ಮೊದಲು ದೀಪವನ್ನು ಹಸಲರ ಹಿರಿಯರ ಮನೆಯಿಂದ ಹಚ್ಚಿಕೊಳ್ಳುತ್ತಿದ್ದರು. ಆದರೆ ಅವರಲ್ಲಿಯ ಭಿನ್ನಾಭಿಪ್ರಾಯದಿಂದ ಹಿರಿಯರ ಮನೆಯಿಂದ ದೀಪ ಹಚ್ಚುವದನ್ನು ನಿಲ್ಲಿಸಿ, ಗ್ರಾಮ ದೇವತೆಯ ಗುಡಿಯಿಂದ ದೀಪ ಹಚ್ಚಿಕೊಂಡು ಬರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಇದನ್ನು 'ಬಿಂಗಿಪದ' ವೆಂದು ಕರೆಯುತ್ತಾರೆ. ಈ ತಂಡದವರು ಕೆಲವು ಭಾಗಗಳಲ್ಲಿ ಸನ್ನೆ ಕೋಲು ಎಂಬ ವಾದ್ಯವನ್ನು ಬಳಸುತ್ತಾರೆ. ಇದನ್ನು ಬಿದಿರಿನ ಜಾತಿಗೆ ಸೇರಿದ ವಾಟೆ ಎಂಬ ಸಸ್ಯದ ಕೊಳವೆಯಂತಹ ಕಾಂಡದಿಂದ ತಯಾರಿಸುತ್ತಾರೆ. ಸುಮಾರು ಎರಡು ಅಡಿ ಉದ್ದನೆಯ ಮೂರು ಅಥವಾ ನಾಲ್ಕು ಕೊಳವೆ ತಯಾರಿಸಿ ಈ ಕೊಳವೆಗಳನ್ನು ಸಣ್ಣ ಕೊಳವೆ ತುಂಡುಗಳ ಸಹಾಯದಿಂದ ಜೋಡಿಸಿ ಆರೇಳು ಅಡಿ ಉದ್ದನೆಯ ಒಂದೇ ಕೊಳವೆಯನ್ನಾಗಿ ಮಾಡುವರು. ಈ ಕೊಳವೆಯ ಒಂದು ತುದಿಗೆ ತೆಂಗಿನ ಗರಿಯನ್ನು ತುತ್ತೂರಿ ಆಕಾರದಲ್ಲಿ ಸುತ್ತಿ ಇನ್ನೊಂದು ತುದಿಯನ್ನು ಬಾಯಿಗೆ ಹಚ್ಚಿ ಊದುವರು. ಅದರಿಂದ ಹೊರಡುವ ನಾದ ಸುಮಾರು ಅರ್ಧ ಕಿ.ಮೀ ವರೆಗೆ ಕೇಳಿಸುತ್ತದೆ. ಇದು ಬಿಂಗಿ ತಂಡ ಬರುತ್ತಿದೆ ಎನ್ನುವದರ ಸಂಕೇತ. ಈ ತಂಡದಲ್ಲಿ ಒಬ್ಬ ಮೇಳದ ಮುಖಂಡತ್ವವನ್ನು ವಹಿಸುತ್ತಾನೆ. ಮುಮ್ಮೇಳ ಮತ್ತು ಹಿಮ್ಮೇಳಗಳಲ್ಲಿ ತಲಾ ಇಬ್ಬಿಬ್ಬರೂ ಹಾಡುಗಾರರು ಇರುತ್ತಾರೆ. ಹಾಡುಗಾರರೊಂದಿಗೆ ಜ್ಯೋತಿ ಹಿಡಿಯುವವರು, ದಿವಟಿಗೆ ಹೊರುವವರು ಬೇರೆ ಬೇರೆ ಊರುಗಳ ದಾರಿ ಬಲ್ಲವರು ಸೇರಿಕೊಂಡು ಮೇಳ ಸಿದ್ಧವಾಗುತ್ತದೆ. ಈ ಮೇಳದಿಂದ ಹೊರಡುವ ಮೊದಲು 'ದೀಪದೀಪೋಳ್ಗೆ' ಎಂದು

ಕೂಗುವುದು ವಾಡಿಕೆ. ಈ ಕೂಗು ಊರು ಬಿಡುವ ಮುನ್ಸೂಚನೆ ಹೀಗೆ ಹೋಗುತ್ತಿರುವಾಗ ಜ್ಯೋತಿ ಹಿಡಿದಿರುವವನು ಮೈಯೆಲ್ಲಾ ಕಣ್ಣಾಗಿ ಎಚ್ಚರದಿಂದಿರಬೇಕು. ಏಕೆಂದರೆ ಹೊತ್ತಿಸಿಕೊಂಡ ದೀಪ ನಂದಿ ಹೋಗಬಾರದು, ಅದಕ್ಕಾಗಿ ಅಡಿಕೆಹಾಳೆ ಅಥವಾ ಹೊಂಬಾಳೆಯನ್ನು ಅಡ್ಡಕೊಟ್ಟು ರಕ್ಷಿಸುತ್ತಾರೆ. ಈ ಜ್ಯೋತಿ ಯಾರ ಮನೆ ಮುಂದೆ ನಂದಿ ಹೋದರೂ ಅಪಶಕುನವೆಂಬ ನಂಬಿಕೆ ಇವರಲ್ಲಿದೆ.

ಅಂಟಿಗೆ ಪಂಟಿಗೆ ಮೇಳದ ಎರಡು ಜ್ಯೋತಿಗಳು ಎದುರಾಗಬಾರದು ಎಂಬ ಕಟ್ಟುನಿಟ್ಟಿನ ನಿಯಮವಿದೆ. ಆದ್ದರಿಂದ ಇವರು ದಾರಿಯಲ್ಲಿ ಸಾಗುವಾಗ ದಿಪ್ಪಡು, ದಿಪ್ಪಾಡು, ಹೋಳಿಗ್ಯೋ, ದೀಪದೀಪೋಳ್ಗೆ ಎಂದು ಕೂಗುವುದರ ಮೂಲಕ ಮತ್ತೊಂದು ಮೇಳದವರಿಗೆ ತಾವು ಬರುವ ಸೂಚನೆಯನ್ನು ನೀಡುತ್ತಾರೆ. ಇದು ಆಯಾ ಊರಿಗೆ ದೀಪದ ತಂಡ ಬರುತ್ತಿರುವ ಮುನ್ಸೂಚನೆ. ಅನಿರೀಕ್ಷಿತವಾಗಿ ಎರಡು ಮೇಳದವರು ಎದುರು ಬದುರು ಬರಬೇಕಾದ ಸಂದರ್ಭದಲ್ಲಿ ಒಂದು ತಂಡವು ತೆರೆಯಮರೆಯಲ್ಲಿ ನಿಂತು ಮತ್ತೊಂದು ತಂಡ ಹೋದ ನಂತರ ಈ ತಂಡವು ಮುಂದೆ ಸಾಗುತ್ತದೆ. ಊರು ಕಂಡೊಡನೆ ಬಹಳ ಉತ್ಸಾಹದಿಂದ

'ದೀಪ ಹಚ್ಚಿದ್ದು ಧೂಪಾನೆ ಹಾಕಿದ್ದು
ದೀವಳಿಗೆಗೆಂದು ಹೊರಟಿದ್ದು'

ಎಂದು ಹಾಡುತ್ತಾ ತಂಡದ ಮುಖ್ಯಸ್ಥ ಮುಂದೆ ಹೋಗುವನು. ಆವಾಗ ಹಿಮ್ಮೇಳದವರು ದಿಮಸಾಲೋ ಎಂದು ದನಿಗೂಡಿಸುವರು. ಇದು ಮೇಳದ ಆಗಮನದ ಸೂಚನೆ. ಇದಕ್ಕೆ 'ದಿಪ್ಪಡು' ಎನ್ನುವರು. ದಿಪ್ಪಡು ಮುಗಿಯುತ್ತಲೆ ಪದವು ಬದಲಾಗುತ್ತದೆ. ಪ್ರಾರಂಭದಲ್ಲಿ ದೇವತಾ ಸ್ತುತಿ

"ದಿಮ್‌ಸಾಲೊಡೆಯ ದನಿಯದ್ದುಬೊರಲೊ
ದಿಮ್‌ಸಾಲೋಡಿರಣ್ಣ ಈ ಊರ ದೇವರಿಗೆ
ಈ ಊರ ಭೂತಪ್ಪ ಬಲು ಸತ್ಯವಂತ
ಸತ್ಯವಂತನಾದರೆ ಸಭೆ ಮುಂದೆ ಬರಲಿ
ಈ ಊರ ಭೂತಪ್ಪಗೆ ಏನೇನೋ ಪೂಜೆ
ಹೆಡಿಗೇಲಿ ಹಣ್ಣು, ಹೇರೀಲಿ ಕಾಯಿ
ಆಚೆ ದಿಂಬ್ರಾಗಿ ಯಾರ ತಂದ ಬೆಳಕೋ

ಆನಂತರ ಜ್ಯೋತಿಯನ್ನು ಹೊತ್ತಿಸಿಕೊಂಡು ಜ್ಯೋತಿ ಪದ ಹಾಡುವರು.

ಅರಗದಿಂದ ಬಂದಾವೆ ಆರು ಸಾವಿರ ಹಣತೆ
ಬತ್ತಿ ಸಾಲಿನ ಕೊಂದಣಿ ಸಾಲು
ಜಗಜ್ಯೋತಿ ಸತ್ಯದಿಂದುರಿಯೆ ನಮಗಾಗಿ

ಮಣ್ಣಲ್ಲಿ ಹುಟ್ಟೋಳೆ ಮಣ್ಣಲ್ಲಿ ಬೆಳೆಯೋಳೆ
ಮಣ್ಣಲ್ಲಿ ಕಣ್ಣು ಬಿಡುವೋಳೆ
ಜಗಜ್ಯೋತಿ ಚೊಕ್ಕದಿಂದುರಿಯೆ

ಎಣ್ಣೇಲ್ಲಿ ಹುಟ್ಟೊಳೇ ಎಣ್ಣೇಲಿ ಬೆಳೆಯೋಳೆ
ಎಣ್ಣೇಲ್ಲಿ ಕಣ್ಣ ಬಿಡುವೋಳೆ
ಜಗಜ್ಯೋತಿ ಒಪ್ಪದಿಂದುರಿಯೆ ನಮಗಾಗಿ

ಕಲ್ಲಲ್ಲಿ ಹುಟ್ಟೋಳೆ ಕಲ್ಲಲ್ಲಿ ಬೆಳೆಯೋಳೆ
ಕಲ್ಲಲ್ಲ್ಲಿ ಕಣ್ಣ ಬಿಡುವೋಳೆ
ಜಗಜ್ಯೋತಿ ಒಪ್ಪದಿಂದುರಿಯೆ ನಮಗಾಗಿ

ತಂಡದವರು ಮನೆ ಬಾಗಿಲಿಗೆ ನಿಂತಾಗ ತಾವು ದೂರದಿಂದ ನಡೆದು ಬಂದ ಸ್ಥಿತಿಯನ್ನು ಹಾಡಿನ ಮೂಲಕ ಹೇಳುತ್ತಾರೆ.

ಹಾ ಹೋ ನಲ್ಲಾರೆ ಎಂದು ಆಲಾಪಿಸಿ
ಗೋರೆಂಬ ಕತ್ತಲೆಯೊಳಗೆ ನಾವು ಬಂದೇವಯ್ಯಾ !
ಬಂದಾರೆ ನಮ್ಮ ಚಾಜು ಬರಬೇಕಯ್ಯ
ಕಲ್ಲು ಮುಳ್ಳನ್ನೇ ತುಳಿದು ನಾವು ಬಂದೇವಯ್ಯ
ಬಂದಾರೆ ನಮ್ಮ ಚಾಜು ಬರಬೇಕಯ್ಯ!

ಇದಲ್ಲದೆ ತಾವು ಊರಿಂದೂರಿಗೆ ಬರುವಾಗ ತಮಗೆ ಎದುರಾದ ಹಾವು, ಕರಡಿ, ಹುಲಿ ಮುಂತಾದ ಪ್ರಾಣಿಗಳಿಗೆ ಹೆದರದೆ ಎದೆಕೊಟ್ಟು ಬಂದಿರುವುದನ್ನು ಈ ಕೆಳಗಿನ ಪದ್ಯದ ಮುಖಾಂತರ ವಿವರಿಸುವರು.

ಬಾಗೀಲು ತೆಗೀರಮ್ಮ
ಬಾಗೀಲು ತೆಗೀರಮ್ಮ
ಭಾಗ್ಯೂಳ್ಳವರ ಬಾಗೀಲ ತೆಗಿರಮ್ಮ

ಮಾವಿನ ಕದರಿಯ
ಮಲರೇನ ಮೀಡ
ಒಳ್ಳೆ ತಾರಿ ತಂದೀಹ ಮೀಡ

ಅಲ್ಲಾಡಿ ಇಲ್ಲಾಡಿ ನಾವು ಬಂದೀವ
ಕಲ್ಲು ಮುಳ್ಳು ತುಳಿದು ನಾವಿಲ್ಲಿ ಬಂದೀವಿಲ್ಲಿ
ಗುಡ್ಡುಗೊರವಿನ ತಿರುಗಿ
ನಾವು ಬಂದೀವಿಲ್ಲಿ

ಹಾವಿಗೆ ಬೆಟ್ಟಕೊಟ್ಟು ನಾವು ಬಂದೀವಿಲ್ಲಿ
ಹುಲಿಗೆ ಎದೆಕೊಟ್ಟು ನಾವು ಬಂದೀವಿಲ್ಲಿ
ಕರಡಿಗೆ ತಲೆಕೊಟ್ಟು ನಾವು ಬಂದೀವಿಲ್ಲಿ
ಅಲ್ಲಾಡಿ ಇಲ್ಲಾಡಿ ನಾವು ಬಂದೀವಿಲ್ಲಿ

ಹೀಗೆ ಹೇಳುತ್ತ ಬಾಗಿಲು ತೆಗೆಸುತ್ತಾರೆ. ಮನೆಯೊಡತಿ ಬಾಗಿಲು ತೆಗೆಯುವಳು. ಬಾಗಿಲು ತೆಗೆದಾಗ ಇವರ ಪದವು ಪ್ರಾರಂಭವಾಗುವದು.

ಬಾಗಿಲು ಬಾಗಿಲು ಚೆಂದ
ಈ ಮನೆಯ ಬಾಗಿಲು ಚೆಂದ
ಬಾಗಿಲಾಗೆನೂ ಬರುದಾರೆ
ಬಾಗಿಲಾಗೆಲ್ಲ ಏನೇನು ಬರೆದೈದಾರೆ
ಕೊಚ್ರು ಪಾರಿವಾಳದ ನವಿಲುಂಡು

ಎಂದು ಹಾಡಿದಾಗ ಮನೆಯವರು ಬಾಗಿಲು ತೆಗೆಯುತ್ತಾರೆ. ನಂತರ ಮಹಿಳೆಯರು ದೀಪ ಇಡುವ ಸ್ಥಳವನ್ನು ಗೋವಿನ ಸಗಣಿಯಿಂದ ಸಾರಿಸಿ ಮಣೆ ಇಡುತ್ತಾರೆ. ಮಣೆಯ ಮೇಲೆ ದೀಪವಿಟ್ಟು ತಂಡದ ಯಜಮಾನ ಮಾತ್ರ ಕೂತುಕೊಳ್ಳುತ್ತಾನೆ. ಉಳಿದವರು ನಿಂತೇ ಹಾಡುತ್ತಿರುತ್ತಾರೆ.

ಸಾಲೆ ಸೀರೆಯನುಟ್ಟು ಸರದಾಳೆ ಮುತ್ತುಕಟ್ಟಿ
ಸಾಲೆ ಮಾಳಿಗೇಲಿ ಸುಳುವೋರು ! ಸುವ್ವಿ
ಸಾಲೆ ಮಾಳಿಗೇಲಿ ಸುಳುವೋರಕ್ಕಮ ನಿಮ್ಮ
ವಾಲೆಬೆಳಕೀಲಿ ಮಗುನಿದ್ರೆ ಸುವ್ವಿ
ವಾಲೆಬೆಳಕೀಲಿ ಮಗುನಿದ್ರೆ ಜೋಗುಳ ಪಾಡಿ
ಜ್ಯೋತಿಗೆಣ್ಣೆಯ ಎರೆಯ ಬನ್ನಿ ಸುವ್ವಿ

ಈ ಹಾಡು ಹೇಳುವಾಗ ಮನೆಯ ಯಜಮಾನತಿ ದೀಪಧಾರಿಗಳು ತಂದ ದೀಪದಿಂದ ಜ್ಯೋತಿಯನ್ನು ಹಚ್ಚಿಕೊಂಡು ಹೋಗಿ ಬಲೀಂದ್ರನ ಹತ್ತಿರ ಇಡುತ್ತಾರೆ. ನಂತರ ಯಜಮಾನತಿ ಅಕ್ಕಿ, ಎಲೆ ಮತ್ತು ದಕ್ಷಿಣೆಯನ್ನು ಕೊಟ್ಟು ಆ ದೀಪಕ್ಕೆ ನಮಸ್ಕರಿಸುವರು. ನಂತರ ಬಲಿಂದ್ರನ ಹಾಡು ಪ್ರಾರಂಭಿಸುತ್ತಾರೆ.

'ಬಲ್ಲೇಳು ಬಲೀಂದ್ರನೇ ಮರ್ತ್ಯರೆ
ಎಲ್ಲೋರ ಸಲುವಂತವನೇ'
ಕಲ್ಲಾಸಿನ ಕಣಿವೀಗೂ ಮುಳ್ಳಾಸಿನ ಬೇಲಿಗೂ
ಬಲಿಂದ್ರನಾಸೆ ಬಡವರಿಗೆ ಸುವ್ವಿ ॥

ಬಲೀಂದ್ರನಾಸೆ ಬಡವರಿಗೆ ಮನೆಯ
ನಿಸ್ತ್ರೇಮಿಂದ ಮಡೆಯನುಡುವೋರೆ ಸುವ್ವಿ
ನಿಸ್ತ್ರೇಯರ ಮಡಿಯನುಡವರಿದರ ಮನಿಯ
ಕನ್ನೇರು ಮಿಂದ ಮಡಿಯನುಡುವೋರಾ ಶಿವ ಶಿವಾ
ಕನ್ನೇರು ಮಿಂದ ಮಡಿಯನುಡುವೋರಾ ಮನಿಯ
ಕಾಲ ಪೂಜಾಕೆ ತಡವಿದರೋ ಶಿವ ಶಿವಾ ॥
ವರುಷಕ್ಕೆ ಬರುವದು ವರುಷ ದೀವಳಿಗ್ಹಬ್ಬ
ವರುಷಕ್ಕೆ ಮೊದಲಾಗಿ ಬರುತೀನಿ ಶಿವ ಶಿವಾ
ವಷರುಷಕ್ಕೆ ಮೊದಲಾಗಿ ಬರುತೀವಿವರ ಮನೆಯ
ಕನ್ನೇರು ಮಿಂದ ಮಡಿಯನುಡುವೋರು ಶಿವ ಶಿವಾ
ವರುಷಕು ಬರುವದು ವರುಷ ದೀವಳಿಗ್ಹಬ್ಬ
ವರುಷಕು ಮೊದಲಾಗಿ ಬರುತೀನಿ ಶಿವ ಶಿವಾ
ವರುಷಕು ಮೊದಲಾಗಿ ಬರುತೀವಿ ವರಮುನಿಯ
ಕನ್ನೇರು ಮಿಂದ ಮಡಿನುಡುವೋರು ಶಿವ ಶಿವಾ
ವರುಷಕು ಬರುವದು ವರುಷ ದೀವಳಿಗ್ಹಬ್ಬ
ವರುಷಕು ಮೊದಲಾಗಿ ಬರುತೀವಿ ಶಿವ ಶಿವಾ
ವರುಷಕು ಮೊದಲಾಗಿ ಬರುತೀವಿ ವರಮನಿಗೆ
ಬಲೀಂದ್ರನಾಸೆ ಬಡವರಿಗೆ ಶಿವ ಶಿವಾ
ಕಲ್ಲಾಸಿನ ಕಣಿವೀಗೂ ಮುಳ್ಳಾಗೀನ ಬೇಲಿಗೂ
ಬಲೀಂದ್ರನಾಸೆ ಬಡವರಿಗೆ ಶಿವ ಶಿವಾ

ದೀವಳಿಗೆ ಇರುಳಿನಲ್ಲಿ ದೀಪ ಹಿಡಿದು ಬರುವ ಈ ಜನಪದ ಗಾಯಕರು ಜ್ಯೋತಿಯನ್ನು ಹಳ್ಳಿಯಿಂದ ಹಳ್ಳಿಗೆ, ಮನೆಯಿಂದ ಮನೆಗೆ ಹಚ್ಚುತ್ತಾ ಹೋಗುತ್ತಾರೆ. ಇವರು ಜನಪದ ಹಾಡಿನ ಕಣಜವೇ ಆಗಿರುತ್ತಾರೆ.

ದೀಪ ಹಿಡಿದ ರಾತ್ರಿ ಬೆಟ್ಟ, ಗುಡ್ಡ, ಹಳ್ಳಿ, ಕೊಳ್ಳಿ, ತಗ್ಗು, ದಿನ್ನೆ ಹತ್ತಿ ಇಳಿದು ಊರಿಂದೂರಿಗೆ ಹೋಗುವಾಗ ದೀಪ ಆರಬಾರದು. ಅದಕ್ಕಾಗಿ ಪುಂಡಿ ಅಥವಾ ಕವಲು ನಾರಿನ ದಪ್ಪ ಹುರಿಗೆ ಬೆಂಕಿ ಹಚ್ಚಿಕೊಂಡಿರುತ್ತಾರೆ. ಬೆಳಗಾದ ನಂತರ ಮನೆಗೆ ಹೋಗುವಾಗ ದೀಪದ ನೆನೆಬತ್ತಿಯನ್ನು ಹಾಲು ಮರದಲ್ಲಿಟ್ಟು ಹುರಿಯಲ್ಲಿರುವ ಬೆಂಕಿಯನ್ನು ತರುತ್ತಾರೆ. ದೀಪದ ಯಜಮಾನನ ಅಡಿಗೆ ಒಲೆಯ ಬೆಂಕಿಗೆ ಜೋರಿಗೆ ಬತ್ತಿಯನ್ನು ಅಗ್ನಿಗೊಡ್ಡುತ್ತಾರೆ. ಒಲೆಯಲ್ಲಿರುವ ಅಗ್ನಿ ಮೂರು ದಿವಸ ಹಗಲು-ರಾತ್ರಿ ಆರದಂತೆ ಎಚ್ಚರಿಕೆವಹಿಸುತ್ತಾರೆ. ಆದರೆ ಇಂದು ಗ್ರಾಮ ದೇವತೆಯ ದೀಪದಿಂದ ಹಚ್ಚಿಕೊಂಡಿರುವದರಿಂದ ಆ ದೀಪವನ್ನು ಮೂರು ದಿನಗಳ ವರೆಗೆ ಪುನಃ ಆ ದೇವರಿಗೆ

ಸಲ್ಲಿಸುವರು. ಅಲ್ಲಿ ಆ ದೀಪ ಆರದಂತೆ ಪೂಜಾರಿ ಜಾಗೃತೆವಹಿಸುತ್ತಾನೆ. ಮರುದಿನ ರಾತ್ರಿ ಗ್ರಾಮ ದೇವತೆಯ ದೇವಸ್ಥಾನದಿಂದ ಪುನಃ ದೀಪ ಹಚ್ಚಿಕೊಂಡು ಮನೆ ಮನೆಗೆ ಜ್ಯೋತಿ ಹಚ್ಚಲು ತೆರಳುವರು.

ಅಂಟಿಗೆ ಪಂಟಿಗೆ ಹಾಡುತ್ತಾ ಮನೆ ಮನೆಗೆ ತೆರಳುತ್ತಾ ಅವರು ಕೊಟ್ಟ ಅಕ್ಕಿ ಮತ್ತು ದಕ್ಷಿಣೆಯನ್ನು ಒಟ್ಟುಗೂಡಿಸಿ ಆ ಊರಿನ ಹಾಡಿಕೇರಿಯ ಎಲ್ಲ ಜನರು ಕೂಡಿಕೊಂಡು ಒಂದು ತಿಂಗಳೊಳಗಾಗಿ ಆ ಹಣವನ್ನು ಸಹಭೋಜನಕ್ಕಾಗಿ ಉಪಯೋಗಿಸುವರು. ಇದರಲ್ಲಿ ಮಾಂಸದ ಅಡಿಗೆ ಮತ್ತು ಸಿಹಿ ಊಟ ಎರಡೂ ಸೇರಿರುತ್ತವೆ. ಇನ್ನೂ ಕೆಲವು ಕಡೆ ಈ ಹಣವನ್ನು ತಮ್ಮ ಹಾಡಿಕೇರಿಯ ಕೆಲಸಕ್ಕಾಗಿ ಉಪಯೋಗಿಸಿದ ಉದಾಹರಣೆಗಳೂ ಕೂಡಾ ಸಾಗರ ತಾಲೂಕಿನ ಬೆಳ್ಳೆಣ್ಣೆ, ಖಂಡಿಕಾ, ಗಿಳಿಗಾರು, ಬಚಗಾರುಗಳಲ್ಲಿ ಕಾಣಬಹುದು.

ನಾಲ್ಕನೇ ದಿವಸಕ್ಕೆ ತಂಡದವರೆಲ್ಲರೂ ಸೇರಿ ಪುನಃ ದೀಪ ಹಚ್ಚಿಕೊಂಡು ಹಾಡುತ್ತಾ ನೆನೆಬತ್ತಿಯನ್ನಿಡುವ ಹಾಲುಮರದ ಹತ್ತಿರ ಹೋಗಿ ಮರ ಮತ್ತು ಜ್ಯೋತಿಯನ್ನು ಪೂಜೆ ಮಾಡಿ ನೆನೆಬತ್ತಿಯನ್ನು ಮರದ ಕೊಂಬೆಗಳಿಗೆ ಇಡುವುದರ ಮೂಲಕ ಮುಕ್ತಾಯ ಮಾಡುತ್ತಾರೆ.

ಮುಂದಿನ ದೀಪಾವಳಿಗೆ ಮತ್ತೆ ಅಲ್ಲಿಂದಲೇ ದೀಪ ತರುವ ಕೆಲಸ.

ಹೊಸ ನಗರ ಮತ್ತು ಶಿಕಾರಿಪೂರ ತಾಲೂಕಗಳಲ್ಲಿ ಪಾಡ್ಯದ ದಿವಸ ಯಾರ ಮನೆಯಲ್ಲಾದರೂ ಜನನ ಅಥವಾ ಮರಣ ಹೊಂದಿದರೆ ಸೂತಕ ಆಯಿತೆಂದು ದೀಪ ಹಚ್ಚುವದಿಲ್ಲ. ಜಾನುವಾರುಗಳು ಕರು ಹಾಕಿತೆಂದರೂ ಸೂತಕ ಆಯಿತೆಂದು ತಿಳಿಯುತ್ತಾರೆ. ನೆರೆಯ ಗ್ರಾಮದಲ್ಲಿ ಜನನ – ಮರಣ ಸಂಭವಿಸಿದರೆ ಹಬ್ಬ ಹಾಡುವವರು ಅಲ್ಲಿಗೆ ಹೋಗುವದಿಲ್ಲ. ಹಬ್ಬ ಹಾಡುವವರು ಕುಡಿಯುವ ಹಾಗಿಲ್ಲ. ದಾರಿಯಲ್ಲಿ ಎದುರಾಗುವ ಚೌಡಿ, ಭೂತ, ಯಕ್ಷಿ ಜಟ್ಟಿ ಬನಗಳಿಗೆ ನೆನೆಬತ್ತಿಯನ್ನಿಟ್ಟು ಹೋಗುತ್ತಾರೆ.

ಹರಿಜನರ ಮನೆಗೆ ದೀಪ ನೀಡಲು ಹೋಗುವದಿಲ್ಲ. ತಮಗಿಂತ ಕೆಳವರ್ಗದ ಜನರ ಮನೆಗೆ ಜ್ಯೋತಿ ನೀಡುವದಿಲ್ಲ. ತಮಗಿಂತ ಮೇಲ್ವರ್ಗದ ಜನರ ಮನೆಗಳಿಗೆ ಮಾತ್ರ ಜ್ಯೋತಿ ನೀಡುತ್ತಾರೆ. ಮೇಲ್ವರ್ಗದವರ ಮನೆಗೆ ಹೋದಾಗ ಹೊಸ್ತಿಲಿನಲ್ಲಿ ದೀಪವನ್ನಿಡುತ್ತಾರೆ. ಆ ಜ್ಯೋತಿಯಿಂದ ಅವರು ತಮ್ಮ ದೀಪವನ್ನು ಹಚ್ಚಿಕೊಳ್ಳುತ್ತಾರೆ. ಹಾಲಿ ದೇವರನ್ನ ಆರಾಧಿಸುವವರ ಮನೆಯಲ್ಲಿ ಸಿರಿಕವಲಿ ಹಾಡು ಹೇಳುವದಿಲ್ಲ. ಒಮ್ಮೆ ಹೇಳಿದರೆ ಮನೆಯ ಯಜಮಾನನ ಮೈಮೇಲೆ ಹುಲಿದೇವರು ಮೈದುಂಬುತ್ತಾರೆ ಎಂಬ ನಂಬಿಕೆ ಇವರಲ್ಲಿದೆ.

೫.೪.೮ ಅಂಟಿಗೆ ಪಂಟಿಗೆ ಪದಗಳು

ದೀಪ ಹಚ್ಚುವದು, ದೀಪವನ್ನು ಊರಿಂದೂರಿಗೆ ಒಯ್ಯುವ ಈ ಸಂಪ್ರದಾಯ ಬೆಳಕು ನೀಡುವ ಕ್ರಿಯೆಗೆ ಸಂಬಂಧಿಸಿದರೂ ಕೂಡ ಕಲಾವಿದರು ಹಾಡುವ ಪದಗಳು ಇಷ್ಟಕ್ಕೆ ಸಂಬಂಧಿಸಿರುವುದಿಲ್ಲ. ದಾರಿ ಸಾಗಬೇಕಾದ ಕಾರಣ ಹತ್ತಾರು ಕಥೆ, ಕವನಗಳನ್ನು ಇವರು ಹೇಳುವರು. ಹೀಗಾಗಿ ಇವರು ಹಾಡುವ ಪದಗಳನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು.

೧)ದೀಪದ ಯಾತ್ರೆಗೆ ಸಂಬಂಧಿಸಿದ ಪದಗಳು

೨)ಇತರೆ ಹಾಡುಗಳು

ದೀಪದ ಯಾತ್ರೆಗೆ ಸಂಬಂಧಿಸಿದ ಹಾಡುಗಳೆಂದರೆ, ಬಾಗಿಲು ತೆಗೆಯುವ ಹಾಡು, ದೀಪ ಹಚ್ಚುವ ಹಾಡು, ಬಲೀಂದ್ರನ ಹಾಡು, ಗ್ರಾಮ ದೇವತೆಯ ಹಾಡು, ಎಣ್ಣೆ ಎರೆಯುವ ಹಾಡು, ಬಾವ ನೆಂಟರ ಹಾಡು ಮತ್ತು ದೀಪ ಆಚರಿಸುವ ಹಾಡು ಇತ್ಯಾದಿಗಳು.

ಎರಡನೇ ಪ್ರಕಾರಗಳಲ್ಲಿ ದೀಪ ಊರಿಂದೂರಿಗೆ ಒಯ್ಯುವವರು. ದಾರಿ ಸಾಗಲಿ ಎಂಬ ಕಾರಣಕ್ಕಾಗಿ ಮತ್ತು ದಣಿವು ಆಗದಿರಲಿ ಎಂಬ ಕಾರಣಕ್ಕಾಗಿ ತಮಗೆ ತೋಚಿದ ಯಾವುದೆ ಹಾಡು ಬೇಕಾದರೂ ಹಾಡಬಹುದು. ಉದಾಹರಣೆಗಾಗಿ: ಗೋವಿನ ಹಾಡು, ದ್ರೌಪದಿ ಪದ, ಜೋಗುಳ ಪದ, ಗಂಗೆ-ಗೌರಿ ಪದ, ಕವಲೆ ಪದ, ಅದ್ಭುತ ಕಥೆ, ರಮ್ಯ ಕಥೆ ಹಾಗೂ ಅಗೋಚರ ಕಥೆ ಮುಂತಾದ ಕಥೆಗಳನ್ನು ಹೇಳಬಹುದು.

ಅಂಟಿಗೆ ಪಂಟಿಗೆ ತಂಡದವರು ಅನುಸರಿಸುವ ನಿಯಮಗಳು

ಅಂಟಿಗೆ ಪಂಟಿಗೆ ತಂಡವನ್ನು ಒಮ್ಮೆ ಕಟ್ಟಿದರೆ ಪ್ರತಿ ವರ್ಷ ತಂಡ ಕಟ್ಟಲೇಬೇಕು. ಕೆಲವು ಅನಿವಾರ್ಯ ಕಾರಣದಿಂದ ಬೇರೆ ಊರಿಗೆ ಹೊಗುವದಿದ್ದರೆ ಇರುವ ಯಜಮಾನನ ಮನೆಯ ತುಳಸಿ ಕಟ್ಟೆಯ ಮುಂದಾದರೂ ದೀಪ ಹೊತ್ತಿಸಿ ಹಾಡುಗಳನ್ನೆಲ್ಲಾ ಹಾಡಿ ದೀಪ ವಿಸರ್ಜಿಸಬೇಕು. ಇದು ಸಾಧ್ಯವಾಗದಿದ್ದರೆ, ಮುಂದಿನ ಏಳು ವರ್ಷಗಳವರೆಗೆ ಇವರು ತಂಡ ಕಟ್ಟುವಂತಿಲ್ಲ, ಹಾಡು ಹಾಡುವಂತಿಲ್ಲ.

ದೀಪಾವಳಿ ಹಬ್ಬದಲ್ಲಿ ಮಾತ್ರ ಈ ಕಲೆಯನ್ನು ಪ್ರದರ್ಶಿಸಬೇಕು. ದೀಪಾವಳಿ ಪಾಡ್ಯದಿಂದ ವರ್ಷ ತೊಡಕಿನವರೆಗೆ ಹಗಲು ರಾತ್ರಿ ಈ ದೀಪ ಆರುವಂತಿಲ್ಲ.

ಅಂಟಿಗೆ ಪಂಟಿಗೆ ತಂಡದವರು ಹಾಡುತ್ತ ಮನೆಯ ಬಾಗಿಲಿಗೆ ಹೋದಾಗ ಮನೆಯವರು ಬಾಗಿಲು ತೆರೆದು ಜ್ಯೋತಿಯನ್ನು ತೆಗೆದುಕೊಳ್ಳದಿದ್ದರೆ ಆ ಮನೆಯವರಿಗೆ ಕೆಡಕನ್ನುಂಟಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ದೀಪ ಹಿಡಿದ ವ್ಯಕ್ತಿ ಆ ವೇಳೆಯಲ್ಲಿ ಚಪ್ಪಲಿಗಳನ್ನು ಧರಿಸುವಂತಿಲ್ಲ. ದೀಪ ಕೈಯಲ್ಲಿ ಇರುವಾಗ ಮಲ, ಮೂತ್ರ ಮಾಡುವಂತಿಲ್ಲ. ತಂಡದಲ್ಲಿ ಸೂತಕ, ಮುಟ್ಟು, ಮೈಲಿಗೆ ಇದ್ದವರು ಭಾಗವಹಿಸುವಂತಿಲ್ಲ.

ಪ್ರಥಮವಾಗಿ ದೀಪ ಹಚ್ಚುವವರ ಮನೆಯಲ್ಲಿ ಮೈಲಿಗೆಯಾದರೆ ಆ ವರ್ಷ ದೀಪ ಹಚ್ಚುವದನ್ನು ನಿಲ್ಲಿಸಬೇಕು. ಒಂದು ವರ್ಷ ನಿಲ್ಲಿಸಿದರೆ ಮೂರು ವರ್ಷಗಳ ವರೆಗೆ ಹಾಡು ಹಾಡುವಂತಿಲ್ಲ. ಊರಿಂದೂರಿಗೆ ಸಾಗುವಾಗ ಯಕ್ಷಿಬನ, ಚೌಡಿಬನ, ಭೂತಪ್ಪನ ಕಟ್ಟೆಗಳು ಬಂದರೆ ದೀಪ ಹಚ್ಚಿ ಮುಂದೆ ಸಾಗಬೇಕು.

ಅಂಟಿಗೆ ಪಂಟಿಗೆಯ ಬೇರೆ ಬೇರೆ ತಂಡಗಳು ಒಂದಕ್ಕೊಂದು ಎದುರಾಗಬಾರದು. ಹಾಗಾದರೆ ಅಪಶಕುನವೆಂಬ ನಂಬಿಕೆ ಇವರಲ್ಲಿದೆ.

೫.೫ ಮೂಢನಂಬಿಕೆಗಳು

ಹಸಲರಲ್ಲಿಯೂ ಕೂಡಾ ಕೆಲವೊಂದು ಮೂಢನಂಬಿಕೆಗಳು ಇವೆ. ಮೂಢನಂಬಿಕೆಗಳೆಂದರೆ, ಯಾವುದೇ ರೀತಿಯ ಸತ್ಯಾಸತ್ಯತೆ ಇರದೇ ಇರುವದು.

- ಎಲ್ಲಿಗಾದರೂ ಶುಭ ಕಾರ್ಯಕ್ಕೆ ಹೊರಟಾಗ ನಾಗರ ಹಾವು ಅಥವಾ ಕೇರೆ ಹಾವು ಕಾಣಿಸಿದರೆ ವಾಪಸ್ಸು ಮನೆಗೆ ಹೋಗುವರು.
- ಯಾವುದೇ ಶುಭ ಕಾರ್ಯಕ್ಕೆ ಹೊರಟಾಗ ಖಾಲಿ ಕೊಡಪಾನ (ಕೊಡ) ಅಡ್ಡ ಬಂದರೆ ಸ್ವಲ್ಪ ಸಮಯದವರೆಗೆ ಕುಳಿತು ಮುಂದೆ ಸಾಗುವರು.
- ಶುಭ ಗಳಿಗೆಯಲ್ಲಿ ಗದ್ದೆಯಲ್ಲಿ ಒಂದೇ ಎತ್ತು ಕಾಣಿಸಿದರೆ ಆ ಕಾರ್ಯವಾಗುವದಿಲ್ಲ ಎಂಬ ನಂಬಿಕೆ.
- ಶುಭ ಕಾರ್ಯಕ್ಕೆ ಹೊರಟಾಗ ವಿಧವೆ ಎದುರಿಗೆ ಬಂದರೆ ಕಾರ್ಯವಾಗುವದಿಲ್ಲವೆಂಬ ನಂಬಿಕೆ.
- ಮನೆಯ ಮೇಲೆ ಕುಳಿತು ಕಾಗೆ ಕೂಗಿದರೆ ಅಪಶಕುನ ಎಂದು ತಿಳಿಯುತ್ತಾರೆ.
- ಶುಭ ಕಾರ್ಯಕ್ಕೆ ಹೊರಟಾಗ ಖಾಲಿ ಬಿದಿರಿನ ಬುಟ್ಟಿ ಎದುರಾದರೆ ಅಪಶಕುನವೆಂಬ ನಂಬಿಕೆ.
- ರಾತ್ರಿ ವೇಳೆಯಲ್ಲಿ ನಾಯಿಗಳು ಅತ್ತರೆ ಅಪಶಕುನವೆಂಬ ನಂಬಿಕೆ.
- ಶುಭ ಕಾರ್ಯಕ್ಕೆ ಹೊರಟಾಗ ದುಡ್ಡು ಸಿಕ್ಕರೆ ಅಪಶಕುನವೆಂಬ ನಂಬಿಕೆ.
- ಪೂಜೆ ಮಾಡುವಾಗ ಕೈಯೊಳಗಿನ ಪೂಜಾ ಸಾಮಾನುಗಳು ಜಾರಿ ಬಿದ್ದರೆ ಅಪಶಕುನವೆಂಬ ನಂಬಿಕೆ.
- ಶೂನ್ಯ ಮಾಸದಲ್ಲಿ ಶುಭ ಕಾರ್ಯ ಮಾಡುವದಿಲ್ಲ.
- ಸೌದೆಯನ್ನು ಹೊತ್ತವರು ಎದುರು ಬಂದರೆ ಅಪಶಕುನ.
- ಕನಸಿನಲ್ಲಿ ಪೋಲಿಸರು ಬಂದರೆ ಅಪಶಕುನ.
- ಶುಭ ಕಾರ್ಯಕ್ಕೆ ಹೊರಟಾಗ ಪೊರಕೆ ಹಿಡಿದವರು ಎದುರು ಬರಬಾರದು.
- ವಿವಾಹವಾದಂತೆ ಕನಸು ಕಂಡರೆ ಅಪಶಕುನ.
- ಪ್ರಯಾಣ ಬೆಳೆಸುವಾಗ ಯಾರೂ ಎಲ್ಲಿಗೆ ಹೊರಟಿರುವೆ ಎಂದು ಕೇಳಿದರೆ ಅಪಶಕುನ.

- ಕಾಗೆ ತಲೆಗೆ ಕುಕ್ಕಿದರೆ ಅಶುಭ.
- ರಜಸ್ವತಿಯಾದ ಹೆಣ್ಣು ಎದುರಾದರೆ ಶುಭ.
- ಭತ್ತದ ಕಣಜ ಕನಸಿನಲ್ಲಿ ಕಂಡರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ.
- ಶುಭ ಕಾರ್ಯಕ್ಕೆ ಹೊರಟಾಗ ಬೆಕ್ಕು ಅಡ್ಡ ಬಂದರೆ ಅಪಶಕುನ ಎಂಬ ನಂಬಿಕೆ.

೫.೬ ಕಥೆಗಳು

ಮಾನವನ ಬದುಕು ಆಧುನಿಕ ಯುಗದಲ್ಲಿ ಗಡಿಯಾರದಂತೆ ಕಾರ್ಯನಿರ್ವಹಿಸುವುದು. ಇವನಿಗೆ ಪ್ರಾಚೀನ ಕಾಲದ ಗ್ರಂಥಗಳನ್ನು ಓದುವ ವ್ಯವಧಾನವೂ ಇಲ್ಲ. ದೊರೆಯುವ ಕಡಿಮೆ ಅವಧಿಯಲ್ಲಿಯೇ ಲಲಿತಕಲೆಗಳ ಸೃಷ್ಟಿ ಅಧ್ಯಯನ ಸಂಶೋಧನ ಕ್ರಿಯೆಗಳು ನಡೆಯಬೇಕಾಗಿವೆ.

ಆಧುನಿಕ ಮಾನವನ ಇಂತಹ ಅವಶ್ಯಕತೆಗಳನುಗುಣವಾಗಿ ಇಂಗ್ಲಿಷ ಸಾಹಿತ್ಯದಲ್ಲಿ ಶಾರ್ಟ್ ಸ್ಟೋರಿ ಹುಟ್ಟಿಕೊಂಡು ಇದನ್ನು ಕನ್ನಡದಲ್ಲಿ ಸಣ್ಣ ಕಥೆಗಳು ಎಂದು ಕರೆಯುತ್ತೇವೆ.

ಕಥೆಗಳ ಹುಟ್ಟಿಗೆ ಮಾನವನ ಸ್ವಭಾವವು ಕಾರಣವಿರಬಹುದು. ಎಲ್ಲಿಯಾದರೂ ಇಬ್ಬರು ಸೇರಿದರೆ ತನಗಾದ ಅನುಭವ, ತಾನು ನೋಡಿದ ಘಟನೆ, ತನ್ನ ಭಾವನೆಗಳನ್ನು ಹೊರಗೆ ಹಾಕುವಾಗ ಎದುರಿಗಿದ್ದ ವ್ಯಕ್ತಿಗೆ ಮನೋರಂಜಕವಾಗಿ ಕಲಾತ್ಮಕವಾಗಿ ಚಿತ್ತದ ಮೇಲೆ ಅಚ್ಚೊತ್ತಿದ್ದಂಗೆ ಹೇಳುತ್ತಾನೆ. ಈ ಕ್ರಿಯೆಯು ಕಥೆಯ ಹುಟ್ಟಿಗೆ ಕಾರಣವಿರಬಹುದು. 'ಕಥ' ಎಂಬುದು ಕಥೆ ಎಂಬ ಧಾತುವಿನಿಂದ ಬಂದಿದೆ. ಇದರ ಅರ್ಥ 'ಹೇಳು ಎಂದರ್ಥ. ಕಥೆ ಎನ್ನುವದು 'ಕಥಿತ್' ವಸ್ತು ಮೂಲತಃ ಅದು ಹೇಳತಕ್ಕದ್ದು,

ಕಥೆಗಳನ್ನು ಹೇಳುವದು ಹಸಲರು ಮಳೆಗಾಲದ ದಿನಗಳಲ್ಲಿ ಎಲ್ಲರೂ ಮನೆಯಲ್ಲಿ ಸುಮ್ಮನೆ ಕೂಡುವುದರಿಂದ ತಮ್ಮ ಬೇಜಾರವನ್ನು ಕಳೆಯಲು ಅವರು ಕಥೆಗಳನ್ನು ಹೇಳುವದು ರೂಢಿಯಲ್ಲಿ ಬಂದಿತು. ಇವರು ತಮ್ಮ ಕಥೆಗಳಲ್ಲಿ ನೀತಿ ಕಥೆಗಳು, ಅಗೋಚರ ಕಥೆಗಳು ಮತ್ತು ಅದ್ಭುತ ಕಥೆಗಳನ್ನು ಹೇಳುತ್ತಾರೆ.

೫.೬.೧ ಮಲತಾಯಿ ದ್ವೇಷ

ಒಂದಾನೊಂದು ಊರಿನಲ್ಲಿ ಒಬ್ಬ ರಾಜ ರಾಣಿ ಇದ್ದಳು ಅವಳಿಗೆ ಇಬ್ಬರು ಮಕ್ಕಳು. ಒಬ್ಬ ಹುಡುಗ, ಇನ್ನೊಬ್ಬಳು ಹುಡುಗಿ. ಸ್ವಲ್ಪ ದಿನಗಳ ನಂತರ ರಾಣಿ ತೀರಿಹೋದಳು. ಆ ಹುಡುಗರನ್ನು ಸರಿಯಾಗಿ ಯಾರೂ ನೋಡಿಕೊಳ್ಳುವವರಿಲ್ಲದೆ, ಹುಡುಗಿಯ ತಲೆತುಂಬಾ ಹೇನುಗಳಾದವು. ಇದನ್ನು ರಾಜಕುಮಾರಿ ತನ್ನ ತಂದೆಯ ಹತ್ತಿರ ಹೋಗಿ ಅಪ್ಪ, ನಮಗೆ ಸರಿಯಾಗಿ ಆರೈಕೆಯಿಲ್ಲ, ತಲೆ ತುಂಬಾ ಹೇನುಗಳಾಗಿವೆ. ಅದಕ್ಕೋಸ್ಕರ ನೀನು ಮದುವೆಯಾಗು ಚಿಕ್ಕಮ್ಮ ಬಂದರೆ ನಮ್ಮನ್ನು ನೋಡಿಕೊಳ್ಳುವರು ಎಂದಳು.

ಆಗ ರಾಜ ಆಯಿತು ಮಗಳೆ, ಬೆಳಿಗ್ಗೆ ನನಗೆ ಅನ್ನದ ಬುತ್ತಿ ಕಟ್ಟಿಕೊಡು. ನಾನು ಚಿಕ್ಕಮ್ಮಳನ್ನು ತರುತ್ತೇನೆ ಎಂದನು. ಬೆಳಿಗ್ಗೆ ಬುತ್ತಿಯನ್ನು ತೆಗೆದುಕೊಂಡು ಹೀಗೆ ಸುಮಾರು

ದೂರ ಹೋದನಂತರ ಅವನಿಗೆ ಒಬ್ಬಳು ಸುಂದರ ಯುವತಿ ಸಿಗುತ್ತಾಳೆ. ರಾಜ ಅವಳಿಗೆ ನೀನು ಯಾರು, ಏತಕ್ಕೆ ಇಲ್ಲಿ ಬಂದಿದ್ದೀಯಾ ಎಂದು ಕೇಳಿದನು. ಅದಕ್ಕೆ ಅವಳು ನಾನು ಒಬ್ಬ ಬಡವಿ, ಗಂಡನನ್ನು ಅರಸುತ್ತಾ ಹೊರಟಿದ್ದೇನೆ ಎನ್ನುತ್ತಾಳೆ. ಆಗ ರಾಜನು ನಾನು ಸಹ ಹೆಂಡತಿಯನ್ನು ಹುಡುಕುತ್ತಾ ಹೊರಟಿದ್ದೇನೆ. ನಾವಿಬ್ಬರೂ ಮದುವೆಯಾಗೋಣ ಎಂದಾಗ ಆಕೆ ಅದಕ್ಕೆ ಒಪ್ಪುವಳು.

ಊಟ ಮಾಡಲು ಬುತ್ತಿಯನ್ನು ಇಬ್ಬರೂ ಬಿಚ್ಚುವರು. ಆಗ ಯುವತಿಯು ರಾಜನಿಗೆ ನೀವು ಕೈಕಾಲು ತೊಳೆದು ಬನ್ನಿ ಎಂದು ಹೇಳುವಳು ರಾಜನು ಹೋಗುವನು ಆ ಸಮಯದಲ್ಲಿ ಬುತ್ತಿಯನ್ನು ಅದಲು ಬದಲು ಮಾಡಿ ಇಡುವಳು ಏಕೆಂದರೆ ಇವಳ ಬುತ್ತಿ ದಪ್ಪಕ್ಕಿ ಅನ್ನ ನೀರು ಮೊಸರು ಹಾಕಿದ್ದು, ರಾಜನ ಬುತ್ತಿ ಅನ್ನ ಸಣ್ಣಕ್ಕಿ ಅನ್ನ ಮತ್ತು ಗಟ್ಟಿ ಮೊಸರು. ರಾಜ ಕೈಕಾಲು ತೊಳೆದುಕೊಂಡು ಬಂದನಂತರ ಬುತ್ತಿ ಬಿಚ್ಚುವನು. ದಪ್ಪಕ್ಕಿ ಅನ್ನ ನೀರು ಮೊಸರು. ಇವನು ಯಾವಾಗಲೂ ತಿನ್ನುವುದು ಸಣ್ಣಕ್ಕಿ ಅನ್ನ. ಮಗಳೇ ಈ ರೀತಿ ಮಾಡಿರಬಹುದೆಂದು ಮಗಳಿಗೆ ಬೈಯುತ್ತಾನೆ. ಆಗ ಆ ಯುವತಿ ನಿಮ್ಮದೆಂತ ಅನ್ನ, ನನ್ನ ಅನ್ನನೋಡಿ ಗಟ್ಟಿ ಮೊಸರಿನ ಸಣ್ಣಕ್ಕಿ ಅನ್ನ ಇದನ್ನೇ ಇಬ್ಬರೂ ತಿನ್ನೋಣ ಎಂದು ಇಬ್ಬರೂ ತಿನ್ನುತ್ತಾರೆ. ಕೊನೆಗೆ ರಾಜ ಅವಳನ್ನು ಅರಮನೆಗೆ ಕರೆದುಕೊಂಡು ಬಂದು ಚಿಕ್ಕರಾಣಿಯನ್ನಾಗಿ ಮಾಡಿಕೊಳ್ಳುವನು. ಇವಳು ಬಂದ ಸ್ವಲ್ಪ ದಿನಗಳ ನಂತರ ಮಕ್ಕಳಿಬ್ಬರನ್ನು ದನಕಾಯಲು ಹಾಕುತ್ತಾಳೆ. ದಿನವೂ ಮಧ್ಯಾಹ್ನ ಊಟವನ್ನು ಕಿರಿಯರಾಣಿ ಕಟ್ಟಿಕೊಡುತ್ತಿದ್ದಳು. ಕೊನೆ ಕೊನೆಗೆ ಅದು ಇಲ್ಲದಂತಾಯಿತು. ಈ ಸಮಯದಲ್ಲಿ ಅವರಿಗೆ ಸಹಾಯ ಮಾಡಿದ್ದು, ಅವರ ತಾಯಿಗೆ ತವರುಮನೆಯಿಂದ ಬಳುವಳಿಯಾಗಿ ಕೊಟ್ಟ "ಕವಲೆದನ" ಇದು ದಿನಾ ಮಧ್ಯಾಹ್ನ ಅವರಿಗೆ ಹಾಲು ಕೊಡುತ್ತಿತ್ತು. ಈ ಹಾಲನ್ನು ಕುಡಿದು ಆ ಅಣ್ಣ ತಂಗಿಯರು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು.

ಚಿಕ್ಕರಾಣಿ ಗರ್ಭಧರಿಸಿ, ಒಂದು ಹೆಣ್ಣು ಮಗುವನ್ನು ಜನಿಸಿದಳು. ಆ ಮಗು ದೊಡ್ಡದಾಗಿ ಬೆಳೆಯಿತು. ಆದರೆ ತುಂಬಾ "ಬಡಕಲು" ಹುಡುಗಿ ಆದ್ದರಿಂದ ಅವಳನ್ನು "ಬಡಕಿ" ಎಂದು ಕರೆಯೋಣ. ಈ ಹುಡುಗಿಗೆ ಒಳ್ಳೊಳ್ಳೆಯ ಊಟ ಸಿಕ್ಕಿದರು ದಪ್ಪ ಆಗದೆ ಬಡಕಲಾಗೆ ಇದ್ದಳು ಇದರಿಂದ ಕಿರಿಯ ರಾಣಿಗೆ ಹೊಟ್ಟೆಯುರಿಯಾಗತೊಡಗಿತು. ಆ ಹುಡುಗರು ಹೊತ್ತಿಗೆ ಸರಿಯಾಗಿ ಊಟಯಿಲ್ಲದೆ ಇದ್ದರೂ ದಪ್ಪವಾಗಿದ್ದಾರೆ. ನನ್ನ ಮಗಳ್ಯಾಕೆ ಈ ರೀತಿ ಸೋತು ಹೋಗಿದ್ದಾಳೆ. ಈ ಹುಡುಗರು ಏನು ತಿನ್ನುತ್ತಾರೆ ಎಂದು ತಿಳಿಯಲು ತನ್ನ ಮಗಳಿಗೆ ಹೇಳಿಕೊಟ್ಟಳು.

ಮಾರನೆಯ ದಿನ ಬಡಕಿ ಹುಡುಗಿ ಆ ಇಬ್ಬರೂ ಅಣ್ಣ ತಂಗಿಯರ ಜೊತೆಗೆ ದನಕಾಯಲು ತಾನೂ ಬರುತ್ತೇನೆ ಎಂದು ಹಟ ಹಿಡಿದು ಹೋದಳು. ಮಧ್ಯಾಹ್ನವಾಯಿತು ಬಡಕಿ ಹಸಿವಿನಿಂದು ಅಳತೊಡಗಿದಳು ಇಬ್ಬರೂ ಅಣ್ಣ ತಂಗಿಯರು ಮನೆಗೆ ಹೋಗೋಣ ಎಂದರೂ ಆ ಹುಡುಗಿ ಒಪ್ಪಲಿಲ್ಲ ಕೊನೆಗೆ ದಿನದಂತೆ ಕವಲೆದನ ಬಂತು ಅಣ್ಣ ತಂಗಿಯರು ಅದರ ಹಾಲು ಕುಡಿದು ಆ ಹುಡುಗಿಗೂ ಕೊಟ್ಟರು. ಸಂಜೆ ಮನೆಗೆ ಬಂದ ಮೇಲೆ ಆ ಬಡಕಿ ಹುಡಿಗಿ ಆ ಹಸುವಿನ ಸುದ್ದಿಯನ್ನು ರಾಣಿಗೆ ಹೇಳಿದಳು. ಆಗ ಆ ರಾಣಿ ಹಗೆಯನ್ನು ತೀರಿಸಲು ಹಟತೊಟ್ಟಳು.

ಸ್ವಲ್ಪ ದಿನದ ನಂತರ ತನಗೆ ತಲೆನೋವು, ಜ್ವರ ಎಂದು ಚಿಕ್ಕರಾಣಿ ಮಲಗಿದಳು ರಾಜವೈದ್ಯರನ್ನು ಗುಪ್ತವಾಗಿ ಕರೆಯಿಸಿ ಲಂಚಕೊಟ್ಟು ನನ್ನ ತಲೆನೋವಿಗೆ ಕವಲೆದನದ ರಕ್ತವನ್ನು ಹಚ್ಚಬೇಕೆಂದು ಸಲಹೆ ಮಾಡಿರಿ, ನಾನು ನಿಮಗೆ ಏನು ಬೇಕಾದರೂ ಕೊಡುತ್ತೇನೆ ಎಂದು ಹೇಳಿದಳು.

ಕೊನೆಗೆ ರಾಜ ರಾಣಿಯ ಕಾಯಿಲೆಯ ಬಗ್ಗೆ ವೈದ್ಯರನ್ನು ಕೇಳಿದಾಗ ಕವಲೇದನವನ್ನು ಕಡಿದು ಅದರ ರಕ್ತವನ್ನು ರಾಣಿಗೆ ಹಚ್ಚಬೇಕು ಎಂದು ಸಲಹೆ ನೀಡಿದರು. ಕವಲೆದನವನ್ನು ಕಡಿದಾಯಿತು. ಆ ಅಣ್ಣ ತಂಗಿಯರ ದಿನದ ಆಧಾರವು ತಪ್ಪಿ ಹೋಯಿತು. ಅದರ ಎಲಬು ಬಿದ್ದ ಸ್ಥಳದಲ್ಲಿ ಅಳುತ್ತಾ ಕುಳಿತರು. ಆಗ ಎಲಬು ಅಳಬೇಡಿ ನಾನು ನಿಮ್ಮ ಕೈಬಿಡುವುದಿಲ್ಲ ಎಂದು ಭರವಸೆಯನ್ನು ನೀಡಿತು. ನಂತರ ಆ ಎಲುಬಿನ ರಾಸಿಯ ಬಳಿ ಒಂದು ಗ್ಯಾರಲ ಬಳ್ಳಿಯಾಗಿ ಹುಟ್ಟುತ್ತದೆ. ಅಣ್ಣ ತಂಗಿಯರು ಆ ಬಳಿಯಲ್ಲಿ ಗ್ಯಾರಲ ಕಾಯಿಗಳನ್ನು ಕೊಯ್ದು ತಿನ್ನುತ್ತಿರುತ್ತಾರೆ. ಇಷ್ಟಾದರೂ ಹುಡುಗರಿಗೆ ಏನು ಆಗಲಿಲ್ಲ ಎಂದು ಚಿಕ್ಕರಾಣಿ ತನ್ನ ಮಗಳಿಗೆ ಈ ಅಣ್ಣ ತಂಗಿಯರು ಏನು ತಿನ್ನುತ್ತಾರೆ ಎಂದು ತಿಳಿಯಲು ಕಳುಹಿಸುತ್ತಾಳೆ. ಅಣ್ಣ ತಂಗಿಯರು ಗ್ಯಾರಲ ಹಣ್ಣು ತಿಂದು ಬದುಕಿತ್ತಿರುವುದನ್ನು ತನ್ನ ತಾಯಿಗೆ ತಿಳಿಸುತ್ತಾಳೆ. ಕೊನೆಗೆ ರಾಣಿ ಆ ಬಳ್ಳಿಯನ್ನು ಸಹ ಕಡಿಸಿ ಬಿಡುತ್ತಾಳೆ. ಈ ಹುಡುಗರಿಗೆ ತುಂಬಾ ದುಃಖವಾಗುತ್ತದೆ. ನಂತರ ಆ ಬಳ್ಳಿಯಿದ್ದ ಸ್ಥಳದಲ್ಲೆ ಒಂದು ತೆಂಗಿನಮರ ಹುಟ್ಟುತ್ತದೆ. ಆ ಮರವು ಅಣ್ಣ ತಂಗಿಯರಿಗೆ ದಿನಾಲು ಅದರ ಕಾಯಿಗಳನ್ನು ಕೊಯ್ದುಕೊಳ್ಳಲು ಬಗ್ಗಿರುತ್ತಿತ್ತು. ಆಗ ಹುಡುಗರು ತೆಂಗಿನಕಾಯಿಗಳನ್ನು ಕೊಯ್ದು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಇಷ್ಟಾದರೂ ಆ ಅಣ್ಣ ತಂಗಿಯರು ಹಸಿವೆ, ಬಳಲಿಕೆಯಿಲ್ಲದೆ ಇರುತ್ತಾರಲ್ಲ ಮಧ್ಯಾಹ್ನ ಏನು ತಿನ್ನುತ್ತಾರೆಂದು ತಿಳಿಯಲು ಅವರ ಮಲತಾಯಿ ಮತ್ತೆ ತನ್ನ ಮಗಳು ಬಡಕಿಯನ್ನು ಕಳುಹಿಸಿದಳು.

ಈ ತೆಂಗಿನ ಮರದ ಸುದ್ದಿಯನ್ನು ತನ್ನ ಮಗಳಿಂದ ತಿಳಿದುಕೊಂಡು ತೆಂಗಿನ ಮರವನ್ನು ಕಡಿಸಿದಳು. ಇದನ್ನು ನೋಡಿ ಮಕ್ಕಳು ದುಃಖಪಟ್ಟರು. ಅದೇ ಸಮಯಕ್ಕೆ ಪರರಾಜ್ಯದಲ್ಲಿ ಅಲ್ಲಿಯ ರಾಜಕುಮಾರಿಯ ಮದುವೆ ಇರುತ್ತದೆ. ಆ ಮದುವೆಯ ಆಹ್ವಾನ ಈ ರಾಜನಿಗೂ ಬರುತ್ತದೆ. ರಾಜ ತನ್ನ ಹೆಂಡತಿ ಮಗಳೊಂದಿಗೆ ಮದುವೆಗೆ ಹೋಗುತ್ತಾನೆ. ಅರಮನೆಯಲ್ಲಿ ಅಣ್ಣ ತಂಗಿಯರು ಇಬ್ಬರೇ ಇರುತ್ತಾರೆ. ಅವರಿಬ್ಬರು ತೆಂಗಿನ ಮರ ಕಡಿದ ಮುಂಡದ ಹತ್ತಿರ ಬಂದು ದುಃಖದಿಂದ ಕುಳಿತಿರುತ್ತಾರೆ. ಆಗ ತೆಂಗಿನ ಮುಂಡ "ನೀವು ಸಹ ಪರರಾಜನ ಮದುವೆಗೆ ಹೋಗಿರೆಂದು" ರತ್ನಾಭರಣ ಬಟ್ಟೆಬರೆಗಳು, ಹುಡಿಗಿಗೆ ಬಂಗಾರದ ಬಳೆಗಳು ಹೋಗಲಿಕ್ಕೆ ಕುದುರೆಗಳು ಇಷ್ಟೆಲ್ಲಾ ಕೊಡುತ್ತದೆ. ನಂತರ ಅಣ್ಣ ತಂಗಿಯರು ವಸ್ತ್ರಾಭರಣಗಳನ್ನು ಧರಿಸಿ, ಕುದುರೆಯನ್ನೇರಿ ಪರರಾಜನ ಮದುವೆಯ ಮನೆಗೆ ಹೋಗುತ್ತಾರೆ. ಅಲ್ಲಿ ಅವರ ತಂದೆ ತಾಯಿಗಳು ಇರುತ್ತಾರೆ. ಇವರಿಬ್ಬರು ಬಂದದ್ದನ್ನು ನೋಡಿ ಯಾರೋ ಬೇರೆ ರಾಜ್ಯದ ಅರಸು ಕುವರರಿರಬೇಕೆಂದು ಅವರಿಗೆ ಸ್ಥಳಾವಕಾಶ ಮಾಡಿಕೊಡುತ್ತಾರೆ. ಅಣ್ಣ ತಂಗಿಯರು ಮದುವೆಯನ್ನು ಮುಗಿಸಿ, ಊಟ ಮಾಡಿ ಬೆಳಿಗ್ಗೆ ಮುಂಚೆಯೇ ರಾಜ-ರಾಣಿ ಅರಮನೆ ಸೇರುವ ಮೊದಲೆ ಹೋಗಬೇಕೆಂದು ಹೊರಡುತ್ತಾರೆ. ಹೊರಡುವಾಗ ಆ

ಊರಿನ ಕೆರೆಗೆ ಮುಖ ತೊಳೆಯಲು ಹೋಗುತ್ತಾರೆ. ಮುಖ ತೊಳೆಯುವಾಗ ತಂಗಿಯ ಒಂದು ಬಳೆ ಕೆರೆಗೆ ಬಿದ್ದು ಹೋಗುತ್ತದೆ. ಎಷ್ಟು ಹುಡುಕಿದರೂ ಬಳೆ ಸಿಗುವುದಿಲ್ಲ. ಕೊನೆಗೆ ಸುಮ್ಮನೆ ಮನೆಗೆ ಬಂದು ತಮ್ಮ ವಸ್ತ್ರಾಭರಣಗಳನ್ನು ಬಿಚ್ಚಿ ತೆಂಗಿನ ಮುಂಡಕ್ಕೆ ವಾಪಸ್ಸು ಕೊಟ್ಟು ಬರುತ್ತಾರೆ. ಸುಮಾರು ಹೊತ್ತಿನ ನಂತರ ಅವರ ತಂದೆ ಚಿಕ್ಕಮ್ಮ ಬರುತ್ತಾರೆ.

ಇತ್ತ ಪರ ಊರಿನ ರಾಜ ಆ ಕೆರೆಯನ್ನು ರಿಪೇರಿ ಮಾಡಲು ಆ ಕೆರೆಯನ್ನು ಶೋಧಿಸುತ್ತಾನೆ. ಕಳೆದು ಹೋಗಿರುವ ಚಿನ್ನದ ಬಳೆ ಸಿಗುತ್ತದೆ. ಆಗ ಆ ಊರಿನ ರಾಜಕುಮಾರ ತನ್ನ ತಂದೆಯ ಬಳಿ ಈ ಬಳೆ ಯಾರ ಕೈಗೆ ಹೊಂದುತ್ತದೆಯೋ ಅವಳನ್ನು ಮದುವೆಯಾಗುತ್ತೇನೆ ಎಂದು ಶಪಥ ಮಾಡುತ್ತಾನೆ. ಊರಿನ ಎಲ್ಲಾ ಯುವತಿಯರ ಕೈಗೂ ಬಳೆಯನ್ನು ಹಾಕಿನೋಡುವರು. ಯಾರಿಗೂ ಸಮ ಹೊಂದುವುದಿಲ್ಲ. ಕೊನೆಗೆ ಪಕ್ಕದ ರಾಜನ ಊರಿಗೆ ಬಂದು ಬಳೆಯನ್ನು ಹಾಕಿನೋಡುತ್ತಾರೆ. ಆದರೆ ಯಾರಿಗೂ ಹೊಂದುವುದಿಲ್ಲ. ಕೊನೆಗೆ ರಾಜನ ಮಕ್ಕಳು ಇಬ್ಬರು ಇರುವಲ್ಲಿ ಬಂದು ಹುಡುಗಿಯ ಕೈಗೆ ತೊಡಿಸುತ್ತಾರೆ. ಸಮನಾಗಿ ಹೊಂದುತ್ತದೆ. ನಂತರ ಆ ಹುಡುಗಿಯ ಮದುವೆ ರಾಜಕುಮಾರನೊಂದಿಗೆ ನಿಶ್ಚಯವಾಗುತ್ತದೆ. ಮದುವೆ ಸಾಂಗವಾಗಿ ನೆರವೇರುತ್ತದೆ. ರಾಜಕುಮಾರಿಯನ್ನು ಗಂಡನ ಮನೆಗೆ ಕಳುಹಿಸುವ ದಿನ ಬರುತ್ತದೆ. ಆಗ ರಾಜಕುಮಾರಿ ತನ್ನ ಆಭರಣಗಳನ್ನೆಲ್ಲಾ ಧರಿಸಿಕೊಂಡು ಹೊಳೆಗೆ ಸ್ನಾನಕ್ಕೆ ಹೋಗುತ್ತಾಳೆ. ಆಗ ಇವಳೊಂದಿಗೆ ಕಿರಿಯ ರಾಣಿಯ ಮಗಳು ಸಹ ಇರುತ್ತಾಳೆ. ರಾಜಕುಮಾರಿ ಸ್ನಾನಮಾಡುವಾಗ ಹೊಳೆಗೆ ದೂಕಿ ಈಕೆಯ ಆಭರಣಗಳನ್ನೆಲ್ಲಾ ಧರಿಸಿ ರಾಜಕುಮಾರಿಯ ವೇಷ ಹಾಕಿಕೊಂಡು ಮನೆಗೆ ಬಂದು ಅವಳ ಗಂಡನ ಮನೆಗೆ ಹೋಗುತ್ತಾಳೆ. ಆ ರಾಜಕುಮಾರನಿಗೂ ಗೊತ್ತಾಗುವುದಿಲ್ಲ.

ಇತ್ತ ರಾಜಕುಮಾರಿ ಹೊಳೆಯಲ್ಲಿ ತೇಲುತ್ತಾ ತೇಲುತ್ತಾ ಅದೇ ರಾಜಕುಮಾರನ ಊರಿನ ಹತ್ತಿರ ಬರುತ್ತಾಳೆ. ಹೊಳೆಯ ಪಕ್ಕದಲ್ಲಿರುವ ಒಂದು ಮುದುಕಿ ಇವಳನ್ನು ಎತ್ತಿಕೊಂಡು ಬಂದು ತನ್ನ ಮನೆಯಲ್ಲಿರಿಸಿಕೊಂಡಿರುತ್ತಾಳೆ. ರಾಜಕುಮಾರಿ ಆ ಮುದುಕಿಗೆ ತನ್ನ ಕಥೆಯನ್ನೆಲ್ಲಾ ಹೇಳುತ್ತಾಳೆ. ಆ ಮುದುಕಿ ರಾಜನರಮನೆಯ ದಾಸಿಯಾಗಿರುತ್ತಾಳೆ. ಮುದುಕಿಯ ಮನೆಗೆ ದಿನಾಲು ಬರುತ್ತಿರುತ್ತಾನೆ. ಆಗ ಇವರಿಬ್ಬರೂ ಪರಸ್ಪರ ಪ್ರೇಮಿಸುತ್ತಾರೆ. ಆಗ ರಾಜಕುಮಾರಿ ಆ ಮುದುಕಿಯ ಹತ್ತಿರ ರಾಜಕುಮಾರನಿಗೆ ಒಂದು ಪತ್ರವನ್ನು ಕಳುಹಿಸುತ್ತಾಳೆ. ಆ ಪತ್ರದಲ್ಲಿ ನಾನೇ ನಿನ್ನ ಮೊದಲ ಹೆಂಡತಿ ಎಂದು ಈಗ ಇರುವವಳು ನನ್ನ ಮಲತಾಯಿಯ ಮಗಳು ಎಂದು ತಿಳಿಸುತ್ತಾಳೆ. ಆಗ ರಾಜಕುಮಾರನು ಆ ರಾಜಕುಮಾರಿಯನ್ನು ತನ್ನ ಅರಮನೆಗೆ ಕರೆದುಕೊಂಡು ಹೋಗುತ್ತಾನೆ. ಅವಳ ಮಲತಾಯಿಯ ಮಗಳನ್ನು ದೊಡ್ಡ ಕೊಚ್ಚಿ ಗುಂಡಿಗೆ ಹಾಕಿಸುತ್ತಾನೆ.

ಹೇಳಿದವರು: ಕಮಲಾಕ್ಷಿ ಸಾ॥ ಸುತ್ತುಮನೆ ತಾ॥ ಸಿದ್ದಾಪೂರ

೫.೬.೨ ಭ್ರಷ್ಟತಂಗಿ

ಒಂದು ಊರಿನಲ್ಲಿ ಒಬ್ಬ ರಾಜನಿದ್ದ ಅವನಿಗೆ ಆರು ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು ಇದ್ದರು. ಆ ಆರುಜನ ಅಣ್ಣ ತಮ್ಮಂದಿರು ದಿನಾಲು ಹೊಲಕ್ಕೆ ಹೋಗಿ ಅಲ್ಲಿ ಕೆಲಸ

ಮಾಡುತ್ತಿದ್ದರು. ಅವರಿಗೆ ಮಧ್ಯಾಹ್ನದ ಊಟವನ್ನು ಅವರ ತಂಗಿ ರಾಜಕುಮಾರಿ ತರುತ್ತಿದ್ದಳು. ರಾಜಕುಮಾರಿ ಬುತ್ತಿ ತರುವ ದಾರಿಯಲ್ಲಿ ಒಂದು ಮಾವಿನ ಮರ ಇತ್ತು. ವಸಂತಕಾಲ ಬಂತು ಮಾವಿನ ಮರದಲ್ಲಿ ತುಂಬಾ ಹಣ್ಣುಗಳು ಬಂದವು. ದಿನಾಲು ಅಣ್ಣಂದಿರಿಗೆ ಊಟ ತಗೊಂಡು ಹೋಗುವಾಗ ಆಕೆಗೆ ಮಾವಿನ ಹಣ್ಣಿನ ಮೆಲೆ ಆಸೆಯಾಗುತ್ತಿತ್ತು. ಆ ಮಾವಿನ ಮರದಲ್ಲಿ ಒಂದು ಮಂಗಣ್ಣ ಕೂತು ಹಣ್ಣು ತಿನ್ನುತ್ತಿತ್ತು. ಇದನ್ನು ನೋಡಿ ರಾಜಕುಮಾರಿಗೆ ಆಸೆಯಾಯಿತು. ಆಗ ಅವಳು ಮಂಗಣ್ಣನ ಹತ್ತಿರ ಮಂಗಣ್ಣ, ಮಂಗಣ್ಣ ಒಂದು ಮಾವಿನ ಹಣ್ಣು ಕೊಡು. ನಾನು ನಿನಗೆ ನನ್ನಲ್ಲಿರುವ ಅನ್ನ ಕೊಡುತ್ತೇನೆ ಎಂದು ಹೇಳಿದಳು. ಆಗ ಮಂಗಣ್ಣ ಒಂದು ಮಾವಿನ ಹಣ್ಣನ್ನು ಕೆಡವಿತು. ತಕ್ಷಣವೇ ರಾಜಕುಮಾರಿ ಹಣ್ಣನ್ನು ತೆಗೆದುಕೊಂಡು ಓಡತೊಡಗಿದಳು. ಮಂಗಣ್ಣ ಅವಳ ಹಿಂದೆ ಓಡಿ, ಹಿಡಿದು ಅವಳ ಮೈಯನ್ನೆಲ್ಲಾ ಪರಿಚಿತು. ಅವಳಲ್ಲಿದ್ದ ಬುತ್ತಿಯನ್ನು ಕಸಿದುಕೊಂಡು ಹೋಯಿತು. ರಾಜಕುಮಾರಿಗೆ ಏನು ಮಾಡಲೂ ತೋಚದೆ ತಂದೆಯ ಹತ್ತಿರ ಬಂದು ಅಣ್ಣಂದಿರು ಈ ರೀತಿ ಹೊಡೆದು ಮೈಯನ್ನೆಲ್ಲಾ ಗಾಯಗೊಳಿಸಿದರು ಎಂದು ಹೇಳಿದಳು. ಇವಳ ಮಾತನ್ನು ಕೇಳಿ ರಾಜನು ಕೋಪಗೊಂಡು ತನ್ನ ಬಿಚ್ಚು ಕತ್ತಿಯನ್ನು ತೆಗೆದುಕೊಂಡು ಹೊಲಕ್ಕೆ ಹೋದನು. ಆದರೆ ಅವನ ಮಕ್ಕಳು ಊಟವಿಲ್ಲದೆ ಹಸಿವಿನಿಂದ ಕಂಗೆಟ್ಟು ಕುಳಿತಿದ್ದರು. ರಾಜನು ಏನನ್ನು ವಿಚಾರ ಮಾಡದೇ ಅವರೆಲ್ಲರ ತಲೆಯನ್ನು ಖಡ್ಗದಿಂದ ಕಡಿದು ಬಂದನು. ಆದರೆ ಕಡಿದ ಜಾಗದಲ್ಲಿ ಅವರ ರಕ್ತ ನೀರಾಯಿತು. ದೇಹ ಕೆರೆಯಾಗಿ ಕೂದಲೆಲ್ಲ ಹೂವಾಗಿ ಅವರೆಲ್ಲ ಸುಂದರ ಪುಷ್ಪಗಳಾಗಿಬಿಟ್ಟರು.

ಆ ಊರಿಗೆ ವಾರಕ್ಕೊಂದಾವರ್ತಿ ಒಬ್ಬ ಬಳೆಗಾರ ಬರುತ್ತಿದ್ದನು. ಇವನು ರಾಜನರಮನೆಯಲ್ಲಿ ಬಳೆಯಿಡಲು ಆಗಾಗ್ಗೆ ಹೋಗುತ್ತಿದ್ದನು. ಒಮ್ಮೆ ಬಳೆಯಿಡಲು ಬರುವಾಗ ದಾರಿಯಲ್ಲಿರುವ ಹೊಸ ಕೆರೆಯನ್ನು ನೋಡಿ ಆಶ್ಚರ್ಯಪಟ್ಟನು. ನೀರಡಿಕೆ ತೀರಿಸಲು ಕೆರೆಗೆ ಹೋಗಿ ನೀರು ಕುಡಿದನು. ಸುತ್ತ ಮುತ್ತಲು ನೋಡಿದನು. ಕೆರೆಯಲ್ಲಿ ಸುಂದರ ಹೂವುಗಳಿರುವುದನ್ನು ನೋಡಿ ಕೊಯ್ಯಲು ಹೋದನು. ಹೂವುಗಳು ಸಿಗದೆ ಮುಂದೆ ಮುಂದೆ ಹೋದವು. ಬಳೆಗಾರನನ್ನು ಕುರಿತು ಹೀಗೆ ಹಾಡಿದವು.

ಮುಟ್ಟೇಡ ಮುಟ್ಟೇಡ ಬಳೆಗಾರಣ್ಣ
ಮಡಿಗಳ ಮಾಸಿದವೋ
ತಂಗಿ ಮಂಗ ಸರಸವಾಡಿ
ತಲೆಯ ಕಡಿಸಿದವೊ

ಇದನ್ನು ಕೇಳಿ ಬಳೆಗಾರನಿಗೆ ಆಶ್ಚರ್ಯವಾಯಿತು ಇದನ್ನು ರಾಜನಿಗೆ ತಿಳಿಸಲು ಅರಮನೆಗೆ ಹೋದನು. ರಾಜನಿಗೆ ತಿಳಿಸಿ ರಾಜನನ್ನು ಕೆರೆಯ ಹತ್ತಿರ ಕರೆದುಕೊಂಡು ಬಂದನು. ರಾಜನಿಗೂ ಈ ಹೊಸ ಕೆರೆಯನ್ನು ನೋಡಿ ಆಶ್ಚರ್ಯವಾಯಿತು. ಅದರಲ್ಲಿರುವ ಹೂವುಗಳನ್ನು ಕೀಳಲು ಬಳೆಗಾರನಿಗೆ ಹೇಳಿದನು. ಬಳೆಗಾರ ಹೂಕೊಯ್ಯಲು ಹೋದಾಗ ಹಿಂದಿನಂತೆ ಹಾಡಿದವು.

ಇದನ್ನು ಕೇಳಿ ರಾಜನಿಗೆ ಆಶ್ಚರ್ಯವಾಗಿ ತಾನೂ ಕೂಡ ಹೂಕೊಯ್ಯಲು ಹೋದನು ಆಗ ಆ ಹೂವುಗಳು

ಮುಟ್ಬೇಡ ಮುಟ್ಬೇಡ ಹೆತ್ತ ತಂದೆ
ಮಡಿಗಳ ಮಾಸಿದವೊ
ತಂಗಿ ಮಂಗ ಸರಸವಾಡಿ
ತಲೆಗಳ ಕಡಿಸಿದವೋ

ಎಂದು ಹಾಡಿದವು. ಇದನ್ನು ಕೇಳಿ ರಾಜನು ರಾಣಿಯನ್ನು ಕರೆಸಿ, ಅವಳ ಹತ್ತಿರ ಹೂವು ಕೊಯ್ಯಲು ಹೇಳಿದನು. ರಾಣಿ ಹೂವು ಹೊಯ್ಯಲು ಮುಂದಾದಳು. ಆಗ ಹೂವು;

ಮುಟ್ಬೇಡ ಮುಟ್ಬೇಡ ಹೆತ್ತ ತಾಯಿ
ಮಡಿಗಳ ಮಾಸಿದವೊ
ತಂಗಿ ಮಂಗ ಸರಸವಾಡಿ
ತಲೆ ಕಡಿಸಿದವೊ

ನಂತರ ರಾಜ ತನ್ನ ಮಗಳನ್ನು ಕರಸಿ ಹೂವುಗಳನ್ನು ಕೊಯ್ಯಲು ಹೇಳುತ್ತಾನೆ. ಆಗ ಹೂವುಗಳು;

ಮುಟ್ಬೇಡ ಮುಟ್ಬೇಡ ಭ್ರಷ್ಟತಂಗಿ
ಮಡಿಗಳ ಮಾಸಿದವೊ
ನೀನು ಮಂಗ ಸರಸವಾಡಿ
ತಲೆಗಳ ಕಡಿಸಿದಿರಿ.

ಎಂದು ಹಾಡುತ್ತವೆ. ಆಗ ಬಳಗಾರನಿಗೆ ಕಥೆಯೆಲ್ಲ ಮನವರಿಕೆಯಾಗುತ್ತದೆ. ತಕ್ಷಣ ರಾಜಕುಮಾರಿಯ ತಲೆ ಕಡಿಯಲು ಬಳೆಗಾರ ರಾಜನಿಗೆ ಹೇಳುತ್ತಾನೆ. ಆಗ ರಾಜನು ರಾಜಕುಮಾರಿಯ ರುಂಡ ಹಾರಿಸಲು ಸೇವಕರಿಗೆ ಆಜ್ಞೆ ಮಾಡುತ್ತಾನೆ. ಕೊನೆಗೆ ರಾಜನ ಆರು ಮಕ್ಕಳು ಬದುಕಿ ಬರುತ್ತಾರೆ. ರಾಜಕುಮಾರಿಯ ತಲೆ ಕಡಿದ ನಂತರ ಅದು ಒಂದು ವಿಷವೃಕ್ಷವಾಗಿ ಬೆಳೆಯುತ್ತದೆ. ರಾಜ ಮತ್ತು ಅವನ ಮಕ್ಕಳು ಸುಖವಾಗಿರುತ್ತಾರೆ.

ಹೇಳಿದವರು: ರಾಮಮೂರ್ತಿ ಬೆಳ್ಳೆಣ್ಣೆ ತಾ॥ ಸಾಗರ

೫.೭ ಸಾಹಸ

ಗಣಪ ಈರ ಸಾ॥ ಸುತ್ಲುಮನೆ ತಾಲೂಕು ಸಿದ್ಧಾಪೂರ ಈತನು ೧೯೭೨ ರಲ್ಲಿ ಒಂದು ಸಾಹಸ ಕಾರ್ಯವನ್ನು ಮಾಡಿದ್ದಾನೆ. ೧೯೭೨ ದಿನಾಂಕ ನೆನಪಿಲ್ಲ. ರವಿವಾರ ಬೆಳಗ್ಗೆ ಮೊಲ ಮತ್ತು ಜಿಂಕೆಯನ್ನು ಬೇಟೆಯಾಡಲು ಐದು ಜನರ ಗುಂಪು ಇಟಗಿಯ ದಟ್ಟ ಅರಣ್ಯದಲ್ಲಿ

ಬೇಟೆಗಾಗಿ ಹೋಗಿದ್ದರು. ಮೊಲ, ಕಾಡುಕೋಳಿ ಮತ್ತು ಜಿಂಕೆಯನ್ನು ಬೇಟೆಯಾಡಿ ಸಾಯಂಕಾಲ ೪ ಗಂಟೆಯ ನಂತರ ಮನೆಯ ಕಡೆ ತೆರಳಬೇಕು ಎನ್ನುವಷ್ಟರಲ್ಲಿಯೇ ದಟ್ಟ ಅರಣ್ಯದ ಗಿಡದ ಮೇಲಿದ್ದ ಹುಲಿ ಒಮ್ಮೆಲೆ ಈ ತಂಡದ ಮೇಲೆ ದಾಳಿ ಮಾಡಿತು. ಗಣಪನ ಜೊತೆಗೂಡಿ ಬಂದವರೆಲ್ಲರೂ ಹುಲಿಯ ಜಿಗಿತದಿಂದ ಎಲ್ಲರೂ ಅಂಜಿ ಓಡಿ ಹೋದರು. ಹುಲಿಯು ಒಮ್ಮೆಲೆ ಗಣಪ ಈತನ ಮೇಲೆ ಎರಗಿತು. ಆಗ ಈತನು ನನ್ನ ಜೀವ ಹೋಗೆ ಹೋಗುತ್ತದೆ. ಇದರಿಂದ ನನಗೆ ಮುಕ್ತಿಯಿಲ್ಲ ಎಂದರಿತ ಗಣಪನು ಹುಲಿಯ ಮೇಲೆ ಎರಗಿದನು. ಹುಲಿ ಮತ್ತು ಗಣಪನ ನಡುವೆ ೨೦ ನಿಮಿಷಗಳ ಸೆಣಸಾಟ ನಡೆಯಿತು. ಗಣಪನು ತನ್ನ ಹತ್ತಿರವಿರುವ ಕುಡುಗೋಲಿನಿಂದ ಹುಲಿಯ ಕಾಲಿಗೆ ಹೊಡೆದನು. ಆಗ ಹುಲಿಯು ಕುಂಟುತ್ತಾ ಘರ್ಜಿಸುತ್ತಾ ಈತನ ಮೇಲೆ ಮತ್ತೆ ಎರಗಿತು. ಗಣಪನು ತನ್ನ ಹತ್ತಿರವಿರುವ ಕುಡುಗೋಲಿನಿಂದ ಅದರ ಕುತ್ತಿಗೆಗೆ ಬಲವಾಗಿ ಹೊಡೆದಾಗ ಹುಲಿಯು ಆಯ ತಪ್ಪಿ ಬಿದ್ದಿತು. ಆಗ ಅದರ ತಲೆಯನ್ನು ಮುಂಡದಿಂದ ಬೇರ್ಪಡಿಸಿ, ಅದನ್ನು ಸಿದ್ಧಾಪೂರ ತಾಲೂಕಿನ ತಹಶೀಲ್ದಾರ ಆಫೀಸಿನವರೆಗೆ ಹೊತ್ತುಕೊಂಡು ಬಂದು ತಹಶೀಲ್ದಾರರಿಗೆ ತಿಳಿಸಿದಾಗ ತಹಶೀಲದ್ದಾರರು, ಕಾರವಾರ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಸರಕಾರಕ್ಕೆ ಮಾಹಿತಿಯನ್ನು ರವಾನಿಸಿದರು. ಈ ಸುದ್ದಿ ಅಂದಿನ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರಿಗೂ ಮುಟ್ಟಿತು. ಆಗ ದೇವರಾಜ ಅರಸರು ಗಣಪನನ್ನು ಬೆಂಗಳೂರಿಗೆ ಬರುವಂತೆ ಕಾರವಾರ ಜಿಲ್ಲಾಧಿಕಾರಿಗಳ ಮುಖಾಂತರ ಆದೇಶಿಸಿದರು. ಈ ಸುದ್ದಿ ತಹಶೀಲ್ದಾರರ ಮೂಲಕ ಗಣಪನಿಗೆ ತಿಳಿಸಲಾಯಿತು. ಆಗ ಗಣಪನ ಹತ್ತಿರ ಬಸ್ ಚಾರ್ಜಗಾಗಿ ಹಣವಿರಲಿಲ್ಲ. ಆಗ ತಹಶೀಲ್ದಾರರು ಆತನಿಗೆ ಐವತ್ತು ರೂಪಾಯಿಗಳನ್ನು ಕೊಟ್ಟು ಬೆಂಗಳೂರಿಗೆ ಕಳುಹಿಸಿದರು. ಬೆಂಗಳೂರಿನಲ್ಲಿ ದೇವರಾಜ ಅರಸರು ಈತನನ್ನು ಸನ್ಮಾನಿಸಿ, ಒಂದು ಪದಕವನ್ನು ಕೊಟ್ಟರು. ಅಲ್ಲದೆ ಕಾರವಾರ ಜಿಲ್ಲಾಧಿಕಾರಿಗಳಿಗೆ ಗಣಪ ಈರ ಈತನಿಗೆ ಎರಡು ಎಕರೆ ಜಮೀನನ್ನು ಮಂಜೂರು ಮಾಡಿಕೊಡಬೇಕೆಂದು ಆದೇಶಿಸಿ ಈತನನ್ನು ಕಳುಹಿಸಿಕೊಟ್ಟರು. ಆದರೆ ಇಲ್ಲಿಯವರೆಗೂ ಭರವಸೆ ಭರವಸೆಯಾಗಿಯೇ ಉಳಿದಿದೆ ವಿನಃ ಅಸ್ತಿತ್ವದಲ್ಲಿ ಬಂದಿಲ್ಲ ಎಂದು ೮೫ ವರ್ಷ ವಯಸ್ಸಿನ ಗಣಪ ಬೇಸರದಿಂದ ಹೇಳುತ್ತಾನೆ.

ಅದೇ ವರ್ಷ ಮೈಸೂರು ದಸರಾ ಉತ್ಸವಕ್ಕೂ ಕೂಡಾ ಆಹ್ವಾನ ನೀಡಿದರು. ಮೈಸೂರು ದಸರಾ ಉತ್ಸವದ ಪರವಾಗಿ ಆತನನ್ನು ಸನ್ಮಾನಿಸಿ, ಎರಡು ನೂರು ರೂಪಾಯಿಗಳನ್ನು ಆತನಿಗೆ ಕಾಣಿಕೆಯಾಗಿ ನೀಡಿ ಕಳುಹಿಸಿದರು. ಆದರೆ ತನ್ನ ಮುಪ್ಪಿನ ವಯಸ್ಸಿನಲ್ಲಿಯಾದರೂ ಸರಕಾರ ನನ್ನ ಸಾಧನೆಗೆ ಮಾಸಾಸನ ಮಂಜೂರು ಮಾಡಬೇಕೆಂದು ಕಂಡಕಂಡವರಲ್ಲಿ ಕೈ ಮುಗಿದರೂ ಆತನ ಆಸೆ ಈಡೇರಿದ್ದಿಲ್ಲ. ಈಗ ಇಳಿವಯಸ್ಸಿನಲ್ಲಿಯಾದರೂ ಸರಕಾರ ನಾಲ್ಕು ನೂರು ರೂಪಾಯಿ ಮಾಸಾಸನ ನೀಡುತ್ತದೆ. ಇದು ತನ್ನ ಕುಟುಂಬದ ನಿರ್ವಹಣೆಗೆ ಸಾಕಾಗುವುದಿಲ್ಲ. ಆದ್ದರಿಂದ ನನಗೆ ಒಂದು ಸಾವಿರ ರೂಪಾಯಿ ಮಾಸಾಸನ ಮಂಜೂರು ಮಾಡಿಸಿಕೊಡಬೇಕೆಂದು ವಿನಂತಿಸುವಾಗ ಆತನ ಕಣ್ಣೀರು ಕೋಡಿ ಹರಿಯಿತು.

೫.೮ ಶಿಕ್ಷಣ, ಸಂಘಟನೆ ಮತ್ತು ಹೋರಾಟ

ಆದಿಮಾನವ ಅನಾಗರಿಕ ಬದುಕನ್ನು ಸಾಗಿಸುತ್ತಿದ್ದನು. ಗುಹೆಗಳಲ್ಲಿ ವಾಸ. ಪ್ರಾಣಿ ಪಕ್ಷಿಗಳ ಹಸಿ ಮಾಂಸವನ್ನು ತಿನ್ನುತ್ತಿದ್ದನು. ಹಂತ ಹಂತವಾಗಿ ಆಹಾರ ಬೇಯಿಸಿ ತಿನ್ನುವುದನ್ನು ಕಲಿತನು. ಪ್ರಾಣಿಗಳ ಚರ್ಮವನ್ನು ಉಡುಗೆಯಾಗಿ ಬಳಸಿಕೊಳ್ಳುತ್ತಿದ್ದನು. ಗಡ್ಡೆ ಗೆಣಸುಗಳನ್ನು ತಿಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುವುದನ್ನು ಕಲಿತನು. ತನ್ನ ಭಾವನೆಗಳನ್ನು ಸಂಕೇತದ ಮೂಲಕ ವ್ಯಕ್ತಪಡಿಸುತ್ತಿದ್ದನು. ಭಾಷೆಯನ್ನು ಪರಿಸರಕ್ಕೆ ತಕ್ಕಂತೆ ಹಂತ ಹಂತವಾಗಿ ಬಳಸುವುದನ್ನು ಕಲಿತನು. ಇದಕ್ಕೆ ಜೈವಿಕ ಮತ್ತು ಸಾಮಾಜಿಕ ಅಂಶಗಳು ಕಾರಣ. ಜೈವಿಕ ಅಂಶಗಳು ಆಹಾರ ಪಡೆಯುವುದು ಮತ್ತು ಸಂತಾನಭಿವೃದ್ಧಿಯನ್ನು ಮಾಡಿಕೊಳ್ಳುವುದಾದರೆ ಸಾಮಾಜಿಕ ಅಂಶಗಳು ಸಮಾಜದಲ್ಲಿ ಬದುಕುವಾಗ ವಿವಿಧ ಅನುಭವಗಳನ್ನು ಪಡೆದುಕೊಳ್ಳುವಂತೆ ಮಾಡುತ್ತದೆ. ಇನ್ನು ದೈವದತ್ತವಾಗಿ ಪಡೆದ ಬುದ್ಧಿಶಕ್ತಿ, ಯೋಚನಾಶಕ್ತಿ, ಸಮಯಪ್ರಜ್ಞೆ ಇವೆಲ್ಲಾ ಜೀವನದ ಅನುಭವದಲ್ಲಿ ಲೀನವಾಗಿ ವಿಚಾರವಂತಿಕೆ ಬೆಳೆಯುವಂತೆ ಮಾಡುತ್ತದೆ. ಈ ಅನುಭವವನ್ನು ಶಿಕ್ಷಣವೆಂದು ಕರೆಯುತ್ತೇವೆ. ಇದರಿಂದಲೇ ಮಾನವನು ಇತರ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಈ ಜ್ಞಾನದ ಮುಖಾಂತರವೇ ಪರಿಸರವನ್ನು ಅರ್ಥಮಾಡಿಕೊಂಡು ಜೀವನ ನಡೆಸುವನು.

ಹಸಲರು ಕಾಡುಮೇಡುಗಳಲ್ಲಿ ವಾಸಿಸುವುದರಿಂದ ಇವರು ಔಪಚಾರಿಕ ಶಿಕ್ಷಣ ಪದ್ಧತಿಯಿಂದ ದೂರ ಉಳಿದಿದ್ದಾರೆ. ಹಸಲರು ಅನಕ್ಷರಸ್ಥರಾಗಲು ಮೇಲ್ವರ್ಗದವರೇ ಕಾರಣ. ಏಕೆಂದರೆ ಹಸಲರಿಗೆ ಶಿಕ್ಷಣ ಒದಗಿಸಿದ್ದೇಯಾದರೆ ಅವರೂ ಕೂಡಾ ವಿದ್ಯಾವಂತರಾಗಿ ಇತರರಂತೆ ಮುಂದೆ ಬರುವರು. ಆಗ ಮೇಲ್ವರ್ಗದವರ ತೋಟ ಮತ್ತು ಗದ್ದೆಗಳಲ್ಲಿ ದುಡಿಯುವವರು ಸಿಗುವುದಿಲ್ಲ ಎನ್ನುವ ಕಾರಣಕ್ಕೆ ಇವರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿದ್ದಾರೆ.

೧೯೫೫ ರಲ್ಲಿ ಹಸಲರು ಕೂಡಾ ಔಪಚಾರಿಕ ಶಿಕ್ಷಣವನ್ನು ಪಡೆಯಲಿ ಎಂಬ ಕಾರಣಕ್ಕೆ ಸರಕಾರವು ಹಿರೆಮನೆಯ ಪುನರ್ವಸತಿ ಕೇಂದ್ರದಲ್ಲಿ ಮಹಾತ್ಮ ಗಾಂಧೀಜಿ ಗಿರಿಜನ ಆಶ್ರಮ ಶಾಲೆಯನ್ನು ಪ್ರಾರಂಭಿಸಿತು. ಆದರೂ ಹಸಲರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ೧೯೬೨ ರಲ್ಲಿ ಎನ್ ಹುಚ್ಚಪ್ಪ ಮಾಸ್ತರರು ಈ ಶಾಲೆಗೆ ಶಿಕ್ಷಕರಾಗಿ ಸೇರಿಕೊಂಡ ನಂತರ ಇವರು ಬುಡಕಟ್ಟಿನ ಜನರಿಗೆ ಶಿಕ್ಷಣ ಕೊಡುವಾಗ ಅನೇಕ ಅಡೆತಡೆಗಳನ್ನು ಎದುರಿಸಿದರು. ಇವರು ಅನೇಕ ಹಸಲರ ಹಾಡಿಕೇರಿಗಳಿಗೆ ಭೇಟಿಕೊಟ್ಟು ಕೆಲವು ದಿನ ಅಲ್ಲೇ ವಾಸ್ತವ್ಯಮಾಡಿ ಅಲ್ಲಿರುವ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸಿ, ಆ ಮಕ್ಕಳನ್ನು ಗಿರಿಜನ ಆಶ್ರಮ ಶಾಲೆಗೆ ಸೇರಿಸಿದರು.

ಈ ಕೆಳಗಿನ ಕೋಷ್ಟಕ ಸಮೀಕ್ಷೆ ಮಾಡಿದ ೫೧೭ ಮಾಹಿತಿದಾರರ ಶೈಕ್ಷಣಿಕ ವಿವರ.

ಕೋಷ್ಟಕ- ೫.೧ ಸಮೀಕ್ಷೆ ಮಾಡಿದ ಹಸಲರ ಶೈಕ್ಷಣಿಕ ವಿವರ

ಜಿಲ್ಲೆಗಳು		ಅನಕ್ಷರತೆ	ಕಿರಿಯ ಪ್ರಾಥಮಿಕ	ಹಿರಿಯ ಪ್ರಾಥಮಿಕ	ಪ್ರೌಢ ಶಿಕ್ಷಣ	ಪಿಯುಸಿ	ಪದವಿ	ಇನ್ನಿತರೆ	ಒಟ್ಟು
ಉತ್ತರ ಕನ್ನಡ	ಒಟ್ಟು	೫೭	೫೩	೪	೨	–	–	–	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೪೯.೧%	೪೫.೭%	೩.೪%	೧.೭%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೦.೬%	೨೯.೯%	೧೫.೪%	೭.೧%	–	–	–	೨೨.೪%
	ಒಟ್ಟು ಪ್ರತಿಶತ	೧೧%	೧೦.೩%	೦.೮%	೦.೪%	–	–	–	೨೨.೪%
ಉಡುಪಿ	ಒಟ್ಟು	೪೬	೧೯	೨	೪	–	೧	–	೭೨
	ಪ್ರತಿಶತ (ಜಿಲ್ಲೆಯೊಳಗೆ)	೬೩.೯%	೨೬.೪%	೨.೮%	೫.೬%	–	೧.೪%	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೬.೬%	೧೦.೭%	೭.೭%	೧೪.೩%	–	೩೩.೩%	–	೧೩.೯%
	ಒಟ್ಟು ಪ್ರತಿಶತ	೮.೯%	೩.೭%	೪%	೮%	–	೨%	–	೧೩.೯%
ಚಿಕ್ಕಮಗಳೂರು	ಒಟ್ಟು	೬೦	೩೬	೬	೪	–	–	–	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೫೬.೬%	೩೪%	೫.೭%	೩.೮%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೧.೭%	೨೦.೩%	೨೩.೧%	೧೪.೩%	–	–	–	೨೦.೫%
	ಒಟ್ಟು ಪ್ರತಿಶತ	೧೧.೬%	೭%	೧.೨%	೮%	–	–	–	೨೦.೫%
ದಕ್ಷಿಣ ಕನ್ನಡ	ಒಟ್ಟು	–	–	೫	೧	–	–	–	೬
	ಪ್ರತಿಶತ (ಜಿಲ್ಲೆಯೊಳಗೆ)	–	–	೮೩.೩%	೧೬.೭%	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	೧೯.೨%	೩.೬%	–	–	–	೧.೨%
	ಒಟ್ಟು ಪ್ರತಿಶತ	–	–	೧%	೦.೨%	–	–	–	೧.೨%

ಶಿವಮೊಗ್ಗ	ಒಟ್ಟು	೧೧೪	೬೯	೯	೧೭	೪	೨	೨	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೫೨.೫%	೩೧.೮%	೪.೧%	೭.೮%	೧.೮%	೦.೯%	೦.೯%	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೧.೨%	೩೯.%	೩೪.೬%	೬೦.೭%	೧೦೦%	೬೬.೭%	೧೦೦%	೪೨%
	ಒಟ್ಟು ಪ್ರತಿಶತ	೨೨.೧%	೧೩.೩%	೧.೭%	೩.೩%	೦.೮%	೦.೪%	೦.೪%	೪೨%
ಒಟ್ಟು	ಒಟ್ಟು	೨೭೭	೧೭೭	೨೬	೨೮	೪	೩	೨	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೫೩.೬%	೩೪.೨%	೫%	೫.೪%	೦.೮%	೦.೬%	೦.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%	೧೦೦%	೧೦೦%	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೫೩.೬%	೩೪.೨%	೫%	೫.೪%	೦.೮%	೦.೬%	೦.೪%	೧೦೦%

ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೧೬ ಕುಟುಂಬಗಳ ಮಾಹಿತಿದಾರರಲ್ಲಿ ೫೭ ಜನ ಅನಕ್ಷರಸ್ಥರಾದರೆ ೫೩ ಜನ ಒಂದನೇ ತರಗತಿಯಿಂದ ನಾಲ್ಕನೆ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದವರಾಗಿದ್ದಾರೆ. ಕೇವಲ ನಾಲ್ಕು ಜನ ಮಾತ್ರ ಹಿರಿಯ ಪ್ರಾಥಮಿಕ ಶಾಲೆಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಎರಡು ಕುಟುಂಬಗಳ ಮಾಹಿತಿದಾರರು ಪ್ರೌಢ ಶಿಕ್ಷಣವನ್ನು ಮುಗಿಸಿದ್ದಾರೆ. ಇನ್ನು ಪದವಿಪೂರ್ವ, ಪದವಿ ಮತ್ತು ಇನ್ನಿತರ ಶಿಕ್ಷಣವನ್ನು ಯಾರೂ ಮುಗಿಸಿರುವುದಿಲ್ಲ. ಇನ್ನು ಉಡುಪಿ ಜಿಲ್ಲೆಯಲ್ಲಿ ೭೨ ಕುಟುಂಬಗಳ ಮಾಹಿತಿದಾರರಲ್ಲಿ ೪೨ ಜನ ಅನಕ್ಷರಸ್ಥರಿದ್ದಾರೆ. ೧೯ ಜನ ಮಾತ್ರ ಕಿರಿಯ ಪ್ರಾಥಮಿಕ ಶಾಲೆಯವರೆಗೆ ಕಲಿತಿದ್ದಾರೆ. ಇನ್ನು ೨ ಕುಟುಂಬಗಳ ಮಾಹಿತಿದಾರರು ಹಿರಿಯ ಪ್ರಾಥಮಿಕ ಶಾಲೆಯವೆಗೆ ಕಲಿತಿದ್ದಾರೆ. ನಾಲ್ಕು ಕುಟುಂಬಗಳ ಮಾಹಿತಿದಾರರು ಕೇವಲ ಪ್ರೌಢಶಾಲೆಯ ವರೆಗೆ ಮಾತ್ರ ಕಲಿತಿದ್ದಾರೆ. ಪದವಿಪೂರ್ವ ಮತ್ತು ಪದವಿಯನ್ನು ಯಾರೂ ಕಲಿತಿರುವುದಿಲ್ಲ. ಇನ್ನು ಚಿಕ್ಕಮಗಳೂರು ಜಿಲ್ಲೆಯನ್ನು ಸಮೀಕ್ಷೆ ಮಾಡಿದಾಗ ೧೦೬ ಕುಟುಂಬಗಳ ಮಾಹಿತಿದಾರಲ್ಲಿ ೬೦ ಕುಟುಂಬಗಳು ಅನಕ್ಷರಸ್ಥರಾದರೆ, ೩೬ ಜನ ಕಿರಿಯ ಪ್ರಾಥಮಿಕ ಶಾಲೆ, ೬ ಕುಟುಂಬಗಳ ಮಾಹಿತಿದಾರರು ಪ್ರಾಥಮಿಕ ೪ ಕುಟುಂಬಗಳ ಮಾಹಿತಿದಾರರು ಪ್ರೌಢ ಶಿಕ್ಷಣವನ್ನು ಮುಗಿಸಿದ್ದಾರೆ. ಪದವಿ ಪೂರ್ವ ಮತ್ತು ಪದವಿಯನ್ನು ಯಾರೂ ಕಲಿತಿರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ೬ ಕುಟಂಬಗಳ ಮಾಹಿತಿದಾರರಲ್ಲಿ ೫ ಮಾತ್ರ ಹಿರಿಯ ಪ್ರಾಥಮಿಕ ಶಾಲೆಯವರೆಗೆ ಕಲಿತಿದ್ದರೆ, ಒಂದು ಕುಟುಂಬದ ಮಾಹಿತಿದಾರರು ಪ್ರೌಢಶಿಕ್ಷಣವನ್ನು ಮುಗಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ೨೧೬ ಕುಟುಂಬಗಳ ಮಾಹಿತಿದಾರಲ್ಲಿ ೧೧೪ ಕುಟುಂಬಗಳ ಮಾಹಿತಿದಾರರು ಅನಕ್ಷರಸ್ಥರಾದರೆ, ೬೯ ಜನ ಕಿರಿಯ ಪ್ರಾಥಮಿಕ, ೯ ಜನ ಹಿರಿಯ ಪ್ರಾಥಮಿಕ, ೧೭ ಜನ ಪ್ರೌಢ, ೪ ಜನ ಪದವಿಪೂರ್ವ ಮತ್ತು ೨ ಕುಟುಂಬಗಳ ಮಾಹಿತಿದಾರರು ಮಾತ್ರ ಪದವಿ ಪಡೆದವರಾಗಿದ್ದಾರೆ. ಇನ್ನುಳಿದ ೨ ಕುಟುಂಬಗಳು ಮಾತ್ರ ಡಿಪ್ಲೋಮಾ ಪಾಸುಮಾಡಿದ್ದಾರೆ. ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಹಸಲರಲ್ಲಿ ಶಿಕ್ಷಣವಂತರು ಕಡಿಮೆ. ಇದಕ್ಕೆ ಕಾರಣ ಅವರು ದಟ್ಟ ಅರಣ್ಯಗಳಲ್ಲಿ ವಾಸಮಾಡುವುದರಿಂದ ಮತ್ತು ಮೇಲ್ವರ್ಗದವರ ಪಿತೂರಿಯಿಂದ ಶಿಕ್ಷಣವಂಚಿತರಾಗಿದ್ದಾರೆ. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಎನ್ ಹುಚ್ಚಪ್ಪ ಮಾಸ್ತರರ ಪರಿಶ್ರಮದಿಂದ ಮಾತ್ರ ಪದವಿ ಪೂರ್ವ, ಪದವಿ ಹಾಗೂ ಇನ್ನಿತರ ಶಿಕ್ಷಣವನ್ನು ಪಡೆದಿದ್ದಾರೆ. ಇದಕ್ಕೆ ಅವರ ಪರಿಶ್ರಮವೇ ಕಾರಣ. ಆದರೆ ಇಂದು ಹಸಲರಲ್ಲಿಯೂ ಕೂಡ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕಾರಣಕ್ಕಾಗಿ ಬೇರೆ ಬೇರೆ ಜಿಲ್ಲೆಗಳ ಗಿರಿಜನ ಆಶ್ರಮ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಿದ್ದಾರೆ. ಅಷ್ಟೇ ಅಲ್ಲದೆ, ಇವರಲ್ಲಿ ಮಧ್ಯದಲ್ಲಿ ಶಾಲೆ ಬಿಡುವವರ ಸಂಖ್ಯೆಯೂ ಹೆಚ್ಚಿದೆ. ಅದಕ್ಕೆ ಅವರ ಬಡತನವೂ ಕೂಡಾ ಕಾರಣವಾಗಿದೆ.

ಒಟ್ಟಿನಲ್ಲಿ ಹಸಲರಲ್ಲಿಯೂ ಕೂಡಾ ಇತ್ತಿಚಿನ ದಿನಗಳಲ್ಲಿ ಶಿಕ್ಷಣವಂತರಾಗಲು ತಮ್ಮ ಮಕ್ಕಳನ್ನು ಪ್ರೇರೇಪಿಸುತ್ತಿದ್ದಾರೆ.

ವ್ಯಕ್ತಿಯೊಬ್ಬನು ಹೋರಾಟ ಮಾಡಿದರೆ, ಅಷ್ಟೊಂದು ಪರಿಣಾಮಕಾರಿಯಾಗುವುದಿಲ್ಲ. ಅದೇ ಸಂಘಟನೆಯ ಮೂಲಕ ಹೋರಾಟ ಮಾಡಿದರೆ ಅದರಲ್ಲಿ ಯಶಸ್ಸನ್ನು ಪಡೆಯಬಹುದು. ಏಕೆಂದರೆ, 'ಒಗ್ಗಟ್ಟೆ ಬಲ'. ಈ ಧ್ಯೇಯದೊಂದಿಗೆ ಹಸಲರು ಸಂಘಟಿತರಾಗಿ ಹೋರಾಟ ಮಾಡಲು ಪ್ರಾರಂಭಿಸಿದ್ದಾರೆ.

೧೯೫೯ ಕ್ಕಿಂತ ಪೂರ್ವದಲ್ಲಿ ಹಸಲರು ಸಂಘಟಿತರಾಗಿ ಹೋರಾಟ ಮಾಡಿದ ನೆನಪಿಲ್ಲವೆಂದು ಬೆಳ್ಳಣ್ಣೆಯ ಚೌಡಪ್ಪ, ಹಿರೇಮನೆಯ ಚೌಡಪ್ಪ ಕಾರ್ಗಲ್‌ದ ರಾಮಣ್ಣ ಕೂಳಕಾರ ಇವರು ಹೇಳುತ್ತಾರೆ. ಆದರೆ ೧೯೫೯ ರಲ್ಲಿ ಶರಾವತಿ ನದಿಗೆ ಅಡ್ಡಲಾಗಿ ಲಿಂಗನಮಕ್ಕಿ ಆಣೆಕಟ್ಟು ಕಟ್ಟುವುದರಿಂದ ಆಗುವ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಸಾಗರ, ಹೊಸನಗರ ಮತ್ತು ತೀರ್ಥಹಳ್ಳಿಯ ಹಸಲರು ಇನ್ನಿತರ ನಿರಾಶ್ರಿತರೊಂದಿಗೆ ಕೂಡಿಕೊಂಡು ಲಿಂಗನಮಕ್ಕಿ ಮುಖ್ಯ ಅಭಿಯಂತರರ ಕಛೇರಿಯ ಮುಂದೆ ಬೃಹತ್ ಪ್ರತಿಭಟನೆಯ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು. ಈ ಹೋರಾಟದ ಉದ್ದೇಶ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವುದಾಗಿತ್ತು. ಸರಕಾರವು ಹಸಲರನ್ನು ಬೇರೆ ಬೇರೆ ಪ್ರದೇಶಗಳ ಗುಡ್ಡಗಳಲ್ಲಿ ಪುನರ್ವಸತಿ ಕಲ್ಪಿಸಿದರು. ಆದರೆ ಅವು ಕನಿಷ್ಟ ಮೂಲಭೂತ ಸೌಕರ್ಯಗಳು ಇಲ್ಲದಿರುವುದರಿಂದ ಆ ಪುನರ್ವಸತಿ ಕೇಂದ್ರಗಳನ್ನು ತಿರಸ್ಕರಿಸಿದರು. ನಂತರ ಸರಕಾರವು ಇವರ ಒತ್ತಾಯಕ್ಕೆ ಮಣಿದು ಎಲ್ಲ ನಿರಾಶ್ರಿತರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವುದರಿಂದ ಆ ಸ್ಥಳಗಳಲ್ಲಿ ಹೋಗಿ ವಾಸಿಸಲು ಪ್ರಾರಂಭಿಸಿದರು. ಸಾಗರ ತಾಲೂಕಿನ ಹಿರೇಮನೆ, ಬೆಳ್ಳಣ್ಣೆ, ತೋರಾಮೆ ಮತ್ತು ಹೊಸನಗರ ತಾಲೂಕಿನ ವಿವಿಧ ಹಸಲರ ಹಾಡಿಕೇರಿಗಳು ಸೇರಿವೆ. ಈ ಪುನರ್ವಸತಿಯ ಬಗ್ಗೆ ಹಸಲರು/ಬಿಲ್ಜತ್ರಿ ಸಂಘದ ಅಧ್ಯಕ್ಷರಾದ ಎಚ್.ಆರ್.ಚೌಡಪ್ಪ ಸಾ॥ ಹಿರೇಮನೆ ಇವರು ವಿವರಿಸಿದ್ದು ಹೀಗೆ– ಲಿಂಗನಮಕ್ಕಿ ಆಣೆಕಟ್ಟಿನಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸುವಾಗ ಮಲೆನಾಡಿನಲ್ಲಿರುವ ಭಟ್ಟರು ಒಂದು ಬುದ್ಧಿವಂತಿಕೆಯ ಯೋಜನೆಯನ್ನು ಹಾಕಿಕೊಂಡರು. ಅದೇನೆಂದರೆ, ಹಸಲರು ಪುನರ್ವಸತಿ ಕೇಂದ್ರಗಳಲ್ಲಿ ವಾಸಿಸಲು ನಿರಾಕರಿಸಿದಾಗ ಬ್ರಾಹ್ಮಣರು ಗಾರುಡಿಗ ಅಥವಾ ಮಂತ್ರವಾದಿಗಳನ್ನು ಕರೆಯಿಸಿ, ಮಂತ್ರವಾದಿಯಿಂದ ಅಥವಾ ಗಾರುಡಿಗನಿಂದ ನೀವು ಗುಡ್ಡಗಳ ಮಧ್ಯದಲ್ಲಿ ವಾಸಿಸಲು ನಿಮಗೆ ಸರಿಯಾದ ಸ್ಥಳ ಎಂದು ಹೇಳಿಸಿದರು. ಅಲ್ಲದೆ ನೀವು ಅಲ್ಲಿಯೇ ವಾಸ ಮಾಡಬೇಕು. ಬೇರೆ ಎಲ್ಲಿಯಾದರೂ ವಾಸಿಸಿದರೆ, ನಿಮಗೆ ಕೇಡು ತಪ್ಪಿದ್ದಲ್ಲವೆಂದು ಗಾರುಡಿಗ ಅಥವಾ ಮಂತ್ರವಾದಿ ಹೇಳಿದಾಗ ಎಲ್ಲರೂ ಆ ಪುನರ್ವಸತಿ ಕೇಂದ್ರಗಳಲ್ಲಿಯೇ ವಾಸಿಸಲು ಪ್ರಾರಂಭಿಸಿದರು. ಬ್ರಾಹ್ಮಣರು ಮಂತ್ರವಾದಿ ಅಥವಾ ಗಾರುಡಿಗನನ್ನು ಕರೆಯಿಸಬೇಕಾದರೆ, ಹಸಲರು ಗಾರುಡಿಗ ಅಥವಾ ಮಂತ್ರವಾದಿಗೆ ಅಂಜುವರು ಎಂಬ ಕಾರಣಕ್ಕೆ ಅವರನ್ನು ಕರೆಯಿಸಿದರು. ಇದರ ಹಿಂದಿನ ಉದ್ದೇಶವೆಂದರೆ, ಬ್ರಾಹ್ಮಣರ ತೋಟವನ್ನು ಕಾಯುವ ಉದ್ದೇಶದಿಂದಲೆ ಬ್ರಾಹ್ಮಣರು ಗಾರುಡಿಗನ ಮುಖಾಂತರ ಬೆಟ್ಟಗಳ ಮಧ್ಯದಲ್ಲಿಯೇ ವಾಸ ಮಾಡಬೇಕೆಂದು ಹೇಳಿಸಿದರು. ಏಕೆಂದರೆ, ಬ್ರಾಹ್ಮಣರ ತೋಟ ಮತ್ತು ಗದ್ದೆಗಳಿಗೆ ಕಾಡು ಪ್ರಾಣಿಗಳು ಬಂದು ಅಡಿಕೆ, ಬಾಳೆ, ಭತ್ತ, ತೆಂಗು ಮುಂತಾದ ಬೆಳೆಗಳನ್ನು

ನಾಶ ಮಾಡುತ್ತಿದ್ದವು. ಕಾಡು ಪ್ರಾಣಿಗಳಿಂದ ಈ ಬೆಳೆಗಳನ್ನು ರಕ್ಷಿಸುವ ಸಲುವಾಗಿ ಹಸಲರು ಬ್ರಾಹ್ಮಣರ ಗದ್ದೆ ಅಥವಾ ತೋಟದ ಸುತ್ತಲೂ ವಾಸಿಸಬೇಕೆಂದು ಗಾರುಡಿಗನ ಮುಖಾಂತರ ಹೇಳಿಸಿದರು. ಇಂದಿಗೂ ಕೂಡ ಕೆಲವು ಕಡೆ ಬ್ರಾಹ್ಮಣರ ಗದ್ದೆ ಅಥವಾ ತೋಟದ ಸುತ್ತಲೂ ಹಸಲರು ವಾಸಿಸುತ್ತಾರೆ.

೨೦೦೦ರಲ್ಲಿ ಹಸಲರು 'ಬಗರ ಹುಕುಂ' ಸಾಗುವಳಿ ಹಕ್ಕುಪತ್ರ ಕೊಡಲು ಹೋರಾಟ ಮಾಡಿದರು. ಆವಾಗ ಹಸಲರ ಮುಖಂಡನಾದ ಬೆಳ್ಳೆಣ್ಣೆಯ ಚೌಡಪ್ಪನು ಟ್ರಿಬ್ಯುನಲ್ ಸದಸ್ಯನಾಗಿದ್ದನು. ಇವನ ನೇತೃತ್ವದಲ್ಲಿ ಎಲ್ಲ ಅರಣ್ಯವಾಸಿಗಳು ಕೂಡಿಕೊಂಡು ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸುಮಾರು ಮೂರು ದಿವಸಗಳವರೆಗೆ ಹೋರಾಟ ಮಾಡಿದರು. ಜಿಲ್ಲಾಧಿಕಾರಿಗಳು ಹಕ್ಕುಪತ್ರ ಕೊಡುತ್ತೇವೆಂಬ ಭರವಸೆ ಕೊಟ್ಟ ನಂತರ ಮುಷ್ಕರ ಹಿಂತೆಗೆದುಕೊಳ್ಳಲಾಯಿತು.

೯೦ರ ದಶಕದಿಂದಲೂ ಉತ್ತರ ಕನ್ನಡ ಜಿಲ್ಲೆಯ ಹಸಲರು ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ಪಡೆಯಲು ಮಾವಳ್ಳಿ ಶಂಕರ, ಕಾನಳ್ಳಿ ಬಾಸ್ಕರ ಇವರ ನೇತೃತ್ವದಲ್ಲಿ ಕಾರವಾರ ಜಿಲ್ಲಾಧಿಕಾರಿಯ ಕಛೇರಿಯ ಮುಂದೆ ಪ್ರತಿಭಟನೆ ಮಾಡಿದ್ದಾರೆ. ಆದರೂ ಅವರಿಗೆ ಭರವಸೆ ದೊರೆತಿದೆ ವಿನಃ ಅದು ಈಡೇರಿಲ್ಲ. ಇದಕ್ಕೆ ಅವರಲ್ಲಿಯ ಸಂಘಟಿತ ಹೋರಾಟದ ಕೊರತೆಯೇ ಕಾರಣ.

ಘಟ್ಟದ ಮೇಲಿನ ಹಸಲರಿಗಿಂತ ಘಟ್ಟದ ಕೆಳಗಿನ ಹಸಲರು ಹೋರಾಟ ಮಾಡಿ, ಅದರಲ್ಲಿ ಯಶಸ್ಸನ್ನು ಸಂಪಾದಿಸಿದ್ದಾರೆ. ಕಮಲ ಶಿಲೆಯ ದುರ್ಗಾಪರಮೇಶ್ವರಿ ದೇವಾಲಯದ ಆವರಣದಲ್ಲಿ ಪ್ರವೇಶಿಸಲು ಹಸಲರು ನೀಚಕುಲದವರು ಎಂಬ ಕಾರಣಕ್ಕೆ ಅವರಿಗೆ ನಿಷೇಧಿಸಲಾಗಿತ್ತು. ಆದರೆ ಕಬ್ಬಿನಾಲೆಯ ರಾಜು, ಕೃಷ್ಣಾ ಮತ್ತು ಶಂಕರ ಇವರ ನೇತೃತ್ವದಲ್ಲಿ ಹೋರಾಟ ಮಾಡಿ ಯಶಸ್ಸನ್ನು ಪಡೆದಿದ್ದಾರೆ. ಅಷ್ಟೇ ಅಲ್ಲ, ದುರ್ಗಾಪರಮೇಶ್ವರಿ ದೇವಾಲಯದಲ್ಲಿ ಕೆಲವು ಕಾರ್ಯಗಳನ್ನು ಹಸಲರಿಗಾಗಿಯೇ ಮೀಸಲಿಡಲಾಗಿದೆ.

ಅದೇ ರೀತಿಯಾಗಿ ಇವರಿಗೆ ಕಂಬಳದಲ್ಲಿ ಪಾಲ್ಗೊಳ್ಳಲು ಅವಕಾಶವಿರಲಿಲ್ಲ. ಆವಾಗ ಕಬ್ಬಿನಾಲೆಯ, ಅಳ್ಳಿಹೊಳೆ, ಕಾರೆಬೈಲು, ಕುಂದಲಬೈಲು ಬೇರೆ ಬೇರೆ ಹಾಡಿಕೇರಿಯ ಜನರು ಕೂಡಿಕೊಂಡು ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಂಡು ಚಿಕ್ಕಮಗಳೂರು ಜಿಲ್ಲಾಧಿಕಾರಿ ಗಳಿಗೆ ಮನವಿಯನ್ನು ಅರ್ಪಿಸಿದರು. ಇದರ ಫಲವಾಗಿ ಸಿದ್ಧಾಪೂರ ಕದ್ರಿ ಕಂಬಳದಲ್ಲಿ ಭಾಗವಹಿಸಲು ಅವರಿಗೆ ಅವಕಾಶ ದೊರೆಯಿತು. ಘಟ್ಟದ ಕೆಳಗಿನ ಹಸಲರು ಕೆರೆಮನೆ ಶಂಭು ಹೆಗಡೆಯವರ ವಿರುದ್ಧ ಪ್ರತಿಭಟನೆ ಮಾಡಿ ಅದರಲ್ಲಿ ಯಶಸ್ಸನ್ನು ಸಾಧಿಸಿದ್ದಾರೆ. ಕಬ್ಬಿನಾಲೆಯ ಕೃಷ್ಣರಿಗೆ ಯಕ್ಷಗಾನ ಮಂಡಳಿ ಸೇರಬೇಕೆಂಬ ಬಯಕೆ. ಆದರೆ ಇವರು ಕೀಳು ಜಾತಿಯವರೆಂಬ ಕಾರಣಕ್ಕೆ ಇವರಿಗೆ ಅವರು ಅವಕಾಶ ಕೊಡಲಿಲ್ಲ. ಆಗ ಎಲ್ಲ ಹಸಲರು ಕೂಡಿಕೊಂಡು ತಾಲೂಕಾ ಕೇಂದ್ರಗಳಲ್ಲಿ ಪ್ರತಿಭಟನೆ ಮಾಡಿದರು. ಈ ಹೋರಾದ ಫಲವಾಗಿ ಕಬ್ಬಿನಾಲೆ ತಾಳೆಮದ್ದಲೆ ಸಂಘ ಸ್ಥಾಪನೆ ಯಾಯಿತು.

೨೦೦೩ರಲ್ಲಿ ಸರಕಾರವು ವನ್ಯ ಜೀವಿ ಸಂರಕ್ಷಣೆಯ ಕಾಯ್ದೆಗೆ ತಿದ್ದುಪಡಿ ಮಾಡಿತು. ಇದರನ್ವಯ ಅಭಯಾರಣ್ಯದಲ್ಲಿ ಹಣಗಳಿಕೆಯ ಉದ್ದೇಶಕ್ಕೆಂದು ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವಂತಿಲ್ಲ. ಹಾಗಾಗಿ ೨೦೦೪ರಲ್ಲಿ ಆ ಕಾಯ್ದೆಯನ್ವಯ ಸಂಪೂರ್ಣವಾಗಿ ಅರಣ್ಯ ಕಿರು ಉತ್ಪನ್ನಗಳ ಮೇಲೆ ನಿಷೇಧ ಹೇರಲಾಯಿತು. ಇದರಿಂದ ಗಿರಿಜನರ ಉಪಜೀವನಕ್ಕೆ ಪೆಟ್ಟುಬಿದ್ದಿತು. ಆವಾಗ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳ ಆದಿವಾಸಿಗಳು ಆಯಾ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನೆ ಮಾಡಿದರು. ಜಿಲ್ಲಾಧಿಕಾರಿಗಳು ಇವರ ಮನವಿಯನ್ನು ಸರಕಾರಕ್ಕೆ ಕಳುಹಿಸುವ ಭರವಸೆಯ ಮೇಲೆ ಮುಷ್ಕರ ಹಿಂತೆಗೆದುಕೊಳ್ಳಲಾಯಿತು. ಇದರನ್ವಯ ೨೦೦೬ ರಲ್ಲಿ ಕೇಂದ್ರ ಸರಕಾರ ಹಕ್ಕು ಮಾನ್ಯತಾ ಕಾಯ್ದೆ ಜಾರಿಗೊಳಿಸಲಾಯಿತು. ಇದರಿಂದ ಗಿರಿಜನ ವಾಸಿಗಳಿಗೆ ಕೆಲವು ಸೌಲಭ್ಯ ಜಾರಿಗೊಳಿಸಲಾಯಿತು. ಆದರೂ ಅದರ ಸಮರ್ಪಕ ಸೌಲಭ್ಯ ಗಿರಿಜನರಿಗೆ ದೊರೆತಿಲ್ಲ.

ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗಿರಿಜನರಿಗೆ ಕೆಲಸ ನೀಡುವಂಥ ಪ್ರಯತ್ನಗಳೂ ಕೂಡಾ ಅಷ್ಟೊಂದು ನಡೆದಿಲ್ಲ. ಅದಕ್ಕಾಗಿ ಸಾಗರ ತಾಲೂಕಿನ ಗಿರಿಜನವಾಸಿಗಳು ಸಾಗರ ತಹಶೀಲ್ದಾರ ಕಛೇರಿಯ ಮುಂದೆ ಬೆಳ್ಳೆಣ್ಣೆಯ ಚೌಡಪ್ಪ ಇವರ ನೇತೃತ್ವದಲ್ಲಿ ಮನವಿ ಅರ್ಪಿಸಲಾಯಿತು.

೨೦೦೬ರ ಅರಣ್ಯ ಹಕ್ಕು ಮಾನ್ಯತೆ ಕಾಯ್ದೆಯ ಪ್ರಕಾರ ಗಿರಿಜನರು ಅವರು ವಾಸಿಸುವ ಪ್ರದೇಶದಲ್ಲಿಯೇ ಮೂಲ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಆದರೆ ಇಲ್ಲಿಯವರೆಗೂ ಈ ಕಾಯ್ದೆ ಜಾರಿಯಾದಾಗಿನಿಂದಲೂ ಅಷ್ಟೊಂದು ಪ್ರಯೋಜನವಾಗಿಲ್ಲವೆಂದು ಕಾರ್ಗಲ್ ರಾಮಣ್ಣ ಕೂಳಕಾರ ಬೇಸರದಿಂದಲೇ ಹೇಳುತ್ತಾನೆ. ೨೦೦೬ರಲ್ಲಿ ಹಿರೇಮನೆ ಚೌಡಪ್ಪ ಉಳ್ಳೂರು ನಾಗರಾಜ, ಉಳ್ಳೂರು ರಾಮಪ್ಪ, ಗೋಳಗೋಡು ನಾರಾಯಣಪ್ಪ, ಗಾಲಿಮನೆ ಪುಟ್ಟಪ್ಪ, ಚುಟ್ಟಿಕೇರೆ ರಾಮಪ್ಪ, ಬೆಳ್ಳೆಣ್ಣೆಯ ಚೌಡಪ್ಪ ಇವರ ನೇತೃತ್ವದಲ್ಲಿ ಹಸಲರು / ಬಿಲ್ಲತ್ರಿ ಸಂಘಟನೆಯನ್ನು ಹುಟ್ಟುಹಾಕಿದರು. ಆದರೂ ಕೂಡಾ ಹಸಲರಿಗಾಗಿ ಅಷ್ಟೊಂದು ಪರಿಣಾಮಕಾರಿಯಾಗಿ ಹೋರಾಟ ಮಾಡಲಿಲ್ಲವೆಂದು ಬೆಳ್ಳೆಣ್ಣೆಯ ರಾಮಮೂರ್ತಿ ಅಭಿಪ್ರಾಯಪಡುತ್ತಾನೆ.

೨೦೧೦ರಲ್ಲಿ ಬೆಳ್ಳೆಣ್ಣೆಯ ಯುವಕ ರಾಮಮೂರ್ತಿ ಈತನು ಡಾ. ಬಿ.ಆರ್. ಅಂಬೇಡ್ಕರ ವಾದದ ಹಸಲರ / ಪರಿಶಿಷ್ಟ ಪಂಗಡ ಸಂಘ ಎಂಬ ಸಂಘವನ್ನು ಹುಟ್ಟು ಹಾಕಿದ್ದಾನೆ. ಆತನ ಪ್ರಕಾರ ಈ ಸಂಘಟನೆಯ ಮೂಲ ಉದ್ದೇಶ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಯ ಜನರಿಗೆ ಸಿಗಬೇಕಾದ ಸೌಲಭ್ಯಗಳು ಸಿಗಲೇಬೇಕೆಂದು ಎಂಬ ಧ್ಯೇಯದೊಂದಿಗೆ ಹೋರಾಟ ಮಾಡುತ್ತೇವೆಂದು ಉತ್ಸಾಹದಿಂದ ಹೇಳುತ್ತಾನೆ.

ಕೋಷ್ಟಕ– ೫.೨ ಸಮೀಕ್ಷೆ ಮಾಡಿದ ಹಸಲರು ನೊಂದಾಯಿತ ಸಂಘದ ಸದಸ್ಯರಿರುವವರ ವಿವರ

ಜಿಲ್ಲೆಗಳು		ನೊಂದಾಯಿತ ಸಂಘದ ಸದಸ್ಯರ ವಿವರ		ಒಟ್ಟು
		ಹೌದು	ಇಲ್ಲ	
ಉತ್ತರ ಕನ್ನಡ	ಒಟ್ಟು	೧೦	೧೦೬	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೮.೬%	೯೧.೪%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨೦%	೨೨.೭%	೨೨.೪%
	ಒಟ್ಟು ಪ್ರತಿಶತ	೧.೯%	೨೦.೫%	೨೨.೪%
ಉಡುಪಿ	ಒಟ್ಟು	೧	೭೧	೭೨
	ಪ್ರತಿಶತ (ಜಿಲ್ಲೆಯೊಳಗೆ)	೧.೪%	೯೮.೬%	೧೦೦%
	ಪ್ರತಿಶತ (ವರ್ಗಗಳಲ್ಲಿ)	೨%	೧೫.೨%	೧೩.೯%
	ಒಟ್ಟು ಪ್ರತಿಶತ	೨%	೧೩.೭%	೧೩.೯%
ಚಿಕ್ಕಮಗಳೂರು	ಒಟ್ಟು	೯	೯೭	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೮.೫%	೯೧.೫%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೮%	೨೦.೮%	೨೦.೫%
	ಒಟ್ಟು ಪ್ರತಿಶತ	೧.೭%	೧೮.೮%	೨೦.೫%
ದಕ್ಷಿಣ ಕನ್ನಡ	ಒಟ್ಟು	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೧.೩%	೧.೨%
	ಒಟ್ಟು ಪ್ರತಿಶತ	–	೧.೨%	೧.೨%
ಶಿವಮೊಗ್ಗ	ಒಟ್ಟು	೩೦	೧೮೭	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೧೩.೮%	೮೬.೨%	೧೦೦%
	ಪ್ರತಿಶತ (ವರ್ಗಗಳಲ್ಲಿ)	೬೦%	೪೦%	೪೨%
	ಒಟ್ಟು ಪ್ರತಿಶತ	೫.೮%	೩೬.೨%	೪೨%
ಒಟ್ಟು	ಒಟ್ಟು	೫೦	೪೬೭	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೯.೭%	೯೦.೩%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೯.೭%	೯೦.೩%	೧೦೦%

ಹಸಲರಲ್ಲಿ ಬೇರೆ ಬೇರೆ ಸಂಘಟನೆಗಳಿದ್ದರೂ ಕೂಡಾ ಅವು ಅಷ್ಟೊಂದು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿಲ್ಲ. ಆದರೆ ಮುಂಬರುವ ದಿನಗಳಲ್ಲಿ ಸಂಘಟಿತವಾದಂತಹ ಹೋರಾಟ ಮಾಡಿ ತಮ್ಮ ಉದ್ದೇಶ ಈಡೇರಲಿ ಎಂದು ಆಶಿಸುತ್ತಾರೆ.

೫.೯ ಆಟಗಳು

"Sound Mind in Sound Body"–ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ. ಸದೃಢವಾದ ಶರೀರ ರೂಪಗೊಳ್ಳಬೇಕಾದರೆ ಕ್ರೀಡೆ ಮುಖ್ಯ. ಇದು ವ್ಯಾಯಾಮ ಅಭ್ಯಾಸಗಳಿಗಿಂತ ಭಿನ್ನ. ಇದು ದೇಹಕ್ಕೂ, ಮನಸ್ಸಿಗೂ, ಸಾಕಷ್ಟು ಸಾಧನೆ, ರಂಜನೆ, ಕೊಡುವ ರೀತಿಯದು. ವ್ಯಾಯಾಮದಷ್ಟು ಕ್ರಮಬದ್ಧವಾಗದಿದ್ದರೂ ಆಟಗಳಿಂದ ಅಂಗಸಾಧನೆಯಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಮನೋರಂಜನೆ, ಉಲ್ಲಾಸ ಮತ್ತು ಹರ್ಷ ದೊರೆಯುತ್ತದೆ. ಆಟ ಆಡುವ ಗುಣ ನೈಸರ್ಗಿಕವಾಗಿದೆ. ಇದಕ್ಕೆ ಪ್ರಾಣಿ–ಪಕ್ಷಿಗಳೇ ಸಾಕ್ಷಿ. ನಾಯಿ, ಬೆಕ್ಕು, ಹುಲಿ, ಚಿರತೆ ಮುಂತಾದ ಪ್ರಾಣಿಗಳು ತಮ್ಮ ತಾಯಿಯೊಂದಿಗೆ ಸ್ವಲ್ಪಕಾಲ ಆಟವಾಡುತ್ತವೆ. ಇಂಥ ಚಿಣ್ಣಾಟದಿಂದ ಮರಿಗೆ ಸಂತೋಷವಾಗುತ್ತದೆ. ಆಟದ ಮನೋಧರ್ಮದ ಹಿಂದೆ ವಿನೋದಕ್ಕಿಂತ ಹಿರಿದಾದ ಮತ್ತೊಂದು ಉದ್ದೇಶವೂ ಇರುವಂತೆ ಕಾಣುತ್ತದೆ. ಕೇವಲ ಮನೋರಂಜನೆಗಾಗಿ ತೋರುವ ಆಟ ಅದಕ್ಕೆ ಜೀವ ನಿರ್ವಹಣೆಯಲ್ಲಿ ಪಾಲ್ಗೊಳ್ಳುವ, ಗೆಲ್ಲುವ ವರಸೆಗಳನ್ನು ಕಲಿಸುತ್ತದೆ. ಪ್ರಾಣಿ ಸಹಜವಾದ ಗುಣ ಮಾನವನಲ್ಲಿಯೂ ಕೂಡಾ ಅಷ್ಟೆ. ಆಟದಿಂದ ಅಂಗಾಂಗಳ ಶಕ್ತಿ ವೃದ್ಧಿಸುತ್ತದೆ, ಕೈಚಳಕ ಹೆಚ್ಚುತ್ತದೆ, ಬುದ್ಧಿ ಕುದುರುತ್ತದೆ, ಸಮಯ ಸ್ಫೂರ್ತಿ, ಯುಕ್ತಿ, ಶ್ರಮಸಹಿಷ್ಣತೆ, ಪುನಃ ಪ್ರಯತ್ನ ಮಾಡುವ ಆಕಾಂಕ್ಷೆ, ಸಾಮೂಹಿಕ ನಡೆನುಡಿಗಳು, ಒಗ್ಗಟ್ಟಿನ ಕಾರ್ಯನಿರ್ವಹಣೆ ಮುಂತಾದ ಗುಣಗಳು ಆಟದಿಂದ ದೊರೆಯುತ್ತವೆ.

ಆಟಗಳು ಚಿಕ್ಕ ಹುಡುಗರಿಂದ ಹಿಡಿದು ಹಲ್ಲುದುರುವ ಅಜ್ಜಂದಿರವರೆಗೂ ಹಿಡಿಸುವ ಬಗೆ ಬಗೆಯ ಆಟಗಳಿವೆ. ಒಂದೇ ಆಟದಲ್ಲಿ ವೈವಿಧ್ಯಮಯವೂ ಇದೆ, ಅದಕ್ಕೆ ಒಂದೊಂದು ಹಳ್ಳಿಗಾಡಿನಲ್ಲಿ ಬೇರೆ ಬೆರೆ ಹೆಸರುಗಳೂ ಇವೆ.

ಜಾನಪದ ಆಟಗಳ ತಲೆತಲಾಂತರದಿಂದ ಕೂಡ ಮೂಲವಾಗಿ ಬೆಳೆದಿವೆ. ಅವುಗಳ ಹುಟ್ಟನ್ನು ಕೆದಕುವುದು ಕಷ್ಟ. ಇನ್ನು ಬೆಳೆದು ಬಂದ ಬಗೆಗೆ ಆಧಾರ ಕೊಡುವುದು ಅಷ್ಟೇ ಕಷ್ಟಕರ. ಎಷ್ಟೋ ಬಗೆಯ ಆಟಗಳು ಚಲಾವಣೆಗೆ ಬಂದು ಸವಕಲಾಗಿ ಹೋಗಿರಬಹುದು. ಗ್ರಂಥಗಳಲ್ಲಿ ವರ್ಣನೆಗೆ ಅವಕಾಶವಿರದ ಎಷ್ಟೋ ಆಟಗಳೂ ಇವೆ.

ಭಾರತೀಯ ಜಾನಪದ ಆಟಗಳ ವೈಶಿಷ್ಟ್ಯ ಮೆಚ್ಚುವಂತಹದ್ದು. ಅತ್ಯಂತ ಕಡಿಮೆ ಖರ್ಚು, ಅಧಿಕ ಪ್ರಯೋಜನ. ಇದು ಎಲ್ಲ ಆಟಗಳ ಸಾಮಾನ್ಯ ಗುಣ. ಕೆಲವು ಆಟಗಳಿಗೆ ಆಡುವವರಿದ್ದರೆ ಸಾಕು. ಕೆಲವು ಆಟಗಳಿಗೆ ಸಾಮಾನ್ಯವಾಗಿ ಮತ್ತು ನೈಸರ್ಗಿಕವಾಗಿ ಸಿಗುವ ಬೀಜಗಳನ್ನು ಉಪಯೋಗಿಸುವರು. ಹುಣಸೆ ಬೀಜ, ಎರಡು ಮೊಳ ಉದ್ದದ ಕಡ್ಡಿ, ಗಜುಗ, ಸಣ್ಣ ಸಣ್ಣ ಹರಳುಗಳು, ಬೇಕಾದ ಆಕಾರಕ್ಕೆ ಹೊಂದುವ ಮಡಕೆ ಚೂರು ಅಥವಾ ಕಲ್ಲುಗಳು, ಮರಳಲ್ಲಿ

ಸಿಗುವ ಹರಳುಗಳು ಮತ್ತು ಹಳೆಯ ಹರಕಲು ಬಟ್ಟೆ ಚೂರು, ಹಳೆ ಹಲಗೆಯ ಪಟ್ಟಿ ಮುಂತಾದವುಗಳು ಸಾಕು. ಬಹಳ ಶ್ರೀಮಂತ ಆಟವಾದ ಪಗಡೆ, ಚದುರಂಗಗಳಿಗೆ ಐದಾರು ರೂಪಾಯಿ ಬಂಡವಾಳ ಬೇಕು. ಆದರೆ ಈ ಆಟಗಳ ನಿರ್ವಹಣೆಗೆ ಖರ್ಚು ಇಲ್ಲವೇ ಇಲ್ಲ.

ಜಾನಪದ ಆಟಗಳನ್ನು ಅವರವರ ಮನೋರಂಜನೆ ಮತ್ತು ಲಿಂಗಗಳ ಆಧಾರದಿಂದ ೧) ಮಕ್ಕಳ ಆಟ ೨) ಸ್ತ್ರೀಯರ ಆಟ, ೩) ಪುರುಷರ ಆಟ ಎಂದು ಭಾಗ ಮಾಡಬಹುದು. ಇವೆಲ್ಲ ಆಟಗಳನ್ನು ಕೂಡಿಸಿ ಒಳಾಂಗಣ ಮತ್ತು ಹೊರಾಂಗಣ ಆಟಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಳಾಂಗಣ ಆಟಗಳನ್ನು ಅವರವರ ವಯೋಗುಣ, ಬುದ್ಧಿಮಟ್ಟಕ್ಕೆ ತಕ್ಕಂತೆ ಸ್ತ್ರೀ, ಪುರುಷರಿಬ್ಬರೂ ಆಡಬಹುದು. ಹೊರಾಂಗಣ ಆಟದಲ್ಲಿ ಕುಂಟುಬಿಲ್ಲೆ, ಕುಂಟಾಟ, ಕಣ್ಣುಮುಚ್ಚಾಲೆ ಆಟಗಳನ್ನು ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಆಡುತ್ತಾರೆ. ಗೋಲಿ, ಗಜ್ಜುಗ, ಚಿಣ್ಣಿಕೋಲ, ಬುಗುರಿ, ಮರಕೋತಿ, ಕಬಡ್ಡಿ ಇಂಥ ಆಟಗಳನ್ನು ವಿಶೇಷವಾಗಿ ಗಂಡು ಹುಡುಗರು ಆಡುತ್ತಾರೆ. ಕತ್ತಿ ಆಟ, ಕೋಲಾಟ, ಪಗಡಿ ಮುಂತಾದವುಗಳನ್ನು ಗಂಡು ಹೆಣ್ಣು ಮಕ್ಕಳಿಬ್ಬರೂ ಕೂಡಿ ಆಡಬಹುದು.

೫.೯.೧ ಎತ್ತುಕಲ್ಲು ಆಟ: ಇದನ್ನು ವಿಶೇಷವಾಗಿ ಹೆಣ್ಣು ಮಕ್ಕಳು ಆಡುತ್ತಾರೆ. ಇದಕ್ಕೆ ಗಜುಗ ಗಾತ್ರದ ಕಲ್ಲುಗಳು ಬೇಕು. ಇಬ್ಬರು ಅಥವಾ ಹೆಚ್ಚು ಜನ ಆಡಬಹುದು. ಒಬ್ಬೊಬ್ಬರಿಗೆ ಐದೈದು ಕಲ್ಲುಗಳು. ಇದರಲ್ಲಿ ವ್ಯತ್ಯಾಸ ಮಾಡಿಕೊಳ್ಳಬಹುದು. ಈ ಆಟದಲ್ಲಿ ಮೊದಲು ಆಡುವವಳು ಕಲ್ಲುಗಳನ್ನು ಮೇಲಕ್ಕೆಸೆಯಬೇಕು.



ಛಾಯಾಚಿತ್ರ-೫. ೩ ಎತ್ತು ಕಲ್ಲು ಆಟ

ಒಂದು ಅಥವಾ ಎರಡು ಕಲ್ಲನ್ನು ತನ್ನ ಮುಂಗೈ ಮೇಲೆ ಬಿಟ್ಟು ಉಳಿದವುಗಳನ್ನು ಕೆಳಗೆ ಬಿಡಬೇಕು. ಮತ್ತೆ ಕಲ್ಲುಗಳನ್ನು ಮೇಲೆ ಹಾರಿಸಿ ನೆಲದ ಮೇಲಿನ ಕಲ್ಲುಗಳನ್ನು ಆಯ್ದುಕೊಳ್ಳಬೇಕು. ಹೀಗೆ ಆಡುತ್ತಾ ಆಡುತ್ತಾ ಒಂದೊಂದೇ ಕಲ್ಲುಗಳನ್ನು ಗೆಲ್ಲುತ್ತಾ ಹೋಗಬೇಕು. ಎಲ್ಲಾ ಹತ್ತು ಕಲ್ಲುಗಳನ್ನು ಗೆದ್ದರೆ ಅವಳೇ ಜಯಗಳಿಸಿದಂತೆ. ಇಲ್ಲದಿದ್ದರೆ ಮುಂದಿನವಳು ಆಡುವಳು. ಹೀಗೆ ಹತ್ತೂ ಕಲ್ಲುಗಳನ್ನು ಗೆದೆಯಬೇಕು. ಇಲ್ಲವೇ ಹೆಚ್ಚಿನ ಕಲ್ಲುಗಳನ್ನು ಗೆದ್ದವಳು ಗೆದ್ದಂತೆ, ಇನ್ನುಳಿದವಳು ಸೋತಂತೆ. ಇದನ್ನು ಎತ್ತುಕಲ್ಲು ಆಟವೆಂದು ಕರೆಯುತ್ತಾರೆ.

ಇನ್ನೊಂದು ವಿಧವೆಂದರೆ ಒಂದು ಕಲ್ಲನ್ನು ಮಾತ್ರ ಮುಂಗೈ ಮೇಲೆ ಆತುಕೊಂಡು ಮತ್ತೆ ಅದನ್ನು ಬೀಳಿಸದಂತೆ ಮೇಲೆಸೆದು ಅಂಗೈಯಲ್ಲಿ ಆನಬೇಕು. ಯಾವ ಸಂದರ್ಭದಲ್ಲೂ ಬಿದ್ದರೂ ಆಟ ಹೋಯಿತು. ಆತ ಕಲ್ಲನ್ನು ಮತ್ತೆ ಮೇಲೆಸೆದು ಅದು ಕೆಳಗೆ ಬೀಳುವಷ್ಟರಲ್ಲಿ ನೆಲದಲ್ಲಿ ಬಿದ್ದಕಲ್ಲುಗಳಲ್ಲಿ ಒಂದನ್ನು ಎತ್ತಿಕೊಂಡು ಮೇಲಿನದನ್ನು ಆನಬೇಕು. ತಪ್ಪಿದರೆ ಆಟ ಹೋಯಿತು. ನೆಲದಮೇಲೆ ಇತರ ಕಲ್ಲುಗಳನ್ನು ಅಲ್ಲಾಡಿಸಿದರೂ ಆಟ ಹೋಯಿತು. ಹೀಗೆ ಒಂದು ಕಲ್ಲಿನಿಂದ ಒಂದೊಂದೇ ಕಲ್ಲಿನಂತೆ ಗೆಲ್ಲುತ್ತಾ "ಒಂದು ಸೀಬೀಬಿ, ಎರಡು ಗರುಡಾಳ, ಮೂರು ಮುತ್ತಿನ ಚೆಂಡು, ನಾಕು ನಾಗಪ್ಪ, ಐದು ಪಂಚಾಂಗ, ಆರು ದಾಳಿಂಬೆ, ಏಳುಬೇಳೆ, ಎಂಟು ರಾಯರಗಂಟೆ, ಒಂಬೈನೋಲ್ಗ" ಎಂದು ಹೇಳುತ್ತಾ ಇರುವ ಹತ್ತು ಕಲ್ಲುಗಳನ್ನು (ಇಬ್ಬರಿದ್ದರೆ ಒಬ್ಬೊಬ್ಬರಿಗೆ ಐದು ಕಲ್ಲುಗಳು) ಗೆದ್ದರೆ ಆಟವಾದಂತೆ, ಆಮೇಲೆ ಮುಂದಿನವಳ ಆಟ. ಕಲ್ಲಿನ ಸಂಖ್ಯೆಯಲ್ಲಿ, ಅನ್ನುವುದರ ಭಂಗಿಯಲ್ಲಿ, ಸೋತವರಿಗೆ ವಿಧಿಸುವ ಶಿಕ್ಷೆಯಲ್ಲಿ ವೈವಿಧ್ಯಮಯವಾದ ನಿಯಮಗಳನ್ನು ಕಾಣುತ್ತೇವೆ.

೫.೯.೨ ಕಡ್ಡಿ ಆಟ: ಇದಕ್ಕೆ ಸಾಮಾನ್ಯವಾಗಿ ಇಪ್ಪತ್ತು ಕಡ್ಡಿಗಳು ಬೇಕು. ಈ ಆಟವನ್ನು ಇಬ್ಬರು ಅಥವಾ ಹೆಚ್ಚು ಜನ ಆಡಬಹುದು. ಕಡ್ಡಿಗಳನ್ನು ಅಂಗೈಯಲ್ಲಿ ಹಿಡಿದು ಮೇಲಕ್ಕೆಸೆಯುವರು. ಅವು ನೆಲದ ಮೇಲೆ ಬಿದ್ದಾಗ ಆಟಗಾರ ಆ ಕಡ್ಡಿಗಳನ್ನು ಒಂದಕ್ಕೊಂದು ತಾಕಿಸುವದು. ಇದರಿಂದ ಮತ್ತೊಂದು ಕಡ್ಡಿ ಅಲುಗಾಡಬಾರದು.



ಛಾಯಾಚಿತ್ರ- ೫ . ೪ ಕಡ್ಡಿಯ ಆಟ

ಹೀಗೆ ತಾಕಿಸಿದ ಕಡ್ಡಿಗಳನ್ನು ಗೆದ್ದಂತೆ; ಹೀಗೆ ಗುರಿ ತಪ್ಪುವತನಕ ಅಥವಾ ಇತರ ಕಡ್ಡಿಗಳು ಅಲುಗಾಡದೇ ಇರುವ ತನಕ ಆಟ ಮುಂದುವರಿಯುತ್ತದೆ. ತಪ್ಪಿದಲ್ಲಿ ಬೇರೆಯವರು ಅದೇ ರೀತಿಯಾಗಿ ಆಟ ಮುಂದುವರಿಸುವರು. ಎಲ್ಲವನ್ನು ಗೆದ್ದಮೇಲೆ ತಮ್ಮ ತಮ್ಮ ಪಾಲಿಗೆ ಬಂದ ಕಡ್ಡಿಗಳನ್ನು ಎಣಿಸಿದರೆ ಎಷ್ಟು ಕಡಿಮೆಯಾಗಿದೆಯೊ, ಅಷ್ಟು ಸೋತಂತೆ; ಹೆಚ್ಚಾದರೆ ಗೆದ್ದಂತೆ. ಮುಂದಿನ ಆಟಕ್ಕೆ ಇಬ್ಬರೂ ಸಮವಾಗಿ ಕಡ್ಡಿಗಳನ್ನು ಹಾಕಬೇಕು. ಯಾರ ಹತ್ತಿರ ಕಡಿಮೆ ಕಡ್ಡಿಗಳು ಇರುವವೋ ಅವರು ಸೋತಂತೆ. ಹೆಚ್ಚು ಕಡ್ಡಿಗಳು ಇದ್ದವರು ಗೆದ್ದಂತೆ.



೫.೯.೩ ಸರಿಬೆಸ : ಎಂದರೆ ಸಮ ಮತ್ತು ವಿಷಮ ಎಂದರ್ಥ. ಇದನ್ನು ಸಾಮಾನ್ಯವಾಗಿ ಅಡಿಕೆ ಇಟ್ಟುಕೊಂಡು ಆಡುತ್ತಾರೆ. ಮದುವೆ ಮನೆಗಳಲ್ಲಿ, ಚಪ್ಪರದ ಹಟ್ಟಿಯಲ್ಲಿ, ಕಾಲುಂಗರ ಶಾಸ್ತ್ರ ಮಾಡುವಾಗ, ಎಣ್ಣೆ ಅರಿಸಿನ ಹಚ್ಚಿ ವೀಳ್ಯ ಮಾಡುವಾಗ, ಲಗ್ನದ ಕಾಲ ಮುಹೂರ್ತದಲ್ಲಿ ಮತ್ತು ಊಟಕ್ಕೆ ಕುಳಿತಾಗ, ಹಂತಿಯ ಮೇಲೆ ಎಲೆ ಅಡಿಕೆ ಕೊಡುವುದುಂಟು. ಈ ಸಂದರ್ಭದಲ್ಲಿ ಮಕ್ಕಳು ಸೇರಿ ಆಟವನ್ನು ಅಲ್ಲೆ ಆಡುತ್ತಾ, ಲಲ್ಲೆ ಮಾಡುತ್ತಾರೆ. ಮದುವೆಯ ನಾನಾ ಶಾಸ್ತ್ರಗಳ ಅಂಗವಾಗಿ ಧಾರೆ ಎರೆದ ಮೆಲೆ ಹೆಣ್ಣು ಗಂಡುಗಳು ಈ ಆಟ ಆಡಬೇಕು, ತಂಗಿಯರೂ, ನಾದಿನಿಯರೂ ನಕ್ಕು ನಲಿಯಬೇಕು. ಇದೇ ಸಂದರ್ಭದಲ್ಲಿ ಸರಿಬೆಸವಾಡಿದವರು, ಮುತ್ತೈದೆಯರೂ ಜಾನಪದ ಗೀತೆಗಳನ್ನು ಹಾಡುವರು.



ಛಾಯಾಚಿತ್ರ- ೫ . ೫ ಸರಿ-ಬೆಸ

ಇಬ್ಬರೂ ತಮ್ಮಲ್ಲಿರುವ ಅಡಿಕೆಗಳಲ್ಲಿ ಇಷ್ಟ ಬಂದಷ್ಟನ್ನು ಒಂದು ಮುಷ್ಠಿಯಲ್ಲಿ ಅವಿತಿಟ್ಟುಕೊಂಡು ಸರಿಯೋ, ಬೆಸವೋ ಎಂದು ಕೇಳಬೇಕು. ಎದುರಾಳಿ ಊಹಿಸಿ ಸರಿ ಅಥವಾ ಬೆಸ ಎನ್ನಬೇಕು. ಎಣಿಸಿ ನೋಡಿದಾಗ ಹೇಳಿದಂತೆ ಸರಿಯೋ ಅಥವಾ ಬೆಸವೋ ಆಗಿದ್ದರೆ ಹೇಳಿದವರಿಗೆ ಅಷ್ಟು ಅಡಿಕೆಯನ್ನು ಕೊಡಬೆಕು. ತಪ್ಪಾಗಿದ್ದರೆ ಹೇಳಿದವರು ಅಷ್ಟು ಅಡಿಕೆಯನ್ನು ಕೊಡಬೇಕು. ಇನ್ನು ಆಟ ಬದಲಾವಣೆ. ಮೊದಲು ತೋರಿಸುತ್ತಿದ್ದವರು ಈಗ ಹೇಳಬೇಕು. ಹೀಗೆ ತಮ್ಮಲ್ಲಿರುವ ಅಡಿಕೆಗಳನ್ನು ಸೋಲುವತನಕ ಆಟವಾಡುತ್ತಾರೆ. ಯಾರು ಎಲ್ಲ ಅಡಿಕೆಗಳನ್ನು ಸೋಲುವರೋ ಆಟ ಸೋತಂತೆ ಎದುರಾಳಿ ಗೆದ್ದಂತೆ.

೫.೯.೪ ಚೆನ್ನಮಣೆ ಆಟ : ಈ ಆಟವನ್ನು ಹರಳು ಮಣೆ ಆಟ ಎಂತಲೂ ಕರೆಯುತ್ತಾರೆ. ಇದಕ್ಕೆ ಒಂದೊಂದು ಸಾಲಿನಲ್ಲಿ ಏಳು ಏಳು ಪುಟ್ಟ ಬೋಗೋಣಿಗಳಂಥ ಎರಡು ಸಾಲುಗಳುಳ್ಳ ಒಂದು ಮರದ ಮಣೆ ಮತ್ತು ಗುಳಿಗೆ ಐದರಂತೆ ಒಟ್ಟು ೭೦ ಒಂದೇ ತರಹದ ಯಾವುದಾದರೂ ಬೀಜಗಳು ಬೇಕು. ಆ ಮಣೆಯ ಎರಡು ಬದಿಗೆ ಒಂದೊಂದು ಎದುರಾಳಿ. ಅಂದರೆ ಈ ಆಟದಲ್ಲಿ ಕೇವಲ ಇಬ್ಬರೂ ಮಾತ್ರ ಆಡುವರು. ಮೊದಲು ಎಲ್ಲ ಮನೆಗಳಿಗೆ ಐದರಂತೆ ಬೀಜಗಳನ್ನು ತುಂಬಿ, ಯಾರಾದರೊಬ್ಬರು ಮೊದಲು ಆಟ ಪ್ರಾರಂಭಿಸುವರು.





ಛಾಯಾಚಿತ್ರ- ೫..೬ ಚೆನ್ನಮಣೆ ಆಟ

ಯಾವುದಾದರೂ ಒಂದು ಮನೆಯ ಐದು ಬೀಜಗಳನ್ನು ತೆಗೆದುಕೊಂಡು ತಮ್ಮ ಬಲಬದಿಯ ಗುಳಿಗೆ ಒಂದರಂತೆ ಹಾಕಬೇಕು. ಮುಗಿದಾಗ ಮುಂದಿನ ಮನೆಯ (ಗುಳಿಯ) –ನ್ನು ಮುರಿದು ಅದಕ್ಕೆ ಹಾಕದೇ ಅದರ ಮುಂದಿನ ಮನೆಗೆ ಹಾಕುತ್ತಾ ಹೋಗಬೇಕು. ಹೀಗೆ ಹಾಕುವಾಗ ಖಾಲಿಮನೆ ಸಿಕ್ಕಿದರೆ ಅದನ್ನು ಬೆರಳುಗಳಿಂದ ಸವರಿ ಮುಂದಿನ ಮನೆಯ ಬೀಜಗಳನ್ನು ತೆಗೆದಿಟ್ಟುಕೊಳ್ಳಬೇಕು. ಅವು ಗೆದ್ದ ಬೀಜಗಳು, ಅಲ್ಲಿಗೆ ಒಬ್ಬರ ಆಟ ಮುಗಿಯಿತು. ಮನೆ ಬಿಟ್ಟು ಬೀಜವಿದ್ದರೆ ಎಷ್ಟೇ ಮನೆಗಳಿದ್ದರೂ ಸವರಿ ತೆಗೆದುಕೊಳ್ಳಬಹುದು. ಎದುರು ಬದರು ಮನೆಗಳು ಖಾಲಿ ಇದ್ದರೂ ಹೀಗೆ ಮಾಡಬಹುದು. ಒಂದು ಮನೆಯಲ್ಲಿ ನಾಲ್ಕು ತೆಗೆದಿಟ್ಟುಕೊಳ್ಳಬಹುದು.

ಹೀಗೆ ಕೊನೆಯಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಬೀಜಗಳಿರುವ ತನಕವೂ ಆಡಬಹುದು. ಕೊನೆಯಲ್ಲಿ ಎಣಿಸಿ ನೋಡಿದಾಗ ಅರ್ಧಕ್ಕಿಂತ ಕಡಿಮೆ ಇದ್ದರೆ ಅಷ್ಟು ಸೋತಂತೆ. ಹೆಚ್ಚಿದ್ದರೆ ಗೆದ್ದಂತೆ. ಒಂದು ಮನೆಗೆ ಐದಕ್ಕಿಂತ ಕಡಿಮೆ ಬೀಜ ತುಂಬುವಂತಿಲ್ಲ. ಹೀಗೆ ಕೊನೆಯಲ್ಲಿ ತಮ್ಮ ಕಡೆ ಒಂದು ಮನೆಯನ್ನು ತುಂಬಲಾಗದಾಗ ಸಂಪೂರ್ಣ ಸೋಲು ಒಬ್ಬರಿಗೆ, ಇನ್ನೊಬ್ಬರಿಗೆ ಸಂಪೂರ್ಣ ಗೆಲವು. ಈ ಆಟವನ್ನು ಹೆಚ್ಚಾಗಿ ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಆಡುವರು. ಅಲ್ಲದೆ ಬೇಸಿಗೆಯಲ್ಲಿಯೂ ಅಂಗಳದಲ್ಲಿ ಚೆನ್ನಮಣೆಯನ್ನಿಟ್ಟು ಆಡುವರು.

೫.೯.೫ ಗೋಲಿ ಆಟ : ಈ ಮೊದಲು ಗಾಜಿನ ಗೋಲಿ ಬರುವುದಕ್ಕಿಂತ ಪೂರ್ವದಲ್ಲಿ ಮಕ್ಕಳು ನೆಲ್ಲಿಕಾಯಿಯನ್ನು ಗೋಲಿಗಳನ್ನಾಗಿ ಉಪಯೋಗಿಸಿ ಆಟವಾಡುತ್ತಿದ್ದರು. ಯಾವಾಗ ಗಾಜಿನ ಗೋಲಿಗಳು ಮಾರುಕಟ್ಟೆಗೆ ಬಂದವೋ ಆವಾಗ ಮಕ್ಕಳು ಈ ಆಧುನಿಕ ಗೋಲಿಗಳನ್ನು ಉಪಯೋಗಿಸುವುದನ್ನು ಪ್ರಾರಂಭಿಸಿದರು. ಈ ಆಟದಲ್ಲಿ ಒಂದು ಉದ್ದವಾದ ಸರಳ ರೇಖೆಯನ್ನು ಬರೆದು ಅದರ ಮೇಲೆ ಗೋಲಿಗಳನ್ನಿಟ್ಟು ದೂರದಿಂದ ಪ್ರತಿಯೊಬ್ಬರು ತಮ್ಮ ತಮ್ಮ ಗೋಲಿಗಳನ್ನು ಸರಳರೇಖೆಯ ಗೋಲಿಯ ಕಡೆಗೆ ಎಸೆಯುವರು. ಯಾರ ಗೋಲಿಯು ಸರಳ ರೇಖೆಯ ಗೋಲಿಗಳ ಹತ್ತಿರ ಬಂದಿರುತ್ತದೆ. ಆತನು ಮೊದಲು ಆಡುತ್ತಾನೆ. ನಂತರ ಎರಡನೆಯವನು ಹೀಗೆ ಕೊನೆಯವರೆಗೂ ಆಟ ಸಾಗುತ್ತದೆ. ಯಾರು ಗೆಲ್ಲದೆ ಇದ್ದಾಗ ಆಟ ಗೆಲ್ಲುವವರೆಗೂ ಹಾಗೆ

ಮುಂದುವರೆಯುತ್ತದೆ. ಯಾರಾದರೂ ಗೆದ್ದರೆ ಮತ್ತೆ ಎಲ್ಲರೂ ಸರಳ ರೇಖೆಯಲ್ಲಿ ಗೋಲಿಗಳನ್ನು ಹಚ್ಚಿ ಮತ್ತೊಂದು ಆಟ ಪ್ರಾರಂಭಿಸುವರು. ಈ ಆಟವು ಅವರಲ್ಲಿ ಗುರಿ ಯಾವ ರೀತಿಯಾಗಿ ಇಡಬೇಕು ಎಂಬುದನ್ನು ಕಲಿಸುತ್ತದೆ.




ಛಾಯಾಚಿತ್ರ- ೫ . ೭ ಗೋಲಿ ಆಟ

೫.೯.೬ ಟೋಪಿ ಆಟ : ಇದು ಸಾಮಾನ್ಯವಾಗಿ ಗಂಡು ಮಕ್ಕಳ ಆಟ. ಈ ಆಟವನ್ನು ಪ್ರಾಥಮಿಕ ಶಾಲೆಗಳಲ್ಲಿ ಆಡಿಸುವರು. ಆಡುವವರೆಲ್ಲರೂ ವೃತ್ತಾಕಾರವಾಗಿ ಸುಖಾಸನ ಹಾಕಿಕೊಂಡು ಒಳಮುಖವಾಗಿ ಕುಳಿತುಕೊಳ್ಳಬೇಕು. ಯಾರಾದರೊಬ್ಬರು ತಮ್ಮ ಟೋಪಿಯನ್ನೋ ಅಥವಾ ಯಾವುದೇ ಅರಿವೆಯ ಹುರಿಯನ್ನೋ ಕೈಯಲ್ಲಿ ಹಿಡಿದುಕೊಂಡು ಕುಳಿತ್ತಿರುವುದರ ಹಿಂದುಗಡೆ ಸುತ್ತಲೂ ತಿರುಗುತ್ತಾ ಬುದ್ಧಿವಂತಿಕೆಯಿಂದ ಒಬ್ಬನ ಹಿಂದೆ ಕೈಗೆ ನಿಲುಕದಂತೆ ಅದನ್ನು ಇಡಬೇಕು. ಕೂತವನಿಗೆ ತನ್ನ ಹಿಂದೆ ಟೋಪಿ ಅಥವಾ ಅರಿವೆಯ ಹುರಿ ಇದೆ ಎಂಬ ಭಾವನೆ ಬರದೆ ಇದ್ದರೆ ಟೋಪಿ ಅಥವಾ ಹುರಿ ಹಾಕಿದ ವ್ಯಕ್ತಿ ಒಂದು ಸುತ್ತು ಹಾಕಿ ಟೋಪಿಯಿಂದ ಆತನಿಗೆ



ಛಾಯಾಚಿತ್ರ- ೫ . ೮ ಟೋಪಿ ಆಟ





ಹೊಡೆಯಲು ಪ್ರಾರಂಭಿಸಿದಾಗ ತನ್ನ ಹಿಂದೆ ಮನೆ ಇದೆ ಎಂದು ತಿಳಿದು ಆತನು ಓಡಲು ಪ್ರಾರಂಭಿಸುವನು. ಟೋಪಿ ಒಗೆದ ವ್ಯಕ್ತಿ ಹೊಡೆಯುತ್ತಾ ಹೋಗುವನು. ಅವನ ಸ್ಥಳ ಬಂದಾಗ ಆತನ ಸ್ಥಳದಲ್ಲಿ ಟೋಪಿ ಎಸೆದ ವ್ಯಕ್ತಿ ಕುಳಿತುಕೊಳ್ಳುವನು. ಹೀಗೆ ಬೇಕಾದವರ ಹಿಂದೆ ಟೋಪಿ ಅಥವಾ ಅರಿವೆ ಹುರಿ ಒಗೆಯುತ್ತಾ ಹೋಗುವನು. ಯಾರಾದರೂ ತನ್ನ ಹಿಂದೆ ಟೋಪಿ ಬಿದ್ದಿದೆ ಎಂದು ತಿಳಿದಾಗ ಆತನು ಅದನ್ನು ತೆಗೆದುಕೊಂಡು, ಒಗೆದ ವ್ಯಕ್ತಿಗೆ ಹೊಡೆಯುತ್ತಾ ಹೋಗುವನು. ಟೋಪಿ ಅಥವಾ ಅರಿವೆ ಹುರಿ ಒಗೆದಾತ ಆತನ ಸ್ಥಳವನ್ನು ಆಕ್ರಮಿಸಿಕೊಂಡು ಕುಳಿತುಕೊಳ್ಳುವನು. ಇದು ಹೀಗೆಯೆ ಆಟ ಮುಂದುವರೆಯುತ್ತದೆ. ತಮಗೆ ಸಾಕಾದಾಗ ಒಬ್ಬೊಬ್ಬರಂತೆ ಕಡಿಮೆಯಾಗಬಹುದು.

೫.೯.೭ ಮರಕೋತಿ ಆಟ : ಇದು ಗಂಡು ಮಕ್ಕಳು ಆಡುವ ಆಟ. ಆಡುವವರೆಲ್ಲರೂ ಮೂವರಂತೆ ಕೂಡಿಕೊಂಡು ಚಪ್ಪಾಳೆ ಹಾಕುವವರು. ಇಬ್ಬರೂ ಒಂದು, ಇನ್ನೊಬ್ಬ ಬೇರೆ ಚಪ್ಪಾಳೆ ಹಾಕಿದ ಎಂದರೆ ಆತ ಗೆದ್ದಂತೆ. ಹೀಗೆ ಎಲ್ಲರೂ ಹಾಕುತ್ತಾ ಹೋಗುವರು. ಯಾರು ಇಬ್ಬರಿಗಿಂತ ಭಿನ್ನ ಹಾಕುವನೋ ಆತ ಗೆದ್ದಂತೆ.



ಛಾಯಾಚಿತ್ರ - ೫ . ೯ ಮರಕೋತಿ ಆಟ

ಹೀಗೆ ಎಲ್ಲರೂ ಗೆದ್ದನಂತರ ಒಬ್ಬ ಹಿಡಿಯುವನು ಇರುವನು. ಗೆದ್ದ ಎಲ್ಲರೂ ಮರವನ್ನು ಏರಿ ಮಂಗಗಳಂತೆ ಕುಳಿತುಕೊಳ್ಳುವರು. ಹಿಡಿಯುವಾತ ಓಡಿ ಹೋಗಿ ಅವರು ಎಸೆದ ಸುಮಾರು ಒಂದು ಅಂಗುಲ ಉದ್ದದ ಕೋಲನ್ನು ಆತ ತಂದು ಅದನ್ನು ನಿಗದಿಪಡಿಸಿದ ಜಾಗದಲ್ಲಿ ಇಟ್ಟು ಮರಹತ್ತುವನು. ಆತ ಮರ ಹತ್ತುವ ಪೂರ್ವದಲ್ಲಿಯೇ ಮರ ಹತ್ತಿದವರಲ್ಲೊಬ್ಬ ಆ ಕೋಲನ್ನು ಮುಟ್ಟಿದರೆ ಆತ ಸೋತಂತೆ. ನಂತರ ಮೊದಲಿನ ಹಾಗೆ ಮರದಲ್ಲಿರುವವನೊಬ್ಬ ಕೋಲನ್ನು ಎಸೆಯುವನು. ಅವರನ್ನು ಹಿಡಿಯುವವ ಓಡಿಹೋಗಿ ತಂದು, ಅದನ್ನು ನಿಗದಿಪಡಿಸಿದ ಕೋಲು ಮುಟ್ಟುವದಕ್ಕಿಂತ ಪೂರ್ವದಲ್ಲಿ ಹಿಡಿದರೆ ಆತ ಗೆದ್ದಂತೆ. ಹಿಡಿದವ, ಅವನಂತೆ ಕೋಲನ್ನು ತಂದು ಮರ ಹತ್ತಿದವರನ್ನು ಹಿಡಿಯಬೇಕು. ಆಟವು ಹೀಗೆಯೆ ಮುಂದುವರಿಯುತ್ತದೆ.



೫.೯.೮ ಗೋಲಿ ಆಟ : ಇದು ಗಂಡು ಮಕ್ಕಳ ಆಟ. ಗೆರೆ ಹೊಡೆದು ಆಡುವದು ಒಂದು ಬಗೆ. ಇನ್ನೊಂದು ಬಗೆಯ ಗೋಲಿ ಆಟವಿದೆ. ನೆಲದಲ್ಲಿ ಒಂದು ಗುಳಿ ತೋಡಿ ಆಡುವದು. ಎಲ್ಲರೂ ನಿಗದಿಯಾದ ದೂರದಿಂದ ಗುಳಿಯ ಕಡೆಗೆ ಗೋಲಿ ಬಿಡಬೇಕು. ಒಂದೇ ಎಸೆತಕ್ಕೆ ಗೋಲಿಯನ್ನು ಗುಳಿಗೆ ತುಂಬಿದರೆ ಗೆದ್ದಂತೆ. ಹಿಗೆ ಗೋಲಿ ಎಸೆದಾಗ ಗುಳಿಯ ಹತ್ತಿರವಿರುವ ಗೋಲಿ ಕುಳ್ಳಿ, ಅತಿ ದೂರದಲ್ಲಿರುವ ಗೋಲಿ ಗಟ್ಟಿ, ಒಪ್ಪಂದದಂತೆ ಗಟ್ಟಿ ಗೋಲಿಯವನೋ, ಕುಳ್ಳಿ ಗೋಲಿಯವನೋ ಮೊದಲು ಆಡಬೇಕು. ಆತನು ಗುಳಿ ತುಂಬಿ ಯಾವುದಾದರೊಂದು ಗೋಲಿಗೆ ಹೊಡೆಯಬೇಕು. ಮತ್ತೆ ಗುಳಿ ತುಂಬಬೆಕು, ಮತ್ತೆ ಹ್ರೆಡೆಯಬೇಕು. ಹೀಗೆ ಆಡುವಾಗ ಎಲ್ಲಿತಪ್ಪಿದರೂ ಅವನ ಆಟ ಅಲ್ಲಿಗೆ ನಿಲ್ಲುತ್ತದೆ. ಮತ್ತೆ ಮುಂದಿನ ಕುಳ್ಳಿ ಅಥವಾ ಗಟ್ಟಿ ಗೋಲಿಯವನ ಆಟ. ಹೀಗೆ ಮೊದಲು ಹತ್ತು ಮಾಡಿದವನು ಗೆದ್ದಂತೆ. ಒಬ್ಬ ಹತ್ತು ಮಾಡಿಬಿಟ್ಟರೆ ಬಾಕಿಯವರ ಲೆಕ್ಕವೆಲ್ಲ ವಜಾ ಆದಂತೆ. ಅವರು ಮತ್ತೆ ಮೊದಲಿನಿಂದ ಆಡಬೇಕು. ಹೀಗೆ ಕೊನೆಯಲ್ಲಿ ಉಳಿಯುವವನೆ ಸೋತಂತೆ.



ಛಾಯಾಚಿತ್ರ - ೫ . ೧೦ ಗೋಲಿ ಆಟ

ಹೀಗೆ ಸೋತವ ತನ್ನ ಗೋಲಿಯನ್ನು ನಿಗದಿಯಾದ ದೂರದಿಂದ ಗುಳಿಯ ಕಡೆಗೆ ಎಸೆದು ತುಂಬಲು ಪ್ರಯತ್ನಿಸಬೇಕು. ತುಂಬಿದರೆ ಮೊದಲು ಗೆದ್ದವನಿಗೆ ಆಟ ಕೊಟ್ಟಂತಾಯಿತು. ಮತ್ತೆ ಎರಡನೆಯವನಿಗೆ, ಆದರೆ ಗೋಲಿ ಗುಳಿಗೆ ಬೀಳದಿದ್ದರೆ ಗೆದ್ದವನು ಗುಳಿಯ ಹತ್ತಿರದಿಂದ ಸೋತವನ ಗೋಲಿಯನ್ನ ಹ್ರೆಡೆದು ದೂರ ಓಡಿಸುತ್ತಾನೆ. ಅದನ್ನು ಸೋತವನು ಒಪ್ಪಂದದಂತೆ ಬೆರಳುಗಳಿಂದಲೋ, ಮೊಳಕೈಯಿಚಿದಲೋ ತಳ್ಳಬೇಕು. ಗುಳಿ ತುಂಬಲು ಯತ್ನಿಸಬೆಕು. ತುಂಬಿದರೆ ಗೆದ್ದ, ಇಲ್ಲದಿದ್ದರೆ ಮತ್ತೆ ಹೊಡೆತ, ಮತ್ತೆ ದೇಕಬೇಕು. ಗುಳಿ ತುಂಬಿ ಆಟ ಕೊಡಬೇಕು. ಹೀಗೆ ಆಟ ಮುಂದುವರೆಯುತ್ತದೆ.

ಈ ಆಟದಲ್ಲಿ ಅನೇಕ ಪ್ರಕಾರಗಳಿವೆ. ಹೊನಿಗನ್ನೆ, ಹೊನಕೆರಡು, ಬಂಗಲಿ, ಬಾಲ ಇತ್ಯಾದಿ.

೫.೯.೯ ಲಗೋರಿ ಆಟ ಅಥವಾ ಚೆಂಡಾಟ : ಇದು ಸಾಮಾನ್ಯವಾಗಿ ಮಕ್ಕಳ ಆಟ. ಇದರಲ್ಲಿ ಅನೇಕ ಆಟಗಳಿವೆ. ಅವುಗಳಲ್ಲಿ ಲಗ್ಗೆ ಚೆಂಡು ಆಟವೂ ಒಂದು. ಲಗ್ಗೆ ಚೆಂಡಿಗೆ

ಚಪ್ಪಟೆಯಾದ ಸುಮಾರು ಎಂಟು ಹತ್ತು ಅಂಗುಲ ಆಯತಾಕಾರದ ಕಲ್ಲು ಮತ್ತು ಆಡಲು ಒಂದು ಹಳೇ ಅರಿವೆಯನ್ನು ಪಟ್ಟಿಪಟ್ಟಿಯಾಗಿ ಹರಿದು ಸುತ್ತಿ ಬಿಚ್ಚಿಕೊಳ್ಳದಂತೆ ಹೊಲೆದ ಚೆಂಡು, ಇಷ್ಟು ಸಾಕು. ಕಲ್ಲು ಸಿಗದಿದ್ದರೆ ಮಡಿಕೆಯ ಚೂರುಗಳು ಅಥವಾ ಕಟ್ಟಿಗೆಯ ಅಥವಾ ಹಂಚಿನ ಚೂರುಗಳನ್ನು ಒಂದರ ಮೇಲೊಂದಿಟ್ಟು ಸುಮಾರು ಐದಾರು ಅಂಗುಲ ಎತ್ತರ ಬರುವಂತೆ ಸೇರಿಸಿಡುವರು. ಅದಕ್ಕೆ ಲಗ್ಗೆ ಎಂದು ಕರೆಯುತ್ತಾರೆ. ಆಡುವವರೆಲ್ಲರೂ ಸಮನಾಗಿ ಎರಡು ಗುಂಪುಗಳಾಗಿ ವಿಭಜನೆಗೊಳ್ಳುವರು. ಒಂದು ಲಗ್ಗೆಗೆ ಹೊಡೆಯುವವರ ಗುಂಪು, ಇನ್ನೊಂದು ಲಗ್ಗೆ ಕಾಯ್ದು ಕೊಂಡಿದ್ದು ಚೆಂಡೇನಾದರೂ ಪುಟಿದೆದ್ದು ಬಂದರೆ ಅನುವವರು ಒಂದು ಗುಂಪು. ಪ್ರತಿಯೊಬ್ಬರಿಗೂ ಮೂರು ಅವಕಾಶ. ಆಕಸ್ಮಾತ ಚೆಂಡನ್ನು ಹಿಡಿದರೆ ಮೊದಲು ಎಸೆತವಾಗಿದ್ದರೂ ಲಗ್ಗೆ ಬಿದ್ದಿದ್ದರೂ ಆಟ ಹೋಯಿತು. ಮುಂದಿನವನಿಗೆ ಅವಕಾಶ.



ಛಾಯಾ ಚಿತ್ರ- ೫ . ೧೧ ಲಗೋರಿ ಆಟ ಅಥವಾ ಚಂಡಾಟ

ಲಗ್ಗೆ ಬಿದ್ದು ಚೆಂಡು ಆನಲು ಸಿಗದೇ ಹೋದರೆ ಲಗ್ಗೆ ಬೀಳಿಸಿದ ಪಂಗಡ ಚೆಂಡನ್ನು ಅವಿತಿಟ್ಟುಕೊಳ್ಳುತ್ತಾರೆ. ಯಾರಲ್ಲಿದೆ ಎಂಬುವುದು ಅವರಿಗೆ ಮಾತ್ರ ಗೊತ್ತು. ಆದರೆ ಪ್ರತಿಯೊಬ್ಬನೂ ತನ್ನ ಹತ್ತಿರ ಚೆಂಡು ಇರುವವನಂತೆ ನಟಿಸಿ ಲಗ್ಗೆ ಕಾಯುತ್ತಿದ್ದ ಗುಂಪಿನವರನ್ನೂ "ಹರತ್ತೋ ಹರತ್ತೋ" ಎಂದು ಕೂಗುತ್ತಾ ಹೊಡೆಯಲು ಅಟ್ಟಿಸಿಕೊಂಡು ಹೋಗುತ್ತಾನೆ. ಚೆಂಡು ಹೊಡೆದು ಯಾರಿಗಾದರೂ ಚೆಂಡು ತಗುಲಿದರೆ ಮತ್ತೆ ಅವಿಚಿಟ್ಟುಕೊಳ್ಳುವುದು. ತಗುಲದಿದ್ದರೂ ಚೆಂಡಿಲ್ಲದವನನ್ನು ಯಾರಾದರೂ ಮುಟ್ಟಿಸಿಕೊಂಡು ಬಿಟ್ಟರೂ ಎಚ್ಚರಿಕೆಯಿಂದ ಮರೆಯಲ್ಲೋಡಿ ಬಂದು ಲಗ್ಗೆಯನ್ನು ಮೊದಲಿನಂತೆ ಒಡ್ಡಿದ್ದರೂ ಗೆದ್ದಂತೆ. ಆಗ ಕಾಯುತಿದ್ದವರು. ಲಗ್ಗೆ ಹೊಡೆದವರಾಗುತ್ತಾರೆ ಹೊಡೆಯುತ್ತಿದ್ದವರು ಲಗ್ಗೆ ಕಾಯುತ್ತಾರೆ. "ಹರತ್ತೋ" ಎಂದು ಕೂಗಿಕೊಂಡು ತಪ್ಪಿಸಿಕೊಂಡು ಹೋಗುವದರಿಂದ ಇದಕ್ಕೆ ವಿಹರತ್ತೊ ಚೆಂಡುಹಿ ಎಂದೂ ಕರೆಯುತ್ತಾರೆ.

೫.೯.೧೦ ಕುದುರೆ ಚೆಂಡು : ಈ ಆಟದಲ್ಲಿ ಎರಡು ಪಂಗಡ. ಇಲ್ಲಿ ಲಗ್ಗೆಯ ಬದಲಾಗಿ ಎರಡು ಕಲ್ಲುಗಳ ಮೇಲೆ ಒಂದು ಅಡ್ಡ ಕಡ್ಡಿ. ನಿಗದಿಯಾದ ದೂರದಿಂದ ಚೆಂಡನ್ನು ಅದರಡಿ ನೇರವಾಗಿ ಎಸೆದು ಕಡ್ಡಿಯನ್ನು ಬೀಳಿಸಬೇಕು. ಬೀಳಿಸದಿದ್ದರೆ ಚೆಂಡನ್ನು ಹೊಡೆಯುತ್ತಿರುವ ಪಂಗಡಕ್ಕೆ ಒಬ್ಬನನ್ನು ಕುದುರೆಯಾಗಿ ಕಳುಹಿಸಬೇಕು.



ಛಾಯಾ ಚಿತ್ರ- ೫.೧೨ ಕುದುರೆ ಚೆಂಡು

ಒಂದು ಗುಂಪಿನವರು ಅಡ್ಡ ಕಟ್ಟಿಗೆಯ ತುಂಡಿನ ಹತ್ತಿರ ನಿಂತುಕೊಂಡು ಒಬ್ಬೊಬ್ಬರು ಮೂರು ಮೂರು ಅವಕಾಶಗಳೊಳಗೆ ದಂಡಿನಿಂದ ಚೆಂಡನ್ನು ಕಾಯುವವರತ್ತ ಎಸೆಯಬೇಕು. ದಂಡನ್ನು ಒಂದು ಸಾರಿ ಬೀಸಿ ಚೆಂಡಿಗೆ ತಾಗದಿದ್ದರೂ ಈ ಅವಕಾಳ ಮುಗಿದಂತೆ ಹ್ರೆಡೆದು ಅದನ್ನ ಎದುರಾಳಿಗಳು ಆತಕೊಂಡು ಬಿಟ್ಟರೆ ಆಯಿತು. ಇಲ್ಲದಿದ್ದರೆ ಹೊಡೆದ ಚೆಂಡನ್ನು ಹಿಡಿದು ಗುರಿಗೆ ಹೊಡೆದು ಅಡ್ಡ ಕಡ್ಡಿಯನ್ನು ಬೀಳಿಸಿದರೂ ಹೊಡೆಯುತ್ತಿರುವ ಪಂಗಡದವರಿಗೆ ಒಬ್ಬ ಆಟಗಾರನನ್ನು ಕುದುರೆಯಾಗಿ ಕಳುಹಿಸಬೇಕು. ಹೊಡೆಯುವವರಲ್ಲಿ ಒಬ್ಬ ಅವನ ಬೆನ್ನೇರಿ ಕುಳಿತುಕೊಳ್ಳುತ್ತಾನೆ. ಹೀಗೆ ಮತ್ತೆ ಅಡ್ಡ ಕಡ್ಡಿ ಬೀಳಿಸುವವರೆಗೂ ಆತ ಕುದುರೆಯಾಗಿರಬೇಕು. ಕೆಲವು ಸಾರಿ ಇಂತಹ ಕುದುರೆಗಳ ಸಾಲೇ ಇರುತ್ತದೆ. ಚೆಂಡನ್ನು ಯಶಸ್ವಿಯಾಗಿ ಗುರಿ ಮುಟ್ಟಿಸಿದಾಗ ಈ ಕುದುರೆಗಳು ಸವಾರನನ್ನು ಎತ್ತಿ ಹಾಕಿ ಓಡುವರು. ಇದು ನೋಡಲು ಮೋಜೆನಿಸುತ್ತದೆ.

೫.೯.೧೧ ಬುಗುರಿ ಆಟ : ಬುಗುರಿಯನ್ನು ಮರದ ತುಂಡಿನಿಂದ ಮಾಡುವರು. ಮರದ ತುಂಡಿಗೆ ಸಣ್ಣದಾದ ಕಬ್ಬಿಣದ ಮಳಿಯನ್ನು ನೆಟ್ಟು, ಅದರ ತುದಿಯನ್ನು ಚೂಪಾಗಿ ಕೆತ್ತಿ, ಕಬ್ಬಿಣದ ಮಳಿ ಕಾಣಿಸುವ ಹಾಗೆ ಮಾಡಿ, ಬುಗುರಿ ತಯಾರು ಮಾಡುತ್ತಾರೆ. ಇದು ಯಾರು ಬೇಕಾದರೂ ಮಾಡಬಹುದು. ಬುಗುರಿಗೆ ದಾರ ಬೇಕು. ಎಲ್ಲರೂ ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ ಒಂದೇ ಸಾರಿಗೆ ಬುಗುರಿ ಆಡಿಸಬೇಕು. ಆಡುತ್ತಿದ್ದಂತಯೆ ಯಾರು ಬುಗುರಿಯನ್ನು ದಾರ ಸುತ್ತಿ ಮೇಲೆಸೆದು ಆಡಲು ತಪ್ಪುವನೋ ಆತನೇ ಬದ್ದಿನಲ್ಲಿ ಬುಗುರಿಯಿಡಬೇಕು



ಛಾಯಾ ಚಿತ್ರ- ೫.೧೩ ಬುಗುರಿ ಆಟ

ಉಳಿದವರು ನೇರವಾಗಿ ಹೊಡೆದು ಅಥವಾ ಆಡುತ್ತಿದ್ದ ಬುಗುರಿಯನ್ನು ಹಾಗೆಯೇ ಬೆರಳುಗಳಿಂದ ಉಪಾಯವಾಗಿ ಎತ್ತಿಯೋ ಅದರ ಮೇಲೆಸೆದು ಅದನ್ನು ಬದ್ದಿನ ಸುತ್ತಣ ವೃತ್ತದಿಂದ ಹೊರಗೋಡಿಸಬೇಕು. ಅದು ಹೊರಟ ತಕ್ಷಣವೇ ಮಿಂಚಿನ ವೇಗದಲ್ಲಿ ಎಲ್ಲರೂ ಬುಗುರಿಯಿಟ್ಟವನು ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ ಆಡಿಸಿ ಮೇಲೆತ್ತಬೇಕು. ಬುಗುರಿ ಹೊರಡಿಸಿದವನ ಬುಗುರಿ ಇನ್ನೂ ಆಡುತ್ತಿದ್ದರೆ ಅದನ್ನು ಅವನು ಮೇಲೆತ್ತಬಹುದು. ಕೊನೆಯಲ್ಲುಳಿದವನೆ ಕಳ್ಳ. ಆಟ ಹೀಗೆಯೇ ಮುಂದುವರೆಯುತ್ತದೆ. ಸೋತವನ ಬುಗುರಿಗೆ ಗುನ್ನ ಹಾಕಿ ಒಡೆಯುತ್ತಾರೆ.

೫.೯.೧೨ ಖೋಖೋ ಆಟ ಈ ಆಟದಲ್ಲಿ ಖೋ ಕೊಡುವರು ಮತ್ತು ಹಿಡಿಯುವವರು ನಾಲ್ಕು ಜನ. ಖೋ ಕೊಡುವವರು ತಮಗೆ ನಿಗದಿಪಡಿಸಿದ ಸ್ಥಳದಲ್ಲಿ ಕುಳಿತುಕೊಳ್ಳುವರು ಒಬ್ಬ ಖೋ ಕೊಡುವನು. ಆಗ ಖೋ ತೆಗೆದುಕೊಂಡ ವ್ಯಕ್ತಿ ಉಳಿದವರನ್ನು ಮುಟ್ಟಲು ಹೋಗುವನು. ಈತನು



ಛಾಯಾ ಚಿತ್ರ- ೫ . ೧೪ ಖೋ ಖೋ ಆಟ

ಎದುರಾಳಿಗೆ ಮುಟ್ಟಿದರೆ ಆತ ಆಟದಿಂದ ಹೊರಕ್ಕೆ ಹೋಗುವನು ಹೀಗೆ ಮೂವರೂ ಆದ ನಂತರ ಮತ್ತೆ ಮೂವರು ಮೈದಾನದಲ್ಲಿ ಬರುವರು. ಹೀಗೆ ಖೋ ಕೊಟ್ಟ ವ್ಯಕ್ತಿ ಎಲ್ಲರನೂ ಮುಟ್ಟಿದರೆ ಅಲ್ಲಿಗೆ ಒಂದು ಹಂತ ಮುಗಿಯಿತು. ಈಗ ಕುಳಿತುಕೊಂಡವರ ಸರದಿ. ಇವರು ಎಲ್ಲರೂ ಮೈದಾನದಿಂದ ಹೊರಗೆ ಹೋದರೆ ಆಟ ಮುಗಿದಂತೆ. ಯಾರು ಮೊದಲು ಎಲ್ಲರನ್ನೂ ಹೊರಗೆ ಕಳಿಸುವರೋ ಅವರು ಗೆದ್ದಂತೆ.

೫.೯.೧೩ ಚಿನ್ನಿ ಈ ಆಟದಲ್ಲಿ ಎರಡು ತಂಡಗಳು ಇರುತ್ತವೆ. ಎರಡು ತಂಡದಲ್ಲಿ ಸಮ ಸದಸ್ಯರಿರುವರು. ...ಟೇ ಮರದ ಸಣ್ಣ ರೆಂಬೆಯನ್ನು ತಂದು ಅದನ್ನು ಒಂದು ಸಣ್ಣಭಾಗ ಮತ್ತು ಮತ್ತೊಂದು ದೊಡ್ಡಭಾಗವಾಗಿ ...ತ್ತರಿಸುವರು. ನಂತರ ಸಣ್ಣ ಭಾಗದ ಎರಡು ಕಡೆಗೆ ಚೂಪಾಗಿ ಕೆತ್ತಿ ಅದನ್ನು ಚಿನ್ನಿ ಎಂದು ಕರೆಯುತ್ತಾರೆ. ಅದೇ ...ತಿಯಾಗಿ ದೊಡ್ಡದಾದ ತುಂಡನ್ನು ಒಂದು ಕಡೆ ಮಾತ್ರ ಚೂಪಾಗಿ ಕೆತ್ತಿ, ಅಂಗಳದಲ್ಲಿ ಒಂದು ಸಣ್ಣ ರಂಧ್ರವನ್ನು ...ರೆದು ಆ ರಂಧ್ರದ ಮೇಲೆ ಚಿನ್ನಿಯನ್ನು ಇಟ್ಟು, ದೊಡ್ಡದಾದ ಕೋಲಿನಿಂದ ಒಂದು ತಂಡದ ಸದಸ್ಯನು ರಭಸವಾಗಿ

ನೂಕುವನು. ಇದನ್ನು ಇನ್ನೊಂದು ತಂಡದ ಸದಸ್ಯರು ಹಿಡಿಯಲು ಪ್ರಯತ್ನಿಸುವರು. ಹಿಡಿದರೆ ಆಟ ಮುಂದುವರೆಯುವಂತಿಲ್ಲ. ಹಿಡಿಯದಿದ್ದರೆ ಚಿನ್ನಿಯ ಒಂದು ತುದಿಗೆ ಹೊಡೆದಾಗ ಅದು ಪುಟಿಯುವದು. ಪುಟಿದಾಗ ಅದಕ್ಕೆ ದಾಂಡಿನಿಂದ ಹೊಡೆಯುವನು ಅದು ಎಷ್ಟು ದೂರದಲ್ಲಿ ಬೀಳುವದೋ ಅದರ ಮೇಲಿಂದ ಇದು ಇಷ್ಟು ದೂರ ಹೋಗಿದೆ ಎಂದು ಹೇಳುವದನ್ನು, ಒಂದು ವೇಳೆ ಆತ ಹೇಳಿದ ದೂರ ಹೋಗದೇ ಇದ್ದರೆ ಆತನು ಆಟ ಮುಂದುವರೆಸುವಂತಿಲ್ಲ. ಇದು ಹೀಗೆ ಎಲ್ಲರ ಸರದಿ ಮುಗಿಯುವವರೆಗೂ ಆಟ ಮುಂದುವರೆಯುತ್ತದೆ. ಎಲ್ಲರ ಸರದಿ ಮುಗಿದಾಗ ಎದುರಾಳಿ ತಂಡದ ಸದಸ್ಯರ ದಾಂಡು ಹಿಡಿದು ಆಡುವರು. ಇವರು ಮೊದಲಿನವರಕ್ಕಿಂತ ಹೆಚ್ಚಿನ ದೂರಗಳನ್ನು ಮಾಡಿದರೆ ಇವರೇ ಗೆದ್ದಹಾಗೆ. ಈ ಆಟವನ್ನು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿಯೂ ಕಾಣಬಹುದು. ಇದನ್ನು ಚಿನ್ನಿದಾಂಡು ಎಂದು ಕರೆಯುತ್ತಾರೆ

೫.೯.೧೪ ಹುಲಿ-ಕುರಿ ಆಟ : ಇದು ಇಬ್ಬರು ಆಡುವ ಆಟ. ಒಬ್ಬ ಕುರಿ, ಇನ್ನೊಬ್ಬ ಹುಲಿ. ಹದಿನಾರು ಕುರಿಗಳು, ಎರಡು ಹುಲಿಗಳು ಇರುತ್ತವೆ. ಆಟದ ಪ್ರಾರಂಭದಲ್ಲಿ ಓಳ ಎಂಟು ಮನೆಗೆ ಎಂಟು ಕುರಿ ಕೂಡಿಸಬೇಕು. ನಡುವೆ ಒಂದು ಹುಲಿ. ಹೊರ ಚೌಕದ ನಡುಮನೆಯಲ್ಲಿ ಮತ್ತೊಂದು ಹುಲಿಯ ಹಾರಿಕೆಯಿಂದ ಆಟ ಪ್ರಾರಂಭ. ಅದನ್ನ ತಡೆಗಟ್ಟಲು ಕುರಿ ಪ್ರಯತ್ನಿಸಬೇಕು. ಆನೆ-ಕುರಿ ಆಟದಂತೆ ಹುಲಿಯಾಗಲಿ, ಕುರಿಯಾಗಲಿ ಒಂದೇ ಏಟಿಗೆ ಎರಡರ ಮೇಲೆ ದಾಟುಂತಿಲ್ಲ. ಒಂದೊಂದು ಸಾರಿಗೆ ಒಂದೊಂದರಂತೆ ನೆಗೆಯಬಹುದು. ಹುಲಿ ನೆಗೆದರೆ ಕುರಿ ಸಾಯುತ್ತದೆ.



ಛಾಯಾ ಚಿತ್ರ-೫.೧೫ ಹುಲಿ-ಕುರಿ ಆಟ

ಹೀಗೆ ಆಡುತ್ತಾ ಯಾರಾದರೊಬ್ಬರು ಎದುರಿಸಲಾಗದ ಸ್ಥಿತಿಗೆ ಬಂದಾಗ ಆಟ ಮುಕ್ತಾಯದ ಘಟ್ಟಕ್ಕೆ ಬರುತ್ತದೆ. ಅಂದರೆ ಹುಲಿಗೆ ನಡೆಯಲು ಜಾಗವಿಲ್ಲದಂತಿರಬೇಕು. ಇಲ್ಲಿ ಎಲ್ಲಾ ಕುರಿಗಳನ್ನ ತಿಂದುಹಾಕಬೇಕು. ಆಗ ಮಾತ್ರ ಮರುಆಟ ಪ್ರಾರಂಭ.

೫.೯.೧೫ ಪಗಡೆ ಇದು ಮಳೆಗಾಲದಲ್ಲಿ ಮತ್ತು ಬೇಸಿಗೆ ಕಾಲದಲ್ಲಿ ಆಡುವ ಆಟ. ಪಗಡೆಗೆ ಕಸೂತಿ ಹಾಕಿದ ಇಲ್ಲವೇ ಬಣ್ಣ ಬಣ್ಣದ ಬಟ್ಟೆಯಲ್ಲಿ ಹೊಲೆದ ಒಂದು ಹಾಸು ಬೇಕು. ಕೆಂಪು, ಕಪ್ಪು, ಹಸಿರು ಮತ್ತು ಹಳದಿಯ ಪುಟ್ಟ ಘಂಟೆಯ ಆಕಾರದ ಕಾಯಿಗಳನ್ನು ಹಳದಿ, ಹಸಿರು

ಇನ್ನೊಬ್ಬರಿಗೆ ದಂತದ ಘನ ಆಯತಾಕಾರದ ಎರಡು ದಾಳಗಳು ಬೇಕು. ಈ ದಾಳಗಳು ನಾಲ್ಕು ಕಡೆಯೂ ಒಂದು, ಮೂರು ಆರು, ನಾಲ್ಕು ಈ ರೀತಿಯ ದಪ್ಪ ಚುಕ್ಕೆಗಳಿರುತ್ತವೆ. ದಾಳ ಬೀಳುವದಕ್ಕೆ ತೆತ್ತ ಅಥವಾ ಗರ ಎನ್ನುತ್ತಾರೆ. ಎರಡು ದಾಳಗಳಲ್ಲಿ ಒಂದು ಒಂದು ಬಿದ್ದರೆ ಮಗ, ಮೂರು ಮೂರು ಬಿದ್ದರೆ ಇತ್ತಿಗ, ಹೆಚ್ಚೆಂದರೆ ಹನ್ನೆರಡು, ಕಮ್ಮಿ ಎಂದರೆ ಮಗ ತಮ್ಮ ತಮ್ಮ ಬಣ್ಣದ ಕಾಯಿಗಳನ್ನು ವಿರುದ್ಧ ದಿಕ್ಕಿನ ಮನೆಗಳಲ್ಲಿ ಎರಡೆರಡಾಗಿ ಬಲಗಡೆ ೪ ಮಧ್ಯದ ಕಟ್ಟೆ ಮನೆಯಲ್ಲಿ ಎರಡು ಮಧ್ಯದಲ್ಲಿ ಹಣ್ಣಿನ ಮನೆಯಿಂದ ಆರು ಮತ್ತು ಏಳನೆಯ ಮನೆಯಲ್ಲಿ ಒಂದೊಂದು ಹೀಗೆ ಇರಬೇಕು. ಈಗ ಯಾರಾದರೊಬ್ಬರು ಆಟ ಪ್ರಾರಂಭಿಸಿ ತೆತ್ತ ಬೀಳಲೂ ಅಷ್ಟಕ್ಕೂ ಒಂದೇ ಕಾಯಿ ನಡೆಸಬೇಕು. ಹೀಗೆ ನಡೆಸುತ್ತಾ ಒಂದು ಪೂರ್ತಿ ಸುತ್ತು ಬಂದು ಮಧ್ಯದ ಮನೆಯಲ್ಲಿ ಒಳನುಗ್ಗಬೇಕು. ಹಣ್ಣಿನ ಕಾಯಿಗೆ ಗುರುತು ಕೆಂಪು ಮನೆಯಲ್ಲಿ ಅದು ಮಲಗಿಕೊಳ್ಳುವದೇ ಮೊದಲು ಎಲ್ಲ ಕಾಯಿಗಳನ್ನು ಹಣ್ಣ ಮಾಡಿದವರೂ ಗೆಲ್ಲುತ್ತಾರೆ.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮಹಾನವಮಿಯಿಂದ ಪ್ರಾರಂಭಿಸಿ, ದೀಪಾವಳಿಗೆ ಆಟ ಆಡಿದ ಎಲ್ಲ ಸದಸ್ಯರಿಗೆ ತಮ್ಮಲ್ಲಿಯೇ ಹಣವನ್ನು ಕೂಡಿಸಿ ಸಿಹಿ ಊಟ ಮಾಡಿ ಪಗಡೆ ಹಾಸನ್ನು ಕಟ್ಟುವರು. ಮುಂದೆ ಮಹಾನವಮಿಯಿಂದ ಅದನ್ನು ಮತ್ತೆ ಆಡುವರು. ಆದರೆ ಈ ಆಟ ಪ್ರಾರಂಭವಾಯಿತೆಂದರೆ ಅದು ಮುಗಿಯುವವರೆಗೂ ಆಟ ಮುಂದುವರೆಸಲೇಬೇಕು. ನಡುವೆ ಬಿಡುವ ಹಾಗಿಲ್ಲ. ಒಂದು ವೇಳೆ ನಡುವೆ ಬಿಟ್ಟರೆ ಅಪಶಕುನ ಎಂಬ ನಂಬಿಕೆ. ಆದ್ದರಿಂದ ಈ ಆಟವನ್ನು ಆಡುವವರು ಸ್ವಲ್ಪ ಹೆದರಿಕೆಯಿಂದಲೇ ಆಡುವರು. ಆದರೆ ಮಲೆನಾಡಿನ ಜಿಲ್ಲೆಗಳಲ್ಲಿ ಈ ಆಟವನ್ನು ಮಳೆಗಾಲದಲ್ಲಿ ಹೆಣ್ಣು ಗಂಡು ಎಲ್ಲರೂ ಕೂಡಿಕೊಂಡು ಆಡುತ್ತಾರೆ.

ಹೊರಾಂಗಣ ಆಟಗಳು

೫.೯.೧೬ ಕಣ್ಣು ಮುಚ್ಚಾಲೆ : ಇದನ್ನು ಅವಿತೆಗುಮ್ಮನಾಟವೆಂದು ಕರೆಯುತ್ತಾರೆ. ಕಣ್ಣು ಮುಚ್ಚುವ ಅಜ್ಜಿಗೆ ಬದಲಾಗಿ ಹಿಡಿಯಬೇಕಾದವರು ಒಂದು ಕಡೆ ನಿಂತು ತಮ್ಮ ಗೋಡೆಗೋ, ಯಾವುದಕ್ಕೋ ಎದುರಾಗಿ ನಿಂತು ಮುಚ್ಚಿಟ್ಟುಕೊಂಡಿದ್ದು ಬಚ್ಚಿಟ್ಟುಕೊಂಡಿರುವವರನ್ನು ಕಂಡಾಗ ಕೂಗಿಕೊಳ್ಳುವ ಗುಲ್ಲಾರಿಯೋ ಎಂದು ಕರೆಯುತ್ತಾರೆ. ಇದೊಂದು ಸಾಮೂಹಿಕ ಆಟ. ಒಬ್ಬರು ಹಿಡಿಯುವವರು ಉಳಿದವರು ಅವಿತುಕೊಳ್ಳುವವರು, ಹಿಡಿಯುವವರ ಕಣ್ಣು ಮುಚ್ಚಲು ಒಬ್ಬ ಅಜ್ಜಿ. ಇದಕ್ಕೆ ಕಣ್ಣು ಮುಚ್ಚಾಲೆ ಆಟವೆಂದು ಕರೆಯುತ್ತಾರೆ.

ಹಿಡಿಯುವವರ ಕಣ್ಣನ್ನು ಮುಚ್ಚುವ ಅಜ್ಜಿ –
ಕಣ್ಣಾ ಮುಚ್ಚೆ – "ಕಾಡೇಗೂಡೆ
ಉದ್ದಿನ ಮೂಡೆ, ಉರುಳೆ ಹೊಯ್ತು,
ಹಾಲೆಕಂಬ ಹರಿದೆ ಹೊಯ್ತು,
ನಮ್ಮ ಹಕ್ಕಿ ಬಿಟ್ಟೇ ಬಿಟ್ಟೆ,
ನಿಮ್ಮಯ ಹಕ್ಕಿ ಮುಚ್ಚಿಕೊಳ್ಳಿರೋ, ಮುಚ್ಚಿಕೊಳ್ಳಿ" ಎಂದು
ಗಟ್ಟಿಯಾಗಿ ಹಾಡೊಂದನ್ನು ಹೇಳಿ ತನ್ನ ಹಕ್ಕಿ ಬಿಡುತ್ತಾಳೆ.



ಛಾಯಾ ಚಿತ್ರ- ೫ . ೧೬ ಕಣ್ಣು ಮುಚ್ಚಾಲೆ ಆಟ

ಈ ಹಕ್ಕಿ ಬಚ್ಚಿಟ್ಟುಕೊಂಡಿರುವ ಹಕ್ಕಿಗಳನ್ನು ಹಿಡಿಯಬೇಕು. ಯಾವುದಾದರೂ ಬುದ್ಧಿವಚಿತ ಕಳ್ಳ ಹಕ್ಕಿ ಇದಕ್ಕೆ ಕಾಣದಂತೆ ಅಜ್ಜಿಯನ್ನು ಬಂದು ಮುಟ್ಟಿಸಿ ಬಿಟ್ಟರೆ ಮತ್ತೆ ಹಿಡಿಯುತ್ತಿದ್ದ ಹಕ್ಕಿಯೇ ಕಣ್ಣುಮುಚ್ಚಿಕೊಂಡು ಹಿಡಿಯಬೆಕು. ಇಲ್ಲದೇ ಯಾವುದಾದರೂ ಒಂದು ಗುಪ್ತವಾಗಿದ್ದ ಹಕ್ಕಿಯನ್ನು ಕಂಡುಬಿಟ್ಟರೆ ಹೆಸರು ಹಿಡಿದು ಕೂಗಿ ಕಂಡೆ–ಕಂಡೆ ಎಂದು ಹಿಡಿದರಾಯಿತು. ಆ ಹಕ್ಕಿ ಈಗ ಕಣ್ಣು ಮುಚ್ಚಿಕೊಳ್ಳಬೇಕು. ಹೀಗೆ ಆಟ ಮುಂದುವರೆಯುತ್ತದೆ.

೫.೯.೧೭ ಕುಂಟಾಟ

ಇದು ಕೇವಲ ಚಿಕ್ಕ ಮಕ್ಕಳ ಆಟ. ಆಡುವವರೆಲ್ಲರೂ ಒಂದೇಡೆ ಸೇರಿ, ಒಂದು ಚೌಕಾಕಾರದ ಆಟದ ಅಂಕಣವನ್ನು ಬರೆದುಕೊಳ್ಳುತ್ತಾರೆ. ಎಲ್ಲರೂ ಸೇರಿ ಚಪ್ಪಾಳೆ ಹಾಕಬೇಕು. ಯಾರು ಕೈಯನ್ನು ಭಿನ್ನವಾಗಿ ಹಾಕುವರೋ ಅವರು ಆಟಕ್ಕೆ ಅರ್ಹರು. ಹೀಗೆ ಎಲ್ಲರೂ ಚಪ್ಪಾಳೆ ಹಾಕಿದ ನಂತರ ಆಟ ಪ್ರಾರಂಭವಾಗುತ್ತದೆ. ಇಲ್ಲಿ ಎರಡು ತಂಡಗಳನ್ನು ಸಮವಾಗಿ ಮಾಡಿ ಒಂದು ತಂಡದವರು ಅಂಕಣದ ಒಳಗೆ ಮೂವರು ಬರುವರು. ಇದರ ಎದುರಾಳಿ ತಂಡದ ಸದಸ್ಯನು ಒಂದು ಕಾಲು ಊರದೇ ಕುಂಟುತ್ತಾ ಹೋಗಿ ಒಬ್ಬೊಬ್ಬರಂತೆ ಹಿಡಿಯಬೇಕು. ಮೂವರನ್ನು ಹಿಡಿದ ನಂತರ ಮತ್ತೆ ಮೂವರು



ಛಾಯಾ ಚಿತ್ರ- ೫ . ೧೭ ಕುಂಟಾಟ

[illegible]



[illegible]

ಹೀಗೆ ಎಲ್ಲರನ್ನೂ ಹಿಡಿದ ನಂತರ ಎದುರಾಳಿ ತಂಡದ ಸದಸ್ಯರು ಮೂವರಂತೆ ಆಟದ ಅಂಕಣವನ್ನು ಪ್ರವೇಶಿಸುವವರು. ಎದುರಾಳಿ ತಂಡದವರು ಕುಂಟುತ್ತಾ ಹಾಗೆಯೇ ಅವರನ್ನು ಹಿಡಿಯಬೇಕು. ಹೀಗೆ ಎಲ್ಲರ ಸರದಿ ಮುಗಿದಾಗ ಯಾರು ಬೇಗನೆ ಎಲ್ಲರನ್ನು ಹಿಡಿಯುವರೋ ಆ ತಂಡದವರು ಗೆದ್ದಂತೆ. ಇನ್ನೋರ್ವ ತಂಡ ಸೋತಂತೆ. ಹೀಗೆ ಈ ಆಟವು ಅವರಿಗೆ ಸಾಕಾಗುವವರೆಗೂ ಆಡುತ್ತಾರೆ.

೫.೯.೧೮ ಕುಂಟುಬಿಲ್ಲೆ : ಇದು ಹೆಣ್ಣು ಮಕ್ಕಳು ಆಡುವ ಆಟ. ಚೌಕಾಕಾರದ ನಾಲ್ಕು ಅಥವಾ ಎಂಟು ಮನೆಗಳು, ತಮ್ಮ ಅನುಕೂಲಕ್ಕೆ ತಕ್ಕಂತೆ ಎರಡು ಸಾಲಾಗಿ ಬರೆದುಕೊಳ್ಳುವರು. ಮಡಿಕೆಯ ಚೂರೊಂದನ್ನು ವೃತ್ತಾಕಾರವಾಗಿ ಕಟೆದು ಕಾಯಿಯನ್ನು ತಯಾರು ಮಾಡುವರು. ನಂತರ ಅದನ್ನು ಅನುಕ್ರಮವಾಗಿ ಮೊದಲನೆ ಮನೆ, ಎರಡನೆ ಮನೆ ಹೀಗೆ ಇಟ್ಟುಕೊಂಡು ಕುಂಟಬೇಕು. ಈ ಕಾಯಿಯನ್ನು ಹಣೆಯ ಮೇಲೆ ಇಟ್ಟುಕೊಂಡು ಸರಿಯೋ? ಎಂದುಕೊಂಡು ಕಡೆಗೆ ಹೋಗಿ ಮನೆಗಳನ್ನು ನೋಡದೇ ಕಾಯಿಯನ್ನು (ಮಡಕೆ ಚೂರು) ಹಿಂದಕ್ಕೆ ಯಾವುದಾದರೊಂದು ಮನೆಗೆ ಬೀಳುವಂತೆ ಎಸೆಯಬೇಕು. ಆಗ ಅದು ಯಾವುದಾದರೊಂದು ಮನೆಗೆ ಸರಿಯಾಗಿ ಬಿದ್ದರೆ, ಅದು ಅವರ ಮನೆ. ನಂತರ ಕಾಯಿಯನ್ನು ಒಗೆದು ಕುಂಟುತ್ತಾ ಅದಕ್ಕೆ ಪಾದದಿಂದ ಒದೆಯಬೇಕು. ಅದು ಸರಿಯಾಗಿ ಎಲ್ಲ ಮನೆ ದಾಟಿದ ನಂತರ, ಕುಂಟುತ್ತಾ ತನ್ನ ಮನೆಯಲ್ಲಿ ಕಾಲನ್ನೂರಿ ನಂತರ ಕುಂಟುತ್ತಾ ಅದರ ಮೇಲೆ ಪಾದ ಹಾಕಬೇಕು. ಒಂದು ವೇಳೆ ಗುರಿ ತಪ್ಪಿದರೆ, ಮತ್ತೊಬ್ಬರು ಆಟ ಆಡುವರು. ಅವರು ಕುಂಟುತ್ತಾ ಕಾಯಿಯನ್ನು ಸರಿಯಾಗಿ ಮನೆಯಲ್ಲಿಯೇ ಎಸೆಯಬೇಕು. ಆಗ ಅದು ಅವರ ಮನೆಯಾಗುತ್ತದೆ. ಹೀಗೆ ಅವರು ಮನೆಯನ್ನು ತಮ್ಮದನ್ನಾಗಿಸಿಕೊಳ್ಳುತ್ತಾ ಆಟ ಸಾಗುವುದು. ಯಾರು ಹೆಚ್ಚು ಮನೆಗಳನ್ನು ತಮ್ಮದನ್ನಾಗಿರಿಸಿಕೊಳ್ಳುವರೋ ಅವರು ಗೆದ್ದಂತೆ. ಯಾರು ಕಡಿಮೆ ಮನೆಗಳನ್ನು ತಮ್ಮದನ್ನಾಗಿರಿಸಿಕೊಂಡಿರುವರೋ ಅವರು ಸೋತಂತೆ.

೫.೯.೧೯ ಕಬಡಿ : ಇದನ್ನು "ತುತು ತೂತೂ" ಎಂತಲೂ ಕರೆಯುವರು. ಇದಕ್ಕೆ ಚೌಕಾಕಾರದ ಒಂದು ಮನೆಯನ್ನು ಬರೆದು, ಅದಕ್ಕೆ ನಡುವೆ ಒಂದು ಗೆರೆಯನ್ನು ಹೊಡೆಯುವರು. ನಂತರ ಆಕಡೆ ಮತ್ತು ಈ ಕಡೆ ಮುಟ್ಟುವ ಗೆರೆಗಳನ್ನು ಎಳೆಯುವರು. ಇದು ಸಾಮಾನ್ಯವಾಗಿ ಗಂಡು ಮಕ್ಕಳು ಆಡುವ ಆಟ.

ಇದರಲ್ಲಿ ಸಮವಾಗಿ ಎರಡು ಗುಂಪುಗಳು ಇರುತ್ತವೆ. ಯಾವ ಗುಂಪಿನವರು ಕಬಡಿ ತೆಗೆದುಕೊಂಡು ಹೋಗಬೇಕು. ಎನ್ನುವುದಕ್ಕಾಗಿ ಒಂದು ಮಡಕೆಚೂರಿಗೆ ಒಂದು ಕಡೆ ಉಗುಳನ್ನು ಹಚ್ಚಿ ಹಸಿಬೇಕೋ, ಬಿಸಿ ಬೇಕೋ ಎಂದು ಮೇಲೆ ಹಾರಿಸಿದಾಗ, ಯಾರು ಹಸಿ ಅಥವಾ ಬಿಸಿ ಬೇಡಿ ಗೆದ್ದವರೇ ಅವರೇ ಕಬಡಿ ತೆಗೆದುಕೊಂಡು ಹೋಗಬೇಕು. ಕಬಡಿ ತೆಗೆದುಕೊಂಡು ಹೋದಾತ ನಡುವಿನ ಗೆರೆಯನ್ನು ದಾಟಬೇಕು. ಹೀಗೆ ಆಡುವಾಗ ಆತನ ಕೈ ಯಾರಿಗಾದರೂ ತಟ್ಟಿದರೆ, ತಟ್ಟಿಸಿಕೊಂಡವರು ಆಟದಿಂದ ಹೊರಗೆ ಹೋಗಬೇಕು. ಒಂದು ವೇಳೆ ಕಬಡಿ

ತೆಗೆದುಕೊಂಡವನು ಸೆರೆ ಸಿಕ್ಕರೆ ಆತನು ಆಟದಿಂದ ಹೊರಗೆ ಹೋಗಬೇಕು. ಯಾವ ಗುಂಪು ಮೊದಲು ಎಲ್ಲರನ್ನು ಕಳೆದು ಕೊಳ್ಳುವದೋ ಆ ಗುಂಪು ಸೋತಂತೆ. ಎದುರಾಳಿ ಗುಂಪು ಗೆದ್ದಂತೆ. ಇದು ಅಪ್ಪಟ ದೇಶೀಯ ಆಟ. ಇದರಿಂದ ದೇಹ ಗಟ್ಟಿಯಾಗುವದು. ಇದು ಮಲ್ಲ ಯುದ್ಧವನ್ನು ನೆನಪಿಸುತ್ತದೆ.

೫.೯.೨೦ ಬಳೆ ಹಾರಿಸುವ ಆಟ ಇದು ಸಾಮಾನ್ಯವಾಗಿ ಹೆಂಗಸರು ಆಡುವ ಆಟ. ಇದಕ್ಕೆ ಯಾವುದೇ ರೀತಿಯ ಆಟದ ಮೈದಾನದ ಅವಶ್ಯಕತೆಯಿಲ್ಲ. ತಾವು ಎಲ್ಲಿ ಕುಳಿತಿರುವರೋ ಅಲ್ಲಿಯೇ ಆಡಬಹುದು. ಇಲ್ಲಿ ಆಟಗಾರರು ಇಷ್ಟೇ ಇರಬೇಕೆಂದು ನಿಯಮವಿಲ್ಲ. ಇಬ್ಬರಿಗಿಂತ ಹೆಚ್ಚು ಆಟಗಾರರಿದ್ದರೆ ಸಾಕು. ಆಟದಲ್ಲಿ ಆಟಗಾರರೆಲ್ಲರೂ ಸಮನಾಗಿ ಬಳೆಗಳನ್ನು ಹಾಕಬೇಕು. ಆ ಎಲ್ಲ ಬಳೆಗಳನ್ನು ಮೇಲಿನಿಂದ ಒಗೆದು, ಆ ಬಳೆಗಳು ಒಂದಕ್ಕೊಂದು ತಾಗದ ಹಾಗೆ ಒಂದೊಂದನ್ನು ಹಾರಿಸಬೇಕು. ಒಂದು ವೇಳೆ ಯಾವುದಕ್ಕಾದರೂ ತಾಗಿದರೆ ಮುಂದಿನವರು ಆಡುತ್ತಾರೆ. ಹೀಗೆ ಆಟವು ಎಲ್ಲ ಬಳೆಗಳು ಹಾರಿಸುವವರೆಗೂ ಮುಂದುರೆಯುತ್ತಿದೆ. ಎಲ್ಲವೂ ಮುಗಿದಾಗ ಆಟವು ಮುಕ್ತಾಯವಾಗುತ್ತದೆ. ಈ ಆಟದಲ್ಲಿ ಸರಿಯಾಗಿ ಬಳೆಗಳನ್ನು ಹಾರಿಸಿದಾತ ಗೆದ್ದಂತೆ.



ಛಾಯಾಚಿತ್ರ-೫.೧೮ ಬಳೆ ಹಾರಿಸುವ ಆಟ

೫.೯.೨೧ ಕೋಲಾಟ ಆಟಗಳಲ್ಲಿಯೇ ಕಲಾತ್ಮಕವೂ ಜನಪ್ರಿಯವೂ ಆದ ಆಟವೆಂದರೆ, ಕೋಲಾಟ. ಇದು ಸುಗ್ಗಿಯ ಕಾಲದಲ್ಲಿ, ಹಬ್ಬ ಹರಿದಿನಗಳಲ್ಲಿ, ಇರುಳು ಬೆಳದಿಂಗಳಿನಲ್ಲಿ ಈ ಆಟ ಆಡುತ್ತಾರೆ. ಈ ಆಟ ಕಣ್ಣಿಗೆ ಹಬ್ಬ, ಕಿವಿಗೆ ಇಂಪು ಕೊಡುವ ಆಟ. ಹೀಗೆ ಉಲ್ಲಾಸಕರವೂ, ಆನಂದದಾಯಕವೂ ಆದ ಆಟ. ಕೋಲಾಟ ಹುಡುಗರಿಂದ ಮುದುಕರವರೆಗೆ ಪ್ರಿಯವಾದುದು. ಈ ಆಟದಲ್ಲಿ ಆಟದ ಸಾಮಾನುಗಳೆಂದರೆ ಕೋಲುಗಳು, ಕೋಲುಗಳ ಮೂಲಕವೇ ಆಟ ವಿವಿಧ ಭಂಗಿಯಲ್ಲಿ ಸಾಗುವುದರಿಂದ ಇದಕ್ಕೆ ಕೋಲಾಟವೆಂದು ಕರೆಯುತ್ತಾರೆ. ಕೋಲುಗಳನ್ನು ನೀರಗಂಜಿ ಮರದಿಂದ ಮಾಡಿರುತ್ತಾರೆ. ಆಟಗಾರರು "ಕೋಲು ಕೋಲಣ್ಣ ಕೋಲೆ, ಕೋಲು ರನ್ನದ ಕೋಲು" ಎಂದು ಹಾಡನ್ನು ಹೇಳುತ್ತಾ ಆಟವನ್ನು ಪ್ರಾರಂಭಿಸುವರು. ಈ ಕೋಲಾಟದಲ್ಲಿ ಹಲವಾರು ಒಳ ಭೇದಗಳಿವೆ. ಅವುಗಳಲ್ಲಿ ಹಸಲರು ಆಡುವ ಆಟಗಳನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ.

೫.೯.೨೨ ಸುತ್ತು ಕೋಲು : ಈ ಆಟದಲ್ಲಿ ಸುಮಾರು ೬ ಜನರಿಂದ ಹಿಡಿದು ೨೦ ಜನಕ್ಕೂ ಮೇಲ್ಪಟ್ಟು ಇರಬಹುದು. ಆಟಗಾರರು ವೃತ್ತಾಕಾರದಲ್ಲಿ ಸುತ್ತುತ್ತಾ ತಮ್ಮೆರಡು ಕೈಗಳಲ್ಲಿನ ಕೋಲುಗಳಿಂದ ಒಂದಕ್ಕೊಂದು ಹೊಡೆಯುತ್ತಿರುತ್ತಾರೆ. ಆದರೆ ಬೇರೆಯವರ ಕೋಲುಗಳಿಗೆ ಅವು ತಗುಲಬಾರದು. ಎಲ್ಲರು ಕಾಲುಗಳು ಒಂದೇ ರೀತಿಯ, ಒಂದೇ ಬಗೆಯ ಲಯ, ಗತ್ತಿನಿಂದ ಕುಣಿಯುತ್ತಿರುತ್ತವೆ. ಹೀಗೆ ಸುತ್ತುತ್ತಾ ತಮ್ಮ ತಮ್ಮಲ್ಲೇ ಕೋಲು ಹುಯ್ಯುತ್ತಾ ಕುಣಿಯುವ ಆಟವಿದು.

೫.೯.೨೩ ಹಾರಗಟಕು : ಕೋಲುಗಳು ಇತರರ ಕೋಲುಗಳಿಗೆ ಹೊಡೆದರೂ ಹೊಡೆಯುವ ಹಾಗೆ ಬಹುಬೇಗ ಹಾರುವುದರಿಂದ ಇದನ್ನು "ಹಾರಗಟಕು" ಎಂದು ಕರೆಯುತ್ತಾರೆ. ಕೋಲಾಟಗಾರರು ಕೋಲುಗಳನ್ನು ಸಾಮಾನ್ಯವಾಗಿ ತಲೆಯ ಮೇಲೆ ಎತ್ತಿ ಮತ್ತೊಬ್ಬರ ಕೋಲುಗಳಿಗೆ ಹೊಡೆಯುತ್ತಾರೆ. ಈ ಕೋಲನ್ನು ಹುಯ್ಯುವಾಗ ವೇಗಕ್ಕೆ ಮತ್ತು ಬಿರುಸಿಗೆ ಪ್ರಾಧಾನ್ಯ ಹೆಚ್ಚು. ಈ ಆಟದಲ್ಲಿ ಹಾಡಿಗಿಂತ ಕುಣಿತಕ್ಕೆ ಹೆಚ್ಚು ಒಲವು. ಇದರಲ್ಲಿ ಎರಡು ವಿಧಗಳಿವೆ. ಮೊದಲನೆಯದು ಎಡಗೈ ಮತ್ತು ಬಲಗೈ ಕೋಲು. ಇದರಲ್ಲಿ ಮೊದಲು ಎಡಗೈ ಕೋಲಿನಿಂದ ಮತ್ತೊಬ್ಬರ ಎಡಗೈ ಕೋಲಿಗೂ ಅನಂತರ ಬಲಗೈ ಕೋಲಿನಿಂದ ಮತ್ತೊಬ್ಬರ ಬಲಗೈ ಕೋಲಿಗೂ ಕೋಲು ಹುಯ್ಯುವುದೇ ಇದರ ರೀತಿ. ಎರಡೂ ಕೈನ ಕೋಲುಗಳನ್ನೂ ಒಂದೇ ಕೈಲಿ ಒಟ್ಟಿಗೆ ಹಿಡಿದು ಇತರರ ಕೋಲುಗಳಿಗೆ ಬಡಿಯುವುದೇ ಎರಡನೇ ರೀತಿಯ ಆಟ.

ಗೀಜುಗನ ಕೋಲು ಎರಡು ಕೋಲುಗಳನ್ನು ಜೋಡಿಸಿಕೊಂಡು ಹೊಡೆಯುವುದೇ ಇದರ ವೈಶಿಷ್ಟ್ಯ ಎಂದೂ ಜನರು ಆಡುತ್ತಿದ್ದರೆ ಎರಡು ಕೈಗಳಲ್ಲು ಜೋಡಿಸಿಕೊಂಡಿರುವ ಕೋಲುಗಳನ್ನು ಎಡಕ್ಕೊಂದು ಬಾರಿ. ಬಲಕ್ಕೊಂದು ಬಾರಿ ಕೊಟ್ಟೊ, ಮೂರನೇ ಏಟಿಗೆ ಎರಡು ಕೈಗಳನ್ನು ಮೇಲೆತ್ತಿ ಹೊಡೆದು, ಬಲದಲ್ಲಿದ್ದವನು ಎಡಕ್ಕೆ, ಎಡದಲ್ಲಿದ್ದವನು ಬಲಕ್ಕೆ ವೃತ್ತಾಕಾರದಲ್ಲಿ ಸುತ್ತುತ್ತಿರುತ್ತಾರೆ. ಹೀಗೆ ಕೋಲನ್ನು ಹುಯ್ಯುವಾಗ "ಬಾರೋ ಗೀಜುಗ, ಬಾರೋ ಗೀಜುಗ, ಹಾರೋ ಮುತ್ತಿನ ಗಿರಣಿ, ಬಾರೋ ಗೀಜುಗ, ಬಾಳೆವನಕ್ಕೆ ಸೈ ಹೋದೇನ ಗೀಜುಗ, ಅಲ್ಲಿ ಬಾಲೇರಿಬ್ರು ಕಾದು ಕೂತವ್ರೆ, ಬಾರೋ ಗೀಜುಗ" ಎಂದು ಹಾಡುವುದು ಸಾಮಾನ್ಯ.

೫.೯.೨೪ ತೇರು ಕೋಲು : ಈ ಕೋಲನ್ನು ಹುಯ್ಯುವಾಗ ಅರ್ಧ ಜನ ಹಿಂದಕ್ಕೆ ಬಾಗುತ್ತಾರೆ. ಉಳಿದರ್ಧ ಜನ ಅವರ ಮೇಲೆ ಬಾಗಿದಂತೆ ಮಾಡಿ, ಹಾಗೆಯೇ ಹಿಂದು ಹಿಂದಕ್ಕೆ ಸಾಗುತ್ತಾ ಹೋಗುತ್ತಾರೆ. ಕೋಲಾಟವಾಡುತ್ತಾ ಊರ ಬೀದಿಯನ್ನೆಲ್ಲಾ ಬಳಸುವರು. ಇದಕ್ಕೆ ತೇರುಕೋಲು ಎಂಬ ಹೆಸರು ಇದೆ. ಬಳಸುವ ಹಾಡು ಸಾಮಾನ್ಯವಾಗಿ "ತೇರಿಗ್ಹೋಗನ ಬನ್ನೀರೆ ಸ್ವಾಮಿ, ರಥಗ್ಹೋಗನ ಬನ್ನಿರೇ" ಎಂದಿರುತ್ತದೆ.

೫.೯.೨೫ ಕಾಲು ಸಂದಿನ ಕೋಲು : ಇದೊಂದು ರೀತಿಯ ವಿಚಿತ್ರ ಕೋಲಾಟ, ಆಟಗಾರರಲ್ಲಿ ಇಬ್ಬಿಬ್ಬರಂತೆ ಎದುರು ಬದುರು ನಿಂತುಕೊಳ್ಳುವರು. ಪ್ರತಿಯೊಬ್ಬರೂ ಮೊದಲು ತನ್ನ ಎಡಗಾಲನ್ನು ಎತ್ತಿ ಎರಡು ಕೈಗಳ ಕೋಲುಗಳನ್ನು ಅಲ್ಲಿ ಒಂದಕ್ಕೊಂದು ಬಡಿಯುತ್ತಾರೆ. ಇದೇ ಸಮಯದಲ್ಲಿ ಎಲ್ಲರೂ ಹೀಗೆಯೇ ಮಾಡುವುದರಿಂದ ಸಪ್ಪಳ ಒಂದೇ ರೀತಿಯಾಗಿ ಬರುತ್ತದೆ. ಇದು ಕೇಳಲು

ಬಹಳ ಹಿತ. ಎರಡು ಕಾಲುಗಳಲ್ಲೂ ಈ ರೀತಿ ಕೋಲು ಹುಯ್ಯುದ ಮೇಲೆ ಮುಂದಕ್ಕೆ ನೆಗೆದು ಮತ್ತೊಬ್ಬನಿಗೆ ಕೋಲು ಕೊಟ್ಟು ಮತ್ತೆ ಮೊದಲಿನಂತೆಯೇ ಕಾಲೆತ್ತಿ ಹುಯ್ಯಲು ಪ್ರಾರಂಭಿಸುತ್ತಾರೆ. ಇದೇ ರೀತಿ ಏಕಪ್ರಕಾರವಾಗಿ ಹಾಡು ಮುಂದುವರೆಯುತ್ತದೆ.

೫.೯.೨೬ ಉಯ್ಯಾಲೆ ಕೋಲು

ಈ ಆಟಕ್ಕೆ ಎಂಟೇ ಆಟಗಾರರು ಬೇಕು. ಪ್ರಾರಂಭದಲ್ಲಿ ಆ ಎಂಟು ಜನರು ವೃತ್ತಾಕಾರದಲ್ಲಿ ನಿಂತು, ಕೋಲು ಹುಯ್ಯುತ್ತಿರುತ್ತಾರೆ. ಎಡಕ್ಕೊಮ್ಮೆ ಬಲಕ್ಕೊಮ್ಮೆ, ಕೋಲನ್ನು ಕೊಡುತ್ತಿದ್ದ ಸಮಯದಲ್ಲಿ "ಉಯ್ಯಾಲೆ, ಬಣ್ಣದ ಉಯ್ಯಾಲೆ, ಸಿರಿಗಂಧ ಕಾಳಪ್ಪನ ಉಯ್ಯಾಲೆ" ಎಂದು ನಾಯಕನಾದವನು ಹಾಡುತ್ತಾನೆ. ಈ ಚರಣಗಳನ್ನು ಪ್ರತಿ ಪದದ ಕೊನೆಯಲ್ಲಿ ಪುನರುಚ್ಚಾರಗೊಳಿಸುವರು. ಉಳಿದವರು "ಉಯ್ಯಾಲೆನಾಡೋಳೆ, ಉಯ್ಯಾಲೆ ನಾಡೋಳೆ, ಉಯ್ಯಾಲೆ ನಾಡೋಳೆ ಸಣ್ಣ ದನಿಯಾಳೆ" ಎಂಬ ಮುಂದಿನ ಸಾಲುಗಳನ್ನು ಹಾಡುವಾಗ ಆಟಗಾರರು ಮಧ್ಯದಲ್ಲಿ ನಾಲ್ವರು ಎದುರೆದುರಾಗಿ ಉಳಿದ ನಾಲ್ವರು ಅಕ್ಕಪಕ್ಕದಲ್ಲಿ ನಿಂತೂ ಕೋಲು ಹುಯ್ಯುತ್ತಾರೆ. ಮುಂದಿನ ಮತ್ತೆರಡು ಸಾಲುಗಳನ್ನು ಉಯ್ಯಾಲೆ, ಸಣ್ಣ ದನಿಯಾಳೆ ಕಾಳವ್ವ ಉಯ್ಯಾಲೆನಾಡೋ ದೊರೆ ಬಂದ ಎಂದು ಹೇಳುವಾಗ ಅಕ್ಕಪಕ್ಕದಲ್ಲಿದ್ದವರೂ ಮಧ್ಯಕ್ಕೆ ಬಂದಿರುತ್ತಾರೆ. ಮಧ್ಯದಲ್ಲಿದ್ದವರು ಅಕ್ಕಪಕ್ಕಕ್ಕೆ ಸರಿದಿರುತ್ತಾರೆ. ಒಂದೇ ಸವನೆ ರಭಸದಿಂದ ಮುನ್ನುಗ್ಗುವರು. ಇದು ನೋಡುಗರ ಕಣ್ಣಿಗೆ ರಸದೌತಣವನ್ನು ನೀಡುವುದು.

೫.೯.೨೭ ತೆಂಗಿನಕಾಯಿ ಜೂಜು

ಇದು ಮಲೆನಾಡು ಪ್ರದೇಶದ ಆದಿವಾಸಿಗಳಲ್ಲಿ ಹೆಚ್ಚು ಜನಪ್ರಿಯವಾದ ಆಟ. ತೆಂಗಿನಕಾಯಿ ಆಟ ಕಾಯಿಯನ್ನು ಒಡ್ಡುವವನು ಕಲ್ಲುಗಳನ್ನು ಮಾರುತ್ತಾನೆ. ಹೊಡೆಯುವವರು ಆ ಕಲ್ಲುಗಳನ್ನು ಕೊಂಡುಕೊಳ್ಳಬೇಕು. ಕೊಂಡುಕೊಂಡ ಮೇಲೆ ನಿರ್ದಿಷ್ಟವಾದ ದೂರದಿಂದ ಕಾಯಿಗೆ ಕಲ್ಲನ್ನು ಬೀಸಿ ಹೊಡೆಯುತ್ತಾರೆ. ಮೊದಲ ಏಟಿಗೆ ಕಾಯಿ ಒಡೆದರೆ ಕಾಯಿ ಒಡೆದವರಿಗೆ ಆ ಕಾಯಿ ಪುಕ್ಕಟೆಯಾಗಿ ಸಿಗುತ್ತದೆ. ಹಾಗಾಗದಿದ್ದರೆ ಮುಂದೆ ಕಾಸಿನ ಎಣಿಕೆ ಪ್ರಾರಂಭವಾಗುತ್ತದೆ. ಹೀಗೆ ಇವರು ಆಟ ಆಡುವಾಗ ಪ್ರೇಕ್ಷಕರು ಕೂಡ ದುಡ್ಡನ್ನು ಕಟ್ಟಿ ಜೂಜಿಗೆ ಸಕ್ರಿಯವಾಗಿ ಭಾಗವಹಿಸುವರು. ಆಗ ಹೊಡೆಯುವವನಿಗೆ ಹುರುಪು ಹುಮ್ಮಸ್ಸು ತುಂಬುವರು. ಆಟ ಬಹಳ ಮೋಜಿನಿಂದ ಸಾಗುತ್ತದೆ. ಈ ಆಟಕ್ಕೆ ಮೋಜು ದೊರೆತರೂ ಜೂಜು ಎಂಬುದನ್ನು ಮರೆಯುವಂತಿಲ್ಲ. ಕಾಯಿಯನ್ನು ಒಡ್ಡುವವನು ಉದ್ದೇಶಪೂರ್ವಕವಾಗಿ ಬೇಗನೆ ಕಲ್ಲಿಗೆ ಸಿಗದ ಪಿಚ್ಚ ಕಾಯಿಗಳನ್ನು ತರುವನು.



ಛಾಯಾಚಿತ್ರ-೫.೨೮ ತೆಂಗಿನಕಾಯಿ ಜೂಜು

೫.೯.೨೮ ಕಲ್ಲೊ ಮಣ್ಣೊ ಆಟ : ಈ ಆಟವನ್ನು ಯಾರು ಬೇಕಾದರೂ ಆಡಬಹುದು. ಈ ಆಟದಲ್ಲಿ ಹಿಡಿಯುವವನೊಬ್ಬ, ಹಿಡಿಸಿಕೊಳ್ಳುವವರು. ಹೀಗೆ ಎರಡು ತಂಡಗಳಿರುತ್ತವೆ. ಎಡಗೈ ಹಸ್ತದ ಮೇಲೆ ಬಲಗೈ ಹಸ್ತವನ್ನು ತಾಳ ಹಾಕುವುದರ ಮೂಲಕ ಹಿಡಿಯುವವನನ್ನು ನಿರ್ಧರಿಸುವರು. ಸೋತ ವ್ಯಕ್ತಿ ಹಿಡಿಯಲು ತೊಡಬೇಕಾಗುತ್ತದೆ. ಆಗ ಹಿಡಿಯುವವನು ಉಳಿದವರನ್ನು ಕಲ್ಲೊ ಮಣ್ಣೊ ಎಂದು ಕೇಳುತ್ತಾನೆ. ಆಗ ಅವರು ಕಲ್ಲು ಎಂದರೆ ಅವರು ಕಲ್ಲಿನ ಮೆಲೆ ನಿಂತಾಗ ಹಿಡಿಯಬೆಕು. ಮಣ್ಣು ಎಂದರೆ ಅವರು ಮಣ್ಣಿನ ಮೆಲೆ ನಿಂತಾಗ ಹಿಡಿಯಬೇಕು. ಅವರು ಅಷ್ಟು ಸುಲಭವಾಗಿ ಹಿಡಿಯುವವನ ಕೈಗೆ ಸಿಗುವದಿಲ್ಲ. ಕಲ್ಲು ಎಂದು ಹೇಳಿ, ಮಣ್ಣಿನ ಮೇಲೆ ಮಣ್ಣು ಎಂದು ಹೇಳಿ, ಕಲ್ಲಿನ ಮೆಲೆ ನಿಂತರೆ ಈತನು ಅವರನ್ನು ಹಿಡಿಯುವಂತಿಲ್ಲ. ಆಟವೂ ಸಾಗುವದಿಲ್ಲ. ಆದ್ದರಿಂದ ಅವರು ಆಟ ಬಿಟ್ಟುಕೊಡಬೇಕಾಗುತ್ತದೆ. ಅಂದರೆ ಅವರು ಕಲ್ಲಿಂದ ಮಣ್ಣಿಗೂ, ಮಣ್ಣಿನಿಂದ ಕಲ್ಲಿಗೂ ಓಡಾಡುತ್ತಿರುತ್ತಾರೆ. ಹೀಗೆ ಮಾಡುವುದರಿಂದ ಆಟ ಮುಂದುವರೆಯುತ್ತದೆ. ಹಿಡಿಯುವವ ಮತ್ತು ಹಿಡಿಸಿಕೊಳ್ಳುವವ ಇಬ್ಬರೂ ಜಾಗರೂಕತೆಯಿಂದ ಇರಬೇಕಾಗುತ್ತದೆ. ಅವರ ಹೇಳಿಕೆಗೆ ವಿರುದ್ಧವಾಗಿ ಅವರು ನಿಂತರೆ, ಅವರನ್ನು ಕಾಯುವವ ಮುಟ್ಟಿದರೆ ಮುಟ್ಟಿಸಿಕೊಂಡ ವ್ಯಕ್ತಿ ಸೋತಂತೆ. ಆಗ ಆತನು ಕಾಯಬೇಕಾಗುತ್ತದೆ. ಉಳಿದವರು ಕಲ್ಲಿಗೂ ಮಣ್ಣಿಗೂ ಓಡಾಡಿಕೊಂಡು ಆಟ ಮುಂದುವರಿಸುತ್ತಾರೆ. ಈ ಆಟವು ಹುಡುಗರಲ್ಲಿ ಜಾಗರೂಕತೆ ಮತ್ತು ನೇರ ದೃಷ್ಟಿ ಬೆಳೆಯಲು ಸಹಾಯಕವಾಗುತ್ತದೆ.



ಛಾಯಾಚಿತ್ರ- ೫ . ೨೦ ಕಲ್ಲೋ ಮಣ್ಣೋ ಆಟ

೫.೯.೨೯ ಕ್ರಿಕೆಟ್ : ಇದು ಆಧುನಿಕ ಪಾಶ್ಚಾತ್ಯ ಆಟವಾದರೂ ಕೂಡಾ ಆದಿವಾಸಿಗಳಲ್ಲಿಯೂ ಈ ಆಟ ಆಡುವುದನ್ನು ಕಾಣಬಹುದು. ಈ ಆಟಕ್ಕೆ ಎರಡು ತಂಡಗಳೂ ಬೇಕು. ಇವರೂ ಕೂಡಾ ರಾಷ್ಟ್ರೀಯ ಆಟಗಾರರು ಟಾಸ್ ಮಾಡುವ ಹಾಗೆ ಟಾಸ್ ಮಾಡಿ ಯಾರು ಮೊದಲು ಬ್ಯಾಟಿಂಗ್ ಮಾಡಬೇಕು? ಯಾರು ಕ್ಷೇತ್ರ ರಕ್ಷಣೆ ಮಾಡಬೇಕು? ಎಂಬುದನ್ನು ನಿರ್ಧರಿಸಿದ ನಂತರ ಟಾಸ್ ಗೆದ್ದವರು ಮೊದಲ ಬ್ಯಾಟ ಮಾಡುವರು. ಇಲ್ಲಿ ಓವರಗಳು ತಮ್ಮ ಮನಸ್ಸಿಗೆ



ಬಂದ ಹಾಗೆ ೪ ಅಥವಾ ೫ ಓವರಗಳನ್ನು ನಿರ್ಧರಿಸಿ, ಆಟ ಪ್ರಾರಂಭಿಸುವರು. ಸ್ಟಂಪಗಳ ಬದಲಾಗಿ ಮೂರು ಕಟ್ಟಿಗೆಗಳನ್ನು ಅಥವಾ ಹಲಗೆಯನ್ನು ನಿಲ್ಲಿಸಿ, ಅದರ ಮುಂದೆ ಬ್ಯಾಟ ಮಾಡುವವನು ನಿಲ್ಲುವನು. ಆತನ ಎದುರಾಳಿ ಬೌಲಿಂಗ್ ಮಾಡುವವನು. ಆ ಚೆಂಡನ್ನು ಆತ ಹೊಡೆದಾಗ ರನ್ನ ಮಾಡುವುದಕ್ಕಾಗಿ ಓಡುವನು. ಆಗ ರನ್‌ಗಳ ಎಣಿಕೆ ಪ್ರಾರಂಭ. ಅಲ್ಲದೆ ಬೌಂಡರಿ ಮತ್ತು ಸಿಕ್ಸರಗಳನ್ನು ತಮ್ಮ ತಮ್ಮ ಹೊಡೆತಕ್ಕೆ ತಕ್ಕಂತೆ ನಿರ್ಧರಿಸುವರು. ಯಾರು ೪ ಅಥವಾ ೫ ಓವರ್‌ಗಳಲ್ಲಿ ಹೆಚ್ಚು ರನ್ನ ಗಳಿಸುವವರೋ ಅವರೇ ಗೆದ್ದಂತೆ. ಈ ಆಟವೂ ಕೂಡಾ ಅರಣ್ಯ ವಾಸಿಗಳಲ್ಲಿ ಜನಪ್ರಿಯವಾಗಿದೆ.

೫.೯.೩೦ ನೊಣ ಆಟ : ಈ ಆಟವು ಘಟ್ಟದ ಮೇಲಿನ ಹಸಲರ ಹೆಣ್ಣು ಮಕ್ಕಳು ಅಡಿಕೆ ಸುಲಿಯುವಾಗ ಈ ಆಟವನ್ನು ಆಡುತ್ತಾರೆ. ಅಡಿಕೆ ಸುಲಿಯುವವರೆಲ್ಲರೂ ಒಂದು ರೂಪಾಯಿ ನಾಣ್ಯವನ್ನು ಅಂಗಳದಲ್ಲಿ ಒಗೆದು ಯಾರ ನಾಣ್ಯಕ್ಕೆ ನೊಣ ಬಂದು ಕೂಡುವುದೋ ಅವರು ಗೆದ್ದಂತೆ. ಇದು ಜೂಜು ಹೌದು.

೫.೧೦ ಕಂಬಳ

'ಕಂಬಳ' ಇದು ಈಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಚರಿಸುವ ಜಾನಪದ ಆಟಗಳಲ್ಲಿ ಒಂದು. ಇದನ್ನು ಕೋಣಗಳ ಓಟದ ಸ್ಪರ್ಧೆಯೆಂತಲೂ ಕರೆಯುತ್ತಾರೆ. ಕಂಬಳ ಎಂದರೆ ವಿಶಾಲವಾದ ಹೊಲವನ್ನು ಒಂದು ಮಗ್ಗುಲಿನ ಉದ್ದಕ್ಕೆ ಸುಮಾರು ಹತ್ತು ಅಡಿಗಳಷ್ಟು ಅಗಲಕ್ಕೆ ಕೆರೆ ಕಡಿದು ಓಟದ ಜಾಗವನ್ನು ಪ್ರತ್ಯೇಕಿಸಿ ಸಜ್ಜು ಮಾಡುತ್ತಾರೆ. ಇದರ ಎರಡರಷ್ಟು ಹೊಲವನ್ನು ಕಡಿದಿದ್ದರೆ ಅದಕ್ಕೆ "ಜೋಡು ಕೆರೆ" ಎಂದು ಕರೆಯುತ್ತಾರೆ. ಹೀಗೆ ಮಾಡಿದಾಗ ಓಡಿದ ಕೋಣಗಳು ಹಿಂದೆ ತಿರುಗಿ ಬರುವುದಕ್ಕೆ ಸಾಧ್ಯವಾಗುತ್ತದೆ. ಕಡಿದ ಹೊಲದ ಜಾಗದಲ್ಲಿ ಒಂದು ಹದದಲ್ಲಿ ನೀರು ಬಿಟ್ಟಿರುತ್ತಾರೆ. ನೀರು ಹೆಚ್ಚು ಮತ್ತು ಕಡಿಮೆಯಾದರೆ ಕೋಣಗಳು ಓಟದಲ್ಲಿ ತೊಂದರೆಯಾಗುವದು ಆದ್ದರಿಂದ ಒಂದು ಹದದ ಮೇಲೆ ನೀರು ಹಾಯಿಸುವರು. ಕೆಲವು ಕಡೆ ಹೊಳೆಯ ನೀರನ್ನು ಕಾಲುವೆಯಂತೆ ಉಪಯೋಗಿಸುತ್ತಾರೆ. ಅಲ್ಲಿ ಕಂಬಳದ ಕರೆ ಕಡಿಸುವುದು ಇದೆ.

ಕಂಬಳವನ್ನು ಮೊದಲು ಜಾನಪದ ವಿನೋದಕ್ಕಾಗಿ ಅಸ್ತಿತ್ವದಲ್ಲಿ ಬಂದ ನಂತರ ಜಾತ್ರೆಯ ಸ್ವರೂಪವನ್ನು ತಾಳಿತು. ಗ್ರಾಮದ ಹಿರಿಯರು ಗುತ್ತ ಮನೆಯವರು ಬಲ್ಲಾಳರೂ ಇಂಥ ಕಂಬಳಗಳನ್ನು ಏರ್ಪಡಿಸತೊಡಗಿದರು. ಅರಸರೂ ಕೂಡ ಕಂಬಳಗಳನ್ನು ಏರ್ಪಡಿಸತೊಡಗಿದರು. ಅವರ ಕಂಬಳಕ್ಕೆ ಅರಸ ಕಂಬಳವೆಂತಲೂ ಕರೆಯುತ್ತಾರೆ. ಈ ಕಂಬಳವು ಕೇವಲ ಮೇಲ್ಜಾತಿಯ ಜನರು ಮಾತ್ರ ಭಾಗವಹಿಸುತ್ತಿದ್ದರು. ಅದಕ್ಕಾಗಿ ಕೆಳ ಜಾತಿಯ ಜನರು ೨೦೦೪ ರಿಂದಲೇ ಹೋರಾಟ ಮಾಡಲು ಪ್ರಾರಂಭಿಸಿದರು. ಇವರ ಹೋರಾಟಕ್ಕೆ ಜಯ ದೊರಕಿದ್ದು ೨೦೦೬ರ ಸಿದ್ಧಾಪೂರ ಕದ್ರಿ ಕಂಬಳದಲ್ಲಿ ಮಾತ್ರ, ಇಲ್ಲಿ ಹಸಲರು ಈ ಕಂಬಳದಲ್ಲಿ ಭಾಗವಹಿಸಿದ್ದರು. ಈ ಕಂಬಳಕ್ಕೆ

ಹಸಲರು ಭಾಗವಹಿಸಬೇಕಾದರೆ ಜಕಣಿಗೆ ಅಥವಾ ಕಂಬಳ ಗದ್ದೆಗೆ ಹರಕೆ ಹೊರಬೇಕು. ಭಾಗವಹಿಸಿದ ನಂತರ ಜಕಣಿಗೆ ಅಥವಾ ಕಂಬಳ ಗದ್ದೆಗೆ ಹೂ, ಹಣ್ಣು ಕಾಯಿ ಕರ್ಪೂರಗಳಿಂದ ಪೂಜಿಸುವರು.

ಕಂಬಳದಲ್ಲಿ ಭಾಗವಹಿಸುವ ಕೋಣಗಳನ್ನು ಹಸಲರು ವಿಶೇಷ ಕೋಣಗಳನ್ನು ಆರಿಸಿ ಅದಕ್ಕೆ ವಿಶಿಷ್ಟವಾದ ಪೌಷ್ಟಿಕ ಆಹಾರವನ್ನು ನೀಡುವರು. ಇಂತಹ ಎಷ್ಟು ಜಾತಿಯ ಕೋಣಗಳು ಇರುತ್ತವೆಯೋ ಅವರ ಪ್ರತಿಷ್ಠೆ ಹೆಚ್ಚು. ಆದರೆ ಹಸಲರು ಅದರಲ್ಲಿಯೂ ಘಟ್ಟದ ಕೆಳಗಿನ ಹಸಲರು ಕೇವಲ ಒಂದೇ ಜೊತೆ ಕೋಣಗಳನ್ನು ಮಾತ್ರ ಹೊಂದಿದ್ದಾರೆ. ಇವರಲ್ಲಿ ಅಷ್ಟೊಂದು ಆರ್ಥಿಕವಾಗಿ ಸ್ಥಿತಿವಂತರಿಲ್ಲ. ಆದರೂ ಹೋರಾಟ ಮಾಡಿ ಭಾಗವಹಿಸುವುದಕ್ಕಾಗಿ ಕೋಣಗಳನ್ನು ಸಾಕುವರು. ಈ ಕೋಣಗಳನ್ನು ಅವರು ಗದ್ದೆ ಊಳಲು ಉಪಯೋಗಿಸುವದಿಲ್ಲ. ಆದರೆ ಇಂದು ನಾಗರಿಕತೆಯ ಮೊದಲಿನಲ್ಲಿ ಇರುವ ಜನರಿಂದ ಮತ್ತು ಕಂಬಳ ನಿರ್ಮಾಣ ವೆಚ್ಚ ದುಬಾರಿಯಾಗಿರುವುದರಿಂದ ಈಗ ಕಂಬಳ ಕಳೆಗುಂದತೊಡಗಿದೆ.

ಕಂಬಳಕ್ಕೆ ಆಮಂತ್ರಣ ಹೋದ ಮೇಲೆ ಘಟ್ಟದ ಕೆಳಗಿನ ಹಸಲರು ಕೋಣಗಳನ್ನು ಸಿಂಗರಿಸಿಕೊಂಡು ವಾದ್ಯಘೋಷ, ಕುಣಿತ, ಹಾಡು, ಸಿಡಿಮದ್ದು ಹಾಗೂ ಡೊಳ್ಳು ಕುಣಿತಗಳ ಸಂಭ್ರಮದಿಂದ ಕಂಬಳ ಗದ್ದೆಯ ಬಳಿಗೆ ಬರುತ್ತಾರೆ. ಅನಂತರ ಒಂದೊಂದು ಜೊತೆ ಕೋಣಗಳನ್ನು ವಿಧಿವತ್ತಾಗಿ ಕಂಬಳದ ಕಣಕ್ಕೆ ಇಳಿಸುತ್ತಾರೆ. ಕೋಣಗಳಿಗೆ ಕಟ್ಟಿದ ಗೋರು ಹಲಗೆಯ ಮೇಲೆ ಕೋಣಗಳನ್ನು ಓಡಿಸುವ ವ್ಯಕ್ತಿ ನಿಂತು ಕೋಣಗಳ ಬಾಲವನ್ನು ಎಡಗೈಯಿಂದ ಬಿಗಿಯಾಗಿ ಹಿಡಿದು ಬಲಗೈ ಚಾಟಿಯಿಂದ ಕೋಣಗಳನ್ನು ಬಾರಿಸುತ್ತಾ ಅವು ವೇಗವಾಗಿ ಓಡುವಂತೆ ಮಾಡುವರು. ಸೊಕ್ಕಿದ ಕೋಣಗಳನ್ನು ನಿಯಂತ್ರಿಸುವುದು ಕಷ್ಟವಾಗಿರುವುದರಿಂದ ನುರಿತ ವ್ಯಕ್ತಿಯು ಮಾತ್ರ ಕಂಬಳದಲ್ಲಿ ಕೋಣಗಳನ್ನು ನಿಯಂತ್ರಿಸುವನು. ವ್ಯಕ್ತಿಯು ಅಡ್ಡ ಹಲಗೆ ನೀರನ್ನು ಮೇಲಕ್ಕೆ ಹಾಯಿಸುತ್ತಾ ಮುಂದಕ್ಕೆ ಧಾವಿಸುತ್ತಾನೆ. ಈ ರಭಸಕ್ಕೆ ಮಣಿಯ ಕೆಳಗಡೆ ಇರುವ ಗದ್ದೆಯಲ್ಲಿಯ ನೀರು ಮೇಲಕ್ಕೆ ರಭಸವಾಗಿ ಚಿಮ್ಮುವುದು.

ಕಂಬಳದ ಕೊನೆಯ ತುದಿಗೆ ಕೋಣಗಳು ಓಡಿ ಗುರಿ ಮುಟ್ಟಿದ ಜಾಗಕ್ಕೆ 'ಮಂಜೊಟ್ಟಿ' ಎಂದು ಎನ್ನುತ್ತಾರೆ. ಕಂಬಳದ ಕೋಣಗಳನ್ನು "ಮಂಜೊಟ್ಟಿ ಕೋಣ" ಎನ್ನುವರು.

ಕಂಬಳದ ಕೆರೆಯ ಮಧ್ಯದಲ್ಲಿ ಅಥವಾ ಗುರಿ ಮುಟ್ಟುವ ಜಾಗದ ಸಮೀಪದಲ್ಲಿ ಒಂದು ನಿಶಾನೆ ನೆಟ್ಟಿರುತ್ತಾರೆ. ಈ ನಿಶಾನೆಗಳು ಸುಮಾರು ಇಪ್ಪತ್ತು ಅಡಿಗಳಷ್ಟು ಎತ್ತರಕ್ಕೆ ಅಡ್ಡಲಾಗಿ ಕಟ್ಟಿರುತ್ತಾರೆ. ಈ ನಿಶಾನೆಗೆ ನೀರು ಮುಟ್ಟಿಸಿದ ಕೋಣಗಳು ಓಟದಲ್ಲಿ ಉತ್ತಮ ಪ್ರಶಸ್ತಿಯನ್ನು ಪಡೆಯುವವು. ನಿಶಾನೆ ಎಷ್ಟು ಒದ್ದೆಯಾಗಿದೆ ಎಂಬುವುದರ ಮೇಲೆ ಪ್ರಥಮ, ದ್ವಿತೀಯ ಬಹುಮಾನಗಳನ್ನು ನಿಗದಿಪಡಿಸುವರು. ಪ್ರಥಮ ಬಂದವರಿಗೆ ಚಿನ್ನ, ದ್ವಿತೀಯರಿಗೆ ಬೆಳ್ಳಿ ಪದಕಗಳನ್ನು ನೀಡುವರು.

ಹಸಲರು ಹೋರಾಟ ಮಾಡಿ ಕಂಬಳದಲ್ಲಿ ಭಾಗವಹಿಸಿದರೂ ೨೦೦೬ ರಿಂದ ಇಲ್ಲಿಯವರೆಗೆ ಯಾವುದೇ ಬಹುಮಾನ ಪಡೆದಿಲ್ಲವೆಂದು ಕಬ್ಬಿನಾಲೆಯ ಕೃಷ್ಣ ಹಸ್ಲರ್ ಬೇಸರ ವ್ಯಕ್ತಪಡಿಸುತ್ತಾರೆ. ಹಸಲರು ಸುಮಾರು ನಾಲ್ಕು ಕಂಬಳದಲ್ಲಿ ಭಾಗವಹಿಸಿದ್ದಾರೆ.

೧) ಸಿದ್ಧಾಪೂರ ಕದ್ರಿ ೨) ಕೆರೆಡಿ ೩) ವಂಡಾಲ್ಕೆ ೪) ಎಡತಾಡಿ

ಈ ನಾಲ್ಕು ಕಂಬಳದಲ್ಲಿ ಅವರು ಯಾವುದೇ ಪ್ರಶಸ್ತಿ ಪಡೆಯದೇ ಇದ್ದರೂ ಉತ್ಸಾಹ ಕುಂದಿಲ್ಲ. ಇಂದಿಲ್ಲ ನಾಳೆ ನಾವು ಬಹುಮಾನ ಪಡೆಯುತ್ತೇವೆ ಎಂಬ ಭರವಸೆ ಘಟ್ಟದ ಕೆಳಗಿನ ಹಸಲರಲ್ಲಿದೆ.

೫.೧೧ ಯಕ್ಷಗಾನ

ಯಕ್ಷಗಾನ ಅತ್ಯಂತ ಪ್ರಾಚೀನವಾದ ಹಾಗೂ ಜನಪ್ರಿಯವಾದ ಒಂದು ಸಂಗೀತ ಶೈಲಿ ಬಯಲಾಟ. ಯಕ್ಷಗಾನ ಎಂಬ ಶಬ್ದ ಹೇಗೆ ಬಳಕೆಯಲ್ಲಿ ಬಂದಿತು ಎಂಬುದರ ಬಗ್ಗೆ ಐತಿಹಾಸಿಕ ಕುರುಹುಗಳಿಲ್ಲ. ಕೆಲವರು ಊಹೆಯ ಮುಖಾಂತರ ವಿವರಿಸಲು ಪ್ರಯತ್ನಿಸಿದ್ದಾರೆ. ಅವರಲ್ಲಿ ಶ್ರೀರಾಮಚಂದ್ರಭಟ್ಟ ಹಾಣಸಗಿಯವರ ಪ್ರಕಾರ– ಮಾರ್ಗ ಸಂಗೀತವೊಂದು ಮೊದಲು ಈ ಭೂಮಿಯಲ್ಲಿ ವ್ಯವಹಾರದಲ್ಲಿದ್ದು ಅದು ಶಾಸ್ತ್ರ ನಿಯಮಕ್ಕೆ ಒಳಗಾಗಿ ವಿದ್ವಾಂಸರ ವಲಯದಲ್ಲಿಯೇ ಬೆಳೆದು ಬಂದಿತು. ಕಾಲಕ್ರಮದಲ್ಲಿ ವಿದ್ವಾಂಸರಲ್ಲದವರು ಅಶಾಸ್ತ್ರೀಯವಾಗಿ ಅದನ್ನು ಹಾಡಲು ಪ್ರಾರಂಭಿಸಿದಾಗ ಎರಡು ಪಂಗಡಗಳಾದವು. ಇವನ್ನೇ "ಮಾರ್ಗ" ಮತ್ತು "ದೇಶಿ" ಎಂದು ಕರೆಯುತ್ತಾರೆ. ಇನ್ನು ಮುಂದುವರೆದಂತೆ ಮೂರನೇ ವರ್ಗದ ಜನರು ಹಾಡಲು ಪ್ರಾರಂಭಿಸಿದರು. ಇದಕ್ಕೆ 'ಯಕ್ಷಗಾನ' ಎಂದು ಕರೆದರು. ಯಕ್ಷಗಾನದಲ್ಲಿ ಎರಡು ಪ್ರಕಾರಗಳಿವೆ. ಒಂದು ಮೂಡಲಪಾಯ, ಎರಡು ಪಡುವಲಪಾಯ. ದಕ್ಷಿಣ ಕರ್ನಾಟಕದ ಬಯಲಾಟಕ್ಕೆ ಮೂಡಲಪಾಯವೆಂದು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಭಾಗದ ಬಯಲಾಟಕ್ಕೆ ಪಡುವಲಪಾಯವೆಂದು ಹೆಸರು. ಪಡುವಲಪಾಯದಲ್ಲಿ 'ತೆಂಕತಿಟ್ಟು' ಮತ್ತು 'ಬಡಗುತಿಟ್ಟು' ಎಂಬ ಪ್ರಭೇದಗಳಿವೆ. ಇದು ಉಡುಪಿಯನ್ನು ಗುರಿಯಾಗಿಟ್ಟುಕೊಂಡು ಅದರ ಉತ್ತರ ಭಾಗಕ್ಕೆ 'ಬಡಗುತಿಟ್ಟು' ಎಂದು 'ತೆಂಕಣ ಭಾಗಕ್ಕೆ 'ತೆಂಕತಿಟ್ಟು' ಎಂದು ಕರೆಯುತ್ತಾರೆ. ಆದರೆ ವಾಸ್ತವಿಕವಾಗಿ ಬಡಗುತಿಟ್ಟಿನವರು ತೆಂಕತಿಟ್ಟುವಿನಲ್ಲಿ ಮತ್ತು ತೆಂಕತಿಟ್ಟುನವರು ಬಡಗುತಿಟ್ಟುವಿನಲ್ಲಿ ಆಡಿದ ಪ್ರಸಂಗಳು ಇವೆ.

ಹಸಲರು ೧೯೯೦ರ ವರ್ಷದಲ್ಲಿ ಹಳ್ಳಿ ಹೊಳೆಯಲ್ಲಿ ಮಂಜುನಾಥೇಶ್ವರ ಎಂಬ ನಾಟ್ಯ ಸಂಘವನ್ನು ಬ್ರಾಹ್ಮಣರ ಜೊತೆಗೂಡಿ ಕಟ್ಟಿದರು. ಆದರೆ ಇದು ಬಹಳ ದಿವಸಗಳವರೆಗೆ ನಡೆಯಲಿಲ್ಲ. ಕಾರಣ ಬ್ರಾಹ್ಮಣರು ದೇವಸ್ಥಾನ ಜಾತ್ರೆ/ಉತ್ಸವಗಳಲ್ಲಿ ಭಾಗವಹಿಸಲು ಹಸಲರನ್ನು ನಿರಾಕರಿಸಹತ್ತಿದರು. ಆದ್ದರಿಂದ ಅವರು ಆ ಸಂಘವನ್ನು ಬಿಟ್ಟುಬಿಟ್ಟರು. ಇದರಿಂದ ಸಂಘವು ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.

೧೯೫೫ರ ಸುಮಾರಿಗೆ ಕೆರೆಮನೆ ಶಂಭು ಹೆಗಡೆಯವರು ಚಕ್ರ ಮೈದಾನದಲ್ಲಿ ಯಕ್ಷಗಾನ ಬಯಲಾಟವಿಟ್ಟಿದ್ದರು. ಇದನ್ನು ನೋಡಲು ಕಬ್ಬಿನಾಲೆ ಹಳ್ಳಿಹೊಳೆಯ ಹಸಲರು ಹೋಗಿದ್ದರು. ಕಬ್ಬಿನಾಲೆಯ ಕೃಷ್ಣ ಜಿ. ಹಸ್ಲರ್ ಈತನು ಕೆರೆಮನೆ ಶಂಭು ಹೆಗಡೆಯವರಲ್ಲಿ ನಾನು ನಿಮ್ಮ ಯಕ್ಷಗಾನ ಮಂಡಳಿಯಲ್ಲಿ ಪಾತ್ರ ಮಾಡಲು ಇಚ್ಛಿಸಿದ್ದೇನೆ ಅವಕಾಶ ಕೊಡುವಿರಾ ಎಂದು ಕೇಳಿದಾಗ ಅದನ್ನು ಶಂಭು ಹೆಗಡೆಯವರು ನಿರಾಕರಿಸಿದರು. ಇದಕ್ಕೆ ಕಾರಣ ಆತನು ಕೀಳ ಜಾತಿಯವನು ಎಂಬ ಕಾರಣಕ್ಕೆ. ಇದನ್ನೇ ಆತ ಸವಾಲಾಗಿ ಸ್ವೀಕರಿಸಿ ಈತನು ೧೯೬೮ರ ಸುಮಾರಿಗೆ 'ಕಬ್ಬಿನಾಲೆ ತಾಳಮದ್ದಲೆ ನಾಟ್ಯ ಸಂಘ' ಎಂಬ ಯಕ್ಷಗಾನ ಮಂಡಳಿಯನ್ನು ಕಟ್ಟಿದನು. ಇದರ ವಿಶೇಷತೆ ಏನೆಂದರೆ, ಇದರಲ್ಲಿ ಇರುವ ಎಲ್ಲಾ ಕಲಾವಿದರು ಕಬ್ಬಿನಾಲೆ, ದೇವರಬಾಳು, ಯಡಿಗೇರೆ ಮತ್ತು ಹಳ್ಳಿಹೊಳೆಯ ಹಸಲರು. ಇವರು ಪಡುವಲಪಾಯ ಯಕ್ಷವನ್ನು ಮಾಡುತ್ತಾರೆ. ಈ ಯಕ್ಷಗಾನವು ಮೂಡಲಪಾಯದ ವಾದ್ಯ, ವೇಷ ರಚನೆ, ಕುಣಿತ ಮುಂತಾದವುಗಳಲ್ಲಿ ಭಿನ್ನತೆ ಇದೆ. ಈ ನಾಟ್ಯ ಸಂಘದಲ್ಲಿ ಸುಮಾರು ೧೫ ಜನ ಕಲಾವಿದರಿದ್ದಾರೆ. ಇವರು ಹಾರ್ಮೋನಿಯಂ, ಮದ್ದಲೆ, ಚಂಡೆ, ತಾಳ ಉಪಯೋಗಿಸುವರು. ತಾಳವು ಕಂಚಿನ ದಪ್ಪದಾದ ಎರಡು ಅಂಗುಲ ವ್ಯಾಸವುಳ್ಳ ತಾಳಗಳಾಗಿವೆ. ಚಂಡೆ ಇದೊಂದು ಚರ್ಮವಾದ್ಯ, ಚಂಡೆಯನ್ನು ಪಾತ್ರಗಳ ಕುಣಿತದ ಸಂದರ್ಭದಲ್ಲಿ ವಿಶೇಷವಾಗಿ ಬಳಸಲಾಗುತ್ತದೆ. ಇದು ವೀರ, ಪರಾಕ್ರಮ ಪ್ರದರ್ಶನದಲ್ಲಿ ಚಂಡೆಯನ್ನು ಉಪಯೋಗಿಸುವರು. ಇದರ ನುಡಿತ ಬಹಳ ದೂರದವರೆಗೆ ಕೇಳಿಸುವುದು. ಅಷ್ಟೇ ಅಲ್ಲ ಪಾತ್ರಗಳ ತಿರುವಿನ ಕುಣಿತದಲ್ಲಿ ಅದು ಮೈನವಿರೇಳಿಸುವ ತಾಳಬದ್ಧ ಧ್ವನಿಯನ್ನುಂಟು ಮಾಡುತ್ತದೆ.

ಇವರು ಮೊದಲು ಯಕ್ಷಗಾನವನ್ನು ಗಣೇಶ ಸ್ತೋತ್ರದಿಂದ ಪ್ರಾರಂಭಿಸುತ್ತಾರೆ. ಇವರು ಆಡುವ ಯಕ್ಷಗಾನ ಬಯಲಾಟಗಳೆಂದರೆ, ಮಹಾಭಾರತ, ರಾಮಾಯಣದ ಪ್ರಸಂಗಗಳ ಪ್ರದರ್ಶನ. ಆದರೆ ಇಂದು ಅವುಗಳನ್ನು ನೋಡಲು ಅಭಿರುಚಿಯುಳ್ಳವರು ಕಡಿಮೆಯಾಗಿರುವುದರಿಂದ ಈ ಪಾತ್ರಗಳಿಗೆ ಮತ್ತು ಬೇರೆ ಬೇರೆ ಪ್ರಸಂಗಗಳಿಗೆ ಸಿನಿಮಾ ಮಾದರಿಯ ಕಥೆ ಮತ್ತು ಹಾಡು ಲೇಪನವನ್ನು ಕೊಡಲು ಪ್ರಾರಂಭಿಸಿದ್ದಾರೆ. ಇದರಿಂದ ಹೆಚ್ಚಿನ ಪ್ರೇಕ್ಷಕರನ್ನು ಆಕರ್ಷಿಸಬಹುದು.

ಇವರು ಬೇರೆ ಕಡೆ ಪ್ರದರ್ಶನಕ್ಕೆ ಹೋಗಬೇಕಾದರೆ ಇವರಿಗೆ ಮೊದಲು ವೀಳ್ಯೆ ಕೊಡಬೇಕು. ಜೊತೆಗೆ ಅವರ ಪ್ರವಾಸಕ್ಕೆ ತಗುಲುವ ವೆಚ್ಚವನ್ನೂ ಕೊಟ್ಟು ಹೋಗಬೇಕು. ನಂತರ ಒಂದು ಪ್ರದರ್ಶನಕ್ಕೆ ಎರಡು ಸಾವಿರಗಳನ್ನು ಕೊಡಬೇಕು. ಇವರು ಯಾರೇ ಆಹ್ವಾನ ಮಾಡಿದರೂ ಪ್ರದರ್ಶನ ನೀಡಲು ಸಿದ್ಧರಾಗುತ್ತಾರೆ. ಇವರು ಚಕ್ರ ಮೈದಾನದಲ್ಲಿ ಕಲ್ಮಂಜುವಿನಲ್ಲಿ ಪ್ರತಿವರ್ಷ ಯಕ್ಷಗಾನ ಬಯಲಾಟವನ್ನು ಏರ್ಪಡಿಸುತ್ತಾರೆ. ಇವರಿಗೆ ಸರಕಾರದಿಂದ ಯಾವುದೇ ರೀತಿಯ ಸಹಾಯ ಸಿಕ್ಕಿಲ್ಲ. ಇವರು ದೀಪಾವಳಿಯಂದು ತಮ್ಮ ಯಕ್ಷಗಾನ ಪ್ರದರ್ಶನವನ್ನು ಪ್ರಾರಂಭಿಸಿ, ಜೂನ್ ತಿಂಗಳ ಮೊದಲ ವಾರದಲ್ಲಿ ಕೊನೆಗೊಳಿಸುತ್ತಾರೆ.

೫.೧೨ ಡೊಳ್ಳು ಕುಣಿತ

ಜನಪದ ಕಲೆಗಳಲ್ಲಿ ವಿಶಿಷ್ಟವಾದ ಕಲೆ ಎಂದರೆ ಡೊಳ್ಳು ಕುಣಿತ. ಇದು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಕಲೆಯಾದರೂ ಇದು ಶಿವಮೊಗ್ಗ ಜಿಲ್ಲೆಗಳಲ್ಲಿಯೂ ಪ್ರಚಲಿತವಿದೆ.

ಡೊಳ್ಳಿನ ಉತ್ಪತ್ತಿಯ ಬಗ್ಗೆ ಪೌರಾಣಿಕ ಹಿನ್ನೆಲೆ ಇದೆ. "ಡೊಳ್ಳಾಸುರ" ವೆಂಬ ರಾಕ್ಷಸ ತಪಸ್ಸಿನಿಂದ ಪರಶಿವನನ್ನು ಮೆಚ್ಚಿಸಿ ಪರಶಿವನು ತನ್ನ ಹೊಟ್ಟೆಯಲ್ಲಿ ನೆಲಸಬೇಕೆಂಬ ವರವನ್ನು ಪಡೆದ. ಅದರಂತೆ ಪರಶಿವನು ರಾಕ್ಷಸನ ಹೊಟ್ಟೆಯಲ್ಲಿ ಸೇರಿಕೊಂಡು ದಿನಾಲು ಹೊಟ್ಟೆಯೊಳಗೆ ಬೆಳೆಯಲಾರಂಭಿಸಿದ. ಅಷ್ಟೆ ಅಲ್ಲ, ರಾಕ್ಷಸನ ಹೊಟ್ಟೆಯಿಂದ ಹೊರಬಂದ. ಶಿವನು ಕೋಪದಿಂದ ಕಣ್ಣು ತೆರೆದರೆ ಪ್ರಳಯವೆ ಆಗುತ್ತದೆ ಎಂಬುದನ್ನರಿತ ವಿಷ್ಣು ಡೊಳ್ಳಾಸುರನ ಹೊಟ್ಟೆಯನ್ನು ವಾದ್ಯ ವಿಶೇಷವಾಗಿ ಮಾಡಿಕೊಂಡು ಅವನ ಮೂಳೆಗಳಿಂದ ಡೊಳ್ಳು ಭಾರಿಸಲು ಪ್ರಾರಂಭಿಸಿದ. ಶಿವನು ಆ ವಾದ್ಯದ ಧ್ವನಿಗೆ ಮಾರು ಹೋಗಿ ಲಾಸ್ಯದಲ್ಲಿ ತೊಡಗಿದ. ಶಿವ ಸುಪ್ರಿತನಾದ. ಮುಂದೆ ಡೊಳ್ಳು ಶಿವ ಸ್ತುತಿಯ ವಿಶೇಷ ವಾದ್ಯವಾಯಿತು.

ಡೊಳ್ಳು 'ಮರ' ಮತ್ತು 'ಚರ್ಮ'ದಿಂದ ಮಾಡಿದ ಒಂದು ದೊಡ್ಡ ಆಕಾರದ ವಾದ್ಯ. ತಾಳೆ ಅಥವಾ ಹಗುರವಾದ ಮರದಿಂದ ಎರಡುವರೆಯಿಂದ ಮೂರುವರೆ ಅಡಿ ಉದ್ದ ಹಾಗೂ ಎರಡು ಅಡಿ ವ್ಯಾಸವಿರುವ ಮರದ ತುಂಡಿನ ಒಳಭಾಗವನ್ನು ಕತ್ತರಿಸಿ ತೆಗೆದು ಡೊಳ್ಳನ್ನಾಗಿ ಮಾಡಿದರು. ಈ ಡೊಳ್ಳಾದ ಮರದ ಪಿಪಾಯಿ ಆಕಾರದ ಕಟ್ಟಿಗೆಯ ಎಡ ಬದಿಗೆ ಆಡಿನ ಚರ್ಮವನ್ನು ಮತ್ತು ಬಲ ಭಾಗಕ್ಕೆ ಕುರಿಯ ಚರ್ಮವನ್ನು ಬಿಗಿಯುತ್ತಾರೆ. ಬಳಿಕ ಡೊಳ್ಳನ್ನು ಸೊಂಟಕ್ಕೆ ಕಟ್ಟಿಕೊಳ್ಳುವ ಹಗ್ಗಕ್ಕೆ ಜೋಡಿಸುತ್ತಾರೆ. ಡೊಳ್ಳನ್ನು ಬಡಿಯಲು ಸುಮಾರು ಒಂದುವರೆ ಉದ್ದದ ಕಟ್ಟಿಗೆಯ ತುಂಡನ್ನು ಉಪಯೋಗಿಸುವರು. ಇದಕ್ಕೆ "ಗುಣಿ" ಎಂದು ಕರೆಯುತ್ತಾರೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ವಿವಿಧ ಹಸಲರ ಹಾಡಿಕೇರಿಯಲ್ಲಿ ಡೊಳ್ಳು ಮೇಳಗಳಿವೆ. ಬೆಳ್ಳೆಣ್ಣೆ, ಹಿರೆಮನೆ, ಬಚಗಾರು, ತೊರಾಮೆ, ಎಳುಗೋವಿನಕೊಪ್ಪ, ತಂಬ್ರಿ ಹಿಗೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಹಸಲರ ಹಾಡಿಕೇರಿಗಳಲ್ಲಿ ಡೊಳ್ಳು ಮೇಳಗಳಿವೆ. ಡೊಳ್ಳು ಬಡಿಯುವಾಗ ತಲೆಗೆ ರುಮಾಲು, ಕುತ್ತಿಗೆಗೆ ಅಡ್ಡಲಾಗಿ ಕಂಬಳಿಯನ್ನು ಹಾಕಿ ಸೊಂಟದಲ್ಲಿ ಒಂದು ದಾರದಿಂದ ಬಿಗಿಯಾಗಿ ಕಂಬಳಿಯನ್ನು ಸೊಂಟಕ್ಕೆ ಕಟ್ಟಿಕೊಳ್ಳುವರು. ರುಮಾಲು ಮೇಲೆ ನವಿಲುಗರಿಯನ್ನು ಸಿಗಿಸಿಕೊಳ್ಳುವರು. ಡೊಳ್ಳಿನ ಮೇಲ್ಮೈ ಭಾಗವನ್ನು ಕಸೂತಿ ಮಾಡಿದ ಅರಿವೆಯಿಂದ ಮುಚ್ಚಿರುತ್ತಾರೆ. ಅದರ ಅಂಚಿಗೆ ಕಂಬಳಿಯ ಸಣ್ಣದಾದ ಅಂಚಿನಿಂದ ಹೊಲಿದಿರುತ್ತಾರೆ.

ಹಸಲರಲ್ಲಿ ಡೊಳ್ಳು ಕುಣಿತ ಕಲೆ ಬರಬೇಕಾದರೆ ದಿವರೇ ಕಾರಣ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿ ದಿವರು ಡೊಳ್ಳು ಕುಣಿತದಲ್ಲಿ ನಿಪುಣರು. ಇದು ಅವರ ಜೊತೆ ವಾಸಿಸುವ ಹಸಲರ ಮೇಲೆಯೂ ಪ್ರಭಾವ ಬೀರಿ ಅವರೂ ಕೂಡ ಡೊಳ್ಳು ಕುಣಿತ ಕಲೆಯನ್ನು ಪ್ರದರ್ಶಿಸಲು ಪ್ರಾರಂಭಿಸಿದರು. (ಎನ್.ಹುಚ್ಚಪ್ಪ ಮಾಸ್ತರ ವಯಸ್ಸು ೭೫ ಉದ್ದೋಗ: ನಿವೃತ್ತ ಶಿಕ್ಷಕ ಸಾ॥ ಸಾಗರ)

ಇವರ ಡೊಳ್ಳು ಕುಣಿತದ ತಂಡದಲ್ಲಿ ಸಾಮಾನ್ಯವಾಗಿ ಆರು ಜನರಿಂದ ಎಂಟು ಜನ ಸದಸ್ಯರಿರುತ್ತಾರೆ. ಡೊಳ್ಳು ಭಾರಿಸುವಾಗ ಬಲಗೈಯಲ್ಲಿ ಮಾತ್ರ ಕೋಲು ಇರುತ್ತದೆ. ಒಮ್ಮೆ ಕೋಲಿನಿಂದ ಬಾರಿಸಿದರೆ ಎಡಗೈಯಲ್ಲಿ ಒಂದು ಪೆಟ್ಟು ಕೊಡಬೇಕು. ಬಲಗೈಯ ಗುಣಿಯ ಬಡಿತ "ಬ್ರಹ್ಮದೇವ" ಎಂದು ಸಪ್ಪಳ ಮಾಡಿದರೆ ಎಡಗೈ ಪೆಟ್ಟು "ಡೌಂವ" ಎಂಬ ನಾದ ಎಬ್ಬಿಸುತ್ತದೆ.

ಇವರು ಡೊಳ್ಳು ಬಡಿಯುವಾಗ ವೃತ್ತಾಕಾರವಾಗಿ ನಿಂತುಕೊಂಡಿರುತ್ತಾರೆ. ಡೊಳ್ಳು ಬಾರಿಸುತ್ತಾ ಸುತ್ತಲೂ ತಿರುಗುತ್ತಾರೆ. ಇದಕ್ಕೆ ಹಿಮ್ಮೇಳವೂ ಜೊತೆಯಲ್ಲಿ ಇರುತ್ತದೆ. ಹೀಗೆ ಡೊಳ್ಳು ಬಡಿಯುತ್ತಾ ಹೆಜ್ಜೆ ಹಾಕುತ್ತಾರೆ. ಡೊಳ್ಳನ್ನು ಕುಣಿಯುತ್ತಾ ಬಾರಿಸುವ ಬದಲು ಡೊಳ್ಳಿನ ಮೆಲೆ ಕೈಪಟ್ಟು ಹಾಕುತ್ತಾ ಅದನ್ನು ತಾಳವನ್ನಾಗಿ ಪರಿವರ್ತಿಸಿ ಮುಖ್ಯ ಕಲಾವಿದ ಹಾಡು ಹೇಳಲು ಪ್ರಾರಂಭಿಸುತ್ತಾನೆ. ಉಳಿದವರು ಹಿಮ್ಮೇಳದವರಾಗಿರುತ್ತಾರೆ. "ಶಿವನೆ ನಮ್ಮಯ ದೇವರು ಬಂದಾನ ಬನ್ನಿರೇ ಸ್ವಾಮಿ, ನಮ್ಮಯ ದೇವರು ಬಂದಾನ ಬನ್ನಿರೇ" ಎಂಬ ಪಲ್ಲವಿಯೊಂದಿಗೆ ಕಥೆ ಮುಂದೆ ಸಾಗುವದು.

ಇವರು ವಿಶೇಷವಾಗಿ ಬೆಳದಿಂಗಳಲ್ಲಿ ತಮ್ಮ ಹಾಡಿಕೇರಿಯ ಜನರನ್ನು ಕೂಡಿಸಿಕೊಂಡು ಹಾಡುತ್ತಾರೆ. ದೀಪಾವಳಿಯಿಂದ ಜೂನ್ ತಿಂಗಳ ಮೊದಲನೆ ವಾರದವರೆಗೂ ತಮ್ಮ ಸುತ್ತ ನಡೆಯುವ ಜಾತ್ರೆ, ಉತ್ಸವಗಳಲ್ಲಿ ಡೊಳ್ಳು ಬಾರಿಸುತ್ತಾರೆ. ಡೊಳ್ಳು ಕುಣಿತವು ಘಟ್ಟದ ಮೇಲಿನ ಹಸಲರಲ್ಲಿ ಮಾತ್ರ ಪ್ರಚಲಿದಲ್ಲಿದೆ. ಘಟ್ಟದ ಕೆಳಗಿನವರಲ್ಲಿ ಯಕ್ಷಗಾನ ನಾಟ್ಯ ಸಂಘವಿದೆ. ಘಟ್ಟದ ಕೆಳಗಿನ ಹಸಲರಲ್ಲಿಯೂ ಡೊಳ್ಳು ತಯಾರು ಮಾಡುವುದು ದುಬಾರಿಯಾಗಿರುವುದರಿಂದ ಡೊಳ್ಳು ಕುಣಿತವನ್ನು ಬಿಟ್ಟು ಬಿಡಲು ಪ್ರಾರಂಭಿಸಿದ್ದಾರೆ. ಆದರೆ ಸರಕಾರವು ಗ್ರಾಮ ಪಂಚಾಯತ ಮೂಲಕ ಶೇ. ೧೮ ಅನುದಾನದಲ್ಲಿ ಪುಲೆ ಡೊಳ್ಳು ಮೇಳಕ್ಕೆ ೪೦೦೦.೦೦ ರೂಪಾಯಿಯಂತೆ ಸಹಾಯ ಮಾಡುತ್ತದೆ. ಆದರೂ ಡೊಳ್ಳು ತಯಾರ ಮಾಡಲು ೪೦೦೦ ರೂಪಾಯಿಗಳು ಸಾಲುವದಿಲ್ಲ. ಏಕೆಂದರೆ, ಚರ್ಮದ ಬೆಲೆಯೂ ಹಾಗೂ ಮರದ ದಿಂಬಿನ ಬೆಲೆಯೂ ಹೆಚ್ಚಿದೆ ಆದ್ದರಿಂದ ಕೆಲವು ಮೇಳಗಳು ಸ್ಥಗಿತಗೊಂಡರೂ ಕೂಡ ಇವತ್ತಿಗೂ ಹಿರೇಮನೆ, ಬೆಳ್ಳೆಣ್ಣೆ, ಸಿಸರನಳ್ಳಿ ತೂರಾಮೆ, ಮುಂತಾದ ಹಸಲರ ಹಾಡಿಕೇರಿಯಲ್ಲಿ ಡೊಳ್ಳು ಮೇಳಗಳಿವೆ. ಈ ಕಲೆ ಉಳಿಸುವುದಕ್ಕಾಗಿ ಸರಕಾರವು ಹೆಚ್ಚಿನ ಅನುದಾನ ನೀಡಬೇಕೆಂದು ಹಸಲರು ಆಗ್ರಹಿಸುತ್ತಾರೆ.

ಅಧ್ಯಾಯ ೬

ಪರಿವರ್ತನೆಯ ಹಾದಿಯಲ್ಲಿ ಹಸಲರು

೬.೧ ಸಂಸ್ಕೃತೀಕರಣ

೬.೧.೧ ಋತುಮತಿ

೬.೧.೨ ಜನನ ಸಂಬಂಧಿ ಆಚರಣೆಗಳಲ್ಲಿ ಬದಲಾವಣೆ

೬.೧.೩ ನಾಮಕರಣ ಸಂಬಂಧಿ ಆಚರಣೆಗಳಲ್ಲಿ ಬದಲಾವಣೆ

೬.೧.೪ ಕುಟುಂಬ ರಚನೆಯಲ್ಲಿ ಬದಲಾವಣೆ

೬.೧.೫ ವಿವಾಹ ಆಚರಣೆಗಳಲ್ಲಿ ಬದಲಾವಣೆ

೬.೧.೬ ಜೀವನ ಸಂಗಾತಿ ಆಯ್ಕೆಯಲ್ಲಿನ ಬದಲಾವಣೆಗಳು

೬.೧.೭ ತೆರವು ಪದ್ಧತಿಯ ಬದಲಾಗಿ ವರದಕ್ಷಿಣೆ ಪ್ರಾರಂಭವಾಗಿದೆ

೬.೧.೮ ವಿವಾಹ ವಿಚ್ಛೇದನದಲ್ಲಿ ಬದಲಾವಣೆಗಳು

೬.೧.೯ ಉಡುಗೆ–ತೊಡುಗೆಗಳಲ್ಲಿ ಬದಲಾವಣೆಗಳು

೬.೧.೧೦ ವಸತಿ ವ್ಯವಸ್ಥೆಯಲ್ಲಿನ ಬದಲಾವಣೆಗಳು

೬.೧.೧೧ ಗೃಹೋಪಯೋಗಿ ಸಾಮಾನುಗಳ ಬದಲಾವಣೆ

೬.೧.೧೨ ಆಹಾರ ಪದ್ಧತಿಯಲ್ಲಿ ಬದಲಾವಣೆ

೬.೧.೧೩ ಕಸುಬುಗಳಲ್ಲಿ ಬದಲಾವಣೆ

೬.೨ ಎನ್ ಹುಚ್ಚಪ್ಪ ಮಾಸ್ತರರ ಪಾತ್ರ

೬.೩ ಆರ್ಥಿಕ ಬದಲಾವಣೆಗಳು

೬.೪ ರಾಜಕೀಯ ಬದಲಾವಣೆಗಳು

೬.೫ ಮತಾಂತರ

೬.೬ ಧಾರ್ಮಿಕ ಬದಲಾವಣೆಗಳು

ಅಧ್ಯಾಯ ಆರು

ಪರಿವರ್ತನೆಯ ಹಾದಿಯಲ್ಲಿ ಹಸಲರು

Change is law of Nature (ಬದಲಾವಣೆ ನಿಸರ್ಗದ ನಿಯಮ)

ಬದಲಾವಣೆಯು ನಿಸರ್ಗದ ಒಂದು ಸಹಜ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಎಲ್ಲ ಜನಸಮುದಾಯಗಳು ಬದಲಾವಣೆಯಾಗುತ್ತವೆ. ಇದಕ್ಕೆ ಹಸಲರು ಕೂಡಾ ಹೊರತಾಗಿಲ್ಲ.

ಸಾಮಾಜಿಕ ಬದಲಾವಣೆ ಎಂದರೆ, ನಿರ್ದಿಷ್ಟ ಕಾಲದಲ್ಲಿ ಆಗುತ್ತಿರುವ ಮಾರ್ಪಾಡುಗಳಿಗೆ ಬದಲಾವಣೆ ಎಂದು ಕರೆಯುತ್ತೇವೆ. "ಬದಲಾವಣೆಗೆ ಎರಡು ಪ್ರಮುಖ ಅಂಶಗಳು ಕಾರಣ, ಒಂದು ಆಂತರಿಕ ವ್ಯವಸ್ಥೆ, ಎರಡು ಬಾಹ್ಯ ಪರಿಸರ". (Amir Hassan :೧೯೮೬ :೭) ಹಸಲರಲ್ಲಿ ತನ್ನೊಳಗಿನ ಆಂತರಿಕ ವ್ಯವಸ್ಥೆಗಿಂತ ಬಾಹ್ಯ ಪರಿಸರ ಅವರ ಮೇಲೆ ಪ್ರಭಾವ ಬೀರಿದೆ.

ಬದಲಾವಣೆಯು ಜೀವಂತ ಸಮುದಾಯದ ಪ್ರಾಥಮಿಕ ಲಕ್ಷಣ. ಯಾವುದೇ ಬದಲಾವಣೆಯ ಹಿಂದೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹಲವಾರು ಅಂಶಗಳು ಕಾರಣವಾಗುತ್ತವೆ. ಬದಲಾಗುವ ಗತಿಗೆ ಸಮುದಾಯಗಳು ತಮ್ಮ ಸಂವೇದನೆಗಳನ್ನು ಹೊಂದಿಸಿಕೊಳ್ಳುವ ಅನಿವಾರ್ಯತೆ ಇರುತ್ತದೆ. ಸಮುದಾಯದಲ್ಲಿನ ಬದುಕಿನ ಬದಲಾವಣೆಯ ಹಿಂದೆ ಸಮುದಾಯವು ಹೊಸದನ್ನು ಸ್ವೀಕರಿಸುವ ಪ್ರವೃತ್ತಿಯೂ ಕೂಡಾ ಪ್ರಮುಖವಾಗಿರುತ್ತದೆ.

ಭಾರತವು ಸ್ವತಂತ್ರವಾದ ನಂತರ ಜಾಗತೀಕರಣದ ಪ್ರಕ್ರಿಯೆ ಪ್ರಾರಂಭವಾಯಿತು. ಈ ಜಾಗತೀಕರಣದ ಫಲಶೃತಿಯಿಂದ ಎಲ್ಲೆಡೆಯಲ್ಲಿಯೂ ಬದಲಾವಣೆಯ ಗಾಳಿ ಬೀಸುತ್ತಿದೆ. ಇದಕ್ಕೆ ಹಸಲರ ಬುಡಕಟ್ಟು ಕೂಡಾ ಹೊರತಾಗಿಲ್ಲ. ಈ ಆಧುನಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ

ಸಿಲುಕಿಕೊಂಡ ಅನೇಕ ಬುಡಕಟ್ಟುಗಳು ತಾವು ಇಲ್ಲಿಯವರೆಗೆ ಪಾಲಿಸಿ, ಪೋಷಿಸಿಕೊಂಡು ಬಂದಿರುವ ಲಕ್ಷಣಗಳನ್ನು ಬಿಟ್ಟು, ಆಧುನಿಕತೆಯ ಕಡೆಗೆ ವಾಲಲು ಪ್ರಾರಂಭಿಸಿವೆ. ಇದರಿಂದ ತಮ್ಮ ಜನನದಿಂದ ಮರಣದವರೆಗಿನ ಎಲ್ಲಾ ಕ್ರಿಯಾ ವಿಧಾನಗಳಲ್ಲಿ ನಡೆ-ನುಡಿಗಳಲ್ಲಿ, ಆಹಾರ ಕ್ರಮದಲ್ಲಿ, ಉಡುಗೆ-ತೊಡುಗೆಗಳಲ್ಲಿ ಬದಲಾವಣೆಯನ್ನು ಮಾಡಿಕೊಂಡಿದ್ದಾರೆ.

ಪ್ರತಿಯೊಂದು ಸಮುದಾಯವು ತನ್ನ ಸಮುದಾಯದ ಜನರು ಹಿಂದಿನಿಂದಲೂ ಅನುಸರಿಸಿ ಕೊಂಡು ಬಂದ ಪದ್ಧತಿ, ಆಚರಣೆ ಹಾಗೂ ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದಿವೆ. ಆಧುನಿಕ ಸಂದರ್ಭದ ಹೊಸ ಬದುಕಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡು ನವ್ಯತೆಯ ಜೊತೆಗೆ ತನ್ನ ಪಾರಂಪರಿಕವಾದ ಅನನ್ಯತೆಯನ್ನು ಉಳಿಸಿಕೊಂಡಿವೆ. ಅನನ್ಯತೆಯ ಬದುಕಿನಲ್ಲಿ ಎದುರಾಗುವ ಸವಾಲುಗಳು ಎದುರಿಸುವುದರ ಜೊತೆಗೆ ಸಮುದಾಯವು ಅನುಸರಿಸಿಕೊಂಡು ಬಂದ ಮೌಲ್ಯ ಹಾಗೂ ಸಂಪ್ರದಾಯಗಳನ್ನು ರಕ್ಷಿಸಿಕೊಂಡು ಬರುವಲ್ಲಿ ಬುಡಕಟ್ಟುಗಳು ತುಂಬಾ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಹೊಸದನ್ನು ಅಪ್ಪಿಕೊಳ್ಳುವ ಮೂಲಕ ಹಳೆಯದನ್ನು ಮರೆಯದಂತೆ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ಬುಡಕಟ್ಟುಗಳ ಪಾತ್ರ ಗಮನಾರ್ಹವಾಗಿದೆ. ಈ ನಿಟ್ಟಿನಲ್ಲಿ ಹಸಲರು ಆಧುನಿಕ ಜೀವನದ ಜೊತೆಗೆ ತನ್ನ ಸಮುದಾಯದ ರೀತಿ-ನೀತಿ, ಸಂಪ್ರದಾಯ ಉಡುಗೆ-ತೊಡುಗೆ, ಆಚರಣೆ ಉಳಿಸಿಕೊಂಡು ಬದಲಾದ ಕಾಲಕ್ಕೆ ಸರಿಹೊಂದುವಂತೆ ಜೀವನ ಮಾಡುತ್ತಾರೆ.

ಒಂದು ಕಾಲದಲ್ಲಿ ಸಂಪೂರ್ಣವಾಗಿ ಬುಡಕಟ್ಟಿನ ಗುಣ ಹೊಂದಿದ ಹಸಲರು, ಕಾಡು-ಮೇಡುಗಳಲ್ಲಿ ಅಲೆದಾಡುತ್ತಾ ಆಹಾರ ಸಂಗ್ರಹಣೆ ಮತ್ತು ಬೇಟೆಯನ್ನು ಅರಿಸುತ್ತಾ ಕಾಡಿನಿಂದ ಕಾಡಿಗೆ ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದರು. ಕಾಲಾಂತರದಲ್ಲಾದ ಬದಲಾವಣೆಗಳ ಸುಳಿಗೆ ಸಿಕ್ಕು, ಅಲೆಮಾರಿ ಜೀವನಕ್ಕೆ ಕೊನೆಹಾಡಿ ಅರಣ್ಯದಲ್ಲಿ ಅಥವಾ ನಾಡಿಗೆ ಹೊಂದಿಕೊಂಡು ಜೀವನ ನಡೆಸಲು ಪ್ರಾರಂಭಿಸಿದರು. ನಾಗರಿಕ ಜೀವನಕ್ಕೆ ಹತ್ತಿರವಾಗುತ್ತಿದ್ದಂತೆ ಹಸಲರು ತಮ್ಮ ಗುಣಗಳನ್ನು ತ್ಯಜಿಸುವ ಮೂಲಕ ಹೊಸ ಜೀವನಕ್ಕೆ ನಾಂದಿ ಹಾಕಿದರು.

೬.೧ ಸಂಸ್ಕೃತೀಕರಣ

ಭಾರತದಲ್ಲಿ ಬದಲಾವಣೆಯು ಮಂದಗತಿಯಲ್ಲಿತ್ತು. ಯಾವಾಗ ಪಾಶ್ಚಿಮಾತ್ಯರು ಭಾರತವನ್ನು ಆಳಲು ಪ್ರಾರಂಭಿಸಿದರೋ ಆಗಿನಿಂದ ಬದಲಾವಣೆಯ ಪ್ರವೃತ್ತಿ ತನ್ನ ತೀವ್ರತೆಯನ್ನು ಪಡೆದು ಕೊಂಡಿತು. ಪಾಶ್ಚಿಮಾತ್ತೀಕರಣ ಆರಂಭದೊಂದಿಗೆ ಭಾರತದಲ್ಲಿನ ಜನರು ಈ ಕ್ರಿಯೆಗೆ ಹಂತ ಹಂತವಾಗಿ ವಾಲುತ್ತಾ ಬದಲಾವಣೆಯಾಗಲು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಹುಟ್ಟಿದ 'ಸಂಸ್ಕೃತೀಕರಣ' ಎಂಬ ಪರಿಕಲ್ಪನೆಯಿಂದ ಭಾರತೀಯ ಸಮಾಜದಲ್ಲಿ ತೀವ್ರತರವಾಗಿ ಬದಲಾವಣೆಯಾಗಲು ಪ್ರಾರಂಭವಾಯಿತು. ಈ ಸಂಸ್ಕೃತೀಕರಣದ ಪ್ರಕ್ರಿಯೆಯನ್ನು ಪರಿಚಯಿಸಿದವರು ಭಾರತೀಯ ಶ್ರೇಷ್ಠ ಸಮಾಜಶಾಸ್ತ್ರಜ್ಞರಲ್ಲಿ ಒಬ್ಬರಾದ ಡಾ ಎಂ ಎನ್ ಶ್ರೀನಿವಾಸ್‌ರು ಸಂಸ್ಕೃತೀಕರಣ

ಎಂಬ ಪರಿಕಲ್ಪನೆಯ ಮುಖಾಂತರ ಸಮಾಜದಲ್ಲಿನ ಬದಲಾವಣೆಗಳನ್ನು ಕುರಿತು ಅಧ್ಯಯನ ಮಾಡಿದರು.

ಸಂಸ್ಕೃತೀಕರಣದ ಫಲವಾಗಿ ಈ ಕೆಳಗಿನಂತೆ ಬದಲಾವಣೆಗಳಾಗಿವೆ.

೬.೧.೧ ಋತುಮತಿ

ಹೆಣ್ಣಿಗೆ ಪ್ರಥಮ ಬಾರಿಗೆ ಋತುಚಕ್ರ ಪ್ರಾರಂಭವಾದಾಗ ಹೆಣ್ಣು ಪ್ರೌಢಾವಸ್ಥೆಗೆ ಬಂದಳು ಎಂದರ್ಥ. ಹೆಣ್ಣು ಪ್ರೌಢಾವಸ್ಥೆಗೆ ಬಂದಾಗ ಅವಳಲ್ಲಿ ಆಗುವ ದೈಹಿಕ ಬದಲಾವಣೆಗಳನ್ನು ಗುರುತಿಸಿ, ಕೆಲವು ಆಚರಣೆಗಳನ್ನು ಮಾಡುವ ಸಂಪ್ರದಾಯವು ಎಲ್ಲ ಬುಡಕಟ್ಟುಗಳಲ್ಲಿ ಇರುವ ಹಾಗೆ ಹಸಲರಲ್ಲಿಯೂ ಕೆಲವು ಆಚರಣೆಗಳು ಮಾಡುವುದುಂಟು. ಹೆಣ್ಣು ಋತುಮತಿಯಾದ ಸುದ್ದಿಯನ್ನು ಮೊದಲು ಸೋದರಮಾವನಿಗೆ ತಲುಪಿಸುವರು. ಅಲ್ಲದೆ ಆಕೆಯು ಅಶುದ್ಧಳೆಂದು ಪರಿಗಣಿಸಿ, ಆಕೆಯನ್ನು ಪ್ರತ್ಯೇಕ ಗುಡಿಸಲುಗಳಲ್ಲಿ ಅಥವಾ ಮೂಲೆಗಳಲ್ಲಿ ಒಂದು ಚಾಪೆಯನ್ನು ಹಾಕಿ ಕೂಡಿಸುವರು. ಐದು ದಿನಗಳವರೆಗೆ ಆಕೆಯನ್ನು ಯಾರೂ ಮುಟ್ಟುವಂತಿರಲಿಲ್ಲ. ಆದರೆ ಈಗ ಮೈಲಿಗೆ ಎನ್ನುವ ಕಲ್ಪನೆಯು ಬದಲಾವಣೆಯಾಗಿದೆ. ಅಲ್ಲದೆ ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳಬೇಕು. ಆಗ ಪ್ರತಿದಿನವೂ ಆಕೆಗೆ ವಿವಾಹಿತ ಮಹಿಳೆಯರು ಹಳ್ಳ ಅಥವಾ ಕೆರೆಯಲ್ಲಿ ಸ್ನಾನ ಮಾಡಿಸುತ್ತಿದ್ದರು. ಆದರೆ ಈಗ ಆಕೆಯನ್ನು ಮನೆಯಲ್ಲಿಯೇ ಸ್ನಾನ ಮಾಡಿಸುವರು. ಆಕೆಯು ಅಶುದ್ಧಳೆಂದು ಎಂಬ ಭಾವನೆಯು ಕಡಿಮೆಯಾಗಿ ಇದೊಂದು ನೈಸರ್ಗಿಕ ಕ್ರಿಯೆ ಎಂಬ ಭಾವನೆ ಅವರಲ್ಲಿ ಬಂದಿದೆ.

೬.೧.೨ ಜನನ ಸಂಬಂಧಿ ಆಚರಣೆಗಳಲ್ಲಿ ಬದಲಾವಣೆಗಳು

ಶೋಡಶ ಸಂಸ್ಕಾರಗಳಲ್ಲಿ ನಾಲ್ಕನೇ ಸಂಸ್ಕಾರವೇ ಜಾತಕರ್ಮ. ಜಾತಕರ್ಮ ಎಂದರೆ, ಜನನ ಎಂದರ್ಥ. ಹೊಸ ಜೀವವೊಂದು ಈ ಪ್ರಪಂಚಕ್ಕೆ ಕಾಲಿಡುವುದು ಎಲ್ಲರಿಗೂ ಸಂತೋಷದ ವಿಚಾರ. ಮಾನವನಿಗೆ ಹುಟ್ಟಿನಿಂದ ಸಾಯುವವರೆಗೆ ಹದಿನಾರು ಸಂಸ್ಕಾರಗಳನ್ನು ಮಾಡುವರು. ಈ ಸಂಸ್ಕಾರಗಳಲ್ಲಿ ಎರಡು ಪ್ರಕಾರಗಳಿವೆ. ಒಂದು ಪೂರ್ವ ಸಂಸ್ಕಾರ, ಇನ್ನೊಂದು ಉತ್ತರ ಸಂಸ್ಕಾರ೨. (ಹಿರೇಮಠ, ಎಸ್ ಜಿ :೧೯೮೧ :೧೭) ಜೀವಿಯ ಗರ್ಭೋತ್ಪತ್ತಿಯಿಂದ ಮರಣದವರೆಗೂ ಸಂಸ್ಕಾರಗಳನ್ನು ನೆರವೇರಿಸುವರು. ಸಂಸ್ಕಾರಗಳು ವಿಶಿಷ್ಟವಾದ ಆಚರಣೆಗಳು ವಿವಾಹ ಎಂಬ ಸಂಸ್ಕಾರದಿಂದ ಸತಿ-ಪತಿಗಳಾದ ಜೋಡಿಗೆ ಗರ್ಭದಾನ ಎನ್ನುವ ಮೊದಲನೆ ಸಂಸ್ಕಾರದ ನಂತರ ಹಸಲರಲ್ಲಿ ಆಚರಣೆಗಳು ಪ್ರಾರಂಭವಾಗುತ್ತವೆ. ಋತುಚಕ್ರ ನಿಂತ ನಂತರ ಗರ್ಭಿಣಿ ಸ್ತ್ರೀಯಲ್ಲಿ ಆಗುವ ದೈಹಿಕ ಲಕ್ಷಣಗಳನ್ನು ಗುರುತಿಸಿ ಆ ಸ್ತ್ರೀಗೆ ವಿಶೇಷವಾದ ಆರೈಕೆಯನ್ನು ಮಾಡುವುದರ ಜೊತೆಗೆ ಗರ್ಭದಲ್ಲಿರುವ ಮಗು ಸದೃಢವಾಗಿ ಬೆಳೆಯಲಿ ಎಂಬ ಕಾರಣಕ್ಕೆ ವಿಶೇಷ ತಿನಿಸುಗಳನ್ನು ಕೊಡುವರು. ಗರ್ಭಿಣಿ ಸ್ತ್ರೀಗೆ ಏಳು ತಿಂಗಳ ನಂತರ 'ಬಯಕೆ ಸಮ್ಮಾನ' ಎನ್ನುವ ಆಚರಣೆಯನ್ನು ಮಾಡುವರು. ನಂತರ ಆಕೆಯನ್ನು ತವರು ಮನೆಗೆ ಕಳುಹಿಸುವರು. ಹಸಲರಲ್ಲಿ ಹೆರಿಗೆಯ ಕಾರ್ಯವನ್ನು ತವರಿನಲ್ಲಿಯೇ ಮಾಡಿಸುತ್ತಾರೆ. ಗರ್ಭಿಣಿ ಸ್ತ್ರೀಗೆ ಒಂಬತ್ತು ತಿಂಗಳು,

ಒಂಬತ್ತು ದಿವಸ ತುಂಬಿದ ನಂತರ ಹೆರಿಗೆ ನೋವು ಕಾಣಿಸಿಕೊಳ್ಳುವುದು ಆಗ ಮನೆಯವರು ತಮ್ಮ ಹಾಡಿಕೇರಿಯಲ್ಲಿರುವ ಹಿರಿಯ ಸೂಲಗಿತ್ತಿಯನ್ನು ಕರೆಯಿಸುವರು. ಆಕೆ ಬಂದು ಹೆರಿಗೆಯನ್ನು ಮಾಡಿಸಿ ಹೊಕ್ಕಳಬಳ್ಳಿಯನ್ನು ಕತ್ತಿಯಿಂದ ಕತ್ತರಿಸುವಳು. ಹೆರಿಗೆಯಾದ ಬಳಿಕ ಮನೆಯ ಹಿತ್ತಲದಲ್ಲಿ ಒಂದು ಗುಂಡಿಯನ್ನು ತೋಡುವರು. ಈ ಗುಂಡಿಯನ್ನು ತೋಡುವವ ಹೆರಿಗೆಯಾದವಳ ಪತಿ. ಹೊಕ್ಕಳಬಳ್ಳಿಯನ್ನು ಗುಂಡಿಯಲ್ಲಿ ಹಾಕಿ ಅದರ ಮೇಲೆ ಬಾಳೆ ಎಲೆಯನ್ನು ಮುಚ್ಚಿ ಸ್ವಲ್ಪ ಮಣ್ಣು ಹಾಕುವರು. ಆದರೆ ಇಂದು ಹಸಲರಲ್ಲಿಯೂ ಕೂಡಾ ಗರ್ಭಿಣಿಯಾದ ನಂತರ ಸ್ತ್ರೀಯನ್ನು ಪ್ರತಿತಿಂಗಳು ದವಾಖಾನೆಗೆ ಹೋಗಿ ಪರೀಕ್ಷೆ ಮಾಡಿಸಿಕೊಂಡು ಬರುವರು. ಅಷ್ಟೇ ಅಲ್ಲ, ಹೆರಿಗೆಯನ್ನು ಕೂಡಾ ಆಸ್ಪತ್ರೆಯಲ್ಲಿಯೇ ಮಾಡಿಸುತ್ತಾರೆ. ಇಂದು ಹೆರಿಗೆ ಆಸ್ಪತ್ರೆಯಲ್ಲಿ ಆಗುವುದರಿಂದ ಈ ಆಚರಣೆ ಮಾಯವಾಗಲು ಪ್ರಾರಂಭವಾಗಿದೆ. ಗರ್ಭಿಣಿ ಸ್ತ್ರೀಗೆ ನಂಜಾಗದಿರಲೆಂದು ಶುಂಠಿ, ಮೆಣಸಿನಕಾರ, ಜೀರಿಗೆ ಕಷಾಯ ಮುಂತಾದವುಗಳನ್ನು ಕೊಡುತ್ತಿದ್ದರು. ಆದರೆ ಇಂದು ಆಸ್ಪತ್ರೆಯಲ್ಲಿಯ ಔಷಧಿಗಳನ್ನು ತೆಗೆದುಕೊಳ್ಳುತ್ತಾರೆ. ಅಷ್ಟೆ ಅಲ್ಲ, ಹಿಂದೆ ಇದ್ದ ಸೂತಕ ಮೈಲಿಗೆಗಳನ್ನು ಪಾಲಿಸುತ್ತಿದ್ದರು. ಆದರೆ ಹಿಂದೆ ಇದ್ದ ಕೆಲವು ನಿಯಮಗಳು ಇಂದು ಬದಲಾವಣೆಗಳಾಗಿವೆ.

೬.೧.೩ ನಾಮಕರಣ ಸಂಬಂಧಿ ಆಚರಣೆಗಳ ಬದಲಾವಣೆ

ನಾಮಕರಣ ಷೋಡಶ ಸಂಸ್ಕಾರಗಳಲ್ಲಿ ಐದನೇಯ ಸಂಸ್ಕಾರ. ಹುಟ್ಟಿದ ಮಗುವಿಗೆ ವಿಧಿ–ವಿಧಾನಗಳ ಪ್ರಕಾರ ಹೆಸರನ್ನಿಡುವ ಸಂಸ್ಕಾರಕ್ಕೆ ನಾಮಕರಣ ಎನ್ನುವರು. ಭಾಷೆಯ ಉಗಮವಾದಾದಂದಿನಿಂದಲೂ ಮನುಷ್ಯನು ವ್ಯಕ್ತಿಗಳಿಗೆ ಮತ್ತು ವಸ್ತುಗಳಿಗೆ ಹೆಸರನ್ನಿಡುತ್ತಲೇ ಬಂದಿದ್ದಾನೆ. ಈ ಸಂಬಂಧ ನಾಮಕರಣವು ಮಗುವನ್ನು ಇನ್ನಿತರರು ಗುರುತಿಸುವುದಕ್ಕಾಗಿ ಇರುವ ಸಾಧನ. ಹೆಸರನ್ನಿಡುವಾಗ ಮಗು ಜನಿಸಿದ ನಕ್ಷತ್ರ, ರಾಶಿ, ವಾರ ಮುಂತಾದವುಗಳಿಗೆ ಹೆಚ್ಚಿನ ಮಹತ್ವವಿದೆ. ಹೆಸರು ಸಾಮಾನ್ಯವಾಗಿ ಆ ಪ್ರದೇಶ, ಬುಡಕಟ್ಟು, ಕುಲದೇವತೆ ಮುಂತಾದವುಗಳನ್ನು ಪ್ರತಿನಿಧಿಸುತ್ತಿದ್ದವು. ಹಸಲರಲ್ಲಿಯೂ ಹದಿನಾರನೇ ದಿವಸಕ್ಕೆ ಹೆಸರನ್ನಿಡುವ ಪದ್ಧತಿ ಇದೆ. ಹಸಲರು ದ್ಯಾವ, ಖೂರಾ, ತಿಮ್ಮ, ದುಗ್ಗ, ಚೌಡ, ಮೈಲ, ಬೀರ, ಈರ ಮುಂತಾದ ಹೆಸರುಗಳನ್ನಿಡುತ್ತಿದ್ದರು. ದುರ್ಗಿ, ಗುತ್ತಿ, ಚೌಡಿ, ಗಣಪಿ, ಖೂರಿ ಮುಂತಾದ ಹೆಸರುಗಳನ್ನಿಡುತ್ತಿದ್ದರು. ಅಷ್ಟೆ ಅಲ್ಲ ಅವರಲ್ಲಿ ಹಿರಿಯ ಮಗು ಗಂಡಾದರೆ ಅಜ್ಜನ ಹೆಸರನ್ನು, ಹೆಣ್ಣಾದರೆ ಅಜ್ಜಿಯ ಹೆಸರನ್ನು ಇಡುತ್ತಿದ್ದರು. ಆದರೆ ಆಧುನಿಕತೆಯ ಸೆಳೆತಕ್ಕೆ ಸಿಕ್ಕ ಹಸಲರು ತಮ್ಮ ಮಕ್ಕಳಿಗೆ ಹೆಸರನ್ನಿಡುವ ಪದ್ದತಿ ಹಿಂದಿನಂತೆ ಇರದೆ ಈಗ ಅಶೋಕ, ರಾಮಮೂರ್ತಿ, ಶ್ರೀನಿವಾಸ, ಸಚಿನ, ಅಣ್ಣಯ್ಯ ಮುಂತಾದ ಹೆಸರುಗಳನ್ನಿಟ್ಟರೆ, ಹೆಣ್ಣು ಮಕ್ಕಳಿಗೆ ಲಕ್ಷ್ಮೀ, ಸೀತಾ, ಶಾರದಾ, ಸುಪ್ರಿಯಾ ಮುಂತಾದ ಹೆಸರುಗಳನ್ನಿಟ್ಟಿದ್ದಾರೆ. ಈ ಮೂಲಕ ಹಸಲರು ಮೇಲ್ವರ್ಗದವರ ಸಂಸ್ಕೃತಿಯನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದಾರೆ ಎಂಬುವುದನ್ನು ಎತ್ತಿ ತೋರಿಸುತ್ತದೆ.

ಮಗುವಿಗೆ ಹಾಕುವ ತೊಟ್ಟಿಲಲ್ಲಿ ಹಾಕುವ ಸಂಪ್ರದಾಯ ಇದ್ದು, ಎರಡು ಪ್ರಕಾರ ತೊಟ್ಟಿಲುಗಳನ್ನು ಕಾಣುತ್ತೇವೆ. ಒಂದು ಹೂ ತೊಟ್ಟಿಲು, ಎರಡು ಮಂಕರಿ ತೊಟ್ಟಿಲು ಆದರೆ ಇಂದು ಮಂಕರಿ

ತೊಟ್ಟಿಲು ಮಾಯವಾಗಿದೆ. ಮಂಕರಿ ತೊಟ್ಟಿಲು ಮೇಲ್ಛಾವಣಿಗೆ ಅಥವಾ ಎರಡು ಗಿಡಕ್ಕೆ ಹಗ್ಗವನ್ನು ಕಟ್ಟಿ ಆ ಎರಡು ಹಗ್ಗಗಳ ನಡುವೆ ಒಂದು ಗೋಣಿಚೀಲ ಅಥವಾ ಅರಿವೆಯನ್ನು ಹಾಕಿ ಮಗುವನ್ನು ಮಲಗಿಸುತ್ತಿದ್ದರು. ಆದರೆ ಇಂದು ಈ ತೊಟ್ಟಿಲು ಮಾಯವಾಗಿ ಪೇಟೆಯಲ್ಲಿ ಸಿಗುವ ಮರದ ತೊಟ್ಟಿಲನ್ನು ಬಳಸಲು ಪ್ರಾರಂಭಿಸಿದ್ದಾರೆ.

೬.೧.೪ ಕುಟುಂಬದ ರಚನೆಯಲ್ಲಿ ಬದಲಾವಣೆ

ಒಂದು ಕಾಲದಲ್ಲಿ ಹಸಲರು ಬುಡಕಟ್ಟಿನ ಗುಣ ಹೊಂದಿದ್ದರು. ಕಾಡುವಾಸಿಗಳಾಗಿ ಆಹಾರ ಸಂಗ್ರಹಿಸುತ್ತಾ, ಬೇಟೆಯನ್ನಾಡುತ್ತಾ ಕಾಡಿನಿಂದ ಕಾಡಿಗೆ ಅಲೆದಾಡುವ ಅಲೆಮಾರಿಗಳಾಗಿದ್ದರು. ಆದರೆ ಜಾಗತೀಕರಣ, ಸಂಸ್ಕೃತೀಕರಣ, ಪಾಶ್ಚಿಮಾತ್ತೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಅಲೆಮಾರಿ ಜೀವನವನ್ನು ತೊರೆದು, ತಮ್ಮ ಬುಡಕಟ್ಟಿನ ಕುಲಕಸುಬನ್ನು ತೊರೆದು ನಾಡಿನ ಬದುಕಿಗೆ ಹೊಂದಿಕೊಂಡು ಜೀವನ ಮಾಡಲು ಪ್ರಾರಂಭಿಸಿದ್ದಾರೆ. ನಾಗರಿಕ ಪ್ರಪಂಚಕ್ಕೆ ಹೊಂದಿಕೊಂಡ ಹಸಲರು ತಮ್ಮ ಬುಡಕಟ್ಟುಗಳ ಗುಣಲಕ್ಷಣಗಳನ್ನು ತ್ಯಜಿಸುವುದರ ಮೂಲಕ ಸ್ಥಿರವಾದ ಪ್ರದೇಶದಲ್ಲಿ ನೆಲೆಸಲು ಪ್ರಾರಂಭಿಸಿದರು.

ಹಸಲರು ವಿವಿಧ ಸಮುದಾಯಗಳ ಮಧ್ಯ ಜೀವನ ಸಾಗಿಸುವುದರಿಂದ ಆ ಸಮುದಾಯಗಳ ರೀತಿ ನೀತಿಗಳು ಸಹಜವಾಗಿ ಹಸಲರ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿದವು. ಇದರಿಂದ ಹಸಲರು ಹೊಸ ಜೀವನ ವ್ಯವಸ್ಥೆಗೆ ಹೊಂದಿಕೊಳ್ಳುವುದರ ಮೂಲಕ ತಮ್ಮ ಜೀವನ ಕ್ರಮದಲ್ಲಿಯೂ ಕೂಡಾ ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಂಡರು. ಇದಕ್ಕೆ ಹವ್ಯಕ್‌ರ ಪ್ರಭಾವವೇ ಕಾರಣ. ಇದು ಹಸಲರಿಗೆ ಮುಂದೆ ತಮ್ಮದೇಯಾದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ಪ್ರೇರಣೆಯಾಯಿತು. ಸಾಮಾಜಿಕ ರಚನೆಯಲ್ಲಿ ಕುಟುಂಬವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮೊದಲು ಹಸಲರು ತಮ್ಮ ಕುಟುಂಬದ ರಚನೆಯಲ್ಲಿ ಬದಲಾವಣೆಯನ್ನು ಕಂಡುಕೊಂಡರು. ಹಿಂದೆ ಹಸಲರಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿತ್ತು. ಕುಟುಂಬದಲ್ಲಿ ಅಜ್ಜ, ಅಜ್ಜಿ, ತಂದೆ, ತಾಯಿ, ಮಕ್ಕಳು ಮತ್ತು ಮೊಮ್ಮಕ್ಕಳು ಹೀಗೆ ಮೂರ್ನಾಲ್ಕು ತಲೆಮಾರಿಗೆ ಸಂಬಂಧಿಸಿದ ಜನರು ಒಂದೇ ಸೂರಿನಡಿಯಲ್ಲಿ ವಾಸಿಸುತ್ತಿದ್ದರು. ಅಲ್ಲದೇ ಎಲ್ಲರೂ ಸಾಮೂಹಿಕವಾಗಿ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಅಷ್ಟೇ ಅಲ್ಲ, ಸಾಮೂಹಿಕ ಭೋಜನ ಶಾಲೆಯೂ ಕೂಡಾ ಇತ್ತು. ಅಲ್ಲದೆ ಕುಟುಂಬದ ಹಿರಿಯನೇ ಕುಟುಂಬದ ಕರ್ತನಾಗಿ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದನು. ಆತನು ಆಕಸ್ಮಿಕವಾಗಿ ತೀರಿಕೊಂಡರೆ ಕುಟುಂಬದ ಹಿರಿಯ ಮಗನೆ ಅಧಿಕಾರಕ್ಕೆ ಬರುತ್ತಿದ್ದನು. ಕೆಲವು ಸಂದರ್ಭಗಳಲ್ಲಿ ಯಾರೂ ಈ ಜವಾಬ್ದಾರಿಯನ್ನು ನಿರ್ವಹಿಸಲು ಆಗದೇ ಇದ್ದರೆ ಅಥವಾ ಅಪ್ರಾಪ್ತ ವಯಸ್ಕರಾಗಿದ್ಧರೆ ಸ್ವತಃ ತಾಯಿಯೇ ಈ ಜವಾಬ್ದಾರಿಯನ್ನು ಹೊತ್ತುಕೊಳ್ಳುವಳು. ಭಾರತೀಯ ಸಮಾಜವು ಪಿತೃಪ್ರಧಾನವಾದ ಸಮಾಜವಾಗಿದೆ. ಇಲ್ಲಿ ಗಂಡು ಮಕ್ಕಳಿಗೆ ಮಾತ್ರ ವಿಶೇಷವಾದ ಸ್ಥಾನಮಾನವಿದೆ. ಆದರೆ ಇಂದು ಮೊದಲಿನ ಹಾಗೆ ಇಲ್ಲ. ಇಂದು ಮದುವೆಯಾದ ಗಂಡ-ಹೆಂಡತಿಯರಿಗೆ ಪ್ರತ್ಯೇಕವಾದ ಮನೆಯನ್ನು ನಿರ್ಮಿಸಿಕೊಡುವುದರ

ಜೊತೆಗೆ ತನ್ನ ಕುಟುಂಬದ ಜವಾಬ್ದಾರಿಯನ್ನು ಅವನ ಹೆಗಲ ಮೇಲೆಯೇ ಹಾಕುವರು. ಇದರಿಂದ ಅವಿಭಕ್ತ ಕುಟುಂಬ ಒಡೆದು ವಿಭಕ್ತ ಕುಟುಂಬಗಳಾಗಿವೆ. ಇವರಲ್ಲಿ ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ.

ಹಸಲರು ತಮ್ಮ ಸುತ್ತಮುತ್ತಲಿನ ಸಮುದಾಯಗಳ ಪ್ರಭಾವದಿಂದ ಇವರು ಕೌಟುಂಬಿಕ ಜೀವನ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಬಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸಲರಲ್ಲಿ ಮಾತೃ ಪ್ರಧಾನ ಕುಟುಂಬವಿತ್ತು. ಇದು ಆ ಜಿಲ್ಲೆಯ ಮೇಲ್ವರ್ಗದವರ ಪ್ರಭಾವದಿಂದಾಗಿ ಬಂದಿದೆ. ಆದರೆ ಇಂದು ಇವರಲ್ಲಿ ಮಾತೃ ಪ್ರಧಾನ ಕುಟುಂಬ ನಿಧಾನವಾಗಿ ಬದಲಾವಣೆಯಾಗಲು ಪ್ರಾರಂಭವಾಗಿದೆ. ಇದಕ್ಕೆ ಕಾರೆಬೈಲಿನ ಕನ್ಯೆಯನ್ನು ಸಿದ್ಧಾಪೂರ ತಾಲೂಕಿನ ಸುತ್ಲುಮನೆಗೆ ಕೊಟ್ಟಿರುವುದರಿಂದ ಆ ಕನ್ಯೆಯು ಸುತ್ಲುಮೆಯಲ್ಲಿಯೇ ಇರುವಳು. ಇದು ಮಾತೃಪ್ರಧಾನ ಕುಟುಂಬ ಬದಲಾವಣೆಯ ಲಕ್ಷಣ.

ಘಟ್ಟದ ಕೆಳಗಿನ ಹಸಲರಲ್ಲಿ ಅಳಿಕಟ್ಟು ಎನ್ನುವ ಸಂಪ್ರದಾಯವಿದೆ. ಅಳಿಕಟ್ಟು ಎಂದರೆ, ಮದುವೆಯಾದ ನಂತರ ವರನು ತನ್ನ ಹೆಂಡತಿಯ ಮನೆಯಲ್ಲಿಯೇ ವಾಸಮಾಡುವನು. ಆದರೆ ಇಂದು ಈ ಸಂಪ್ರದಾಯವೂ ಕೂಡಾ ಬದಲಾವಣೆಯಾಗಿ ಮಕ್ಕಳಕಟ್ಟು ಎನ್ನುವ ಸಂಪ್ರದಾಯ ಪ್ರಾರಂಭವಾಗಿದೆ.

ಒಟ್ಟಿನಲ್ಲಿ ಇವರ ಕೌಟುಂಬಿಕ ರಚನೆಯಲ್ಲಿ ಬದಲಾವಣೆಯಾಗಲು ಆಧುನಿಕತೆಯ ಪ್ರಭಾವವೇ ಕಾರಣ.

೬.೧.೫ ವಿವಾಹ ಆಚರಣೆಗಳಲ್ಲಿ ಬದಲಾವಣೆಗಳು

ವಿವಾಹವು ಷೋಡಸ ಸಂಸ್ಕಾರಗಳಲ್ಲಿ ಹದಿನೈದನೆಯ ಸಂಸ್ಕಾರ. ವಿವಾಹವು ಎರಡು ಭಿನ್ನ ಕುಟುಂಬಗಳನ್ನು ಬೆಸೆಯುವ ಸಾಧನ. ವಿವಾಹವು ಕೇವಲ ಲೈಂಗಿಕ ಬಯಕೆಗಳ ಪೂರೈಕೆಗಾಗಿರದೇ ಸಂತಾನ ಅಭಿವೃದ್ಧಿಯು ಅದರ ಮೂಲ ಉದ್ದೇಶ. ಮಾನವನು ತನ್ನ ಲೈಂಗಿಕ ಬಯಕೆಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಈಡೇರಿಸಿಕೊಳ್ಳಲು ವಿವಾಹವನ್ನು ಮಾಡಿಕೊಳ್ಳುವನು. ಪ್ರತಿಯೊಂದು ಬುಡಕಟ್ಟುಗಳಲ್ಲಿ ಒಂದು ಸಾರ್ವತ್ರಿಕವಾದ ಸಂಸ್ಥೆ. ಮೊದಲು ಹಸಲರು ತಮ್ಮ ಮದುವೆಗಳನ್ನು ತಮ್ಮ ಹಾಡಿಕೇರಿಗಳಲ್ಲಿಯೇ ಸರಳವಾಗಿ ನೆರವೇರಿಸುತ್ತಿದ್ದರು. ಆದರೆ ಇಂದು ಹಸಲರ ಮದುವೆಗಳು ಆಡಂಬರದಿಂದ ನಡೆಯುತ್ತವೆ. ಅಷ್ಟೇ ಅಲ್ಲ, ಹಸಲರು ಮದುವೆಗಳಲ್ಲಿ ಹವ್ಯಕ್ ಬ್ರಾಹ್ಮಣರಂತೆ ಮದುಮಗನಿಗೆ ಜನಿವಾರ ಹಾಕುವ ಪದ್ಧತಿಯೂ ಹೊಸನಗರ ತಾಲೂಕಿನ ಹಾಗಲ ಮನೆಯಲ್ಲಿ ಆಚರಣೆಯಲ್ಲಿದೆ. ಇದು ಎಂ ಎನ್ ಶ್ರೀನಿವಾಸರ ಸಂಸ್ಕೃತೀಕರಣದ ಒಂದು ಉದಾಹರಣೆ. ಹಸಲರು ಮದುವೆಯ ಸಂದರ್ಭದಲ್ಲಿ ನಲ್ಕೆಯವರನ್ನು ಕರೆಯಿಸುವ ಪದ್ಧತಿ ಇತ್ತು. ಆದರೆ ಇಂದು ನಲ್ಕೆಯುವರನ್ನು ಕರೆಸದೇ ವಿವಾಹ ಏರ್ಪಡಿಸುತ್ತಾರೆ. ಹಸಲರು ಸಾಮಾನ್ಯವಾಗಿ ತಮ್ಮ ಹಾಡಿಕೇರಿಯ ಸಮೀಪದಲ್ಲಿರುವ ಹಾಡಿಕೇರಿ ವರ ಅಥವಾ ಕನ್ಯೆಯ ನಡುವೆ ವಿವಾಹ ಮಾಡುತ್ತಿದ್ದರು.

ಏಕೆಂದರೆ ಮದುವೆಯಾದ ಮೊದಲನೆಯ ವರ್ಷ ಹೆಣ್ಣು ಕಡ್ಡಾಯವಾಗಿ ಮೂರು ಸಲ ತವರಿಗೆ ಬರಲೇಬೇಕು. ಆದ್ದರಿಂದ ಹಸಲರು ತಮ್ಮ ಸಮೀಪವಿರುವ ಹಾಡಿಕೇರಿ ವರ ಅಥವಾ ಕನ್ಯೆಯನ್ನು ಆಯ್ಕೆ ಮಾಡುತ್ತಿದ್ದರು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಹಸಲರೂ ಕೂಡಾ ಅಂತರ ಜಿಲ್ಲೆಯ ವಧು-ವರರನ್ನು ಆಯ್ಕೆ ಮಾಡಲು ಪ್ರಾರಂಭಮಾಡಿದ್ದಾರೆ. ಹಸಲರಲ್ಲಿ ಜಾತಕ, ಜ್ಯೋತಿಷ್ಯದ ನಂಬಿಕೆ ಜಾಸ್ತಿ. ಗಂಡು ಹೆಣ್ಣಿನ ಜಾತಕ ತೋರಿಸಿ ಅವುಗಳಲ್ಲಿ ಹೊಂದಾಣಿ ಇದೆಯೋ, ಇಲ್ಲವೋ ಎಂದು ನೋಡುತ್ತಿದ್ದರು. ಆದರೆ ಇಂದು ಅದು ಕಡ್ಡಾಯವೇನಲ್ಲ. ಅಲ್ಲದೆ ಮದುವೆಗೆ ಗಾರುಡಿಗ ಅಥವಾ ಮಂತ್ರವಾದಿಯನ್ನು ಕರೆಯಿಸುತ್ತಿದ್ದರು. ಆದರೆ ಇಂದು ಇಲ್ಲ.

ಹಸಲರಲ್ಲಿ ವಿವಾಹವು ಭಿನ್ನ ಬಳಿಗಳಲ್ಲಿ ನೆರವೇರುತ್ತಿದ್ದವು. ಆದರೆ ಇಂದಿನ ಯುವಕರಿಗೆ ಬಳಿಗಳ ಬಗ್ಗೆ ಅಷ್ಟೊಂದು ಗಮನ ಕೊಡುವುದಿಲ್ಲ. ಅಲ್ಲದೆ ಚಿಕ್ಕಪ್ಪನ ಮಗಳನ್ನು ವಿವಾಹವಾದ ಪ್ರಸಂಗವು ಕಾರ್ಗಲ್‌ನಲ್ಲಿ ನಡೆದಿದೆ ಎಂದು ರಾಮಣ್ಣ ಕೂಳಕಾರ ಸಾ॥ ಕಾರ್ಗಲ್ ಈತನು ಹೇಳುತ್ತಾನೆ.

೬.೧.೬ ಜೀವನ ಸಂಗಾತಿಯ ಆಯ್ಕೆಯಲ್ಲಿನ ಬದಲಾವಣೆಗಳು

ಹಸಲರಲ್ಲಿ ಜೀವನ ಸಂಗಾತಿಗಳ ಆಯ್ಕೆಯ ವಿಚಾರದಲ್ಲಿಯೂ ತಂದೆ ತಾಯಿಗಳು ತಮ್ಮ ಸಂಬಂಧಿಗಳ ಮಧ್ಯೆಯೇ ವರ ಅಥವಾ ಕನ್ಯೆಯನ್ನು ನಿಶ್ಚಯ ಮಾಡುತ್ತಿದ್ದರು. ತಂದೆ ತಾಯಿಗಳ ನಿರ್ಣಯವೇ ಅಂತಿಮ. ಆದರೆ ಇಂದು ಹಸಲರ ಹೆಣ್ಣು ಮತ್ತು ಗಂಡು ಪರಸ್ಪರ ನೋಡಿಕೊಂಡೇ ವಿವಾಹವಾಗುವರು. ಅಷ್ಟೇ ಅಲ್ಲ, ಈಗಿನ ಕೆಲವು ಹಸಲರ ಯುವಕ ಮತ್ತು ಯುವತಿಯರು ಸ್ವತಂತ್ರವಾಗಿ ತಮ್ಮ ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಂಡ ನಿದರ್ಶನಗಳು ಕಾರ್ಗಲ್, ಸಾಗರ, ಹಿರೇಮನೆ, ತನ್ನೋಡಿ ಮುಂತಾದ ಕಡೆಗಳಲ್ಲಿ ಕಾಣಸಿಗುವರು.

೬.೧.೭ ತೆರವು ಪದ್ಧತಿಯ ಬದಲಾಗಿ ವರದಕ್ಷಿಣೆ ಪ್ರಾರಂಭವಾಗಿದೆ

ಹಸಲರಲ್ಲಿ ಮೊದಲು ತೆರವು ಪದ್ಧತಿ ಅಸ್ತಿತ್ವದಲ್ಲಿತ್ತು. ಇದಕ್ಕೆ ಕಾರಣ "ತಂದೆ ತಾಯಿಯರು ಹೆಣ್ಣು ಮಕ್ಕಳನ್ನು ಸಾಕಿ ಸಲುಹುವುದರಿಂದ ಅವರಿಗೆ ತೆರ ಕೊಟ್ಟು ಮದುವೆಯಾದರೆ ಹೆಣ್ಣಿನಿಂದ ಗಂಡನ ಮನೆಯವರು ಯಾವುದೇ ಕೆಲಸ ಮಾಡಿಸಬಹುದು ಎಂಬ ಕಾರಣಕ್ಕಾಗಿ ತೆರವು ಕೊಡುತ್ತಿದ್ದರು". (ಭಟ್ಟ, ಜಿ ಎಸ್ :೧೯೯೩ :೩೫) ಆದರೆ ಇಂದು ಈ ಪದ್ಧತಿ ಮಾಯವಾಗಿ ವರದಕ್ಷಿಣೆ ಬಂದಿದೆ.

"ತೆರಕೊಡದೆ ತಂದಂಥ ಹೆಣ್ಣಿನ ಕೈಯಲ್ಲಿ ಮನೆಯ ಸೆಗಣಿಯನ್ನು ತೆಗೆಯಿಸಬಾರದು ಎಂಬ ನಂಬಿಕೆ ಹಸಲರದು". (ಅದೆ : ೩೫) ಈ ಪದ್ಧತಿ ಕುಂದಾಪೂರ ತಾಲೂಕಿನ ಹಸಲರ ಹಾಡಿಕೇರಿಯಲ್ಲಿ ಇತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ.

"ವಿವಾಹವು ಆದಿತ್ಯವಾರವೇ ಪ್ರಶಸ್ತವಾದ ದಿನವೆಂದು ನಿರ್ಧರಿಸಿದರು". (ಅದೆ : ೩೭) ಆದರೆ ಇಂದು ಎಲ್ಲಾ ದಿನಗಳಲ್ಲಿ ಮದುವೆಗಳು ನಡೆಯುತ್ತವೆ. ಅಷ್ಟೆ ಅಲ್ಲ, ಹಿಂದೆ ಅವು ಲಗ್ನ

ಪತ್ರಿಕೆಗಳನ್ನು ಪ್ರಿಂಟ್ ಮಾಡುತ್ತಿರಲಿಲ್ಲ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಲಗ್ನ ಪತ್ರಿಕೆಯನ್ನು ಅಚ್ಚು ಹಾಕಿಸಲು ಪ್ರಾರಂಭಿಸಿದ್ದಾರೆ. ಹಿಂದೆ ಹಸಲರು ಸರಳ ರೀತಿಯಲ್ಲಿ ವಿವಾಹವಾದರೆ ಇಂದು ಅತ್ಯಂತ ಅದ್ದೂರಿಯಾಗಿ ಮದುವೆಗಳನ್ನು ಮಾಡುವರು.

೬.೧.೮ ವಿವಾಹ ವಿಚ್ಛೇದನದಲ್ಲಿ ಬದಲಾವಣೆಗಳು

ಹಸಲರಲ್ಲಿ ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ. ವಿಚ್ಛೇದನೆ ಪಡೆಯಬೇಕೆನ್ನುವರು ತನ್ನ ಜಾತಿಯ ಹಿರಿಯರನ್ನು ಕೂಡಿಸಿ ವಿಚ್ಛೇದನಕ್ಕೆ ಕಾರಣವನ್ನು ತಿಳಿಸಿ, ವಿಚ್ಛೇದನ ಮಾಡಿಕೊಳ್ಳಬಹುದಿತ್ತು. ಆದರೆ ಇಂದು ವಿಚ್ಛೇದನ ಬಯಸಿ ನ್ಯಾಯಾಲಯಕ್ಕೆ ಹೋದ ಪ್ರಸಂಗಗಳು ಇವೆ ಎಂದು ಹೊಸನಗರ ತಾಲೂಕಿನ ಮತ್ತಿಮನೆಯ ಕೃಷ್ಣ ತಿಮ್ಮ ಹೇಳುತ್ತಾನೆ.

೬.೧.೯ ಉಡುಗೆ-ತೊಡುಗೆಗಳಲ್ಲಿ ಬದಲಾವಣೆಗಳು

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಬಟ್ಟೆಯೂ ಒಂದು. ಪ್ರತಿಯೊಬ್ಬನ ಮಾನ ಮುಚ್ಚಲು ಬಟ್ಟೆ ಅವಶ್ಯಕ. ಬಟ್ಟೆ ಧರಿಸುವುದು ಸಾಮಾಜಿಕ ಗೌರವಕ್ಕಾಗಿ ಇದು ಅವರ ಸ್ಥಾನಮಾನ, ಆಸಕ್ತಿ ಅಪೇಕ್ಷೆಗಳನ್ನು ಅವಲಂಬಿಸಿದ್ದರೂ ಅವುಗಳ ಬಗೆಗೆ ಒಂದು ಒಪ್ಪಂದವಿದೆ. ಅಷ್ಟೇ ಅಲ್ಲ ಅದು ಒಂದು ಕಲೆ.

ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜ ಉಡುಗೆ-ತೊಡುಗೆಗಳ ಬಗೆಗೆ ತಮ್ಮದೇಯಾದ ವ್ಯವಸ್ಥೆಯನ್ನು ಅನುಸರಿಸಿಕೊಂಡು ಬಂದಿದೆ. ಇದು ಕಾಲ, ಪ್ರದೇಶ, ಮತ, ಜನಾಂಗ ವೃತ್ತಿಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ಇವೆ. ಬೇರೆ ಬೇರೆ ಬುಡಕಟ್ಟಿನವರು ಬೇರೆ ಬೇರೆ ಉಡುಗೆ-ತೊಡುಗೆಗಳನ್ನು ಹೊಂದಿದ್ದಾರೆ. ಹಸಲರು ಉಡುಗೆ-ತೊಡುಗೆಗಳಲ್ಲಿ ಇತರ ಬುಡಕಟ್ಟುಗಳಿಗಿಂತ ಭಿನ್ನರಲ್ಲ. ಹಸಲರ ಗಂಡಸರು ಕಚ್ಚೆ ತೊಟ್ಟು ಚಿಕ್ಕ ಮುಂಡ ತೊಡುತ್ತಿದ್ದರು. ಅಲ್ಲದೆ ಒಳಗಡೆ ಲಂಗೋಟಿ ಹಾಕಿ ಮುಂಡು ಸುತ್ತಿಕೊಳ್ಳುತ್ತಿದ್ದರು. ಆರು ಮೊಳದ ಕುರುಗೋಡು ಪಂಜೆಯನ್ನುಡುತ್ತಿದ್ದರು. "ಹಸಲರ ಗಂಡಸರು ಪಾದರಕ್ಷೆಗಳನ್ನು ಧರಿಸುವುದು ನಿಷೇಧವಾಗಿತ್ತು. ತಪ್ಪಿದವರಿಗೆ ಐವತ್ತು ರೂಪಾಯಿ ದಂಡ ವಿಧಿಸುತ್ತಿದ್ದರು"೬. (ಅದೇ : ೨೩) ಆದರೆ ಇಂದಿನ ಯುವಕರು ಜೀನ್ಸ್ ಪ್ಯಾಂಟ, ಟೀಶರ್ಟ್, ಪ್ಯಾಂಟ, ಬುಶರ್ಟ್ ಮುಂತಾದವುಗಳನ್ನು ಧರಿಸುತ್ತಿದ್ದಾರೆ. ಕಣ್ಣಿಗೆ ತಂಪು ಕನ್ನಡಕವನ್ನು ಹಾಕುತ್ತಿದ್ದಾರೆ.

ಹಸಲರ ಹೆಂಗಸರು ಮೊಣಕಾಲು ಕೆಳಗೆ ಸೀರೆಯುಟ್ಟು ಗೊಬ್ಬೆ ಸೆರಗು ಹಾಕುತ್ತಿದ್ದರು. ಅಲ್ಲದೆ ಕಪ್ಪು ಮತ್ತು ಕೆಂಪು ದಂಡಿನ ಸೀರೆ ಉಡುವರು. "ಹಸಲರ ಹೆಂಗಸರು ಪಾದರಕ್ಷೆಗಳನ್ನು ಧರಿಸುತ್ತಿರಲಿಲ್ಲ"೭. (ಅದೇ : ೨೩) ಆದರೆ ಇಂದು ಹಸಲರ ಹೆಂಗಸರು ಪೇಟೆಯಲ್ಲಿ ದೊರೆಯುವ ಭಿನ್ನ ಭಿನ್ನ ಬಣ್ಣಗಳಿಂದ ಕೂಡಿದ ಸೀರೆಗಳನ್ನುಡುವರು, ಹೆಣ್ಣು ಮಕ್ಕಳು ಕಂಪನಿಯ ಚಪ್ಪಲಗಳನ್ನು ಧರಿಸುವರು.

ಹಸಲರ ಸ್ತ್ರೀಯರು ಕಿವಿಗೆ ಬೆಂಡೋಲೆ, ಗಾಜಿನ ಬಳೆ, ಬೆಳ್ಳಿ ಕೋಲ್ಕಡಗ, ದಂಡುಗಳು, ಸೊಂಟಕ್ಕೆ ಗೆಜ್ಜೆಪಟ್ಟಿ ಧರಿಸುವರು. "ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸಲರ ಹೆಂಗಸರು ಬೆಳ್ಳಿ

ಬಂಗಾರದ ಆಭರಣಗಳನ್ನು ಧರಿಸುವುದು ನಿಷೇಧಿಸಿತ್ತು"೮. (ಅದೆ : ೨೩) ಆದರೆ ಇಂದು ಹಸಲರ ಹೆಂಗಸರು ಸಾಂಪ್ರದಾಯಿಕವಾದ ಆಭರಣಗಳನ್ನು ಬಿಟ್ಟು ಹೊಸ ರೀತಿಯ ಬಂಗಾರದ ಆಭರಣಗಳನ್ನು ಧರಿಸುತ್ತಿದ್ದಾರೆ. ಅವರು ಹಿಂದೆ ಧರಿಸುತ್ತಿದ್ದ ಕಂಚಿನ ಹಿಂಬಳೆಯ ಬದಲಿಗೆ ಗಾಜಿನ ಬಳೆಗಳು ಬಂದಿವೆ. ಹಸಲರಲ್ಲಿ ಮೂಗು ಚುಚ್ಚಿಕೊಳ್ಳುವುದು ಇಂದು ಜನಪ್ರಿಯವಾಗಿದೆ. ಪತಿ ಬದುಕಿದ್ದರೆ ಕಿವಿಯೋಲೆ, ಮೂಗುತಿ, ಕರಿಮಣಿ, ಬಳೆ, ಕಾಲುಂಗುರ ಧರಿಸುತ್ತಿದ್ದರು. ಆದರೆ ಇಂದು ಪತಿ ನಿಧನದ ನಂತರವೂ ಕಾಲುಂಗರುವನ್ನು ಬಿಟ್ಟು ಕಿವಿಯೋಲೆ, ಮೂಗುತಿ, ಬೊಟ್ಟು ಮತ್ತು ಬಳೆಗಳನ್ನು ಹಾಕುತ್ತಾರೆ. ಇಂಥ ಒಂದು ಉದಾಹರಣೆ ಹಿರೇಮನೆಯಲ್ಲಿ ಸಿಗುತ್ತದೆ ಎಂದು ಮಾಲತಿ ಗಣಪ ಹೇಳುತ್ತಾರೆ.

ಹಿಂದೆ ಹಸಲರ ಸ್ತ್ರೀಯರು ತಮ್ಮ ತಲೆಗೂದಲನ್ನು ಬಾಚದೆ ಹಾಗೆಯೇ ಜಡೆ ಕಟ್ಟಿಕೊಳ್ಳುತ್ತಿದ್ದರು. ಆದರೆ ಇಂದಿನ ಯುವತಿಯರು ಕೂದಲುಗಳನ್ನು ಒಪ್ಪಾಗಿ ಕತ್ತರಿಸಿ, ಜಡೆ ಹಾಕಿಕೊಳ್ಳುತ್ತಾರೆ. ಅಷ್ಟೆ ಅಲ್ಲ, ಬ್ಯೂಟಿ ಪಾರ್ಲರ್‌ಗಳಿಗೆ ಹೋಗಿ ಒಪ್ಪವಾಗಿ ಹುಬ್ಬು ಕತ್ತರಿಸಿಕೊಳ್ಳುವುದರ ಜೊತೆಗೆ ಸೌಂದರ್ಯವರ್ಧಕ ವಸ್ತುಗಳಾದ ಪೌಡರ್, ಸ್ನೊ, ಲಿಪಸ್ಟಿಕ್ ಮುಂತಾದವುಗಳನ್ನು ಪೇಟೆಯಿಂದ ತಂದು ಉಪಯೋಗಿಸುತ್ತಾರೆ.

ಹಿಂದೆ ಹಸಲರ ಸ್ತ್ರೀಯರಲ್ಲಿ ಹಚ್ಚೆ ಹಾಕಿಸಿಕೊಳ್ಳುವ ಪದ್ಧತಿ ಇತ್ತು. ಹಚ್ಚೆ ಹಾಕಿಸಿಕೊಳ್ಳುವುದರಿಂದ ತಮ್ಮ ಸೌಂದರ್ಯ ಹೆಚ್ಚುತ್ತದೆ ಎಂಬ ಭಾವನೆ ಅವರಲ್ಲಿತ್ತು. ಇದಕ್ಕಾಗಿ ಬಳ್ಳಾರಿ ಕಡೆಯಿಂದ ಬರುವ ಕಿಳ್ಳಿಖ್ಯಾತರಿಂದ ಬಗೆಗೆಯ ಹಚ್ಚೆಯ ಚಿತ್ರಗಳಾದ ಲತ್ತು, ಗಿಂಡಿ, ರಾಮ, ಸೀತೆ, ಚಂಡುಹೂ, ಗಂಡನ ಹೆಸರು ಮುಂತಾದವುಗಳನ್ನು ಹಣೆ, ಗದ್ದ, ಗಲ್ಲ, ಕೈ ಮುಂತಾದುವಗಳ ಮೇಲೆ ಹಾಕಿಸಿಕೊಳ್ಳುತ್ತಿದ್ದರು. ಆದರೆ ಇಂದಿನ ಯುವತಿಯರು ಹಚ್ಚೆ ಹಾಕಿಸಿಕೊಳ್ಳುವುದನ್ನು ಇಷ್ಟಪಡುವುದಿಲ್ಲ.

೬.೧.೧೦ ವಸತಿ ವ್ಯವಸ್ಥೆಯಲ್ಲಿನ ಬದಲಾವಣೆಗಳು

ಹಸಲರು ಮೂಲತಃ ಅರಣ್ಯವಾಸಿಗಳು. ಮೊದಲು ಇವರು ಏಕಾಂತಪ್ರಿಯರು. "ಹಸಲರು ಏಕಾಂಗಿಯಾಗಿ ಚಿಕ್ಕ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಅವರು ಗುಡಿಸಿಲಿನಲ್ಲಿ ಅಂಬೇಗಾಲಿಕ್ಕಿ ಒಳಗೆ ಹೋಗಬೇಕಾಗುತ್ತದೆ. ಅದಕ್ಕಿರುವುದು ಒಂದೇ ಚಿಕ್ಕದಾದ ಬಾಗಿಲು. ಇವರು ಸಂಕೋಚ ಸ್ವಭಾವದವರಾಗಿರುವುದರಿಂದ ಅರಣ್ಯದಲ್ಲಿ ತಲೆತಪ್ಪಿಸಿಕೊಂಡು ತಿರುಗುತ್ತಾರೆ" (ಹುಚ್ಚಪ್ಪ ಮಾಸ್ತರ ಎನ್ :೧೯೯೮ : ೧೦) ಆದರೆ ಇಂದು ಅವರು ಹಳ್ಳಿಗಳಿಗೆ ಬಂದು ಯಜಮಾನರ ತೋಟ ಮತ್ತು ಗದ್ದೆಗಳಲ್ಲಿ ದುಡಿಯುತ್ತಾರೆ. ಯಜಮಾನರು ಕೊಟ್ಟ ಗುಡಿಸಲುಗಳಲ್ಲೇ ವಾಸಿಸುತ್ತಾರೆ.

ಆದರೆ ಚಿಕ್ಕಮಗಳೂರಿನಲ್ಲಿರುವ ಹಸಲರು ಕಾಫಿ ಎಸ್ಟೇಟುಗಳಲ್ಲಿ ದುಡಿಯುವುದರಿಂದ ಇವರು ಕೂಡಾ ಯಜಮಾನ ಹಾಕಿಕೊಟ್ಟ ಒಂದೇ ಆಕಾರವಿರುವ ಮಣ್ಣು ಮತ್ತು ಇಟ್ಟಿಗೆಗಳಿಂದ ಕಟ್ಟಿದ ಮನೆಗಳಲ್ಲಿ ವಾಸಮಾಡುತ್ತಾರೆ.

ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ವಾಸವಾಗಿರುವ ಹಸಲರು ಹಿಂದೆ ಅಡಿಕೆ ಸೋಗೆಗಳನ್ನು ಹೊದಿಸಿ, ಮಣ್ಣಿನಿಂದ ಮನೆಗಳನ್ನು ನಿರ್ಮಿಸುತ್ತಿದ್ದರು. ಆದರೆ ಇಂದು ಗುಡಿಸಲುಗಳ ಬದಲಾಗಿ

ಹಂಚಿನ ಮನೆಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದಾರೆ. ಪ್ರಧಾನ ಬಾಗಿಲವೂ ಕೂಡಾ ದೊಡ್ಡದಾಗಿರುತ್ತದೆ. ಹಿಂದೆ ಹಸಲರು ಅರಣ್ಯಗಳಲ್ಲಿ ಚದುರಿದಂತೆ ಮನೆಗಳನ್ನು ನಿರ್ಮಿಸಿಕೊಂಡಿದ್ದರು. ಆದರೆ ಇಂದು ಪುನರ್ವಸತಿಗೊಂಡ ಹಸಲರ ಹಾಡಿಕೇರಿಗಳಲ್ಲಿ ಕೂಡು ಮನೆಗಳನ್ನು ಕಾಣಬಹುದು.

ಮಲೆನಾಡಿನ ಹಸಲರು ತಮ್ಮ ಮನೆಯಲ್ಲಿಯೇ ಒಂದು ದೊಡ್ಡ ಹೊಂಡ ತೆಗೆದು ಅದರಲ್ಲಿ ಬೆಂಕಿ ಹಾಕುವರು. ಇದಕ್ಕೆ ಹೊರಸಲು ಗುಂಡಿ ಎಂದು ಕರೆಯುತ್ತಾರೆ. ಇದನ್ನು ಮಾಂಸ ಒಣಗಿಸಲು ಅಲ್ಲದೆ ಚಳಿಗಾಲದಲ್ಲಿ ಚಳಿಯಿಂದ ರಕ್ಷಣೆ ಪಡೆಯಲು ಇದನ್ನು ಉಪಯೋಗಿಸುತ್ತಿದ್ದರು. ಆದರೆ ಇಂದು ಅವರ ಮನೆಗಳಲ್ಲಿ ಈ ತೆರನಾದ ಗುಂಡಿಗಳನ್ನು ಕಾಣುವುದಿಲ್ಲ.

೧೯೫೭ರಲ್ಲಿ ಸರಕಾರವು ಲಿಂಗನಮಕ್ಕಿ ಯೋಜನೆ ಜಾರಿಯಲ್ಲಿ ತಂದಿರುವುದರಿಂದ ಅದರಿಂದ ಪುನರ್ವಸತಿಯಾದ ಹಸಲರಿಗೆ ಹಿರೇಮನೆಯಲ್ಲಿ ಹಸಲರ ಕಾಲೋನಿಯನ್ನು ಮಾಡಿ ಎಲ್ಲರಿಗೂ ಮನೆಗಳನ್ನು ವಿತರಿಸಿದ್ದಾರೆ. ಇದರಿಂದ ಅವರೆಲ್ಲರೂ ಒತ್ತಟ್ಟಿಗೆ ವಾಸಮಾಡಲು ಪ್ರಾರಂಭಿಸಿದ್ದಾರೆ.

೬.೧.೧೧ ಗೃಹೋಪಯೋಗಿ ಸಾಮಾನುಗಳ ಬದಲಾವಣೆ

ಹಸಲರು ಸಾಮಾನ್ಯವಾಗಿ ತಮ್ಮದೇ ಎನ್ನುವ ಗೃಹ ಉಪಯೋಗಿ ಸಾಮಾನುಗಳು ಇರುವುದಿಲ್ಲ. ಹಿಂದೆ ಹಸಲರ ಹೆಂಗಸರು ಮಣ್ಣಿನ ಮಡಿಕೆಯಲ್ಲಿ ಅಡುಗೆ ಮಾಡುತ್ತಿದ್ದರು. ತಾಮ್ರದ ಕೊಡಪಾನ ಮತ್ತು ತೆಂಗಿನಕಾಯಿಯ ಪಟ್ಟೆಯಿಂದ ಸಾರದ ಸೌಟನ್ನು ಮಾಡುತ್ತಿದ್ದರು. ಆದರೆ ಇಂದು ಅವರು ಇತರರ ಹಾಗೆ ಅಲ್ಯುಮಿನಿಯಂ ಪಾತ್ರೆಗಳನ್ನು ಬಳಸುತ್ತಾರೆ.

ದವಸ ಧಾನ್ಯಗಳನ್ನು ಸಂಗ್ರಹಿಸಲು ಬೆತ್ತದಿಂದ ಅಥವಾ ಕಾಡುಬಳ್ಳಿಯಿಂದ ಒಂದು ಬುಟ್ಟಿಯನ್ನು ಹೆಣೆದು ಅದರಲ್ಲಿ ಭತ್ತ ಸಂಗ್ರಹಿಸುತ್ತಿದ್ದರು. ಇದಕ್ಕೆ ಭತ್ತದ ಕಣಜ ಎಂದು ಕರೆಯುತ್ತಾರೆ. ಆದರೆ ಇಂದು ಇದರ ಬದಲಾಗಿ ಅಲ್ಯುಮಿನಿಯಂ ಪಾತ್ರೆಯನ್ನು ಸರಕಾರವು ಕೊಟ್ಟಿರುವುದರಿಂದ ಆ ಕಣಜವು ಮಾಯವಾಗಲು ಪ್ರಾರಂಭಿಸಿದೆ. ಇಂತಹ ಕಣಜವನ್ನು ಸಿದ್ಧಾಪೂರ ತಾಲೂಕಿನ ಮುಗದೂರಿನ ಮೈಲ, ತಿಮ್ಮ ಎಂಬುವರ ಮನೆಯಲ್ಲಿ ಮಾತ್ರ ಕಾಣಸಿಗುತ್ತದೆ. ಉಳಿದ ಕಡೆ ಅಲ್ಯುಮಿನಿಯಂ ಕಣಜವನ್ನು ಕಾಣುತ್ತೇವೆ.

೬.೧.೧೨ ಆಹಾರ ಪದ್ಧತಿಯಲ್ಲಿ ಬದಲಾವಣೆ

ಆಹಾರ ಮಾನವನ ಮೂಲಭೂತ ಅವಶ್ಯಗಳಲ್ಲಿ ಒಂದು. ಆಹಾರ ಶೋಧನೆಯ ಹಂತದಲ್ಲಿ ಹಸಲರು ಒಂದೆಡೆ ನೆಲೆ ನಿಲ್ಲದೇ ಅಲೆಮಾರಿಯಾಗಿದ್ದರು. ಮುಂದೆ ಬೇಟೆಯನ್ನಾಡುತ್ತಾ ಕಾಡುಗಳಲ್ಲಿ ತಿರುಗುತ್ತಿದ್ದರು. ಇವರು ಮೂಲತಃ ಅರಣ್ಯವಾಸಿಗಳಾಗಿರುವುದರಿಂದ ಬೇಟೆಯಾಡಲು ಪ್ರಾರಂಭಿಸಿದರು. “ಬೇಟೆಯಾಡದವ ಹಸಲನಲ್ಲ” ಎಂಬ ಗಾದೆಯಂತೆ ಹಸಲರು ಹಿಂದೆ ಬಿಲ್ಲಿನಿಂದ ಕಬ್ಬೆಕ್ಕು, ಬರಕಾ, ಮೊಲ, ಕಾಡುಹಂದಿ, ಜಿಂಕೆ ಮುಂತಾದವುಗಳನ್ನು ಬೇಟೆಯಾಡುತ್ತಿದ್ದರು. ಆದರೆ ಇಂದು ವನ್ಯಜೀವಿ ಸಂರಕ್ಷಣಾ ಕಾನೂನು ಬಂದಬಳಿಕ ಬೇಟೆಯಾಡುವುದನ್ನು ನಿಲ್ಲಿಸಲು ಪ್ರಾರಂಭಿಸಿದ್ದಾರೆ.

ಹಿಂದೆ ಹಸಲರು ಬೈನೆ ಮರದ ಹಿಟ್ಟಿನಿಂದ ಗಂಜಿಯನ್ನು ಮಾಡಿ ಕುಡಿಯುತ್ತಿದ್ದರು. ಇದರಿಂದ ಹೊಟ್ಟೆ ತುಂಬುತ್ತಿತ್ತೇ ವಿನಃ ಪೌಷ್ಠಿಕತೆ ದೊರೆಯುತ್ತಿರಲಿಲ್ಲ. ಆದರೆ ಈಗಿನ ಹಸಲರು ಬೈನೆ ಮರದ ಗಂಜಿಯನ್ನು ಕುಡಿಯುದನ್ನು ನಿಲ್ಲಿಸಿದ್ದಾರೆ.

"ಬಿದಿರು ಹೂ ಬಿಟ್ಟಿಲ್ಲ, ಹಸಲನ ಹೊಟ್ಟೆತುಂಬಿಲ್ಲ" ಎಂಬ ಗಾದೆಯಂತೆ ಹಸಲರು ಬಿದಿರಿನ ಅಕ್ಕಿಯನ್ನು ತಂದು ಬೇಯಿಸಿ ಅನ್ನವನ್ನು ಮಾಡುತ್ತಿದ್ದರು. ಆದರೆ ಇಂದು ಸರಕಾರವು ಪಡಿತರ ಚೀಟಿಯ ಮುಖಾಂತರ ಅಕ್ಕಿ ಕೊಡುವುದರಿಂದ ಬಿದಿರಿನ ಅಕ್ಕಿಯನ್ನು ಬಿಟ್ಟು ಭತ್ತದ ಅಕ್ಕಿಯನ್ನು ಆಹಾರವನ್ನಾಗಿ ಸೇವಿಸುತ್ತಾರೆ. ಇಂದಿನ ಹಸಲರು ಮೌಂಸಾಹಾರಕ್ಕಿಂತ ಸಸ್ಯಾಹಾರವನ್ನು ಇಷ್ಟ ಪಡುತ್ತಾರೆ. ಇಂದು ಅವರು ಅಕ್ಕಿಯ ಹಿಟ್ಟನ್ನು ಬೇಯಿಸಿ ಚಪಾತಿಯಂತೆ ಮಾಡಿ ಇದಕ್ಕೆ ಒಂದು ರಂಧ್ರ ಕೊರೆದು ಎಣ್ಣೆಯಲ್ಲಿ ಕರಿಯುತ್ತಾರೆ. ಇದಕ್ಕೆ "ಕಾಯಿಗರಿಗ" ಎಂದು ಕರೆಯುತ್ತಾರೆ. ಹಬ್ಬಹರಿದಿನ, ಮದುವೆ ಮುಂತಾದ ಸಮಾರಂಭಗಳಲ್ಲಿ ಮಾಂಸಾಹಾರವನ್ನು ಮಾಡುತ್ತಿದ್ದರು. ಆದರೆ ಇಂದು ಪಾಯಸ, ಒಬ್ಬಟ್ಟು, ಜಿಲೇಬಿ, ಪುರಿ–ಬಾಜಿಗಳನ್ನು ಮಾಡುತ್ತಾರೆ. ಇದರಿಂದ ಹಸಲರು ಸಾವಕಾಶವಾಗಿ ಮಾಂಸಾಹಾರವನ್ನು ಬಿಡುವುದರ ಜೊತೆಗೆ ಸಸ್ಯಾಹಾರವನ್ನು ಉಪಯೋಗಿಸಲು ಪ್ರಾರಂಭಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಹಸಲರು ಜೋಳ, ಸಜ್ಜೆ ಮತ್ತು ಭತ್ತವನ್ನು ಹೆಚ್ಚಾಗಿ ಉಪಯೋಗಿಸುವರು. ದಕ್ಷಿಣ ಭಾರತದ ಆಹಾರದಲ್ಲಿ ಎರಡು ವಿಧ. ೧) ಕಚ್ಚಾ ಆಹಾರ ೨) ಪಕ್ಕಾ ಆಹಾರ. ಕಚ್ಚಾ ಆಹಾರ ಹಿಂದುಳಿದವರು ತಿನ್ನುತ್ತಿದ್ದರೆ, ಪಕ್ಕಾ ಆಹಾರ ಬ್ರಾಹ್ಮಣರು ತಿನ್ನುತ್ತಿದ್ದರು. ಅದರೆ ಇಂದಿನ ಹಸಲರು ವಿಶೇಷವಾಗಿ ಸಭೆ ಸಮಾರಂಭಗಳಲ್ಲಿ ಪಕ್ಕಾ ಆಹಾರವನ್ನು ತಯಾರಿಸುವರು. ಇದು ಅವರ ಆಹಾರ ಕ್ರಮದಲ್ಲಿಯ ಬದಲಾವಣೆಗಳನ್ನು ಎತ್ತಿತೋರಿಸುತ್ತದೆ.

೬.೧.೧೩ ಕಸುಬುಗಳಲ್ಲಿ ಬದಲಾವಣೆ

"ಉದ್ಯೋಗಂ ಪುರುಷ ಲಕ್ಷಣಂ" ಎನ್ನುವ ಉಕ್ತಿಯಂತೆ ಹಸಲರ ಗಂಡಸರು ಮತ್ತು ಹೆಂಗಸರು ನಿರುದ್ಯೋಗಿಯಾಗಿರದೇ ಯಾವುದೇ ಒಂದು ಉದ್ಯೋಗದಲ್ಲಿ ತೊಡಗಿಕೊಂಡಿರುವರು. ಹಿಂದೆ ಹಸಲರು ಮೇಲ್ವರ್ಗದವರ ಮನೆಗಳಲ್ಲಿ ಹುಟ್ಟಾಳುಗಳಾಗಿ ದುಡಿಯುತ್ತಿದ್ದರು. ಹುಟ್ಟಾಳು ಎಂದರೆ, ಮಗು ಹುಟ್ಟಿನಿಂದ ಸಾಯುವವರೆಗೆ ತನ್ನ ತಂದೆ ಅಥವಾ ಅಜ್ಜ ಮಾಡಿದ ಸಾಲಕ್ಕಾಗಿ ದುಡಿಯುವುದಕ್ಕೆ ಹುಟ್ಟಾಳು ಎಂದು ಕರೆಯುತ್ತಾರೆ. ಆದರೆ ಇಂದು ಜೀತ ನಿರ್ಮೂಲನಾ ಕಾಯಿದೆ ಅಸ್ತಿತ್ವದಲ್ಲಿ ಬಂದ ನಂತರ ಹಸಲರು ಹುಟ್ಟಾಳು ಅಥವಾ ಜೀತದಾಳುಗಳಾಗಿ ದುಡಿಯುವುದನ್ನು ನಿಲ್ಲಿಸಿದ್ದಾರೆ. ಮಲೆನಾಡಿನ ಹಸಲರು ಅಡಿಕೆ ಕೊಯ್ಯಲು ಮರ ಹತ್ತುವುದರಲ್ಲಿ ಇವರು ನಿಪುಣರು. ಇವರು ಒಂದು ಮರದಿಂದ ಇನ್ನೊಂದು ಮರಕ್ಕೆ ಜಿಗಿಯುತ್ತಾ ಅಡಿಕೆ ಗೊನೆಗಳನ್ನು ಕೊಯ್ಯುವರು. ಅಡಿಕೆ ಕೊಯ್ಯಲು ಮಾಡುವಾಗ ಅವರು ತೋರಿಸುವ ಕೈಚಳಕ ಮೆಚ್ಚುವಂತಹದು. ಇದನ್ನು ನೋಡಿಯೇ ಒಂದು ಗಾದೆ ಹುಟ್ಟಿಕೊಂಡಿದೆ. "ಅಡಿಕೆ ಮರಕ್ಕೆ ಅಂಜಿದವ ಹಸಲನಲ್ಲ" ಇದು ಅವರ ವೃತ್ತಿಜಾಣ್ಮೆಯನ್ನು ತೋರಿಸುತ್ತದೆ. ಆದರೆ ಇಂದು ಅವರ

ಉದ್ಯೋಗಕ್ಕೆ ಎದುರಾಗಿ ಅಡಿಕೆ ಮರ ಏರುವ ಸಾಧನಗಳು ಬಂದಿರುವುದರಿಂದ ಅವರ ಉದ್ಯೋಗಕ್ಕೆ ಸಂಚಕಾರ ಬರಲು ಪ್ರಾರಂಭಿಸಿದೆ. ಇದರಿಂದ ಹಸಲರು ಪರ್ಯಾಯ ಉದ್ಯೋಗಗಳತ್ತ ವಾಲಲು ಪ್ರಾರಂಭಿಸಿದ್ದಾರೆ.

ಹಸಲರ ಹೆಂಗಸರು ಅಡಿಕೆ ಸುಲಿಯುವದರಲ್ಲಿ ಅತ್ಯಂತ ನಿಪುಣರು. ಅವರು ಹಿರೆಮಣೆಯ ಮೇಲೆ ಕುಳಿತು ಅಡಿಕೆ ಸುಲಿಯಲು ಪ್ರಾರಂಭಿಸಿದರೆ ಯಂತ್ರಗಳಂತೆ ಚಕಚಕನೆ ಬಿಡಿಸುವರು. ಆದರೆ ಇಂದು ಅಡಿಕೆ ಸುಲಿಯುವ ಯಂತ್ರಗಳು ಬಂದಿರುವುದರಿಂದ ಹಸಲರ ಹೆಣ್ಣು ಮಕ್ಕಳು ಪರ್ಯಾಯ ಉದ್ಯೋಗಗಳತ್ತ ವಾಲಲು ಪ್ರಾರಂಭಿಸಿದ್ದಾರೆ.

ಹಸಲರ ಗಂಡಸರು ಮತ್ತು ಹೆಣ್ಣು ಮಕ್ಕಳು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಪೇಟೆಯಲ್ಲಿ ಮಾರಾಟ ಮಾಡಿ ಹಣ ಗಳಿಸುತ್ತಿದ್ದರು. ಆದರೆ ಸರಕಾರವು ಅರಣ್ಯ ಕಿರು ಉತ್ಪನ್ನಗಳನ್ನು ಹರಾಜು ಹಾಕುವುದರಿಂದ ಗುತ್ತಿಗೆದಾರರು ಹಸಲರಿಗೆ ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಅವಕಾಶ ಕೊಡದೇ ಇರುವುದರಿಂದ ಅವರು ಪರ್ಯಾಯ ಉದ್ಯೋಗಗಳತ್ತ ವಾಲಲು ಪ್ರಾರಂಭಿಸಿದ್ದಾರೆ.

ಘಟ್ಟದ ಕೆಳಗಿನ ಹಸಲರ ಹೆಣ್ಣುಮಕ್ಕಳು ಮಳೆಗಾಲದಲ್ಲಿ ಯಾವುದೇ ರೀತಿಯ ಉದ್ಯೋಗಗಳನ್ನು ಮಾಡದೇ ಮನೆಯಲ್ಲಿ ಸುಮ್ಮನೆ ಕುಳಿತಿದ್ದರು. ಆದರೆ ಕರ್ನಾಟಕ ಸರಕಾರವು ೨೦೦೮ರಲ್ಲಿ ವಸ್ತ್ರವಿನ್ಯಾಸ ಯೋಜನೆಯನ್ನು ಅಸ್ತಿತ್ವದಲ್ಲಿ ತಂದಿತು. ಈ ಯೋಜನೆಯನ್ವಯ ಕುಂದಾಪೂರ ತಾಲೂಕಿನ ಕಬ್ಬಿನಾಲೆ, ಹಳ್ಳಿಹೊಳೆ, ಕಾರೇಬೈಲು ಮುಂತಾದ ಹಸಲರ ಹಾಡಿಕೇರಿಗಳಲ್ಲಿ ನೇಯುವ ತರಬೇತಿಯನ್ನು ಆರು ತಿಂಗಳವರೆಗೆ ಕೊಟ್ಟು ಆದ್ಯತೆಯ ಮೇರೆಗೆ ಎಲ್ಲರಿಗೂ ಬಟ್ಟೆ ನೇಯುವ ಮಗ್ಗಗಳನ್ನು ಕೊಡುತ್ತಿದ್ದಾರೆ. ಇದರಿಂದ ಅವರು ಪಾರಂಪರಿಕ ಉದ್ಯೋಗವನ್ನು ಬಿಟ್ಟು ನೇಯುವುದರ ಕಡೆಗೆ ಮುಖ ಮಾಡಿದ್ದಾರೆ. ಇನ್ನು ಕೆಲವರಿಗೆ ಸರಕಾರವು ಖಾಸಗಿ ಸಹಯೋಗದೊಂದಿಗೆ ನಕ್ಸಲ್‌ಪೀಡಿತ ಯೋಜನೆಯನ್ವಯ ಗೇರು ಬಿಡಿಸುವ ಖಾಯಂ ಆದ ಟೆಂಟನ್ನು ಹಾಕಿರುವುದರಿಂದ ಕೆಲವರು ಗೇರು ಬೀಜಗಳನ್ನು ಬಿಡಿಸಿ, ತಮ್ಮ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ.

ಹಸಲರ ಯುವಕರು ತಮ್ಮ ಸಾಂಪ್ರದಾಯಿಕ ಉದ್ಯೋಗವಾದ ಅಡಿಕೆ ಕೊಯ್ಲನ್ನು ಮಾಡುವುದನ್ನು ಬಿಟ್ಟು ನಗರಗಳಿಗೆ ಬೇರೆ ಬೇರೆ ಉದ್ಯೋಗಗಳಿಗಾಗಿ ವಲಸೆ ಹೋಗಿದ್ದಾರೆ. ಕೆಲವರು ಮಂಗಳೂರು, ಸಿದ್ಧಾಪೂರ ಹೋಬಳಿ, ಕಾರ್ಕಳ, ಉಡುಪಿ ಮುಂತಾದವುಗಳ ಕಡೆಗೆ ಪೆಟ್ರೋಲ್ ಬಂಕುಗಳಲ್ಲಿ ದುಡಿಯುತ್ತಾರೆ. ಹೊನ್ನಾವರ ತಾಲೂಕಿನ ದಬ್ಬೋಡು, ಆಡುಕುಳಿಯ ಹಸಲರು ಬೆಂಗಳೂರಿನ ಆಯ್.ಬಿ.ಎಂ ಕಂಪನಿಯಲ್ಲಿ ಸೀನಿಯರ್ ಕುಕ್ ಆಗಿ ಕೆಲಸ ಮಾಡುತ್ತಿದ್ದಾರೆ. ಇನ್ನು ಕೆಲವರು ಚಿಕ್ಕಪುಟ್ಟ ಸಾಮಾನುಗಳನ್ನು ಸಂತೆಯಲ್ಲಿ ಮಾರಿ ಜೀವನ ಸಾಗಿಸುತ್ತಾರೆ. ಇದರಿಂದ ಹಸಲರು ತಮ್ಮ ಪಾರಂಪರಿಕ ವೃತ್ತಿಯನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಆರಿಸಿಕೊಳ್ಳಲು ಪ್ರಾರಂಭಿಸಿದ್ದಾರೆ.

ಕೋಷ್ಟಕ- ೬.೧ ಸಮೀಕ್ಷೆ ಮಾಡಿದ ಹಸಲರ ಸದ್ಯದ ಸ್ಥಾನಮಾನ

ಜಿಲ್ಲೆಗಳು		ಸದ್ಯದ ಸ್ಥಾನಮಾನ				ಒಟ್ಟು
		ನೌಕರಿ	ಕೂಲಿ	ಜೀತದಾಳು	ಇತರೆ	
ಉತ್ತರ ಕನ್ನಡ	ಒಟ್ಟು	೧	೧೧೫	–	–	೧೧೬
	ಪ್ರತಿಶತ (ಜಿಲ್ಲೆಯೊಳಗೆ)	೦.೯%	೯೯.೧%	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೬.೭%	೨೩.೧%	–	–	೨೨.೪%
	ಒಟ್ಟು ಪ್ರತಿಶತ	೦.೨%	೨೨.೨%	–	–	೨೨.೪%
ಉಡುಪಿ	ಒಟ್ಟು	–	೭೨	–	–	೭೨
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೧೪.೫%	–	–	೧೩.೯%
	ಒಟ್ಟು ಪ್ರತಿಶತ	–	೧೩.೯%	–	–	೧೩.೯%
ಚಿಕ್ಕಮಗಳೂರು	ಒಟ್ಟು	–	೧೦೬	–	–	೧೦೬
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೨೧.೩%	–	–	೨೦.೫%
	ಒಟ್ಟು ಪ್ರತಿಶತ	–	೨೦.೫%	–	–	೨೦.೫%
ದಕ್ಷಿಣ ಕನ್ನಡ	ಒಟ್ಟು	೬	–	–	–	೬
	ಪ್ರತಿಶತ (ಜಿಲ್ಲೆಯೊಳಗೆ)	೧೦೦%–	–	–	–	೧೦೦%
	ಪ್ರತಿಶತ (ವರ್ಗಗಳಲ್ಲಿ)	೪೦%	–	–	–	೧.೨%
	ಒಟ್ಟು ಪ್ರತಿಶತ	೧.೨%	–	–	–	೧.೨%
ಶಿವಮೊಗ್ಗ	ಒಟ್ಟು	೮	೨೦೪	–	೫	೨೧೭
	ಪ್ರತಿಶತ (ಜಿಲ್ಲೆಯೊಳಗೆ)	೩.೭%	೯೪%	–	೨.೩%	೧೦೦%
	ಪ್ರತಿಶತ (ವರ್ಗಗಳಲ್ಲಿ)	೫೩.೩%	೪೧%	–	೧೦೦%	೪೨%
	ಒಟ್ಟು ಪ್ರತಿಶತ	೧.೫%	೩೯.೫%	–	೧%	೪೨%
ಒಟ್ಟು	ಒಟ್ಟು	೧೫	೪೯೭	–	೫	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೨.೯%	೯೬.೧%	–	೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	–	೧೦೦%	೧೦೦%
	ಒಟ್ಟು ಪ್ರತಿಶತ	೨.೯%	೯೬.೧%	–	೧%	೧೦೦%

ಸಮೀಕ್ಷೆ ಮಾಡಿದ ಒಟ್ಟು ಕುಟುಂಬಗಳು ೫೧೭ ಇದರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ೧೧೬ ಕುಟುಂಬಗಳಲ್ಲಿ ಸರಕಾರಿ/ಖಾಸಗಿ ನೌಕರಿಯಲ್ಲಿರುವ ಕುಟುಂಬಗಳ ಸಂಖ್ಯೆ ೧. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೦.೯ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ

ಇದರ ಪ್ರಮಾಣ ಶೇ. ೬.೭ ರಷ್ಟಾಗುತ್ತದೆ. ಕೂಲಿ ಮಾಡುವ ಕುಟುಂಬಗಳ ಸಂಖ್ಯೆ ೧೧೫, ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೯೯.೧ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೩.೧ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ಉಡುಪಿ ಜಿಲ್ಲೆಯಲ್ಲಿ ಕುಟುಂಬಗಳ ಸಂಖ್ಯೆ ೭೨, ಈ ಕುಟುಂಬಗಳು ಕೂಲಿ ಮಾಡಿಯೇ ಜೀವನ ಸಾಗಿಸುತ್ತಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೧೦೦ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೨೪.೫ ರಷ್ಟು.

ಸಮೀಕ್ಷೆ ಮಾಡಿದ ಚಿಕ್ಕಮಗಳೂರು ಜಿಲ್ಲೆಯ ಕುಟುಂಬಗಳ ಸಂಖ್ಯೆ ೧೦೬, ಈ ಎಲ್ಲಾ ಕುಟುಂಬಗಳು ಕೂಲಿಯನ್ನೇ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦೦, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೨೧.೩ ರಷ್ಟಾಗುತ್ತದೆ.

ಸಮೀಕ್ಷೆ ಮಾಡಿದ ದಕ್ಷಿಣ ಕನ್ನಡ ಜಿಲ್ಲೆಯ ಕುಟುಂಬಗಳು ೬, ಈ ಕುಟುಂಬಗಳು ಸರಕಾರಿ/ಖಾಸಗಿ ನೌಕರಿಯನ್ನು ಮಾಡುವವರಾಗಿದ್ದಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೧೦೦ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೦ ರಷ್ಟಾಗುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮೀಕ್ಷೆ ಮಾಡಿದ ಕುಟುಂಬಗಳ ಸಂಖ್ಯೆ ೨೧೭ ರಷ್ಟು, ಇದರಲ್ಲಿ ೮ ಕುಟುಂಬಗಳ ಜನರು ಸರಕಾರಿ/ಖಾಸಗಿ ನೌಕರಿಯಲ್ಲಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೩.೭ ರಷ್ಟು, ಉಳಿದ ೨೦೪ ಕುಟುಂಬಗಳು ಕೂಲಿ ಮಾಡುತ್ತಾರೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. ೯೪ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೪೧ ರಷ್ಟಾಗುತ್ತದೆ. ಉಳಿದ ೫ ಕುಟುಂಬಗಳು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಇದರ ಪ್ರಮಾಣ ಜಿಲ್ಲೆಯಲ್ಲಿ ಶೇ. ೨.೩ ರಷ್ಟು, ಐದು ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ. ೧೦೦ ರಷ್ಟಾಗುತ್ತದೆ.

ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಹಸಲರಲ್ಲಿ ಕೂಲಿ ಮಾಡಿ ಜೀವನ ಸಾಗಿಸುವವರೇ ಹೆಚ್ಚಾಗಿದ್ದಾರೆ.

೬.೨ ಎನ್ ಹುಚ್ಚಪ್ಪ ಮಾಸ್ತರರ ಪಾತ್ರ

ಹಸಲರ ಪರಿವರ್ತನೆಯ ಹರಿಕಾರ, ಜಾನಪದ ತಜ್ಞ, ಸಂಘಟನಾತ್ಮಕ ಚತುರರೂ ಆದ ಎನ್ ಹುಚ್ಚಪ್ಪ ಮಾಸ್ತರರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಚಿಕ್ಕ ಗ್ರಾಮವಾದ ಕುಗ್ವೆಯಲ್ಲಿ ದಿನಾಂಕ: ೧೮-೦೫-೧೯೩೮ರಲ್ಲಿ ತಂದೆ ನೆಲ್ಲೂರ ಹುಚ್ಚಪ್ಪ, ತಾಯಿ ಪುಟ್ಟಮ್ಮ ಇವರ ಪುಣ್ಯ ಉದರದಲ್ಲಿ ಹುಚ್ಚಪ್ಪ ಮಾಸ್ತರರು ಮೊದಲನೆ ಮಗುವಾಗಿ ಜನಿಸಿದರು. ಇವರ ತಂದೆ ಮರಗೆಲಸವನ್ನು ಮಾಡುತ್ತಿದ್ದರು. ಹುಚ್ಚಪ್ಪ ಮಾಸ್ತರರು ತಮ್ಮ ಪ್ರಾಥಮಿಕ ಶಾಲೆಯನ್ನು ತಮ್ಮ ಹುಟ್ಟೂರಾದ ಕುಗ್ವೆಯಲ್ಲಿ ಮುಗಿಸಿದರು. ಬಾಲ್ಯಾವಸ್ಥೆಯಲ್ಲಿ ಬಾಲಕ ಹುಚ್ಚಪ್ಪನ ಮೇಲೆ ತಾಯಿಯ ಜಾನಪದ ಹಾಡುಗಳು, ಕಥೆಗಳು ಇವರ ಮೇಲೆ ಪ್ರಭಾವ ಬೀರಿದವು. ಇದರಿಂದ

ಪ್ರಭಾವಿತರಾದ ಹುಚ್ಚಪ್ಪನು ತಾಯಿಯ ಜೊತೆಗೆ ಜಾನಪದ ಹಾಡುಗಳಿಗೆ ಧ್ವನಿಗೂಡಿಸಿದನು. 'ಬೆಳೆಯ ಸಿರಿ ಮೊಳಕೆಯಲ್ಲಿ' ಎನ್ನುವಂತೆ ಹುಚ್ಚಪ್ಪ ಮಾಸ್ತರರು ಬಾಲ್ಯಾವಸ್ಥೆಯಿಂದಲೇ ಜಾನಪದ ಹಾಡುಗಳನ್ನು ಹಾಡಲು ಪ್ರಾರಂಭಿಸಿದನು. ಸಹಜವಾಗಿಯೇ ಜಾನಪದ ಜೀವನದ ಸೊಗಡನ್ನು ಬೆಳೆಸಿಕೊಂಡನು. ಈ ವೇಳೆಗಾಗಲೇ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿರುವ ಹುಚ್ಚಪ್ಪ ಮಾಸ್ತರರು ಪ್ರೌಢ ಶಿಕ್ಷಣಕ್ಕಾಗಿ ತಾಲೂಕು ಕೇಂದ್ರವಾದ ಸಾಗರಕ್ಕೆ ಬಂದರು. ಈ ಸಮಯದಲ್ಲಿ ತನ್ನ ಆತ್ಮೀಯ ಗೆಳೆಯನಾದ ನರಹರಿಯ ಜೊತೆಗೆ ಅವರ ಮನೆಯಲ್ಲಿಯೇ ಇದ್ದು, ಶಿಕ್ಷಣವನ್ನು ಮುಂದುವರೆಸಿದರು. ನರಹರಿಯ ತಂದೆ ತಾಯಿಗಳಿಗೆ ತಾವು ಭಾರವಾಗಬಾರದೆಂದುಕೊಂಡು ಅವರ ಮನೆಯಲ್ಲೇ ಅಲ್ಪ ಸ್ವಲ್ಪ ಕೆಲಸವನ್ನು ಮಾಡುವುದರ ಜೊತೆಗೆ ತಮ್ಮೂರಿಂದ ಸ್ವಲ್ಪ ಅಕ್ಕಿಯನ್ನು ತಂದು ಕೊಡುತ್ತಿದ್ದರು. ಇವರ ಮನೆಯ ಪಕ್ಕದಲ್ಲೆ ವಾಸವಾಗಿರುವ ಖ್ಯಾತ ಸಾಹಿತಿ ನಾ ಡಿಸೋಜಾ ಅವರ ಪರಿಚಯ ವಾಯಿತು. ಇವರು ಹುಚ್ಚಪ್ಪ ಮಾಸ್ತರರಿಗಿಂತ ಒಂದು ವರ್ಷ ದೊಡ್ಡವರು. ನಾ ಡಿಸೋಜಾರವರು ಮಲೆನಾಡಿನ ಪ್ರಕೃತಿ ಸೌಂದರ್ಯದ ಬಗ್ಗೆ ಇಲ್ಲಿಯ ಜೀವನದ ಬಗ್ಗೆ ಲೇಖನಗಳನ್ನು ಬರೆಯುತ್ತಿದ್ದರು. ಇದರಿಂದ ಪ್ರಭಾವಿತರಾದ ಹುಚ್ಚಪ್ಪ ಮಾಸ್ತರರು ಕಾಡುವಾಸಿಗಳ ಜೀವನದ ಬಗ್ಗೆ ಯಾಕೆ ಅಧ್ಯಯನ ಮಾಡಬಾರದೆಂದು ಯೋಚಿಸುತ್ತಿರುವಾಗಲೇ ಇವರಿಗೆ ನಾ ಡಿಸೋಜಾರವರು ಕಾಡಿನ ಬಗೆಗಿನ ಕೆಲವು ರೋಚಕ ಸಂಗತಿಗಳನ್ನು ಹೇಳುತ್ತಿದ್ದರು. ಇದರಿಂದ ಹುಚ್ಚಪ್ಪ ಮಾಸ್ತರರಲ್ಲಿ ಕಾಡಿನ ಬಗೆಗಿನ ಆಸಕ್ತಿ ಇನ್ನೂ ಜಾಸ್ತಿಯಾಯಿತು. ಅಷ್ಟೊತ್ತಿಗಾಗಲೇ ಅವರು ತಮ್ಮ ಪ್ರೌಢ ಶಿಕ್ಷಣವನ್ನು ಮುಗಿಸಿದ್ದರು. ಪ್ರೌಢ ಶಿಕ್ಷಣವನ್ನು ಮುಗಿಸಿದ ನಂತರ ತಮ್ಮ ಸ್ವಗ್ರಾಮ ಕುಗ್ವೆಯಲ್ಲಿ ಅನಕ್ಷರಸ್ಥರಿಗಾಗಿ ಒಂದು ವಯಸ್ಕರ ಶಿಕ್ಷಣ ಕೇಂದ್ರವನ್ನು ತೆಗೆದರು. ಇಷ್ಟೊತ್ತಿಗಾಗಲೇ ದಿವರ ಮುಖಂಡರು ಇವರ ಮೇಲೆ ಕೆಂಗಣ್ಣು ಬಿರಿದ್ದರು. ಕಾರಣ ಕೆಳವರ್ಗದ ಜನರಿಗೆ ಇವರು ಶಿಕ್ಷಣವನ್ನು ಕೊಡಲು ಪ್ರಾರಂಭಿಸಿದರು. ಹರಿಜನರೊಂದಿಗೆ ಕೂಡಿಕೊಂಡು ಯಕ್ಷಗಾನ ಮಂಡಳಿಯನ್ನು ಕಟ್ಟಿದರು. ಇದು ದಿವರ ಮುಖಂಡರು ಇವರ ಮೇಲೆ ಕೋಪಿಸಿಕೊಳ್ಳಲು ಕಾರಣವಾಯಿತು. ಇದರಿಂದ ಬೇಸತ್ತ ಹುಚ್ಚಪ್ಪ ಮಾಸ್ತರರು ಹಾಸನಕ್ಕೆ ಹೋದರು. ಹಾಸನದಲ್ಲಿ ತಾತ್ಪೂರ್ತಿಕವಾಗಿ ಒಂದು ವಿದ್ಯಾಪೀಠದಲ್ಲಿ ಸೇರಿಕೊಂಡರು. ಇಲ್ಲಿರುವಾಗಲೇ ಇವರಿಗೆ ಗಾಂಧೀಜಿಯವರ ಒಡನಾಡಿಗಳಾಗಿದ್ದ ಟಿ ಆರ್ ಗೋವಿಂದರಾವ್ ಇವರ ಪರಿಚಯವಾಯಿತು. ಟಿ ಆರ್ ಗೋವಿಂದರಾವ್ ಅವರೇ ನನ್ನ ಮುಂದಿನ ಸಾಧನೆಗಳಿಗೆ ಪ್ರೇರಣೆಯಾಯಿತೆಂದು ಕಂಬನಿ ಮಿಡಿಯುತ್ತ ಹೇಳಿದರು. ಕೇವಲ ಕೆಲವು ತಿಂಗಳಿಗಾಗಿಯೇ ವಿದ್ಯಾಪೀಠದಲ್ಲಿ ವಾಸವಾಗಿದ್ದ ಮಾಸ್ತರರು ವಿದ್ಯಾಪೀಠವನ್ನು ಬಿಡಬೇಕಾಗಿ ಬಂತು. ಆಗ ಟಿ ಆರ್ ಗೋವಿಂದರಾವ್ ಅವರೇ ಇನ್ನೆರಡು ವರ್ಷ ವಿದ್ಯಾಪೀಠದಲ್ಲಿ ಉಳಿಯಲು ಅವಕಾಶ ಮಾಡಿಕೊಟ್ಟರು. ಆ ಬಳಿಕ ಶಿವಮೊಗ್ಗದ ಹಿರಿಯ ಅಧಿಕಾರಿಗಳನ್ನು ಭೇಟಿಯಾಗಿ ತಮ್ಮ ಉದ್ದೇಶಗಳನ್ನು ಹೇಳಿಕೊಂಡಾಗ ಅಧಿಕಾರಿಗಳು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುವ ಗಿರಿಜನ ಆಶ್ರಮ ಶಾಲೆಗೆ ೧೯೫೫ ರಲ್ಲಿ ಸೇರಿಸಿಕೊಂಡರು. ೧೯೬೨ ರಲ್ಲಿ ಇವರಿಗೆ ಒರೇಮನೆ ಗಿರಿಜನ ಆಶ್ರಮ ಶಾಲೆಗೆ ವರ್ಗಾಯಿಸಿದರು. ವರ್ಗಾವಣೆಗೊಂಡ ನಂತರ ಒಂದು

ದಿನ ಗಿರಿಜನ ಆಶ್ರಮ ಶಾಲೆಗೆ ಬಂದು ಆ ಶಾಲೆಯ ಸ್ಥಿತಿಯನ್ನು ಕಂಡು ದಂಗಾದರು. ಏಕೆಂದರೆ, ಯಾರೂ ತಮ್ಮ ಮಕ್ಕಳಿಗೆ ಶಾಲೆಗೆ ಕಳುಹಿಸುತ್ತಿರಲಿಲ್ಲ. ಇದಕ್ಕೆ ಮೇಲ್ವರ್ಗದ ಪಿತೂರಿಯೂ ಕಾರಣವಿರಬಹುದು. ಏಕೆಂದರೆ, ಗಿರಿಜನರಿಗೆ ಶಿಕ್ಷಣ ಕೊಟ್ಟರೆ ಇವರು ಮೇಲೆ ಬಂದು ತಮ್ಮ ಗದ್ದೆ ಮತ್ತು ತೋಟಗಳಲ್ಲಿ ಯಾರೂ ದುಡಿಯಲು ಸಿಗುವುದಿಲ್ಲ ಎಂಬ ಕಾರಣಕ್ಕಾಗಿಯೇ ಗಿರಿಜನವಾಸಿಗಳಿಗೆ ಶಿಕ್ಷಣದಿಂದ ದೂರ ಮಾಡಿದರು. ಇದನ್ನರಿತ ಹುಚ್ಚಪ್ಪ ಮಾಸ್ತರರು ಗಿರಿಜನರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ ಎಂದು ಹೇಳಿದರೂ, ಯಾರೂ ಕಳುಹಿಸುತ್ತಿರಲಿಲ್ಲ. ಇದನ್ನರಿತ ಹುಚ್ಚಪ್ಪ ಮಾಸ್ತರರು ಮೊದಲು ಎಲ್ಲ ಗಿರಿಜನರಿಗೆ ವಿಶ್ವಾಸಕ್ಕೆ ತೆಗೆದುಕೊಂಡು ತಮ್ಮ ಮಕ್ಕಳಿಗೆ ಶಾಲೆಗೆ ಕಳಿಸಿ ಎಂದು ಕರೆಯಿತ್ತರು. ಇವರ ಕರೆಗೆ ಮನ್ನಣೆಕೊಟ್ಟು ಕೆಲವರು ತಮ್ಮ ಮಕ್ಕಳನ್ನು ಅರೆಬೆತ್ತಲೆಯಾಗಿ ಶಾಲೆಗೆ ಕಳುಹಿಸಲು ಪ್ರಾರಂಭಿಸಿದರು. ಹುಚ್ಚಪ್ಪ ಮಾಸ್ತರರು ಗಿರಿಜನರಿಗೆ ಮುಟ್ಟಿದರೆ ಮೈಲಿಗೆಯಾಗುತ್ತದೆ ಎಂಬ ಕಟ್ಟುಪಾಡುವಿನಿಂದ ಹೊರಬಂದು ಗಿರಿಜನರ ಮಕ್ಕಳನ್ನು ತಮ್ಮ ಮಕ್ಕಳೆಂದು ಪರಿಗಣಿಸಿದರು. ಈ ಸಮಯದಲ್ಲಿ ಹುಚ್ಚಪ್ಪ ಮಾಸ್ತರರು ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ. ಕೆಲವು ಮಕ್ಕಳು ಶಾಲೆಗೆ ಬರುವಾಗ ಸ್ನಾನ ಮಾಡದೇ ಬರುತ್ತಿದ್ದರು. ಅಂಥ ಮಕ್ಕಳಿಗೆ ಹುಚ್ಚಪ್ಪ ಮಾಸ್ತರರು ಸ್ವತಃ ತಾವೇ ನಿಂತುಕೊಂಡು ಅವರಿಗೆ ಸ್ನಾನ ಮಾಡಿಸಿ ಹೆಣ್ಣು ಮಕ್ಕಳಿಗೆ ಜಡೆ ಹಾಕುತ್ತಿದ್ದರು. ಕೆಲವು ಮಕ್ಕಳಿಗೆ ತಲೆಯಲ್ಲಿ ಹೇನುಗಳಾದರೆ ಸ್ವತಃ ಹುಚ್ಚಪ್ಪ ಮಾಸ್ತರರು ಅಂಥ ಮಕ್ಕಳನ್ನು ಕರೆದು ಅವರ ತಲೆಯಲ್ಲಿಯ ಹೇನುಗಳನ್ನು ಆರಿಸಿ ತೆಗೆಯುತ್ತಿದ್ದರು. ಅಷ್ಟೇ ಅಲ್ಲ, ಎಲ್ಲರ ತಲೆಗೂ ಔಷಧಿಯನ್ನು ಹಚ್ಚುತ್ತಿದ್ದರು. ಗಿರಿಜನರಿಗೆ ಕ್ಷೌರಿಕರು ಕ್ಷೌರ ಮಾಡುತ್ತಿರಲಿಲ್ಲ. ಆಗ ಹುಚ್ಚಪ್ಪ ಮಾಸ್ತರರೇ ಸ್ವತಃ ಕತ್ತರಿಯನ್ನು ತೆಗೆದುಕೊಂಡು ಆ ಮಕ್ಕಳಿಗೆ ಕ್ಷೌರ ಮಾಡಿದ ಪ್ರಸಂಗಗಳು ನಡೆದಿವೆ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಇದನ್ನರಿತ ಹಸಲರ ಹಾಡಿಕೇರಿಯವರು ಮತ್ತು ಇನ್ನುಳಿದ ಬುಡಕಟ್ಟಿನವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರಾರಂಭಿಸಿದರು. ಆದರೂ ಮಕ್ಕಳ ಹಾಜರಾತಿ ಕಡಿಮೆಯಿತ್ತು. ಒಮ್ಮೆ ಶಾಲಾ ಸುಧಾರಣೆಗೆ ಅಧಿಕಾರಿಗಳು ಈ ಶಾಲೆಗೆ ಭೇಟ್ಟಿಯನ್ನಿಟ್ಟಾಗ ಅವರು ಮಕ್ಕಳ ಹಾಜರಾತಿ ಹೆಚ್ಚಿಸುವಂತೆ ಸೂಚಿಸಿದರು. ಆಗ ಹುಚ್ಚಪ್ಪ ಮಾಸ್ತರರು ಎಲ್ಲಿ ಗಿರಿಜನರು ಇದ್ದಾರೆಯೋ ಅಲ್ಲೆಲ್ಲಾ ಹೋಗಿ ತಂದೆ ತಾಯಿಗಳ ಮನವೊಲಿಸಿ, ಅವರ ಮಕ್ಕಳನ್ನು ಈ ಗಿರಿಜನ ಆಶ್ರಮ ಶಾಲೆಗೆ ಏಕೆ ಸೇರಿಸಬಾರದು? ಎಂಬ ಯೋಚನೆ ಬಂದಿದ್ದೆ ತಡ ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾದರು. ಮೊದಲು ಸಾಗರ ತಾಲೂಕಿನ ಗಿರಿಜನರ ಹಾಡಿಕೇರಿಗಳನ್ನು ಆಯ್ಕೆ ಮಾಡಿಕೊಂಡರು. ಸಾಗರ ತಾಲೂಕಿನ ಅತ್ಯಂತ ಹಿಂದುಳಿದ, ರಸ್ತೆಯೂ ಇರದಿದ್ದ ಮುಪ್ಪಾನೆ, ಕಾಳಮಂಜಿ, ಮಂಜಿನಕಾನು, ಹಿರೇಗ್ಗಿ, ಶಿಸರವಳ್ಳಿ ಮುಂತಾದ ಹಸಲರ ಹಾಡಿಕೇರಿಗಳಿಗೆ ಹಸಲರ ಮುಖಂಡರಾದ ಬೆಳ್ಳೆಣ್ಣೆಯ ಚೌಡಪ್ಪ, ಹಿರೇಮನೆಯ ಚೌಡಪ್ಪ ಕಾರ್ಗಲ್‌ನ ಮೈಲಾ ಇವರೊಂದಿಗೆ ಹೋಗಿ ಆ ಹಾಡಿಕೇರಿಯ ಹಿರಿಯರ ಮನವೊಲಿಸಿ, ತಮ್ಮ ಮಕ್ಕಳನ್ನು ಗಿರಿಜನ ಆಶ್ರಮ ಶಾಲೆಗೆ ಸೇರಿಸುವಂತೆ ಮನವಿ ಮಾಡಿದರು. ಇವರ ಮನವಿಗೆ ಸ್ಪಂದಿಸಿದ ಕೆಲವರು ತಮ್ಮ ಮಕ್ಕಳನ್ನು ಈ ಗಿರಿಜನ ಆಶ್ರಮ ಶಾಲೆಗೆ ಸೇರಿಸಿದರು. ಇದರಿಂದ ಹಿರೇಮನೆಯ ಗಿರಿಜನ ಆಶ್ರಮ ಶಾಲೆಯ ವಿದ್ಯಾರ್ಥಿಗಳ

ದಾಖಲಾತಿ ಹೆಚ್ಚಾಯಿತು. ಇದರಿಂದ ಉತ್ತೇಜನಗೊಂಡ ಹುಚ್ಚಪ್ಪ ಮಾಸ್ತರರಿಗೆ ತಾಲೂಕಿನಿಂದ ದೂರವಿರುವ ಗಿರಿಜನ ಮಕ್ಕಳನ್ನು ಯಾಕೆ ಈ ಶಾಲೆಗೆ ಸೇರಿಸಬಾರದು? ಎಂಬ ಯೋಚನೆ ಬಂದಿತು. ಇದನ್ನು ಹಸಲರು ಮತ್ತು ಕುಣಬಿಯರು ಮುಖಂಡರಲ್ಲಿ ಪ್ರಸ್ತಾಪ ಮುಂದಿಟ್ಟಾಗ ಅವರಿಂದ ಸಹಮತಿ ದೊರೆಯಿತು. ಅಷ್ಟೇ ಅಲ್ಲ ಬೆಳ್ಳೆಣ್ಣೆಯ ಚೌಡಪ್ಪನವರು ನಾನು ನಿಮ್ಮ ಸಂಗಡ ಬರುವೆನೆಂದು ವಚನಕೊಟ್ಟಾಗ ಮಾಸ್ತರರಿಗೆ ಆನೆಯ ಬಲ ಬಂದಿತು. ಆಗ ಅವರು ಆರಿಸಿಕೊಂಡಿದ್ದು ಹಸಲರ ಅತ್ಯಂತ ಹಿಂದುಳಿದ ಹಾಡಿಕೇರಿಯಾದ ಕುಡುಗುಂಜಿಯ ದ್ವೀಪ. ಆ ವೇಳೆಗೆ ಕುಡುಗುಂಜಿಯ ದ್ವೀಪಕ್ಕೆ ಹೋಗಬೇಕಾದರೆ, ತೇಲುವ ಬುಟ್ಟಿಯಲ್ಲೇ ಹೋಗಬೇಕು. ಕುಡುಗುಂಜಿಯ ದ್ವೀಪದಲ್ಲಿರುವ ಹಸಲರು ಯಾರಾದರೂ ಹೊಸಬರು ತಮ್ಮ ಹಾಡಿಕೇರಿಗೆ ಬರುವುದನ್ನು ನೋಡಿದರೆ ಅವರತ್ತ ಬಾಣಗಳನ್ನು ಹೂಡುವರು. ಅವರ ಮೇಲೆ ಆಕ್ರಮಣ ಮಾಡಿದ ಪ್ರಸಂಗಗಳೂ ಇವೆ. ಇದನ್ನರಿತ ಹುಚ್ಚಪ್ಪ ಮಾಸ್ತರರು ಕುಡುಗುಂಜಿ ದ್ವೀಪದಲ್ಲಿರುವ ಹಸಲರೊಂದಿಗೆ ನಿಕಟ ಸಂಬಂಧವಿದ್ದವರನ್ನು ಕರೆದುಕೊಂಡು ಒಂದು ವಾರಕ್ಕಾಗುವಷ್ಟು ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಬೆಳ್ಳೆಣ್ಣೆಯ ಚೌಡಪ್ಪ ಮತ್ತು ಇತರ ಮುಖಂಡರೊಂದಿಗೆ ಕುಡುಗುಂಜಿಗೆ ಪ್ರಯಾಣ ಬೆಳೆಸಿದರು. ಕುಡುಗುಂಜಿಗೆ ಹೋಗುವಷ್ಟರಲ್ಲಿ ಮಧ್ಯಾಹ್ನ ನಾಲ್ಕು ಗಂಟೆಯಾಗಿತ್ತು. ಅಲ್ಲಿರುವ ಹಸಲರು ಇವರನ್ನು ನೋಡಿ ಇವರ ಬಾಣ ಹೂಡಬೇಕು ಎನ್ನುವಷ್ಟರಲ್ಲಿ ಇವರ ಸಂಗಡ ಹೋದ ಬೆಳ್ಳೆಣ್ಣೆಯ ಚೌಡಪ್ಪ ಮತ್ತು ಇತರರು ಹೋಯ್ ಎಂದರು. ಆಗ ಆಕಡೆಯಿಂದಲೂ ಹೋಯ್ ಎಂಬ ಪ್ರತ್ಯುತ್ತರ ಬಂದಾಗ ಹುಚ್ಚಪ್ಪ ಮಾಸ್ತರರು ನಿಟ್ಟುಸಿರು ಬಿಟ್ಟರು. ರಾತ್ರಿ ತಾವು ತಂದ ಅಕ್ಕಿ ಬೇಳೆಯಿಂದ ಆಹಾರ ತಯಾರಿಸಿ, ಊಟ ಮಾಡಿದರು. ಮರುದಿನ ಮುಂಜಾನೆ ಸ್ನಾನ ಮಾಡಿ ತಾವು ತಂದಿದ್ದ ಅಲ್ಪೋಪಹಾರವನ್ನು ತಿನ್ನುತ್ತಿರುವಾಗಲೇ ಹಸಲರ ಮೈಲ ಎಂಬುವವನು ಇವರಲ್ಲಿಗೆ ಬಂದು ತಮ್ಮ ಬಡತನದ ಮಧ್ಯೆಯೂ ತಮ್ಮ ಮನೆಯಲ್ಲಿರುವ ಬೈನೆ ಮರದ ಗಂಜಿಯನ್ನು ಕುಡಿಯಲು ಆಹ್ವಾನಿಸಿದಾಗ ಅವನ ಮನವಿಯನ್ನು ತಿರಸ್ಕರಿಸುವ ಮನಸ್ಸೂ ಇರಲಿಲ್ಲ, ಅವರಲ್ಲಿರುವ ಬಡತನವನ್ನು ಕಂಡು ಹೋಗುವ ಮನಸ್ಸೂ ಇರಲಿಲ್ಲ. ಇಂಥ ಡೋಲಾಯಮಾನ ಸ್ಥಿತಿಯಲ್ಲಿ ಮಾಸ್ತರರು ಇದ್ದರು. ಆಗ ಬೆಳ್ಳೆಣ್ಣೆಯ ಚೌಡಪ್ಪನವರು ನಾವು ಬಂದ ಕಾರ್ಯ ಸುಗಮವಾಗಬೇಕಾದರೆ, ಆತನ ಮನೆಗೆ ಹೋಗೋಣ ಎಂದಾಗ ವಿಧಿಯಿಲ್ಲದೆ ಹುಚ್ಚಪ್ಪ ಮಾಸ್ತರರು ಮೈಲಾನ ಮನೆ ಕಡೆಗೆ ಹೊರಟರು. ಆತನ ಮನೆಯಲ್ಲಿರುವ ಮಕ್ಕಳು ಅರಬೆತ್ತಲೆಯಾಗಿ ಇರುವುದನ್ನು ಕಂಡು ಮತ್ತು ಅವರು ಕದ್ದುಮುಚ್ಚಿ ಇವರನ್ನು ನೋಡುವುದನ್ನು ಕಂಡು ಹುಚ್ಚಪ್ಪ ಮಾಸ್ತರರು ಆ ಮಕ್ಕಳನ್ನು ಕರೆದು ತಮ್ಮ ತೊಡೆಯ ಮೇಲೆ ಕೂಡಿಸಿಕೊಂಡು ನೀವು ಶಾಲೆಗೆ ನಮ್ಮೂರಿಗೆ ಬರುವಿರಾ? ಎಂದು ಕೇಳಿದಾಗ ಇಲ್ಲವೆಂಬ ಉತ್ತರ ಆ ಮಕ್ಕಳಿಂದ ಬಂತು. ತಂದೆ-ತಾಯಿಗಳಿಂದ ಕೂಡಾ ಅವರ ಮಕ್ಕಳು ಶಾಲೆಗೆ ಹೋಗುವುದರ ಬಗ್ಗೆ ನಕಾರಾತ್ಮಕವಾದ ಉತ್ತರ ಬಂದಿತು. ಆಗ ಹುಚ್ಚಪ್ಪ ಮಾಸ್ತರರು ಹಾಡಿಕೇರಿಯ ಎಲ್ಲ ಹಸಲರನ್ನು ಕರೆದು ಅವರ ಮನವೊಲಿಸಲು ಪ್ರಯತ್ನಿಸಿದರು. ಇದಕ್ಕಾಗಿ ಹುಚ್ಚಪ್ಪ ಮಾಸ್ತರರು ಒಂದು ವಾರ ಕಾಲ ಕುಡುಗುಂಜಿ ದ್ವೀಪದಲ್ಲಿಯೇ ಇದ್ದು, ತಂದೆ ತಾಯಿಗಳ ಮನವೊಲಿಸುವಲ್ಲಿ

ಸಫಲರಾದರು. ಅವರು ಒಂದು ವಾರದ ನಂತರ ಮೂರು ಮಕ್ಕಳನ್ನು ತಮ್ಮ ಜೊತೆ ಕರೆದುಕೊಂಡು ಹಿರೇಮನೆ ಆಶ್ರಮ ಶಾಲೆಗೆ ಬಂದರು. ಆ ಮಕ್ಕಳ ತಲೆಯಲ್ಲಿ ಹೇನುಗಳಾಗಿದ್ದವು. ಅಲ್ಲದೆ ಗಾಯಗಳೂ ಇದ್ದವು. ಇದನ್ನರಿತ ಹುಚ್ಚಪ್ಪ ಮಾಸ್ತರರು ಆ ಮಕ್ಕಳಿಗೆ ಸ್ವತಃ ತಾವೇ ಕ್ಷೌರ ಮಾಡಿ ಹೊಸ ಬಟ್ಟೆಗಳು, ಎಣ್ಣೆ ಹಾಗೂ ಸಾಬೂನುಗಳನ್ನು ಕೊಟ್ಟರು. ದಿನಾಲೂ ಸ್ನಾನ ಮಾಡಿ ಸ್ವಚ್ಛವಾಗಿರಬೇಕೆಂದು ಹೇಳಿಕೊಟ್ಟರು. ಕೇವಲ ಒಂದು ತಿಂಗಳಲ್ಲಿ ಆ ಮಕ್ಕಳು ಬದಲಾದ ಪರಿಸರಕ್ಕೆ ಹೊಂದಿಕೊಂಡರು. ಇದರಿಂದ ಉತ್ತೇಜನಗೊಂಡ ಹುಚ್ಚಪ್ಪ ಮಾಸ್ತರರು ಶಿವಮೊಗ್ಗ ಜಿಲ್ಲೆಗೆ ಹೊಂದಿಕೊಂಡಿರುವ ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರಯಾಣ ಮಾಡಿ ಅಲ್ಲಿರುವ ಗಿರಿಜನ ಮಕ್ಕಳನ್ನು ಈ ಶಾಲೆಗೆ ಯಾಕೆ ಸೇರಿಸಬಾರದು? ಎಂದು ಯೋಚನೆ ಮಾಡಿ ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾದರು. ವಾಹನಗಳು ಇರದೇ ಇದ್ದ ಕಾಲದಲ್ಲಿ ಕಷ್ಟಪಟ್ಟು ಪ್ರಯಾಣ ಮಾಡಿ, ಗಿರಿಜನ ಮಕ್ಕಳನ್ನು ಈ ಶಾಲೆಗೆ ಸೇರಿಸಿದರು. ಇವರ ಈ ಕಾರ್ಯವು ಮೇಲ್ವರ್ಗದ ಜನರ ನಿದ್ದೆಗೆಡಿಸಿತು. ಇವರ ಮೇಲೆ ಕೆಲವು ಆಪಾದನೆಗಳನ್ನು ಹೊರಿಸಿದರು. ಇಲ್ಲಿಂದ ಸೊರಬ ತಾಲೂಕಿಗೆ ವರ್ಗ ಮಾಡಲಾಯಿತು. ಆದರೂ ಇವರು ತಮ್ಮ ಕೆಲಸವನ್ನು ನಿಲ್ಲಿಸದೇ ಮುಂದು ವರೆಸಿದರು. ಮೂರು ವರ್ಷಗಳ ನಂತರ ಪುನಃ ಈ ಶಾಲೆಗೆ ವರ್ಗಾವಣೆ ಮಾಡಿಕೊಂಡರು. ಆಗ ಈ ಶಾಲೆಯಲ್ಲಿ ಮಕ್ಕಳ ಪಟಸಂಖ್ಯೆ ೨೦೦ಕ್ಕಿಂತಲೂ ಅಧಿಕ. ಇಲ್ಲಿ ಮಕ್ಕಳಿಗೆ ದಿನಾಲೂ ಬೆಳಿಗ್ಗೆ ಎಬ್ಬಿಸಿ, ದಿನನಿತ್ಯದ ಕರ್ಮಾದಿಗಳನ್ನು ಮಾಡಿದ ನಂತರ ವ್ಯಾಯಾಮ ಮಾಡಿಸುವರು. ನಂತರ ಬೋಧನೆ, ಸಾಯಂಕಾಲ ಆಟವನ್ನಾಡಿಸುವರು. ತಾವೂ ಕೂಡಾ ಮಕ್ಕಳೊಂದಿಗೆ ಮಕ್ಕಳಾಗಿ ಅವರೊಂದಿಗೆ ಬೆರೆತು ಆ ಮಕ್ಕಳ ಏಳ್ಗೆಗಾಗಿ ದುಡಿದರು. ಅಷ್ಟೇ ಅಲ್ಲ, ಹಸಲರ ಮುಖಂಡರಿಗೂ ಕೂಡಾ ಅವರಲ್ಲಿರುವ ನ್ಯೂನ್ಯತೆಗಳನ್ನು ಬಿಟ್ಟು ಹೊಸ ಬದುಕಿನ ಹೆಜ್ಜೆಗಳನ್ನಿಡಲು ಸಲಹೆ ಕೊಡುತ್ತಿದ್ದರು. ಅವರಲ್ಲಿ ಏಕತೆ ಬರಬೇಕು ಎನ್ನುವ ಕಾರಣಕ್ಕಾಗಿ ೧೯೭೭ರಲ್ಲಿ ಹಿರೇಮನೆಯಲ್ಲಿ ಗಣೇಶನ ಮೂರ್ತಿಯನ್ನು ಐದು ದಿವಸಗಳವರೆಗೆ ಇಟ್ಟಿದ್ದರು. ಇಲ್ಲಿ ಹಸಲರಿಂದ ಮತ್ತು ಇತರ ಬುಡಕಟ್ಟುಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಾಯಂಕಾಲ ಹಾಕಿಕೊಳ್ಳುವರು. ಇದರಿಂದ ಅವರಲ್ಲಿ ಒಂದು ಹೊಸ ಅಲೆಯನ್ನೇ ಎಬ್ಬಿಸಿದರು.

ಅಂದು ಅವರು ಮಾಡಿದ ಪ್ರಯತ್ನದಿಂದಲೇ ಹಸಲರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದರು. ಕಾಡಾಡಿಗಳಾಗಿ ಅಲೆಮಾರಿ ಬದುಕನ್ನು ಸಾಗಿಸುತ್ತಿದ್ದ ಹಸಲರಿಗೆ ಸಮಾಜದ ಮುಖ್ಯವಾಹಿನಿಯೆಡೆಗೆ ಮುಖಮಾಡಲು ಹುಚ್ಚಪ್ಪ ಮಾಸ್ತರರೇ ಕಾರಣ ಎಂದು ಮುಗದೂರಿನ ಅವರ ಶಿಷ್ಯ ಕೃಷ್ಣ ಹೆಮ್ಮೆಯಿಂದ ಹೇಳುತ್ತಾನೆ. ಸಂಶೋಧಕರು ಐದೂ ಜಿಲ್ಲೆಗಳಲ್ಲಿ ಸಂಚರಿಸಿದಾಗ ಎಲ್ಲ ಕಡೆಗೂ ಹುಚ್ಚಪ್ಪ ಮಾಸ್ತರರನ್ನು ನೆನೆಯುವದನ್ನು ಗುರುತಿಸಿದ್ದಾರೆ. ನಮ್ಮಲ್ಲಿ ಪರಿವರ್ತನೆಯಾಗಿದ್ದಿದ್ದೇ ಆದರೆ ಅದು ಹುಚ್ಚಪ್ಪ ಮಾಸ್ತರರಿಂದಲೇ ಎಂದು ರಾಮಣ್ಣ ಕೂಳಕಾರ, ಬೆಳ್ಳೆಣ್ಣೆಯ ಚೌಡಪ್ಪ ಹೆಮ್ಮೆಯಿಂದ ಹೇಳುತ್ತಾರೆ. ಆದ್ದರಿಂದಲೇ ಹಸಲರು ಹುಚ್ಚಪ್ಪ ಮಾಸ್ತರರನ್ನು ತಮ್ಮ ಪರಿವರ್ತನೆಯ ಹರಿಕಾರ ಎಂತಲೂ ಕರೆಯುತ್ತಾರೆ.

ಹುಚ್ಚಪ್ಪ ಮಾಸ್ತರರು ನಿವೃತ್ತಿಯಾದ ನಂತರವೂ ಹಸಲರ ಬಗೆಗಿನ ಒಡನಾಟ ಅವರ ಬಗ್ಗೆ ಇರುವ ಕಾಳಜಿಯಿಂದ ಫೇಸ್ ಬುಕ್ ಒಂದನ್ನು ಮಾಡಿದ್ದಾರೆ. ಇದು ಹಸಲರ ಬಗ್ಗೆ ಇರುವ ಅವರ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

೬.೩ ಆರ್ಥಿಕ ಬದಲಾವಣೆಗಳು

"ಯಾವುದೇ ಒಂದು ಬುಡಕಟ್ಟಿನ ಪರಿವರ್ತನೆಯಲ್ಲಿ ಆರ್ಥಿಕ ಚಟುವಟಿಕೆಗಳು ಪ್ರಧಾನ ಪಾತ್ರವಾಡುತ್ತವೆ". (Amir Hassan :೧೯೮೬ :೧೧೩) ಹಸಲರು ಅಲೆಮಾರಿಗಳಾಗಿದ್ದು, ಆಹಾರ ಹುಡುಕುವುದೇ ಅವರ ಪ್ರಮುಖ ಉದ್ಯೋಗವಾಗಿತ್ತು. ಆಮೇಲೆ ಕೆಲವರು ಮೇಲ್ವರ್ಗದವರ ತೋಟಗಳಲ್ಲಿ ಕೂಲಿ ಮಾಡಿ ಜೀವನ ಸಾಗಿಸಲು ಪ್ರಾರಂಭಿಸಿದರು. ಆದರೆ ಆಧುನಿಕತೆಯ ಪ್ರಭಾವದಿಂದ ಹಸಲರ ಆರ್ಥಿಕ ಚಟುವಟಿಕೆಗಳಲ್ಲಿ ಬದಲಾವಣೆಗಳಾಗಿವೆ.

ಹಸಲರ ೫೧೭ ಕುಟುಂಬಗಳ ಸಮೀಕ್ಷೆ ೪೭ ಹಾಡಿಕೇರಿಗಳಲ್ಲಿ ಮಾಡಿದಾಗ ೨೩೭ ಜನರಿಗೆ ಮಾತ್ರ ೧ ಎಕರೆಯಿಂದ ೪ ಎಕರೆ ಒಳಗಡೆ ಜಮೀನು ಇದೆ. ೨ ಕುಟುಂಬಗಳಿಗೆ ಮಾತ್ರ ೪ ಎಕರೆಗಿಂತ ಹೆಚ್ಚು ಜಮೀನು ಇದೆ. ೨೭೮ ಕುಟುಂಬಗಳಿಗೆ ಜಮೀನು ಇರುವುದಿಲ್ಲ. ಇದು ಒಟ್ಟು ಕುಟುಂಬದ ಶೇ. ೫೩.೭ ರಷ್ಟಾಗುತ್ತದೆ. ಇವರಲ್ಲಿ ಬಗರಹುಕುಂ ಸಾಗುವಳಿ ಜಮೀನು ಇದೆ. ಇವರಲ್ಲಿ ಕೇವಲ ಚಿಕ್ಕಮಗಳೂರು ಜಿಲ್ಲೆಯ ಹಸಲರಿಗೆ ಪಹಣಿ ಪತ್ರಿಕೆ ದೊರೆತಿದೆ. ಈ ಜಮೀನಿನಲ್ಲಿಯೇ ಅವರು ಮಳೆಯಾಶ್ರಿತ ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ಕುಂದಾಪೂರ ತಾಲೂಕಿನ ಹಳ್ಳಿಹೊಳೆ, ಕಬ್ಬಿನಾಲೆ, ಕಾರೆಬೈಲು ಮುಂತಾದ ಕಡೆಗಳಲ್ಲಿ ಹರಿಯುವ ಝರಿಗೆ ಪೈಪುಗಳನ್ನು ಜೋಡಿಸಿಕೊಂಡು ನೀರಾವರಿ ಬೆಳೆಗಳಾದ ಬಾಳೆ, ಅಡಿಕೆ ಮತ್ತು ತೆಂಗು ಬೆಳೆಯುತ್ತಾರೆ. ಆದರೂ ಇವರು ಆರ್ಥಿಕವಾಗಿ ಅಷ್ಟೊಂದು ಹೇಳಿಕೊಳ್ಳುವಂತ ಸ್ಥಿತಿಯಲ್ಲಿಲ್ಲ. ಆದರೆ ಸೊರಬ ತಾಲೂಕಿನ ಒಂದು ಮನೆಯವರು ಮಾತ್ರ ಆರ್ಥಿಕವಾಗಿ ಸಬಲರಾಗಿದ್ದಾರೆ. ಇವರಲ್ಲಿ ಬಹಳಷ್ಟು ಜನರು ಮೇಲ್ವರ್ಗದವರ ಜಮೀನಿನಲ್ಲಿ ಕೂಲಿಯನ್ನು ಮಾಡಿ ಜೀವನ ಸಾಗಿಸುತ್ತಾರೆ. ಆದರೆ ಘಟ್ಟದ ಕೆಳಗೆ ನಕ್ಸಲ್ ಚಟುವಟಿಕೆಗಳು ಮೇಲಿಂದ ಮೇಲೆ ಪುನರಾವರ್ತನೆಯಾಗುವುದರಿಂದ ಎಚ್ಚೆತ್ತುಕೊಂಡ ಸರಕಾರವು ಬುಡಕಟ್ಟು ಜನರ ಆರ್ಥಿಕ ಸುಧಾರಣೆಗಾಗಿ ಕೆಲವೊಂದು ಯೋಜನೆಗಳನ್ನು ಹಾಕಿಕೊಂಡಿದೆ. ಅದರಲ್ಲಿ 'ವಸ್ತ್ರವಿನ್ಯಾಸ ಯೋಜನೆ'ಯೂ ಒಂದು. ಈ ಯೋಜನೆಯನ್ವಯ ಹಸಲರ ಹೆಂಗಸರಿಗೆ ವರ್ಷದ ೧೨ ತಿಂಗಳು ಉದ್ಯೋಗ ಕೊಡುತ್ತಾರೆ. ಅಲ್ಲದೆ ಕರ್ನಾಟಕ ಕೈಮಗ್ಗ ನಿಗಮದವರು ನೂಲು ಪೂರೈಕೆ ಮಾಡಿ ಅವರಿಂದ ಸಿದ್ಧವಾದ ಉಡುಪುಗಳನ್ನು ತೆಗೆದುಕೊಂಡು ಹೋಗುವರು. ಇದಕ್ಕಾಗಿ ಅವರಿಗೆ ೪೮ ರೂಪಾಯಿ ದರ ನಿಗದಿಪಡಿಸಿದ್ದಾರೆ. ಆದರೆ ಇನ್ನುಳಿದ ಹಾವೇರಿ, ಹೊನ್ನಾಳಿ ಮುಂತಾದ ಕಡೆಗಳಲ್ಲಿ ಕೇವಲ ೪೨ ರೂಪಾಯಿ ಕೊಡುತ್ತಾರೆ.

ಘಟ್ಟದ ಕೆಳಗಿನ ಹಸಲರಿಗಾಗಿಯೇ ಸರಕಾರವು ಖಾಸಗಿ ಸಹಭಾಗಿತ್ವದಲ್ಲಿ ಗೇರು ಸಂಸ್ಕರಣಾ ಘಟಕವನ್ನು ತೆರೆದಿದೆ. ಇದೂ ಕೂಡಾ ಅವರಿಗೆ ೧೨ ತಿಂಗಳು ಉದ್ಯೋಗವನ್ನು ಒದಗಿಸಿಕೊಡುತ್ತದೆ. ಇದರಿಂದ ಮಳೆಗಾಲದಲ್ಲಿ ನಿರುದ್ಯೋಗಿಯಾಗಿ ಇರುವ ಹೆಣ್ಣು ಮಕ್ಕಳಿಗೆ ಈ ಯೋಜನೆಯು

ವರದಾನವಾಗಿದೆ. ಅಷ್ಟೆ ಅಲ್ಲ, ಕೂಲಿಯೂ ಕೂಡಾ ಹೆಚ್ಚಾಗಿದೆ. ಇದರಿಂದ ಅವರ ಆರ್ಥಿಕ ಸ್ಥಿತಿಯಲ್ಲಿಯೂ ಬದಲಾವಣೆಯಾಗಿದೆ.

ಹಸಲರ ಆರ್ಥಿಕ ಬದಲಾವಣೆಯಲ್ಲಿ ಧರ್ಮಸ್ಥಳದ ಗ್ರಾಮೀಣ ಅಭಿವೃದ್ಧಿ ಯೋಜನೆಯು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಪ್ರತಿಯೊಂದು ತಾಲೂಕು, ಹೋಬಳಿ ಕೇಂದ್ರಗಳಲ್ಲಿ ಒಂದೊಂದು ಶಾಖೆಯನ್ನು ತೆಗೆದು ಸಾಲವನ್ನು ನೀಡುವರು. ಈ ಸಂಸ್ಥೆಯಿಂದ ಸಾಲ ತೆಗೆದುಕೊಂಡ ಹಸಲರು ಪಶುಸಂಗೋಪನೆ ಮಾಡುವುದರ ಜೊತೆಗೆ ತಮ್ಮ ಗದ್ದೆಗಳನ್ನು ಸುಧಾರಣೆ ಮಾಡಿ ಕೊಂಡಿದ್ದಾರೆ. ಈ ಯೋಜನೆಯನ್ವಯ ಪ್ರತಿ ಐದು ಜನರ ಒಂದು ಗುಂಪು ರಚಿಸಬೇಕು. ಈ ಗುಂಪಿನ ಸದಸ್ಯರು ತಿಂಗಳಲ್ಲಿ ಒಂದು ದಿನವಾದರೂ ಕಡ್ಡಾಯವಾಗಿ ತಮ್ಮ ಗದ್ದೆಗಳಲ್ಲಿ ದುಡಿಯಲೇಬೇಕು. ಇದರಿಂದ ಅವರ ಗದ್ದೆಯೂ ಸುಧಾರಣೆಯಾಗುವುದರೊಂದಿಗೆ ಆರ್ಥಿಕವಾಗಿ ಸಬಲರಾಗಲು ಈ ಯೋಜನೆಯು ಸಹಾಯ ಮಾಡಿದೆ ಎಂದು ಕೊಲ್ಲೂರಿನ ಅಣ್ಣಪ್ಪ, ಕೃಷ್ಣಯ್ಯ ಹೇಳುತ್ತಾರೆ.

ಕೊಲ್ಲೂರಿನ ಹಸಲರು ತಮ್ಮ ಗದ್ದೆಗಳಲ್ಲಿ ಬ್ರಹ್ಮಾವರದಿಂದ ಮಲ್ಲಿಗೆ ಸಸಿಗಳನ್ನು ತಂದು ನಾಟಿ ಮಾಡಿ, ಹೂವನ್ನು ಬೆಳೆದು ಮೂಕಾಂಬಿಕಾ ದೇವಸ್ಥಾನದ ಎದುರಿಗೆ ಕುಳಿತು ಹೂವು ಮಾರುವರು. ಇವರು ಇದರಿಂದ ೨೦೦ ರೂಪಾಯಿಗಿಂತಲೂ ಹೆಚ್ಚು ಹಣ ಸಂಪಾದಿಸುವರು. ಒಂದು ಕಾಲದಲ್ಲಿ ಅಡಿಕೆ ಸುಲಿಯುವುದರಲ್ಲಿಯೇ ನಿರತರಾಗಿರುತ್ತಿದ್ದ ಸ್ತ್ರೀಯರು ಇಂದು ಹೂವು ಮಾರುವ ಕೆಲಸದಲ್ಲಿ ನಿರತರಾಗಿದ್ದಾರೆ.

ಸೊರಬ ತಾಲೂಕಿನ ಮುಟುಗುಪ್ಪೆಯಲ್ಲಿ ಹಸಲರ ಹೆಣ್ಣು ಮಕ್ಕಳು ಸ್ವಸಹಾಯ ಗುಂಪಿನ ಮುಖಾಂತರ ಅಡಿಕೆ ಹಾಳೆಯಿಂದ ಊಟದ ತಟ್ಟೆಗಳನ್ನು ತಯಾರಿಸುವರು. ಇದನ್ನು ಪೇಟೆಯಲ್ಲಿ ಮಾರಿ ಹಣ ಸಂಪಾದಿಸುತ್ತಾರೆ. ಇದು ಅವರು ಸಾಂಪ್ರದಾಯಿಕ ಉದ್ಯೋಗಗಳನ್ನು ಬಿಟ್ಟು ಬೇರೆ ಉದ್ಯೋಗಗಳತ್ತ ವಾಲುತ್ತಿರುವುದನ್ನು ಎತ್ತಿ ತೋರಿಸುತ್ತದೆ. ಅಷ್ಟೇ ಅಲ್ಲ, ಅವರು ಆರ್ಥಿಕವಾಗಿ ಬದಲಾವಣೆಯಾಗಲು ಪ್ರಮುಖ ಕಾರಣ.

ಒಟ್ಟಿನಲ್ಲಿ ಘಟ್ಟದ ಮೇಲಿನ ಹಸಲರಿಗಿಂತ ಘಟ್ಟದ ಕೆಳಗಿನ ಹಸಲರಲ್ಲಿ ಆರ್ಥಿಕವಾಗಿ ಸಾಕಷ್ಟು ಬದಲಾವಣೆಗಳಾಗಿವೆ. ಇದಕ್ಕೆ ಸರಕಾರದ ನಕ್ಸಲ್ ಪ್ಯಾಕೇಜ್ ಕೂಡಾ ಕಾರಣವಾಗಿದೆ.

೬.೪ ರಾಜಕೀಯ ಬದಲಾವಣೆಗಳು

ಪ್ರತಿಯೊಂದು ಬುಡಕಟ್ಟಿಗೂ ತನ್ನದೇಯಾದ ಒಳಾಡಳಿತ ವ್ಯವಸ್ಥೆ ಇದೆ. ಅದೇ ರೀತಿಯಾಗಿ ಹಸಲರಲ್ಲಿಯೂ ಕೂಡಾ ಜಾತಿ ಪಂಚಾಯತ ವ್ಯವಸ್ಥೆ ಇದೆ. ಇದಕ್ಕೆ ಗಾರುಡಿಗ ಅಥವಾ ಕೊಂಡಿ ಕಾರನೇ ಮುಖ್ಯಸ್ಥ. ಏಕೆಂದರೆ, ಗಾರುಡಿಗ ಅತಿಮಾನುಷ ಶಕ್ತಿಯೊಂದಿಗೆ ಸಂಪರ್ಕ ಇಟ್ಟು ಕೊಂಡಿದ್ದಾನೆಂಬ ಕಾರಣಕ್ಕೆ ಆತನನ್ನು ಭಕ್ತಿಯಿಂದ ಕಾಣುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿ ಗಾರುಡಿಗ ಅಥವಾ ಮಂತ್ರವಾದಿಗೆ ಯಾರೂ ಭಯಪಡುವುದಿಲ್ಲವೆಂದು ಸಿದ್ಧಾಪೂರ ತಾಲೂಕಿನ ಕಾನಳ್ಳಿಯ ಭಾಸ್ಕರ ಎಂಬ ಗಾರುಡಿಗ ಹೇಳುತ್ತಾನೆ.

ಹಸಲರಲ್ಲಿ ಹಿಂದೆ ಕೊಂಡಿಕಾರನನ್ನು ಆರಿಸಬೇಕಾದರೆ, ಆತನ ಆರ್ಥಿಕ ಸ್ಥಿತಿಗತಿ ಮತ್ತು ಎಲ್ಲರನ್ನು ಹಿಡಿದುಕೊಂಡು ಹೋಗುತ್ತಾನೆಂಬ ಭರವಸೆಯ ಆಧಾರದ ಮೇಲೆ ಆತನನ್ನು ಆರಿಸುತ್ತಿದ್ದರು. ಅಷ್ಟೇ ಅಲ್ಲ, ಇವರಲ್ಲಿ ಕೆಲವು ಸೀಮೆಗಳು ಇದ್ದವು. ಪ್ರತಿ ಸೀಮೆಗೂ ಒಬ್ಬೊಬ್ಬ ಕೊಂಡಿಕಾರ ನಿರುತ್ತಿದ್ದನು. ಆದರೆ ಬದಲಾದ ಪರಿಸ್ಥಿತಿಯಲ್ಲಿ ಇವರ ಸ್ಥಾನಮಾನಗಳು ಮಾಯವಾಗಿ ರಾಜಕೀಯ ಮೀಸಲಾತಿ ಬಂದಿರುವುದರಿಂದ ಹಸಲರಲ್ಲಿಯೂ ಕೂಡಾ ಜಿಲ್ಲಾ ಪಂಚಾಯತ, ತಾಲೂಕಾ ಪಂಚಾಯತ ಹಾಗೂ ಗ್ರಾಮ ಪಂಚಾಯತಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗಿ ಹೊಸನಗರ ತಾಲೂಕಿನ ತಾಲೂಕು ಪಂಚಾಯತ ಅಧ್ಯಕ್ಷರಾಗಿ ಹಾಗಲಮನೆಯ ಶ್ರೀಮತಿ ಗುಲಾಬಿಯವರು ಕಾರ್ಯನಿರ್ವಹಿಸಿದ್ದಾರೆ. ಅಲ್ಲದೆ ಕಾರ್ಗಲ್‌ದ ರಾಮಣ್ಣ ಕೋಲಕಾರ ಈತನ ಮನೆಯಲ್ಲಿ ಮಂಡಲ ಪಂಚಾಯತದಿಂದ ಇಲ್ಲಿಯವರೆಗೆ ಮೀಸಲಾತಿಯ ಸೌಲಭ್ಯವನ್ನು ಪಡೆದು ಪಟ್ಟಣ ಪಂಚಾಯತಿಯ ಸದಸ್ಯರಾಗಿದ್ದಾರೆ. ಹಿರೇಮನೆಯ ಮಾಲತಿ ಗಣಪತಿಯವರು ಕೂಡಾ ತಾಲೂಕಾ ಪಂಚಾಯತ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದಾರೆ. ಹಿಂದೆ ಕೊಂಡಿಕಾರರಾಗಿ ಕೆಲಸ ಮಾಡುವದನ್ನೇ ಈಗ ಬದಲಾದ ಸ್ಥಿತಿಯಲ್ಲಿ ಪಂಚಾಯತ ಗಳಿಗೆ ಆಯ್ಕೆಯಾದ ಸದಸ್ಯರು ಅವರ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಹೀಗೆ ಹಸಲರಲ್ಲಿ ಈ ಹಿಂದೆ ಇದ್ದ ಕೊಂಡಿಕಾರ, ಗಾರುಡಿಗರ ಅಧಿಕಾರಿಗಳು ಮಾಯವಾಗಿ ಸದಸ್ಯರು ತಮ್ಮ ಅಧಿಕಾರವನ್ನು ಚಲಾಯಿಸುತ್ತಿದ್ದಾರೆ.

೬.೫ ಮತಾಂತರ

ಮತಾಂತರವು ಇತ್ತೀಚಿನ ದಿನಗಳಲ್ಲಿ ಹಸಲರಲ್ಲಿಯೂ ಪ್ರಾರಂಭವಾಗಿದೆ. ಒಂದು ಧರ್ಮವನ್ನು ಬಿಟ್ಟು ಮತ್ತೊಂದು ಧರ್ಮವನ್ನು ಸ್ವೀಕರಿಸುವ ಕ್ರಿಯೆಗೆ 'ಮತಾಂತರ' ಎನ್ನುವರು. ಮತಾಂತರ ಎಂದಿನಿಂದ ಪ್ರಾರಂಭವಾಯಿತೆಂದು ಹೇಳುವುದು ತುಂಬಾ ಕಷ್ಟಕರ. ಆದರೆ ಇತ್ತೀಚನ ದಿನಗಳಲ್ಲಿ ಕೆಳವರ್ಗದ ಜನರು ಮತಾಂತರಗೊಳ್ಳುವುದು ಸಾಮಾನ್ಯವಾಗಿದೆ೧೧. ದಿನಾಂಕ:೦೩-೦೧-೨೦೧೧ರ ಮೂರನೇ ಪುಟದಲ್ಲಿ ಪ್ರಜಾವಾಣಿ ಪತ್ರಿಕೆಯು ಲಂಬಾಣಿಗರ ಮತಾಂತರವೆಂದು ಬಸವನ ಬಾಗೇವಾಡಿ ತಾಲೂಕನ್ನು ಉದಾಹರಿಸಿ, ಲೇಖನ ಪ್ರಕಟ ಮಾಡಿತು. ಇದರಂತೆ ಘಟ್ಟದ ಕೆಳಗಿನ ಕಾರೆಬೈಲಿನಲ್ಲಿರುವ ಹಸಲರ ಯುವಕ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿ ತಾನೂ ಯೇಸುಕ್ರಿಸ್ತನ ಅನುಯಾಯಿ ಎಂದು ಹೇಳಿಕೊಳ್ಳುವುದರ ಜೊತೆಗೆ ತನ್ನ ಹೆಸರನ್ನು ಕೂಡಾ ಬದಲಾವಣೆ ಮಾಡಿಕೊಂಡಿದ್ದಾನೆ. ಅಲ್ಲದೆ ರವಿವಾರ ತಪ್ಪದೇ ಕಮಲಶಿಲೆಯಲ್ಲಿರುವ ಚರ್ಚಗೆ ಹೋಗಿ ಪ್ರಾರ್ಥನೆ ಮಾಡುತ್ತಾನೆ. ಅಲ್ಲದೆ ತನ್ನ ತಾಯಿಯನ್ನು ಕೂಡ ಚರ್ಚಗೆ ಕರೆದುಕೊಂಡು ಹೋಗುವುದರ ಜೊತೆಗೆ ತನ್ನ ತಾಯಿಯ ಹೆಸರನ್ನು ಬದಲಿಸಿದ್ದಾನೆ. ಅಷ್ಟೇ ಅಲ್ಲ ತನ್ನ ತಾಯಿಯು ಹಣೆಯ ಮೇಲೆ ಹಚ್ಚುವ ಕುಂಕುಮವನ್ನು ತೆಗೆದು ಬರಿಹಣೆಯಿಂದ ಇರುವಂತೆ ತಿಳಿಸಿದ್ದಾನೆ. ಅಲ್ಲದೆ ತಮ್ಮ ಕೊರಳಲ್ಲಿ ಯೇಸುಕ್ರಿಸ್ತನ ಶಿಲುಬೆಯನ್ನು ಧರಿಸಿದ್ದಾರೆ. ಅದರಂತೆ ಬಾಳೆಹೊನ್ನೂರಿನ ಸಮೀಪದಲ್ಲಿರುವ ಬಿ.ಕಣಬೂರಿನ ಹಸಲರ ಹಾಡಿಕೇರಿಯಲ್ಲಿಯೂ ಒಬ್ಬ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ್ದಾನೆ. ತನ್ನ ಮನೆಯನ್ನು ಕೂಡಾ ಆತ ಬದಲಾವಣೆ

ಮಾಡಿ ಮನೆಯ ಮೇಲೆ ಬಾಲ ಯೇಸುವಿನ ಮೂರ್ತಿಯನ್ನು ಕೂಡಿಸಿದ್ದಾನೆ. ಅಷ್ಟೇ ಅಲ್ಲ, ತನ್ನ ಮನೆಗೆ ಸಿಲುಬಿನ ಚಿಹ್ನೆಯನ್ನು ಇಟ್ಟಿದ್ದಾನೆ. ಹಿಂದೆ ಪೂಜಿಸುತ್ತಿರುವ ಎಲ್ಲ ದೇವರ ಮೂರ್ತಿಯನ್ನು ತೆಗೆದು ಯೇಸುವಿನ ಚಿತ್ರಪಟವನ್ನು ಮಾತ್ರ ಇಟ್ಟಿದ್ದಾನೆ. ಪ್ರತಿ ದಿನವೂ ಮನೆಯಲ್ಲಿಯೇ ಆತ ಪ್ರಾರ್ಥನೆ ಸಲ್ಲಿಸುತ್ತಾನೆ. ರವಿವಾರಕ್ಕೊಮ್ಮೆ ಗಂಡ-ಹೆಂಡತಿಯರು ಕೂಡಿಕೊಂಡು ಚರ್ಚಗೆ ಹೋಗುತ್ತಾರೆ. ಇಬ್ಬರೂ ತಮ್ಮ ಮೊದಲಿನ ಹೆಸರುಗಳನ್ನು ಬದಲಿಸಿ, ಹೊಸ ಹೆಸರುಗಳನ್ನಿಟ್ಟು ಕೊಂಡಿದ್ದಾರೆ. ಈಕೆಯೂ ಕೂಡಾ ತನ್ನ ಹಣೆಯ ಮೇಲಿನ ಕುಂಕುವನ್ನು ತೆಗೆದಿದ್ದಾಳೆ. ಈಗ ಅವರು ಕ್ರಿಶ್ಚಿಯನ್ ಧರ್ಮದ ಅನುಯಾಯಿಗಳಾಗಿದ್ದಾರೆ. ಈ ಮೊದಲು ಅವರಲ್ಲಿದ್ದ ಆಚರಣೆಗಳನ್ನು ಬಿಟ್ಟು ಕ್ರಿಶ್ಚಿಯನ್ ಧರ್ಮದ ಆಚರಣೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವುದರಿಂದ ತಾವು ಬದಲಾಗಿದ್ದೇವೆಂದು ಹೆಮ್ಮೆಯಿಂದ ಹೇಳುತ್ತಾರೆ.

ಕೋಷ್ಟಕ- ೬.೨ ಸಮೀಕ್ಷೆ ಮಾಡಿದ ಹಸಲರ ಮತಾಂತರದ ವಿವರ

ಜಿಲ್ಲೆಗಳು		ಮತಾಂತರದ ವಿವರ ಮತಾಂತರ ಗೊಂಡವರು	 ಮತಾಂತರ ಕ್ಕೊಳಪಡದವರು	 ಒಟ್ಟು
ಉತ್ತರ ಕನ್ನಡ	ಒಟ್ಟು	-	೭೨	೭೨
	ಪ್ರತಿಶತ (ಜಿಲ್ಲೆಯೊಳಗೆ)	-	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	-	೨೨.೫%	೨೨.೪%
	ಒಟ್ಟು ಪ್ರತಿಶತ	-	೨೨.೪%	೨೨.೪%
ಉಡುಪಿ	ಒಟ್ಟು	-	೭೨	೭೨
	ಪ್ರತಿಶತ (ಜಿಲ್ಲೆಯೊಳಗೆ)	-	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	-	೧೪%	೧೩.೯%
	ಒಟ್ಟು ಪ್ರತಿಶತ	-	೧೩.೯%	೧೩.೯%
ಚಿಕ್ಕಮಗಳೂರು	ಒಟ್ಟು	೧	೧೦೫	೧೦೬
	ಪ್ರತಿಶತ (ಜಿಲ್ಲೆಯೊಳಗೆ)	೦.೯%	೯೯.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೨೦.೩%	೨೦.೫%
	ಒಟ್ಟು ಪ್ರತಿಶತ	೨%	೨೦.೩%	೨೦.೫%
ದಕ್ಷಿಣ ಕನ್ನಡ	ಒಟ್ಟು	-	೬	೬
	ಪ್ರತಿಶತ (ಜಿಲ್ಲೆಯೊಳಗೆ)	-	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	-	೧.೨%	೧.೨%
	ಒಟ್ಟು ಪ್ರತಿಶತ	-	೧.೨%	೧.೨%

ಶಿವಮೊಗ್ಗ	ಒಟ್ಟು	–	೨೧೭	೨೧೭
	ಪ್ರತಿಶತ (ಜಿಲ್ಲೆಯೊಳಗೆ)	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	೪೨.೧%	೪೨%
	ಒಟ್ಟು ಪ್ರತಿಶತ	–	೪೨%	೪೨%
ಒಟ್ಟು	ಒಟ್ಟು	೧	೫೧೬	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೦.೨%	೯೯.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	೧೦೦%	೧೦೦%
	ಒಟ್ಟು ಪ್ರತಿಶತ	೦.೨%	೯೯.೮%	೧೦೦%

ಸಮೀಕ್ಷೆ ಮಾಡಿದ ೫೧೭ ಕುಟುಂಬಗಳಲ್ಲಿ ಕೇವಲ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಕುಟುಂಬ ಮಾತ್ರ ಮತಾಂತರಗೊಂಡಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ ೦.೯ ರಷ್ಟಾಗುತ್ತದೆ. ೫ ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ ೧೦೦ರಷ್ಟಾಗುತ್ತದೆ.

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಮತಾಂತರದ ಪ್ರಕ್ರಿಯೆ ಹಸಲರಲ್ಲಿಯೂ ಪ್ರಾರಂಭವಾಗಿದೆ. ಎಂಬುವುದನ್ನು ತೋರಿಸುತ್ತದೆ.

ಕೋಷ್ಟಕ– ೬.೩ ಸಮೀಕ್ಷೆ ಮಾಡಿದ ಹಸಲರಲ್ಲಿ ಮತಾಂತರಗೊಂಡವರ ವಿವರ

		ಮತಾಂತರಗೊಂಡವರ ವಿವರ				
ಜಿಲ್ಲೆಗಳು		ಕ್ರಿಶ್ಚಿಯನ್	ಮುಸ್ಲಿಂ	ಬೌದ್ಧ	ಅನ್ವಯಿಸುವುದಿಲ್ಲ	**ಒಟ್ಟು**
ಉತ್ತರ ಕನ್ನಡ	ಒಟ್ಟು	–	–	–	೧೧೬	೧೧೬
	ಪ್ರತಿಶತ (ಜಿಲ್ಲೆಯೊಳಗೆ)	–	–	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	–	೨೨.೫%	೨೨.೪%
	ಒಟ್ಟು ಪ್ರತಿಶತ	–	–	–	೨೨.೪%	೨೨.೪%
ಉಡುಪಿ	ಒಟ್ಟು	–	–	–	೭೨	೭೨
	ಪ್ರತಿಶತ (ಜಿಲ್ಲೆಯೊಳಗೆ)	–	–	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	–	೧೪%	೧೩.೯%
	ಒಟ್ಟು ಪ್ರತಿಶತ	–	–	–	೧೩.೯%	೧೩.೯%
ಚಿಕ್ಕಮಗಳೂರು	ಒಟ್ಟು	೧	–	–	೧೦೫	೧೦೫
	ಪ್ರತಿಶತ (ಜಿಲ್ಲೆಯೊಳಗೆ)	೦.೯%	–	–	೯೯.೧%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	–	–	೨೦.೩%	೨೦.೫%
	ಒಟ್ಟು ಪ್ರತಿಶತ	೦.೨%	–	–	೨೦.೩%	೨೦.೫%

ದಕ್ಷಿಣ ಕನ್ನಡ	ಒಟ್ಟು	–	–	–	೬	೬
	ಪ್ರತಿಶತ (ಜಿಲ್ಲೆಯೊಳಗೆ)	–	–	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	–	೧.೨%	೧.೨%
	ಒಟ್ಟು ಪ್ರತಿಶತ	–	–	–	೧.೨%	೧.೨%
ಶಿವಮೊಗ್ಗ	ಒಟ್ಟು	–	–	–	೨೧೭	೨೧೭
	ಪ್ರತಿಶತ (ಜಿಲ್ಲೆಯೊಳಗೆ)	–	–	–	೧೦೦%	೧೦೦%
	ಪ್ರತಿಶತ (ವರ್ಗಗಳಲ್ಲಿ)	–	–	–	೪೨.೧%	೪೨%
	ಒಟ್ಟು ಪ್ರತಿಶತ	–	–	–	೪೨%	೪೨%
ಒಟ್ಟು	ಒಟ್ಟು	೧	–	–	೫೧೬	೫೧೭
	ಪ್ರತಿಶತ (ಜಿಲ್ಲೆಯೊಳಗೆ)	೦.೨%	–	–	೯೯.೮%	೧೦೦%
	ಪ್ರತಿಶತ (ವರ್ಗಗಳಲ್ಲಿ)	೧೦೦%	–	–	೧೦೦%	೧೦೦%
	ಒಟ್ಟು ಪ್ರತಿಶತ	೦.೨%	–	–	೯೯.೮%	೧೦೦%

ಸಮೀಕ್ಷೆ ಮಾಡಿದ ೫೧೭ ಕುಟುಂಬಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಕುಟುಂಬ ಮಾತ್ರ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದೆ. ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ ೦.೯ರಷ್ಟಾಗುತ್ತದೆ. ೫ ಜಿಲ್ಲೆಗಳನ್ನೊಳಗೊಂಡಾಗ ಇದರ ಪ್ರಮಾಣ ಶೇ ೧೦೦ ರಷ್ಟಾಗುತ್ತದೆ.

ಕ್ರಿಶ್ಚಿಯನ್ ಮಿಶನರಿಗಳು ಹಸಲರಿಗೆ ಆಸೆ-ಆಮಿಷ್ಯಗಳನ್ನೊಡ್ಡಿ ತಮ್ಮ ಧರ್ಮಕ್ಕೆ ಮತಾಂತರಗೊಳ್ಳಲು ಪ್ರೇರೇಪಿಸುತ್ತಿದ್ದಾರೆ.

೬.೬ ಧಾರ್ಮಿಕ ಬದಲಾವಣೆಗಳು

ಧರ್ಮ ಇದು ಮಾನವನ ಅಲೌಕಿಕ ಜಗತ್ತಿಗೆ ಸಂಬಂಧಪಟ್ಟದ್ದು 'ಧರ್ಮ' ಎನ್ನುವ ಪದವು ಸಂಸ್ಕೃತದ 'ದೃ' ಎನ್ನುವ ಪದದಿಂದ ಬಂದಿದೆ. ಸಂಸ್ಕೃತದಲ್ಲಿ 'ದೃ' ಎಂದರೆ 'ಧರಿಸುವದು' ಅಥವಾ 'ಧಾರಣೆ' ಮಾಡುವದು ಎಂದರ್ಥ. ಯಾವುದನ್ನು ನಮ್ಮ ಬದುಕಿನ ಪರ್ಯಂತರ ಅಳವಡಿಸಿಕೊಳ್ಳಲಾಗುವುದೋ ಅದನ್ನೇ ಧರ್ಮ ಎಂದು ಕರೆಯುತ್ತೇವೆ. 'ಧರ್ಮೋರಕ್ಷತೀಃ ರಕ್ಷತಾಃ' ಎಂಬ ಉಕ್ತಿಯಂತೆ ಯಾರು ಧರ್ಮವನ್ನು ರಕ್ಷಣೆಯನ್ನು ಮಾಡುವರೋ ಅವರು ಧರ್ಮದಿಂದ ರಕ್ಷಣೆ ಪಡೆಯುತ್ತಾರೆ ಎಂಬ ನಂಬಿಕೆ ಇದೆ.

ಹಸಲರು ಗುಡ್ಡ ಬೆಟ್ಟಗಳಲ್ಲಿ ದಟ್ಟ ಅರಣ್ಯದಲ್ಲಿ ವಾಸವಾಗಿರುವುದರಿಂದ ಅವರು ಸಹಜವಾಗಿ ನಿಸರ್ಗವನ್ನು ಪೂಜಿಸಲು ಪ್ರಾರಂಭಿಸಿದರು. ಇದಕ್ಕೆ ನೈಸರ್ಗಿಕ ವಿಕೋಪಗಳು ಕಾರಣವಿರಬಹುದು. ಗುಡುಗು, ಮಿಂಚು, ಸಿಡಿಲು, ಅತಿವೃಷ್ಟಿ, ಅನಾವೃಷ್ಟಿ ಹಾಗೂ ಭೂಕಂಪನಗಳು ಮನುಷ್ಯನಲ್ಲಿ ಭಯ ಹುಟ್ಟಿಸುತ್ತಿದ್ದವು. ಈ ಭಯವು ಭಕ್ತಿಯಾಗಿ ಮಾರ್ಪಾಡಾಗಿ ನಿಸರ್ಗವನ್ನು ಪೂಜಿಸಲು ಪ್ರೇರಣೆಯಾಯಿತು. ಮೊದಲು ಹಸಲರು ಯಕ್ಷಿ, ಭೂತ, ಚೌಡಿ ಮುಂತಾದ ದೇವತೆಗಳನ್ನು ಪೂಜಿಸುತ್ತಿದ್ದರು. ಹಸಲರು ಸಾಮಾನ್ಯವಾಗಿ ಹೆಣ್ಣು ದೇವತೆಗಳ ಆರಾಧಕರಾಗಿದ್ದರು. ಆದರೆ

ಆಧುನಿಕತೆಯ ಪ್ರಭಾವಕ್ಕೆ ಸಿಲುಕಿ ತಮ್ಮ ಧಾರ್ಮಿಕ ಆಚರಣೆಗಳಲ್ಲಿಯೂ ಬದಲಾವಣೆಯನ್ನು ತಂದಿದ್ದಾರೆ. ೧೯೭೧ರಲ್ಲಿ ಹುಚ್ಚಪ್ಪ ಮಾಸ್ತರು ಹಿರೇಮನೆಯ ಮಹಾತ್ಮ ಗಾಂಧೀಜಿ ಗಿರಿಜನ ಆಶ್ರಮ ಶಾಲೆಯಲ್ಲಿ ಗಣೇಶ ಚತುರ್ಥಿಯಂದು ಗಣೇಶನ ವಿಗ್ರವನ್ನು ಪ್ರತಿಷ್ಠಾಪಿಸಿದರು. ಅಂದಿನಿಂದ ಪ್ರಾರಂಭವಾದ ಗಣೇಶೋತ್ಸವ ಇಂದಿನವರೆಗೂ ನಡೆದುಕೊಂಡು ಬಂದಿದೆ. ಭೂತ, ಚೌಡಿ, ಯಕ್ಷಿಗಳನ್ನು ಪೂಜಿಸುತ್ತಿದ್ದ ಹಸಲರು ಗಣೇಶನನ್ನು ಆರಾಧಿಸಲು ಪ್ರಾರಂಭಿಸಿದರು. ಸಾಮಾನ್ಯವಾಗಿ ಹಸಲರ ಆಚರಣೆಗಳು ರಾತ್ರಿಯ ವೇಳೆ ಬೆಳದಿಂಗಳ ಬೆಳಕಿನಲ್ಲಿ ನಡೆಯುತ್ತಿದ್ದವು. ಆದರೆ ಇಂದು ವಿದ್ಯುತ್ ದೀಪಗಳ ಬೆಳಕಿನಲ್ಲಿ ಆಚರಣೆಗಳು ಪ್ರಾರಂಭವಾಗಿವೆ.

ಹಸಲರ ಮೇಲೆ ಹವ್ಯಕ್ ಬ್ರಾಹ್ಮಣರ ಪ್ರಭಾವ ತುಂಬಾ ಜಾಸ್ತಿ ಆಗಿದೆ. ಇದಕ್ಕೆ ಕಾರಣ ಇವರು ಯಾವಾಗಲೂ ಅವರ ಮನೆಗಳಲ್ಲಿಯೇ ಮೊದಲು ಜೀತದಾಳುಗಳಾಗಿ ದುಡಿಯುತ್ತಿದ್ದರು. ಜೀತವಿಮೋಚನೆಗೊಂಡ ನಂತರವೂ ಅವರ ಗದ್ದೆ ಮತ್ತು ತೋಟಗಳಲ್ಲಿ ದುಡಿಯಲು ಪ್ರಾರಂಭಿಸಿದರು. ಇದರಿಂದ ಹವ್ಯಕ್‌ರ ಧಾರ್ಮಿಕ ಆಚರಣೆಗಳು ಸುಲಭಾವಾಗಿ ಹಸಲರ ಮೇಲೆ ಪ್ರಭಾವ ಬೀರಿದವು. ಇದರಿಂದ ಹಸಲರು ಕೃಷ್ಣ ಜನ್ಮಾಷ್ಟಮಿ, ಏಕಾದಶಿ, ತುಳಸಿ ಪೂಜೆ ಮುಂತಾದವುಗಳನ್ನು ಮಾಡುವುದಲ್ಲದೆ ಸಹಸ್ರನಾಮಾವಳಿ ಅರ್ಚನೆ, ಬಿಲ್ವಪತ್ರಿ ಅರ್ಚನೆ, ಅಭಿಷೇಕ ಮುಂತಾದವುಗಳನ್ನು ಮಾಡಲು ಪ್ರಾರಂಭಿಸಿದ್ದಾರೆ.

ಸೊರಬ ಮತ್ತು ಶಿಕಾರಿಪುರ ತಾಲೂಕುಗಳಲ್ಲಿಯ ಹಸಲರು ಲಿಂಗಾಯತರ ಕೆಲವು ಹಬ್ಬಗಳಾದ ಯುಗಾದಿ, ಮಹಾನವಮಿ, ದೀಪಾವಳಿ ಮುಂತಾದ ಹಬ್ಬಗಳನ್ನು ಆಚರಿಸುವರು. ಇವರು ತರಳಿ ಮಠವನ್ನು ತಮ್ಮ ಧಾರ್ಮಿಕ ಕೇಂದ್ರವನ್ನಾಗಿ ಮಾಡಿಕೊಂಡಿದ್ದಾರೆ. ಈಗಿನ ಹಸಲರು ಸಿಗಂದ್ಲೂರು ಚೌಡಮ್ಮ, ಚಂದ್ರಗುತ್ತಿ ಯಲ್ಲಮ್ಮ, ಹೊರನಾಡು ಅನ್ನಪೂರ್ಣೇಶ್ವರಿ ಮತ್ತು ಧರ್ಮಸ್ಥಳದ ಮಂಜುನಾಥನನ್ನು ಪೂಜಿಸಲು ಪ್ರಾರಂಭಿಸಿದ್ದಾರೆ.

ಹಸಲರ ಮೇಲೆ ಜೈನ ಧರ್ಮದ ಪ್ರಭಾವವೂ ಕೂಡಾ ಇದೆ. ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗಡೆಯವರು ಬುಡಕಟ್ಟುಗಳ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಪ್ರಾರಂಭಿಸಿದ್ದಾರೆ. ಅದರಲ್ಲಿ ಧರ್ಮಸ್ಥಳದ ಗ್ರಾಮೀಣ ಅಭಿವೃದ್ಧಿ ಯೋಜನೆಯೂ ಒಂದು. ಈ ಯೋಜನೆಯು ಎಲ್ಲಾ ಕಡೆಗೂ ಜಾರಿಯಲ್ಲಿರುವುದರಿಂದ ಸಹಜವಾಗಿಯೇ ಹಸಲರು ಒಲವು ತೋರಿಸಲು ಪ್ರಾರಂಭಿಸಿದರು. ಅಷ್ಟೇ ಅಲ್ಲ, ಘಟ್ಟದ ಕೆಳಗಿನ ಹಸಲರ ಮನೆಯಲ್ಲಿ ಮಂಜುನಾಥಸ್ವಾಮಿಯ ಚಿತ್ರಪಟವನ್ನು ಕಾಣಬಹುದಾಗಿದೆ.

ಒಟ್ಟಿನಲ್ಲಿ ಹಸಲರು ತಮ್ಮ ಸಾಂಪ್ರದಾಯಿಕ ಆಚರಣೆಗಳನ್ನು ಬಿಡುತ್ತಾ ಹೊಸ ಧಾರ್ಮಿಕ ಆಚರಣೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಾರಂಭಿಸಿದ್ದಾರೆ.

ಅಧ್ಯಾಯ ೭

ಸಮಾರೋಪ

ಅಧ್ಯಾಯ: ಏಳು

ಸಮಾರೋಪ

ಕರ್ನಾಟಕ ರಾಜ್ಯವು ತನ್ನ ಪ್ರಕೃತಿ ಸೌಂದರ್ಯದಿಂದ ಹೆಸರುವಾಸಿಯಾದ ರಾಜ್ಯವಾಗಿದೆ. ಈ ರಾಜ್ಯವು ತನ್ನ ಒಡಲಿನಲ್ಲಿ ನೈಸರ್ಗಿಕ ವೈವಿಧ್ಯತೆಯ ಜೊತೆಜೊತೆಗೆ ಜನಾಂಗೀಯ ವೈವಿಧ್ಯತೆಯನ್ನು ಹೊಂದಿದೆ. ಪಶ್ಚಿಮ ಘಟ್ಟವು ತನ್ನ ಒಡನಾಳದಲ್ಲಿ ಅನೇಕ ಬುಡಕಟ್ಟುಗಳನ್ನು ಹೊಂದಿದೆ. ಇಂತಹ ಬುಡಕಟ್ಟುಗಳಲ್ಲಿ ಹಸಲರು ಕೂಡಾ ಒಬ್ಬರು.

ಹಸಲರು ಮೂಲತಃ ಅಲೆಮಾರಿಗಳು. ಆಹಾರ ಶೋಧನೆ ಮತ್ತು ಬೇಟೆಯಾಡುವ ಹಂತದಲ್ಲಿ ಒಂದೆಡೆ ನೆಲೆನಿಲ್ಲದೆ ಸಂಚಾರಿ ಜೀವನವನ್ನು ಸಾಗಿಸುತ್ತಿದ್ದರು. ಯಾವಾಗ ಕೃಷಿಯ ಮೇಲೆ ಅವಲಂಬಿತ ವಾದರೋ ಆವಾಗ ಒಂದೆಡೆ ನೆಲೆ ನಿಲ್ಲಲು ಪ್ರಾರಂಭಿಸಿದರು. ಹಸಲರು ಮೊದಲು ಹುಟ್ಟಾಳು ಗಳಾಗಿದ್ದರು. ಅಂದರೆ ಮೇಲ್ವರ್ಗದವರ ಹತ್ತಿರ ತಂದೆ-ತಾಯಿಗಳು ಮಾಡಿದ ಸಾಲಕ್ಕಾಗಿ ಇಡಿ ಕುಟುಂಬವು ಅಲ್ಲದೆ ಹುಟ್ಟುವ ಮಕ್ಕಳು ಕೂಡಾ ಮೇಲ್ವರ್ಗದವರ ಮನೆಯಲ್ಲಿ ಜೀತದಾಳುಗಳಾಗಿ ದುಡಿಯಬೇಕು. ಯಾವಾಗ ಜೀತನಿರ್ಮೂಲನಾ ಕಾಯ್ದೆ ಜಾರಿಯಲ್ಲಿ ಬಂದಿತೋ ಅಂದಿನಿಂದ ಈ ಪದ್ಧತಿ ಮಾಯವಾಗಿದ್ದರೂ ಅದರ ಗುಂಗಿನಲ್ಲಿಯೇ ಬ್ರಾಹ್ಮಣರ ಮನೆಗೆಲಸ ಮಾಡುತ್ತಾರೆ.

ಹಸಲರು ಪ್ರಶಾಂತ ವಾತಾವರಣದ ದಟ್ಟ ಅರಣ್ಯಗಳಲ್ಲಿ ವಾಸಿಸುವರು. ಇವರು ಏಕಾಂತ ಪ್ರಿಯರು. ಅಷ್ಟೇ ಅಲ್ಲ, ನುರಿತ ಬೇಟೆಗಾರರು. ಆದರೆ ಇಂದು ಅರಣ್ಯ ಕಾಯ್ದೆ ಬಂದ ನಂತರ ಬೇಟೆಯಾಡುವುದನ್ನು ನಿಲ್ಲಿಸಿದರೂ, ಆಗಾಗ ಬೇಟೆಯಾಡುತ್ತಾರೆ. ಅಲ್ಲದೆ ಇವರು ಅರಣ್ಯ ಕಿರು ಉತ್ಪನ್ನಗಳನ್ನು ಮಾರಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಸರಕಾರ ಇಂದು ಅರಣ್ಯ ಕಿರು ಉತ್ಪನ್ನಗಳನ್ನು ಹರಾಜು ಹಾಕುವುದರಿಂದ ಗುತ್ತಿಗೆದಾರರು ಇವರಿಗೆ ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸುವುದರ ಮೇಲೆ ನಿರ್ಬಂಧ ಹೇರಿದ್ದಾರೆ. ಹೀಗಾಗಿ ಇವರು ಜೀವನ ನಡೆಸುವುದೇ ಕಷ್ಟವಾಗಿದೆ.

ಹಸಲರು ಸ್ವಭಾವತಃ ಸ್ನೇಹ ಮತ್ತು ಸರಳ ಜೀವಿಗಳು. ಇವರು ವಿಶ್ವಾಸಕ್ಕೆ ಅರ್ಹರಾದವರು. ಇವರ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡು ಮೇಲ್ವರ್ಗದವರು ಇವತ್ತಿಗೂ ಕಡಿಮೆ ಕೂಲಿಯನ್ನು ಕೊಡುವ ನಿದರ್ಶನಗಳು ಸಾಗರ ತಾಲೂಕಿನ ಬೆಳ್ಳಣ್ಣೆ, ಶೃಂಗೇರಿ ತಾಲೂಕಿನ ತನ್ನೋಡಿ, ಸಿದ್ಧಾಪೂರ ತಾಲೂಕಿನ ಮುಗದೂರು ಮುಂತಾದ ಕಡೆಗಳಲ್ಲಿ ಕಂಡು ಬರುತ್ತದೆ. ಅಲ್ಲದೆ ಇವರಿಗೆ ಹಿಂದೂ ದೇವಾಲಯಗಳಲ್ಲಿ ಮೊದಲು ಪ್ರವೇಶವಿರಲಿಲ್ಲ. ಆದರೆ ಇವರ ಸಂಘಟಿತ ಹೋರಾಟದ ಫಲವಾಗಿ ಕಮಲಶಿಲೆಯ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ಇವರಿಗೆ ಅವಕಾಶ ಕೊಟ್ಟರು. ಬೆಳ್ಳಣ್ಣೆಯ ಶಂಭುಲಿಂಗೇಶ್ವರ ದೇವಸ್ಥಾನದ ಯುಗಾದಿಯ ದಿನ ಜರುಗುವ ರಥೋತ್ಸವದಲ್ಲಿ ಇವರು ಮೃಗಬೇಟೆ ಕಾರ್ಯವನ್ನು ನಡೆಸಿಕೊಡುವರು. ಅಲ್ಲದೆ ಶಂಭುಲಿಂಗೇಶ್ವರ ರಥದ ೩ನೇ ಅಂತಸ್ತಿನಿಂದ ೫ನೆಯ ಅಂತಸ್ತಿನವರೆಗೆ ಇವರೇ ರಥವನ್ನು ಕಟ್ಟುತ್ತಾರೆ.

ಹಸಲರು ಇನ್ನುಳಿದ ಜಾತಿಯ ಜನರ ಜೊತೆಗೆ ಒಳ್ಳೆಯ ಸಂಬಂಧವನ್ನು ಹೊಂದಿದ್ದಾರೆ. ಅವರು ತಮ್ಮಲ್ಲಿಯ ಬಡತನವನ್ನು ಮರೆತು ಅತಿಥಿಗಳಿಗೆ ಸತ್ಕರಿಸುವ ರೀತಿ ಮೆಚ್ಚುವಂತದ್ದು, ಸಂಶೋಧಕರು ನಾಲ್ಕನೇಯ ಸಲ ಕ್ಷೇತ್ರಕಾಯಕ್ಕೆ ೨೧ ದಿನಗಳ ವರೆಗೆ ಹೋದಾಗ ಈ ಅವಧಿ ಯಲ್ಲಿ ಬೇರೆ ಬೇರೆ ಹಾಡಿಕೇರಿಯಲ್ಲಿ ವಾಸ್ತವ್ಯ ಮಾಡಿದಾಗ ಏನನ್ನೂ ಅಪೇಕ್ಷಿಸದೇ ೨೧ ದಿನಗಳ ವರೆಗೆ ಊಟದ ವ್ಯವಸ್ಥೆಯನ್ನು ಮಾಡಿದರು. ಇದು ಅವರಲ್ಲಿರುವ ಸಹೃದಯತೆಯನ್ನು ಎತ್ತಿ ತೋರಿಸುತ್ತದೆ. ಅಲ್ಲದೆ ಕುಟುಂಬದ ಪ್ರತಿಯೊಬ್ಬ ಸದಸ್ಯನು ಬಂದು ಮಾತನಾಡಿಸುವದು, ಅವರಲ್ಲಿರುವ ಬಂಧುತ್ವ ಪ್ರೇಮವನ್ನು ಸಾರಿ ಹೇಳುತ್ತದೆ.

ಸಿದ್ಧಾಪೂರ ತಾಲೂಕಿನ ಬೇರೆ ಬೇರೆ ಹಸಲರ ಹಾಡಿಕೇರಿಯಲ್ಲಿಯ ಜನರು ತಾವು ಹಸಲ ಎಂದರೆ, ಅಪಮಾನಕರವಾದದ್ದು, ನಮ್ಮ ಜಾತಿಯಿಂದ ಆ ಹೆಸರನ್ನು ತೆಗೆದುಹಾಕಬೇಕೆಂದು ಓದಿದವರೆಲ್ಲರೂ ಸೇರಿಕೊಂಡು ಬಿಲ್ಲುಕ್ಷತ್ರಿಯ ಸಂಘವನ್ನು ಮಾಡಿಕೊಂಡು ಹಸಲ ಹೆಸರಿನ ಬದಲಾಗಿ ಬಿಲ್ಲುಕ್ಷತ್ರಿಯರ ಕಾಲನಿ ಎಂದು ನಾಮಕರಣ ಮಾಡಿಕೊಂಡ ತೂಗು ಹಾಕಿದ ಫಲಕವನ್ನು ಸಿದ್ಧಾಪೂರ ತಾಲೂಕಿನ ಮುಗದೂರಿನಲ್ಲಿ ಕಾಣಬಹುದು.

ಹಸಲರು ಜನಪದ ಸಾಹಿತ್ಯದ ಕಣಜವಾಗಿದ್ದಾರೆ. ಇವರು ಪ್ರತಿಯೊಂದು ಚಟುವಟಿಕೆಗಳಲ್ಲಿ ಒಂದಿಲ್ಲೊಂದು ಹಾಡು ಕೇಳಿ ಬರುತ್ತದೆ. ಭತ್ತವನ್ನು ಕುಟ್ಟುವಾಗ, ಭತ್ತವನ್ನು ನಾಟಿಮಾಡುವಾಗ ಭತ್ತವನ್ನು ಕೊಯ್ದು ಒಟ್ಟುವಾಗ, ಹೊಸದಾಗಿ ಪೈರನ್ನು ಮನೆಗೆ ತರುವಾಗ ಇನ್ನು ಅನೇಕ ಸಂದರ್ಭಗಳಲ್ಲಿ ಇವರು ಪದಗಳನ್ನು ಹಾಡುವರು. ಬೇಸಿಗೆಯ ಕಾಲದಲ್ಲಿ ಬೆಳದಿಂಗಳಲ್ಲಿ ಇವರು ಕೋಲಾಟ, ಡೊಳ್ಳುಕುಣಿತ ಮುಂತಾದ ಮನರಂಜನಾ ಕಾರ್ಯಗಳನ್ನು ಏರ್ಪಡಿಸುವರು. ಮಳೆಗಾಲದಲ್ಲಿ ಈ ಪ್ರದೇಶದಲ್ಲಿ ಹೆಚ್ಚು ಮಳೆ ಸುರಿಯುವುದರಿಂದ ಇವರು ಮನೆಬಿಟ್ಟು ಹೊರಗೆ ಬರುವುದಿಲ್ಲ. ಆವಾಗ ಮನೆಯಲ್ಲಿಯೇ ಅನೇಕ ಆಟಗಳನ್ನು ಆಡುವರು. ಒಟ್ಟಿನಲ್ಲಿ ಇವರು ತಮ್ಮ ಬೇಸರವನ್ನು ಕಳೆಯಲು ಹಾಡು ಮತ್ತು ಕಥೆಗಳನ್ನು ಹೇಳುತ್ತಾರೆ. ಆದರೆ ಇಂದು ಯುವಕರು ಈ ಹಾಡುಗಳನ್ನು ಹೇಳದೇ ಚಲನಚಿತ್ರ ಹಾಡುಗಳನ್ನು ಹಾಡಲು ಪ್ರಾರಂಭಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಹಸಲರು, ತಮ್ಮ ಸಂಪ್ರದಾಯ, ನಂಬಿಕೆಗಳನ್ನು ಆಚಾರ–ವಿಚಾರಗಳನ್ನು ಮರೆಯಲು ಪ್ರಾರಂಭಿಸಿದ್ದಾರೆ. ಇವರು ಪ್ರಾದೇಶಿಕ ಜನಾಂಗ ಪ್ರಭಾವಕ್ಕೆ ಒಳಗಾಗಿ ಆಧುನಿಕ ಪರಿಸರದಲ್ಲಿರುವ ನಂಬಿಕೆ, ಸಂಪ್ರದಾಯ, ಆಚಾರ–ವಿಚಾರಗಳನ್ನು ಅನುಸರಿಸಲು ಪ್ರಾರಂಭಿಸಿದ್ದಾರೆ. ಮಾಂಸಾಹಾರಿಗಳಾದ ಹಸಲರು, ಲಿಂಗಾಯತ ಮತ್ತು ಬ್ರಾಹ್ಮಣರ ಪ್ರಭಾವಕ್ಕೆ ಒಳಪಟ್ಟು ಶಾಖಾಹಾರದ ಕಡೆಗೆ ವಾಲಲು ಪ್ರಾರಂಭಿಸಿದ್ದಾರೆ. ಬ್ರಾಹ್ಮಣೇತರ ಪರಿಸರದಲ್ಲಿರುವ ಸೊರಬ, ಹೊಸನಗರ, ಶಿಕಾರಿಪುರ ತಾಲೂಕಿನ ಹಸಲರು ಶ್ರಮಜೀವಿಗಳು. ಕಷ್ಟಪಟ್ಟು ದುಡಿದು ಸ್ವಾವಲಂಬನೆಯ ಜೀವನಕ್ಕೆ ಹಂಬಲಿಸುವವರಾಗಿದ್ದಾರೆ. ಇಂದು ಹಸಲರು ಹೆಚ್ಚಾಗಿ ಕೂಲಿಗಳಾಗಿಯೇ ದುಡಿಯುತ್ತಾರೆ. ಅಲ್ಲದೆ ಇವರ ಮೂಲ ಉದ್ಯೋಗಕ್ಕೆ ಪೈಪೋಟಿಯಾಗಿ ಯಂತ್ರಗಳು ಬಂದಿರುವುದರಿಂದ ಇವರು ಪರ್ಯಾಯ ಉದ್ಯೋಗದತ್ತ ವಾಲಲು ಪ್ರಾರಂಭಿಸಿದ್ದಾರೆ. ಘಟ್ಟದ ಕೆಳಗಿನ ಹಸಲರು ಅಡುಗೆಯವರಾಗಿ ರಾಜ್ಯದ ಬೇರೆ ಬೇರೆಯ ಕಡೆಗೆ ವಲಸೆ ಹೋಗಿದ್ದಾರೆ. ಘಟ್ಟದ ಮೇಲಿನ ಹಸಲರು ಸಣ್ಣ ಪುಟ್ಟ ಆಟದ ಸಾಮಾನುಗಳನ್ನು ಮಾರಿ, ಜೀವನ ಸಾಗಿಸುತ್ತಿದ್ದಾರೆ.

ಹಸಲರಿಗೆ ಬೇರೆ ಬೇರೆ ಪರ್ಯಾಯ ಪದಗಳಿದ್ದರೂ, ಇವರ ನಡುವೆ ವಿವಾಹ ಸಂಬಂಧ ಏರ್ಪಡುತ್ತದೆ. ಇವರಲ್ಲಿ ಭಿನ್ನಬಳಿಗಳ ನಡುವೆ ವಿವಾಹ ಏರ್ಪಡುತ್ತಿತ್ತು. ಆದರೆ ಇಂದು ಒಂದೇ ಬಳಿಯ ಕುಟುಂಬಗಳಲ್ಲಿ ವಿವಾಹ ಏರ್ಪಟ್ಟ ಉದಾಹರಣೆ ಸಾಗರ ತಾಲೂಕಿನ ಕಾರ್ಗಲ್‌ನಲ್ಲಿ ನಡೆದಿದೆ. ಇಂದಿನ ಹಸಲರ ಯುವಕರಿಗೆ ಬಳಿಗಳ ಬಗ್ಗೆ ಏನೂ ಗೊತ್ತಿರುವುದಿಲ್ಲ.

ಹಸಲರು ಮೇಲ್ವರ್ಗದವರಿಂದ ವಂಚಿತರಾಗಿದ್ದಾರೆ. ೧೯೬೪ರಲ್ಲಿ ಲಿಂಗನಮಕ್ಕಿ ಆಣೆಕಟ್ಟಿನಿಂದ ನಿರಾಶ್ರಿತರಾದ ಹಸಲರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಾಗ ಹಸಲರು ತಮ್ಮ ಮೂಲ ಸ್ಥಾನವನ್ನು ತೊರೆಯದೇ ಇದ್ದಾಗ ಬ್ರಾಹ್ಮಣರು ಗಾರುಡಿಗ ಅಥವಾ ಮಂತ್ರವಾದಿಯ ಮುಖಾಂತರ ನಿಮಗೆ ಈ ಸ್ಥಾನವು ವಾಸಿಸಲು ಯೋಗ್ಯವಿಲ್ಲ. ಆದ್ದರಿಂದ ನೀವು ಪರ್ಯಾಯ ವ್ಯವಸ್ಥೆಯ ಸ್ಥಳಕ್ಕೆ ಹೋಗಬೇಕೆಂದು ಗಾರುಡಿಗ ಹೇಳಿದಾಗ ಮರುಮಾತಿಲ್ಲದೆ ಇವರು ಪುನರ್ವಸತಿ ಸ್ಥಳಕ್ಕೆ ಹೋದರು. ಇದರ ಹಿಂದೆ ಮೇಲ್ವರ್ಗದವರ ಕುತಂತ್ರವೂ ಅಡಗಿದೆ. ಅದೇನೆಂದರೆ, ತಮ್ಮ ತೋಟವನ್ನು ಕಾಡುಪ್ರಾಣಿಗಳಿಂದ ರಕ್ಷಿಸಲು ಅವರ ತೋಟದ ಸುತ್ತಲೂ ಹಸಲರ ಹಾಡಿಕೇರಿಗಳನ್ನು ನಿರ್ಮಿಸಿದರು. ಇದನ್ನು ಕ್ಷೇತ್ರಕಾರ್ಯಕ್ಕೆ ಹೋದಾಗ ಹಿರೇಮನೆಯ ಚೌಡಪ್ಪನವರು ಹೇಳಿದರು.

ಹಸಲರು ಮಹಾತ್ಮ ಗಾಂಧೀಜಿ ಉದ್ಯೋಗ ಖಾತ್ರಿ ಯೋಜನೆಯಲ್ಲಿಯೂ ಮೋಸಹೋಗಿದ್ದಾರೆ. ಇವರಿಗೆ ಕಡಿಮೆ ಕೂಲಿಕೊಟ್ಟು ಹೆಚ್ಚಿನ ರಶೀದಿಯ ಮೇಲೆ ಸಹಿ ಪಡೆದುಕೊಂಡ ಉದಾಹರಣೆಗಳು ಕೂಡಾ ಬೆಳ್ಳೆಣ್ಣೆ, ಗೋಳಗೋಡು ಹಾಗೂ ಹಿರೇಮನೆಯ ಸುತ್ತಮುತ್ತಲೂ ಹಾಡಿಕೇರಿಗಳಲ್ಲಿ ಸಿಗುತ್ತವೆ.

ಹಸಲರು ತಮಗೆ ಸಾಮಾಜಿಕವಾಗಿ ಗೌರವ ಸಿಗಬೇಕು. ನಮ್ಮ ಜಾತಿಯ ವಿವರಗಳು ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತದೆ ಎಂಬ ಕಾರಣಕ್ಕೆ ಪೈಪೋಟಿಗಿಳಿದು ಮಾಹಿತಿಯನ್ನು ನೀಡಿದ್ದಾರೆ.

ಒಟ್ಟಿನಲ್ಲಿ ಹಸಲರು ಮುಗ್ಧರು ಮತ್ತು ಏಕಾಂತಪ್ರಿಯರು ಆಗಿದ್ದಾರೆ.

೭.೧ ಅಧ್ಯಯನದ ಫಲಿತಗಳು

- ಹಸಲರು ಜನಪದ ಸಾಹಿತ್ಯದ ಕಣಜವೇ ಆಗಿದ್ದಾರೆ. ಅದು ಮಾಯವಾಗುವುದಕ್ಕಿಂತ ಪೂರ್ವದಲ್ಲಿ ಅದನ್ನು ಕಾಪಾಡಿಕೊಳ್ಳಬೇಕು.
- ಎಲ್ಲಿಯವರೆಗೆ ಅಡಿಕೆ ಮರಗಳಿರುವವೋ ಅಲ್ಲಿಯವರೆಗೆ ಹಸಲರು ಇರುವರು ಎಂಬ ಗಾದೆ ಇದೆ. ಆದರೆ ಇಂದು ಇವರ ಉದ್ಯೋಗಕ್ಕೆ ಪೈಪೋಟಿಯಾಗಿ ಯಂತ್ರಗಳು ಬಂದಿರುವುದರಿಂದ ಇವರು ಬೇರೆ ವೃತ್ತಿಯತ್ತ ವಾಲಲು ಪ್ರಾರಂಭಿಸಿದ್ದಾರೆ.
- ಹಸಲರು ಸ್ವಭಾವತಃ ಸರಳ ಜೀವಿಗಳು ಮತ್ತು ಮುಗ್ಧರು. ಇವರ ಮುಗ್ಧತೆಯನ್ನು ಮೇಲ್ವರ್ಗದವರು ದುರುಪಯೋಗಪಡಿಸಿಕೊಂಡಿದ್ದಾರೆ.
- ಹಸಲರಲ್ಲಿ ವಿವಾಹಗಳು ಭಿನ್ನಬಳಿಗಳ ಮಧ್ಯ ಏರ್ಪಡುತ್ತವೆ. ಆದರೆ ಇಂದು ಯುವಕರು ಬಳಿಗಳ ಬಗ್ಗೆ ಅಷ್ಟು ಗಮನಕೊಡುವುದಿಲ್ಲ.
- ಹಸಲರಲ್ಲಿ ಹಿಂದಿನ ಅಚಾರ-ವಿಚಾರ, ಉಡುಗೆ-ತೊಡುಗೆಗಳಲ್ಲಿ ಬದಲಾವಣೆಗಳಾಗಿವೆ.
- ಬೇಟೆಯಾಡದವ ಹಸಲನಲ್ಲ ಎಂಬ ಗಾದೆಯೊಂದಿದೆ. ಆದರೆ ಇಂದು ಹಸಲರು ಬ್ರಾಹ್ಮಣರು ಅಥವಾ ಲಿಂಗಾಯತರ ಪ್ರಭಾವಕ್ಕೆ ಒಳಗಾಗಿ ಮಾಂಸಾಹಾರದಿಂದ ಸಸ್ಯಾಹಾರದ ಕಡೆಗೆ ವಾಲಿದ್ದಾರೆ.
- ಹಸಲರು ಪ್ರಾಮಾಣಿಕರು ಮತ್ತು ಶುದ್ಧಹಸ್ತರು.
- ಹಸಲರ ಗಂಡಸರು ಹಿಂದೆ ತಾವೇ ಬಟ್ಟಿ ಇಳಿಸಿದ ಸರಾಯಿಯನ್ನು ಕುಡಿಯುತ್ತಿದ್ದರು. ಆದರೆ ಇಂದು ಸರಕಾರ ಸರಬರಾಜು ಮಾಡುವ ಸರಾಯಿಯನ್ನು ಕುಡಿಯುವರು. ಇವರಲ್ಲಿ ಕುಡುಕರ ಸಂಖ್ಯೆ ಅಧಿಕವಾಗಿದೆ.
- ಹಸಲರಲ್ಲಿ ಪುರುಷರಿಗಿಂತ ಹೆಣ್ಣು ಮಕ್ಕಳೇ ಹೆಚ್ಚು ಶ್ರಮಜೀವಿಗಳು.
- ಹಸಲರ ಆರ್ಥಿಕ ಅಭಿವೃದ್ಧಿಯಲ್ಲಿ ಧರ್ಮಸ್ಥಳದ ಗ್ರಾಮೀಣ ಅಭಿವೃದ್ಧಿ ಯೋಜನೆಯ ಪಾತ್ರ ಪ್ರಮುಖವಾಗಿದೆ.
- ಹಸಲರಲ್ಲಿ ಸಂಘಟನೆಯ ಕೊರತೆ ಎದ್ದು ಕಾಣುತ್ತದೆ.
- ಸೊರಬ ತಾಲೂಕಿನ ಹಸಲರ ಹೆಣ್ಣು ಮಕ್ಕಳು ಸ್ವಯಂ ಉದ್ಯೋಗದಲ್ಲಿ ತೊಡಗಿದ್ದಾರೆ.
- ಪರಿಶಿಷ್ಟ ಜಾತಿ ಮತ್ತು ಜನಾಂಗಕ್ಕೆ ಮೀಸಲಾದ ಶೇ. ೨೩ ರ ಅನುದಾನವನ್ನು ಸರಿಯಾಗಿ ಬಳಕೆ ಮಾಡಿಕೊಂಡಿಲ್ಲ.
- ಹಸಲರು ಕೂಲಿಯನ್ನೇ ಮಾಡಿಕೊಂಡು ಜೀವನ ಸಾಗಿಸುವವರಾಗಿದ್ದಾರೆ.
- ಹಸಲರಲ್ಲಿ ವಿಭಕ್ತ ಕುಟುಂಬಗಳಿವೆ.

- ಇತ್ತೀಚಿನ ದಿನಗಳಲ್ಲಿ ಇವರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಲು ಪ್ರಾರಂಭಿಸಿದ್ದಾರೆ.
- ಪುನರ್ವಸತಿಗೊಂಡ ಹಸಲರಲ್ಲಿ ಮಾತ್ರ ಕೂಡು ಮನೆಗಳನ್ನು ಕಾಣುತ್ತೇವೆ. ಇನ್ನುಳಿದ ಕಡೆ ಚದುರಿದ ಮನೆಗಳಿವೆ.
- ದಟ್ಟ ಅರಣ್ಯದಲ್ಲಿ ವಾಸಿಸುವ ಹಸಲರ ಹಾಡಿಕೇರಿಯವರೆಗೆ ಕಚ್ಚಾ ರಸ್ತೆ ಇದೆ.
- ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ಹಸಲರು ತುಳು ಮಾತನಾಡುತ್ತಾರೆ.
- ಇವರಲ್ಲಿ ಬಾಲ್ಯವಿವಾಹ ಪದ್ಧತಿ ಇರುವುದಿಲ್ಲ.
- ಹಸಲರಲ್ಲಿ 'ಬಗರ ಹುಕುಂ ಸಾಗುವಳಿ' ಜಮೀನನ್ನೇ ಹೆಚ್ಚಾಗಿ ಹೊಂದಿದವರಾಗಿದ್ದಾರೆ. ಇದಕ್ಕೆ ತಹಶೀಲದಾರರಿಂದ ಪಹಣಿ ಪತ್ರಿಕೆ ಸಿಕ್ಕಿರುವುದಿಲ್ಲ. ಆದರೆ ಚಿಕ್ಕಮಗಳೂರು ಜಿಲ್ಲೆಯವರಿಗೆ ಮಾತ್ರ ಪಹಣಿ ಪತ್ರಿಕೆ ಕೊಡಲಾಗಿದೆ.
- ಹಸ್ಲರ್, ಹುಲ್ಸವಾರ್, ಹಲ್ಸರ್ ಮುಂತಾದ ಪರ್ಯಾಯ ಪದಗಳು ಇದ್ದರೂ ಇವರಲ್ಲಿ ವೈವಾಹಿಕ ಸಂಬಂಧ ಏರ್ಪಟ್ಟಿವೆ.
- ಇವರು ಮುಗ್ಧರು, ಕಷ್ಟ ಸಹಿಷ್ಣುಗಳು ಆಗಿದ್ದಾರೆ.
- ಹಸಲರಲ್ಲಿಯೂ ಸ್ವ-ಸಹಾಯ ಗುಂಪುಗಳು ರಚನೆ ಮಾಡಿಕೊಳ್ಳಲು ಪ್ರಾರಂಭಿಸಿದ್ದಾರೆ. ಅಷ್ಟೇ ಅಲ್ಲ, ಸೊರಬ ತಾಲೂಕಿನಲ್ಲಿ ಸ್ವ-ಸಹಾಯ ಗುಂಪಿನ ಮುಖಾಂತರ ಸ್ವಯಂ ಉದ್ಯೋಗ ಮಾಡಲು ಪ್ರಾರಂಭಿಸಿದ್ದಾರೆ.
- ಹಸಲರ ಹಾಡಿಕೇರಿಯಲ್ಲಿ ಅಂಗನವಾಡಿ ಕೇಂದ್ರಗಳಿದ್ದರೂ ಮಳೆಗಾಲದಲ್ಲಿ ಸಕಾಲಕ್ಕೆ ಶಿಕ್ಷಕರು ಬರದೇ ಇರುವುದರಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಹಾಡಿಕೇರಿಯಲ್ಲಿಯೇ ಅರ್ಹತೆಯನ್ನು ಪಡೆದವರನ್ನು ಅಂತಹ ಅಂಗನವಾಡಿ ಕೇಂದ್ರಗಳಲ್ಲಿ ನೇಮಕ ಮಾಡುವುದರಿಂದ ಮಕ್ಕಳು ಶಿಕ್ಷಣವನ್ನು ಪಡೆಯಬಹುದು.

೭.೨ ಸಮಸ್ಯೆಗಳು

- ಕುಡುಗುಂಜಿ ದ್ವೀಪದಲ್ಲಿರುವ ಹಸಲರ ಆಸ್ತಿ-ಪಾಸ್ತಿಯನ್ನು ಕರ್ನಾಟಕ ಪವರ ಕಾರ್ಪೋರೇಶನದವರು ಭೂಸ್ವಾಧೀನ ಮಾಡಿಕೊಂಡಿದ್ದು, ಸರಿಯಾದ ಪುನರ್ವಸತಿ ಕಲ್ಪಿಸದೇ ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಲು ಪ್ರಯತ್ನಿಸಿದ್ದಾರೆ. ಇದರಿಂದ ಅಲ್ಲಿರುವ ಹಸಲರ ಬದುಕು ಅತಂತ್ರವಾಗಿದೆ.
- ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಬೆಂಡೆಹಕ್ಲು ಹಸಲರ ಹಾಡಿಕೇರಿಯು ಬೆಟ್ಟದ ತುದಿಯಲ್ಲಿರುವುದರಿಂದ ಇಲ್ಲಿ ಯಾರಾದರೂ ಅನಾರೋಗ್ಯದಿಂದ ಬಳಲುತ್ತಿದ್ದರೆ ಅಥವಾ ಗರ್ಭಿಣಿ ಸ್ತ್ರೀಯರಿದ್ದರೆ, ಅವರನ್ನು ಪಲ್ಲಕ್ಕಿ ಹಾಗೆ ನಿರ್ಮಿಸಿದ ಕಂಬಳಿ ಚಟ್ಟದಲ್ಲಿಯೇ

ಅವರನ್ನು ನಾಲ್ಕು ಜನ ಹೊತ್ತುಕೊಂಡು ಬರಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಮರಣವನ್ನಪ್ಪಿದ ಉದಾಹರಣೆಗಳು ಇವೆ.

- ದಟ್ಟ ಅರಣ್ಯದಲ್ಲಿ ವಾಸಿಸುವ ಹಸಲರಿಗೆ ಸರಿಯಾದ ಪಡಿತರ ಚೀಟಿ ವ್ಯವಸ್ಥೆ ಇರುವುದಿಲ್ಲ.
- ಮಳೆಗಾಲದಲ್ಲಿ ಮಳೆ ಹೆಚ್ಚಾಗಿರುವುದರಿಂದ ಇವರಿಗೆ ಮನೆಯ ಹೊರಗೆ ಬರಲು ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ಇವರು ಆಹಾರ ಸಮಸ್ಯೆಯನ್ನು ಎದುರಿಸುವರು.
- ಘಟ್ಟದ ಕೆಳಗಿನ ಹಸಲರ ಹಾಡಿಕೇರಿಗಳಲ್ಲಿ ನಕ್ಸಲ್‌ರಿಂದ ಅನೇಕ ಸಮಸ್ಯೆಗಳನ್ನು ಎದುರಿಸುವರು. ಅಲ್ಲದೆ ಪೊಲೀಸ್‌ರಿಂದಲೂ ಕೂಡ ಅನೇಕ ಕಿರುಕುಳಗಳನ್ನು ಎದುರಿಸುವರು.
- ಹಸಲರಿಗೆ ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ನಿರ್ಬಂಧ ಹೇರಲಾಗಿದೆ.
- ದಟ್ಟವಾದ ಅರಣ್ಯಗಳಲ್ಲಿ ವಾಸಿಸುವ ಹಸಲರು ಕಾಡು ಪ್ರಾಣಿಗಳಿಂದ ಅನೇಕ ಸಮಸ್ಯೆಗಳನ್ನು ಎದುರಿಸುವರು.
- ದಟ್ಟವಾದ ಅರಣ್ಯದಲ್ಲಿ ವಾಸಿಸುವ ಹಸಲರ ಹಾಡಿಕೇರಿಯವರಿಗೆ ಸರಿಯಾದ ರಸ್ತೆಯ ವ್ಯವಸ್ಥೆ ಇರುವುದಿಲ್ಲ. ಇವರು ಮಳೆಗಾಲದಲ್ಲಿಯೂ ಕಾಲುದಾರಿಯಲ್ಲಿಯೇ ಸಂಚರಿಸುತ್ತಾರೆ.
- ಭಟ್ಕಳ ತಾಲೂಕಿನ ಬೈಲೂರು ಹಸಲರ ಹಾಡಿಕೇರಿಯು ಭತ್ತದ ಗದ್ದೆಗಳ ನಡುವೆ ಇದ್ದು, ಅದು ಜನವಸತಿಯಿಂದ ತುಂಬಿ ಈಗ ಅಲ್ಲಿ ಕೊಳಚೆ ಪ್ರದೇಶ ನಿರ್ಮಾಣವಾಗಿ ಅನೇಕ ರೋಗ–ರುಜಿನಗಳು ತಾಣವಾಗಿದೆ.

೭.೩ ಸಲಹೆಗಳು

- ಇವರು ದಟ್ಟವಾದ ಅರಣ್ಯದಲ್ಲಿ ವಾಸಿಸುವುದರಿಂದ ಇವರಿಗೆ ರೋಗ–ರುಜಿನುಗಳು ಬರುತ್ತವೆ. ಇವರಿಗೆ ಅರಣ್ಯದಲ್ಲಿ ಯಾವುದೇ ರೀತಿಯ ವೈದ್ಯಕೀಯ ಸೌಲಭ್ಯವಿರುವುದಿಲ್ಲ. ಆದ್ದರಿಂದ ಸರಕಾರ ಇಂತಹ ಪ್ರದೇಶಗಳಲ್ಲಿ ಸಂಚಾರಿ ಆಸ್ಪತ್ರೆಗಳನ್ನು ಸ್ಥಾಪಿಸಬೇಕು.
- ಅರಣ್ಯವಾಸಿಗಳಿಗೆ ಅರಣ್ಯ ಕಿರು ಉತ್ಪನ್ನಗಳನ್ನು ಸಂಗ್ರಹಿಸಲು ಅವಕಾಶ ಮಾಡಿಕೊಡಬೇಕು.
- ನಕ್ಸಲ್ ಪೀಡಿತ ಪ್ರದೇಶದಲ್ಲಿ ಹಸಲರಿಗೆ ವಿನಾಕಾರಣ ಎ.ಎನ್.ಎಫ್ ಮತ್ತು ಎಸ್.ಟಿ.ಎಫ್ ಇವರ ಕಿರುಕುಳ ತಪ್ಪಬೇಕು.
- ಸರಕಾರವು ಹಸಲರ ಹಾಡಿಕೇರಿಯವರಿಗೆ ಡಾಂಬರ ರಸ್ತೆಯ ಸೌಲಭ್ಯವನ್ನು ಕಲ್ಪಿಸಿಕೊಡಬೇಕು.
- ಕಡಿಮೆ ಕುಟುಂಬಗಳಿರುವ ಹಾಡಿಕೇರಿಯಲ್ಲಿ ಅಂಗನವಾಡಿ ಕೇಂದ್ರವನ್ನು ಸ್ಥಾಪಿಸಬೇಕು.
- ಮಳೆಗಾಲದಲ್ಲಿ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡಬೇಕು.
- ಹಸಲರ ಹಾಡಿಕೇರಿಗಳಲ್ಲಿ ಅರಣ್ಯ ಕಿರುತ್ಪನ್ನಗಳನ್ನು ತೆಗೆದುಕೊಳ್ಳಲು ಲ್ಯಾಂಪ್ಸ್ ಸೋಸಾಯಿಟಿಗಳನ್ನು ಸ್ಥಾಪಿಸಬೇಕು.

ಅನುಬಂಧಗಳು

೧. ಆಯ್ದ ಪರಾಮರ್ಶನ ಗ್ರಂಥಗಳು

೨. ಅಂಕಿಅಂಶಗಳು

೩ ಮಾಹಿತಿದಾರರ ಪಟ್ಟಿ

೪ ಪಾರಿಭಾಷಿಕ ಪದಕೋಶ

೫. ನಕಾಶೆಗಳು

’ ೬. ಛಾಯಾ ಚಿತ್ರಗಳು

ಅನುಬಂಧ – ೧
ಆಯ್ದ ಪರಾಮರ್ಶನ ಗ್ರಂಥಗಳು

ಆಯ್ದ ಪರಾಮರ್ಶನ ಗ್ರಂಥಗಳು :

English

Amir Hassan, *A Tribe in Turmoile,* Uppal Publishing House, Delhi-1986.

Enthovan, *Tribes and Castes of Bombay,* Volume II Govt Central Press, Bombay-1909

Havanur L G (Chairman) *Karnataka Backward Classes Commission Report,* Vol II Publication Govt of Karnataka -1975

Iyer A K, The Mysore Tribes And Castes Vol III Mittel Publications, New Delhi-2005

MacIver and Page, *Societ,* Macmillan India limited-1950 (rpt) 1998 2/10 Ansari road, Dariya Gang, New Delhi-02

Nanjundaiah H.V and Iyer A.K, *Mysore Tribes and Casts*, Prasaranga, Mysore University, Mysore Vol III -1930

Sherring M A, *Hindu tribes and castes,* vol-III, Culcutta Press, Culcatta- 1872

Singh K.S, *Indian Community* Vol I Oxford Press, New Delhi-1998

________ People of India Vol II *The Sheduled Tribes,* Oxford Press New Delhi-1993

Thursten E and K Rangacharya, *"Castes and Tribes of Southern India"* Madras Govt Press 1909

Gazetters,

Campbell J M (Editor) Kanara, South Kanara Gazetteer-1883, Bombay presidency, Bombay, (rpt) 2003, Chief Editor, Karnataka Gazetteer Department, Bangalore-76

Canara- *Gazetter of the Bombay Presidency* Vol – XV Part-I Govt Central Press -1883

Jhon Sturrock, (E) South Canara, Madras Presidency-1894, (rpt) 2003 Chief Editor, Karnataka Gazetteer Department, Bangalore-76

ಜಿಲಾನಿ ಎಸ್ ಎ (ಪ್ರ ಸಂ) ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ಗ್ಯಾಜೆಟೀಯರ್, ೮ನೆ ಮಹಡಿ, ಜಲಮಂಡಳಿ ಕಟ್ಟಡ, ಕಾವೇರಿ ಭವನ ಬೆಂಗಳೂರು– ೨೦೦೭

________ *(ಪ್ರ ಸಂ) ಉಡುಪಿ ಜಿಲ್ಲೆ, ಕರ್ನಾಟಕ ಗ್ಯಾಜೆಟೀಯರ್, ೮ನೆ ಮಹಡಿ, ಜಲಮಂಡಳಿ*

ಕಟ್ಟಡ, ಕಾವೇರಿ ಭವನ ಬೆಂಗಳೂರು– ೨೦೦೭

ವೆಂಕಟರಂಗೋ ಕಟ್ಟಿ, ಗ್ಯಾಜೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು (ಧಾರವಾಡ, ಬೆಳಗಾವಿ, ವಿಜಾಪೂರ, ಕಾನಡಾ) ಎಷಿಯನ್ ಎಜ್ಯುಕೇಶನ್ ಸರ್ವಿಸಸ್, ಹೊಸದೇಹಲಿ–೧೯೮೮

ಸೂರ್ಯನಾಥ ಯು ಕಾಮತ (ಸಂ) *ಕರ್ನಾಟಕ ರಾಜ್ಯ ಗ್ಯಾಜೆಟೀಯರ್ ಭಾಗ–೧* ಕರ್ನಾಟಕ ರಾಜ್ಯ ಸರಕಾರ, ಬೆಂಗಳೂರು

ಕನ್ನಡ

ಕಾದಂಬರಿ

ಕುವೆಂಪು, *ಮಲೆಗಳಲ್ಲಿ ಮದುಮಗಳು*– ಉದಯರವಿ ಪ್ರಕಾಶನ, ಮೈಸೂರು–೧೯೬೨

ಗ್ರಂಥಗಳು

ಚನ್ನಬಸಪ್ಪ ಗೋ ರು– *ಕರ್ನಾಟಕ ಜನಪದ ಕಲೆಗಳು,* ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು– ೧೯೭೭

ನಾಯಕ್ ಎನ್ ಆರ್– *ಕಾರವಾರ ಜಿಲ್ಲೆಯ ಜಾನಪದ ಗೀತೆಗಳು,* ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೧೯೮೨

ಪ್ರಭಾಕರ ಎ ಎಸ್–*'ಬುಡಕಟ್ಟು ಬದುಕಿನ ಸ್ಥಿತ್ಯಂತರ'* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೦

ಬೋರಲಿಂಗಯ್ಯ ಹಿ.ಚಿ, *ಗಿರಿಜನ ನಾಡಿಗೆ ಪಯಣ,* ರಾಗಿ ರೊಟ್ಟಿ ಪ್ರಕಾಶನ, ಬೆಂಗಳೂರು ೨೦೦೦

ಭಟ್ ಜಿ.ಎಸ್, *ಹಸಲರ ಸಂಸ್ಕೃತಿ* ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೩

__________ *ಹಸಲರು* ಆಯ್.ಬಿ.ಎಚ್ ಪ್ರಕಾಶನ, ಬೆಂಗಳೂರು–೧೯೮೮

ಮೇತ್ರಿ ಕೆ.ಎಮ್, *ಬುಡಕಟ್ಟು ಕುಲಕಸುಬುಗಳು,* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ– ೨೦೦೨

ಹಿರೇಮಠ ಎಸ್.ಜಿ, ಸಮಕಾಲೀನ ಹಿಂದು ಸಮಾಜ, ಪ್ರಗತಿ ಪ್ರಕಾಶನ, ಸಿಂದಗಿ– 1981

ಹುಚ್ಚಪ್ಪ ಮಾಸ್ತರ, *ಹಸಲರು* ನವಸಾಕ್ಷರರಿಗಾಗಿ ೧೯೮೨

ಹೆಗಡೆ ಎಲ್ ಆರ್ (ಸಂ) *ಜಾನಪದ ಕಥೆಗಳು,* ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ– ೧೯೬೯

ಶಂಕರರಾವ್ ಚ.ನ, *ಸಮಕಾಲೀನ ಹಿಂದೂ ಸಮಾಜದ ಅಧ್ಯಯನ,* ಜೈ ಭಾರತ ಪ್ರಕಾಶನ, ಮಂಗಳೂರು–೧೯೯೮

________ ಪಾಶ್ಚಾತ್ಯ ಸಾಮಾಜಿಕ ಚಿಂತಕರು, ಜೈ ಭಾರತ ಪ್ರಕಾಶ, ಮಂಗಳೂರು–೨೦೦೪

ಹೆಂಡಿ ಬಿ ಬಿ ಮತ್ತು ಲಠ್ಠೆ ಎಮ್ ಎಸ್– (ಸಂ) *ಉತ್ತರ ಕರ್ನಾಟಕದ ಗಾದೆಗಳು,* ಸಮಾಜ

ಪುಸ್ತಕಾಲಯ, ಧಾರವಾಡ- ೧೯೯೦

ಶಂಕರರಾವ್ ಚ.ನ, *ಸಮಕಾಲೀನ ಹಿಂದೂ ಸಮಾಜದ ಅಧ್ಯಯನ*, ಜೈ ಭಾರತ ಪ್ರಕಾಶನ, ಮಂಗಳೂರು-೨೦೦೨

ಲೇಖನಗಳು:

ಅಭಯಕುಮಾರ ಕೆ. *ಮಲೆನಾಡು ಕರ್ನಾಟಕದ ಉಡುಗೆಗಳು* ಜನಪದ ಸಾಹಿತ್ಯ ದರ್ಶನ ಭಾಗ-೨೧ ಸಂಪಾದಕರು, ಡಾ॥ ವೀರಣ್ಣ ರಾಜೂರ ೧೯೯೮

ಪ್ರಭಾಕರ ಎ.ಎಸ್, *ಅಲೆಮಾರಿಗಳ ಆರ್ಥಿಕ ಸ್ಥಿತ್ಯಂತರಗಳು*, ಅಲೆಮಾರಿಗಳ ಸ್ಥಿತಿಗತಿ, (ಸಂ) ಸ.ಚಿ.ರಮೇಶ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ - ೨೦೦೫

ಬೋರಲಿಂಗಯ್ಯ ಹಿ.ಚಿ, *ಜನಪದ ಕಲೆಗಳ ಕೋಶ*, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ- ೧೯೯೬

Metry K.M, "*Tribal Demography of Karnataka*" ಬುಡಕಟ್ಟು ಅಧ್ಯಯನ ಸಂಚಿಕೆ ೧ ಸಂಪುಟ ೩ ಜನೇವರಿ-ಜೂನ್ ೨೦೦೬

ವಾಮನ್ ನಂದಾವರ, *ಬೈರರು ಒಂದು ಅಧ್ಯಯನ*, ಜಾನಪದ ಸಾಹಿತ್ಯ ದರ್ಶನ ಭಾಗ-೧೭, ವಿಲಿಯಂ ಮ್ಯಾಡ್ರಾ (ಪ್ರ.ಸಂ) ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ- ೧೯೯೩

ಹುಚ್ಚಪ್ಪ ಮಾಸ್ತರ, *"ಹಸಲರು" ಕರ್ನಾಟಕ ಬುಡಕಟ್ಟುಗಳು*, ಲಕ್ಕಪ್ಪಗೌಡ ಎಚ್.ಜಿ (ಸಂ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೮ ಸಂಪುಟ ೧

ಹೇಮಾದ್ರಿ ಜಗನ್ನಾಥ, *ಹಸಲರು* ಜನಪದ ಸಾಹಿತ್ಯ ದರ್ಶನ ಭಾಗ-೧೭ ಜನಾಂಗೀಕ ಅಧ್ಯಯನ ವಿಲಿಯಂ ಮಾಡ್ತಾ ಪ್ರಧಾನ ಸಂಪಾದಕರು ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ- ೧೯೯೩

ವಿಶ್ವಕೋಶ

ಉಮಾಪತಿ ಬಿ.ಇ, *"ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು* ನಾಯಕ ಹ.ಮಾ (ಪ್ರ.ಸಂ) ಕರ್ನಾಟಕ ಕನ್ನಡ ವಿಶ್ವಕೋಶ, ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ -೧೯೭೯

ಅನುಬಂಧ –೨

ಅಂಕಿಅಂಶಗಳು

ಜಿಲ್ಲಾವಾರು ಸಮೀಕ್ಷೆ ಮಾಡಿದ ಹಸಲರ ಒಟ್ಟು ಕುಟುಂಬಗಳ ಸದಸ್ಯರು

ಕ್ರಸಂ.	ಜಿಲ್ಲೆಗಳು	ಗಂಡು	ಹೆಣ್ಣು	ಒಟ್ಟು
೧	ಶಿವಮೊಗ್ಗ	೫೬೯	೫೭೪	೧೧೪೩
೨.	ಚಿಕ್ಕಮಗಳೂರು	೧೯೯	೨೩೩	೪೩೨
೩.	ಉತ್ತರ ಕನ್ನಡ	೨೫೫	೨೫೭	೫೧೨
೪.	ಉಡುಪಿ	೧೭೪	೧೬೧	೩೩೫
೫.	ದಕ್ಷಿಣ ಕನ್ನಡ	೧೪	೧೩	೨೭

ಜಿಲ್ಲಾವಾರು ಸಮೀಕ್ಷೆ ಮಾಡಿದ ಹಸಲರ ಸದಸ್ಯರ ವಯೋರಚನೆಯ ವಿವರ

ಕ್ರಸಂ.	ಜಿಲ್ಲೆಗಳು	ವಯೋಮಾನ			
		೦–೬	೭–೧೭	೧೮–೬೦	೬೦ ಕ್ಕಿಂತ ಹೆಚ್ಚು
೧	ಶಿವಮೊಗ್ಗ	೧೫೩	೧೪೧	೭೧೩	೧೩೬
೨.	ಚಿಕ್ಕಮಗಳೂರು	೧೦೮	೭೯	೨೧೨	೩೩
೩.	ಉತ್ತರ ಕನ್ನಡ	೭೧	೧೦೩	೨೭೪	೬೪
೪.	ಉಡುಪಿ	೫೨	೭೩	೧೮೨	೨೮
೫.	ದಕ್ಷಿಣ ಕನ್ನಡ	೬	೪	೧೭	–

ಜಿಲ್ಲಾವಾರು ಸಮೀಕ್ಷೆ ಮಾಡಿದ ಹಸಲರ ಸದಸ್ಯರ ಕಾಯಕ ಅರ್ಹ ಮತ್ತು ಕಾಯಕವಲ್ಲದ ವಿವರ

ಕ್ರ.ಸಂ.	ಜಿಲ್ಲೆಗಳು	ಕಾಯಕವಲ್ಲದವರು			ಕಾಯಕ ಅರ್ಹರು ೧೮–೬೦		
		೦–೬	೭–೧೭	೬೦+	ಗಂಡು	ಹೆಣ್ಣು	ಒಟ್ಟು
೧	ಶಿವಮೊಗ್ಗ	೧೫೩	೧೪೧	೧೩೬	೩೧೪	೩೯೯	೭೧೩
೨.	ಚಿಕ್ಕಮಗಳೂರು	೧೦೮	೭೯	೩೩	೧೦೨	೧೧೦	೨೧೨
೩.	ಉತ್ತರ ಕನ್ನಡ	೭೧	೧೦೩	೬೪	೧೬೭	೧೦೭	೨೭೪
೪.	ಉಡುಪಿ	೫೨	೭೩	೨೮	೧೦೩	೭೯	೧೮೨
೫.	ದಕ್ಷಿಣ ಕನ್ನಡ	೬	೪	–	೮	೯	೧೭

ಸಮೀಕ್ಷೆ ಮಾಡಿದ ಕುಟುಂಬಗಳ ಹಸಲರ ಶೈಕ್ಷಣಿಕ ವಿವರ

ಜಿಲ್ಲೆ	ಅನಕ್ಷರಸ್ಥರು	ಪ್ರಾಥಮಿಕ	ಪ್ರೌಢ	ಪದವಿಪೂರ್ವ	ಪದವಿ	ಇತರೆ
ಶಿವಮೊಗ್ಗ	೧೫೩	೧೩೮	೬೬೧	೧೩೬	೪೮	೭
ಉತ್ತರ ಕನ್ನಡ	೭೯	೮೭	೨೨೬	೭೩	೫೪	೩
ಉಡುಪಿ	೭೬	೧೩೩	೭೯	೧೮	೧೭	೨೨
ದಕ್ಷಿಣ ಕನ್ನಡ	–	೦೬	೧೭	೦೪	–	–
ಚಿಕ್ಕಮಗಳೂರು	೭೨	೫೧	೨೪೭	೫೯	೦೩	–

ಅನುಬಂಧ –೩

ಮಾಹಿತಿದಾರರ ಪಟ್ಟಿ

೧. **ಸಣ್ಣೀರಪ್ಪ ಬಿಸ್ಷಪ್ಪ**
ವಯಸ್ಸು: ೭೧.
ಸಾ॥ ಬಿಳುವಾಣಿ
ಸೊರಬ ತಾಲೂಕ
ಶಿವಮೊಗ್ಗ ಜಿಲ್ಲೆ

೨. **ಕರಡೆಪ್ಪ ದ್ಯಾವಪ್ಪ**
ವಯಸ್ಸು: ೬೮
ಸಾ॥ ಮುಟುಗುಪ್ಪೆ
ಸೊರಬ ತಾಲೂಕ
ಶಿವಮೊಗ್ಗ ಜಿಲ್ಲೆ

೩. **ಸಣ್ಣೀರ ದುಗ್ಗ**
ವಯಸ್ಸು: ೭೦
ಸಾ॥ ಮುದಾಳಕೊಪ್ಪ
ಶಿರಸಿ ತಾಲೂಕ
ಉತ್ತರ ಕನ್ನಡ ಜಿಲ್ಲೆ

೪. **ರಾಮಚಂದ್ರ ಚನ್ನ**
ವಯಸ್ಸು: ೫೮
ಸಾ॥ ಕಾನಳ್ಳಿ
ಸಿದ್ಧಾಪೂರ ತಾಲೂಕ
ಉತ್ತರ ಕನ್ನಡ ಜಿಲ್ಲೆ

೫. **ಬಾಸ್ಕರ ಚೌಡ**
ವಯಸ್ಸು: ೫೫
ಸಾ॥ ಕಾನಳ್ಳಿ
ಸಿದ್ಧಾಪೂರ ತಾಲೂಕ
ಉತ್ತರ ಕನ್ನಡ ಜಿಲ್ಲೆ

೬. **ಕೃಷ್ಣ ದೇವ ಹಸ್ಲರ್**
ವಯಸ್ಸು: ೫೨
ಸಾ॥ ಆಡುಕುಳಿ
ಹೊನ್ನಾವರ ತಾ;ಲೂಕ
ಉತ್ತರ ಕನ್ನಡ ಜಿಲ್ಲೆ

೭. **ಕೃಷ್ಣಾ ಹಸ್ಲರ್**
ವಯಸ್ಸು: ೪೭
ಸಾ॥ ಬಿ ಕಣಬೂರ
ಶೃಂಗೇರಿ ತಾಲೂಕ
ಚಿಕ್ಕಮಗಳೂರ ಜಿಲ್ಲೆ

೮. **ರಾಜು ಅಣ್ಣಪ್ಪ ಹಸ್ಲರ್**
ಸಾ॥ ಕಬ್ಬಿನಾಲೆ
ಕುಂದಾಪುರ ತಾಲೂಕ
ಉಡುಪಿ ಜಿಲ್ಲೆ

೯. **ಕೃಷ್ಣಮೂರ್ತಿ ಗಣಪತಿ ಕೆ**
ಸಾ॥ ಮೇಲಿನ ಗೋಳಗೋಡು
ವಯಸ್ಸು: ೬೧
ವೃತ್ತಿ : ಕೃಷಿ
ಸಾಗರ ತಾಲೂಕು
ಶಿವಮೊಗ್ಗ ಜಿಲ್ಲೆ

೧೦. **ರಾಮಮೂರ್ತಿ ಕೆ ಹಸಲರ**
ವಯಸ್ಸು: ೬೧
ಸಾ॥ ಬೆಳ್ಳಣ್ಣಿ
ವೃತ್ತಿ: ಕೃಷಿ
ಸಾಗರ ತಾಲೂಕ, ಶಿವಮೊಗ್ಗ ಜಿಲ್ಲೆ

೧೧. **ಕೃಷ್ಣಯ್ಯ ಅಣ್ಣಪ್ಪ ಕೊಲ್ಲೂರ**
ವಯಸ್ಸು: ೫೩
ವೃತ್ತಿ: ಕೃಷಿ
ಸಾ॥ ಕೊಲ್ಲೂರ
ಕುಂದಾಪೂರ ತಾಲೂಕ
ಉಡುಪಿ ಜಿಲ್ಲೆ

೧೨. **ಸಣ್ಣೀರಪ್ಪ ಬಿಷ್ಟಪ್ಪ**
ವಯಸ್ಸು: ೭೧
ವೃತ್ತಿ: ಕೂಲಿ
ಸಾ॥ ಬಿಳುವಾಣಿ
ಸೊರಬ ತಾಲೂಕ, ಶಿವಮೊಗ್ಗ ಜಿಲ್ಲೆ

೧೩. **ಈಸೂರಪ್ಪ ಚನ್ನಪ್ಪ ಬಿಲ್ಜತ್ರಿ**
ವಯಸ್ಸು: ೪೦
ವೃತ್ತಿ: ಕೂಲಿ
ಸಾ॥ ಮಗದೂರ
ಸಿದ್ಧಾಪೂರ ತಾಲೂಕು
ಉತ್ತರ ಕನ್ನಡ ಜಿಲ್ಲೆ

೧೪. **ಮೈಲಾ ತಿಮ್ಮ**
ವಯಸ್ಸು: ೭೧
ವೃತ್ತಿ: ಕೂಲಿ
ಸಾ॥ ಮಗದೂರ
ಸಿದ್ಧಾಪೂರ ತಾಲೂಕ
ಉತ್ತರ ಕನ್ನಡ ಜಿಲ್ಲೆ

೧೫. **ಕೃಷ್ಣ ದೇವ ಹಸ್ಲರ್**
ವಯಸ್ಸು: ೪೮
ವೃತ್ತಿ: ಕೂಲಿ
ಸಾ॥ ದಬ್ಬೋಡ
ಹೊನ್ನಾವರ ತಾಲೂಕ
ಉತ್ತರ ಕನ್ನಡ ಜಿಲ್ಲೆ

ಅನುಬಂಧ – ೪

ಪಾರಿಭಾಷಿಕ ಪದಕೋಶ

ಅಕ್ಕಚ್ಚನ್ನು – ಅಕ್ಕಿ ತೊಳೆದ ನೀರು

ಆಮೆಗುಂಡಿ – ಹೆರಿಗೆಯಾದ ನಂತರ ಆಕೆಯ ಪತಿ ತೋಡುವ ಗುಂಡಿ

ಈಡು – ಶವವನ್ನು ಸುಡಲು ಹಾಕಿದ ಕಟ್ಟಿಗೆ ರಾಶಿ

ಇರಿಕೆ – ಪಾತ್ರೆ ಕೆಳಗಡೆ ಇಡಲು ಹುಟ್ಟಿನಿಂದ ಸುತ್ತಿದ ಸಿಂಬೆ

ಉರತ್ಲ – ದಾರೆಯ ಹಿಂದಿನ ದಿವಸ ಆಚರಿಸುವ ಶಾಸ್ತ್ರ

ಉರಿನೀರು – ಸ್ಮಶಾನಕ್ಕೆ ಹೆಣದ ಜೊತೆ ತೆಗೆದುಕೊಂಡು ಹೋಗುವ ನೀರು

ಎದೆಹಾಳೆ – ಅಡಿಕೆ ಮರ ಎರುವಾಗ ಎದೆಗೆ ಪೆಟ್ಟಾಗದಿರಲೆಂದು ಅಡಿಕೆ ಮರದ ಹಾಳಿಯಿಂದ ಮಾಡಿದ ಸಾಧನ

ಒಳಲೆ – ಚಿಕ್ಕ ಮಕ್ಕಳಿಗೆ ಮಲಗಿಸಿಕೊಂಡು ಹಾಲು ಕುಡಿಸುವ ಸಾಧನ

ಒಳ್ಳು – ಬತ್ತ ಕುಟ್ಟಲು ಅರ್ಧ ಅಡಿ ಆಳದ ಗುಂಡಿ

ಕಡುಕ – ಗಂಡಸರು ಕಿವಿಗೆ ಹಾಜುವ ಆಭರಣ

ಕಣಜ – ಬತ್ತ ಸಂಗ್ರಹಿಸಲು ಉಪಯೋಗಿಸುವ ಸಾಧನ

ಕಣ್ಣಪ್ಪ – ಕಾಡಿಗೆ

ಕಲಸನ್ನ – ಚಿತ್ರಾನ್ನ

ಕರಿ – ಭತ್ತದ ತೌಡನ್ನು ಸುಟ್ಟಿಮಾಡಿದ ಮಸಿಕೆಂಡ

ಕಳಸದ ನೀರು – ಮದುವೆಯಲ್ಲಿ ಬಳಸುವ ಕಳಸದಲ್ಲಿರುವ ನೀರು

ಕಾಜಿಬೆಳೆ – ಬತ್ತದ ಮೊದಲನೆ ಬೆಳೆ

ಕಾರ್ಬೇಳೆ – ಬತ್ತದ ಎರಡನೆ ಬೆಳೆ

ಕಾರಾನಾಂಬ್ರಾ – ಬಾಣಂತಿಯರಿಗೆ ಕೊಡುವ ಸಾರು

ಕಾವಣ – ಮದುವೆ ಚಪ್ಪರ

ಕುಕ್ಕತ್ತಿ – ಅಡಿಕೆ ಸುಲಿಯುವ ಕಬ್ಬಿಣದ ಸಾಧನ

ಕುಡಿಕೆ – ವಿಧವಾ ವಿವಾಹ

ಕುಳಿ – ಒಂದು ಬಗೆಯ ಮೀನು ಹಿಡಿಯುವ ಸಾಧನ

ಕೂಡಿಕೆ – ವಿಧುರ ಮತ್ತು ವಿಧವೆಯರ ವಿವಾಹ

ಕೂಡಿಮಿಯುವಳು – ವಧುವಿನ ತಂಗಿ

ಕೆಮ್ಮಣ್ಣು – ಕೆಂಪು ಬಣ್ಣದ ಮಣ್ಣು

ಕೇತುಕುಂಬ – ಮಣ್ಣಿನ ಮಡಿಕೆ

ಕೈಮಾಸ – ಮಾಡಿಸಿದ್ದು

ಕೊಟ್ಟೆ – ಕೊಳೆರೋಗ ತಡೆಗಟ್ಟಲು ಅಡಿಕೆ ಹಾಳಿಗಳಿಂದ ಮಾಡಿದ ವಸ್ತು

ಕೊರೆಊಟ – ವಧು-ವರರಿಗೆ ಬಂಧುಗಳು ಹಾಕುವ ಊಟ

ಕೋಲಕಾರ – ಜಾತಿ ಪಂಚಾತಿಯ ಮುಖಂಡ

ಕೋಲ್ಕಡಕ – ಕೈಗೆ ಹಾಕುವ ಬೆಳ್ಳಿಯ ಆಭರಣ

ಕೊಳೆರೋಗ – ಅಡಿಕೆಗೆ ಬರುವ ರೋಗ

ಗಳಿಗೆಬಣ್ಣ – ದಾರೆ ದಿವಸ ವಧುವಿಗೆ ಒಂದು ಪ್ಲೇಟನಲ್ಲಿ ಅಕ್ಕಿ, ಎಲೆ ಮತ್ತು ಅಡಿಕೆ ಹಾಕಿ ಅದರಲ್ಲಿ ನಿಲ್ಲಿಸುವುದು

ಗವಲು ಗಡಿಗೆ – ಹಂದಿ ಮಾಂಸ ಬೇಯಿಸುವ ಮಡಿಕೆ

ಗುರ್ನಾಲು – ಪಟಾಕಿ ಮದ್ದನ್ನು ಬಳಸಿ ತಯಾರಿಸಿದ್ದು

ಗುಳಿಕರೆಯುವದು – ಕಾಗೆ ಕರೆಯುವದು

ಗೆಜ್ಜೆಪಟ್ಟಿ – ಸೊಂಟಕ್ಕೆ ಹಾಕುವ ಬೆಳ್ಳಿ ಆಭರಣ

ಗೊಬ್ಬೆ – ಮಹಿಳೆಯರು ಸೀರೆಯಿಂದ ಎದೆ ಮುಚ್ಚಿಕೊಳ್ಳುವ ಸೆರಗು

ಗೊಮಯ – ಆಕಳು ಸಗಣಿ ಮಿಶ್ರಿತ ನೀರು

ಚವಿ – ಗರ್ಭಸ್ರಾವ

ಚಿಗಳಿ – ಇರುವೆ ಜಾತಿಯ ಕೆಂಪು ಇರುವೆ

ಚೌಲ – ಜವಳ

ಜೊಂಗೆಬತ್ತಿ – ಹಬ್ಬ ಹಾಡುವಾಗ ದೀಪ ಆರಿದರೆ ದೀಪ ಹಚ್ಚಿಕೊಳ್ಳಲು ಉಪಯೋಗಿಸುವ ನಾರಿನ ಹುರಿ

ತಳೆ ಹಿಡಿಯುವದು – ವಧು-ವರರೂ ಮಂಗಲ ಕಾಯಕ್ಕೆ ಹೊರಡುವಾಗ ಮುತ್ತೈದೆಯರ ಹೊಸ ಪಂಜೆಯನ್ನು ಎರಡು ಜನ ಎತ್ತಿ ಹಿಡಿಯುವುದು

ತೆರ – ವರದಕ್ಷಿಣೆ

ತೊಂಡಿಲು – ವಧುವಿನ ತಲೆಗೆ ಹಾಕಲು ಬೆಂಡಿನಿಂದ ತಯಾರಿಸಿದ ವಸ್ತು

ದಚ್ಚೆ – ಅಡಿಕೆ ಮರ ಸೀಳಿ ಮಾಡಿದ ಒಂದು ವಸ್ತು

ದರಕಲು – ಒಣಗಿದ ಎಲೆಗಳು

ದಾಕು – ದೀಪಾವಳಿಯಂದು ಕೆಮ್ಮಣ್ಣ ಮತ್ತು ಜೇಡಿಮಣ್ಣಿನ್ನು ದನಗಳ ಮೈಗೆ ಹಚ್ಚುವುದು

ದೊಂದಿ – ಅಡಿಕೆ ಮರದ ಸೀಳಿದ ತುಂಡಿಗೆ ಬೆಂಕಿ ಹಚ್ಚಿರುವ ವಸ್ತಿ

ದೋಟಿಕೋಲು – ಸಾಮೆ ಜಾತಿಯ ಬಿದಿರಿನ ಕೊಕ್ಕೆ ಇರುವ ಕೋಲು/ಅಡಿಕೆ ಮರದಿಂದ ಮರಕ್ಕೆ ಹಾಕುವಾಗ ಉಪಯೋಗಿಸುವ ಸಾಧನ

ನಾಟಿಹುಳಿ – ವಾಟಿ ಮರದ ಹಣ್ಣಿನಿಂದ ತಯಾರಿಸಿದ ಹುಳಿ

ನ್ಯಾವಳ – ಗಂಡಸರು ಸೊಂಟಕ್ಕೆ ಧರಿಸುವ ಬೆಳ್ಳಿಯ ಉಡದಾರ

ನಿಮಿತ್ಯ	–	ಮೌನವಾಗಿ ಮಂತ್ರಿಸುವುದು
ನೆನೆಅಕ್ಕಿ	–	ನೀರಿನಲ್ಲಿ ನೆನೆಸಿದ ಅಕ್ಕಿ (ಉಡಿಯಕ್ಕಿ)
ನೆಂಚಿಕೆ	–	ಉಪ್ಪಿನ ಕಾಯಿಯಂತೆ ಇರುವ ಪದಾರ್ಥ
ನೆನೆಬತ್ತಿ	–	ಎಣ್ಣೆಯಲ್ಲಿ ಎದ್ದಿದ ಹತ್ತಿಯಿಂದ ಮಾಡಿದ ಬತ್ತಿ
ನೇಣುಹಗ್ಗ	–	ಅಡಿಕೆ ಗೊನೆ ಇಳಿಸುವ ಹಗ್ಗ
ಪಂಚಗವ್ಯ	–	ಆಲ, ಹಲಸಿನ ಎಲೆ, ಮಾವಿನ ಎಲೆ, ಕುಟ್ಟಿ ಆಕಳ ಮೂತ್ರದೊಂದಿಗೆ ಹಾಲು ಸೇರಿಸಿ ತಯಾರಿಸಿದ ದ್ರಾವಕ
ಪಾಯಸತಪ	–	ಸಿಹಿಊಟ
ಬಗಿನೇಮರ	–	ಹೆಂಡ ಮತ್ತು ಹಿಟ್ಟಿಗಾಗಿ ಉಪಯೋಗಿಸುವ ಮರ
ಬತಗೊಡತಿ	–	ವಧುವಿನ ತಂಗಿ
ಬಟ್ವೆ	–	ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ಬಂದೂಕಿನಿಂದ ಗುಂಡು ಹಾರಿಸುವುದು
ಬಾಸಿಂಗ	–	ವರನ ಹಣೆಗೆ ತೊಡಿಸುವ ಸಾಧನ
ಬ್ಯಾಣ	–	ಒತ್ತುವರಿ ಜಮೀನು
ಬಿಂಗಿಪದ	–	ದೀಪಾವಳಿಯಂದು ಹಾಡುವ ಹಾಡು,
ಬಿಡಾರದ ಮನೆ	–	ವರನ ಗಂಡಿನ ಮನೆಯವರು ನಿಬ್ಬಣ ತೆಗೆದುಕೊಂಡು ಬಂದಾಗ ವಿಶ್ರಾಂತಿ ತೆಗೆದುಕೊಳ್ಳುವಮನೆ
ಭೂಮ ಇಕ್ಕುವದು	–	ಒಂದು ತಟ್ಟೆಯಲ್ಲಿ ಹಾಲು, ಹಣ್ಣು ಮತ್ತು ತುಪ್ಪಹಾಕಿ ಅದರ ಮೇಲೆ ಬಟ್ಟೆಯೊಂದನ್ನು ಮುಚ್ಚಿ ಅದರ ಮೇಲೆ ದೀಪಯಿಟ್ಟು ವರ–ಕನ್ಯಯಿಂದ ನಮಸ್ಕಾರ ಮಾಡಿಸುವುದು.
ಬೆಸಲುಕಳಿ	–	ಮಳೆಗಾಲದಲ್ಲಿ ಮೀನು, ಕಂಬಳಿ, ಮಾಂಸ ಒಣಗಿಸಲು ಉಪಯೋಗಿಸುವ ಬಿದಿರಿನಿಂದ ಕಟ್ಟಿದ ಕಳಿ.
ಮರಕೊಳಿ	–	ಸುಟ್ಟ ಶವದ ಸುಡದೇ ಇರುವ ಭಾಗವನ್ನು ಮರುದಿನ ಹೋಗಿ ಸುಡುವುದು.
ಮಂಕರಿ ತೊಟ್ಟಿಲು	–	ಅರಿವೆಯ ನಾಲ್ಕು ಮೂಲಿಗೆ ದಾರಕ್ಕೂ ಮರದ ಹಲಿಗೆಗೆ ನೇತಾಡುವ ಹಾಗೆ ಕಟ್ಟಿದ ತೊಟ್ಟಿಲು
ಮರುವರಿ ಶಾಸ್ತ್ರ	–	ಮದುವೆಯ ಮರುದಿನ ಮಾಡುವ ಶಾಸ್ತ್ರ
ಮಡಿಲಕ್ಕಿ	–	ಅಡಿಕೆ, ಎಲೆ ಅಕ್ಕಿ
ಮುಯ್ಯಿ	–	ಉಡುಗೊರೆ
ಮೂಡೆ	–	ಸಾವಿರ ವಿಳ್ಳೆದ ಕಟ್ಟು
ಮೆಟ್ಟಕ್ಕಿಸಿಲ್ಲ	–	ವಧುವರರು ದಾರೆಯಾಗುವಾಗ ನಿಲ್ಲುವ ಬಿದಿರಿನ ವಸ್ತು
ರಾಮಾಸ	–	ಇದೊಂದು ಚರ್ಮ ವಾದ್ಯ
ರುಶಿಸುಬ್ಬ	–	ಕುರು

ಲೋಬಾನ – ದೂಪ

ವಬ್ಬಳಿಸು – ಒಟ್ಟುಗೂಡಿಸು

ಸಂಕ – ಸಣ್ಣದಾದ ಬಿದಿರಿನ ಸೇತುವೆ

ಸಿದ್ದೆ – ೧/೨ ಸೇರು ಅಕ್ಕಿ ಹಿಡಿಯುವ ಸಾಧನ

ಸಿರುಡಿಕೆ – ವಿಧವಾ ವಿವಾಹ

ಸೂರ – ಮನೆಯ ಮೇಲ್ಚಾವಣೆ

ಹವಿಸು – ಹಾಕು

ಹುಟ್ಟಾಳು – ತಂದೆ ಮಾಡಿದ ಸಾಲಕ್ಕಾಗಿ ದುಡಿಯುವದು

ಹಾಡಿಕೇರಿ – ಹಸಲರು ವಾಸಿಸುವ ಪ್ರದೇಶ

ಹಾಲುಕೊಡಸ – ಒಂದು ಜಾತಿಯ ಮರ

ಹೊರಸಲು – ಮಳೆಗಾಲದಲ್ಲಿ ಬೆಂಕಿ ಕಾಯಿಸಿಕೊಳ್ಳಲು ಹಾಕಿದ ಬೆಂಕಿನ ಗುಂಡಿ

ಹೆರೆಮಣಿ – ಅಡಿಕೆ ಸುಲಿಯುವ ಮಣೆ

ನಕಾಶೆಗಳು

ಸಮೀಕ್ಷೆ ಮಾಡಿದ ತಾಲೂಕು: ಭಟ್ಕಳ
ಸಮೀಕ್ಷೆ ಮಾಡಿದ ತಾಲೂಕು: ಸಿದ್ದಾಪೂರ
ಸಮೀಕ್ಷೆ ಮಾಡಿದ ತಾಲೂಕು: ಸಿರಸಿ
ಸಮೀಕ್ಷೆ ಮಾಡಿದ ತಾಲೂಕು: ಹೊನ್ನಾವರ
ಸಮೀಕ್ಷೆ ಮಾಡಿದ ತಾಲೂಕು: ಕಾರ್ಕಳ
ಸಮೀಕ್ಷೆ ಮಾಡಿದ ತಾಲೂಕು: ಕುಂದಾಪುರ
ಸಮೀಕ್ಷೆ ಮಾಡಿದ ತಾಲೂಕು: ಕೊಪ್ಪ
ಸಮೀಕ್ಷೆ ಮಾಡಿದ ತಾಲೂಕು: ನರಸಿಂಹರಾಜಪುರ
ಸಮೀಕ್ಷೆ ಮಾಡಿದ ತಾಲೂಕು: ಮೂಡಿಗೇರೆ
ಸಮೀಕ್ಷೆ ಮಾಡಿದ ತಾಲೂಕು: ಶೃಂಗೇರಿ
ಸಮೀಕ್ಷೆ ಮಾಡಿದ ತಾಲೂಕು: ಮಂಗಳೂರು
ಸಮೀಕ್ಷೆ ಮಾಡಿದ ತಾಲೂಕು: ತೀರ್ಥಹಳ್ಳಿ
ಸಮೀಕ್ಷೆ ಮಾಡಿದ ತಾಲೂಕು: ಸಾಗರ
ಸಮೀಕ್ಷೆ ಮಾಡಿದ ತಾಲೂಕು: ಸೊರಬ
ಸಮೀಕ್ಷೆ ಮಾಡಿದ ತಾಲೂಕು: ಶಿಕಾರಿಪುರ
ಸಮೀಕ್ಷೆ ಮಾಡಿದ ತಾಲೂಕು: ಶಿವಮೊಗ್ಗ
ಸಮೀಕ್ಷೆ ಮಾಡಿದ ತಾಲೂಕು: ಹೊಸನಗರ

ಅನುಬಂಧ – ೬

ನಕಾಶೆಗಳು



ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಭಟ್ಕಳ




ಕೃಪೆ- ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಸಿದ್ದಾಪೂರ



ಕೃಪೆ- ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಸಿರಸಿ



ಕೃಪೆ- ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಹೊನ್ನಾವರ



ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಕಾರ್ಕಳ



ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಕುಂದಾಪುರ




ಸಮೀಕ್ಷೆ ಮಾಡಿದ ತಾಲೂಕು: ಕೊಪ್ಪ




ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ನರಸಿಂಹರಾಜಪುರ



ಸಮೀಕ್ಷೆ ಮಾಡಿದ ತಾಲೂಕು: ಮೂಡಿಗೇರೆ



ಕೃಪೆ- ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಶೃಂಗೇರಿ




ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಮಂಗಳೂರು



ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ತೀರ್ಥಹಳ್ಳಿ



ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಸಾಗರ




ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಸೊರಬ



ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಶಿಕಾರಿಪುರ



ಕೃಪೆ- ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಶಿವಮೊಗ್ಗ



ಕೃಪೆ– ಸೆನ್ಸ್ ಆಫ್ ಇಂಡಿಯಾ

ಸಮೀಕ್ಷೆ ಮಾಡಿದ ತಾಲೂಕು: ಹೊಸನಗರ

ಛಾಯಾ ಚಿತ್ರಗಳು

ಛಾಯಾ ಚಿತ್ರಗಳು



ಜವಳಿ ಎದುರುಗೊಳ್ಳುವುದು



ಹುಲಿಯನ್ನು ಕೊಂದ ಸಾಹಸಿ : ಗಣಪ



ಹಸಲರ ಮುಖಂಡರೊಂದಿಗೆ ಸಂಶೋಧಕ



ಹಸಲರ ವಿವಾಹ



ಅಡಿಕೆ ಕೊಯ್ಯಲು ಹೊರಟ ತಿಮ್ಮ



ಮೀನಿನ ಬಲೆಯೊಂದಿಗೆ ಮೈಲ



ಬೇಟೆಯಾಡುವ ಅಣುಕ ಪ್ರದರ್ಶನ



ಕಾರ್ಗಲ್‌ದ ನಾಟೀ ವೈದ್ಯ : ಕೇಶವ



ವಿವಾಹ ಸಂದರ್ಭದಲ್ಲಿ ಮಡಿಕೆ ಪೂಜೆ



ಹಾಯ್‌ಗತ್ತಿಯೊಂದಿಗೆ ತಿಮ್ಮ